ಸಂವಾದ

ಜನವರಿ ೨೦೦೪ | ರೂ. ೪೦/- | ಮಾಸಪತ್ರಿಕೆ



ವಾರ್ಷಿಕ ವಿಶೇಷಾಂಕ

ಜನಮನದ ಹತ್ತಿರಕ್ಕೆ ಆಡಳಿತವನ್ನು ಒಯ್ಯುವತ್ತ ಮಹತ್ವದ ಹೆಜ್ಜೆ

ಮಹಾನಗರ ಪಾಲಿಕೆಯ ಹಲವಾರು ಸೇವೆಗಳನ್ನು ಒಂದೇ ಸೂರಿನಡಿ ಪಡೆಯಲು

ಬೆಂಗಳೂರು ಮಹಾನಗರ ಪಾಲಿಕೆಯ ನಾಗರಿಕ ಸೇವಾ ಕೇಂದ್ರಗಳು

ನಗರದ ನಾಲ್ಕು ಪ್ರದೇಶಗಳಲ್ಲೂ ಕೇಂದ್ರಗಳ ಸೇವೆ ಲಭ್ಯ

ಕೇಂದ್ರಗಳಲ್ಲಿ ದೊರಕುವ ಸೇವೆಗಳು

- ಆಸ್ತಿ ತೆರಿಗೆ ಪಾವತಿ
- ಖಾತಾ ವರ್ಗಾವಣೆ / ಸಂಯೋಜನೆ ವಿಭಜನೆ
- ರಸ್ತೆ ಅಗೆಯಲು ಅನುಮತಿ
- ಮಾಹಿತಿ ಪುಸ್ತಕ ಮತ್ತು ಅರ್ಜಿ ನಮೂನೆಗಾಗಿ ಅರ್ಜಿ
- ಖಾತಾ ನೋಂದಣೆ ಅರ್ಜಿ
- ಮನೆ ನಕ್ಷೆ ಮಂಜೂರು ಅರ್ಜಿ
- ಜನನ ಮತ್ತು ಮರಣ ಪ್ರಮಾಣ ಪತ್ರಗಳು
- ನಾಗರಿಕ ಕುಂದುಕೊರತೆಗಳ ನೋಂದಣೆ

ಸಾರ್ವಜನಿಕರು ದೂರುಗಳನ್ನು ಸಲ್ಲಿಸಬಹುದಾದ ವಿಷಯಗಳು

ಅನಧಿಕೃತ ಕಟ್ಟಡ ನಿರ್ಮಾಣ, ಸಾರ್ವಜನಿಕ ಹಾಗೂ ಸರ್ಕಾರದ ಸ್ವತ್ತುಗಳ ಒತ್ತುವರಿ ಉದ್ಯಮ ಪರವಾನಗಿ ಸಂಬಂಧ, ಸಾರ್ವಜನಿಕ ಆರೋಗ್ಯ ಸಂಬಂಧ ಸೊಳ್ಳೆ ನಿಯಂತ್ರಣ, ಬೀದಿ ನಾಯಿಗಳ ಕಾಟ, ರಸ್ತೆಗುಂಡಿಗಳು ಬೀದಿ ದೀಪಗಳ ದುರಸ್ತಿ, ಸಾಮಾನ್ಯ ಸ್ವಚ್ಛತೆ, ಚರಂಡಿ/ಸ್ವಚ್ಛತೆ ಇತರೆ ವಿಷಯಗಳು.

ನಾಗರಿಕ ಕೇಂದ್ರಗಳ ಕೆಲಸದ ವೇಳೆ :

ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 12.00 ಗಂಟೆ ಸಂಜೆ 4.00 ರಿಂದ 7.00 ಗಂಟೆ

ನಾಗರಿಕ ಸೇವಾ ಕೇಂದ್ರಗಳು

ಕೇಂದ್ರ ಕಛೇರಿ
ಎನ್.ಆರ್. ಚೌಕ,
ಬೆಂಗಳೂರು
ದೂರವಾಣಿ : 2975500

ಉಪ ಆಯುಕ್ತರು (ದಕ್ಷಿಣ) ವಲಯ,
9ನೇ ಅಡ್ಡರಸ್ತೆ, 9ನೇ ಮುಖ್ಯ ರಸ್ತೆ,
ಜಯನಗರ 2ನೇ ಹಂತ,
ಬೆಂಗಳೂರು,
ದೂರವಾಣಿ : 6566365

ಉಪ ಆಯುಕ್ತರು (ಪಶ್ಚಿಮ ವಲಯ) ,
ಬಾಷ್ಯಂ ಪಾರ್ಕ್, ಮಲ್ಲೇಶ್ವರಂ,
ಬೆಂಗಳೂರು
ದೂರವಾಣಿ : 3361704

ಉಪ ಆಯುಕ್ತರು (ಪೂರ್ವ ವಲಯ)
ನೆಲ ಮಹಡಿ,
ಪಬ್ಲಿಕ್ ಯುಟಿಲಿಟಿ ಕಟ್ಟಡ,
ಮಹಾತ್ಮಗಾಂಧಿ ರಸ್ತೆ,
ಬೆಂಗಳೂರು,
ದೂರವಾಣಿ : 2975800

ಬೆಂಗಳೂರು ಮಹಾನಗರ ಪಾಲಿಕೆ



ಸಂಪಾದಕೀಯ

ಅಂತರಂಗ

ಹೊಸ ಆಶಯ-ಕನಸುಗಳನ್ನು ಕಟ್ಟಿಕೊಡಲು

೨೦೦೪ ಕಾಲಿಟ್ಟಿದೆ. ಹೊಸ ಸಹಸ್ರಮಾನದ ಆರಂಭದಲ್ಲಿ ಜಗತ್ತು ಆಶಿಸಿದ ಶಾಂತಿ-ಸಹನೆ-ವಿವೇಕಗಳು ಕೇವಲ ಆಶಯಗಳಾಗೇ ಉಳಿದುಬಿಡುವ ಆತಂಕ ಗಾಢವಾಗಿ ಕಾಡಿಸುತ್ತಿದೆ. ಜಗತ್ತಿನ ಯಜಮಾನನಾಗಲು ಹೊರಟಿರುವ ಅಮೆರಿಕಾ, ಬ್ರಾಹ್ಮಣಿಕೆಯನ್ನೇ ಭಾರತವನ್ನಾಗಿಸಲು ಟೊಂಕಕಟ್ಟಿನಿಂತಿರುವ ವೈದಿಕರು, ಇವರ ಅಡಿಯಾಳುಗಳಾಗಲು ಉತ್ಸುಕರಾಗಿರುವ ಬಹುಜನ ಸಮಾಜ- ಎಲ್ಲವೂ ಈ ಹೊಸವರ್ಷದ ಹುರುಪಿಗೆ ತಣ್ಣೀರೆರಚಿವೆ.

ಹೊಸ ಸಹಸ್ರಮಾನ ಆರಂಭದ ವರ್ಷಗಳು ಸಾಮ್ರಾಜ್ಯಶಾಹಿಗಳ-ಕೋಮುವಾದಿಗಳ-ಅವಕಾಶವಾದಿಗಳ ಹುಚ್ಚಾಟಕ್ಕೆ ತೆರೆದುಕೊಂಡದ್ದೇ ಹೆಚ್ಚು. ಜಾಗತಿಕ ಮಟ್ಟದಲ್ಲಿ ಜನಾಂಗೀಯ ಘರ್ಷಣೆಗಳು, ಯುದ್ಧದಾಹಿಗಳ ಪೂತ್ಕಾರಗಳು, ಪ್ರಜಾಸತ್ತೆ ಪುನರ್ ಸ್ಥಾಪನೆ ಹೆಸರಲ್ಲಿ ನಡೆಯುತ್ತಿರುವ ಮುಗ್ಧ ಜನರ ಮಾರಣಹೋಮಗಳು ಹೆಚ್ಚುತ್ತಿದ್ದರೆ, ಜಾಗತಿಕ ಶಾಂತಿಯ ವಾರಸುದಾರಿಕೆಯ ಗುತ್ತಿಗೆ ಪಡೆದ ಭಾರತ, ಅಂತರ್ಯುದ್ಧಕ್ಕೆ ವೇದಿಕೆ ಸಿದ್ಧಪಡಿಸುತ್ತಿದೆ.

ಹುಸಿ ದೇಶಭಕ್ತಿ, ಹುಸಿ ಧಾರ್ಮಿಕತೆ, ಹುಸಿ ಪ್ರಗತಿಯ ಹೆಸರಲ್ಲಿ ಸಮಾಜದ ದೌರ್ಬಲ್ಯವನ್ನು ದುರುಪಯೋಗ ಪಡಿಸಿ ಕೊಳ್ಳುತ್ತಿರುವ ಕೋಮುವಾದಿ ಶಕ್ತಿಗಳು ಸಮೃದ್ಧ ಭಾರತವನ್ನು ಸ್ಮಶಾನ ಭಾರತವನ್ನಾಗಿಸಲು ಹೊರಟಿವೆ. ಜಾಗತೀಕರಣ-ಉದಾರೀಕರಣದ ಘೋಷಣೆಗಳು ಈ ಫ್ಯಾಸಿಸ್ಟ್ ಶಕ್ತಿಗಳಿಗೆ ಹೊಸ ಚೈತನ್ಯವನ್ನೇ ನೀಡಿವೆ. ಧರ್ಮ ಜಾತಿಗಳ ಹೆಸರಿನಲ್ಲಿ ಸಮಾಜದಲ್ಲಿ ಅರಾಜಕತೆಯನ್ನು ಬಿತ್ತಿ ಪೋಷಿಸುವ ಹೀನ ಕೆಲಸ ಬಿರುಸಿನಿಂದ ನಡೆಯುತ್ತಿದೆ. ಸಂವಿಧಾನಾತ್ಮಕ ಪ್ರಕ್ರಿಯೆಗಳನ್ನೆಲ್ಲ ಗಾಳಿಗೆ ತೂರಿ, ಸರ್ವಾಧಿಕಾರಿ ಧೋರಣೆಗಳನ್ನು ವೈಭವೀಕರಿಸಲಾಗುತ್ತಿದೆ. ಒಂದು ಧರ್ಮ-ಸಂಸ್ಕೃತಿ-ಆಚರಣೆ, ಇನ್ನೊಂದು ಧರ್ಮ-ಸಂಸ್ಕೃತಿ-ಆಚರಣೆಗಿಂತ ಶ್ರೇಷ್ಠ ಎನ್ನುವ ಹಿಟ್ಲರ್‌ಷಾಹಿ ಧೋರಣೆಯನ್ನು ಚಾಲ್ತಿಗೆ ತರುವ ಮೂಲಕ ಬಹುಮುಖೀ ಸಮಾಜದ ಮೇಲೆ ದುರಾಕ್ರಮಣ ಮಾಡಲಾಗುತ್ತಿದೆ.

ಯಾವುದೇ ದೇಶ ಒಂದು ಧರ್ಮವನ್ನು ರಾಷ್ಟ್ರೀಯ ಧರ್ಮವನ್ನಾಗಿ ಸ್ವೀಕರಿಸಬೇಕಾದರೆ ಆ ಧರ್ಮ ಅಂಥ ದೇಶದ ಭೌಗೋಳಿಕ ವ್ಯಾಪ್ತಿಯಲ್ಲಿ ಬರುವ ಎಲ್ಲ ಜನವರ್ಗಗಳನ್ನು ಒಳಗೊಂಡ ಧರ್ಮವಾಗಿರಬೇಕು. ಅದು ಎಲ್ಲ ಮನುಷ್ಯರ ಕಷ್ಟ-ಸುಖಗಳಿಗೆ, ನೋವು-ನಲಿವುಗಳಿಗೆ ಅಭಿವ್ಯಕ್ತಿ ನೀಡುವ ಮಾಧ್ಯಮವಾಗಬೇಕು. ಎಲ್ಲ ಜನವರ್ಗಗಳ ಬದುಕಿನ ಆದಮ್ಯ ಚೇತನವಾಗಬೇಕು. ಆದರೆ ಭಾರತದಲ್ಲಿಂದು ಯಾವ ಧರ್ಮವನ್ನು ಸಮಾಜದ ಮೇಲೆ ಹೇರಲಾಗುತ್ತಿದೆಯೋ, ಯಾವ ಧರ್ಮವನ್ನು ಶ್ರೇಷ್ಠ ಎಂದು ವೈಭವೀಕರಿಸಲಾಗುತ್ತಿದೆಯೇ ಅದು ಧರ್ಮವಾಗಿರದೆ ಕೆಲವೇ ಕೆಲವರ ಸುಲಿಗೆಯ ಮಾರ್ಗವಾಗಿದೆ. ಅಸಮಾನ ಜಾತಿ ವ್ಯವಸ್ಥೆಯಿಂದ ಜರ್ಜರಿತವಾಗಿದೆ. ಮೇಲು-ಕೀಳಿನ ಹೊಲಸಿನಿಂದ ಕೊಳೆತು ಹೋಗಿದೆ. ಜನತೆಯ ಸ್ವಾಭಿಮಾನ ಗೌರವಗಳನ್ನು ಕಿತ್ತುಕೊಂಡಿದೆ. ಅಮಾನವೀಯ ಆಚರಣೆಗಳ ಗೂಡಾಗಿದೆ. ಪರಸ್ಪರ ದ್ವೇಷ-ಅಸೂಯೆಗಳನ್ನು ಹಚ್ಚುವ ಅಗ್ಗಿಷ್ಟಿಕೆಯಾಗಿದೆ. ಇಂಥ ಜನವಿರೋಧಿ-ಜನತಂತ್ರ ವಿರೋಧಿ-ಸಂವಿಧಾನ ವಿರೋಧಿ ಕೃತ್ಯದೆದುರು ನಿರ್ಭಿಢತೆಯಿಂದ ಮಾತನಾಡಲಾಗದಂತ ಪರಿಸ್ಥಿತಿ ನಿರ್ಮಾಣವಾಗಿದೆ.

ಭಾರತದ ಮನಸಾಕ್ಷಿಯೇ ಇಂದು ತೀವ್ರ ಗೊಂದಲದಲ್ಲಿ ಸಿಕ್ಕಿಬಿದ್ದಿದೆ. ಸಮಾಜದ ಸಾಕ್ಷಿಪ್ರಜ್ಞೆಯಾಗಿರಬೇಕಾದ ಸಾಹಿತಿ-ಕಲಾವಿದರು-ಪತ್ರಕರ್ತರು ಗೆದ್ದೆತ್ತಿನ ಬಾಲ ಹಿಡಿಯಲು ತುದಿಗಾಲ ಮೇಲೆ ನಿಂತಿದ್ದಾರೆ. ಬಹುಮುಖಿ ಸಂಸ್ಕೃತಿಗೆ ಎದುರಾಗಿ ಬೆಳೆಯುತ್ತಿರುವ ಜನವಿರೋಧಿ ಪರ್ಯಾಯ ಸಂಸ್ಕೃತಿಗೆ ಅವರು ಮಾರುಹೋಗುತ್ತಿದ್ದಾರೆ. ಆಳುವ ವರ್ಗದೊಂದಿಗೆ ಷಾಮೀಲಾಗಲು ಹಾತೊರೆಯುತ್ತಿದ್ದಾರೆ. ಎಲ್ಲ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ನಿಂತಿದ್ದ ಜನ ಕ್ರಮೇಣ ಅದರೊಳಗೆ ಕರಗಿಹೋಗುತ್ತಿದ್ದಾರೆ. ಎರಡು ದಶಕಗಳ ಹಿಂದೆ ವ್ಯವಸ್ಥೆ ಪರವೆಂಬ ಕಾರಣಕ್ಕೆ ಪ್ರಗತಿಪರ ಸಾಹಿತಿ-ಕಲಾವಿದರು ಬಹಿಷ್ಕರಿಸಿದ್ದ ಸಾಹಿತ್ಯ ಪರಿಷತ್ತು, ಅಕಾಡೆಮಿ, ಸಂಸ್ಕೃತಿ ಇಲಾಖೆಗಳಲ್ಲಿ ಈಗ ಅವರದ್ದೇ ಕಾರುಬಾರಾಗಿದೆ. ಹೋರಾಟಗಾರರು-ಚಳವಳಿಗಾರರು ಇಂಥದರೊಳಗೆ ಸೇರಿಕೊಳ್ಳಲು ನೆಪಗಳನ್ನು ಹುಡುಕುತ್ತಿದ್ದಾರೆ. 'ಬೆಂಗಳೂರು ಹಬ್ಬ'ದಂತ ಅಮಲು ಸಂಸ್ಕೃತಿಗೆ ಮಾರಿಕೊಳ್ಳುತ್ತಿದ್ದಾರೆ. ಒಂದು ರೀತಿಯ 'ಸಮೂಹ ಸನ್ನಿ' ಎಲ್ಲರಿಗೂ ಆವರಿಸಿದೆ.

ಇಂಥ ಸಂದರ್ಭದಲ್ಲಿ 'ಸಂವಾದ' ಸಮಾಜದ ಗೊಂದಲ-ಗೋಜಲುಗಳಲ್ಲಿ ಕಳೆದು ಹೋಗುತ್ತಿರುವ ಮಾನವೀಯ ಮೌಲ್ಯಗಳ ಹುಡುಕಾಟದಲ್ಲಿ ತೊಡಗಿದೆ. ಗ್ರಾಹಕ ಸಂಸ್ಕೃತಿಯಲ್ಲಿ ನಶಿಸಿಹೋಗುತ್ತಿರುವ ವೈಚಾರಿಕ ನೆಲೆಗಟ್ಟಿಗೆ ಪುನಶ್ಚೇತನ ನೀಡಲು ಪ್ರಯತ್ನಿಸುತ್ತಿದೆ. ವಿಚಾರ ಶೂನ್ಯವಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ಹೊಸ ಆಶಯ-ಕನಸುಗಳನ್ನು ಕಟ್ಟಿಕೊಡಲು ಹಂಬಲಿಸುತ್ತಿದೆ. 'ವಾರ್ಷಿಕ ವಿಶೇಷಾಂಕ' ರೂಪದಲ್ಲಿ ಈಗ ನಿಮ್ಮ ಕೈಯಲ್ಲಿರುವ 'ಸಂವಾದ' ಅಂಥ ಮಹದಾಸೆಯ ಪ್ರತಿರೂಪ. ಸುಮಾರು ಮೂರು ತಿಂಗಳ ನಿರಂತರ ಪ್ರಯತ್ನ-ಶ್ರಮ ಇದನ್ನು ಸಾಧ್ಯವಾಗಿಸಿದೆ. ದೇಶದ ಸಮಗ್ರತೆ, ಸಮಾಜದ ವೈವಿಧ್ಯತೆ, ಸಾಮರಸ್ಯ, ಸ್ವಾಭಿಮಾನ, ಪ್ರೀತಿ ಇವುಗಳನ್ನು ಉಳಿಸಿ ಪೋಷಿಸಿ ಬೆಳೆಸುವಲ್ಲಿ ಈ ಮೂಲಕ 'ಸಂವಾದ' ತನ್ನ ಪಾತ್ರ ನಿರ್ವಹಿಸುತ್ತಿದೆ ಎಂಬ ಸಮಾಧಾನ ನಮ್ಮದು. ವಿಶೇಷಾಂಕ ಸಿದ್ಧಪಡಿಸುವಲ್ಲಿ ನೆರವಾದ 'ಸ್ಫೂರ್ತಿಧಾಮ'ದ ರೂವಾರಿ ಎಸ್.ಮರಿಸ್ವಾಮಿಯವರು ಹಾಗೂ ಕಥೆ, ಕವನ, ಲೇಖನ, ಚಿತ್ರಗಳನ್ನು ಒದಗಿಸುವ ಮೂಲಕ ಸಹಕರಿಸಿದ ಎಲ್ಲ ಲೇಖಕ-ಕಲಾವಿದರಿಗೆ ಕೃತಜ್ಞತೆಗಳು.

○ ಇಂದೂಧರ ಹೊನ್ನಾಪುರ

ಸಂವಾದ ವಿಶೇಷಾಂಕ

ಜನವರಿ ೨೦೦೪

[redacted]

ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೩

ಜನವರಿ ೨೦೦೪

ಸಂಪಾದಕ:

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ:

ಡಾ|| ನಟರಾಜ್ ಹುಳಿಯಾರ್

ಪ್ರೊ|| ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮ

ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ಕೆ.ಪಿ. ದೊಡ್ಡಿ ಶಿವರಾಂ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ,

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦೦೯೧

ದೂರವಾಣಿ: ೩೨೮೭೯೪೩ / ೩೨೮೧೬೬೭

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANANAGAR, MAGADI ROAD

VISHWANEEDAM POST

BANGALORE - 560 091

PHONE : 3287943, 3281667

EDITOR :

INDUDHARA HONNAPURA

ಚಿತ್ರಪುಟಗಳಲ್ಲಿ

ಲೇಖನಗಳು:

೧೨ ಆಫ್ರಿಕಾ ಎನ್ನುವುದು ಜನತೆ

ಚಿನುವ ಅಚಿಬೆ / ಜಿ. ಶ್ರೀನಿವಾಸ್ ಕುಮಾರ್

೬ ಕೋಮುವಾದ ಸಮಸ್ಯೆ ಮತ್ತು ಸವಾಲುಗಳು

ಬಿ.ಯು. ಸುಮ

೧೮ ಅಲಕ್ಷಿತರ ಪದತಲದಿಂದ ಅಭಿವೃದ್ಧಿ ಆರಂಬ

ಡಾ|| ಟಿ.ಆರ್. ಚಂದ್ರಶೇಖರ್



೨೧ ಕೋಮುವಾದಕ್ಕೆ ಎದುರಾಗಿ ಧಾರ್ಮಿಕ ಉತ್ತರಗಳ ಸ್ವರೂಪ

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು

೩೮ ಶ್ರಾದ್ಧ ಮಂತ್ರಗಳ ಅಪ್ರಸ್ತುತತೆ ಮತ್ತು 'ಪಿಂಡ್ ಪಿತರ್ ಯಜ್ಞ'

ರಾಮ ಅಯ್ಯರ್ / ಪ್ರೊ|| ಬಿ.ವಿ. ವೀರಭದ್ರಪ್ಪ

೪೨ ಪರಿಸರ ಹೋರಾಟಗಳಿಂದ ಅಭಿವೃದ್ಧಿ ಕೆಲಸಗಳು

ಕುಂಠಿತವಾಗುತ್ತಿವೆಯೇ?

ಎ. ಚಂದ್ರಶೇಖರ ನಂಗಲಿ

೬೦ ಸಮಕಾಲಿನ ಸಂದರ್ಭದಲ್ಲಿ ಸಿದ್ಧಾಂತಗಳು:

ತಲ್ಲಣಗಳೋ ಅಥವಾ ದಾರಿದೀಪಗಳೋ?

ಡಾ|| ಎ.ಬಿ. ತಾರಕೇಶ್ವರ್







೭೨ ಮಾರ್ಕ್ಸ್‌ವಾದ, ಗಾಂಧೀವಾದ

ಮತ್ತು ಲೋಹಿಯಾವಾದ

೧೧೨ ದಲಿತ ಮೂಲಭೂತವಾದ

ನಾರಾಯಣ ತಿರುಮಲಾಪುರ

೭೦ ನ್ಯಾಯಾಂಗದ 'ಮೆರಿಟ್'

ಸಿ.ಎಸ್. ದ್ವಾರಕಾನಾಥ್

೮೪ ಬಹುಸಂಸ್ಕೃತಿಯ ಮೇಲೆ ಏಕ

ಸಂಸ್ಕೃತಿಯ ದಬ್ಬಾಳಿಕೆ

ಪ್ರೊ|| ಹಿ.ಶಿ. ರಾಮಚಂದ್ರೇಗೌಡ

೮೬ ಮನುಷ್ಯ ಸಂಬಂಧದ ಸಂಸ್ಕೃತಿ ಬೇಕು

ಪ್ರೊ|| ಸಿ.ಜಿ. ಕೃಷ್ಣಸ್ವಾಮಿ

೧೦೦ ಜಗತ್ತಿನ ಕ್ಷಿಪ್ರ ಬೆಳವಣಿಗೆಗಳು ಮತ್ತು

ವಿಜ್ಞಾನದ ಸ್ವರೂಪ

ಡಾ|| ಶರತ್ ಅನಂತಮೂರ್ತಿ

೧೦೨ ಅಲಕ್ಷಿತ ಸಮುದಾಯ

ಮತ್ತು ಮಾಧ್ಯಮಗಳು

ಪ್ರೊ|| ಬಿ.ಎ. ಶ್ರೀಧರ

ಮುಖಪುಟ ಕಲೆ: ಜಾನ್ ದೇವರಾಜ್, ವಿನ್ಯಾಸ: ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

[redacted]

ಕಥೆಗಳು:

೮ ಒಂದಾನೊಂದು ಚಿತ್ರ
ಮಂಜುನಾಥ್ ಗೀತಾ
೪೬ ಭೂಗೋಳ
ಕೇಶವರೆಡ್ಡಿ ಹಂದ್ರಾಳ
೭೬ ಹೈ ಹೀಲ್ಡ್ ಷೂ
ಬಾನು ಮುಷ್ತಾಕ್
೯೪ ಆನೆ
ಡಾ|| ಕರೀಗೌಡ ಬೀಚನಹಳ್ಳಿ
೧೦೬ ಅರಮನೆ
ಕುಂ. ವೀರಭದ್ರಪ್ಪ
೧೧೮ ಬದಲಾಯಿತು ದಾರಿ
ಮಹಾಬಲಮೂರ್ತಿ ಕೊಡ್ಲೆಕೆರೆ

೨೪
ಪೂರ್ಣಚಂದ್ರ ತೇಜಸ್ವಿ:
ಒಂದು ಭಾಷಣ,
ಒಂದು ಸಂವಾದ



ಚರ್ಚೆ :

೩೦ ಅಲ್ಪಸಂಖ್ಯಾತರು, ಹಿಂದುಳಿದವರು
ಮತ್ತು ದಲಿತರು ಒಂದಾಗುತ್ತಿಲ್ಲವೇಕೆ ?
ಪ್ರೊ|| ರಹಮತ್ ತರೀಕೆರೆ
ಪ್ರೊ|| ರವಿವರ್ಮಕುಮಾರ್
ಡಾ|| ನಟರಾಜ್ ಹುಳಿಯಾರ್
೫೨ ಸ್ತ್ರೀವಾದದ ಕಲ್ಪನೆ ಮತ್ತು ಮಹಿಳಾ ಸಮಾನತೆ
ಡಾ|| ಶೈಲಜಾ ಹಿರೇಮಠ
ಡಾ|| ಎಂ. ಸುಮಿತ್ರಾ
ಡಾ|| ಎನ್. ಗಾಯತ್ರಿ
ಡಾ|| ಸಬಿಹಾ ಭೂಮಿಗೌಡ
ಡಾ|| ಎಚ್.ಎಸ್. ಶ್ರೀಮತಿ
೮೮ ಹೊಸ ತಲೆಮಾರಿನ ದಲಿತ ಲೇಖಕರ
ತಲ್ಲಣಗಳು
ವಡ್ಡಗೆರೆ ನಾಗರಾಜಯ್ಯ
ಎನ್.ಕೆ. ಹನುಮಂತಯ್ಯ
ಮೋಹನ ನಾಗಮ್ಮನವರ



ಕಾವ್ಯ:

೧೬ ಹೋಳಿ ಹುಣ್ಣಿಮೆ
ಪ್ರೊ|| ಜಿ.ಎಸ್. ಸಿದ್ದಲಿಂಗಯ್ಯ
೧೭ ಚಮ್ಮಾರ ಕವಿಯಾಗಲಾರ
ಅರವಿಂದ ಮಾಲಗತ್ತಿ
೩೬ ಬುದ್ಧ ಮಹಾಕಾವ್ಯದ ಪೀಠಿಕೆ
ಡಾ|| ಬುದ್ಧಣ್ಣ ಹಿಂಗಮಿರೆ
೪೫ ದ್ವಿಪದಿಗಳು
ಜಂಬಣ್ಣ ಅಮರಚಿಂತ
೬೫ ಭೂಮಿ ತಾಯಿ ಪೂಜೆ
ಎಂ. ಜೆಡಿಯಾ (ಮುಕುಂಜೆಕ)
೬೯ ಸದ್ದುಗಳ ಮಧ್ಯದಲ್ಲೊಂದು ಮೌನ
ಜಿ.ಪಿ. ಬಸವರಾಜು
೯೩ ವಿಚಾರದ ರಥ
ಎಸ್. ಮಂಜುನಾಥ್
೯೮ ಗುರುವಿನೆಡೆಗೆ
ಡಾ|| ಎಚ್.ಎಲ್. ಪುಷ್ಪ
೯೯ ಮಣ್ಣಿನ ಗೆಜ್ಜೆಯ ಕಟ್ಟಿಕೊಂಡ
ಮೌಖಿಕ ಮಹಾದೇವ
ಸುಬ್ಬುಹೊಲೆಯಾರ್
೧೧೧ ಆಹಾ! ಇದೆಂಥ ವ್ಯವಸ್ಥೆ
ಎಸ್. ಮಾಲತಿ



ನಾಟಕ



೬೬ ತುಂಡುದನ
ಪ್ರೊ|| ಹೆಚ್.ಎಲ್. ಕೇಶವಮೂರ್ತಿ

ಕೋಮುವಾದ : ಸಮಸ್ಯೆ ಮತ್ತು ಸವಾಲುಗಳು

ಅದು ಡಿಸೆಂಬರ್ ತಿಂಗಳಿನ ಆರನೆಯ ದಿನ; ನಗರದ ಹೊರವಲಯದಲ್ಲಿರುವ ಸ್ಫೂರ್ತಿಧಾಮದಲ್ಲಿ, ಸಂಜೆ ೪ ಘಂಟೆಗೆ, ೨೦ನೇ ಶತಮಾನದ ಮಹಾನ್ ಬೌದ್ಧ ಭಿಕ್ಕು, ಸಾಮಾಜಿಕ ಸಮಾನತೆಯ ಹರಿಕಾರ, ಡಾ|| ಅಂಬೇಡ್ಕರ್‌ರವರ ಮಹಾಪರಿನಿರ್ವಾಣದ ನೆನಪಿಗೆ, ಒಂದು ಪುಟ್ಟ ಕಾರ್ಯಕ್ರಮ ಆಯೋಜಿತವಾಗಿತ್ತು. ಕಾರ್ಯಕ್ರಮ ಮುಂದುವರೆದಂತೆ, ಅತ್ಯಂತ ಸಂಕೀರ್ಣವಾದ ಒಂದು ವಿರೋಧಾಭಾಸದ ಸಂದರ್ಭದಲ್ಲಿ ನಾವೆಲ್ಲಾ ನಿಂತಿದ್ದೇವೆ ಎನಿಸಲಾರಂಭಿಸಿತು. ಏಕೆಂದರೆ, ಮಾರನೆಯ ದಿನ, ಎಂದರೆ ಡಿಸೆಂಬರ್ ೭ರಂದು ಸಂಜೆ ಅದೇ ಹೊತ್ತಿಗೆ, ನಗರದ ಹೃದಯಭಾಗವಾಗಿರುವ ಆರ್‌ಬಿಎನ್‌ಎಂ ಕಾಲೇಜು ಮೈದಾನದಲ್ಲಿ ಹಿಂದೂ ರಾಷ್ಟ್ರದ ನಿರ್ಮಾಣಕ್ಕಾಗಿ, ಹಿಂದೂಗಳನ್ನು ಸಂಘಟಿ ಸುವ ಉದ್ದೇಶದಿಂದ, ವಿರಾಟ್ ಹಿಂದೂ ಸಮಾಜೋತ್ಸವಕ್ಕೆ ವೈಭವದ ಸಿದ್ಧತೆಗಳು ನಡೆಯುತ್ತಿದ್ದವು.

ಈ ಎರಡೂ ಘಟನೆಗಳು...ಹೀಗೆ, ಅದೂ ೨೧ನೇ ಶತಮಾನದ ಹೊಸ್ತಿಲಿನ ಹೊತ್ತಿನಲ್ಲಿ ಒಟ್ಟೊಟ್ಟಿಗೆ coincide ಆಗಿರುವುದು, ಕೇವಲ ಆಕಸ್ಮಿಕ ಎನಿಸುತ್ತಿಲ್ಲ. ಬದಲಿಗೆ, ಈ ನಾಡಿನ ಒಂದು ಪ್ರಧಾನ ಬದುಕಿನ ಕ್ರಮ, ಇನ್ನುಳಿದ ಬದುಕಿನ ಕ್ರಮಗಳ ಜೊತೆಗೆ ನೇರವಾಗಿ ಮುಖಾಮುಖಿಯಾಗುತ್ತಿರುವ ಒಂದು ಮುಖ್ಯವಾದ ಸಾಮಾಜಿಕ ರಾಜಕಾರಣದ ಹೊತ್ತು ಇದು ಎನಿಸುತ್ತದೆ. ಆದ್ದರಿಂದ, ಚಾರಿತ್ರಿಕವಾಗಿ ಇದು ಅತ್ಯಂತ ಮಹತ್ವಪೂರ್ಣವಾದ ಘಟ್ಟವಾಗಿ ಕಾಣುತ್ತಿದೆ.

○ಬಿ.ಯು. ಸುಮ

ಈ ಎರಡೂ ಘಟನೆಗಳು situate ಆಗಿರುವ ಭೌಗೋಳಿಕ ವಿವರ ಕೂಡ, ಸಮಕಾಲೀನ ಸಾಮಾಜಿಕ ಮತ್ತು ರಾಜಕೀಯ ಸಂಸ್ಕೃತಿಯು ಪಡೆದುಕೊಳ್ಳುತ್ತಿರುವ ಆಕೃತಿಯನ್ನು ನಿರ್ದೇಶಿಸುತ್ತಿವೆ. ಯಾವುದನ್ನು ದೇಶದ ಹೃದಯ ಭಾಗವಾಗಬೇಕೆಂದು ಅಂಬೇಡ್ಕರ್ ತಹತಹಿಸುತ್ತಿದ್ದರೋ, ಅದು ಪರಿಧಿಯಲ್ಲೇ ಉಳಿದಿದೆ. ಯಾವುದನ್ನು ಪರಿಧಿಗೆ ಸರಿಸಬೇಕೆಂದು · ಜೀವನದುದ್ದಕ್ಕೂ ಹೋರಾಡಿದರೋ, ಅದು ದೇಶದ ಹೃದಯಭಾಗವಾಗುತ್ತಿದೆ. ಈಗ ಎರಡು ದಿನಗಳ ಹಿಂದೆ ಹೊರಬಂದಿರುವ ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶವನ್ನು ಗಮನಿಸಿದರೆ, ರಾಷ್ಟ್ರದ ರಾಜಕಾರಣ ಯಾವ ದಿಕ್ಕಿನತ್ತ ಸಾಗುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಮಾನವೀಯ ಮೌಲ್ಯಗಳ ಬಗ್ಗೆ ಕಾಳಜಿ ಇರುವ ಎಲ್ಲರೂ ಆತಂಕ ಪಡಬೇಕಾದ ಸಂದರ್ಭ ಇದು.

ಈ ಲೇಖನದ ಆರಂಭದಲ್ಲಿ ಅಂಬೇಡ್ಕರರನ್ನು ಮಹಾನ್ ಬೌದ್ಧ ಭಿಕ್ಕು ಎಂಬ ವಿಶೇಷಣದಿಂದ ಗುರುತಿಸಿದೆ. ಏಕೆಂದರೆ, ಬೌದ್ಧ ಧರ್ಮದ ಎರಡು ಮುಖ್ಯಗುಣಗಳೆಂದರೆ ಪ್ರೇಮ ಮತ್ತು ಧೀಮಂತಿಕೆ. ಬುದ್ಧನ ಕಾಲಕ್ಕಾಗಲೇ ಜಾತಿಪದ್ಧತಿಯ ಮೂಲನೆಲೆಯಾದ ಅಸಮಾನತೆಯ ಕಲ್ಪನೆ ಸಾಮಾಜಿಕವಾಗಿ ಆಚರಣೆಯಲ್ಲಿತ್ತು. ಬುದ್ಧ ಹೋರಾಡಿದ್ದು ಈ ಮೌಲ್ಯದ ವಿರುದ್ಧ; ಅದಕ್ಕಾಗಿ ಜ್ಞಾನ ಒಂದು ಪ್ರಧಾನವಾದ ಹತಾರು ಆಗಬೇಕೆಂದು ಇದೆಲ್ಲಕ್ಕಿಂತ ಮುಖ್ಯವಾಗಿ, ಬುದ್ಧನ ಬೋಧನೆ ರಚನಾತ್ಮಕವಾಗುವುದರತ್ತ ತುಡಿಯುತ್ತದೆ. ಯಾವುದೇ ಸ್ವಾರ್ಥ ಹಾಗೂ ರಾಜಕೀಯದ ಸೋಂಕೂ ಇಲ್ಲದೆ, ಕೇವಲ ಮಾನವೀಯ ಕಾರಣದಿಂದ, ಅತ್ಯಂತ ಧೀಮಂತಿಕೆಯಿಂದ ಅಂಬೇಡ್ಕರ್ ಜಾತಿ ವ್ಯವಸ್ಥೆಯ ವಿರುದ್ಧ ಸಮರ ಸಾರಿದರು. ಜ್ಞಾನದಿಂದ ಮಾತ್ರವೇ ಜಾತಿ ಪದ್ಧತಿಯ ಕಬಂಧ ಹಿಡಿತದಿಂದ ಬಿಡುಗಡೆ ಪಡೆಯುವುದು ಸಾಧ್ಯ ಎಂದು ಒತ್ತಿ ಹೇಳಿದರು. ಹಾಗೂ ತಾವು ನಂಬಿದ ಮೌಲ್ಯಗಳನ್ನು ರಚನಾತ್ಮಕವಾಗಿಸುವುದರತ್ತ ಅಂಬೇಡ್ಕರರಿಗೆ ತೀವ್ರವಾದ ಆಸಕ್ತಿ ಇತ್ತು.



ಆಧುನಿಕ ಭಾರತದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಇಷ್ಟು ತಾರ್ಕಿಕವಾಗಿ, ವ್ಯವಸ್ಥಿತವಾಗಿ, ನಿರಂತರವಾಗಿ, ಈ ದೇಶದ ಶೋಷಿತ ಸಮುದಾಯಗಳ ಪರವಾಗಿ ಹೋರಾಡಿದ ಮತ್ತೊಬ್ಬ ವ್ಯಕ್ತಿ ಇಲ್ಲ. ಹಿಂದೂಧರ್ಮ ಎಂದಿಗೂ ಈ ಸಮುದಾಯಗಳನ್ನು ಘನತೆಯಿಂದ, ಸ್ವಾಭಿಮಾನದಿಂದ ಬದುಕುವುದಕ್ಕೆ ಬಿಡುವುದಿಲ್ಲ ಎಂದರಿತೇ ಬೌದ್ಧಧರ್ಮದ ಮಮತೆಯ ಮಡಿಲನ್ನು ಆಯ್ಕೆ ಮಾಡಿಕೊಂಡು, ಆ ಮೂಲಕ ಹಿಂದೂ ಧರ್ಮದ ಅಮಾನವೀಯತೆಗೆ ಸವಾಲಾದವರು. ಅಂಬೇಡ್ಕರ್ ಸಂವಿಧಾನವನ್ನು ರೂಪಿಸಿದ್ದು ಕೂಡ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಸಾಧ್ಯವಾಗುವ ಅವಕಾಶಗಳಿಗೆ ಆದ್ಯತೆಯನ್ನು ನೀಡಿ.

ಆದರೆ, ನೋಡನೋಡುತ್ತಿದ್ದಂತೆಯೇ ಕೇವಲ ಎರಡು ದಶಕದ ಅವಧಿಯಲ್ಲಿ ಹಿಂದೂ ರಾಷ್ಟ್ರದ ಮೌಲ್ಯಗಳು ದೇಶದಾದ್ಯಂತ ವ್ಯಾಪಿಸಿ, ಭಾರತದ ರಾಜಕೀಯ ನಕಾಶೆಯನ್ನು ಪುನರ್‌ರಚಿಸುತ್ತಿವೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳಿಗೆ ಎಂದಿಗೂ ಮಾನ್ಯತೆ ನೀಡದ ಹಿಂದುತ್ವದ ಪುನರುತ್ಥಾನ, ಜಾಗತೀಕರಣದ ಸಮಸ್ಯೆಗಳಿಗಿಂತ ಹೆಚ್ಚು ಅಪಾಯಕಾರಿಯಾದುದು. ಹಾಗೆ ನೋಡಿದರೆ, 'ಹಿಂದೂ ರಾಷ್ಟ್ರ', ಎಂಬ ಕಲ್ಪನೆಯೇ ಆಧುನಿಕ ರಾಷ್ಟ್ರ ಪ್ರಭುತ್ವದ ಒಂದು ಸಂರಚನೆ. ೧೯೮೦ರ ನಂತರ, ಹಿಂದೂ ಮೌಲ್ಯಗಳ ಪುನರುತ್ಥಾನಕ್ಕೆ ಕಾರಣವಾದ ಒಂದು ಸಾಮಾಜಿಕ ಸಂಗತಿ, ಹಿಂದೂ ಕುತೂಹಲಕರವಾದ ಸಾಂಸ್ಕೃತಿಕ ರಾಜಕಾರಣದ ಕಥನವನ್ನು ಹೇಳುತ್ತದೆ. ಭಾರತವನ್ನು ತೊರೆದು ಹೋದ ಅನಿವಾಸಿ ಭಾರತೀಯರು ತಮ್ಮ ಸಂಸ್ಕೃತಿಯ ಬೇರುಗಳನ್ನು ಜೀವಂತವಾಗಿರಿಸಿಕೊಳ್ಳಲು, ಯು.ಎಸ್., ಯು.ಕೆ., ಕೆನಡಾ, ಆಸ್ಟ್ರೇಲಿಯಾದಲ್ಲಿ ಹರಡಿದ್ದ ವಿ.ಎಚ್.ಪಿ. ಘಟಕಗಳ ಮೇಲೆ ತಂದ ಒತ್ತಡದ ಪರಿಣಾಮವಾಗಿ, ಹಿಂದೂ ರಾಷ್ಟ್ರದ ಕಲ್ಪನೆ, ೧೯೮೦ರ ನಂತರ, ಅತ್ಯಂತ ಕ್ಷಿಪ್ರವಾಗಿ ವ್ಯಾಪಿಸಲಾರಂಭಿಸಿತು. ಭಾರತದ ಮೇಲುವರ್ಗಕ್ಕೆ ಸೇರಿದ ಅನಿವಾಸಿ ಭಾರತೀಯರು, ಇದಕ್ಕಾಗಿ ಎಲ್ಲಾ ರೀತಿಯ ಸಹಕಾರ ಮತ್ತು ಬೆಂಬಲವನ್ನು ಒದಗಿಸಿದರು. ಆದರೆ, ಇವರು ಭಾರತದಲ್ಲಿ ಕಾಣಬೇಕೆಂದು ಆಶಿಸುತ್ತಿದ್ದ ಹಿಂದುತ್ವದ ಕಲ್ಪನೆಯ ಹಿಂದೆ ಕೆಲಸ ಮಾಡುತ್ತಿದ್ದುದು ಯುರೋಪಿಯನ್ ಮನಃಸ್ಥಿತಿ. ೮೦ರ ದಶಕದ ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ವಾತಾವರಣಕ್ಕೂ, ಇವರ ಕಲ್ಪನೆಯಲ್ಲಿದ್ದ

ಚರಿತ್ರೆಯ ಪಾಠಗಳ ಗ್ರಹೀತದಿಂದ ರೂಪಿತವಾದ ೧೯೮೪ರ ನಂತರ, ಇಲ್ಲಿನ ರಾಜಕೀಯ ಕ್ಷೇತ್ರದಲ್ಲಿ ಉಂಟಾಗಿದ್ದ ಗೊಂದಲದ ಸಂದರ್ಭದಲ್ಲಿ, ಈ ವೈರುಧ್ಯಗಳನ್ನು ಭಾರತದ ರಾಜಕಾರಣದೊಳಗೆ ಬೆಸೆಯುವ ಯತ್ನಗಳು ನಡೆಯಲಾರಂಭಿಸಿದವು. ಇಂದು ಈ ಮೌಲ್ಯಗಳು ಎಷ್ಟು ದೊಡ್ಡ ಫ್ಯಾಸಿಸ್ಟ್ ಶಕ್ತಿಗೆ ಜನ್ಮ ನೀಡಿದೆ ಎಂದು ಯೋಚಿಸಿದರೆ, ದಿಗ್ಭ್ರಮೆಯಾಗುತ್ತದೆ.

'The age of extremes, A History of the world': 1914-1991 ಎಂಬ ಕೃತಿಯಲ್ಲಿ ಎರಿಕ್ ಹಾಬ್ಸ್‌ಬಾಮ್, ಯುರೋಪಿನಲ್ಲಿ ವ್ಯಾಪಿಸಿದ ಫ್ಯಾಸಿಸಂಗೂ ಮತ್ತು ಹಿಂದುತ್ವದ ಕಾರ್ಯವೈಖರಿಯಲ್ಲಿನ ಸಾಮ್ಯತೆಗಳನ್ನು ಗುರುತಿಸುತ್ತಾ 'ಸಂಪ್ರದಾಯ ಮತ್ತು ತಮ್ಮ ಸಮೀಪದ ಗತವನ್ನು (immediate past) ವೈಭವೀಕರಿಸುವ ಹಾಗೂ ಒಂದು ನಿರ್ದಿಷ್ಟ ಪಂಥ ಅಥವಾ ಜನಾಂಗದ ವಿರುದ್ಧ ದ್ವೇಷವನ್ನು ಹುಟ್ಟುಹಾಕುವುದರ ಮೂಲಕ ಈ ಫ್ಯಾಸಿಸ್ಟ್ ಶಕ್ತಿಗಳು ತಮ್ಮ ಅಸ್ಮಿತೆಯನ್ನು ರೂಪಿಸಿಕೊಳ್ಳುತ್ತವೆ' ಎಂದು ಹೇಳುತ್ತಾನೆ. ಗೋಧ್ರಾದ ಹಿಂಸಾಕಾಂಡದ ನಂತರ, ಭಾರತದಲ್ಲಿ ಬದುಕುತ್ತಿವೆ ಎಂಬ ಸಂಗತಿಯನ್ನು ರಫೀರ್ ಝಕಾರಿಯಾ ತಮ್ಮ 'communal rage in secular India' ಕೃತಿಯಲ್ಲಿ ನಿರೂಪಿಸುತ್ತಾರೆ. ಇಂದು ಬಹಿರಂಗವಾಗಿ ಮುಸ್ಲಿಂರನ್ನು ದೇಶ ಬಿಟ್ಟು ತೊಲಗಿ ಎಂದು ಹೇಳುವವರ ದೃಷ್ಟಿ ನಾಳೆ ಕ್ರೈಸ್ತರತ್ತ ನಂತರ ಈ ದೇಶದ ಕೆಳಜಾತಿ, ವರ್ಗದವರತ್ತ ಹರಿಯುತ್ತದೆ. ಇದು, ಆರ್ಯಜನಾಂಗದ ಶ್ರೇಷ್ಠತೆಯನ್ನು ಸಾಧಿಸುವುದಕ್ಕೆ ಜರ್ಮನಿಯಲ್ಲಿ ಮಾರಣ ಹೋಮ ಮಾಡಿದ ಹಿಟ್ಲರ್‌ನ ಮನಃಸ್ಥಿತಿಗಿಂತ ಭಿನ್ನವಾದುದಲ್ಲ.

೧೯೯೦ರ ನಂತರ, ದಲಿತರ ಮೇಲೆ ನಡೆಯುತ್ತಿರುವ ಹಲ್ಲೆಗಳ ಸಂಖ್ಯೆ ಕೂಡ ಗಣನೀಯವಾಗಿ ಹೆಚ್ಚಿದೆ. ಮುಂಬಯಿನ ಜನಪರ ಚಳವಳಿಗಳ ಕಾರ್ಯಕರ್ತ ಹಾಗೂ ಸಂಶೋಧಕ ಡಾ॥ ಆನಂದ್ ತೇಳ್‌ತುಂಬ್ಡೆ ಅವರ ಒಂದು ಲೇಖನದ ಪ್ರಕಾರ (ಇಂಟರ್‌ನೆಟ್‌ನಲ್ಲಿ ದೊರೆತ ಮಾಹಿತಿ), ೧೯೯೧ರಲ್ಲಿ ದಾಖಲಾದ ಹಲ್ಲೆಗಳ ಸಂಖ್ಯೆ ಒಟ್ಟು ಶೇಕಡ ೨.೩ರಷ್ಟು ಹೆಚ್ಚಳ ಕಂಡು ಬಂದಿದೆ. ಸ್ವಲ್ಪ ಎಚ್ಚರಿಕೆಯಿಂದ ಗಮನಿಸಿದರೆ, ಇದು ಮಂಡಲ್ ವರದಿಯನ್ನು ಅನುಷ್ಠಾನಕ್ಕೆ ತರುವ ಯತ್ನದ ನಂತರದ ಬೆಳವಣಿಗೆಗಳು ಎನ್ನುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ದಲಿತರ ಪ್ರಾಬಲ್ಯ ಹೆಚ್ಚಾಗಬಹುದು ಎಂಬ ಆತಂಕದ ಪರಿಣಾಮವೇ ಇಷ್ಟು ಕ್ರೂರವೇ? ನಿಸ್ಸಂದೇಹವಾಗಿ, ಈ ಹಲ್ಲೆಗಳು ಮತ್ತೊಮ್ಮೆ ಹಿಂದೂ ಯಾಜಮಾನ್ಯದ ಅಧಿಕೃತತೆಯನ್ನು ಪುನರ್‌ಸ್ಥಾಪಿಸುವ ಕಥನಗಳಾಗಿವೆ.

> **ಕೇವಲ ಎರಡು ದಶಕದ ಅವಧಿಯಲ್ಲಿ ಹಿಂದೂ ರಾಷ್ಟ್ರದ ಮೌಲ್ಯಗಳು ದೇಶದಾದ್ಯಂತ ವ್ಯಾಪಿಸಿ, ಭಾರತದ ರಾಜಕೀಯ ನಕಾಶೆಯನ್ನು ಪುನರ್‌ರಚಿಸುತ್ತಿವೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳಿಗೆ ಎಂದಿಗೂ ಮಾನ್ಯತೆ ನೀಡದ ಹಿಂದುತ್ವದ ಪುನರುತ್ಥಾನ, ಜಾಗತೀಕರಣದ ಸಮಸ್ಯೆಗಳಿಗಿಂತ ಹೆಚ್ಚು ಅಪಾಯಕಾರಿಯಾದುದು. ಹಾಗೆ ನೋಡಿದರೆ, 'ಹಿಂದೂ ರಾಷ್ಟ್ರ', ಎಂಬ ಕಲ್ಪನೆಯೇ ಆಧುನಿಕ ರಾಷ್ಟ್ರ ಪ್ರಭುತ್ವದ ಒಂದು ಸಂರಚನೆ. ೧೯೮೦ರ ನಂತರ, ಹಿಂದೂ ಮೌಲ್ಯಗಳ ಪುನರುತ್ಥಾನಕ್ಕೆ ಕಾರಣವಾದ ಒಂದು ಸಾಮಾಜಿಕ ಸಂಗತಿ. ಭಾರತವನ್ನು ತೊರೆದು ಹೋದ ಅನಿವಾಸಿ ಭಾರತೀಯರು ತಮ್ಮ ಸಂಸ್ಕೃತಿಯ ಬೇರುಗಳನ್ನು ಜೀವಂತವಾಗಿರಿಸಿಕೊಳ್ಳಲು, ಯು.ಎಸ್., ಯು.ಕೆ., ಕೆನಡಾ, ಆಸ್ಟ್ರೇಲಿಯಾದಲ್ಲಿ ಹರಡಿದ್ದ ವಿ.ಎಚ್.ಪಿ. ಘಟಕಗಳ ಮೇಲೆ ತಂದ ಒತ್ತಡದ ಪರಿಣಾಮವಾಗಿ, ಹಿಂದೂ ರಾಷ್ಟ್ರದ ಕಲ್ಪನೆ, ೧೯೮೦ರ ನಂತರ, ಅತ್ಯಂತ ಕ್ಷಿಪ್ರವಾಗಿ ವ್ಯಾಪಿಸಲಾರಂಭಿಸಿತು.**

ನಮ್ಮ ಸಾಮಾಜಿಕ ಬದುಕಿನ ಆಗುಹೋಗುವಿಕೆಗಳನ್ನು ಒಂದು ಸಲ ಗಮನಿಸಿದರೂ ಸಾಕು, ಅದು, ದಲಿತರ, ಬುಡಕಟ್ಟುಗಳ, ಮುಸ್ಲಿಂರ, ಮಹಿಳೆಯರ ಬದುಕಿನ ಗತಿ ಎತ್ತ ಸಾಗುತ್ತಿದೆ ಎನ್ನುವುದನ್ನು ಸೂಚಿಸುತ್ತದೆ. ಕಳೆದ ಮೂರು ದಶಕಗಳಲ್ಲಿ ಸಾಮಾಜಿಕ ರಾಜಕಾರಣದಲ್ಲಿ ಹೆಚ್ಚು ಕ್ರಿಯಾಶೀಲವಾಗಿರುವ ಮಹಾರಾಷ್ಟ್ರ, ಆಂಧ್ರ, ಕರ್ನಾಟಕದ ದಲಿತ ಸಂಘಟನೆಗಳು, ಮಹಾರಾಷ್ಟ್ರದ ಮಾಂಗ್ ಸಮ್ಮೇಳನ, ಇದೇ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ನಡೆದ ಬೌದ್ಧಧರ್ಮ ಸ್ವೀಕಾರ ಸಮಾವೇಶ, ಈಗ ಕೆಲವು ವಾರಗಳ ಹಿಂದೆಯಷ್ಟೇ ಉದ್ಘಾಟನೆಗೊಂಡ ದಲಿತ ಹೆಣ್ಣು ಮಕ್ಕಳ ತರಬೇತಿ ಕಾರ್ಯಾಗಾರ, ಕಾರ್ಕಳದಲ್ಲಿ ನಕ್ಸಲೈಟ್ ಎಂದು ಬ್ರ್ಯಾಂಡ್ ಆಗಿರುವ ಆದಿವಾಸಿ ಹೋರಾಟಗಾರರು, ಲಖನೌ, ಚೆನ್ನೈ, ಕೊಯಮತ್ತೂರಿನಲ್ಲಿ 'ಮಸೀದಿ ಧ್ವಂಸ' ದಿನದ ನೆನಪಿಗಾಗಿ ನಡೆದ ಪ್ರತಿಭಟನಾ ಮೆರವಣಿಗೆ ಎಲ್ಲವೂ ನಿಶ್ಚಿತವಾಗಿ ಒಂದು ಮಹತ್ವಪೂರ್ಣ ಸಂಗತಿಯತ್ತ ಬೆರಳು ತೋರುತ್ತಿವೆ. ಇದು, ಸಮಾಜದ ಶೋಷಿತ ಸಮುದಾಯಗಳಲ್ಲಿ ಉಂಟಾಗಿರುವ ಸಾಮಾಜಿಕ ಎಚ್ಚರ. ಆದರೆ, ದೌರ್ಜನ್ಯದ ವಿರುದ್ಧ ಸಂಘಟಿತವಾಗುತ್ತಿರುವ ಕಥನಗಳಿಗೆ ಸಮಾನಾಂತರವಾಗಿ, ಅದಕ್ಕೆ ಹತ್ತರಷ್ಟು ಅಸಹಾಯಕತೆಯ ಕಥನಗಳಿವೆ ಎನ್ನುವುದು ಕೂಡ ಒಂದು ನಿಷ್ಠುರ ಸತ್ಯ.

ಆದರೂ, ಆತಂಕಕ್ಕೆ ಕಾರಣವಾಗಿರುವ ಸಂಗತಿ ಏನೆಂದರೆ, ಅತ್ಯಂತ ಕ್ಷಿಪ್ರ ಅವಧಿಯಲ್ಲಿ, ಅತ್ಯಂತ ಶಕ್ತಿಯುತವಾಗಿ ರಾಜಕೀಯವಾಗಿ ಪ್ರಾಬಲ್ಯಗಳಿಸುವುದು ಈ ಮೂಲಭೂತ ಶಕ್ತಿಗಳಿಗೆ ಸಾಧ್ಯವಾಯಿತು ಎನ್ನುವುದು. ಹಿಂದೂ ರಾಷ್ಟ್ರೀಯವಾದದ ಬೇರುಗಳನ್ನು ಸ್ವಾತಂತ್ರ್ಯಪೂರ್ವ ಕಾಲಘಟ್ಟದಿಂದ ಗುರುತಿಸಬಹುದಾದರೂ, ೧೯೮೦ರ ನಂತರವೇ ಬಿ.ಜೆ.ಪಿ. ರಾಜಕೀಯವಾಗಿ ಪ್ರಬಲವಾಗಲಾರಂಭಿಸಿದ್ದು. ಎಲ್ಲಾ ವರ್ಗದ, ಶ್ರೇಣಿಯ ಹಿಂದೂಗಳನ್ನು ಬಿ.ಜೆ.ಪಿಯತ್ತ ವಾಲುವಂತೆ ಮಾಡಿದ ಸಂಗತಿ ಯಾವುದು ಎಂದು ಯೋಚಿಸಿದಾಗ ಆಶ್ಚರ್ಯವಾಗುತ್ತದೆ. ಅತ್ಯಂತ ಕ್ಷುಲ್ಲಕವಾದ ರಾಮಮಂದಿರ ನಿರ್ಮಾಣದ ಒಂದು ಸಣ್ಣ ಧಾರ್ಮಿಕ ಸಂಗತಿ ಇಷ್ಟು ಶಕ್ತಿಯುತವಾಗಬಹುದೇ...?...!

ಈಗ ನಮ್ಮ ಮುಂದಿರುವ ಸವಾಲು ಏನೆಂದರೆ, ಈ ಫ್ಯಾಸಿಸ್ಟ್ ಶಕ್ತಿಗಳನ್ನು ಎದುರಿಸುವುದಕ್ಕೆ ವಿವಿಧ ಧರ್ಮ ಮತ್ತು ಕೋಮಿಗೆ ಸೇರಿದ ಜನರನ್ನು ಒಂದುಗೂಡಿಸುವುದು ಹೇಗೆ ಎನ್ನುವುದು.

ದಲಿತ ಸಮುದಾಯಗಳಲ್ಲೇ ಎಷ್ಟೊಂದು ಛಿದ್ರಗಳು ಎಂದರೆ, ಅಂಬೇಡ್ಕರ್ ಕಟ್ಟಿದ ಬೌದ್ಧ ಧರ್ಮದ ಪರಂಪರೆ, ದಲಿತ ಸಮುದಾಯಗಳನ್ನು ಒಂದು ಮಾಡುತ್ತಿಲ್ಲ, ಅವರ ರಾಜಕೀಯ ಆಯ್ಕೆಗಳಲ್ಲಿ ಕೂಡ ಒಗ್ಗಟ್ಟಿಲ್ಲ. ಈ ಸಂಗತಿಯನ್ನು ಸ್ಪಷ್ಟೀಕರಿಸುವುದಕ್ಕೆ ಕೇವಲ ಎರಡು ರಾಜ್ಯಗಳ ಉದಾಹರಣೆ ಸಾಕು. ಆಂಧ್ರದಲ್ಲಿ ಮಾದಿಗರು ತೆಲುಗ ದೇಶಂನ ಪರವಾಗಿದ್ದರೆ, ಮಾಲಾಗಳು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾರೆ. ಮಹಾರಾಷ್ಟ್ರದಲ್ಲಿ ಮಾಂಗ್‌ಗಳು ಶಿವಸೇನೆಯತ್ತ ವಾಲಿದರೆ, ಮಹರ್‌ಗಳು ಕಾಂಗ್ರೆಸ್ ಜೊತೆಗೆ ನಿಂತಿದ್ದಾರೆ.

ಸಮಸ್ಯೆಯನ್ನು ಇನ್ನಷ್ಟು ಸಂಕೀರ್ಣವಾಗಿಸುವ ಮತ್ತೊಂದು ಸಂಗತಿ ಎಂದರೆ, ಭಾರತ ರಾಜಕಾರಣದ ಸಂಕಥನಗಳೆಲ್ಲಾ ಜಾತಿ ಮತ್ತು ಧರ್ಮಾಧಾರಿತವಾಗಿಯೇ ಇರುವುದು. ವಸ್ತುಸ್ಥಿತಿ ಹೀಗಿರುವಾಗ, ವಿವಿಧ ಜಾತಿ ಮತ್ತು ಕೋಮಿಗೆ ಸೇರಿದ ಸಮುದಾಯಗಳನ್ನು ಸಂಘಟಿಸುವುದು ನಿಜಕ್ಕೂ ಒಂದು ದೊಡ್ಡ ಸವಾಲೇ ಸರಿ. ಈ ಶತಮಾನದ ಆರಂಭದಲ್ಲಿ ನಡೆದ ಹೋರಾಟ, ಪರದೇಶಿಯರ ವಿರುದ್ಧವಾದರೆ, ಈ ಹೋರಾಟ ಸ್ವದೇಶಿಯರ ವಿರುದ್ಧವಾದುದು.

ಕಳೆದ ಎರಡು ದಶಕಗಳಿಂದ ಮಧ್ಯಮ ಮತ್ತು ಮೇಲು ಮಧ್ಯಮ ವರ್ಗದಲ್ಲಿ ಅಂತರಜಾತೀಯ ವಿವಾಹಗಳು upward social mobility ಹೆಚ್ಚುತ್ತಿದ್ದರೂ ಸಾಧ್ಯವಾಗಿಲ್ಲ. ಇಷ್ಟೆಲ್ಲಾ ಸಾಮಾಜಿಕ ಆತಂಕಗಳ ನಡುವೆಯೂ, ಈ ಹೊತ್ತಿನ ತುರ್ತು, ಜಾತ್ಯಾತೀತ ಭಾರತದ ಸಂವಿಧಾನಾತ್ಮಕ ಮೌಲ್ಯಗಳಿಗಾಗಿ ಹೋರಾಡುವುದು. ರಾಜಕೀಯ ಎಷ್ಟು ಹೊಲಸು ಎಂಬ ಅರಿವು ಇದ್ದರೂ, ಹಿಂದುತ್ವದ ಕೋಮುವಾದವನ್ನು ಎದುರಿಸಬೇಕೆಂದರೆ, ರಾಜಕೀಯವಾಗಿ, ಭಾರತದ ಅಲ್ಪಸಂಖ್ಯಾತರು, ಕೆಳಜಾತಿ, ವರ್ಗ, ಬುಡಕಟ್ಟು ಸಮುದಾಯದವರು ಒಗ್ಗಟ್ಟಿನಿಂದ ಸಂಘಟಿತವಾಗುವುದು. ಹೊಸ ರಾಜಕೀಯ ವಿಧಾನಗಳನ್ನು ಕಟ್ಟುವುದು ಅತ್ಯಂತ ಶ್ರಮದ ಕೆಲಸವಾದರೂ, ಅತ್ಯಂತ ತುರ್ತಿನ ಕೆಲಸ ಎನ್ನುವುದು ಕೂಡ ಸತ್ಯ. □

ಕಥೆ

ಒಂದಾನೊಂದು ಚಿತ್ರ

○ ಮಂಜುನಾಥ್ ಗೀತಾ

ಇದೇ ಮೊದಲ ಸಲ ಆತ ನಗರದ ನಡುಭಾಗದ ಈ ವಿಶಾಲ ಸರ್ಕಲ್‌ನ ಒಂದು ವಿಶಾಲ ಮೂಲೆಯಲ್ಲಿ ಚಿತ್ರ ಬಿಡಿಸಲು ಸಿದ್ಧತೆ ಮಾಡಿಕೊಳ್ಳುತಿದ್ದ. ಇದಕ್ಕೂ ಮೊದಲು ಒಮ್ಮೆಯೂ ಈ ಸ್ಥಳದಲ್ಲಿ ಆತನನ್ನು ಕಾಣದಿದ್ದುದರಿಂದ ತನಗೆ ಹಾಗೆನ್ನಿಸುತ್ತಿರಬಹುದೆಂದುಕೊಂಡ ಈತ.

ಆತ ಎಂದರೆ ರಸ್ತೆ ಬದಿಯಲ್ಲಿ ಚಿತ್ರ ಬಿಡಿಸುವವ. ಈತ ಎಂದರೆ ಇದೀಗ ಜನಪ್ರಿಯತೆಯ ಹಾದಿಯಲ್ಲಿರುವ 'ಸದಾಶಯ' ಎಂಬ ದಿನಪತ್ರಿಕೆಯೊಂದರಲ್ಲಿ ಮುಖ್ಯ ವರದಿಗಾರ.

ಮುಖವನ್ನೆಲ್ಲ ಜಡೆಗಟ್ಟಿದ್ದ ತಲೆಗೂದಲು, ಪೊದೆ ಗಡ್ಡ ಆವರಿಸಿ ಒಂದು ತುಂಡುಪಂಚೆಯ ಹೊರತಾಗಿ ಬರಿ ಮೈಯಲ್ಲಿರುವ ಆತನನ್ನು ಪತ್ರಕರ್ತ ಈ ಮೊದಲು ಈ ನಗರದ ಅನೇಕ ಮುಖ್ಯ ಸರ್ಕಲ್‌ಗಳಲ್ಲಿ ಕಂಡಿದ್ದಾನೆ. ಆಗೆಲ್ಲ ಆತ ಚಿತ್ರ ಬಿಡಿಸುತ್ತಿರುವ ಭಂಗಿಯಲ್ಲೇ ಈತನಿಗೆ ಕಾಣಿಸಿದ್ದಾನೆ. ಕೈಯಲ್ಲಿ ಒರಟಾದ ಇದ್ದಿಲ ತುಂಡೊಂದನ್ನು ಹಿಡಿದು ರಸ್ತೆಯಲ್ಲಿ ತೆವಳುತ್ತ ಗೀರುಗಳ ಬರೆಯುವ ರೀತಿಯಲ್ಲಲ್ಲದೆ ಇನ್ನಾವ ರೀತಿಯಲ್ಲಿಯೂ ಆತನನ್ನು ಪತ್ರಕರ್ತ ಕಲ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ.

ಆತ ಕುಂಟನಿದ್ದಿರಬಹುದೆಂದು ಆತನನ್ನು ಕಂಡಾಗಲೆಲ್ಲ ಅನುಮಾನವಾಗಿದ್ದಿದೆ. ಯಾಕೆಂದರೆ ಟಾರು ರಸ್ತೆಯ ಬದಿಯಲ್ಲಿರುವ ಯಾವುದಾದರೂ ಮರದ ನೆರಳಿನಲ್ಲಿ ಚಿತ್ರ ಬಿಡಿಸುವಾಗಲೆಲ್ಲ ಆತ ತಾನು ಬರೆಯುವ ಇದ್ದಿಲ ಗೆರೆಗಳುದ್ದಕ್ಕೂ ಮಗುವಿನಂತೆ ತೆವಳುತ್ತಲೇ ಇರುತ್ತಾನೆ. ಹಾಗೆ ತೆವಳಿ ತೆವಳಿ ಆತನ ಮಂಡಿಯ ಚಿಪ್ಪುಗಳೆರಡೂ ಸವೆದು ಬೂದು ಬಣ್ಣಕ್ಕೆ ತಿರುಗಿವೆ. ಆದರೂ ಆತನ ಹತ್ತಿರದಲ್ಲಿ ಕಂಕುಳ ಊರುಗೋಲಾಗಲೀ ಇತರೆ ಯಾವುದೇ ಕೋಲಾಗಲೀ ಕಾಣಬಂದಿಲ್ಲವಾದ್ದರಿಂದ ಈತ ಕುಂಟ ಇದ್ದಿರಲಾರ ಅಂತಲೂ ಯೋಚಿಸಿಯಾಗಿದೆ.

ಚಿತ್ರ ಬರೆಯುವ ಆತ ಒಮ್ಮೆಯೂ ಎದ್ದು ನಿಂತು ಅಥವಾ ಹಿಂದೆ ಮುಂದೆ ತಿರುಗಿ ತಾನು ಬರೆದ ಗೆರೆಗಳನ್ನು ಪರೀಕ್ಷಿಸುತ್ತಿರಲಿಲ್ಲ. ಮಗುವೊಂದು ತನ್ನ ಸಹಜ ಇಷ್ಟದಂತೆ ತಾನು ಕೈಕಾಲು ಆಡಿಸುತ್ತ ತೆವಳುವಂತೆ ಆತ ಸಲೀಸು ಗೆರೆಗಳನ್ನು ಎಳೆಯುತ್ತ ಹೋಗುತ್ತಿರುವಾಗಲೇ ಅತ್ಯಂತ ಸ್ಪಷ್ಟವಾಗಿ ಗೋಚರಿಸುವ ವಿಶಾಲಾಕಾರದ ಚಿತ್ರವೊಂದು ಮೂಡಿಬಿಟ್ಟಿರುತ್ತದೆ.

ಆತ ಇದುವರೆವಿಗೂ ರಸ್ತೆಯ ಮೇಲೆ ಬರೆದಿರುವ ಚಿತ್ರಗಳೆಲ್ಲವೂ ಜನರಿಗೆ ಚಿರಪರಿಚಿತವಾದವುಗಳೇ. ಗಣಪತಿ, ಈಶ್ವರ, ಲಕ್ಷ್ಮಿ, ಸರಸ್ವತಿ, ತಿರುಪತಿ ವೆಂಕಟೇಶ್ವರ ಹೀಗೆ ಎಲ್ಲರ ಮನೆಗಳಲ್ಲಿರುವ ದೇವರುಗಳೆಲ್ಲವನ್ನೂ ಬೇರೆ ಬೇರೆ ಚಿತ್ರ ಪಟಗಳಲ್ಲಿ, ಕ್ಯಾಲೆಂಡರುಗಳಲ್ಲಿ, ತಮ್ಮ ಮನೆಗಳಲ್ಲಿ ತೂಗು ಹಾಕಿರುವ ಫೋಟೋಗಳಲ್ಲಿ ಈಗಾಗಲೇ ಜನ ಕಂಡವರಾದರೂ ಆ ಚಿತ್ರಗಳೆಲ್ಲ ಈತನ ಕೈಚಳಕದಲ್ಲಿ ಬೇರೆಯದೇ ಲವಲವಿಕೆಯೊಂದಿಗೆ ಲಕಲಕಿಸುತ್ತವೆ.

ಆತನ ಬಳಿ ಇದ್ದಿಲು ತುಂಡುಗಳ ಸಣ್ಣ ಬಟ್ಟೆಯ ಚೀಲವೊಂದು ಸದಾ ಇದ್ದೆ ಇದೆ. ಇದ್ದಿಲು ತುಂಡುಗಳನ್ನು ತುಂಬಿ ತುಂಬಿ ಆ ಚೀಲದ ಮೂಲಬಣ್ಣ ಯಾವುದೆಂದು ಗುರುತಿಸಲು ಸಾಧ್ಯವಿಲ್ಲದಂತಾಗಿದೆ. ಇದಲ್ಲದೆ ಇನ್ನೊಂದು ಬಟ್ಟೆಯ ಗಂಟೂ ಆತನೊಂದಿಗೆ ಇದ್ದು ಅದರಲ್ಲಿ ಕೆಮ್ಮಣ್ಣು, ಇಟ್ಟಿಗೆ ಪುಡಿ, ಸುಣ್ಣ, ಮಸಿ, ಗೋಪಿ ಬಣ್ಣದ ಹುಡಿ ಹೀಗೆ ಇನ್ನೂ ಕೆಲವು ಬಣ್ಣದ ಪುಡಿಗಳ ಕಾಗದದ ಪೊಟ್ಟಣಗಳು ಇವೆ.

ಮೊದಲೇ ಹೇಳಿದಂತೆ ಆತ ತನ್ನಿಷ್ಟಕ್ಕೆ ಉದ್ದುದ್ದ ಗೆರೆಗಳನ್ನು ಎಳೆಯುತ್ತ, ಅಲ್ಲಲ್ಲಿ ಸುರುಳಿಯ ಗೆರೆಗಳು, ಚುಕ್ಕಿಗಳ ನೇಯ್ಗೆ, ಮಡಿಕೆಯ ಗೆರೆಗಳನ್ನೆಲ್ಲ ಇದ್ದಿಲ ತುಂಡುಗಳಿಂದ ಬರೆಯುತ್ತ ಸಾಗುತ್ತಿದ್ದಂತೆಯೇ ಒಬ್ಬೊಬ್ಬರಾಗಿ ನೆರೆಯುವ ಮಂದಿಗೆ ಅದು ಬೃಹದಾಕಾರದ ಗಣೇಶನದೋ, ಆಂಜನೇಯನದೋ, ಒಟ್ಟಿನಲ್ಲಿ ಯಾವುದೋ ಒಂದು ದೇವರ ಚಿತ್ರವೆಂದು ಹೊಳೆದು ಬಿಡುತ್ತದೆ. ಗೆರೆಗಳನ್ನು ಬರೆದ ನಂತರ ಆತ ತನ್ನ ಬಳಿ ಇರುವ ಕೆಲವೇ ಬಣ್ಣದ ಪುಡಿಗಳನ್ನು ಚಿತ್ರದ ಮೇಲೆ ಅಲ್ಲಲ್ಲಿ ಉದುರಿಸಿ ಅಂಗೈಯಿಂದ ಸಮತಟ್ಟು ಮಾಡಿ ಸವರಿ ಬಿಟ್ಟರೆ ಚಿತ್ರ ತಯಾರಾಗಿ ಮಲಗಿದಂತೆಯೇ ಎದ್ದು ಕಾಣುತ್ತದೆ. ಕೆಮ್ಮಣ್ಣು, ಸುಣ್ಣದ ಹುಡಿಯಂತಹ ಸರಳ ಬಣ್ಣಗಳಿಂದಲೇ ಆ ಚಿತ್ರಗಳು ಆಕರ್ಷಕವಾಗಿ ಇದೀಗ ಈ ಟಾರು ರಸ್ತೆಯಲ್ಲಿ ಮೂಡಿದಂತೆ ಜನರಿಗೆ ಕಂಡು ಉದ್ಗಾರ ತೆಗೆಯುತ್ತಾರೆ. ನಾಣ್ಯಗಳು ಚಿತ್ರದ ಮೇಲೆ ಎಸೆಯಲ್ಪಡುತ್ತವೆ. ನಂತರ ಜನ ನಿರಾಳವಾಗಿ ನಡೆದು ಹೋಗುತ್ತಾರೆ.



ಇದುವರೆಗೂ ಆತ ಬರೀ ದೇವರುಗಳ ಚಿತ್ರಗಳನ್ನೇ ಬರೆದಿದ್ದಾರೆಯಾದರೂ ಒಂದೇ ಚಿತ್ರವನ್ನು ಬೇರೆ ಬೇರೆ ಕಡೆಗಳಲ್ಲಿ ಬಿಡಿಸಿದ್ದನ್ನು ಈ ಪತ್ರಕರ್ತ ಇದುವರೆಗೆ ನೋಡಿಲ್ಲ. ಅಥವಾ ಆತನೇ ಬೇರೆ ಕಲಾವಿದನೇ ಇವನೇ ಬೇರೆ ಇರಬಹುದೇ ಅಂತಲೂ ಅನ್ನಿಸಿದ್ದು ಇವನಿಗೆ ರಸ್ತೆ ಬದಿಯ ಎಲ್ಲಾ ಕಲಾವಿದರೂ ಒಂದೇ ರೀತಿ ಕಾಣಿಸಿದ್ದಾರೆ.

ಪತ್ರಕರ್ತನಾಗುವುದಕ್ಕೂ ಮೊದಲು ಕಾಮ್ರೇಡ್, ನಕ್ಸಲೈಟ್, ಉಗ್ರಗಾಮಿ, ಉಗ್ರವಿಚಾರವಾದಿ ಎಲ್ಲರುಗಳ ಮಿಶ್ರಣವಾಗಿ ರೂಪುಗೊಂಡಿದ್ದ ಈತ ಅಂತಹ ಸಂದರ್ಭದಲ್ಲಿ ಇಂತಹ ದೇವರ ಚಿತ್ರಗಳನ್ನು ಕಂಡರೆ ಕೆಂಡಾಮಂಡಲನಾಗಿ ಬಿಡುತ್ತಿದ್ದ. 'ಈ ದೇವರುಗಳಿಂದಲೇ ಈ ದೇಶದ ಜನರ ಬುದ್ಧಿ ಹೀಗಿರುವುದು, ಕೋಟ್ಯಾಂತರ ಮಂದಿ ಅನ್ನ, ನೀರು ಕಾಣದೆ ಬೀದಿಯಲ್ಲಿರುವುದು' ಅಂತ ಬೆಂಕಿ ಕಾರುತ್ತ ಆ ದೇವರ ಚಿತ್ರಗಳನ್ನೆಲ್ಲ ಕಚಪಿಚ ತುಳಿದು ಅಳಿಸಿ ಬಿಡುತ್ತಿದ್ದ. ಅಥವಾ ಅಲ್ಲೆಲ್ಲ ಉಚ್ಚೆ ಹುಯ್ದು ಬಿಡುತ್ತಿದ್ದ. ಅಥವಾ ಆ ದೇವರುಗಳ ಚಿತ್ರದ ಮೇಲೆಯೇ ಕುಳಿತು ಹೇತು ಬಿಡುತ್ತಿದ್ದ.

ಪತ್ರಕರ್ತನಾದ ಮೇಲೆ ಯಾಕೋ ಇಂತಹವುಗಳನ್ನೆಲ್ಲ ವರ್ಣರಂಜಿತವಾಗಿ ಬರೆದು ಸುದ್ದಿ ಮಾಡಬೇಕೆಂಬ ಹಂಬಲ ಅವನೊಳಗೆ ರಕ್ತಗತವಾಗಿಬಿಟ್ಟಿದೆ. ಹೀಗೆ ಕುತೂಹಲ ಮೂಡಿಸುವುದೇ ಪತ್ರಿಕಾವೃತ್ತಿಯ ಲಕ್ಷಣ ಎಂದುಕೊಂಡು ಹೊಸ ಹೊಸ ಸಮರ್ಥನೆಯ ತರ್ಕಗಳನ್ನು ಕಂಡುಕೊಂಡಿದ್ದಾನೆ.

ಪತ್ರಕರ್ತ ಈಗ ತನ್ನ ಸ್ಕೂಟರ್‌ಅನ್ನು ಮುಂದೋಡಿಸಬೇಕು ಅಂದುಕೊಳ್ಳುವಷ್ಟರಲ್ಲಿ ಆತ ಬರೆಯುತ್ತಿರುವ ಹೊಸದೆಂಬಂತೆ ಕಾಣುತ್ತಿದ್ದ ಚಿತ್ರ ಅವನನ್ನು ತಡೆದು ನಿಲ್ಲಿಸಿತು. ಅಷ್ಟರಲ್ಲಾಗಲೇ ಆತ ಚಿತ್ರದ ಅರ್ಧ ಭಾಗವನ್ನು ತಲುಪಿದ್ದ.

ಮುಖ್ಯವಾಗಿ ಇಷ್ಟೊಂದು ಜನ ಸಂದಣಿಯ ಈ ಜಾಗದಲ್ಲಿ ಈತ ಜಾಗ ಗಿಟ್ಟಿಸಿದ್ದಾದರೂ ಹೇಗೆಂದು ಪತ್ರಕರ್ತ ಅಂದುಕೊಂಡ. ಇಲ್ಲಿ ಕ್ಷಣಕ್ಷಣಕ್ಕೂ ಹೆಚ್ಚಾಗುತ್ತಲೇ ಹೋಗುವ ಜನರ ಓಡಾಟಗಳನ್ನು ನಿಯಂತ್ರಿಸಲು ಇರುತ್ತಿದ್ದ ಮೂವರಾದರೂ ಪೊಲೀಸರು ಇಂದು ಇಲ್ಲದಿರುವುದು ಆಶ್ಚರ್ಯವೆನಿಸಿತು. ತಮ್ಮ ಪತ್ರಿಕೆಯಲ್ಲಿ ಹಿಂದೊಮ್ಮೆ ಇದೇ ಸರ್ಕಲ್‌ನಲ್ಲಿ ಉಂಟಾಗುತ್ತಿದ್ದ ಸಂಚಾರದ ಅವ್ಯವಸ್ಥೆ, ಅಡಚಣೆಯ ಬಗ್ಗೆ, ಸ್ಥಳೀಯ ಆಡಳಿತ ಸಂಸ್ಥೆ, ಪೊಲೀಸರ ನಿರ್ಲಕ್ಷ್ಯದ ಬಗ್ಗೆ ತಾನೇ ವರದಿಯೊಂದನ್ನು ಪ್ರಕಟಿಸಿ ಗಮನ ಸೆಳೆದ ನಂತರ ಇಲ್ಲಿನ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಉಂಟಾಗಿತ್ತು.

ಅಂತಹ ಈ ಸರ್ಕಲ್‌ನ ಮೂಲೆಯಲ್ಲಿ ಈತನ ಹೊಸ ಚಿತ್ರಕ್ಕೆ ಜನ ಮುಗಿಬಿದ್ದು ನಿಂತುಬಿಟ್ಟರೆ ಇಂದು ರಸ್ತೆ ಸಂಚಾರ ಅಸ್ತವ್ಯಸ್ತಗೊಂಡು ಏನಾದರೊಂದು ಅವಘಡ ಸಂಭವಿಸಬಹುದೆಂದು ಅನ್ನಿಸುತ್ತಿದ್ದಂತೆಯೇ ಯಾಕೋ ರೋಮಾಂಚನವಾದಂತಾಯಿತು. ಇಲ್ಲಿ ಏನಾದರೂ ಸಂಭವಿಸಿದರೆ ನಾಳೆ ತಮ್ಮ ಪತ್ರಿಕೆಯ ಮುಖಪುಟಕ್ಕೊಂದು ಹೊಸ ಸುದ್ದಿ, ಸಂಪಾದಕನಿಂದ ಮೆಚ್ಚುಗೆ, ಹೆಚ್ಚಬಹುದಾದ ಸಂಬಳ ಇತ್ಯಾದಿಗಳತ್ತ ಮನಸ್ಸು ಹರಿದು ಗರಿಗೆದರಿದಂತಾದ. ಥೆ! ತಾನು ಪತ್ರಕರ್ತನಾದ ನಂತರ ಎಲ್ಲೋ ಜನಹಿತಕ್ಕೆ ವಿರೋಧಿಯಾಗುತ್ತಿದ್ದೇನೆ. ಅನಾಹುತಗಳಾಗುವುದನ್ನೇ ಹುಡುಕುತ್ತ ಕಾಯುತ್ತ ಇದ್ದೇನೆ ಅನ್ನಿಸಿ ಜಿಗುಪ್ಸೆ ಸುಳಿಯಿತು.

ಸರಿ, ಆತನ ಹೊಸ ಚಿತ್ರ ಪೂರ್ಣ ಹಂತದವರೆಗೆ ಬಂದುಬಿಟ್ಟಿತು. ಅಷ್ಟರಲ್ಲಾಗಲೇ ಜನ ಜಮಾಯಿಸತೊಡಗಿದರು. ಈ

ಪತ್ರಕರ್ತನಾಗುವುದಕ್ಕೂ ಮೊದಲು ಕಾಮ್ರೇಡ್, ನಕ್ಸಲೈಟ್, ಉಗ್ರಗಾಮಿ, ಉಗ್ರವಿಚಾರವಾದಿ ಎಲ್ಲರುಗಳ ಮಿಶ್ರಣವಾಗಿ ರೂಪುಗೊಂಡಿದ್ದ ಈತ ಅಂತಹ ಸಂದರ್ಭದಲ್ಲಿ ಇಂತಹ ದೇವರ ಚಿತ್ರಗಳನ್ನು ಕಂಡರೆ ಕೆಂಡಾಮಂಡಲನಾಗಿ ಬಿಡುತ್ತಿದ್ದ. 'ಈ ದೇವರುಗಳಿಂದಲೇ ಈ ದೇಶದ ಜನರ ಬುದ್ಧಿ ಹೀಗಿರುವುದು, ಕೋಟ್ಯಾಂತರ ಮಂದಿ ಅನ್ನ, ನೀರು ಕಾಣದೆ ಬೀದಿಯಲ್ಲಿರುವುದು' ಅಂತ ಬೆಂಕಿ ಕಾರುತ್ತ ಆ ದೇವರ ಚಿತ್ರಗಳನ್ನೆಲ್ಲ ಕಚಪಿಚ ತುಳಿದು ಅಳಿಸಿ ಬಿಡುತ್ತಿದ್ದ. ಅಥವಾ ಅಲ್ಲೆಲ್ಲ ಉಚ್ಚೆ ಹುಯ್ದು ಬಿಡುತ್ತಿದ್ದ. ಅಥವಾ ಆ ದೇವರುಗಳ ಚಿತ್ರದ ಮೇಲೆಯೇ ಕುಳಿತು ಹೇತು ಬಿಡುತ್ತಿದ್ದ.

ಮುಂಚೆ ಆತನ ಚಿತ್ರಗಳನ್ನು ಮೆಚ್ಚಿ ಎಂಟಾಣೆ, ಒಂದು ರೂಪಾಯಿ ನಾಣ್ಯಗಳನ್ನು ಎಸೆದಿದ್ದ ಕೆಲವರು, ಆತನ ಚಿತ್ರಗಳ ಆಕರ್ಷಣೆಗೆ ಮರುಳಾಗಿ ಕ್ಷಣಕಾಲ ನಿಂತು ಕಣ್ಣರಳಿಸಿದ್ದ ಕೆಲವರು, ಅವರಿಗೆ ಅರಿವಿಲ್ಲದೇ ಆತನ ಅಭಿಮಾನಿಗಳಾಗಿದ್ದ ಮತ್ತೂ ಕೆಲವರು ಹೊಸಬರು ಹಲವರು ಎಲ್ಲಾ ನೆರೆಯತೊಡಗಿದರು.

ಪತ್ರಕರ್ತ ಅಲ್ಲಿಯೇ ಮೂಲೆಯೊಂದರಲ್ಲಿ ನಿಲ್ಲಿಸಿದ್ದ ವಾಹನಗಳ ಕಿಷ್ಕಿಂಧೆಯ ಮಧ್ಯದ ಕಿರಿದಾದ ಜಾಗದಲ್ಲಿ ತನ್ನ ಸ್ಕೂಟರ್‌ಅನ್ನು ತೂರಿಸಿ ಆಗಲೇ ಚಿತ್ರದ ಸುತ್ತ ದೊಡ್ಡ ಗುಂಪಾಗಿದ್ದ ಜನರ ನಡುವೆ ನುಸುಳಿಕೊಂಡು ಹೋಗಿ ನಿಂತು ನೋಡಿದ.

ಇದೂ ಯಾವುದೋ ದೇವರ ಇನ್ನೊಂದು ಚಿತ್ರ ಇದ್ದಿರಬಹುದೆಂದುಕೊಂಡ ಅವನಿಗೆ ಅದು ಏನೆಂದು ಮೊದಲ ನೋಟಕ್ಕೆ ನಿಲುಕಲಿಲ್ಲ. ಅದು ಒಂದು ದೇವರ, ಪ್ರಾಣಿಯ, ಯಾವುದನ್ನೋ ಹೋಲುವ ಯಾವುದೋ ಒಂದು ಚಿತ್ರ ಅಂತಲೂ ಅನ್ನಿಸಲಿಲ್ಲ. ಈ ಚಿತ್ರಕ್ಕೆ ಹಲವಾರು ಬಣ್ಣಗಳಿದ್ದವು. ಇಷ್ಟು ಸಲವೂ ಕೇವಲ ಮೂರು-ನಾಲ್ಕು ಬಣ್ಣಗಳಿಂದ ಚಿತ್ರ ಮುಗಿಸಿಬಿಡುತ್ತಿದ್ದ ಆತ ಇಷ್ಟೊಂದು ಬಣ್ಣಗಳನ್ನು ಎಲ್ಲಿಂದ ತಂದ? ಇಷ್ಟೂ ಬಣ್ಣಗಳನ್ನು ಹಣಕೊಟ್ಟುಕೊಂಡು ತಂದಿದ್ದರೆ ಈತನಿಗೆ ಈಗ ಸಿಗಲಿರುವ ಪುಡಿನಾಣ್ಯಗಳು ಒಂದು ಬಣ್ಣಕ್ಕೂ ಸಾಲದೆನಿಸುತ್ತದೆ. ಇನ್ನು ಈತನ ಹೊಟ್ಟೆಯ ನಿರ್ವಹಣೆ ಹೇಗೆ ಎಂಬುವೆಲ್ಲ ಪ್ರಶ್ನೆಗಳು ಹುಟ್ಟಿಕೊಂಡರೂ ಮುಖ್ಯವಾಗಿ ಆತನಿಗೆ ಬಾಧಿಸತೊಡಗಿದ್ದು ಇದು ಯಾವ ಚಿತ್ರ ಅನ್ನುವುದು.

ಅಲ್ಲಿ ಗುಂಪುಗೂಡಿ ಇದುವರೆಗೂ ಮೌನವಾಗಿ ಚಿತ್ರ ಬಿಡಿಸುತ್ತಿದ್ದ ಆತನ ಚಲನವಲನಗಳನ್ನು ಗಮನಿಸುತ್ತಿದ್ದವರಿಗೂ ಹಾಗೆಯೇ ಅನ್ನಿಸತೊಡಗಿ ಗುಂಪಿನೊಳಗೆ ಸಣ್ಣ ಸಣ್ಣ ಮಾತುಗಳು ಶುರುವಾದವು.

ಪತ್ರಕರ್ತನೂ ಸೇರಿದಂತೆ ಅಲ್ಲಿದ್ದ ಅನೇಕರಿಗೆ ಇದುವರೆಗೂ ಆತ ಇಂತದ್ದೊಂದು ಚಿತ್ರ ಬಿಡಿಸಿದ್ದು ನೆನಪಾಗಲಿಲ್ಲ.

ಆತ ಚಿತ್ರ ಬರೆಯಲು ಆರಂಭಿಸಿದಾಗಲೇ ಅದು ಯಾವ ಚಿತ್ರದ ಪ್ರಾರಂಭಿಕ ಹಂತ ಎಂಬುದು ಗೊತ್ತಾಗದಿದ್ದರೂ ಅದು ಕೊನೆಗೆ ಒಂದು ಸುಂದರ ದೇವರ ಚಿತ್ರವಾಗಿ ರೂಪುಗೊಳ್ಳುತ್ತದೆ ಎಂದೇ ಭಾವಿಸಿದ್ದ ಕೆಲವರು ತಮ್ಮ ಪಾಲಿನ ನಾಣ್ಯಗಳನ್ನು ಅರ್ಧಂಬರ್ಧ ಚಿತ್ರದ ಮೇಲೆಯೇ ಉರುಳಿಸಿ ಬಿಟ್ಟಿದ್ದರು. ಈಗ ಅವರಿಗೆ ತಾವು ಈ ಅರ್ಥವಾಗದ ಚಿತ್ರಕ್ಕೆ ಕಾಸು ಎಸೆದದ್ದು ವ್ಯರ್ಥ ಅನ್ನಿಸತೊಡಗಿ ಅಲ್ಲಿಯೇ ಉರುಳಿ ಬಿಟ್ಟಿದ್ದ ತಮ್ಮ ನಾಣ್ಯಗಳನ್ನು ಎತ್ತಿಕೊಳ್ಳಲು ಅವಮಾನ ಎನ್ನಿಸಿ ಚಡಪಡಿಕೆಯ ಮುಖಹೊತ್ತು ನಿಂತಿದ್ದರು.

ರಸ್ತೆಯ ಮಧ್ಯಭಾಗದವರೆಗೂ ಚಾಚಿಕೊಂಡಿದೆ ಎನಿಸುವಂತೆ ಕಾಣುತ್ತಿದ್ದ ಆ ವಿಶಾಲ ಚಿತ್ರವನ್ನು ಕೆಲವರು ಒಂದೊಂದು ಮೂಲೆಯಲ್ಲಿ ಕೆಲಹೊತ್ತು ನಿಂತು ಕತ್ತು ಓರೆ ಮಾಡಿ ಅರ್ಥೈಸಿಕೊಳ್ಳಲು ಹೆಣಗಿ ಸೋಲತೊಡಗಿದರು. ಯಾವ ಕೋನದಿಂದ ದಿಟ್ಟಿಸಿದರೂ ಅದು ಸ್ಪಷ್ಟವಾದ, ಒಂದು ಸಂಪೂರ್ಣ ಚಿತ್ರವೆಂದು ಅನ್ನಿಸುತ್ತಿರಲಿಲ್ಲ. ಇಲ್ಲೀತನಕ ತಮ್ಮ ಮನೆಗಳಲ್ಲಿ, ದೇವಸ್ಥಾನಗಳಲ್ಲಿ, ಎಲ್ಲೆಲ್ಲೋ ಇದ್ದ ದೇವರ ಚಿತ್ರ ಪಟಗಳನ್ನು ನೋಡಿ ಆತನ ಹಿಂದಿನ ದೇವರು ಚಿತ್ರಗಳು ರಮ್ಯವಾಗಿ ಕಂಡಿದ್ದ ಅವರಿಗೆ ಈ ಹೊಸ ಚಿತ್ರ ಸವಾಲು ಎಸೆದು ಉದ್ದುದ್ದವಾಗಿ ಮಲಗಿಬಿಟ್ಟಿತ್ತು. ತಾವು ಈ ಚಿತ್ರದ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸದೆ ಕೇವಲ ಅರ್ಥವಾಗುತ್ತಿಲ್ಲವೆಂದು ಒಂದು ಮಾತು ಒಗೆದು ನಡೆದುಬಿಟ್ಟರೆ ಅನೇಕ ಮಂದಿ ಅಪರಿಚಿತರ ಮುಂದೆ ಅದೊಂದು ನಾಚಿಕೆಗೇಡಿನ ಸಂಗತಿ ಎಂತಲೇ ಅವರಿಗೆ ಅನ್ನಿಸಿರಬೇಕು. ತಾವು ಗಳಿಸಿಕೊಂಡಿರುವ ಬುದ್ಧಿವಂತಿಕೆಯನ್ನು ಚಿತ್ರದ ಮೇಲೆ ಪ್ರಯೋಗಿಸಲು ಒಬ್ಬೊಬ್ಬರೂ ಸಜ್ಜಾಗುತ್ತಿರುವಂತೆ ತೋರಿತು.

ಪತ್ರಕರ್ತನಿಗೆ ಆ ಚಿತ್ರ ಸದ್ಯಕ್ಕೆ ಒಂಟಿಕಾಲಿನ ಧಡೂತಿ ಮನುಷ್ಯನೋರ್ವ ತನ್ನೆರಡೂ ಕೈಗಳನ್ನು ಇಬ್ಬದಿಗೂ ಚಾಚಿ, ತಲೆ ಓರೆ ಮಾಡಿಕೊಂಡು ಸತ್ತು ಬಿದ್ದಿರುವಂತೆ ಕಂಡಿತು. ಚಿತ್ರದ ಒಡಲಿಗೆ ಅಲ್ಲಲ್ಲಿ ಭಿನ್ನಭಿನ್ನ ಬಗೆಗಳಲ್ಲಿ ಲೇಪಿಸಿದ್ದ ಕೆಂಪು ಬಣ್ಣ ಅವನ ನೆನಪನ್ನು ಗಾಢವಾಗಿ ಸೆಳೆಯಿತು.

ಗೂರಲು ರೋಗದ ಬಿರುಗಾಳಿಗೆ ಸಿಲುಕಿ ಒಣಕಟ್ಟಿಗೆಯ ತುಂಡಿನಂತಿದ್ದ ಹೆಂಡತಿ ಕಳೆದುಕೊಂಡ ಅಪ್ಪ ತಮ್ಮ ತಂಗಿಯರ ದೀನ ಸ್ಥಿತಿಯ ಕುಟುಂಬದ ಹಿರಿಯ ಮಗನಾಗಿದ್ದ ಈತ ವಿದ್ಯಾರ್ಥಿ ದೆಸೆಯಲ್ಲಿಯೇ ಎಲ್ಲಾ ಜನಪರ ಚಳವಳಿಗಳಲ್ಲೂ ತನ್ನ ಬಡತನಕ್ಕೆ ಕಾರಣವಾಗಿರುವ ವ್ಯವಸ್ಥೆಯ ವಿರುದ್ಧ ಪ್ರತೀಕಾರದ ದಾರಿಗಳನ್ನು ಕಾಣಬೇಕೆಂದುಕೊಳ್ಳುತ್ತಿದ್ದ. ತನ್ನ ಊರಿನ ದೊಡ್ಡ ದೊಡ್ಡ ಅಂತಸ್ತಿನವರ ಮನೆಗಳನ್ನು ಆ ಮನೆಗಳವರ ರುಂಡಗಳನ್ನು ಚೆಂಡಾಡಿ ರಕ್ತ ಮೆತ್ತಿಕೊಂಡ ಕೈಗಳಿಂದ ಅವರ

ಮನೆಯಲ್ಲಿದ್ದ ನೋಟುಗಳನ್ನೆಲ್ಲ ದೋಚಿ ತನ್ನ ಕೇರಿಯ ಜನಕ್ಕೆಲ್ಲ ಹಂಚಬೇಕು ಎಂಬ ಕನಸು ಕಾಣುತ್ತ ಆವೇಶಗೊಳ್ಳುತ್ತಿದ್ದ.

ತನ್ನ ಊರ ರೈತರನ್ನು, ಕೂಲಿ ಕಾರ್ಮಿಕರನ್ನು ಉದ್ಧಾರ ಮಾಡಬೇಕೆಂದುಕೊಳ್ಳುತ್ತ ಅರೆಬರೆ ಗಡ್ಡ ದೊಂದಿಗೆ ಓಡಾಡುತ್ತಲೇ ಊರಿನ ದೊಡ್ಡ ಕೋಮಿನ ಹುಡುಗಿಯೊಬ್ಬಳ ಕೆಂಪು ಮೈಬಣ್ಣದ ಹುಚ್ಚಿನಿಂದ ತಪ್ಪಿಸಿಕೊಳ್ಳಲಾಗದೆ ಅವಳೊಂದಿಗೆ ಈ ನಗರಕ್ಕೆ ಓಡಿಬಂದು ಆ ತಕ್ಷಣ ಸಿಕ್ಕಿದ ಪತ್ರಿಕೋದ್ಯಮದ ಹಾದಿ ಹೊಕ್ಕಿದ್ದ.

ತಾನೊಬ್ಬ ನಕ್ಸಲೈಟ್ ಗುಂಡಿಗೆಯವನೆಂದು ಆತ ಅಂದುಕೊಳ್ಳುತ್ತಿದ್ದರೂ ಹಲವಾರು ದಿನಗಳವರೆಗೆ ಊರಿಗೆ ಹೋಗುವುದೆಂದರೆ ಎದೆ ನಡುಗಿ ಅಸ್ವಸ್ಥನಾಗುತ್ತಿದ್ದರೂ ಬರಲೇಬೇಕೆಂಬ ಸುದ್ದಿಯೊಂದು ಊರಿಂದ ಬಂದಾಗ ಹೋಗಲೇ ಬೇಕಾಗಿ ಬಂದು ಹೋಗಿದ್ದ. ಊರಾಚೆಯ ಮಾಳದ ರಣಬಿಸಿನಲ್ಲಿ ತನ್ನ ತಮ್ಮ ತಂಗಿಯರಿಬ್ಬರೂ ಕಡಿದ ಗಾಯದ ಗುರುತುಗಳ ಬೆತ್ತಲ ಹೆಣಗಳಾಗಿ ತಬ್ಬಿಕೊಂಡು ಬಿದ್ದಿದ್ದು ಕಂಡು ಕುಸಿದು ಹೋಗಿದ್ದ.

ಈಗಲೂ ಊರು ಬೇರು ಬಿಡದೆ ಕುಳಿತಲ್ಲೇ ಕುಳಿತು ಕೆಮ್ಮಿ ಕೆಮ್ಮಿ ಕೆಂಪು ತೊಂಟೆ ಉಗುಳುವ ಇರುಳುಗಣ್ಣಿನ ಅಪ್ಪನನ್ನು ನೆನೆದರೆ ಪತ್ರಕರ್ತನಾದ ಮೇಲೆ ತಾನು ವಸೂಲಿ ದಂಧೆಗೆ ಇಳಿದು ಅಪ್ಪನ ಖಾಯಿಲೆಯನ್ನು ವಾಸಿ ಮಾಡಲೆಂದು, ತಮ್ಮ ತಂಗಿಯರ ಬದುಕು ಹಸನು ಮಾಡಲೆಂದು ಸಂಪಾದಿಸಿರುವ ಅಷ್ಟಿಷ್ಟು ಹಣವೆಲ್ಲ ಕ್ಷುಲ್ಲಕವೆನಿಸುತ್ತದೆ.

ಆ ಪತ್ರಿಕೆಯ ಸಂಪಾದಕ ತಾನು ಮೊದಲು ನಕ್ಸಲೈಟ್ ಆಗಿದ್ದೆ ಎಂದು ಮೊದಲ ಬಾರಿಗೆ ಹೇಳಿದಾಗ ಈಗಿನ ಅವನ ಸ್ಥಿತಿಯನ್ನು ನೋಡಿ ಇವನಿಗೆ ಹಾಗೆ ಅನ್ನಿಸಿರಲಿಲ್ಲ. ಹೋರಾಟದ ಕಾವುಗಳು ತನ್ನ ರಕ್ತದೊಳಗೆ ಇಳಿಬಿಟ್ಟಿರುವ ಬೆಚ್ಚನೆಯ ಆಕ್ರೋಶವನ್ನು ತಡೆಯಲಾಗದೆ ಈಗ ಆರಂಭದಲ್ಲಿ ಅಂತಹವರೇ ಹೀನ ಜನಗಳ ಸುದ್ದಿಗಳನ್ನು ಬರೆದು ವ್ಯವಸ್ಥೆಯತ್ತ ಪ್ರಶ್ನಾರ್ಥಕ ಚಿಹ್ನೆಗಳನ್ನು ತೋರಿಸುತ್ತಿದ್ದ.

'ನಾನೂ ಹೀಗೆಯೇ ಬರೆದು ಬರೆದೂ ಪತ್ರಿಕೆಯ ಮಾರಾಟ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲಾಗದೆ ಕೊನೆಗೆ ಕೊಲೆಗಳನ್ನು, ದರೋಡೆಗಳನ್ನು, ವೇಶ್ಯಾವಾಟಿಕೆಯನ್ನು ಅಪಘಾತಗಳನ್ನು ರಾಜಕಾರಣದ ಹಸಿಬಿಸಿಗಳನ್ನು ಸಿನಿಮಾ ಕಲಾವಿದರ ಲೈಂಗಿಕ ಹಗರಣವನ್ನು ರಂಜನೀಯವಾಗಿ ಬರೆಯಲಾರಂಭಿಸಿದ ಮೇಲೆ ಈ ಸ್ಥಿತಿಗೆ ಬಂದಿದ್ದೇನೆ. ನೀನು ಅತ್ತ ಗಮನ ಕೊಡುವುದಾದರೆ ಮಾತ್ರ ಇಲ್ಲಿ ಕೆಲಸ ಮಾಡಲು ಸಾಧ್ಯ' ಎಂದು ಸಂಪಾದಕ ಅಂದಮೇಲೆ ಇವನೂ ಈಗ ಅದೇ ಜಾಡು ಹಿಡಿದು ಬಹಳ ದೂರ ನಡೆದು ಬಂದಿದ್ದಾನೆ.

ಹಣವಂತರ ಮನೆಯಲ್ಲಿ ಉಂಡು ಬೆಳೆದವಳನ್ನು ತಾನು ಕಟ್ಟಿಕೊಂಡು ಬಂದದ್ದೇ ನನ್ನೆಲ್ಲ ಕ್ರಿಯಾಶಕ್ತಿ

ರಸ್ತೆಯ ಮಧ್ಯಭಾಗದವರೆಗೂ ಚಾಚಿಕೊಂಡಿದೆ ಎನಿಸುವಂತೆ ಕಾಣುತ್ತಿದ್ದ ಆ ವಿಶಾಲ ಚಿತ್ರವನ್ನು ಕೆಲವರು ಒಂದೊಂದು ಮೂಲೆಯಲ್ಲಿ ಕೆಲಹೊತ್ತು ನಿಂತು ಕತ್ತು ಓರೆ ಮಾಡಿ ಅರ್ಥೈಸಿಕೊಳ್ಳಲು ಹೆಣಗಿ ಸೋಲತೊಡಗಿದರು. ಯಾವ ಕೋನದಿಂದ ದಿಟ್ಟಿಸಿದರೂ ಅದು ಸ್ಪಷ್ಟವಾದ, ಒಂದು ಸಂಪೂರ್ಣ ಚಿತ್ರವೆಂದು ಅನ್ನಿಸುತ್ತಿರಲಿಲ್ಲ. ಇಲ್ಲೀತನಕ ತಮ್ಮ ಮನೆಗಳಲ್ಲಿ, ದೇವಸ್ಥಾನಗಳಲ್ಲಿ, ಎಲ್ಲೆಲ್ಲೋ ಇದ್ದ ದೇವರ ಚಿತ್ರ ಪಟಗಳನ್ನು ನೋಡಿ ಆತನ ಹಿಂದಿನ ದೇವರು ಚಿತ್ರಗಳು ರಮ್ಯವಾಗಿ ಕಂಡಿದ್ದ ಅವರಿಗೆ ಈ ಹೊಸ ಚಿತ್ರ ಸವಾಲು ಎಸೆದು ಉದುದ್ದವಾಗಿ ಮಲಗಿಬಿಟ್ಟಿತ್ತು.

ಗಳನ್ನು, ಬಡಜನರ ಒಡನಾಟ ಹೋರಾಟದ ಸಂತೋಷಗಳನ್ನು ಕಳೆದುಕೊಂಡೆ ಎಂದು ಅದೆಷ್ಟೋ ಬಾರಿ ಅನ್ನಿಸಿದೆ. ಅವಳ ಕೆಂಪು ಮೈಯ ಸುಖದುರಿಯಲ್ಲಿ ನನ್ನ ಕಾಮ್ರೇಡ್‌ತನ ಕರಗಿ ಹೋಯಿತು. ಸುಖವಾಗಿ ಬೆಳೆದವಳ ಸುಖವಾಗಿ ಸಾಕಲೇಬೇಕಾದ ಮೋಹವೋ ಪ್ರೀತಿಯೋ ಏನೋ ಒಂದು ಅನಿವಾರ್ಯತೆ ತನ್ನನ್ನು ಹೀಗೆ ವಂಚನೆಗೆ ನೂಕಿದೆ ಅಂದುಕೊಂಡಿದ್ದಾನೆ. ಆದರೆ ಈ ಹಂತದಲ್ಲಿ ಸ್ಫೋಟಗೊಂಡ, ಈ ಮೊದಲು ನನ್ನೊಳಗೂ ಇದ್ದಿರಬಹುದಾಗಿದ್ದ ಎಲ್ಲರಂತಲೇ ಇರುವ ಮಧ್ಯಮವರ್ಗದ ಕನಸು ಕಲ್ಪನೆಗಳ ಸಾಕಾರಕ್ಕಾಗಿ ತನಗೆ ಈ ಕಳ್ಳದಾರಿಯಲ್ಲದೆ ಬೇರೇನೂ ಇರಲಿಲ್ಲವೇನೋ ಅನ್ನಿಸಿದರೂ ಇವೆಲ್ಲ ನನ್ನನ್ನೇ ನಾನು ವಂಚಿಸಿಕೊಳ್ಳುವ ಹುಸಿ ಸಮರ್ಥನೆಗಳು ಅನ್ನುವುದೂ ಆಗಾಗ ತಿವಿಯತೊಡಗಿ ಬಹಳ ಸಲ ಜೀವಕ್ಕೆ ಹಿಂಸೆಯಾಗಿದೆ.

ಹಾಗೆಲ್ಲ ರೋಚಕ ಸುದ್ದಿಗಳ ಬೆನ್ನು ಹತ್ತಿ ಹೊರಡುತ್ತಿದ್ದ ತಾನು ಹೀಗೆ ಯಕಃಶ್ಚಿತ್ ಬೀದಿ ಬದಿಯವನೊಬ್ಬನ ಬಣ್ಣಗಳ ಮೋಹಕ್ಕೊಳಗಾಗಿ ಆಗಾಗ ನಿಂತು ಬಿಡುವುದೇಕೆ ಎಂದು ಈಗ ಅಚ್ಚರಿಗೊಂಡ.

ದೊಡ್ಡ ಒಂದು ಜನಸಮೂಹ ನೆರೆದು ಬಿಟ್ಟಿದ್ದ ಈಗ ಅಲ್ಲಿದ್ದ ಚಿತ್ರದ ಕುರಿತು ಒಂದೊಂದು ರೀತಿಯ ಅಭಿಪ್ರಾಯಗಳು ಹೊರಡತೊಡಗಿದವು.

'ಓ! ಇದು ತಂದೆ ಯೇಸುವಿನದೇ...ಶಿಲುಬೆಗೆ ತೂಗಿರುವುದನ್ನು ....ಅಲ್ಲಿ ಮೇಲೆ ಕೆದರಿಂತಿರುವುದು ಕೊನೆಯ ಗಳಿಗೆಯಲ್ಲಿ ಆತನ ತಲೆಗೆ ಸಿಗಿಸಿದ್ದ ಮುಳ್ಳಿನ ಕಿರೀಟ...' ಅಂತ ಒಬ್ಬ ಆರಂಭಿಸಿದ.

'ಇಲ್ಲ....ಬೇರೆ ರೀತಿ ಕಾಣುತ್ತಿಲ್ಲವೇ? ದುಷ್ಟರ ಶಿಕ್ಷೆಗೆ ಶಿಷ್ಟರಕ್ಷಣೆಗೆ ಆಯುಧಗಳ ಸಮೇತ ಹೊರಟ ರಾಮದೇವನಲ್ಲವೇ? ಕೆಳಗೆ ಆತ ತುಳಿಯಬೇಕೆಂದುಕೊಂಡದ್ದನ್ನು ಕಾಣಿರಿ..' ಮತ್ತೊಬ್ಬ ಮತ್ತೊಬ್ಬನ ವಾದವನ್ನು ಅಲ್ಲಗಳೆಯುವವನಂತೆ ಕೈ ಅಲ್ಲಾಡಿಸಿದ.

'ಅರೆ! ಇದು ಅಲ್ಲಾಹುಗೆ ನೆರಳು ಕೊಡೋ ಗುಂಬಜ್ ಥರಾ ಇಲ್ವೇ? ಸರಿಯಾಗಿ ನೋಡಿ...ಮೇಲೆ ತುದಿಯಲ್ಲಿ ಮಿನಾರು ಮಿನುಗುವಂತೆ...'

ಆ ಮೂವರೂ ಒಬ್ಬನೊಬ್ಬರು ಕ್ರೂರವಾಗಿ ನೋಡಿಕೊಂಡರು. ಅವರು ಏನೋ ಹೇಳಬೇಕೆಂದುಕೊಳ್ಳಲು ಗುಂಪಿನ ಜನರ ಮಾತುಗಳು ಕಲಸಿ ಕಲಸಿ ಸದ್ದು ಹೆಚ್ಚಾಯಿತು. ಮುಂದಿನ ಕ್ಷಣಗಳಲ್ಲಿ ಇಲ್ಲಿ ಅಸಾಧಾರಣವಾದುದ್ದೇನೋ ಘಟಿಸಲಿದೆ ಅನ್ನಿಸತೊಡಗಿತು ಪತ್ರಕರ್ತನಿಗೆ. ತಕ್ಷಣ ಚುರುಕುಗೊಂಡ. ತನ್ನ ಸ್ಕೂಟರ್ ಬಳಿ ಧಾವಿಸಿ ಹಿಂದಿನ ಕಿಟ್‌ನಲ್ಲಿದ್ದ ಕ್ಯಾಮೆರಾ ಹೊರತೆಗೆದು ಕೊರಳಿಗೆ ನೇತು ಹಾಕಿಕೊಂಡು ಪೆನ್ನು ಪ್ಯಾಡ್‌ನೊಂದಿಗೆ ಸಿದ್ಧನಾದ. ತಾನೇಕೆ ಹೀಗೆ ಯಾರದೋ ರಕ್ತಪಾತಕ್ಕೆ ಹಂಬಲಿಸುತ್ತಿದ್ದೇನೆ ಎಂಬುದೊಂದು ಸಣ್ಣ ಅಳುಕು ಸುಳಿದರೂ ಈಗ ಅದರತ್ತ ಯೋಚಿಸಲು ಸಮಯವಿಲ್ಲದವನಂತೆ ಸಂಘರ್ಷಕ್ಕೆ ಕಾತರಿಸತೊಡಗಿದ.

ಸಣ್ಣದಾಗಿ ಗಲಭೆ ಆರಂಭಗೊಂಡಿತು. ಒಬ್ಬ ಜೋರಾಗಿ ಕಿರುಚಾಡತೊಡಗಿದ್ದ '...ನಾವು ಕೊಟ್ಟ ಹಣ, ಅಭಿಮಾನ ಈ ಫುಟ್‌ಪಾತ್‌ನವನಿಗೆ ಕೊಬ್ಬು ತಂದುಬಿಟ್ಟಿದೆ. ಅದಕ್ಕೇ ನಮಗೆ ಅರ್ಥವಾಗದ ಏನೇನೋ ಬರೆದು ನಮ್ಮ ನಮ್ಮೊಳಗೆ ಬೆಂಕಿ ಹಚ್ಚುತ್ತಿದ್ದಾನೆ...ಮೊದಲು ಇವನಿಗೆ ತದುಕಿ...'

ಅದುವರೆಗೂ ತಲೆ ತಗ್ಗಿಸುಕೊಂಡು ಮೌನವಾಗಿ ಚಿತ್ರದಿಂದ ಸ್ವಲ್ಪ ದೂರದಲ್ಲಿ ಚಿತ್ರದ ಸಂಬಂಧಿಕನೇ ಅಲ್ಲವೆಂಬಂತೆ ಕುಳಿತಿದ್ದ ಆತ ತಲೆ ಎತ್ತಿ ಗುಂಪಿನತ್ತ ಅಸಹನೆಯಿಂದ ನೋಡಿದ. ಎಲ್ಲರೂ ಒಂದು ಕ್ಷಣ ಮೌನವಾದರು. ಆತ ಮಾತಾಡಲು ಯತ್ನಿಸುತ್ತಿದ್ದಂತೆ ಮೌನ ಇನ್ನೂ ದಟ್ಟವಾಯಿತು. ಆತ ಮಾತನಾಡಿದ್ದು ಸ್ಪಷ್ಟವಾಗಿ ಕೇಳಿಸಿತು. ಆದರೆ ಅದು ಮನುಷ್ಯರದೇ ಅಲ್ಲದ ಭಾಷೆ ಎಂದು ಎಲ್ಲರಿಗೂ ಅರ್ಥವಾಯಿತು. ಪತ್ರಕರ್ತನಿಗೂ ಆತನ ವರ್ತನೆ, ಮಾತು ವಿಚಿತ್ರವಾಗಿ ತೋರಿದವು. ಆತನ ಮಾತು ಮುಖ್ಯವಲ್ಲವೆಂಬಂತೆ ಮತ್ತೆ ಗುಂಪಿನೊಳಗೆ ಎಚ್ಚೆತ್ತುಕೊಂಡ ಗದ್ದಲ ಹೆಚ್ಚತೊಡಗಿ ಆತ ತನ್ನ ಕೊಳಕುಪಂಚೆಯ ಮಡಿಲೊಳಗೆ ಮುಖವಿಟ್ಟು ಬಿಕ್ಕುತ್ತಿರುವುದು ಯಾರ ಗಮನಕ್ಕೂ ಬರಲಿಲ್ಲ.

ಅಲ್ಲಿದ್ದವರು ತಮಗೆ ತೋಚಿದಂತೆ ಮಾತುಗಳನ್ನು ಒಬ್ಬರಿಗೊಬ್ಬರು ಒಗೆಯತೊಡಗಿ ಅವರ ವಾದ ವಿವಾದಗಳು ಬೇರ್ಪಟ್ಟು ಎರಡು ಗುಂಪುಗಳಾಗಿದ್ದವು.

ಅದುವರೆಗೂ ಇಲ್ಲದಿದ್ದ ಹೆಂಗಸೊಬ್ಬಳು ಗುಂಪಿನೊಳಗಿಂದ ಪ್ರತ್ಯಕ್ಷಳಾದವಳಂತೆ ಮುಂದೆ ಬಂದು 'ಇದು ಏನೆಂದುಕೊಂಡಿರಿ? ಪುರುಷ ಕ್ರೌರ್ಯದ ಸಂಕೇತ. ಅಲ್ಲಿ ನೋಡಿ... ಕೆಳಗೆ ನಿಮಿರಿ ನಿಂತು ಹೆಣ್ಣಿನ ಮೇಲಿನ ಅತ್ಯಾಚಾರಕ್ಕೆ ಹಾತೊರೆಯುತ್ತಿರುವ ಶಿಶ್ನ...ಮೇಲೆ ನೋಡಿ ಅವನ ಸರಿಸಾಟಿ ಇಲ್ಲದ ಬಲಿಷ್ಠ ಭುಜಗಳು..ಏನೆಂದುಕೊಂಡಿರಿ?' ಎಂದು ಹೇಳುತ್ತ ಮುಂದೆ ಬೇರೇನೋ ಹೇಳಬೇಕೆಂದುಕೊಂಡರೂ ಆಕೆಯ ಮಾತನ್ನು ಯಾರೂ ಲೆಕ್ಕಿಸದೆ ತಮ್ಮದೇ ಮಾತುಗಳ ಕಾದಾಟಕ್ಕಿಳಿದರು.

ಆಗ ಸಾತ್ವಿಕ ಕಳೆಮುಖದ ಮತ್ತೊಬ್ಬ ಅವರೆಲ್ಲರನ್ನೂ ಸಮಾಧಾನಗೊಳಿಸುವವನಂತೆ ಫುಟ್‌ಪಾತ್‌ನ ಬದಿಯಲ್ಲಿದ್ದ ತುಂಡುಗೋಡೆಯ ಮೇಲೆ ನೆಗೆದು ನಿಂತುಕೊಂಡು ಪ್ರವಾದಿಯಂತೆ ಮಾತನಾಡಲಾರಂಭಿಸಿದ...



'ಕೇಳಿ ಆತ್ಮ ಬಂಧುಗಳೇ...ನಿಮ್ಮ ನಿಮ್ಮಲ್ಲೇಕೆ ವಾದ ಭೇದ? ಈ ಚಿತ್ರವನ್ನು ನಿಮ್ಮದನ್ನಾಗಿ ಮಾಡಿಕೊಳ್ಳಬೇಕೆಂಬ ಹಂಬಲ? ಈ ಚಿತ್ರದ ಅರ್ಥವೇನೆಂಬುದು ಆಶಯವೇನೆಂಬುದು ನನಗೂ ಅರ್ಥವಾಗದಿದ್ದರೂ ಇದು ಧ್ಯಾನಕ್ಕೆ ಕುಳಿತ ಬುದ್ಧ ಮುದ್ರೆ...ಆತನ ತೊಡೆಯ ಮೇಲೆ ನೋಡಿ...ಅಸ್ಪಷ್ಟ ಮಬ್ಬು ಬಣ್ಣದ ನೀಳ ಆಕೃತಿ. ಅದು ಕೋಲು ಹಿಡಿದು ತೊಡೆಯಿಂದ ಕೆಳಗೆ ಜಿಗಿಯುವ ಆತುರದಲ್ಲಿರುವ ಗಾಂಧಿ..ಹಾಗೆಯೇ ಕಲ್ಪಿಸಿಕೊಳ್ಳಿ ಬಂಧುಗಳೇ..ಕಣ್ಮುಚ್ಚಿ ಧ್ಯಾನಸ್ಥ ಸ್ಥಿತಿಯಲ್ಲಿ ಕಲ್ಪಿಸಿಕೊಳ್ಳಿ ...' ಎನ್ನುತ್ತ ನಿಂತಲ್ಲೇ ಕಣ್ಮುಚ್ಚಿದ.

ಕನ್ನಡಕಧಾರಿಯಾದ ಸುಂದರ ಗಡ್ಡದವನೊಬ್ಬ 'ಆತ್ಮೀಯರೇ...ಇದು ಯಾವ ಚಿತ್ರವೆಂಬುದು ಅಷ್ಟು ಮುಖ್ಯವಲ್ಲ, ಇದು ಅರ್ಥವಾಗಲೇಬೇಕೆಂಬುದೂ ಮುಖ್ಯವಲ್ಲ... ಇದು ನಿಮ್ಮೊಳಗೆ ಈಗ ಉಂಟು ಮಾಡುತ್ತಿರುವ ಪರಿಣಾಮ ಮುಖ್ಯ. ಕಲೆಯ ಸಾರ್ಥಕತೆ ಇರುವುದೇ ಇಲ್ಲಿ. ಸುಸಜ್ಜಿತ, ಹವಾನಿಯಂತ್ರಿತ ಕಲಾ ಗ್ಯಾಲರಿಗಳಲ್ಲಿ ಅತ್ತರು ಸುರಿದುಕೊಂಡ ಸುಸಂಸ್ಕೃತ ಜನರ ಕಲಾಭಿರುಚಿಗಾಗಿ ಗೋಡೆಗಳಲ್ಲಿ ಹೆಣಗಳಂತೆ ತೂಗಿಬಿಟ್ಟ ಚೌಕಟ್ಟು ಬಂಧನಗಳ ಚಿತ್ರದಲ್ಲಿಲ್ಲ ನಿಜವಾದ ಕಲೆ..ಇಲ್ಲಿ..ಫುಟ್‌ಪಾತ್‌ನಲ್ಲಿ ಮಣ್ಣ ವಾಸನೆಯಂತೆ ಕೆಮ್ಮಣ್ಣಿನಲ್ಲಿ ಅರಳಿದೆ ನೋಡಿ ಜೀವಂತ ಕಲೆ..ಈಗ ನಾವೆಲ್ಲ ಸೇರಿ ಮಾಡಬೇಕಾದ್ದೇನೆಂದರೆ ಇಂತಹ ಕಲಾವಿದನನ್ನು..' ಎಂದು ಮುಂದುವರೆಸುತ್ತ ಆತ ಸ್ಪಷ್ಟ ಉಚ್ಚಾರದ ಭಾಷಣದ ಶೈಲಿಯಲ್ಲಿರುವ ತನ್ನ ಮಾತುಗಳನ್ನು ಇವರು ಹೇಗೆ ಮೆಚ್ಚುಗೆ

'ಕೇಳಿ ಆತ್ಮ ಬಂಧುಗಳೇ...ನಿಮ್ಮ ನಿಮ್ಮಲ್ಲೇಕೆ ವಾದ ಭೇದ? ಈ ಚಿತ್ರವನ್ನು ನಿಮ್ಮದನ್ನಾಗಿ ಮಾಡಿಕೊಳ್ಳಬೇಕೆಂಬ ಹಂಬಲ? ಈ ಚಿತ್ರದ ಅರ್ಥವೇನೆಂಬುದು ಆಶಯವೇನೆಂಬುದು ನನಗೂ ಅರ್ಥವಾಗದಿದ್ದರೂ ಇದು ಧ್ಯಾನಕ್ಕೆ ಕುಳಿತ ಬುದ್ಧ ಮುದ್ರೆ...ಆತನ ತೊಡೆಯ ಮೇಲೆ ನೋಡಿ...ಅಸ್ಪಷ್ಟ ಮಬ್ಬು ಬಣ್ಣದ ನೀಳ ಆಕೃತಿ. ಅದು ಕೋಲು ಹಿಡಿದು ತೊಡೆಯಿಂದ ಕೆಳಗೆ ಜಿಗಿಯುವ ಆತುರದಲ್ಲಿರುವ ಗಾಂಧಿ ..ಹಾಗೆಯೇ ಕಲ್ಪಿಸಿಕೊಳ್ಳಿ ಬಂಧುಗಳೇ.. ಕಣ್ಮುಚ್ಚಿ ಧ್ಯಾನಸ್ಥ ಸ್ಥಿತಿಯಲ್ಲಿ ಕಲ್ಪಿಸಿಕೊಳ್ಳಿ ...' ಎನ್ನುತ್ತ ನಿಂತಲ್ಲೇ ಕಣ್ಮುಚ್ಚಿದ.

ಯೊಂದಿಗೆ ಗ್ರಹಿಸುತ್ತಿದ್ದಾರೆಂದು ಪರೀಕ್ಷಿಸಲು ಜನರತ್ತ ನೋಡಿದರೆ ಅವರಾಗಲೇ ಗುಂಪುಗುಂಪುಗಳಾಗಿ ಕಾದಾಟಕ್ಕಿಳಿದು ಬಿಟ್ಟಿರುವುದು ಕಂಡು ಪೆಚ್ಚಾಗಿ ಸುಮ್ಮನಾದ.

ಈಗ ಬೇರೆಬೇರೆ ದಿಕ್ಕುಗಳಿಂದ ಬೇರೆಬೇರೆ ಬಗೆಯ ಜನರೆಲ್ಲ ಬಂದು ತಮ್ಮ ತಮ್ಮ ಗುಂಪುಗಳನ್ನು ಗುರುತಿಸಿ ಕೂಡಿಕೊಳ್ಳತೊಡಗಿದರು. ಅಲ್ಲೊಂದು ಯುದ್ಧದ ತಯಾರಿಯ ಸದ್ದು ಶುರುವಾಯಿತು. ಅವರು ಅವರೆಗೂ ಹೂಡಿದ್ದ 'ಇದು ರಾಮನ ಚಿತ್ರ...ಮಿನಾರು ತುದಿ.. ದೇವರ ಚಿತ್ರ...ವಿಚಿತ್ರ' ಎಂಬೆಲ್ಲ ಮಾತುಗಳು ಅವರ ಕಾಲ್ತುಳಿತಕ್ಕೆ ಸಿಕ್ಕಿ ಸತ್ತು ಹೋಗಿದ್ದವು. ವಿವಿಧ ಆಯುಧಗಳು ಸಶಬ್ದವಾಗಿ ಮಾತನಾಡತೊಡಗಿದವು.

ಪತ್ರಕರ್ತ ನೋಟ್ ಮಾಡಿಕೊಳ್ಳತೊಡಗಿದ್ದ. ಆಯಕಟ್ಟಿನ ಸ್ಥಳಗಳಲ್ಲಿ ನಿಂತು ಚಿತ್ರಗಳನ್ನು ತೆಗೆದುಕೊಂಡ. ಇನ್ನೂ ಬೇರೆ ಯಾವ ಪತ್ರಿಕೆಯವರೂ ಇಲ್ಲಿಗೆ ಬಂದಿಲ್ಲವೆಂಬುದನ್ನು ಗಮನಿಸಿ ಸಂತಸಗೊಂಡ. ತಾನು ಮೊದಲಿನಿಂದಲೂ ಇಲ್ಲೇ ಇದ್ದು ಇದನ್ನೆಲ್ಲ ಗಮನಿಸಿದ್ದು ಒಳ್ಳೆಯದಾಯಿತೆಂದು ಸಂಭ್ರಮಿಸಿದ.

ಮರುದಿನ ಸದಾಶಯ ಪತ್ರಿಕೆಯ ಮುಖಪುಟದಲ್ಲಿ ಕೆಂಪು ಬಣ್ಣದ ಶೀರ್ಷಿಕೆಗಳಲ್ಲಿ 'ಕೋಮು ಗಲಭೆ...ಮೂರು ಸಾವು.. ೧೨ ಮಂದಿ ಗಂಭೀರ... ರಸ್ತೆಯಂಚಿನ ಚಿತ್ರವೊಂದು ತಂದಿಟ್ಟ ಪ್ರಚೋದನೆ.. ನಿಷೇದಾಜ್ಞೆ ಜಾರಿ...ಬಿಗಿ ಪೊಲೀಸ್ ಬಂದೋಬಸ್ತ್..ಮತ್ತೆ ಗಲಭೆ ಭುಗಿಲೇಳುವ ಸಾಧ್ಯತೆ...' ಹೀಗೆ ಸಾಗಿತ್ತು, ಬೇರೆ ಯಾವ ಪತ್ರಿಕೆಗಳಲ್ಲೂ ಪ್ರಕಟವಾಗದ ಅಪರೂಪದ ಕೊಲೆಯ ಚಿತ್ರಗಳು, ರಕ್ತ ದೋಕುಳಿ, ಮಾರಾಮಾರಿ ಚಿತ್ರಗಳು ಪ್ರಕಟಗೊಂಡಿದ್ದು ಜನ ಮುಗಿಬಿದ್ದು ಪತ್ರಿಕೆಕೊಂಡು ಓದಿ ಪತ್ರಕರ್ತನ ಸಾಹಸವನ್ನು ಹೊಗಳಿದರು.

ಅದೇ ದಿನ ಮಧ್ಯಾನ್ಹ ನಿಷೇಧಾಜ್ಞೆಯಿಂದಾಗಿ ರಜೆ ಘೋಷಿಸಿದ್ದರಿಂದ ದಾರಿತಪ್ಪಿದ ಶಾಲೆಯ ಬಾಲಕನೊಬ್ಬ ನಿರ್ಜನವಾಗಿದ್ದ ಆ ಸರ್ಕಲ್‌ನ ಮಗ್ಗುಲಲ್ಲೇ ಹಾದು ಬಂದ. ರಸ್ತೆಯಂಚಿನಲ್ಲಿ ಒಂದಷ್ಟು ಅಳಿಸಿ ಹೋದರೂ ಇನ್ನೂ ಇದ್ದ ಚಿತ್ರ ನೋಡಿ ನಿಂತುಕೊಂಡ.

'ಅಯ್! ಯಾರು ಇಷ್ಟು ಚೆನ್ನಾಗಿ ಇಂಡಿಯಾದ ಮ್ಯಾಪು ಬರೆದವರು? ನಾನು ನೆನ್ನೆ ಸ್ಕೂಲಲ್ಲಿ ಎಷ್ಟು ಪರದಾಡಿ, ಅಳಿಸಿ ಬರೆದರೂ ಸ್ವಲ್ಪವೂ ಚೆನ್ನಾಗಿ ಬರಲಿಲ್ಲ..ಬರೆದರೆ ಹೀಗಿರಬೇಕು ಮ್ಯಾಪು! ಓ! ಇಲ್ಲೆಲ್ಲ ಏನು ಕೆಂಪು! ಥೂ ! ರಕ್ತ' ಎಂದು ಅಸಹ್ಯಪಟ್ಟು ಹಿಂದೆ ಸರಿದ.

ಲಾಠಿ ಹಿಡಿದ ಪೊಲೀಸನವ 'ಏ ಮರಿ ಯಾಕೆ ಇಲ್ಲಿ ನಿಂತಿದ್ದಿ? ಇಲ್ಲೆಲ್ಲ ನಿಂತ್ಕೋಬಾರ್ದು...' ಅಂತ ಗದರಿದಾಗ ಹೆದರಿದ ಬಾಲಕ ಅಲ್ಲಿಂದ ಓಡಿ ಹೋದ.

ಕೆಲವು ದಿನಗಳ ನಂತರ ಅದೇ ಪತ್ರಕರ್ತ ಹಾಗೂ ಆತನ ಹೆಂಡತಿಯ ನಿಗೂಢ ಸಾವು ಕುರಿತು 'ಸದಾಶಯ' ಪತ್ರಿಕೆಯ ಇತರೆ ವರದಿಗಾರರು ಬರೆಯಬೇಕಾಗಿ ಬಂತು. ಅದೇ ಸಂಚಿಕೆಯ ಒಳಪುಟದ ಮೂಲೆಯಲ್ಲಿ ಚಿಕ್ಕಸುದ್ದಿಯೊಂದು ಬಾಕ್ಸ್‌ನಲ್ಲಿ ಹೀಗೆ ಪ್ರಕಟವಾಗಿದ್ದಿತು: ಅಪರಿಚಿತ ಶವ ಪತ್ತೆ... ಚಹರೆ: ಜಿಡ್ಡುಗಟ್ಟಿದ ಕೂದಲು, ಗಡ್ಡ...ತುಂಡು ಪಂಚೆ... ಕೈಯಲ್ಲಿ ಹಿಡಿದ ಸ್ಥಿತಿಯಲ್ಲೇ ಇದ್ದ ಒಂದು ಬಟ್ಟೆಯ ಚೀಲ... ಚೀಲದೊಳಗೆ ಹಲವು ಇದ್ದಿಲು ತುಂಡು.... □

ಆಫ್ರಿಕಾ ಎನ್ನುವುದು ಜನತೆ

ಮೂಲ : **ಚಿನುವ ಅಚಿಬೆ**
ಅನು : **ಜಿ. ಶ್ರೀನಿವಾಸ್‌ಕುಮಾರ್**

ಯಾರಿಗೇ ಆಗಲಿ ತಮ್ಮನ್ನು ತಾವೇ ಉಲ್ಲೇಖಿಸಿಕೊಳ್ಳುವುದು ಮುಜುಗರದ ಸಂಗತಿ. ನಾನು ಆಯ್ಕೆ ಮಾಡಿಕೊಂಡಿರುವ ಇಂದಿನ ಮಾತಿನ ಶೀರ್ಷಿಕೆ ನಿಮ್ಮಲ್ಲಿ ಕೆಲವರಿಗಾದರೂ ವಿಚಿತ್ರ ಎನ್ನಿಸಬಹುದು. ಇದಕ್ಕೆ ವಿವರಣೆ ನೀಡಲು ನನ್ನನ್ನು ನಾನು ಉಲ್ಲೇಖಿಸಿಕೊಳ್ಳಲೇ ಬೇಕಾಗುತ್ತದೆ.

ನನ್ನನ್ನು ಮುಟ್ಟಿದ ಆಹ್ವಾನ:

೧೯೮೯ರ ಪ್ರಾರಂಭದ ವಾರಗಳಲ್ಲಿ ನನಗೊಂದು ಆಹ್ವಾನ ಬಂದಿತ್ತು. ಅದು ಪ್ಯಾರಿಸ್‌ನಲ್ಲಿ ನಡೆಯುವ ಓ.ಇ.ಸಿ.ಡಿ ಸಂಘಟನೆಯ ರಜತ ಮಹೋತ್ಸವ ಅಥವಾ ಅಂತಹುದೇ ಯಾವುದೋ ಸಭೆಯ ಆಹ್ವಾನವಾಗಿತ್ತು. ಅಂತಹ ಸಭೆಯಲ್ಲಿ ನಾನು ಏನನ್ನು ಮಾತನಾಡಬಹುದೆಂಬ ಸಂಶಯದಲ್ಲೆ ನಾನು ಆ ಆಹ್ವಾನವನ್ನು ಒಪ್ಪಿಕೊಂಡೆ. ನಂತರ ಸಭೆಗೆ ಹಾಜರಾದಗಲೂ ಆ ಸಂಶಯ ನನ್ನನ್ನು ಬಿಟ್ಟರಲಿಲ್ಲ. ಸಭೆ ಪ್ರಾರಂಭವಾದಾಗ ಆ ಸಭೆ ಶ್ರೀಮಂತ ದೇಶದ ಬ್ಯಾಂಕುಗಳ ಧಣಿಗಳು ಮತ್ತು ಶಕ್ತಿಶಾಲಿ ವಿದ್ವಾಂಸರು, ಆರ್ಥಿಕ ತಜ್ಞರ ಸಂತೆಯಾಗಿರುವುದು ಅರಿವಾಯಿತು. ನಾನಾದರೂ ಪ್ರಪಂಚದ ಬಡದೇಶದ ಒಬ್ಬ ಕಾದಂಬರಿಕಾರ. ಶಕ್ತಿಶಾಲಿ ವಿದ್ವಾಂಸನ, ತಜ್ಞರ ನಡುವೆ ಬಡತನದ ಪ್ರತಿನಿಧಿಯಾಗಿ ನಾನು ಕೂತಿದ್ದೆ. ಸಭೆಯಲ್ಲಿ ಅಮೆರಿಕ, ಕೆನಡಾ, ಯುರೋಪ್ ಮತ್ತು ಆಸ್ಟ್ರೇಲಿಯಾ ದೇಶಗಳ ವಿದ್ವಾಂಸರು ತಮ್ಮ ಸಾಧನೆಗಳನ್ನು ವಿವರಿಸುತ್ತಿದ್ದಾಗ ನನಗೆ ಇವರೆಲ್ಲ ವಿಶ್ವದ ಒಡೆಯರಿರಬಹುದೆಂಬ ಅನುಮಾನ ತೇಲಿಬಂತು. ಅವರೆಲ್ಲ ವಿಶ್ವದ ವಿವಿಧ ಪ್ರದೇಶಗಳ ಆರ್ಥಿಕ ಮತ್ತು ಅಭಿವೃದ್ಧಿಯ ಸಾಧನೆಗಳ ಮೇಲೆ ವಿದ್ವತ್ ಪೂರ್ಣ ಪ್ರಬಂಧಗಳನ್ನು ಮಂಡಿಸಿ ಚರ್ಚಿಸುತ್ತಿದ್ದರು. ಅವರ ಚರ್ಚೆಯ ಕೇಂದ್ರ ೧೯೮೦ರ ನಂತರದ ಚಿನ್ನದ ಕತ್ತಿ ಆರ್ಥಿಕ ಮರು ಹೊಂದಾಣಿಕೆಯ ಬಗ್ಗೆಯಾಗಿತ್ತು. ಚರ್ಚೆ ಆರ್ಥಿಕವಾಗಿ ಹಿಂದುಳಿದಿರುವ ಪ್ರದೇಶಗಳನ್ನು ಮೇಲೆತ್ತುವುದಾಗಿತ್ತು. ಅಲ್ಲಿ ನಡೆಯುತ್ತಿದ್ದ ವಾದದಂತೆ ಇಂತಹ ಕುಸಿತಕ್ಕೆ, ಪ್ರಗತಿಯ ವಿಫಲತೆಗೆ ಸ್ಥಳೀಯ ಆಡಳಿತಗಳ ಎಲ್ಲಾ ವಿಧವಾದ ಅಶಿಸ್ತು ಕಾರಣವೆಂದು, ಸ್ಥಳೀಯ ಆಡಳಿತಗಳಿಗೆ ಬಿಸಿ ಮುಟ್ಟಿಸಿ ಮುಕ್ತ ಮಾರುಕಟ್ಟೆಯನ್ನು ಬಲಗೊಳಿಸಿದರೆ ಮಾತ್ರ ಇಂತಹ ಕುಸಿತದಿಂದ ತಪ್ಪಿಸಬಹುದೆಂಬುದು ಚರ್ಚೆಯ ಕೇಂದ್ರವಾಗಿತ್ತು. ಅಂದರೆ ಆರ್ಥಿಕವಾಗಿ ಕುಸಿತಗೊಂಡ ದೇಶಗಳಲ್ಲಿ ಆಹಾರ, ಇಂಧನದಂತಹ ಪ್ರಮುಖ ಸಾಮಗ್ರಿಗಳ ಮೇಲಿನ ಸಬ್ಸಿಡಿಯನ್ನು ಕಡಿತಗೊಳಿಸುವುದು, ಹಣದ ಮೌಲ್ಯವನ್ನು ಅಪಮೌಲ್ಯಗೊಳಿಸುವುದರ ಮೂಲಕ ಶೀಘ್ರವಾಗಿ ಪ್ರಗತಿಯನ್ನು ಸಾಧಿಸಬಹುದೆಂಬುದು ಅಲ್ಲಿನ ಸಿದ್ಧಾಂತವಾಗಿತ್ತು. ಇವುಗಳಿಂದ ಅಂತಹ ದೇಶಗಳಲ್ಲಿ ತಕ್ಷಣದಲ್ಲಿ ಸ್ವಲ್ಪಮಟ್ಟಿನ ದಕ್ಕೆಯಾಗಬಹುದು, ನೋವು ಉಂಟಾಗಬಹುದು. ಅಂದರೆ ಇಂತಹ ದಿಟ್ಟಕ್ರಮ ತೆಗೆದುಕೊಳ್ಳದಿದ್ದಲ್ಲಿ ಉಂಟಾಗುವ ದೀರ್ಘಕಾಲದ ನೋವಿಗೆ ಹೋಲಿಸಿದರೆ ಇದು ಅಲ್ಪ ಅಥವಾ ಏನೂ ಅಲ್ಲ ಎಂಬ ಖಚಿತವಾದ ತೀರ್ಮಾನಕ್ಕೆ ಬರಲಾಗುತ್ತಿತ್ತು.

ಈ ಹಂತದಲ್ಲಿ ಕೀನ್ಯ ದೇಶದ ಅಧ್ಯಕ್ಷರು ತಮ್ಮ ಮಾತುಗಳನ್ನು ಪ್ರಾರಂಭಿಸಿದರು. ನನಗೆ ಜ್ಞಾಪಕವಿರುವಂತೆ ನನ್ನನ್ನು ಹೊರತು ಪಡಿಸಿ ಆ ಸಭೆಯಲ್ಲಿ ಹಾಜರಿದ್ದ ಇನ್ನೊಬ್ಬನೇ ಒಬ್ಬ ಆಫ್ರಿಕನ್ ಅವರಾಗಿದ್ದರು. ಈ ಹಂತದಲ್ಲಿ ಅವರು ಮಾತು ಪ್ರಾರಂಭಿಸಿ ನಿಮ್ಮ ಚರ್ಚೆಯಂತೆ ಜಾಂಬಿಯಾ ಹತ್ತು ವರ್ಷಗಳ ಹಿಂದೆಯೇ ನೀವು ಹೇಳಿದಂತೆ ಆರ್ಥಿಕ ಹೊಂದಾಣಿಕೆಯನ್ನು ಒಪ್ಪಿಕೊಂಡು ಅದನ್ನು ಜಾರಿ ಮಾಡಿತ್ತು. ಆದರೆ ಹತ್ತು ವರ್ಷಗಳ ನಂತರ ಇವತ್ತು ಆ ದೇಶದ ಸ್ಥಿತಿ ಹತ್ತು ವರ್ಷಗಳ ಹಿಂದಿಗಿಂತಲೂ ಹೀನಾಯವಾಗಿದೆ. ಇಡೀ ಸಭೆಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದ ಅಮೆರಿಕಾದ ಪ್ರತಿನಿಧಿ ಇವರ ಮಾತಿಗೆ ಪ್ರತಿಕ್ರಿಯಿಸುತ್ತಾ ಈಗಾಗಲೇ ನಾಲ್ಕಾರು ಬಾರಿ ದೃಢವಾಗಿ ಹೇಳಿದ್ದ 'ನನ್ನನ್ನು ನಂಬಿ, ಅದು ನಿಜವಾಗಿಯೂ ಕೆಲಸ ಮಾಡುತ್ತದೆ. ಸ್ವಲ್ಪ ಸಮಯ ಸಮಾಧಾನದಿಂದ ಕಾಯಿರಿ' ಎಂಬ ಮಾತುಗಳನ್ನು ಪುನರುಚ್ಚರಿಸಿದರು.

ಅರಿವಿನ ಸ್ಫೋಟ:

ಆ ಕ್ಷಣ ನನ್ನೊಳಗೆ ಕತ್ತಿಯ ಅಲುಗು ಚುಚ್ಚಿದಂತೆ ಅರಿವಿನ ಮಿಂಚೊಂದು ಹೊಳೆಯಿತು. ನನ್ನನ್ನು ಈ ಅಪರಿಚಿತ ಲೋಕಕ್ಕೆ ಆಹ್ವಾನಿಸಿದ ಉದ್ದೇಶ ಗೋಚರಿಸಿತು. ನಾನು ಮಾತಾಡುವ ಇಚ್ಚೆ ವ್ಯಕ್ತಪಡಿಸಿ ಅವಕಾಶವನ್ನು ಪಡೆದುಕೊಂಡೆ. ನಾನು ಅವರಿಗೆ ನನ್ನೊಳಗೆ ಉಂಟಾದ ಕಾಣ್ಕೆಯನ್ನು ವಿವರಿಸಲು ಪ್ರಯತ್ನಿಸಿದೆ. ನನ್ನ ಮುಂದೆ ಒಂದು ಕಥಾ ಕಮ್ಮಟ ನಡೆಯುತ್ತಿದೆಯೆಂಂದು ನನಗನ್ನಿಸಿತೆಂದು ಹೇಳಿದೆ. ಇಲ್ಲಿ ನೀವು ಪ್ರತಿಯೊಬ್ಬರು ನಿಮ್ಮ ಕಲ್ಪನೆಯ ಮೂಸೆಯಲ್ಲಿ ಅದ್ಭುತವಾದ ಸಿದ್ಧಾಂತಗಳನ್ನು ನೇಯುತ್ತಿದ್ದೀರಾ. ಇಲ್ಲಿ ರೂಪಿಸುವ ಸಿದ್ಧಾಂತಗಳನ್ನು ನನ್ನಂತಹ ದೇಶಗಳನ್ನು ಪ್ರಯೋಗಾಲಯ ಮಾಡಿ ಮೂಕ ಜನತೆಯ ಮೇಲೆ ಅವರ ಒಳಿತಿನ ಹೆಸರಲ್ಲಿ ಉಣಿಸುತ್ತೀರಾ. ನಾನು ನಿಮಗೆ ಹೇಳುವುದು ಇಷ್ಟು ದಯವಿಟ್ಟು ಆಫ್ರಿಕಾ ಕಥೆಯಲ್ಲ, ಅದೊಂದು ಜನತೆ. ನಿಜವಾದ ಜನತೆ. ಇದು ನಿಮ್ಮ ಅರಿವಿನಲ್ಲಿದೆಯೇ? ನೀವು ಬುದ್ಧಿವಂತರು, ವಿಶ್ವದ ತಜ್ಞರು. ನಿಮ್ಮ ಉದ್ದೇಶಗಳೂ ಸಹ ಒಳ್ಳೆಯದಿರಬಹುದು. ನೀವು ಎಂದಾದರೂ ಯೋಚಿಸಿದ್ದೀರಾ? ನಿಮ್ಮ ಚಿಂತನೆಯಲ್ಲಿ ಆಫ್ರಿಕಾ ಸಹ 'ಜನತೆ' ಎಂಬ ವಿವೇಕ ಇದೆಯೇ? ನಿಮ್ಮ ಮಾಹಿತಿಗಾಗಿ ನನ್ನದೇ ದೇಶ ನೈಜೀರಿಯಾದ ಕಥೆ ಹೇಳುತ್ತೇನೆ. ಅಲ್ಲಿ ನೀವು ಹೇಳುವ ಆರ್ಥಿಕ ಹೊಂದಾಣಿಕೆ ಒಪ್ಪಿಕೊಂಡು ಎರಡು ವರ್ಷ ವಾಯಿತು. ಕಳೆದ ಎರಡು ವರ್ಷದಲ್ಲಿ ಮಾಹೆಯಾನ ಕನಿಷ್ಟ೧೫ ಬ್ರಿಟೀಷ್ ಪೌಂಡ್‌ಗಳಷ್ಟಿದ್ದ ಕನಿಷ್ಟ ವೇತನ, ೦೫ ಪೌಂಡ್‌ಗೆ ಇಳಿದಿದೆ. ನನ್ನ ಮಾತು ಯಾವುದೇ ಪ್ರಯೋಗಾಲಯದ ವರದಿಯಲ್ಲ, ಗಣಿತದ ಅಭ್ಯಾಸವಲ್ಲ. ನಾನು ಹೇಳುತ್ತಿರುವುದು ಈಗಾಗಲೇ ಕಷ್ಟದಲ್ಲಿರುವ, ಧಾರುಣತೆಯಲ್ಲಿರುವ ಮನುಷ್ಯನೊಬ್ಬನ ಆದಾಯ ಕೇವಲ ಎರಡೇ ಎರಡು ವರ್ಷ ದಲ್ಲಿ ೧/೧೦ ಭಾಗಕ್ಕೆ ಇಳಿದಿದೆ. ಅವನು ಒಂಟಿಯಲ್ಲ, ಅವನಿಗೂ ಕುಟುಂಬವಿದೆ, ಹೆಂಡತಿ-ಮಕ್ಕಳಿದ್ದಾರೆ. ನಿಮ್ಮ ವಾದವನ್ನು ಅವನು ತಾಳ್ಮೆಯಿಂದ ಪಾಲಿಸಬೇಕಿದೆ ಬರಿಗೈಯಲ್ಲಿ ಮನೆಗೆ ಹೋಗಿ ಹಸಿದ ಹೆಂಡತಿ-ಮಕ್ಕಳಿಗೆ ಸಮಾಧಾನದಿಂದಿರಿ ತಾಳ್ಮೆ ತೆಗೆದುಕೊಳ್ಳಿ ಎಂದು ಹೇಳಬೇಕಾಗಿದೆ. ಇದು ಸಾಧ್ಯವೇ? ನಾನು ನಿಮಗೊಂದು ಪ್ರಶ್ನೆ ಕೇಳುತ್ತೇನೆ. ನಿಮ್ಮ ದೇಶಗಳ ನಿಮ್ಮ ಸರ್ಕಾರಗಳಿಗೂ ಈ ರೀತಿಯ ಸಲಹೆಗಳನ್ನು ನೀವು ನೀಡಬಲ್ಲಿರಾ? ಅದು ನಿಮಗೆ ಸಾಧ್ಯವೇ? ಒಂದು ಪ್ರಜಾಪ್ರಭುತ್ವ ದೇಶದ ಚುನಾಯಿತ ಅಧ್ಯಕ್ಷನಿಗೆ ನೀವು ಇದನ್ನು ಹೇಗೆ ಬೋಧಿಸಬಲ್ಲಿರಿ? ನಂಬಿಸಬಲ್ಲಿರಿ? ಅಂದರೆ ನೀವು ಅವರಿಗೆ ರಾಜಕೀಯ ಆತ್ಮಹತ್ಯೆಯನ್ನು ಬೋಧಿಸುತ್ತಿದ್ದಿರಾ? ಅಥವಾ ಚುನಾವಣೆಯ ಕಣದಿಂದ ಓಡಿಹೋಗಲು ಉಪದೇಶಿಸುತ್ತಿದ್ದಿರಾ? ನೀವು ಮಾಡುತ್ತಿರುವ ಕೆಲಸದ ಅರಿವು ನಿಮಗಿದೆಯೆ?

ನನ್ನ ಮಾತುಗಳಿಗೆ ದುಂಡು ಮೇಜಿನ ಸುತ್ತ ಕುಳಿತಿದ್ದ ಮುಖಗಳು ನೀಲಿಗಟ್ಟಿದ್ದನ್ನು ಗಮನಿಸಿದೆ ಅಥವಾ ನನಗೇ ಆಗನಿಸಿತೋ ಕಾಣೆ. ಆದರೆ ನಾನು ಮಾತನಾಡುತ್ತಿದ್ದಾಗ ಒಂದು ವಿಚಿತ್ರ ಘಟಿಸುತ್ತಿತ್ತು. ನನ್ನ ಪಕ್ಕ ಒಬ್ಬ ಡಚ್ ಮನುಷ್ಯ ಕುಳಿತಿದ್ದರು. ಬಹುಷಃ ಅವರು ಈ ಸಭೆಯ ಅಧ್ಯಕ್ಷರಿರಬಹುದೆಂದು ಕಾಣುತ್ತದೆ. ದೃಢಕಾಯವಾದ ಎತ್ತರದ ಆ ಮನುಷ್ಯ ಕೊಂಚ ಬಗ್ಗಿ ಪಿಸುಮಾತಿನಲ್ಲಿ ನನಗೆ ಮಾತ್ರ ಕೇಳಿಸುವಂತೆ ಕನಿಷ್ಟ ಎರಡು ಸಾರಿ 'ಅವರಿಗೆ ಸರಿಯಾಗಿ ಇಕ್ಕಿದೆ' ಎಂದದ್ದು ನನಗೆ ಮರೆಯಲಾರದಷ್ಟು ನೆನಪಿದೆ.

ಆ ಅಪರಿಚಿತವಾದ ಸಭೆ ಮುಗಿಸಿ ಹಿಂದಿರುಗುವಾಗ ಮನುಷ್ಯನ ಸ್ಥಿತಿಯ ಬಗ್ಗೆ ನನ್ನ ಭರವಸೆ ಇಮ್ಮಡಿಸಿತ್ತು. ಶತ್ರು ಪಾಳೆಯದಲ್ಲಿ ನನಗೆ ಬೆಂಬಲವಿರಬಹುದೆಂಬ ಕನಿಷ್ಟ ಕಲ್ಪನೆಯೂ ನನಗಿರಲಿಲ್ಲ. ಆ ಡಚ್ ಮನುಷ್ಯ ನನ್ನ ಬೆಕ್ಕನ್ನು ತನ್ನ ಪಾರಿವಾಳದ ಹಿಂಡಿನ ಮೇಲೆ ದಾಳಿಗೆ ಹುರಿದುಂಬಿಸುತ್ತಿದ್ದ. ಈ ಭರವಸೆಯಿಂದಲೇ ನಾನು ವಿಶ್ವಬ್ಯಾಂಕಿನ ಈ ಉಪನ್ಯಾಸಕ್ಕೆ ಒಪ್ಪಿಕೊಂಡೆ. ಆಫ್ರಿಕಾದ ಧಾರುಣತೆಯನ್ನು ಕಡಿಮೆ ಮಾಡಲು ಶಕ್ತಿಮೀರಿ ದಾರಿ ಹುಡುಕುತ್ತಿರುವ ನನಗೆ ಈ ಅವಕಾಶವನ್ನು ಒದಗಿಸಿದ ವಿಶ್ವಬ್ಯಾಂಕಿನ ಅಧ್ಯಕ್ಷರಾದ ಶ್ರೀ ಉಲ್ಪಸನ್‌ರಿಗೆ, ಈ ಸಭೆಯ ವಿವಿರಗಳನ್ನು ನೀಡಿ ಸಹಕರಿಸಿದ ಶ್ರೀತಾರಿಕ್ ಹುಸೇನ್ ಮತ್ತು ಈ ಸಭೆಗೆ ನಾನು ಹಾಜರಾಗಲೇ ಬೇಕೆಂದು ನಿರಂತರವಾಗಿ ಒತ್ತಾಯಿಸಿದ ನನ್ನ ಕಿರಿಯ ಗೆಳೆಯರಾದ ಶ್ರೀ ತೇಜನ್ಸಾಲ ಮತ್ತು ಶ್ರೀ ನಾಗೋಇ ಒಃಜೋ ಇವರಿಗೆ ನನ್ನ ವಂದನೆಗಳು.

ಆಫ್ರಿಕಾದ ವಾಸ್ತವ:

ಆಫ್ರಿಕಾವೆಂಬುದು 'ಜನತೆ' ಎನ್ನುವುದು ಬಹು ಸರಳವಾದ ಹೇಳಿಕೆ, ಅದು ಇಂಥ ವೇದಿಕೆಯಲ್ಲಿ, ನಿಜ, ಆದರೆ ಇಂತಹ ಸರಳವಾದ ಸಂಗತಿಗಳೇ ನಮಗೆ ಬಹಳ ತೊಂದರೆ ಕೊಡುತ್ತವೆ. ನಮಗೆ ಮಾತ್ರವಲ್ಲ, ನಮ್ಮೊಳಗಿನ ದೈತ್ಯರಿಗೂ ಸಹ ಎಂಬುದನ್ನು ನಾನು ಕಂಡುಕೊಂಡಿದ್ದೇನೆ. ನಮ್ಮೊಳಗಿನ ಆಫ್ರಿಕಾವನ್ನು ಬಲ್ಲ ಧೀಮಂತರನ್ನೂ ಸಹ ಇದು ಬಿಟ್ಟಿಲ್ಲ. ಇಪ್ಪತ್ತನೆಯ ಶತಮಾನದ ಅತಿ ಮುಖ್ಯ ತತ್ತ್ವಶಾಸ್ತ್ರಜ್ಞ, ಧರ್ಮಶಾಸ್ತ್ರಜ್ಞ, ಸಂಗೀತಕಾರ, ವೈದ್ಯ ಅಲ್ಬರ್ಟ್ ಶ್ವಟ್ಜರ್‌ರವರೇ ಆಫ್ರಿಕಾವನ್ನು ಗ್ರಹಿಸಲು ವಿಫಲರಾಗಿದ್ದಾರೆ. ಆದುದರಿಂದಲೇ ಅವರು ಆಫ್ರಿಕಾವನ್ನು ಸಹೋದರನ ಹಾಗೆ, ಆದರೆ ಅದು ನನ್ನ ಕಿರಿಯ ಸಹೋದರ, ನನ್ನ ತಮ್ಮ ಎಂದು ಹೇಳುತ್ತಾರೆ. ಇಪ್ಪತ್ತನೆಯ ಶತಮಾನ ಕಂಡ ಇನ್ನೊಬ್ಬ ಧೀಮಂತ, ಅತಿ ಹೆಚ್ಚು ಪ್ರಶಂಸೆಗೆ ಪಾತ್ರನಾದ ಲೇಖಕ, ಪ್ರಸಿದ್ಧ ಟೈಮ್ ಪತ್ರಿಕೆಯ ಪ್ರಥಮ ಸಂಚಿಕೆ ಮುಖಪುಟವನ್ನು ಅಲಂಕರಿಸಿದ ಪೋಲಿಷ್ಮೂಲದ ಫ್ರೆಂಚ್ ಭಾಷೆಯನ್ನಾಡುವ, ಬ್ರಿಟೀಷ್ ಹಡಗಿನ ಕ್ಯಾಪ್ಟನ್ ಆಗಿದ್ದ ಹೌದು, ಮಹಾನ್ ಲೇಖಕ ಜೋಸೆಪ್ ಕಾನ್ರಾಡ್. ಅಂತಹ ಮಹಾನ್ ಲೇಖಕ ಮೊಟ್ಟ ಮೊದಲನೆಯ ಬಾರಿ ಕಪ್ಪು ಮನುಷ್ಯನನ್ನು, ನೀಗ್ರೋ ಒಬ್ಬನನ್ನು ಮುಖಾಮುಖಿಯಾದಾಗಿನ ಘಟನೆಯನ್ನು ತನ್ನ ನೆನಪುಗಳಲ್ಲಿ ದಾಖಲಿಸುವುದು ಹೀಗೆ-

' A certain enormous bulk nigger encountered in Haiti fixed my conception of blind, furious, unreasoning range, as manifested in the human animal to the end of my days, of the nigger I used to dream for years afterwards'.

ಈ ಘಟನೆಯ ಉಲ್ಲೇಖವನ್ನು ಮೊದಲನೆಯ ಬಾರಿ ನನ್ನ ಗಮನಕ್ಕೆ ಅಷ್ಟಾಗಿ ಪ್ರಸಿದ್ಧಿಗೆ ಬಾರದ ರ್‍ಯಾಂಡಮ್ ಹೌಸ್ ಪ್ರಕಾಶನ ಸಂಸ್ಥೆಯಿಂದ ೧೯೩೧ರಲ್ಲಿ ಮೊದಲನೆಯ ಬಾರಿ ಪ್ರಕಟಿಸಲ್ಪಟ್ಟ ಜಾನ್ ರಸ್ಕಿನ್‌ರ ಮಹತ್ವದ ಪುಸ್ತಕ 'ಸಾಮ್ರಾಜ್ಯಶಾಹಿಯ ಪುರಾಣ' (Mythology of Imperialism). ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಜಾನ್ ರಸ್ಕಿನ್‌ರ ಪುಸ್ತಕದ ಶೀರ್ಷಿಕೆಯೇ ಕಾನ್ರಾಡ್‌ರು ತಮ್ಮ ಚಿಂತನೆ ಮತ್ತು

ಆಫ್ರಿಕಾವೆಂಬುದು 'ಜನತೆ' ಎನ್ನುವುದು ಬಹು ಸರಳವಾದ ಹೇಳಿಕೆ, ಅದು ಇಂಥ ವೇದಿಕೆಯಲ್ಲಿ, ನಿಜ, ಆದರೆ ಇಂತಹ ಸರಳವಾದ ಸಂಗತಿಗಳೇ ನಮಗೆ ಬಹಳ ತೊಂದರೆ ಕೊಡುತ್ತವೆ. ನಮಗೆ ಮಾತ್ರವಲ್ಲ ನಮ್ಮೊಳಗಿನ ದೈತ್ಯರಿಗೂ ಸಹ ಎಂಬುದನ್ನು ನಾನು ಕಂಡುಕೊಂಡಿದ್ದೇನೆ. ನಮ್ಮೊಳಗಿನ ಆಫ್ರಿಕಾವನ್ನು ಬಲ್ಲ ಧೀಮಂತರನ್ನೂ ಸಹ ಇದು ಬಿಟ್ಟಿಲ್ಲ. ಇಪ್ಪತ್ತನೆಯ ಶತಮಾನದ ಅತಿಮುಖ್ಯ ತತ್ತ್ವಶಾಸ್ತ್ರಜ್ಞ, ಧರ್ಮಶಾಸ್ತ್ರಜ್ಞ, ಸಂಗೀತಕಾರ, ವೈದ್ಯ ಅಲ್ಬರ್ಟ್ ಶ್ವಟ್ಜರ್‌ರವರೇ ಆಫ್ರಿಕಾವನ್ನು ಗ್ರಹಿಸಲು ವಿಫಲರಾಗಿದ್ದಾರೆ. ಆದುದರಿಂದಲೇ ಅವರು ಆಫ್ರಿಕಾವನ್ನು ಸಹೋದರನ ಹಾಗೆ, ಆದರೆ ಅದು ನನ್ನ ಕಿರಿಯ ಸಹೋದರ, ನನ್ನ ತಮ್ಮ ಎಂದು ಹೇಳುತ್ತಾರೆ.

ಪದ ಸಂಪತ್ತನ್ನು ಪಡೆದ ಸಾಂಸ್ಕೃತಿಕ ಮೂಲದ ಕಡೆ ಬೆರಳು ತೋರುತ್ತದೆ. ನೆನಪುಗಳಲ್ಲಿ ದಾಖಲಿಸಿರುವ ಮೇಲಿನ ಘಟನೆ ದ್ರವ್ಯರೂಪದಲ್ಲಿ ಅವರ ಕಾದಂಬರಿಗಳ ಆಂತರ್ಯದಲ್ಲಿ ಹರಿದಿದೆ. ಅದನ್ನು ಗಮನಿಸಲಾರದೆ, ಗುರುತಿಸಲಾರದೆ ಇದುವರೆವಿಗೂ ಅವರ ಕಾದಂಬರಿಗಳ ಮೌಲ್ಯವನ್ನು ನಿರ್ಣಯಿಸಲಾಗಿದೆ. ಇದಕ್ಕೆ ಕಾರಣಗಳೇನು? ಕಾರಣ ಅದು ಸಾಮ್ರಾಜ್ಯಶಾಹಿ ಪುರಾಣದ ಜೊತೆ ಅವುಚಿಕೊಂಡಿದೆ. ಅದನ್ನು ಬಿಡಿಸಿ ನೋಡಲಾಗದಂತೆ ಪುಸ್ತಕ ನಾಗರಿಕತೆ ಅದರ ಭಾಗವಾದ ಶಿಕ್ಷಣ ಮೆಳ್ಳೆಗಣ್ಣಿನದಾಗಿದೆ. ಸಾಮ್ರಾಜ್ಯ ಶಾಹಿಗೆ ತಾನು ಸೃಷ್ಟಿಸ್ಸಿದ, ತನ್ನ ತುಳಿತಕ್ಕೆ ಸಿಕ್ಕಿದ ಜನರನ್ನು, ಜನಾಂಗ ವನ್ನು ವರ್ಣಿಸಲು ಒಂದು ಭಾಷೆಯ ಅಗತ್ಯವಿದೆ. ಈ ಭಾಷೆ ತುಳಿತಕ್ಕೆ ಸಿಕ್ಕಿದ ಜನರನ್ನು, ಜನಾಂಗವನ್ನು, ತನ್ನ ನಾಯಕ ನನ್ನಾಗಿ ಯಾವುತ್ತೂ ಭಾವಿಸಲಾರದು. ಅದರ ಬದಲು ಅವರಿಗೆ ಕ್ರೂರವಾದ ಬಣ್ಣವನ್ನು ಬಳಿಯುತ್ತದೆ. ಆಫ್ರಿಕಾ, ಯುರೋಪಿನ ಸಾಮ್ರಾಜ್ಯಶಾಹಿಯ ಗುರಿಯಾಗಿತ್ತು. ಅಕ್ಷರಶಃ ಆಫ್ರಿಕಾದ ಒಂದೇ ಒಂದು ಇಂಚು ಭೂಮಿ ಈ ಸಾಮ್ರಾಜ್ಯ ಶಾಹಿಯ ನಿಯಂತ್ರಣದಿಂದ ತಪ್ಪಿಸಿಕೊಳ್ಳುವುದು ಸಾಧ್ಯ ವಾಗಲೇ ಇಲ್ಲ. ಆದುದರಿಂದ ಸಹಜವಾಗಿಯೇ ಅತಿ ಹೆಚ್ಚು ಭೀಕರವಾದ ವರ್ಣನೆಗೆ ಗುರಿಯಾಯಿತು. ಸಾಲದೆಂದು ಮೂರುನೂರು ವರ್ಷಗಳ ಹೀನ ಸಾಹಸವಾದ ಗುಲಾಮಗಿರಿ ಕಪ್ಪು ಜನರನ್ನು ಇಂತಹ ಹೀನಸ್ಥಿತಿಗೆ ತಳ್ಳಿತು. ಈ ಕಥನದ ಬೃಹತ್ ಗಾತ್ರವನ್ನು ಅರಿಯಲು ನಾವು ಕಂಡುಕೊಳ್ಳ ಬಹುದಾದ ಸರಳ ಮತ್ತು ಸುಲಭವಾದ ಪರಿಕಲ್ಪನೆಯೇ 'ಆಫ್ರಿಕಾವೆಂಬುದು ಜನತೆ'.

ಅಮೇರಿಕಾದ ಕಪ್ಪು ಲೇಖಕ ಜೇಮ್ಸ್ ಬಾಲ್ಡ್‌ವಿನ್ ಅಮೇರಿಕಾದ ಕಪ್ಪು ಜನರು ಆಫ್ರಿಕಾದ ತನ್ನ ಪೂರ್ವಿಕರ ಜೊತೆ ಸಾಮ್ಯವನ್ನು ಅನುರೂಪತೆಯನ್ನು ಹುಡುಕುವ ತನ್ನ ಕೃತಿ Figth Avenue, uptown ಎಂಬ ಕೃತಿಯಲ್ಲಿ 'ನೀಗ್ರೋ ತನ್ನನ್ನು ಮನುಷ್ಯನನ್ನಾಗಿ ಭಾವಿಸಲು ಇಚ್ಚಿಸುತ್ತಾನೆ', ಎಂಬ ಮಾತುಗಳನ್ನು ಹೇಳುತ್ತಾನೆ. ಕೇವಲ ಐದೇ ಐದು ಪದಗಳಲ್ಲಿ ಕಪ್ಪು ಜನರ ಹಂಬಲವನ್ನು ಖುಲ್ಲಾಂ ಖುಲ್ಲಾ ದಾಖಲಿಸುತ್ತಾನೆ. ಕಾಂಟ್‌ನನ್ನು, ಹೆಗಲ್‌ನನ್ನು, ಮಾರ್ಕ್ಸ್‌ನನ್ನು ಷೇಕ್ಸ್‌ಪಿಯರ್, ಬೈಬಲ್, ಪ್ರಾಯ್ಡ್‌ನನ್ನು ಅರೆದು ಕುಡಿದ ಜನರಿಗೆ ಈ ಮಾತು ತಾಕಲಾರದು. ಇದರ ಮರ್ಮ ತಿಳಿಯಲಾರದು. ಇದು ಅವರಿಗೆ ಅಭೇದ್ಯ.

ಈ ಮಾತುಗಳನ್ನು ನೀತಿ ನಿಯಮಗಳನ್ನು ರೂಪಿಸುವ ವಿಶ್ವ ಬ್ಯಾಂಕಿನ ರೂವಾರಿಗಳ ಸಭೆಯಲ್ಲಿ ಎಚ್ಚರಿಸಲು ಹೇಳುತ್ತಿದ್ದೇನೆ. ೨೧ನೆಯ ಶತಮಾನಕ್ಕೆ ಪ್ರವೇಶಿಸುತ್ತಿರುವ ಆಫ್ರಿಕಾ ತನ್ನ ಹೆಗಲ ಮೇಲೆ ಹೊತ್ತಿರುವ ಭಾರ ಹೇಗೆ ಪ್ರಸ್ತುತ ನಡವಳಿಕೆಗಳನ್ನು ರೂಪಿಸುತ್ತದೆ. ಅದರಲ್ಲಿ ಅವರ ಪಾಲೆಷ್ಟು

ನನ್ನ ಮನಸ್ಸಿನ ಕಿವಿಯಲ್ಲಿ ಯಾರೋ ಆಯಾಸ ದಿಂದ ಹಾಡುವ ಯಾತನೆಯ ಹಾಡು ಕೇಳಿಸುತ್ತದೆ. 'ಮರಳಿ ನಾವೆಲ್ಲಿಗೆ ಹೋಗೋಣ' ಇನ್ನೊಂದು ಸುತ್ತು ದುಃಖದ ಆಲಾಪ ಮತ್ತು ಗೋಣಗಾಟ. ವೈಯಕ್ತಿಕವಾಗಿ ಇಂತಹುದು ನನಗೆ ಅಸಹ್ಯ. ಈ ಆಲಾಪವೆಂದರೇನೇ ಅಸಹ್ಯ. ನನ್ನನ್ನು ಬಲ್ಲ ಎಲ್ಲರಿಗೂ ಇದು ಗೊತ್ತು. ಇದು ಗೊತ್ತಿಲ್ಲದವರಿಗೆ ನನ್ನ ಒಂದು ಸಣ್ಣ ಪುಸ್ತಕವನ್ನು ಓದಲು ಸೂಚಿಸು ತ್ತೇನೆ. ನನ್ನ ದೇಶ ನೈಜೀರಿಯಾದ ಆಂತರಿಕ ತೊಂದರೆಗಳ ಬಗ್ಗೆ ನನ್ನ ವಿಮರ್ಶಾತ್ಮಕವಾದ ಪ್ರತಿಕ್ರಿಯೆ ಅದು. ದುಃಖದ ಸಮುದ್ರದಂತಹ ಆ ದೇಶದ ಮೇಲೆ ಮಾಡಿರುವ ಕಟುವಾದ ಅಧ್ಯಯನ ವದು. ಯಾರಾದರೂ ವಿದೇಶಿ ಟೀಕಾಕಾರ ನನ್ನ ಪುಸ್ತಕದಿಂದ ಉಲ್ಲೇಖ ಮಾಡಿ ತನ್ನ ವಾದದ ಮಂಡನೆಯ ಸಾಮಾಗ್ರಿಯಾಗಿ ಬಳಕೆ ಮಾಡಿದ್ದನ್ನು ಕಂಡರೆ ಆತನ ಕೊರಳಪಟ್ಟಿ ಹಿಡಿದು ಕತ್ತು ಹಿಚುಕುವಷ್ಟು ಸಿಟ್ಟು ಬರುವಷ್ಟು ಕಟುವಾಗಿದೆ ಅದು. ಆಫ್ರಿಕಾದ ದುರಂತಗಳಿಗೆ ನಾನು ಕ್ಷಮೆಯಾ ಚಿಸುತ್ತಿಲ್ಲ. ಇಂತಹುಗಳ ಬಗ್ಗೆ ಮೃದುವಾಗಬಾರ 'ದೆಂಬಷ್ಟು ಕಠಿಣ ಬುದ್ಧಿ ನನಗಿದೆ. ಆದರೆ ಸಂಶಯಿ ಸಲು ಸಕಾರಣಗಳಿರುವ ಒಳ್ಳೆಯವರೆಂದು ಭಾವಿಸ ಲಾದ ಜನರು ಕಟ್ಟಿದ ಸುಳ್ಳು ಕಥೆಗಳನ್ನು ಪುರಾಣ ಗಳನ್ನು ತಿರಸ್ಕರಿಸುತ್ತಲೇ ನಮ್ಮ ದುರಂತವನ್ನು ಅರ್ಥಮಾಡಿ ಕೊಳ್ಳುವ ದಾರಿ ನನ್ನದು.

ನೈಸರ್ಗಿಕ ಸಂಪನ್ಮೂಲಗಳನ್ನು ದುಂದು ಮಾಡುವ ಯಾವುದೇ ದೇಶ ವಿನಾಶದ ಸಂಗೀತಕ್ಕೆ ತಾಳಹಾಕು ತ್ತಿರುತ್ತದೆಂಬ ವಿವೇಕ ನನಗಿದೆ. ಅದರ ಹಿಂದಿನ ತಾರ್ಕಿಕತೆಯನ್ನು ನಾನು ಒಪ್ಪುತ್ತೇನೆ. ಬಹಳ ಹಿಂದೆ ನಾನೊಂದು ಕಾದಂಬರಿ ಬರೆದಿದ್ದೆ. ಅದರ ನಾಯಕ ಯುವಕ, ವಿದ್ಯಾವಂತ, ಒಳ್ಳೆಯ ಉದ್ದೇಶ ಮತ್ತು ಭರವಸೆ ಇದ್ದವನು. ನನ್ನ ದಿನನಿತ್ಯದ ವ್ಯವಹಾರದಲ್ಲಿ

ಉಂಟಾದ ಏರುಪೇರಿಗೆ ಗುರಿಯಾದ. ಅದಕ್ಕಾಗಿ ಅಂತಿಮವಾಗಿ ತೆರಬೇಕಾದ ಬೆಲೆಯನ್ನೂ ತೆತ್ತ.

ಆತನ ಪಾಡಿಗಾಗಿ ನಾನು ಬ್ಯಾಂಕುಗಳನ್ನು ನಿಂದಿಸಲಾರೆ. ನಾನು ಏನು ಮಾಡುತ್ತೇನೆ ಅಥವಾ ಏನನ್ನು ಮಾಡಲು ಇಚ್ಛಿಸುತ್ತೇನೆ. ನನ್ನ ಓದುಗರಿಗೆ ನಾಯಕನ ಸ್ವಭಾವದ ಚಿತ್ರವನ್ನು ನೀಡಲು, ಅವನ ಸ್ಥಿತಿಗೆ ಆತನ ಪಾಲೆಷ್ಟು ಆತನ ನಿಯಂತ್ರಣದಲ್ಲಿಲ್ಲದ ಹೊರಗಿನ ಶಕ್ತಿಗಳ ಪಾಲೆಷ್ಟು ಎಂಬುದನ್ನು ಅನ್ವೇಷಿಸಲೂ ಕೋರುತ್ತೇನೆ. ಇಂತಹ ವಿಮರ್ಶಾತ್ಮಕವಾದ ಹುಡುಕಾಟದಲ್ಲಿ ಓದುಗನಿಗೆ ಆರೋಪಿತ ನಾಯಕ ಸಿಕ್ಕಲಾರ, ಆದರೆ ನ್ಯಾಯ ಸಮ್ಮತವಾದ ಗೆಲುವಿನ ಅರಿವಾಗುತ್ತದೆ. ಮನುಷ್ಯರ ಸ್ಥಿತಿಯ ಬಗ್ಗೆ ಎಚ್ಚರ ಮೂಡುತ್ತದೆ.

ಇವತ್ತಿನ ಪ್ರಪಂಚದಲ್ಲಿ ಆಫ್ರಿಕಾ ಅದರಲ್ಲೂ ಸಬ್‌ಸಹರಾ ಆಫ್ರಿಕಾದ ಅನೇಕ ದೇಶಗಳ ಬಡತನದ ಪಾಡು ಅವುಗಳದ್ದು ಮಾತ್ರವಲ್ಲ ಅವುಗಳ ಜೊತೆ ಮೂರನೆಯ ವಿಶ್ವವೆಂದು ಕರೆಯುವ ಎಲ್ಲಾ ದೇಶಗಳ ಜನರ ಸ್ಥಿತಿಯೂ ಹೆಚ್ಚು ಕಡಿಮೆ ಒಂದೇ ಆಗಿದೆ. ಅಷ್ಟೇ ಅಲ್ಲ ಸಮೃದ್ಧಿಯ ತೊಟ್ಟಿಲೆಂದು ವರ್ಣಿಸುವ ಮೊದಲನೆಯ ಮತ್ತು ಎರಡನೆಯ ವಿಶ್ವದ ರಾಷ್ಟ್ರಗಳ ಒಡಲಲ್ಲೂ ಬಡತನ ಮನೆ ಮಾಡಿದೆ.

ನನ್ನ ಕಾದಂಬರಿಯ ನತದೃಷ್ಟ ಯುವಕನಂತೆ ಬಡತನದ ಪ್ರಪಂಚದ ಜನತೆ ಮೂರ್ಖ ಮತ್ತು ಅಪರಾಧ ಭಾವದಿಂದ ನರಳುತ್ತಿದೆ. ಅವರು ಇದರಿಂದ ಬಿಡುಗಡೆ ಮಾಡಲು ಪ್ರಯತ್ನವನ್ನೇ ಮಾಡಿಲ್ಲ ಅಥವಾ ಪ್ರಯತ್ನವಿನ್ನೂ ಉಳಿದಿದೆ ಎಂಬುದೆ ಅವರ ಸ್ಥಿತಿಯ ವಿವರಣೆಯೂ ಆಗಿದೆ. ಇಂತಹ ಸ್ಥಿತಿಯನ್ನು ನಾವು ಗಮನಿಸಿಯೂ ಗಮನಿಸದಂತೆ ವರ್ತಿಸಲು ಪ್ರೇರೇಪಿಸುತ್ತದೆ. ಆದುದ ರಿಂದಲೇ ನಾನು ಹೇಳುವುದು ಅವರು ನಮ್ಮ ಕತೆಯಲ್ಲ ಅವರ ದುಃಖಕ್ಕಿಂತ, ಅವರ ಬಡತನ ಕ್ಕಿಂತಲೂ ದೊಡ್ಡವರು ಏಕೆಂದರೆ ಅವರು ಮನುಷ್ಯರು.

ಕಳೆದ ವಾರ ಟೆಲಿವಿಷನ್ನಿನಲ್ಲಿ ಇಥಿಯೋಪಿಯಾ ಮತ್ತು ಅದರ ಪಕ್ಕದ ಏತ್ರಿಯಾದ ನಡುವಿನ ಕಾಳಗದ ದೃಶ್ಯಗಳು ಬಿತ್ತರವಾಗುತ್ತಿದ್ದವು. ಸಾಮಾನ್ಯ ಊಹೆಯಂತೆ ಅದು ಪ್ರಮುಖ ಸುದ್ದಿಯಾಗಿರಲಿಲ್ಲ, ಅದು ಅಲ್ಪಕಾಲದ ಸುದ್ದಿಯಾಗಿತ್ತು, ಕಾಳಗದ ಕಾರಣಗಳು ಮತ್ತು ವಿವರಗಳು ನಾಪತ್ತೆಯಾಗಿದ್ದವು. ಆದರೆ ಒಂದೇ ಒಂದು ಮಾತಿನ ಮೇಲೆ ಒತ್ತು ನೀಡಲಾಗಿತ್ತು, ಅದು ಎರಡೂ ದೇಶಗಳು ವಿಶ್ವದ ಅತಿ ಬಡದೇಶಗಳು, ಅವುಗಳ ನಡುವೆ ಕಾಳಗ ನಡೆಯುತ್ತದೆ ಎಂಬುದಾಗಿತ್ತು, ಅನಂತರ ಸುದ್ದಿ ಬೇರೆ ಬೇರೆ ದೇಶಗಳ ಕಡೆ ಚಲಿಸಿತು. ಈ ಸುದ್ದಿಯಲ್ಲಿ ಕಾಳಗದಲ್ಲಿ ಭಾಗವಹಿಸಿದ ದೇಶಗಳು ಅಲ್ಲಿನ ಅಗಾಧವಾದ ಬಡತನದ ಬಗೆಗಿನ ಯಾವುದಾದರೂ ಅರಿವನ್ನು ನೋಡಗನಲ್ಲಿ

ಮೂಡಿಸಬಹುದೆ? ಇತ್ತೀಚಿನವರೆವಿಗೂ ಇಥಿಯೋಪಿಯಾದ ಭಾಗವಾಗಿತ್ತು ಎಂಬ ಮಾಹಿತಿಯನ್ನು ನೋಡುಗನಿಗೆ ನೀಡಿತೆ? ಇಲ್ಲ. ನೋಡುಗನಲ್ಲಿ ಯಾವುದೇ ಗುಣಾತ್ಮಕವಾದ ಪರಿಣಾಮವನ್ನು ಉಂಟು ಮಾಡುವಲ್ಲಿ ಆ ಸುದ್ದಿ ವಿಫಲವಾಗಿತ್ತು. ಬಡತನದ ಬಗೆಗಿನ ಬೊಗಳೆ, ರೋಚಕ ಮತ್ತು ಯಾವುದೇ ತೊಂದರೆ ನೀಡದ ವಿಷಯ ಆಫ್ರಿಕಾದ ಬಗೆಗಿನ ಆಧುನಿಕ ಪುರಾಣಗಳಲ್ಲಿ ಇಂತಹ ಸಂಗತಿಗಳ ಗುಡಾಣವೇ ಅಡಗಿದೆ. ಇದಕ್ಕಾಗಿ ದುಭಾರಿ ವೆಚ್ಚದ ಸಂಶೋಧನೆಗಳ ಅವಶ್ಯವಿಲ್ಲ. ಅದು ಕಣ್ಣಿಗೆ ರಾಚುವಷ್ಟು ನಗ್ನ ಸತ್ಯ.

ದುಡ್ಡಿನ ಧಣಿಗಳು ಮತ್ತು ಬಡ್ಡಿಯ ದಾನಿಗಳಿಗೊಂದು ಮನವಿ:

ಆಫ್ರಿಕಾದ ಬಗ್ಗೆ ಮಾತು ಬಂದಾಗಲೆಲ್ಲಾ ಅಲ್ಲಿನ ಬಡತನ ಪ್ರಮುಖವಾಗುತ್ತದೆ. ಬಡತನದ ಬಗ್ಗೆ ನಮಗೆಷ್ಟು ಗೊತ್ತು? ಬೆಲ್ಜಿಯಂನ ವಸಾಹತುವಾಗಿದ್ದ ಕಾಂಗೋ ೧೯೬೦ರಲ್ಲಿ ಸ್ವತಂತ್ರವಾಯಿತು. ಸ್ವತಂತ್ರವಾದ ಕೆಲವೇ ತಿಂಗಳೊಳಗೆ ಘೋರ ರಕ್ತಪಾತದ ಅಂತರ್‌ಯುದ್ಧ ಪ್ರಾರಂಭವಾಯಿತು. ಯುವಕನಾಗಿದ್ದ ಅಗಾಧ ಭರವಸೆಯ ದೂರದರ್ಶಿತ್ವದ ಪ್ರಧಾನ ಮಂತ್ರಿಯನ್ನು ಆತನ ವಿರೋಧಿಗಳು ಕ್ರೂರವಾಗಿ ಕೊಚ್ಚಿಹಾಕಿದರು. ಆತನ ಜಾಗದಲ್ಲಿ ಕಂಡುಕೇಳರಿಯದ ಭ್ರಷ್ಟ ವಿನಾಶಕಾರಿ ಮೊಬೂಟೂನನ್ನು ಪ್ರಧಾನ ಮಂತ್ರಿಯ ಗುದ್ದುಗೆಗೆ ಕೂರಿಸಲಾಯಿತು. ಇದರಲ್ಲಿ ಕಾಣದ ಕೈಗಳು ಕೆಲಸ ಮಾಡಿದವು. ಆ ಕಾಣದ ಕೈಗಳು ಅಮೆರಿಕಾದ ಗೂಢಾಚಾರ ಸಂಸ್ಥೆ ಸಿ.ಐ.ಎ.ದಾಗಿತ್ತೆಂಬ ಸತ್ಯವನ್ನು ಹೆಚ್ಚುಕಡಿಮೆ ಎಲ್ಲರೂ ಒಪ್ಪುತ್ತಿದ್ದಾರೆ. ಮೊಬೂಟುಗೆ ಪ್ರಧಾನಮಂತ್ರಿಯಾಗಲು ಇದ್ದ ಒಂದೇ ಒಂದು ಅರ್ಹತೆಯೆಂದರೆ ಅವನು ಕಮ್ಯೂನಿಷ್ಟರ ವಿರೋಧಿಯಾಗಿದ್ದನೆಂಬುದು ಮಾತ್ರ. ಇಡೀ ಪಶ್ಚಿಮ ಯುರೋಪಿನಷ್ಟು ವಿಸ್ತಾರವಾದ ಕಾಂಗೋದ ಅವನತಿ, ಸಂಪತ್ತಿನ ಲೂಟಿ ಪ್ರಾರಂಭವಾಯಿತು. ನೆರೆಹೊರೆಯ ದೇಶಗಳ ಜೊತೆ ಕಾಲುಕೆರೆದು ಕಿತಾಪತಿಗಿಳಿಯುವುದು ಪ್ರಾರಂಭವಾಯಿತು. ಪಕ್ಕದ ಆಂದೋಲನವನ್ನು ಅಸ್ಥಿರಗೊಳಿಸುವ ಶಕ್ತಿಗಳಿಗೆ ಆರ್ಥಿಕ ನೆರವು, ರಕ್ಷಣೆ, ಕುಮ್ಮಕ್ಕು ನೀಡಲಾಯಿತು. ವರ್ಣಭೇದವನ್ನೇ ತನ್ನ ನೀತಿ ಮಾಡಿಕೊಂಡ ದಕ್ಷಿಣ ಆಫ್ರಿಕಾದ ಬಿಳಿಯರ ಸರ್ಕಾರವನ್ನು ಬಹಿರಂಗವಾಗಿ ಬೆಂಬಲಿಸಲಾಯಿತು. ಮೊಬೂಟೊನ ಆಡಳಿತ ಹೋಲಿಕೆಗೆ ಸಿಕ್ಕಲಾರದಷ್ಟು ಭೀಕರವಾದದ್ದು, ಆತ ಬಿಲಿಯನ್‌ಗಟ್ಟಳೆ ಹಣವನ್ನು ಅಪಹರಿಸಿ ವಿದೇಶಿ ಬ್ಯಾಂಕುಗಳಲ್ಲಿ ಅಡಗಿಸಿಟ್ಟ, ಅಷ್ಟೋ ಸಾಲದೆಂದು ಆ ದೇಶದ ಹೆಸರನ್ನೇ ಅಪಹರಿಸಿ ಅದನ್ನು 'ಜೈರ' ಎಂದು ನಾಮಕರಣ ಮಾಡಿದ. ಅಗಾಧವಾದ ವಿಸ್ತಾರ ಮತ್ತು ಎಣೆಯಿಲ್ಲದಷ್ಟು ಖನಿಜಸಂಪತ್ತನ್ನು ಹೊಂದಿರುವ ಕಾಂಗೋ ಭೂಮಂಡಲದ ಬಡದೇಶಗಳಲ್ಲಿ ಒಂದಾಗಿದೆ. ಇಂತಹ ಪರಿಸ್ಥಿತಿಗೆ ಯಾರನ್ನು ಹೊಣೆ ಮಾಡುವುದು? ಕಾಂಗೋದ ಜನತೆಯನ್ನೇ? ಮೊಬೂಟೊವನ್ನೇ? ಅಥವಾ ಆತನನ್ನು ಗದ್ದುಗೇರಿಸಿದ ಸಿ.ಐ.ಎ.ಯನ್ನೇ? ಆರ್ಥಿಕ ಹೊಂದಾಣಿಕೆಯ ದಂಡವನ್ನು ಬರಿಸಬೇಕಾದವರು ಯಾರು? ಈ ಪ್ರಶ್ನೆ ಪ್ರಸ್ತುತವಾಗುತ್ತಿದೆ. ಅವರು ಯಾತನೆಯ ಬಡತನದ ಮತ್ತು ತುದಿ ಮೊದಲಿಲ್ಲದ ಅಸ್ಥಿರತೆಗೆ ಒಗ್ಗಿಕೊಂಡಿದ್ದಾರೆ.

ಈ ರೀತಿ ಕೈಗೊಂಬೆ ನಾಯಕನ ಕೈಗೆ ಸಿಕ್ಕಿ ನರಳುವ ಪ್ರದೇಶ ಆಫ್ರಿಕಾಖಂಡದಲ್ಲಿ ಕಾಂಗೋ ಒಂದೇ ಅಲ್ಲಾ. ಅದು ವಿವಾದಾಸ್ಪದ ಮತ್ತು ಬಹಿರಂಗದ ಚರ್ಚೆಗೊಳಗಾಗಿದೆ ಅಷ್ಟೇ. ಅಮೆರಿಕ ಶಿಥಿಲಯುದ್ಧದ ಸಂದರ್ಭದಲ್ಲಿ ಅನೀತಿಯುತವಾದ ವಿದೇಶಾಂಗ ನೀತಿಗಾಗಿ ಅದರ ಅಧ್ಯಕ್ಷರಾದ ಮಾನ್ಯ ಬಿಲ್‌ಕ್ಲಿಂಟನ್‌ರವರೂ ಆಫ್ರಿಕಾದ ಕ್ಷಮೆಯಾಚಿಸಿದ್ದೂ ಸಕಾರಣವಾದದ್ದು. ಕ್ಷಾಮದ ದವಡೆಗೆ ಸಿಕ್ಕಿ ಮೊಳೆಯುತ್ತಿರುವ ಸಸಿಯಂತೆ ಆಫ್ರಿಕಾದ ಸ್ವತಂತ್ರ ಚಳವಳಿಗಳು ಕಟ್ಟಿದ ಭರವಸೆಯ ಬೀಜಗಳು ಕಮರಿ ಹೋದ ಕಾಲಘಟ್ಟವದು.

ಮಧುರವಲ್ಲದ ಕ್ಷಮೆಯಾಚನೆಗಳಿಗೆ ಕಾರಣವಾಗುವ ಇನ್ನಷ್ಟು ವಿಷಯಗಳಿಗೆ ನಾನು ಹೋಗುವುದಿಲ್ಲ, ಆಫ್ರಿಕಾ ಬೇರೆಯವರಂತೆ ತಲೆಯೆತ್ತಿ ನಡೆಯಲಾರದ ತನ್ನ ಕೊನೆಗಾಣದ ಬಡತನ ಮತ್ತು ಅಸಾಮರ್ಥ್ಯದ ಬಗ್ಗೆ ಹಗುರುವಾದ ಸಿದ್ಧಪಡಿಸಿಕೊಂಡ ಸರಳ ಟೀಕೆಗಳಿಗೆ ಜಾಗರೂಕರಾಗಿರಬೇಕಾದ ಅಗತ್ಯದ ಕಡೆ ನಿಮ್ಮ ಗಮನ ಸೆಳೆಯುವುದಷ್ಟೇ ನನ್ನ ಉದ್ದೇಶ.

ಇಲ್ಲಿ ನೆರೆದಿರುವ ವಿಶ್ವಬ್ಯಾಂಕಿನ ತಜ್ಞನಿಗೆ ಹಣಕಾಸಿನ ಬಗ್ಗೆ, ಅರ್ಥಶಾಸ್ತ್ರದ ಬಗ್ಗೆ ನಾನೂ ಏನನ್ನು ಹೇಳಲೂ ಅಸಮರ್ಥ. ಆದರೆ ನಾನು ಕತೆಗಳನ್ನು ಹೇಳಬಲ್ಲೆ, ಕೆಲವು ಸಲಹೆಗಳನ್ನು ನೀಡಬಲ್ಲೆ.

ಮೊದಲನೆಯದು ನನಗೆ ಇತ್ತೀಚಿಗೆ ಬ್ರಿಟನ್ನಿನ ಜುಬಿಲಿ–೨೦೦೦ ಸಂಘಟನೆಯಿಂದ ಒಂದಷ್ಟು ಕಾಗದ ಪತ್ರಗಳು ಬಂದವು. ಅದರಲ್ಲಿ ಅವರು ವಿಶ್ವದ ಶ್ರೀಮಂತ ಬಲಿಷ್ಠ ರಾಷ್ಟ್ರಗಳ (ಜಿ-೮ ರಾಷ್ಟ್ರಗಳು) ಮುಖ್ಯಸ್ಥರಿಗೆ ಪ್ರಪಂಚದ ಐವತ್ತು ಬಡದೇಶಗಳ ಸಾಲವನ್ನು ಕೈಬಿಡಲು, ಮನ್ನಾ ಮಾಡಲು ತರುತ್ತಿರುವ ಒತ್ತಡದ ವಿವರಗಳಿದ್ದವು. ಈ ಸಂಘಟನೆಯ ಬೇಡಿಕೆಗಳಿಗೆ ಶೇ. ೫೦ರಷ್ಟು ಬೇಡಿಕೆಗಳನ್ನು ಬ್ರಿಟನ್ ತಾತ್ವಿಕವಾಗಿ ಸಹಮತ ವ್ಯಕ್ತಪಡಿಸಿರುವುದಾಗಿಯೂ ಕೆನಡಾ ಸಹ ಅಂತಹುದೇ ಅಭಿಪ್ರಾಯ ಹೊಂದಿರುವು

ದಾಗಿಯೂ ತಿಳಿದು ಬಂತು. ಆದರೆ ಈ ಪ್ರಸ್ತಾಪಕ್ಕೆ ಜಪಾನ್ ಮತ್ತು ಜರ್ಮನಿ ವಿರುದ್ಧವಿರುವುದಾಗಿ ತಿಳಿಯಿತು. ಇದಕ್ಕಿಂತ ಆಶ್ಚರ್ಯಕರವಾದ ನಿಲುವು ಅಮೆರಿಕೆಯದಾಗಿದೆ. ಹೋಮರ್‌ನಂತಹ ಕವಿಯನ್ನು ಮೀರಿಸುವ, ಬೆಣ್ಣೆಯಂತಹ ಮಾತುಗಳನ್ನು ಬಾಯಲ್ಲಿ ಆಡುವ ಅಮೆರಿಕಾ ನಿರ್ಧಾರದ ಸಮಯದಲ್ಲಿ, ಕಾರ್ಯರೂಪಕ್ಕೆ ಬರುವ ಸಮಯದಲ್ಲಿ ಮಾತೇ ನಿಂತು ಹೋಗುತ್ತದೆ. ಇನ್ನೊಬ್ಬ ಹೋಮರ್‌ನಂತಹ ಕವಿಯೇ ಬಂದು ಕಿನ್ನರಿ ಬಾರಿಸಿ ಇವರ ಮುಚ್ಚಿದ ಮನಸ್ಸಿನ ಕದ ತೆರೆಯಬೇಕೇನೋ! ನನ್ನಲ್ಲಿ ಉಂಟಾಗುತ್ತಿದ್ದ ಉದ್ವೇಗವನ್ನು ಗಮನಿಸಿದ ನನ್ನ ಪತ್ನಿ ನಿನ್ನೆ ತಾನು ಓದುತ್ತಿದ್ದ ಪುಸ್ತಕದಿಂದ ಒಂದು ಸಾಲನ್ನು ಗಮನಕ್ಕೆ ತಂದಳು. 'ಒಂದು ಸುದ್ದಿಯನ್ನು ನಾನು ಪಡೆದಿಲ್ಲವೆಂದರೇ ಅದನ್ನು ನನಗೆ ರವಾನಿಸಿಲ್ಲವೆಂದು ಅರ್ಥವಲ್ಲ'. ಈ ವಾಕ್ಯವನ್ನು ಓದಿದ ತಕ್ಷಣ ನನಗೆ ನಮ್ಮ ಗಾದೆಯೊಂದು ನೆನಪಿಗೆ ಬಂತು. 'ನಾವು ಬಲಿಯನ್ನು ನೀಡೋಣ ಅದರ ಪಾಪವನ್ನು ದೇವರ ಮೇಲೆ ಹಾಕೋಣ.' ನಾನು ಸಹ ಈಗ ಮಾಡಿರುವುದು ಅದನ್ನೆ. ಇನ್ನೂ ಜಪಾನ್ ಮತ್ತು ಜರ್ಮನಿಯ ನಿಲುವಿನ ಬಗ್ಗೆ- ಎರಡನೆಯ ಮಹಾಯುದ್ಧದ ನಂತರದ ಪುನರ್ ರಚನೆಯ ಸಹಾಯ ಧನದ ಸಿಂಹಪಾಲು ಪಡೆದ ದೇಶಗಳಿವು. ಬೂದಿಯಿಂದ ಮೇಲೆದ್ದ ದೇಶಗಳು. ನಾನು ಆ ದೇಶಗಳ ಮನಸ್ಸಿಗೆ ಮನವಿ ಮಾಡುತ್ತಿಲ್ಲ, ಅವುಗಳ ನೆನಪಿಗೆ ಮನವಿ ಮಾಡುತ್ತೇನೆ. ಅವುಗಳ ವ್ಯಂಗ್ಯದ ಮನಸ್ಥಿತಿಗೆ ಮನವಿ ಮಾಡುತ್ತೇನೆ. ಕ್ರಿಸ್ತನ ಒಂದು ಕತೆಯನ್ನು ನೆನಪಿಸಿಕೊಳ್ಳೋಣ. ಕ್ರಿಸ್ತನ ಎದುರು ಒಬ್ಬ ಹೆಚ್ಚಿನ ಮೊತ್ತವನ್ನು ಸಾಲ ಮಾಡಿದ. ಸಾಲಗಾರನನ್ನು ಆತನ ಧಣಿ ಸಾಲದಿಂದ ಋಣ ಮುಕ್ತಗೊಳಿಸಿದ. ಋಣ ಮುಕ್ತಗೊಂಡ ಮನುಷ್ಯ ಇನ್ನೊಬ್ಬ ಮನುಷ್ಯನಿಗೆ ಅಲ್ಪ ಪ್ರಮಾಣದ ಸಾಲ ನೀಡಿದ್ದ. ಆನಂತರ ಋಣಮುಕ್ತಗೊಂಡ ಸಾಲಗಾರ ಅಲ್ಪಪ್ರಮಾಣದ ಸಾಲ ಪಡೆದ ಸಾಲಗಾರನ ಬೆನ್ನತ್ತಿ ಆತನ ಕೊರಳ ಪಟ್ಟಿ ಹಿಡಿದು ಸಾಲವನ್ನು ಹಿಂದುರಿಗಿಸಲು ಒತ್ತಾಯಿಸಿದ. ಅಸಹಾಯಕನಾದ ಆ ಬಡಸಾಲಗಾರನನ್ನು ಅಂತಿಮವಾಗಿ ಶಿಕ್ಷಿಸಿದ.

ಶುದ್ಧಮಾನವೀಯ ಆಡಳಿತಕ್ಕಾಗಿ ಒಂದು ಮನವಿ:

ನನ್ನ ಎರಡನೆಯ ಕೋರಿಕೆ ಸಮಸ್ಯೆಯ ಮೂಲವನ್ನು ಅರ್ಥ ಮಾಡಿಕೊಳ್ಳುವುದಾಗಿದೆ. ಬಡದೇಶಗಳ ಭ್ರಷ್ಟನಾಯಕರು ತಮ್ಮ ದೇಶದ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಇದರ ಇನ್ನೊಂದು ಮುಖ ಇನ್ನೂ ಭೀಕರವಾಗಿದೆ. ಈ ರೀತಿ ಭ್ರಷ್ಟ ಮಾರ್ಗದಿಂದ ಲೂಟಿ ಮಾಡಿದ ಹಣವನ್ನು ವಿದೇಶಿ ಬ್ಯಾಂಕುಗಳಲ್ಲಿ ತೊಡಗಿಸುತ್ತಾರೆ. ನನ್ನ ಅರ್ಥಶಾಸ್ತ್ರದ ಜ್ಞಾನ ಸರಿಯಿದ್ದರೆ ಇದರಿಂದ ಬಡದೇಶದ ಜನತೆ ಎರಡು ಸಾರಿ ಮೋಸಕ್ಕೆ, ಲೂಟಿಗೆ ಒಳಗಾಗುತ್ತಿದ್ದಾರೆ. ಮೊದಲನೆಯದು ಬಡದೇಶದ ಖಜಾನೆ, ಸಾರ್ವಜನಿಕ ಸಂಪತ್ತೂ ಲೂಟಿಯಾಗುತ್ತದೆ. ಆ ಹಣ ವಿದೇಶದ ಬ್ಯಾಂಕುಗಳಿಗೆ ಸೇರುವುದರಿಂದ ಬಡದೇಶದ ಒಳಿತಿಗಾಗಿ, ಅಭಿವೃದ್ಧಿಗಾಗಿ ಬಳಕೆಯಾಗುವುದಿಲ್ಲ.

ವಿಶ್ವಬ್ಯಾಂಕಿಗೆ ನನ್ನ ಕಳಕಳಿಯ ಮನವಿ ಎಂದರೆ ಈ ರೀತಿ ಬಡದೇಶಗಳಲ್ಲಿ ಲೂಟಿಯಾಗುವ ಹಣ ಅವರ ದೇಶಕ್ಕೆ ಸಿಕ್ಕುವಂತೆ ಮಾಡಿ. ವಿಶ್ವಬ್ಯಾಂಕಿನ ವ್ಯವಹಾರ ಈ ರೀತಿಯ ಕಳ್ಳ

> ಆಫ್ರಿಕಾ ಎನ್ನುವುದು ಜನತೆ ಎಂಬ ಮಾತಿಗೆ ಇನ್ನೊಂದು ಮುಖವೂ ಇದೆ. ಆಫ್ರಿಕಾಕ್ಕೆ ಜನತೆಯಲ್ಲಿ ನಂಬಿಕೆ ಇದೆ. ಪರಸ್ಪರ ಸಹಕಾರದಲ್ಲಿ ನಂಬಿಕೆ ಇದೆ. ಕಿಕ್ಸಾರ್ಟನ ತಾತ್ವಿಕ ನಿಲುವಿನಂತೆ ಇದು. ನನ್ನ ಜನಾಂಗವಾದ ಬಂಟು ಜನರಲ್ಲಿ ಒಂದು ಮಾತಿದೆ. 'ಮನುಷ್ಯ ಮನುಷ್ಯನಾಗಿದ್ದಾನೆ ಏಕೆಂದರೆ ತನ್ನ ಸಹಜೀವಿಗಳ ಕಾರಣ.' ಇದು ಆಫ್ರಿಕಾದ ಜನಾಂಗಿಯ ಆಕಾಂಕ್ಷೆಯ ಕನ್ನಡಿ.
> ನಮ್ಮ ಮಾನವೀಯತೆ, ನಮ್ಮ ಸಹಜೀವಿಗಳ ಮಾನವೀತೆಯೊಂದಿಗೆ ಬೆಸೆದಿದೆ. ಒಬ್ಬ ಅಥವಾ ಒಂದು ಗುಂಪು ಮನುಷ್ಯ ಕುಲವಾಗಲಾರದು. ಮೃಗೀಯ ಮನಸ್ಥಿತಿಯಿಂದ ನಾವೆಲ್ಲರೂ ಒಟ್ಟಾಗಿ ಮೇಲೇಳಬೇಕು. ಅಥವಾ ಅದು ಸಾಧ್ಯವಿಲ್ಲ. ಕಾಲ ಮೀರಿದ ಇವತ್ತೂ ಸಹ ಇಂತಹ ಪಾಠ ಕಲಿಯಲೂ ತಪ್ಪೆನಿಸುವುದಿಲ್ಲ.

ಹಣದಿಂದ ನಡೆಯುತ್ತಿಲ್ಲವೆಂಬ ಪೂರ್ಣ ಭರವಸೆ ನನಗಿದೆ. ಪೊಲೀಸರಂತೆ ವರ್ತಿಸುವುದು ಬ್ಯಾಂಕುಗಳ ಕೆಲಸವಲ್ಲವೆಂಬ ವಿವೇಕವೂ ಇದೆ. ಆದರೆ ಅಧಿಕಾರದಲ್ಲಿರುವ ಕೆಲವೇ ಕೆಲವು ಜನ ಭ್ರಷ್ಟರ, ಲೂಟಿಕೋರರ ದುರಾಸೆಗೆ ಇಡೀ ದೇಶದ ಅಸಂಖ್ಯಾತ ಜನರ ಜೀವನ ದೂಳೀಪಟವಾಗುವ ಅವರ ಭವಿಷ್ಯವನ್ನೇ ನಿರ್ನಾಮಮಾಡುತ್ತಿರುವ ವಿನಾಶಕಾರಿ ಕಾಲಘಟ್ಟದಲ್ಲಿ ನಾವಿದ್ದೇವೆ. ಇದು ಎದೆ ನಡುಗಿಸುವ ಸಾಮೂಹಿಕ ಹತ್ಯೆಗೆ ಸಮನಾದ ಪಾತಕವಾಗಿದೆ. ಅಧ್ಯಕ್ಷರಾದ ಉಲ್ಫಸನ್‌ರವರು ನೀಡಿರುವ ಈ ಅಂಕಿಅಂಶಗಳು ವಿನಾಶದ ಕತೆಯನ್ನು ಹೇಳುತ್ತಿವೆ. (James D. Wolfeson: Qfrica movement, Wadhigton, D.C. World Bank, 1998) ಇವುಗಳನ್ನು ಕಂಡಾಗ ನನಗೆ ದಿಗ್ಭ್ರಮೆಯಾಗುತ್ತದೆ. ಈ ಅಂಕಿ ಅಂಶಗಳ ಪ್ರಕಾರ ಆಫ್ರಿಕಾದ ಖಾಸಗಿ ಸಂಪತ್ತಿನ ಶೇ. ೩೭ರಷ್ಟು ಆಫ್ರಿಕಾದ ಹೊರಗೆ ತೊಡಗಿಸಲಾಗದೆ. ಏಷ್ಯಾದಲ್ಲಿ ಇದರ ಪ್ರಮಾಣ ಶೇ. ೩ರಷ್ಟು ಲ್ಯಾಟಿನ್ ಅಮೆರಿಕಾದ ದೇಶಗಳಲ್ಲಿ ಶೇ. ೭ರಷ್ಟು ಮಾತ್ರ. ಇಡೀ ವಿಶ್ವ ಇಂತಹ ಕರುಣಾಜನಕ ಸ್ಥಿತಿಯಲ್ಲಿ ಮೌನವಾಗಿರುವುದು ಆತಂಕಕಾರಿ. ಯಾವುದೋ ಕಾಲದ ಬ್ಯಾಂಕುಗಳ ನಿಯಮಗಳನ್ನು, ಗೌಪ್ಯತೆಯ ನೀತಿಯನ್ನು ಇಂದೂ ಮುಂದುವರೆಸುವುದು ಈ ಆತಂಕವನ್ನು ಹೆಚ್ಚಿಸುತ್ತಿದೆ. ನಾಝಿ ಜರ್ಮನಿಯ ಬಂಗಾರಕ್ಕೆ ಸಂಬಂಧಿಸಿದಂತೆ ಪ್ರಪಂಚ ಎಚ್ಚರವಾಗಿ ಈ ಗೌಪ್ಯತೆಯನ್ನು ಸಡಿಲಿಸುವ ವೇಳೆಗೆ ಕಾಲ ಮೀರಿತ್ತು. ಈ ಎಚ್ಚರಿಕೆ ನಮಗಿರಬೇಕೆಂದು ನಾನು ಜ್ಞಾಪಿಸುತ್ತೇನೆ. ವಿಶ್ವ ಬ್ಯಾಂಕಿನ ಮುಂದಾಳುತನದಲ್ಲಿ ವಿಶ್ವದ ಬೇರೆ ಬೇರೆ ಬ್ಯಾಂಕುಗಳು ತೆಗೆದುಕೊಳ್ಳಬಲ್ಲ ದೃಢವಾದ ನಿಲುವುದು ಅನೇಕ ಬಡ ದೇಶಗಳು ಇತಿಹಾಸದಲ್ಲಿ ಮೊದಲ ಬಾರಿ ತಲೆ ಎತ್ತಿ ತಮ್ಮ ಪ್ರಗತಿಯ ಬಗ್ಗೆ ಅಭಿವೃದ್ಧಿಯ ಬಗ್ಗೆ ಹೊಸ ದಾರಿ ತುಳಿಯಲು, ಹೊಸ ಜವಾಬ್ದಾರಿಯನ್ನು ಹೊರಲು ಅವಕಾಶ ಸೃಷ್ಟಿಸುತ್ತದೆ. ರಾಷ್ಟ್ರಗಳನ್ನೇ ಕೊಲೆ ಮಾಡುವ ಕೊಲೆಗಡುಕರ ಪರಂಪರೆಗೆ ಕಡಿವಾಣ ಹಾಕುತ್ತಿದೆ. ಕಳ್ಳ ಹಣವನ್ನು ಸ್ವೀಕರಿಸುವ, ಕಳ್ಳ ಹಣದಲ್ಲಿ ತಮ್ಮ ಹಣಕಾಸಿನ ವ್ಯವಹಾರವನ್ನು ನಿರ್ವಹಿಸುವ ಕಷ್ಟ ಕೆಲಸಗಳಲ್ಲಿ ಪಾಲುದಾರರೆಂಬ ಬ್ಯಾಂಕುಗಳ ಮೇಲಿನ ಆರೋಪದಿಂದ ಬ್ಯಾಂಕುಗಳು ಮುಕ್ತವಾಗುತ್ತವೆ. ಬ್ಯಾಂಕುಗಳ ಘನತೆ ಹೆಚ್ಚುತ್ತದೆ.

ತುಳಿತದ ದಮನಕಾರಿ ಪುರಾಣಗಳನ್ನು ಕಟ್ಟಿದ ನಂಬಿಕೆಗಳ ಮೂಲಕ ಜನತೆಯನ್ನು ತೂಗಿ ನೋಡುವ ಕ್ರಿಯೆಗೆ ನಾವು ಬಹಳ ಕಾಲವನ್ನು ನೀಡಿದ್ದೇವೆ. ೧೯೧೦ರಲ್ಲಿ ಬ್ರಿಟಿಷ್ ಸಾಮ್ರಾಜ್ಯ ತನ್ನ ಉತ್ತುಂಗದ ಕಾಲದಲ್ಲಿದ್ದಾಗ ಅದರ ಗೌರವಾನ್ವಿತ ನೌಕರ ಮತ್ತು ಪ್ರಸಿದ್ಧ ಕಾದಂಬರಿಕಾರ ಜಾನ್ ಬುಚಾನ್ ಸಾಮ್ರಾಜ್ಯಶಾಹಿಯ ಕ್ಲಾಸಿಕ್ ಎಂದು ವರ್ಣಿಸುವ ತನ್ನ 'ಪ್ರೆಸ್ಟರ್ ಜಾನ್' ಕೃತಿಯಲ್ಲಿ ಒಂದು ಘೋಷಣೆಯನ್ನು ನೀಡುತ್ತಾನೆ. 'ಒಬ್ಬ ಕಪ್ಪು ಮತ್ತು ಬಿಳಿಯನ ನಡುವಿನ ಪ್ರಮುಖ ವ್ಯತ್ಯಾಸ ಜವಾಬ್ದಾರಿಯನ್ನು ಹೊರುವ ಆತನ ಸಾಮರ್ಥ್ಯದಲ್ಲಿದೆ' ಎಂದು ದಮನಕಾರಿ ಪುರಾಣಗಳನ್ನು ಹೊರತುಪಡಿಸಿ ಇನ್ನೆಲ್ಲೂ ಅಂತಹ ವ್ಯತ್ಯಾಸ ಜೀವಂತವಿರಬಹುದೆಂಬ ಕನಿಷ್ಟ ನಂಬಿಕೆಯೂ ನನಗಿಲ್ಲ. ಕಪ್ಪು ಜನರಿಗೆ, ಬಡದೇಶಗಳಿಗೆ ಸ್ಪರ್ಧೆಯಂತಹ ಒಂದು ಅವಕಾಶವನ್ನು ನೀಡಿ ಇಂತಹ ನಂಬಿಕೆಗಳನ್ನು ಪರೀಕ್ಷೆಗೆ ಗುರಿ ಪಡಿಸೋಣ. ಅವರ ಜೀವನವನ್ನು ಅವರೇ ಕಟ್ಟಿಕೊಳ್ಳಬಲ್ಲ ಅವಕಾಶವನ್ನು ಒಂದು ಸಾರಿ ನೀಡೋಣ. ಇದರಿಂದ ಕಳೆದುಕೊಳ್ಳುವುದೇನೂ ಇಲ್ಲ, ಇದರ ಫಲ ಊಹಾತೀತ. ಕರಿಯರೂ ಬಿಳಿಯರೂ ಭಿನ್ನರಲ್ಲ, ನನ್ನ ನಂಬಿ!

ಸಣ್ಣ ಒಂದು ಸಂಕೇತದ ಮೂಲಕ ನನ್ನ ಮಾತುಗಳನ್ನು ಸಮಾಪ್ತಿಗೊಳಿಸುತ್ತೇನೆ. ಆಫ್ರಿಕಾ ಎನ್ನುವುದು ಜನತೆ ಎಂಬ ಮಾತಿಗೆ ಇನ್ನೊಂದು ಮುಖವೂ ಇದೆ. ಆಫ್ರಿಕಾಕ್ಕೆ ಜನತೆಯಲ್ಲಿ ನಂಬಿಕೆ ಇದೆ. ಪರಸ್ಪರ ಸಹಕಾರದಲ್ಲಿ ನಂಬಿಕೆ ಇದೆ. ಕಿಕ್ಸಾರ್ಟನ ತಾತ್ವಿಕ ನಿಲುವಿನಂತೆ ಇದು. ನನ್ನ ಜನಾಂಗವಾದ ಬಂಟು ಜನರಲ್ಲಿ ಒಂದು ಮಾತಿದೆ. 'ಮನುಷ್ಯ ಮನುಷ್ಯನಾಗಿದ್ದಾನೆ ಏಕೆಂದರೆ ತನ್ನ ಸಹಜೀವಿಗಳ ಕಾರಣ.' ಇದು ಆಫ್ರಿಕಾದ ಜನಾಂಗಿಯ ಆಕಾಂಕ್ಷೆಯ ಕನ್ನಡಿ.

ನಮ್ಮ ಮಾನವೀಯತೆ, ನಮ್ಮ ಸಹಜೀವಿಗಳ ಮಾನವೀತೆಯೊಂದಿಗೆ ಬೆಸೆದಿದೆ. ಒಬ್ಬ ಅಥವಾ ಒಂದು ಗುಂಪು ಮನುಷ್ಯ ಕುಲವಾಗಲಾರದು. ಮೃಗೀಯ ಮನಸ್ಥಿತಿಯಿಂದ ನಾವೆಲ್ಲರೂ ಒಟ್ಟಾಗಿ ಮೇಲೇಳಬೇಕು. ಕಾಲ ಮೀರಿದ ಇವತ್ತೂ ಸಹ ಇಂತಹ ಪಾಠ ಕಲಿಯುವುದು ತಪ್ಪೆನಿಸುವುದಿಲ್ಲ

(೧೩ನೆಯ ಜೂನ್ ೧೯೯೮ರಂದು ವಿಶ್ವಬ್ಯಾಂಕ್ ವತಿಯಿಂದ ಮಾಡಿದ ಉಪನ್ಯಾಸ) □

ಕಾವ್ಯ

ಹೋಳಿ ಹುಣ್ಣಿಮೆ

ತಿರುಗುತ್ತಿದೆಯೆ ತಲೆ
ಗಿಡಮರಗಳಿಗೆ?
ತಟ್ಟಾಡುತ್ತಿವೆಯೆ ಮೋಡಗಳು?
ಹುಚ್ಚಾಟವಾಡುತಿದೆಯೇ ಗಾಳಿ?
ಅಮಲೇರಿದೆಯೆ ಚಂದ್ರನಿಗೆ?
ಇರಬಹುದು; ಹೋಳಿ ಹುಣ್ಣಿಮೆ ಇಂದು
ಮುದುಕರು ಮುದುಕಿಯರು
ಹುಡುಗಿಯರು ಹುಡುಗರು
ಕುಣಿಯುತಿರುವರು
ಹಾಡುವುದು ಕುಣಿಯುವುದು
ಕುಣಿಯುವುದು ಹಾಡುವುದು.

ಕದ್ದ ಬಾಗಿಲು ಕಿಟಕಿ ಜಂತೆಗಳನೆಲ್ಲ
ಮಾಡಿ ರಾಶಿ
ಒಳಗೆ ಉರಿಯುವ ಬೆಂಕಿ
ಹೊರಗುಕ್ಕಿ ಬಂದಂತೆ
ಹಚ್ಚಿದರು ಬೆಂಕಿ
ಸಂಭ್ರಮಿಸಿ ಹಾಡಿ;
ಕಾಮಣ್ಣ ಮಕ್ಕಳು ಕಳ್ಳ ಸೂಳೆಯಮಕ್ಕಳು
.....ಎಲ್ಲಾ ಎಲ್ಲಾ ಕದ್ದರು.....
ದಿಕ್ಕುದಿಕ್ಕಿಗೆ ಜ್ವಾಲೆ
ಚಾಚಿರಲು ನಾಲಗೆ
ಛಿಟಿಛಿಟಿಲು ಛಿಟಿಲೆಂದು
ಕೊಂದೆವೆನ್ನುತ ಕಾಮನನೆ ಭ್ರಮಿಸಿ
ಓಕುಳಿಯನೆರಚಾಡಿ
ಹುಚ್ಚೇರಿ ಕುಣಿದರು.

ಸುಟ್ಟು ಹೋದರೆ ಕಾಮ
ಸೃಷ್ಟಿ ನಡೆಯುವುದೆಂತು?
ಆಗಸದ ಸೂರ್ಯ ಪ್ರಾಣ
ಭೂಮಿ ಬಸಿರಿಗೆ ಸ್ರವಿಸಿ
ಜೀವಮೊಳೆಯುವುದೆಂತು?

ಹುಟ್ಟಿದರು ಮೈಯಿಂದ
ಮೈಯಿರದ ಆಭೂತ
ಸುಟ್ಟು ಬೂದಿಯಾಗುವುದೇನು?



ಒಳಗಿನಿಂದಲೇ ಮೊಳೆವ ಮದವೆ ಮಥಿಸುವುದು
ಸೃಷ್ಟಿ ಕಾರ್ಯಕ್ಕೆಂದು
ಹುಟ್ಟಿಕೊಂಡದ್ದದಕ್ಕೆ
ಕುಮಾರ ಸಂಭವದ ಕಥೆ:
ಕಂಗೆಟ್ಟುಹೋದಂತೆಯೇ ನಿಯತಿ ಸತಿ ಸತ್ತು
ರುದ್ರನಾಗಿದ್ದ ಶಿವ.
ಕುದಿಯುತಿದ್ದಳು ಸತಿಯಾಗಿದ್ದ ಉಮೆ
ಪಂಚಾಗ್ನಿಗಳ ಮಧ್ಯೆ
ಸ್ಥಾಣು ಕರ್ಪಣಕಾಗಿ
ತಪದ ಜ್ವಾಲೆಗಳೆದ್ದು
ಲಾವವಾಗುತ ಹರಿದು
ಸ್ಥಾಣು ಜಂಗಮ ಆಗಿ

ಶಿವನಾಗಿ ಎದ್ದದ್ದು
ಪಾರ್ವತಿಯ ಕೂಡಿದ್ದು
ಶುಕ್ಲ ಪ್ರವಾಹದಲಿ
ಬೆಳಕೆ ಬೆಳಕಾದ್ದು
ರೋಮಾಂಚನ ಕಥೆ
ಈ ಮನ್ಮಥನದು.

○ ಪ್ರೊ॥ ಜಿ.ಎಸ್. ಸಿದ್ಧಲಿಂಗಯ್ಯ

ಚಮ್ಮಾರ ಕವಿಯಾಗಬಾರ



ಬಾಪು; ನೀವೆಷ್ಟೇ ಜನ್ಮವೆತ್ತಿ ಚರ್ಮದ ಕೆಲಸ ಮಾಡಿ
ಅಂಗಡಿಯೇ ತೆರೆದರೂ 'ಚಮ್ಮಾರ' ಎನಿಸಿಕೊಳ್ಳಲಾರಿರಿ
ಹೇರಿರುವ ಆ ಡಿಗ್ರಿ ಭಾರ ಕಡಿಮೆಯಾಗದೆನಗೆ
ಈ ವೃತ್ತಿಯನ್ನು ಕೈಗೆತ್ತಿಕೊಂಡು ಮತ್ತಷ್ಟು ಹಗುರಾಗಿ
ನೀವು ಮೇಲಕ್ಕೇರುತ್ತೀರಿ ದೇಶ ಭಕ್ತನೊಂದಿಗೆ ರಾಷ್ಟ್ರಧ್ವಜದ ಹಾಗೆ
ನಾನು ನಾಚಿ ಕುಸಿಯುತ್ತ ಹೋಗುತ್ತೇನೆ ಧ್ವಜದ ದಾರದ ಹಾಗೆ.

ಬಾಪು; ನಾನಪ್ಪಟ ಸಮಾಜವಾದಿ
ನನ್ನೆದುರಿಗೆ ಬಂದು ಯಾವುದನೆಣಿಸದೆ ಎಲ್ಲರೂ ಬಾಗುವವರೆ
ಚಪ್ಪಲಿಯ ರಿಪೇರಿಗಾಗಿ
ಚಪ್ಪಲಿಯ ಅಳತೆಯಿಂದ ಯಾರೂ ಹೊರಗುಳಿದಿಲ್ಲ
ಎಲ್ಲರೂ ಜೋಡುಗಳೇ, ಬಿಚ್ಚಿದಾಗ ಮಾತ್ರ ದ್ವೈತ

ಬಾಪು; ರಸ್ತೆಬದಿಗೆ ಬೀಳಲಾರವು ನಿಮ್ಮ ಚಪ್ಪಲಿ ಅನಾಥವಾಗಿ
ತೊಗಲಚೀಲದ ಮನುಜರೂ ಅನಾಥ ಚಪ್ಪಲಿಯೇ ತರತರ
ನಾ ವೈದ್ಯ, ಮನ ಹಿಡಿದು ಹೊಲಿಗೆ ಹಾಕಬಲ್ಲೆ
ಉಳಿ ಕೊಡತಿ ಅಡಿಗೊಂಟಕೆಲ್ಲರೂ ಸಿಕ್ಕಲೇಬೇಕು
ಮೇಲೆ ಹೊಳೆವ ಪಾಲಿಷ್ !
ಕೆಲವೊಮ್ಮೆ ಹೆದರಿಸುತ್ತದೆ ನರ ತೊಗಲು ಮರದ ಮೇಲೆ ಕುಳಿತು
ಬೆಳಗು ನನ್ನೆದುರಿಗೆ ಬಂದು, ನಾನೇ ಎದುರಾದೆನೆಂದುಗಿಯುತ್ತದೆ
ತರ್ಕವಿಲ್ಲದ ಬದುಕು ನೀಗಿ ವ್ಯಭಿಚಾರಿಯೂ ಗಳಿಸುತ್ತಾಳೆ
'ಮಾ ನಿಷಾಧ' ಹೇಳಲು ಹೋಗಿ ನಡಗುತ್ತಿದ್ದೇನೆ ಬಾಪು
ನಿಧಾನವಾಗಿ ಬಾಪು ನನ್ನ ಬೆನ್ನ ಸವರುತ್ತ:
'ಅರವಿಂದ ನೀನು ಚಮ್ಮಾರನಲ್ಲ-ಕವಿ' ಎಂದರು
ಕವಿತನವೇ ಕಸುಬಾಗಿ ಅದೂ ಜಾತಿಯಾಗುತ್ತದೆ ಬಾಪು
ಭಾಷೆಗೂ ಚೂಪಾದ ಹಲ್ಲುಗಳಿವೆ!
ಆಗ ನಾನು 'ಚಮ್ಮಾರ ಕವಿ'ಯೆಂದು ಚಿತ್ರಿತವಾಗುತ್ತೇನೆ
ಧಿಕ್ಕಾರವಿರಲಿ ಕವಿಗೂ ಕವಿತನಕ್ಕೂ
ಮೊಳಕೆಯೊಡೆಯದ ಅನ್ನವಾಗದ ನೆರಳು ನೀರು ಬಟ್ಟೆಯಾಗದ
'ಬಂಜೆ ಕಾವ್ಯ' ಯಾರಿಗೆ ಬೇಕು ?

ಬೆಂಕಿ ಎಲ್ಲರನ್ನೂ ಸುಡುತ್ತದೆ ಬಾಪು
ಕೆಲವರು ಆ ಬೆಂಕಿಯನ್ನೆ ಪೆಟ್ಟಿಗೆಯಲ್ಲಿಟ್ಟು ಜೇಬಿಗೇರಿಸಿದ್ದಾರೆ!
ಸಮಯ ಬಂದಾಗ ತೆಗೆಯುತ್ತಾರೆ
ಇನ್ನು ಕೆಲವರು ಮರದೊಳಗಣ ಕಿಚ್ಚಿನಂತೆ ಜೊತೆಗೇ ಇದ್ದಾರೆ.

ನೀವು ನಿಮ್ಮನ್ನು ಗೆಲ್ಲಬಹುದು ಬಾಪು
ನಾನು ನನ್ನನೇ ಗೆಲ್ಲಬಹುದು
ಆದರೆ
ನಿಮ್ಮ 'ಚಪ್ಪಲಿ' ನನ್ನಳತೆಗೆ ಬಾರದು
ನನ್ನ 'ಚಪ್ಪಲಿ' ನಿಮ್ಮಳತೆಗೂ ಬಾರದು
ನಾನು ನಿಮ್ಮ ಗೆಲ್ಲಲಾರೆ
ನೀವು ನನ್ನನೂ ಗೆಲ್ಲಾಲಾರಿರಿ!

○ ಅರವಿಂದ ಮಾಲಗತ್ತಿ

ಅಲಕ್ಷಿತರ ಪದತಲದಿಂದ ಅಭಿವೃದ್ಧಿಯ ಆರಂಭ

○ ಟಿ.ಆರ್. ಚಂದ್ರಶೇಖರ್



ಕಲೆ: ಆರ್.ಎಂ.ಹಡಪದ್

ಲೋಕದಲ್ಲಿ ಯಾವುದನ್ನು ಪ್ರಧಾನಧಾರೆ-ಶಿಷ್ಟಧಾರೆ-ಯಜಮಾನವಾದಿ ಅಭಿವೃದ್ಧಿ ವಿಚಾರ ಪ್ರಣಾಳಿಕೆಯೆಂದು ಕರೆಯುತ್ತಾ ಬರಲಾಗಿದೆಯೋ ಅದು ಸಮಾಜದ ಪ್ರತಿಷ್ಠಿತ ವರ್ಗದ ಹಿತಾಸಕ್ತಿಗಳನ್ನು ಮಾತ್ರ ಪೋಷಿಸಬಲ್ಲುದಾಗಿದೆ. ಸಮಾಜದಲ್ಲಿ ಅಧೀನವರ್ಗವನ್ನು ಹುಟ್ಟು ಹಾಕುವುದು ಅದಕ್ಕೆ ಅನಿವಾರ್ಯವಾಗಿದೆ. ಅಧೀನ ವರ್ಗವನ್ನು ಹುಟ್ಟುಹಾಕದೆ, ಸಮಾಜದಲ್ಲಿ ದುರ್ಬಲರನ್ನು ಅಂಚಿಗೆ ತಳ್ಳದೆ, ಅವರನ್ನು ಪರಿಶಿಷ್ಟವನ್ನಾಗಿ ಮಾಡಿಕೊಳ್ಳದೆ ಪ್ರತಿಷ್ಟಿತ ಪ್ರಧಾನ ವರ್ಗವು ತನ್ನ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ. ಬಂಡವಾಳಶಾಹಿ ಅಭಿವೃದ್ಧಿ ಮೀಮಾಂಸೆಗೆ ಇದು ಎಷ್ಟು ಸತ್ಯವೋ ಅಷ್ಟೇ ಹಿಂದೂ ಅಭಿವೃದ್ಧಿ ವಿಚಾರ ಪ್ರಣಾಳಿಕೆಗೂ ಸತ್ಯ. ಪ್ರಧಾನ- ಅಧೀನ, ಶಿಷ್ಟ- ಪರಿಶಿಷ್ಟವೆಂಬ ವರ್ಗೀಕರಣವನ್ನು ಅಂತರ್ಗತ ಮಾಡಿಕೊಂಡಿರುವ ಯಜಮಾನವಾದಿ ಅಭಿವೃದ್ಧಿ ಮೀಮಾಂಸೆಯಲ್ಲಿ ಅನೂಚಾನವಾಗಿ, ಅವಿಚ್ಛಿನ್ನವಾಗಿ, ಅನಿರ್ಬಂಧಿತವಾಗಿ ಹರಿದುಕೊಂಡು ಬರುತ್ತಿರುವ ಸಾಮಾಜಿಕ ಅಸಮಾನತೆಗಳನ್ನು ಪೋಷಿಸಬಲ್ಲಂತಹ ಕಾರ್ಯತಂತ್ರ ವಿದೇ ವಿನಾ ಅವುಗಳನ್ನು ತೊಡೆದು ಹಾಕುವ ವ್ಯವಸ್ಥೆ ಅಲ್ಲಿಲ್ಲ. ಈ ಬಗೆಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪ್ರತಿಷ್ಟಿತ ಪ್ರಧಾನವರ್ಗವು ಅಧೀನ ಅಲಕ್ಷಿತ ಅಂಚಿನಲ್ಲಿರುವ ಕಾರ್ಯತಂತ್ರಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲ. ಇಲ್ಲಿ ಅಭಿವೃದ್ಧಿಯನ್ನು ಪರಿಬಾವಿಸಿಕೊಂಡಿರುವ ಬಗೆಯಲ್ಲಿಯೇ ಪ್ರಧಾನ-ಅಧೀನ, ಶಿಷ್ಟ-ಪರಿಶಿಷ್ಟವೆಂಬ ವರ್ಗೀಕರಣ ಅಂತರ್ಗತಗೊಂಡಿದೆ. ಇಂತಹ ವ್ಯವಸ್ಥೆಯಲ್ಲಿ ಪರಿಶಿಷ್ಟರ ಪರಿಶ್ರಮವೇ ಪ್ರತಿಷ್ಠಿತರ ಪದಾರ್ಥವಾಗಿದೆ.

ಪ್ರಧಾನಧಾರೆ ಅಭಿವೃದ್ಧಿ ಮೀಮಾಂಸೆಯಲ್ಲಿ ಅಭಿವೃದ್ಧಿಯನ್ನು ರೇಖಾತ್ಮಕ, ಏಖಮುಖಿ, ಅಖಂಡ ಮತ್ತು ವಿಕಾಸವಾದಿಯೆಂದು ಗುರುತಿಸುವುದು ರೂಢಿಯಲ್ಲಿದೆ. ಪ್ರಧಾನ-ಅಧೀನವೆಂಬ ವರ್ಗೀಕರಣವು ಅಭಿವೃದ್ಧಿಯ ಆರಂಭದ ಕಾಲದಲ್ಲಿ ಉಂಟಾಗುವ ಒಂದು ವಿಕೃತಿಯೆಂದು ಹೇಳಲಾಗಿದೆ. ಅಭಿವೃದ್ಧಿ ಒಂದು ಮಜಲನ್ನು ಮುಟ್ಟಿದ ಮೇಲೆ ಅದು ಒಂದು ನಿರ್ದಿಷ್ಟ ಗತಿಯನ್ನು ಪಡೆದುಕೊಂಡ ಮೇಲೆ ಪ್ರಧಾನ-ಅಧೀನವೆಂಬ ವರ್ಗೀಕರಣ ಅಥವಾ ಏಣಿಶ್ರೇಣಿ ಸಹಜವಾಗಿ ಅಳಿಸಿ ಹೋಗುತ್ತದೆ ಎನ್ನಲಾಗಿದೆ. ಅಭಿವೃದ್ಧಿ ಕಾಲಕ್ರಮೇಣ ಎಲ್ಲರನ್ನು ಒಳಗೊಳ್ಳುವ ಗುಣವನ್ನು ಶಕ್ತಿಯನ್ನು ರೂಢಿಸಿಕೊಂಡು ಬಿಡುತ್ತದೆ ಎಂದೂ ಹೇಳಲಾಗಿದೆ. ಇದು ಕೇವಲ 'ಕಾಲ'ದ ಪ್ರಶ್ನೆಯೆಂದು ಸಮಾಜಾಯಿಷಿ ನೀಡಲಾಗುತ್ತಿದೆ.

ಈ ಅಭಿವೃದ್ಧಿ ಪ್ರಣಾಳಿಕೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ ಅದು ನೀಡುವ ಸಮಜಾಯಿಷಿಯು ಕೇವಲ ಭ್ರಮೆಯೆಂಬುದು ತಿಳಿದುಬರುತ್ತದೆ. ರೇಖಾತ್ಮವಾಗಿ ಮೇಲು ಮೇಲಕ್ಕೆ ಏಕಮುಖಿಯಾಗಿ ಸಾಗುವ ಅಭಿವೃದ್ಧಿಯು ಕಾಲಕ್ರಮೇಣ ಸಮಾಜದ ಅಧೀನ ವರ್ಗಕ್ಕೂ ಫಲಗಳನ್ನು ಹರಿಯಬಿಡುತ್ತದೆ ಎಂಬ ಸಮಾಧಾನವು ಕೇವಲ ಒಂದು ಹುನ್ನಾರ. ಏಕೆಂದರೆ ಫಲಗಳ ತಳಮುಖಿ ಹರಿಯುವಿಕೆಗೆ ಅಡ್ಡಲಾಗಿ ಅನೇಕ ಗೋಡೆಗಳಿರುವುದು ತಿಳಿಯದ ಸಂಗತಿಯೇನಲ್ಲ. ಅಭಿವೃದ್ಧಿಯ ಫಲಗಳು ಮೇಲಿನ ಮಜಲಿನಲ್ಲೇ ಮಡುಗಟ್ಟಿಕೊಳ್ಳುವಂತೆ ಮಾಡಲಾಗುತ್ತದೆ. ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ೧೯೯೮ರಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಅಮರ್ತ್ಯಸೇನ್‌ರವರು ಹಸಿವನ್ನು ಕುರಿತಂತೆ ತಮ್ಮ ಆಚಾರ್ಯಕೃತಿ 'ಪಾವರ್ಟಿ ಆಂಡ್ ಫ್ಯಾಮೈನ್' (೧೯೮೧) ರಲ್ಲಿ ಬರೆದಿರುವ ಮೊದಲ ಸಾಲುಗಳು ಹೀಗಿವೆ.

"Starvation is the characteristic of some people not having enough food to eat. It is not the characteristic of their being not enough food to eat"

ಹಸಿವನ್ನು ಕುರಿತಂತೆ ಅಮರ್ತ್ಯಸೇನ್ ಹೇಳಿರುವ ಮಾತುಗಳನ್ನು ಅಭಿವೃದ್ಧಿಗೂ ಅನ್ವಯಿಸಿ ಹೇಳಬಹುದು.

ಸಾಮಾಜಿಕತೆಗೆ ಬೆನ್ನು ತಿರುವಿ:

ಸಾಮಾಜಿಕತೆಗೆ ವಿಮುಖಿಯಾದ, ಸಾಮಾಜಿಕತೆ ಬಗ್ಗೆ ನಿರಪೇಕ್ಷ ಧೋರಣೆ ತಳೆದ ವಿಚಾರ ಪ್ರಣಾಳಿಕೆಯಲ್ಲಿ ಸಮಾನತೆಗೆ ಅವಕಾಶವಿರುವುದಿಲ್ಲ. ಸಾಮಾಜಿಕವಾಗಿ ಖಂಡ ಸ್ವರೂಪಿಯಾದ ಆರ್ಥಿಕತೆಯಲ್ಲಿ ಅಭಿವೃದ್ಧಿಯು ಅಖಂಡ ಸ್ವರೂಪಿಯಾಗಿರಲು ಸಾಧ್ಯವಿಲ್ಲ. ನಮ್ಮ ಸಮಾಜದ ಸಂದರ್ಭದಲ್ಲಿ ಅವಿಭಕ್ತತೆಯು ಅಭಿವೃದ್ಧಿಯ ಲಕ್ಷಣವೇನಲ್ಲ. ಖಂಡ ಸ್ವರೂಪಿ ಸಮಾಜದಲ್ಲಿ ಅಭಿವೃದ್ಧಿಯ ಫಲಗಳು ಸಮಾನವಾಗಿ ಎಲ್ಲ ಸಾಮಾಜಿಕ ಗುಂಪುಗಳಿಗೂ ದೊರೆಯುವುದು ಅವಶ್ಯ. ಏಕೆಂದರೆ ಅಭಿವೃದ್ಧಿಯೆಂಬುದು ದಾನವೂ ಅಲ್ಲ, ದತ್ತಿಯೂ ಅಲ್ಲ. ಅದೊಂದು ದಕ್ಕಿಸಿಕೊಳ್ಳಬೇಕಾದ ಆಸ್ತಿ. ಅಭಿವೃದ್ಧಿಯನ್ನು, ಅದು ಹರಿಯಬಿಡುವ ಅವಕಾಶಗಳನ್ನು ದಕ್ಕಿಸಿಕೊಳ್ಳಲು, ಧಾರಣೆ ಮಾಡಿಕೊಳ್ಳಲು ಅಧಿಕಾರ ಬೇಕು. ಈ ಅಧಿಕಾರವನ್ನು ಅಮರ್ತ್ಯಸೇನ್ ಧಾರಣ ಶಕ್ತಿ ಎಂದು ಕರೆದಿದ್ದಾರೆ. ಈ ಧಾರಣಶಕ್ತಿಯು ಬಂಡವಾಳದಿಂದ, ಸಾಕ್ಷರತೆಯಿಂದ, ಕುಶಲತೆಯಿಂದ, ಜಾತಿಯಿಂದ, ಕಸುಬಿನಿಂದ ಪ್ರದೇಶದಿಂದ ಪ್ರಾಪ್ತವಾಗುತ್ತದೆ. ಅಮರ್ತ್ಯಸೇನ್‌ರವರು ಧಾರಣಶಕ್ತಿಯ ಕೊರತೆಯನ್ನು ಬಡತನವೆಂದೂ, ದುಸ್ಥಿತಿಯೆಂದು ಕರೆದಿದ್ದಾರೆ.

ಅಲಕ್ಷಿತರು ಎಂಬುದನ್ನು ಧಾರಣಶಕ್ತಿಯ ಕೊರತೆಯಿಂದ ಜರ್ಜರಿತರಾದವರೆಂದು ನಿರ್ವಚಿಸಬಹುದಾಗಿದೆ. ಧಾರಣ ಶಕ್ತಿಯ ಮೂಲಧಾತುಗಳಾದ ಬಂಡವಾಳ, ಸಂಪನ್ಮೂಲ, ಸಾಕ್ಷರತೆ, ಆರೋಗ್ಯ, ಕುಶಲತೆ, ಜಾತಿ, ಪ್ರದೇಶ, ಕಸುಬು, ಲಿಂಗ ಮುಂತಾದವುಗಳಿಗೆ ಸಂಬಂಧಿಸಿದಂತೆ ವಂಚಿತರಾಗಿರುವ ಜನವರ್ಗವೇ ಅಲಕ್ಷಿತರು.

ಅಲಕ್ಷಿತರ ಪದತಲ:

ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಸಾಮಾಜಿಕ ಅಸಮಾನತೆಗಳ ಪದಾಘಾತಕ್ಕೆ ಸಿಕ್ಕು, ಸಮಾಜದಲ್ಲಿ ಅಂಚಿಗೆ ದೂಡಲ್ಪಟ್ಟ ಜನರ ಗುಂಪೆ ಅಲಕ್ಷಿತರು. ಆದರೆ ಅಭಿವೃದ್ಧಿಯ ಮೂಲದ್ರವ್ಯ ಮಾತ್ರ ಪರಿಶಿಷ್ಟರ ಪರಿಶ್ರಮವೇ ಆಗಿದೆ. ಆದರೆ ಇವರು ಅಲಕ್ಷಿತರು, ಅಧೀನರು, ಪರಿಶಿಷ್ಟರು. ಅಭಿವೃದ್ಧಿಗೆ ಇವರ ಕಾಣಿಕೆ ಅಪಾರ. ಆದರೆ ಅಭಿವೃದ್ಧಿಯಿಂದ ಇವರಿಗೆ ದೊರೆಯುವ ಫಲಮಾತ್ರ ನಿಕೃಷ್ಟವಾದುದು. ಇದು ಎಷ್ಟು ನಿಕೃಷ್ಟವಾದುದು ಎಂಬುದನ್ನು ಕರ್ನಾಟಕಕ್ಕೆ ಸಂಬಂಧಿಸಿದಂತೆ ಕೆಲವು ಆಯ್ದ ಸೂಚಿಗಳಿಂದ ಗುರುತಿಸಬಹುದಾಗಿದೆ.

ಭೂಮಾಲಿಕತ್ವ:

ಭೂಮಾಲಿಕತ್ವವು ಒಂದು ಸಾಮಾಜಿಕ-ಆರ್ಥಿಕ ಪ್ರತಿಷ್ಠೆಯ ಸಂಗತಿಯಾಗಿದೆ. ಅನಾದಿಕಾಲದಿಂದಲೂ ಉನ್ನತ ಜಾತಿ-ವರ್ಗಗಳು ಭೂಮಾಲಿಕತ್ವದ ಮೇಲೆ ಏಕಸ್ವಾಮ್ಯವನ್ನು ಸಾಧಿಸಿಕೊಂಡು ಬಂದಿವೆ. ಕರ್ನಾಟಕದ (೧೯೯೧) ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟರ ಪ್ರಮಾಣ ಶೇ. ೨೦.೬೪. ಆದರೆ ರಾಜ್ಯದ ಸಾಗುವಳಿದಾರರಲ್ಲಿ ಇವರ ಪಾಲು ಕೇವಲ ಶೇ. ೧೭.೨೬. ಪರಿಶಿಷ್ಟ ದುಡಿಮೆಗಾರ ವರ್ಗದಲ್ಲಿ ಭೂಮಾಲಿಕರ ಪ್ರಮಾಣ ಶೇ. ೨೬.೩೪. ಆದರೆ ಪ್ರತಿಷ್ಠಿತ ವರ್ಗದಲ್ಲಿ ಸಾಗುವಳಿದಾರರ/ ಭೂಮಾಲಿಕರ ಪ್ರಮಾಣ ಶೇ. ೩೬.೪೯ ರಷ್ಟಿದೆ. ಕರ್ನಾಟಕದಲ್ಲಿ ೧೯೯೧ರ ಜನಗಣತಿ ಪ್ರಕಾರ ಒಟ್ಟು ಭೂರಹಿತ ಕೂಲಿಕಾರರ ಸಂಖ್ಯೆ ೫೦ಲಕ್ಷ ಇವರಲ್ಲಿ ಪರಿಶಿಷ್ಟರ ಪ್ರಮಾಣ ಶೇ. ೪೧.೫೯. ಪರಿಶಿಷ್ಟರಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣ ಶೇ. ೪೧.೫೯ ರಷ್ಟಾದರೆ ಅದು ಕೇವಲ ಶೇ. ೩೭.೫೬. ಅಭಿವೃದ್ಧಿಯ ಪದತಲದಲ್ಲಿರುವ ಪರಿಶಿಷ್ಟರು ಅಭಿವೃದ್ಧಿಗೆ ಅಪಾರ ಕಾಣಿಕೆ ನೀಡುತ್ತಿದ್ದಾರೆ. ಅದರಿಂದ ಅವರು ಪಡೆಯುತ್ತಿರುವುದು ಮಾತ್ರ ನಿಕೃಷ್ಟ

ದುಡಿಮೆಗಾರರು:

ಕೃಷಿ, ಗಣಿಗಾರಿಕೆ, ಮೀನುಗಾರಿಕೆ, ಅರಣ್ಯಗಾರಿಕೆ ಮುಂತಾದ ಚಟುವಟಿಕೆಗಳನ್ನು ಒಳಗೊಂಡಿರುವ ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡು ದುಡಿಮೆಗಾರರ ಪ್ರಮಾಣವು ಸಾಪೇಕ್ಷವಾಗಿ ಅಧಿಕವಾಗಿದ್ದರೆ ಅಂತಹ ಆರ್ಥಿಕತೆ ದುಸ್ಥಿತಿಯಲ್ಲಿದೆಯೆಂದು ಅಭಿವೃದ್ಧಿ ಮೀಮಾಂಸೆಯಲ್ಲಿ ಗುರುತಿಸಲಾಗುತ್ತದೆ. ಕರ್ನಾಟಕದಲ್ಲಿ ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡಿರುವ ಪರಿಶಿಷ್ಟ ದುಡಿಮೆಗಾರರ ಪ್ರಮಾಣ ಶೇ. ೮೦.೨೨. ಆದರೆ ಪ್ರತಿಷ್ಠಿತರಲ್ಲಿ ಇದರ ಪ್ರಮಾಣ ಕೇವಲ ಶೇ. ೬೩.೬೪. ಪ್ರಾಥಮಿಕೇತರ ವಲಯಗಳ ಚಟುವಟಿಕೆಗಳಾದ ಉದ್ದಿಮೆ, ಬ್ಯಾಂಕಿಂಗ್, ಸಾರಿಗೆ ಸಂಪರ್ಕ, ಮಾಹಿತಿ ತಂತ್ರಜ್ಞಾನ, ಕಂಪ್ಯೂಟರ್, ವ್ಯಾಪಾರ, ವಾಣಿಜ್ಯ, ಪ್ರವಾಸೋದ್ಯಮ, ಹೋಟೆಲು ಉದ್ಯಮ ಮುಂತಾದವುಗಳ ಅವಲಂಬನೆ ಪರಿಶಿಷ್ಟರಲ್ಲಿ ಕೇವಲ ಶೇ. ೧೯.೭೮. ಪ್ರತಿಷ್ಠಿತರಲ್ಲಿ ಇದು ಶೇ. ೩೬.೩೪ರಷ್ಟಿದೆ.

ಪ್ರಧಾನಧಾರೆ ಅಭಿವೃದ್ಧಿ ಮೀಮಾಂಸೆಯಲ್ಲಿ ಪ್ರತಿಪಾದಿತವಾಗಿರುವಂತೆ ಪ್ರಾಥಮಿಕ ವಲಯದಲ್ಲಿ ತಲಾ ಉತ್ಪನ್ನದ ಪ್ರಮಾಣವು ಪ್ರಾಥಮಿಕೇತರ ವಲಯದ ತಲಾ ಉತ್ಪನ್ನದ ಪ್ರಮಾಣಕ್ಕಿಂತಲೂ ಕಡಿಮೆಯಿರುತ್ತದೆ. ಕರ್ನಾಟಕದಲ್ಲಿ ೧೯೯೫-೯೬ರಲ್ಲಿ ಪ್ರಾಥಮಿಕ ವಲಯದಲ್ಲಿದ್ದ ತಲಾ ಉತ್ಪನ್ನ (ಚಾಲ್ತಿ ಬೆಲೆಗಳಲ್ಲಿ) ರೂ. ೨೭೦೦. ಆದರೆ ಪ್ರಾಥಮಿಕೇತರ ವಲಯದಲ್ಲಿನ ತಲಾ ಉತ್ಪನ್ನದ ಮೊತ್ತ ರೂ. ೧೦,೨೪೭. ಈ ವಿವರದ ಆಧಾರದ ಮೇಲೆ ಕರ್ನಾಟಕದ ಸಂದರ್ಭದಲ್ಲಿ ಯಾವ ವರ್ಗದ ಜನರು ಇಂದು ಪ್ರಾಥಮಿಕೇತರ ವಲಯವನ್ನು ಪ್ರವೇಶಿಸುತ್ತಿದ್ದಾರೆ ಮತ್ತು ನಾಡಿನ ಉತ್ಪನ್ನದಲ್ಲಿ ಅಧಿಕ ಪಾಲನ್ನು ಯಾರು ಪಡೆಯುತ್ತಿದ್ದಾರೆ ಎಂಬುದನ್ನು ಗುರುತಿಸಬಹುದಾಗಿದೆ. ಪರಿಶಿಷ್ಟರು ಪ್ರಾಥಮಿಕ ವಲಯದ ಮೇಲೆ ಮುಗಿಬಿದ್ದಿದ್ದಾರೆ. ಪ್ರತಿಷ್ಠಿತರು ಪ್ರಾಥಮಿಕ ವಲಯದಿಂದ ಪ್ರಾಥಮಿಕೇತರ ವಲಯಗಳ ಕಡೆ ದೌಡಾಯಿಸುತ್ತಿದ್ದಾರೆ. ಇವೆರಡೂ ವಲಯಗಳ ನಡುವಿನ ವರಮಾನ ಸಂಬಂಧಿ ಅಂತರ ರೂ. ೭೫೪೭. ಈ ಅಂತರ-ಅಸಮಾನತೆಯು ತೀವ್ರವಾಗಿ ಬೆಳೆಯುತ್ತಿದೆ.



ಡಾ.ಬಿ.ಆರ್. ಅಂಬೇಡ್ಕರ್

> **ಈ ಅಭಿವೃದ್ಧಿ ಪ್ರಣಾಳಿಕೆಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ ಅದು ನೀಡುವ ಸಮಜಾಯಿಷಿಯು ಕೇವಲ ಭ್ರಮೆಯೆಂಬುದು ತಿಳಿದುಬರುತ್ತದೆ. ರೇಖಾತ್ಮವಾಗಿ ಮೇಲು ಮೇಲಕ್ಕೆ ಏಕಮುಖಿಯಾಗಿ ಸಾಗುವ ಅಭಿವೃದ್ಧಿಯು ಕಾಲಕ್ರಮೇಣ ಸಮಾಜದ ಅಧೀನ ವರ್ಗಕ್ಕೂ ಫಲಗಳನ್ನು ಹರಿಯ ಬಿಡುತ್ತದೆ ಎಂಬ ಸಮಾಧಾನವು ಕೇವಲ ಒಂದು ಹುನ್ನಾರ. ಏಕೆಂದರೆ ಫಲಗಳ ತಳಮುಖಿ ಹರಿಯುವಿಕೆಗೆ ಅಡ್ಡಲಾಗಿ ಅನೇಕ ಗೋಡೆಗಳಿರುವುದು ತಿಳಿಯದ ಸಂಗತಿಯೇನಲ್ಲ. ಅಭಿವೃದ್ಧಿಯ ಫಲಗಳು ಮೇಲಿನ ಮಜಲಿನಲ್ಲೇ ಮಡುಗಟ್ಟಿಕೊಳ್ಳುವಂತೆ ಮಾಡಲಾಗುತ್ತದೆ.**

ಸಾಕ್ಷರತೆ:

ಸಾಕ್ಷರತೆಯು ಅಭಿವೃದ್ಧಿ 'ಸಾಧನ'ವೆಂದು ಮಾತ್ರ ಪರಿಗಣಿಸುತ್ತಾ ಬರಲಾಗಿತ್ತು. ಈಗ ಅದನ್ನು ಅಭಿವೃದ್ಧಿಯ 'ಸಾಧ್ಯವೂ' ಆಗಿದೆಯೆಂದು ಪರಿಗಣಿಸಲಾಗಿದೆ. ಅಭಿವೃದ್ಧಿಯ ಅಂತರ್ಗತ ಭಾಗ ಸಾಕ್ಷರತೆ. ಅಭಿವೃದ್ಧಿಯ ಫಲವೂ ಸಾಕ್ಷರತೆ ಮತ್ತು ಅಭಿವೃದ್ಧಿಯ ಕರ್ತೃವೂ ಸಾಕ್ಷರತೆ. ಧಾರಣ ಶಕ್ತಿಯನ್ನು ನಿರ್ಧರಿಸುವ ಒಂದು ನಿರ್ಣಾಯಕ ಸಂಗತಿ ಸಾಕ್ಷರತೆ.

ಕರ್ನಾಟಕದಲ್ಲಿ(೧೯೯೧) ಒಟ್ಟು ಸಾಕ್ಷರತೆ ಪ್ರಮಾಣ ಶೇ. ೫೬.೦೪. ಆದರೆ ಪರಿಶಿಷ್ಟರ ಸಾಕ್ಷರತೆ ಶೇ. ೩೭.೬೫. ಪ್ರತಿಷ್ಠಿತರ ಸಾಕ್ಷರತೆ ಪ್ರಮಾಣ ಶೇ. ೬೦.೬೩. ರಾಜ್ಯದ ಜನಸಂಖ್ಯೆಯಲ್ಲಿ ಶೇ. ೨೦.೬೪ರಷ್ಟಿರುವ ಪರಿಶಿಷ್ಟರು ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಕೇವಲ ಶೇ. ೧೩.೪೩ರಷ್ಟು ಪಾಲು ಪಡೆದಿದ್ದಾರೆ. ಆದರೆ ರಾಜ್ಯದ ಒಟ್ಟು ಅನಕ್ಷರಸ್ಥರಲ್ಲಿ ಪರಿಶಿಷ್ಟರ ಪಾಲು ಶೇ. ೨೮.೩೬.

ಆರೋಹಣವಾದಿ ಅಸಮಾನತೆ:

ಈ ದೇಶಕ್ಕೆ ಸಂವಿಧಾನವನ್ನು ಅರ್ಪಿಸುತ್ತಾ ಜನವರಿ ೨೬, ೧೯೫೦ರಂದು ಡಾ.ಬಿ.ಆರ್. ಅಂಬೇಡ್ಕರ್ ಹೀಗೆ ನುಡಿದಿದ್ದರು.

"On 26 January 1950, we are going to enter into a life of contradiction. In politics we will have equality and in social and economic life we will have inequality"

ಸಂವಿಧಾನಾತ್ಮಕವಾಗಿ-ಶಾಸನಾತ್ಮಕವಾಗಿ ಅನೇಕ ಬಗೆಯ ರಕ್ಷಣೆಯನ್ನು ದುರ್ಬಲರಿಗೆ-ಪರಿಶಿಷ್ಟರಿಗೆ ಒದಗಿಸಲಾಗಿದೆ. ಆದರೆ ಸಾಮಾಜಿಕವಾಗಿ-ಆರ್ಥಿಕವಾಗಿ ಅಸಮಾನತೆಗಳು ಮುಂದುವರಿಯುತ್ತಿವೆ. ಅಭಿವೃದ್ಧಿಯೆಂಬ ಪಿರಮಿಡ್ಡಿನ ವಿಸ್ತೃತ ಬುನಾದಿಯಲ್ಲಿ ಅಗಾಧ ಸಂಖ್ಯೆಯಲ್ಲಿ ಪರಿಶಿಷ್ಟರು, ಬಡವರು-ವಂಚಿತರು ಸಂದಣಿಗೊಂಡಿದ್ದಾರೆ. ಅದರ ಚೂಪಾದ ಶಿಖರದಲ್ಲಿ ಶಿಷ್ಟ-ಪ್ರತಿಷ್ಠಿತರು ಅತಿ ವಿರಳ ಸಂಖ್ಯೆಯಲ್ಲಿ ನೆಲೆಗೊಂಡಿದ್ದಾರೆ. ಶಿಖರದಲ್ಲಿ ನೆಲೆಗೊಂಡಿರುವ ಜನರ ವರಮಾನವು ತೀವ್ರ ಗತಿಯಲ್ಲಿ ಬೆಳೆಯುತ್ತಿದೆ. ಆದರೆ ಬುನಾದಿಯಲ್ಲಿ ಬಡತನದ ನಿವಾರಣೆಯ ಮಂದಗತಿಯಲ್ಲಿ ಸಾಗುತ್ತಿದೆ. ಇದನ್ನೇ ಆರೋಹಣವಾದಿ ಅಸಮಾನತೆಯೆಂದು ಕರೆಯಲಾಗಿದೆ. ಅಂಬೇಡ್ಕರ್ ಹೇಳಿರುವ ವಿಕೃತಿಗಳು ಇಂದಿಗೂ ಮುಂದುವರಿದಿದ್ದಾವೆ. ಅವು ಮುಖ್ಯವಾಗಿ ಪರಿಶಿಷ್ಟರಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ.

ಅಭಿವೃದ್ಧಿಯ ನಿರ್ವಚನ:

ಪ್ರಧಾನಧಾರೆ ಅಭಿವೃದ್ಧಿ ಮೀಮಾಂಸೆಯಲ್ಲಿ ಸಾಮಾಜಿಕತೆಗೆ ಸ್ಥಾನವಿಲ್ಲದಿರುವುದರಿಂದ ನಮ್ಮ ಸಮಾಜದ ಸಂದರ್ಭದಲ್ಲಿ ಎಲ್ಲರನ್ನು ಒಳಗೊಳ್ಳುವ ರೀತಿಯ ಅಭಿವೃದ್ಧಿ ಸಾಧ್ಯವಿಲ್ಲ. ಏಕೆಂದರೆ ಅದು ಶಿಖರಾಭಿಮುಖಿಯಾದ ಪ್ರಣಾಳಿಕೆಯಾಗಿದೆ. ಅಭಿವೃದ್ಧಿಯನ್ನು ಅಲಕ್ಷಿತರ-ವಂಚಿತರ-ಪರಿಶಿಷ್ಟರ ಪದತಲದಿಂದ ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಇಂತಹ ಪರ್ಯಾಯ ಅಭಿವೃದ್ಧಿ ಮೀಮಾಂಸೆಯ ಮೌಲ್ಯ ನಿರಪೇಕ್ಷವಾಗಿರಲು ಸಾಧ್ಯವಿಲ್ಲ. ಜನರನ್ನು ಕೇವಲ ಫಲಾನುಭವಿಗಳೆಂದು ಪರಿಗಣಿಸುವುದಕ್ಕೆ ಪ್ರತಿಯಾಗಿ ಅವರನ್ನು ಅಭಿವೃದ್ಧಿಯ ಮೂಲದ್ರವ್ಯವಾಗಿ, ಅಭಿವೃದ್ಧಿಯ ನಿಯೋಗಿಗಳಾಗಿ, ಅಭಿವೃದ್ಧಿಯ ಕರ್ತೃಗಳಾಗಿ ಪರಿಭಾವಿಸಿಕೊಳ್ಳುವಂತಹ ಪ್ರಣಾಳಿಕೆಯ ಅಗತ್ಯವಿದೆ. ಅಭಿವೃದ್ಧಿಯನ್ನು ಸೈದ್ಧಾಂತಿಕವಾಗಿ ಅಲಕ್ಷಿತರ-ವಂಚಿತರ-ಪರಿಶಿಷ್ಟರ ನೆಲೆಯಿಂದ ನಿರ್ವಚಿಸಬೇಕಾಗಿದೆ. ಏಕೆಂದರೆ ಧಾರಣಶಕ್ತಿಯ ಕೊರತೆಯಿಂದ ನರಳುತ್ತಿರುವ ಜನವರ್ಗವು ಅಭಿವೃದ್ಧಿಯ ಲಕ್ಷ್ಯವಾಗಬೇಕು. ಪ್ರಾಥಮಿಕ ವಲಯದಲ್ಲಿ ಹಸಿವು ಅನಾರೋಗ್ಯ, ಅನಕ್ಷರತೆ, ಅಸಮಾನತೆಗಳಿಂದ ಜರ್ಜರಿತರಾದವರನ್ನು ಅಭಿವೃದ್ಧಿಯು ಒಳಗೊಳ್ಳಬೇಕಾಗುತ್ತದೆ.

ವರಮಾನದ ವರ್ಧನೆಯೇ ಅಭಿವೃದ್ಧಿಯೆಂಬ ಸೀಮಿತ ನೆಲೆಯ ನಿರ್ವಚನವನ್ನು ಕೈಬಿಡಬೇಕಾಗಿದೆ. ಧಾರಣಶಕ್ತಿಯ ಸಂವರ್ಧನೆಯನ್ನು ಅಭಿವೃದ್ಧಿಯೆಂದು ಪರಿಗಣಿಸುವ ಅಗತ್ಯವಿದೆ. ಹೀಗೆ ಅದನ್ನು ಪರಿಭಾವಿಸಿಕೊಂಡಾಗ ಮಾತ್ರ ಪರಿಶಿಷ್ಟರು ಅಭಿವೃದ್ಧಿಯ ಪರಿಧಿಯೊಳಗೆ ಬರಲು ಸಾಧ್ಯ. ಧಾರಣಶಕ್ತಿಯ ಸಂವರ್ಧನೆಯೆಂದಾಗ ಅನಕ್ಷರಸ್ಥರಿಗೆ ಅಕ್ಷರಜ್ಞಾನ ನೀಡುವುದೂ ಆದ್ಯತೆಯಾಗುತ್ತದೆ. ವಸತಿಹೀನರಿಗೆ ವಸತಿ ಒದಗಿಸುವುದು ಆದ್ಯತೆಯಾಗುತ್ತದೆ. ಅಲಕ್ಷಿತರ ಗುಂಪಿನಲ್ಲಿರುವ ಬಹುದೊಡ್ಡ ವರ್ಗವೆಂದರೆ ಮಹಿಳೆಯರು. ಕರ್ನಾಟಕದಲ್ಲಿ (೧೯೯೧) ನಗರದ ಪ್ರತಿಷ್ಠಿತ ಮಹಿಳೆಯರ ಸಾಕ್ಷರತೆ ಶೇ. ೬೫.೭೪. ಆದರೆ ಗ್ರಾಮೀಣ ಪರಿಶಿಷ್ಟ ಮಹಿಳೆಯರ ಸಾಕ್ಷರತೆ ಶೇ. ೧೯.೨೩. ಇವೆರಡರ ನಡುವಿನ ಅಂತರ ಶೇ. ೪೬.೫೧ ಅಂಶಗಳಷ್ಟಿದೆ. ಅಭಿವೃದ್ಧಿಯನ್ನು ಶೇ. ೬೫.೭೪ರಷ್ಟು ಸಾಕ್ಷರತೆ ಸಾಧಿಸಿಕೊಂಡಿರುವ ನಗರ ಪ್ರತಿಷ್ಠಿತ ಮಹಿಳೆಯರ ನೆಲೆಯಿಂದ ಪರಿಭಾವಿಸಿಕೊಳ್ಳಬೇಕೋ ಅಥವಾ ಶೇ. ೧೯.೨೩ರಷ್ಟು ಸಾಕ್ಷರತೆ ಸಾಧಿಸಿಕೊಂಡಿರುವ ಗ್ರಾಮೀಣ ಪರಿಶಿಷ್ಟ ಮಹಿಳೆಯರ ನೆಲೆಯಿಂದ ನಿರ್ವಚಿಸಿಕೊಳ್ಳಬೇಕೋ?

ಅಭಿವೃದ್ಧಿಯನ್ನು ಕೇವಲ ಬಂಡವಾಳ- ಉಳಿತಾಯ-ಅನುಭೋಗ-ಉತ್ಪಾದನೆ ಮುಂತಾದ ಸಂಗತಿಗಳ ಒಂದು ಫಲವೆಂದು ನಿರ್ವಚಿಸಿಕೊಳ್ಳುವ ಕಾಲ ಮುಗಿದು ಹೋಗಿದೆ. ಅಭಿವೃದ್ಧಿಯನ್ನು, ಅದು ಹರಿಯ ಬಿಡುವ ಅವಕಾಶಗಳನ್ನು ದಕ್ಕಿಸಿಕೊಳ್ಳಲು- ಧಾರಣೆ ಮಾಡಿಕೊಳ್ಳಲು ಸಾಧ್ಯವಾಗುವಂತೆ ಮಾಡಿ ರುವ ಸಾಮಾಜಿಕ ಅಸಮಾನತೆಗಳನ್ನು ಪರಿಹರಿಸುವಂತಹ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಮಾತ್ರ ಅಲಕ್ಷಿತರ-ಅಧೀನವರ್ಗದ ಅಭಿವೃದ್ಧಿ ಸಾಧ್ಯ.

ಸ್ವಾತಂತ್ರ್ಯದಿಂದ ವಂಚಿತರು:

ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಆದರೆ ಅಲಕ್ಷಿತರಿಗೆ, ಪರಿಶಿಷ್ಟರಿಗೆ, ಹಸಿವಿನಿಂದ, ಅನಾರೋಗ್ಯದಿಂದ, ಅನಕ್ಷರತೆಯಿಂದ, ಅಸಮಾನತೆಯಿಂದ, ಆಹಾರದ ಅಭದ್ರತೆಯಿಂದ, ಆಶ್ರಯ ಹೀನತೆಯಿಂದ ಬಿಡುಗಡೆ ದೊರೆತಿಲ್ಲ. ಇವೆಲ್ಲಕ್ಕಿಂತ ಹೆಚ್ಚಾಗಿ ಅವರಿಗೆ ಸಾಮಾಜಿಕ ಸಂಕೋಲೆಯಿಂದ ಮುಕ್ತಿ ದೊರೆತಿಲ್ಲ. ಅಭಿವೃದ್ಧಿಯು ಹರಿಯಬಿಡುವ ಅವಕಾಶಗಳನ್ನು ದಕ್ಕಿಸಿಕೊಳ್ಳಲು ಅಗತ್ಯವಾದ ಸಾಮರ್ಥ್ಯದಿಂದ ಹಾಗೂ ಸ್ವಾತಂತ್ರ್ಯದಿಂದ ಅವರು ವಂಚಿತರಾಗಿದ್ದಾರೆ. ಇವೆರಡೂ ಗುಣಗಳಿಂದ ಕೂಡಿದ ಸಂಗತಿಯೇ 'ಧಾರಣಶಕ್ತಿ'.

> **ಅಭಿವೃದ್ಧಿಯ ಆರಂಭವು ಅಲಕ್ಷಿತರ ಪದತಲದಿಂದಲೇ ಆರಂಭಗೊಳ್ಳಬೇಕು. ಡಾ.ಬಿ.ಆರ್. ಅಂಬೇಡ್ಕರ್ ಹೇಳಿರುವ ವಿಕೃತಿಗಳನ್ನು ತೊಡೆದು ಹಾಕದೆ ಸತ್ವಪೂರ್ಣ ಸಮಾನತೆ ಸಾಧ್ಯವಿಲ್ಲ. ಸಾಮಾಜಿಕ ಸಂಕೋಲೆಗಳಿಂದ ಬಿಡುಗಡೆಗೊಳಿಸದೆ ಅಲಕ್ಷಿತರ ಅಭಿವೃದ್ಧಿಯು ಸಾಧ್ಯವಿಲ್ಲ. ಅಭಿವೃದ್ಧಿಯು ತನ್ನಷ್ಟಕ್ಕೆ ತಾನೆ, ಸಹಜವಾಗಿ ಮತ್ತು ನಿರ್ಲಿಪ್ತವಾಗಿ ಕೆಳಸ್ತರದಲ್ಲಿರುವ ಜನರಿಗೆ ಫಲಗಳನ್ನು ಹರಿಸಿಬಿಡುವುದಿಲ್ಲ. ಇದಕ್ಕೆ ಪ್ರಜ್ಞಾಪೂರ್ವ ಪ್ರಯತ್ನಿಸಬೇಕಾಗುತ್ತದೆ.**

ಹೈದರಾಬಾದ್-ಕರ್ನಾಟಕ ಪ್ರದೇಶದ ೫ ಜಿಲ್ಲೆಗಳಲ್ಲಿನ ಭೂರಹಿತ ಕೂಲಿಕಾರರ ಸಂಖ್ಯೆ ೧೪.೨೦ ಲಕ್ಷ. ಇವರಲ್ಲಿ ಮಹಿಳೆಯರ ಪ್ರಮಾಣ ಶೇ. ೫೫.೭೦. ಇವರ ದಿನಗೂಲಿ ರೂ.೧೫ರಿಂದ ರೂ.೨೦ ದಾಟಿಲ್ಲ. ಇವರೆಲ್ಲ ಅನಕ್ಷರಸ್ಥರು. ಕೆಳಜಾತಿ ವರ್ಗಕ್ಕೆ ಸೇರಿದವರು. ಹೊಟ್ಟೆ-ಬಟ್ಟೆಗೆ ದಿನಗೂಲಿ ಸಾಕಾಗುವುದಿಲ್ಲ. ಆದರೆ ಕೂಲಿ ಮಾಡದೆ ಬೇರೆ ಮಾರ್ಗವಿಲ್ಲ. ಇವರಿಗೆ ಸ್ವಾತಂತ್ರ್ಯವೇ ಇಲ್ಲ. ಧಾರಣಶಕ್ತಿಯ ದುಸ್ಥಿತಿಯಿಂದ ನರಳುತ್ತಿದ್ದಾರೆ.

ಮನಸ್ಸಿಲ್ಲದಿದ್ದರೂ ಅಸಹ್ಯವೆನಿಸಿದರೂ ಗ್ರಾಮಗಳಲ್ಲಿ ದಣಿಗಳ ಮನೆಗಳಲ್ಲಿ ದನಗಳು ಸತ್ತರೆ ಅವುಗಳನ್ನು ಊರಾಚೆ ಎತ್ತಿಕೊಂಡು ಹೋಗಿ ಬಿಸಾಡುವ ಕೆಲಸವನ್ನು ಗ್ರಾಮದ ಕೆಲವು ನಿರ್ದಿಷ್ಟ ಕುಟುಂಬಗಳು ಮಾಡಬೇಕು. ಇದೊಂದು ಸಾಮಾಜಿಕ ಕಟ್ಟಳೆ. ಇದನ್ನು ತಿರಸ್ಕರಿಸುವಂತಿಲ್ಲ. ಈ ಕೆಲಸವನ್ನು ಮಾಡುವುದಿಲ್ಲವೆಂದು ಹೇಳುವಂತಿಲ್ಲ. ಇದಕ್ಕೆ ನಿರ್ದಿಷ್ಟವಾಗಿ ಯಾವುದೇ ಕೂಲಿಯಿಲ್ಲ.

ಪ್ರೌಢಶಾಲೆಗೆ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದ ಪರಿಶಿಷ್ಟ ಯುವತಿಯೊಬ್ಬಳಿಗೆ ಹಳ್ಳಿಯೊಂದರಲ್ಲಿ ಹೊಲಿಗೆ ಕಲಿಯಬೇಕೆಂಬ ಆಸೆ. ಆದರೆ ಜಾತಿ ಕಾರಣದಿಂದ- ಅಸ್ಪೃಶ್ಯತೆಯ ಆಚರಣೆಯಿಂದ ಖಾಸಗಿಯಾಗಿ ಹೊಲಿಗೆ ಕಲಿಸಿಕೊಡುತ್ತಿರುವ ಶಿಷ್ಟ ಮಹಿಳೆಯೊಬ್ಬಳು ಯುವತಿಗೆ ಹೊಲಿಗೆ ಕಲಿಸಲು ತಿರಸ್ಕರಿಸುತ್ತಾಳೆ. ಅವಕಾಶವನ್ನು ದಕ್ಕಿಸಿಕೊಳ್ಳಲು ಸಾಮರ್ಥ್ಯವಿದ್ದರೂ ಸಾಮಾಜಿಕ ಕಟ್ಟಳೆ ಇಲ್ಲಿ ಅಡ್ಡಿಯಾಗಿದೆ. ಈ ಪರಿಶಿಷ್ಟ ಯುವತಿಯು ಅಭಿವೃದ್ಧಿಯಿಂದ- ಸ್ವಾತಂತ್ರ್ಯದಿಂದ ವಂಚಿತಳಾಗಿದ್ದಾಳೆ. ಅಭಿವೃದ್ಧಿ ಸಂಬಂಧಿ ವಿಚಾರ ಪ್ರಣಾಳಿಕೆಯು ಇಂತಹ ಆತಂಕಕಾರಿ ಸಾಮಾಜಿಕ ಸಂಗತಿಗಳನ್ನು ಎದುರಿಸದಿದ್ದರೆ ಅದು ಅರ್ಥಪೂರ್ಣವಾಗಲು ಫಲಪ್ರದವಾಗಲು ಸಾಧ್ಯವಿಲ್ಲ. ಅಭಿವೃದ್ಧಿಗೆ ಸಂಬಂಧಿಸಿದಂತೆ ನಾವು ಮುಖ್ಯವಾಗಿ ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ 'ಯಾರ ಅಭಿವೃದ್ಧಿ?' ಎಂಬುದಾಗಿದೆ.

ಈ ಕಾರಣದಿಂದಾಗಿ ಅಭಿವೃದ್ಧಿಯ ಆರಂಭವು ಅಲಕ್ಷಿತರ ಪದತಲದಿಂದಲೇ ಆರಂಭಗೊಳ್ಳಬೇಕು. ಡಾ.ಬಿ.ಆರ್. ಅಂಬೇಡ್ಕರ್ ಹೇಳಿರುವ ವಿಕೃತಿಗಳನ್ನು ತೊಡೆದು ಹಾಕದೆ ಸತ್ವಪೂರ್ಣ ಸಮಾನತೆ ಸಾಧ್ಯವಿಲ್ಲ. ಸಾಮಾಜಿಕ ಸಂಕೋಲೆಗಳಿಂದ ಬಿಡುಗಡೆಗೊಳಿಸದೆ ಅಲಕ್ಷಿತರ ಅಭಿವೃದ್ಧಿಯು ಸಾಧ್ಯವಿಲ್ಲ. ಅಭಿವೃದ್ಧಿಯ ಅವಕಾಶಗಳು ಯತೇಚ್ಛವಾಗಿರಬಹುದು. ಆದರೆ ಅವುಗಳನ್ನು ಧಾರಣೆ ಮಾಡಿಕೊಳ್ಳಲು ಅಗತ್ಯವಾದ ಸ್ವಾತಂತ್ರ್ಯದ ಅಗತ್ಯವಿದೆ. ಅಭಿವೃದ್ಧಿಯು ತನ್ನಷ್ಟಕ್ಕೆ ತಾನೆ, ಸಹಜವಾಗಿ ಮತ್ತು ನಿರ್ಲಿಪ್ತವಾಗಿ ಕೆಳಸ್ತರದಲ್ಲಿರುವ ಜನರಿಗೆ ಫಲಗಳನ್ನು ಹರಿಸಿಬಿಡುವುದಿಲ್ಲ. ಇದಕ್ಕೆ ಪ್ರಜ್ಞಾಪೂರ್ವ ಪ್ರಯತ್ನಿಸಬೇಕಾಗುತ್ತದೆ. ಪ್ರಜ್ಞಾಪೂರ್ವ ಪ್ರಯತ್ನಗಳನ್ನು ಒಳಗೊಂಡ ಅಭಿವೃದ್ಧಿ ಮೀಮಾಂಸೆಯ ಅಗತ್ಯವಿದೆ.

ಅಲಕ್ಷಿತರ ಪದತಲದಿಂದ ಅಭಿವೃದ್ಧಿಯನ್ನು ನಿರ್ವಚಿಸುವ ಪ್ರಯತ್ನವನ್ನು ಮಾಡಬೇಕಾಗಿದೆ. ಇದುವರೆವಿಗೂ ರೂಪುಗೊಂಡಿರುವ, ಪ್ರಧಾನಧಾರೆಯೆಂಬ ಪದವಿ ಪಡೆದುಕೊಂಡಿರುವ ಅಭಿವೃದ್ಧಿ ವಿಚಾರ ಪ್ರಣಾಳಿಕೆಗಳು ಅಲಕ್ಷಿತರಿಗೆ-ಪರಿಶಿಷ್ಟರಿಗೆ ಅಲಿಪ್ತವಾಗುಳಿದು ಬಿಟ್ಟಿವೆ. ಅಲಕ್ಷಿತರನ್ನು ಅಲಾಯದವಾಗಿಟ್ಟು ಅಭಿವೃದ್ಧಿಯ ಆರಂಬವು ನಡೆದಿದೆ. ಇದನ್ನು ಬದಲಾಯಿಸಬೇಕಾಗಿದೆ. ಇದಕ್ಕೆ ಅಲಕ್ಷಿತರ ಸಂಘಟನೆಯಾಗಬೇಕು. ನಮ್ಮ ನೆಲೆಯಿಂದಲೇ ಅಭಿವೃದ್ಧಿ ಆರಂಭವಾಗಬೇಕು ಮತ್ತು ಅಭಿವೃದ್ಧಿಯ ಆರಂಬ ನಡೆಯಬೇಕು ಎಂಬುದನ್ನು ಅಲಕ್ಷಿತರು ಒತ್ತಾಯಿಸಬೇಕು. ಇದು ದಾನ-ದತ್ತಿ-ಭಿಕ್ಷೆಗೆ ಸಂಬಂಧಿಸಿದ ಪ್ರಶ್ನೆಯಲ್ಲ. ಪರಿಶ್ರಮಕ್ಕೆ ಪ್ರಾಪ್ತವಾಗಬೇಕಾದ ಪ್ರತಿಫಲ ವಾಗಿದೆ.

(ಟಿಪ್ಪಣಿ: ಇಲ್ಲಿ ಪರಿಶಿಷ್ಟರ ಜನಸಂಖ್ಯೆ, ದುಡಿಮೆಗಾರರು ಮತ್ತು ಸಾಕ್ಷರತೆ ಬಗ್ಗೆ ಬಳಸಿರುವ ಅಂಕಿ-ಸಂಖ್ಯೆಗಳನ್ನು ೧೯೯೧ರ ಜನಗಣತಿ ವರದಿಗಳಿಂದ ಆಯ್ದುಕೊಳ್ಳಲಾಗಿದೆ. ಏಕೆಂದರೆ ಪರಿಶಿಷ್ಟರ ಜನಸಂಖ್ಯೆ ಮತ್ತು ಸಾಕ್ಷರತೆಗೆ ಸಂಬಂಧಿಸಿದ ೨೦೦೧ರ ಜನಗಣತಿ ವಿವರಗಳು ಇನ್ನು ಪ್ರಕಟವಾಗಿಲ್ಲ. ಅವು ೨೦೦೪ರಲ್ಲಿ ಪ್ರಕಟವಾಗುವ ನಿರೀಕ್ಷೆಯಿದೆ.) □

ಕೋಮುವಾದಕ್ಕೆ ಎದುರಾಗಿ
ಧಾರ್ಮಿಕ ಉತ್ತರಗಳ ಸ್ವರೂಪ


○ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು

ಜಗತ್ತಿನ ಯಾವುದೇ ಧರ್ಮದ ಮೂಲ ಸತ್ವವೇ ಮನುಷ್ಯ-ಮನುಷ್ಯರ ನಡುವೆ ಸಮಾನತೆಯ ಸಾರವನ್ನು ಬಿತ್ತುವುದು ಮತ್ತು ಅದಕ್ಕಾಗಿ ಪ್ರೇರಣೆಯಾಗುವುದು. ಆದರೆ, ಇತ್ತೀಚೆಗೆ ಧರ್ಮಗಳ ಬಗ್ಗೆ ತಮ್ಮದೇ ಆದ ಆತಂಕಕಾರಿ ವ್ಯಾಖ್ಯಾನ ನೀಡಲು ಹೊರಟಿರುವ ಮತೀಯ ಶಕ್ತಿಗಳು ಧಾರ್ಮಿಕ ಕಲಹಗಳನ್ನು ಸೃಷ್ಟಿಸಿ, ಸಾಮಾಜಿಕ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿವೆ. ಧರ್ಮದ ನೆಲೆಯ ನೈಜ ನಂಬಿಕೆಗಳು ಮತ್ತು ಆಚರಣೆಗಳ ಮೂಲಕ ಕೋಮುವಾದಿ ಶಕ್ತಿಗಳನ್ನು ಖಂಡಿತಾ ಹಿಮ್ಮೆಟ್ಟಿಸಬಹುದು ಎಂಬ ದೃಢತೆ ಇಂದಿನ ಅಗತ್ಯ.

ಮೇಲ್ನೋಟಕ್ಕೆ ಜಾತಿ-ಮತ-ಧರ್ಮ ಒಂದೇ ಎನಿಸಿದರೂ ಆಂತರ್ಯದಲ್ಲಿ ಅವು ವಿಭಿನ್ನ ಧೋರಣೆಗಳನ್ನು ಅಳವಡಿಸಿಕೊಂಡಿವೆ. ಜಾತಿ ಸಂಕುಚಿತತೆಯನ್ನು, ಮತ ಮೌಢ್ಯವನ್ನು ಧರ್ಮ ದಯಾಗುಣವನ್ನು ಎತ್ತಿ ಹಿಡಿಯುವಂತಹವುಗಳು. ಜಿಡ್ಡುಗಟ್ಟಿದ ಜಾತ್ಯಂಧತೆ, ತುಕ್ಕು ಹಿಡಿದ ಮತಾಂಧತೆ, ಮಾನವೀಯತೆಯನ್ನೇ ಮರೆತ ಧರ್ಮಾಂಧತೆ ಜಂಗಮವನ್ನೇ ಜಡವಾಗಿಸಿ ಜೀವಸಂಕುಲವನ್ನೇ ನುಂಗಿನೊಣೆಯುವ ಬಕಾಸುರನಂತಾಗುತ್ತಿವೆ. 'ತೆರಣಿಯ ಹುಳು ತನ್ನ ಸ್ನೇಹದಿ ಮನೆಯ ಮಾಡಿ ತನ್ನ ನೂಲು ತನ್ನನೇ ಸುತ್ತಿ ಸಾವ ತೆರವಂತೆ' ಈ ಅಂಧತ್ವದ ಗೂಡುಗಳು ಸರ್ವವಿನಾಶಕ್ಕೆ ಕೈಬೀಸಿ ಕರೆಯುತ್ತಿವೆ. ಸೂಕ್ಷ್ಮತೆಯನ್ನು ಬಿಂಬಿಸಬೇಕಾದ, ಹೃದಯವನ್ನು ಅರಳಿಸಬೇಕಾದ, ಕೋಮಲತೆಯನ್ನು ಕಲಿಸಬೇಕಾದ ಧರ್ಮ ಇವುಗಳಿಗೆ ವಿರುದ್ಧವಾಗಿ ಜೀವನೋತ್ಸಹವೇ ಬತ್ತಿಹೋಗುವಂತೆ, ಬದುಕು ಮುರುಟಿಹೋಗುವಂತೆ ಮಾಡುತ್ತಿದೆ.

ಇಂದಂತೂ ಇಡೀ ವಿಶ್ವವನ್ನೇ ಜಾತ್ಯಂಧತೆ, ಮತಾಂಧತೆ, ಧರ್ಮಾಂಧತೆ ಆವರಿಸಿ ಕೋಮುದಳ್ಳುರಿಗೆ ತುಪ್ಪ ಸುರಿಯುತ್ತಿದೆ. ಕೋಮುವಾದದ ಆಳ, ಅಗಲಗಳ ಅರಿವು ಯಾರಿಗೂ ಆಗುತ್ತಿಲ್ಲ, ಅವುಗಳ ಸದುದ್ದೇಶ, ದುರುದ್ದೇಶ; ಗುರಿ, ಗಮ್ಯಗಳನ್ನೂ ತಿಳಿಯಲಾಗುತ್ತಿಲ್ಲ. ಈ ಕೋಮುವಾದ ಮನುಷ್ಯರಿಗೆ ಮಾತ್ರ ಏಕೆ ಅಂಟಿಕೊಂಡಿದೆ? ಮನುಷ್ಯನ ಪಂಚೇಂದ್ರಿಯಗಳ ಆಟಾಟೋಪ, ಮನದಲ್ಲೇ ಮನೆಮಾಡಿರುವ ಅರಿಷಡ್ವರ್ಗಗಳು ಪಂಚಭೂತಗಳನ್ನೇ ಕಲುಷಿತ ಗೊಳಿಸುವಷ್ಟು ವಿರಾಟ್‌ರೂಪ ತಳೆಯುತ್ತಿವೆ. ಇದಕ್ಕೆಲ್ಲ ಕಾರಣ ಏನು ಎಂದು ಅಂತರಂಗದಲ್ಲೇ ಶೋಧನೆ ಮಾಡಿದರೆ 'ಮಾನವನ ಸ್ವಾರ್ಥಲಾಲಸೆ' ಎನ್ನುವ ಉತ್ತರ ದೊರೆಯುತ್ತದೆ. ಮಾನವನ ಸ್ವಾರ್ಥಕ್ಕೆ ಮಿತಿ ಎಂಬುದೇ ಇಲ್ಲ. ಅದು ಜಗದಗಲ, ಮುಗಿಲಗಲ, ಮಿಗೆಯಗಲ, ಅದರ ಎತ್ತರ ಬಿತ್ತರಗಳನ್ನು ಕಂಡುಕೊಳ್ಳುವುದೇ ಕಷ್ಟಸಾಧ್ಯ.

ಈ ಲೋಕದಲ್ಲಿ ನಿತ್ಯಸತ್ಯ ಎನ್ನುವುದು ಯಾವುದೂ ಇಲ್ಲ. ನಿತ್ಯ, ಶಾಶ್ವತ ಎನ್ನುವುದು ಮನಸ್ಸಿನ ಭ್ರಮೆಯಷ್ಟೆ. ಹುಟ್ಟಿದ್ದು ಸಾಯಲೇಬೇಕು. ಮನುಷ್ಯ ಸತ್ತಾಗ ಬಿಟ್ಟು ಹೋಗುವುದೇನು? ತನ್ನೊಂದಿಗೆ ಕಟ್ಟಿಕೊಂಡು ಹೋಗುವುದೇನು? ಎಲ್ಲರಿಗೂ ಇದರ ಅರಿವು ಇದ್ದೇ ಇದೆ. ಬಾಹ್ಯವಾಗಿ ಸಂಪಾದಿಸಿದ ಸಂಪತ್ತು, ಅಧಿಕಾರ, ಸಂಸಾರ, ಮಕ್ಕಳು ಹೀಗೆ ಯಾವುದೂ ಸತ್ತವರೊಂದಿಗೆ ಬರುವುದಿಲ್ಲ, ಬರುವುದೆಂದರೆ ಒಳ್ಳೆಯದು, ಕೆಟ್ಟದ್ದು, ಕೀರ್ತಿ, ಅಪಕೀರ್ತಿ. ಇದೆಲ್ಲ ಗೊತ್ತಿದ್ದೂ ಮನುಷ್ಯ ಭೋಗಸಾಮ್ರಾಜ್ಯದ ಅಧಿಪತಿ ತಾನಾಗುವ ಕನಸು ಕಾಣುತ್ತಾನೆ. ಲೌಕಿಕ ಸುಖಕ್ಕಾಗಿ ಹಾತೊರೆಯುತ್ತಾನೆ. ಹೇಗಾದರೂ ಸರಿ; ತನಗೆ ಸಂಪತ್ತು ಸಿಗಬೇಕು, ಅಧಿಕಾರ ದೊರೆಯಬೇಕು, ಕಾಮನೆಗಳನ್ನು ಅನುಭವಿಸಬೇಕು ಎನ್ನುವ ಹಪಾಹಪಿಯಲ್ಲಿ ಮನುಷ್ಯತ್ವವನ್ನೇ ಮರೆಯುತ್ತಾನೆ. ಸ್ವಾರ್ಥಸಾಧನೆಗಾಗಿ 'ಹೊತ್ತು ಬಂದಂತೆ ಕೊಡೆ ಹಿಡಿಯುತ್ತಾನೆ.' ಇದು ಧರ್ಮವೇ ಎಂದು ಒಂದು ಕ್ಷಣ ಧ್ಯಾನಿಸಬೇಕಾಗಿದೆ.

ಮನುಷ್ಯತ್ವ ಮರೆತರೂ ಚಿಂತೆಯಿಲ್ಲ ಎಂದು ಏನೇನೋ ಮಾಡಿ ಮನುಷ್ಯ ಮನೆ ಕಟ್ಟುವನು. ತನ್ನ ರೀತಿ, ನೀತಿ, ಸ್ವಭಾವಗಳನ್ನು ಉದಾತ್ತೀಕರಿಸಿಕೊಳ್ಳದೆ ಧರ್ಮವನ್ನು ಮುಂದೆ ಮಾಡಿಕೊಂಡು ಮಂದಿರ, ಮಸೀದಿ, ಚರ್ಚ್ ಮತ್ತೇನನ್ನೋ ಕಟ್ಟುವನು. ಅದಕ್ಕಾಗಿ ಮತ್ಸರಕ್ಕೆ ಮನ್ನಣೆ ನೀಡುವನು. ಅಸೂಯೆ ಹೆಡೆಯಾಡಲು ಕಾರಣನಾಗುವನು. ಹಲವರ ದ್ವೇಷ ಕಟ್ಟಿಕೊಳ್ಳುವನು. ತನಗಾಗದವರೆಂದು ಅವರೊಂದಿಗೆ ಮತ್ಸರ ಕಾರುತ್ತ ದ್ವೇಷ, ಅಸೂಯೆಯ ಅಭದ್ರ ಕೋಟೆಯನ್ನು ನಿರ್ಮಿಸಿಕೊಳ್ಳುವನು. ತನ್ನ, ತನ್ನವರ ರಕ್ಷಣೆಯ ಹೆಸರಿನಲ್ಲಿ ಕಟ್ಟಿಕೊಳ್ಳುವ ಈ ಬೇಲಿ ಕ್ರಮೇಣ ತನಗೆ, ತನ್ನವರಿಗೇ ಬಂಧೀಖಾನೆಯಾಗುತ್ತದೆ ಎನ್ನುವ ಸತ್ಯ ಆಗ ಅವನಿಗೆ ಗೋಚರವಾಗದು. ಈ ಜಾತಿ, ಮತ, ಧರ್ಮಗಳೂ ಸಹ ಅಂಥ ಬಂಧೀಖಾನೆಗಳಾಗಿ ನೆಮ್ಮದಿಯ ಬದುಕನ್ನೇ ಕಿತುಕೊಳ್ಳುವವು. ಸತ್ಯಮ್, ಶಿವಮ್, ಸುಂದರಮ್ ಎನ್ನುವ ತತ್ವವನ್ನು ಮುಚ್ಚಿಹಾಕಿ ಸುಳ್ಳು, ಅಮಂಗಳ, ಕೆಡುಕಿನ ಬಲೆಯಲ್ಲಿ ಮನುಷ್ಯ ಸಿಕ್ಕು ಕೊರಗಿ ಕರಗುವಂತೆ ಮಾಡುವವು.

ಇಂದಂತೂ ಜಾತ್ಯಂಧತೆ, ಮತಾಂಧತೆ, ಧರ್ಮಾಂಧತೆಯ ದುರಭಿಮಾನ ಸ್ವರ್ಗ, ಮರ್ತ್ಯ, ಪಾತಾಳಗಳನ್ನೂ ಬಿಡದೆ ಆವರಿಸಿದೆ. ಈ ಪೈಶಾಚಿಕ ಪ್ರವೃತ್ತಿ ಜಗತ್ತಿನ ಎಲ್ಲ ಜನರ ರಕ್ತದಲ್ಲಿ ಬೆರೆತುಹೋಗಿದೆ. ಯಾವ ಧರ್ಮಾನುಯಾಯಿಗಳ ಮನದಲ್ಲೂ ನೆಮ್ಮದಿ ಇಲ್ಲ, ಹೃದಯದಲ್ಲಿ ಪ್ರೀತಿಯ ಸೆಲೆ ಬತ್ತುತ್ತಿದೆ. ಮನದಲ್ಲಿ ಮತ್ಸರ, ಹೃದಯದಲ್ಲಿ ಹಾಲಾಹಲ ತುಂಬಿಕೊಂಡು ಮನುಷ್ಯ ಅಗ್ನಿಕುಂಡವಾಗುತ್ತಲಿದ್ದಾನೆ. ಮನುಷ್ಯತ್ವಕ್ಕೆ ಮನ್ನಣೆಯೇ ಇಲ್ಲ ಎನ್ನುವಂತಾಗಿದೆ. ಎಲ್ಲ ಸದ್ಗುಣ, ಸದ್ಭಾವನೆ, ಸದ್ವಿಚಾರಗಳನ್ನು ಧರ್ಮಾಂಧತೆ, ಮತಾಂಧತೆ, ಜಾತ್ಯಂಧತೆ ಎನ್ನುವ ರಾಕ್ಷಸರು ನುಂಗಿ ನೀರು ಕುಡಿಯುತ್ತಿದ್ದಾರೆ. ಇವುಗಳ ಮುಂದೆ ಆದರ್ಶಗಳು ಅರ್ಥ ಕಳೆದುಕೊಳ್ಳುತ್ತಿವೆ. ಬದುಕು ಸಾಯುತ್ತಿದೆ. ಬೆಂಕಿ ತನ್ನ ಕೆನ್ನಾಲಿಗೆಯನ್ನು ಚಾಚಿ ಸಿಕ್ಕದ್ದನ್ನೆಲ್ಲ ಸುಟ್ಟು ಬೂದಿ ಮಾಡಲು ತುದಿಗಾಲಮೇಲೆ ನಿಂತಿದೆ. ಆದರೂ ಮನುಷ್ಯನಿಗೆ ತನ್ನ ತಪ್ಪಿನ ಅರಿವಾಗುತ್ತಿಲ್ಲ. ಅರಿವಾದರೂ ತಿದ್ದಿ ಕೊಳ್ಳುವ ಬುದ್ಧಿ ಬರುತ್ತಿಲ್ಲ.

ಈಗ ಭಾರತದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಜಗತ್ತಿನ ಮುಂದೆ ಭಾರತೀಯರು ತಲೆತಗ್ಗಿಸುವಂತೆ ಮಾಡುತ್ತಿವೆ. ಮುಖ್ಯವಾಗಿ ಹಿಂದೂ ಮುಸ್ಲೀಮ್ ಎಂಬ ಮಹದಗ್ನಿಕುಂಡ ಈ ನೆಲದ ಸಂಸ್ಕೃತಿ, ಧರ್ಮ, ಆಧ್ಯಾತ್ಮ ಸಾಹಿತ್ಯಗಳನ್ನೆಲ್ಲ ಸುಟ್ಟು ಕರಕಲಾಗಿಸುತ್ತಿದೆ. ನೈತಿಕ ಮೌಲ್ಯಗಳನ್ನು ಹೊಸಕಿ ಹಾಕಿ, ಸಾಮಾಜಿಕ ಶಾಂತಿಯನ್ನು ಕದಡಿ, ಮಾನಸಿಕ ನೆಮ್ಮದಿಗೆ ನೀರು ಬಿಟ್ಟು ಭೌಗೋಳಿಕ ಸಂಪತ್ತನ್ನು ಧ್ವಂಸ ಮಾಡುತ್ತಿದೆ. ಮಸೀದಿ ಕೆಡವಿ ಮಂದಿರ ಕಟ್ಟುವ ಹಿಂದೂ ಮತಾಂಧರು, ಮಂದಿರ ಕೆಡವಿ ಮಸೀದಿ ಕಟ್ಟುವ ಮುಸ್ಲೀಮ್ ಧರ್ಮಾಂಧರು ಎಲ್ಲಿಯವರೆಗೆ ತಮ್ಮ ಮನಸ್ಸುಗಳ ಪರಿವರ್ತನೆ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ದೇಶಕ್ಕೆ ಭವಿಷ್ಯ ಖಂಡಿತ ಇಲ್ಲ. ಭವಿಷ್ಯ ಹೋಗಲಿ, ವರ್ತಮಾನದಲ್ಲೇ ನೆಮ್ಮದಿಯ ನಿಟ್ಟುಸಿರು ಬಿಡಲಾಗದು. ಶಾಂತಿಯನ್ನು ಕಾಣಲಾಗದು. ಸಂತೋಷವನ್ನು ಅನುಭವಿಸಲಾಗದು.

ಮಂದಿರ, ಮಸೀದಿ, ಚರ್ಚ್‌ಗಳು ಭಕ್ತರ ಭಕ್ತಿಯ ಶ್ರದ್ಧಾ ಕೇಂದ್ರಗಳಾಗಬೇಕು. ಅಲ್ಲಿ ಪ್ರೀತಿ, ಪ್ರೇಮ, ಭಕ್ತಿ ಓತಪ್ರೋತವಾಗಿ ಹರಿಯುವಂತಾಗಬೇಕು. ಬದಲಾಗಿ ಅವು ಕೊಲ್ಲುವ ಕತ್ತಿ, ಚಾಕು, ಚೂರಿ, ತ್ರಿಶೂಲ, ಬಾಂಬ್, ಗನ್ ಮುಂತಾದ ಮಾರಕಾಸ್ತ್ರಗಳನ್ನು ಸಂಗ್ರಹಿಸಿಡುವ ಉಗ್ರಾಣಗಳಾಗಬಾರದು.

ಈಗ ಅವೆಲ್ಲ ಅಂಥ ಮಾರಕಾಸ್ತ್ರಗಳ ಮಳಿಗೆಗಳಾಗು ತ್ತಿರುವುದು ನಮ್ಮ ಧರ್ಮ, ಸಂಸ್ಕೃತಿ ಎಂಥ ಅಪಾಯದ ಅಂಚಿಗೆ ತಲುಪಿದೆ ಎನ್ನುವುದರ ದ್ಯೋತಕವಾಗಿದೆ. ದಯೆ, ಪ್ರೀತಿ, ನೀತಿ, ಸತ್ಯ, ಸಹೋದರತ್ವ ಮುಂತಾದ ಆದರ್ಶಗಳನ್ನು ಕಲಿಸ ಬೇಕಾದ ಮಂದಿರ, ಮಸೀದಿಗಳು ಭಯೋತ್ಪಾದಕ ರನ್ನು, ರಾಷ್ಟ್ರದ್ರೋಹಿಗಳನ್ನು ತರಬೇತುಗೊಳಿಸುವ ಗುಪ್ತಸ್ಥಳಗಳಾದರೆ ಈ ನಾಡನ್ನು ರಕ್ಷಿಸುವವರು ಯಾರು? ತಾಯ ಮೊಲೆ ಹಾಲು ವಿಷವಾದರೆ, ಬೇಲಿಯೇ ಎದ್ದು ಹೊಲ ಮೇಯ್ದರೆ, ಧರೆಯೇ ಹತ್ತಿ ಉರಿದರೆ ಇನ್ನೇನು ಗತಿ? ಯಾರಲ್ಲಿ ರಕ್ಷಣೆ ಪಡೆಯುವುದು?

ನಮ್ಮ ಮಂದಿರ, ಚರ್ಚ್, ಮಸೀದಿಗಳು ಸುಂದರ ವಿನ್ಯಾಸದ ಕಟ್ಟಡಗಳಾಗಿ ಭೌತಿಕವಾಗಿ ಸುಣ್ಣ ಬಣ್ಣಗಳಿಂದ ಜನರನ್ನು ಆಕರ್ಷಿಸಿದರೆ ಸಾಲದು. ಅವು ವಿಧ್ವಂಸಕ ಕೃತ್ಯಗಳಿಗೆ ಪ್ರೇರಣೆ ನೀಡದೆ ನೊಂದ ಮನಗಳಿಗೆ ಸಾಂತ್ವನ ನೀಡುವ, ಬೆಂದ ಬದುಕಿಗೆ ಭರವಸೆ ತುಂಬುವ ಆತ್ಮದೇಗುಲಗಳಾಗ ಬೇಕು. ಸುಂದರ ನಂದನವನಗಳಾಗಬೇಕು. ಮೊದಲೇ ಹೇಳಿದಂತೆ ಇಲ್ಲಿ ಯಾವುದೂ ಶಾಶ್ವತ ವಲ್ಲ. ಯಾರೂ ಅಮರರಲ್ಲ. ನಮ್ಮ ಸತ್ಕಾರ್ಯಗಳೇ ನಮ್ಮ ಅಮರತ್ವ ಸಾರುವ ಸಾಲುದೀಪಗಳು. ಲೋಕ ಕಲ್ಯಾಣದ ಕಾರ್ಯಗಳೇ ಶಾಶ್ವತವಾದವುಗಳು. ಈ ಸತ್ಯವನ್ನು ಮನುಕುಲ ಅರ್ಥಮಾಡಿಕೊಳ್ಳದಿದ್ದರೆ ಮನುಷ್ಯ ಮೃಗಕ್ಕಿಂತ ಕೀಳಾಗುವನು. ಪ್ರಕೃತಿಯ ಕಿರೀಟ ತಾನೆಂದು ಬೀಗುವ ಮಾನವ ಪ್ರಕೃತಿಯ ಮುಂದೆ ತಾನೆಂಥ ಕ್ರಿಮಿ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಪ್ರಕೃತಿಯ ಸಂದೇಶವನ್ನು ನಮ್ಮ ಸಂದೇಶವನ್ನಾಗಿ ಮಾಡಿಕೊಳ್ಳದಿದ್ದರೆ ನಮ್ಮ ಧರ್ಮಕ್ಕೆ ಕವಡೆಯ ಕಿಮ್ಮತ್ತೂ ಇಲ್ಲವಾಗುವುದು.

ಕೆಲವು ಸ್ವಾರ್ಥಿಗಳ, ಘಟಿಂಗರ ಒಳಸಂಚಿನಿಂದ ಹಿಂದೂ ಮುಸ್ಲಿಂ ಎನ್ನುವ ವಿಷ ಎಲ್ಲರ ಪ್ರಾಣವನ್ನು ಬಲಿ ತೆಗೆದುಕೊಳ್ಳುತ್ತಿದೆ. ಆ ಸ್ವಾರ್ಥಿಗಳು ಹಚ್ಚಿದ ಬೆಂಕಿ ದಳ್ಳುರಿಯಾಗಿ ಅಮಾಯಕರನ್ನೂ ಸುಟ್ಟು ಬೂದಿ ಮಾಡುತ್ತಿದೆ. ಭಾರತದಲ್ಲಿರುವ ಮುಸಲ್ಮಾ ನರು ಪಾಕಿಸ್ಥಾನದಿಂದಲೋ, ಇರಾನ್, ಇರಾಕ್ ಮತ್ತಿತರ ಮುಸ್ಲಿಂ ರಾಷ್ಟ್ರಗಳಿಂದಲೋ ಬಂದವರಲ್ಲ ಎನ್ನುವುದನ್ನು ಇಲ್ಲಿರುವ ಹಿಂದೂ, ಮುಸ್ಲಿಂ ಮತಾಂಧರೆಲ್ಲರೂ ಅರಿಯಬೇಕು. ನಾವೆಲ್ಲರೂ ಭಾರತಾಂಬೆಯ ಮಕ್ಕಳು ಎನ್ನುವ ದೇಶಾಭಿಮಾನ ರಕ್ತಗತವಾಗಬೇಕು. ಹಿಂದೂ ಎನ್ನುವುದು ಒಂದು ಜಾತಿಯಾಗಲಿ, ಮತವಾಗಲಿ, ಧರ್ಮವಾಗಲಿ ಅಲ್ಲ. ಅದು ಭೌಗೋಳಿಕ ವ್ಯಾಪ್ತಿಯನ್ನು ಸೂಚಿಸುವ ಪದ. ಅದು ಈ ನೆಲದ ಸಂಸ್ಕೃತಿ. ಭಾರತೀಯರ ಬದುಕಿನ ವಿಧಾನ. ಈ ಸತ್ಯವನ್ನು ಎಲ್ಲರೂ ಮನದಟ್ಟು ಮಾಡಿ ಕೊಳ್ಳಬೇಕು. ಆಗ ಅವರಿಗೆ ವೇದೋಪನಿಷತ್‌ಗಳು ಸಾರಿದ ಧರ್ಮ ಹಾಗೂ ಖುರಾನ್ ಪ್ರತಿಪಾದಿಸಿದ ಶಾಂತಿಯ ಸಂದೇಶದ ಧರ್ಮ ಅರ್ಥವಾದೀತು.

ಈಗ ಭಾರತದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಜಗತ್ತಿನ ಮುಂದೆ ಭಾರತೀಯರು ತಲೆತಗ್ಗಿಸುವಂತೆ ಮಾಡುತ್ತಿವೆ. ಮುಖ್ಯವಾಗಿ ಹಿಂದೂ ಮುಸ್ಲೀಮ್ ಎಂಬ ಮಹದಗ್ನಿಕುಂಡ ಈ ನೆಲದ ಸಂಸ್ಕೃತಿ, ಧರ್ಮ, ಆಧ್ಯಾತ್ಮ, ಸಾಹಿತ್ಯಗಳನ್ನೆಲ್ಲ ಸುಟ್ಟು ಕರಕಲಾಗಿಸುತ್ತಿದೆ. ನೈತಿಕ ಮೌಲ್ಯಗಳನ್ನು ಹೊಸಕಿಹಾಕಿ, ಸಾಮಾಜಿಕ ಶಾಂತಿಯನ್ನು ಕದಡಿ, ಮಾನಸಿಕ ನೆಮ್ಮದಿಗೆ ನೀರು ಬಿಟ್ಟು ಭೌಗೋಳಿಕ ಸಂಪತ್ತನ್ನು ಧ್ವಂಸ ಮಾಡುತ್ತಿದೆ. ಮಸೀದಿ ಕೆಡವಿ ಮಂದಿರ ಕಟ್ಟುವ ಹಿಂದೂ ಮತಾಂಧರು, ಮಂದಿರ ಕೆಡವಿ ಮಸೀದಿ ಕಟ್ಟುವ ಮುಸ್ಲೀಮ್ ಧರ್ಮಾಂಧರು ಎಲ್ಲಿಯವರೆಗೆ ತಮ್ಮ ಮನಸ್ಸುಗಳ ಪರಿವರ್ತನೆ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ದೇಶಕ್ಕೆ ಭವಿಷ್ಯ ಖಂಡಿತ ಇಲ್ಲ.

ಭಾರತೀಯರು ತನ್ಮೂಲಕ ನೆರೆಹೊರೆಯ ದೇಶದವರ ನೆಮ್ಮದಿಯನ್ನು ಹಾಳು ಮಾಡುವ ಸಂಚಿಗೆ ಮುಸ್ಲೀಮರಾಗಲಿ, ಹಿಂದೂಗಳೆಂದು ಹೇಳಿಕೊಳ್ಳು ವವರಾಗಲಿ ಕಾರಣವಾಗ ಬಾರದು. ಹಿಂದೂಗಳೆನ್ನುವವರು ಮುಸ್ಲೀಮರನ್ನು ಪ್ರೀತಿಸ ಬೇಕು. ಮುಸ್ಲೀಮರು ಹಿಂದೂಗಳನ್ನು ಗೌರವಿಸಬೇಕು. ಇದು ಪರಸ್ಪರ ಕೊಟ್ಟು ತೆಗೆದುಕೊಳ್ಳುವ ಬಂಧುತ್ವದ ಬೆಸುಗೆ ಆಗಬೇಕು. ಮುಸಲ್ಮಾನರು ತಾವು ಪಾಕಿಸ್ಥಾನದವರೆನ್ನುವಂತೆ ವರ್ತಿಸಬಾರದು. ಅಂಥ ವರ್ತನೆಗೆ ಹಿಂದೂಗಳು ಅವಕಾಶ ಮಾಡಿಕೊಡಬಾರದು. ಭಾರತ ಜಾತ್ಯತೀತ ರಾಷ್ಟ್ರ.

ಶತಶತಮಾನಗಳಿಂದ ಇಲ್ಲಿ ಹಲವು ಧರ್ಮೀಯರು, ಹಲವು ಜಾತಿಯ ಜನರು ಪರಸ್ಪರ ಒಂದಾಗಿ ಬದುಕು ನೆಡಸಿದ್ದಾರೆ. ನಮ್ಮ ಪುರಾತನರು ಈ ನೆಲ ನನ್ನದು, ಈ ಜಲ ನನ್ನದು, ಈ ಸಂಸ್ಕೃತಿ ನನ್ನದು, ಈ ಜನ ನನ್ನವರು, ಈ ದೇಶ ನನ್ನದು ಎಂದು ಭಾವೈಕ್ಯತೆಯ ಬೇರುಗಳು ಸಡಿಲದಂತೆ ನೋಡಿಕೊಂಡು ಬಂದಿದ್ದಾರೆ. ಅದನ್ನು ಕಾಪಾಡಿಕೊಂಡು ಮುಂದುವರಿಯುವ ಸಂಕಲ್ಪ ನಮ್ಮದಾಗಬೇಕು.

ನಮಗೀಗ ಬೇಕಾಗಿರುವುದು ಮಂದಿರ ಮಸೀದಿ ಕಟ್ಟುವ ಯುದ್ಧೋತ್ಸಾಹ ಅಲ್ಲ. ಯುದ್ಧೋತ್ಸಾಹ ಯಾರಿಗೂ ಬೇಕಾ ಗಿಲ್ಲ. ಕೆಲವೇ ಕೆಲವು ಕಿಡಿಗೇಡಿಗಳು, ಸ್ವಾರ್ಥ ಸಾಧಕರು, ರಾಜಕೀಯ ಸ್ಥಾನ ಮಾನ ಕಬಳಿಸಬೇಕೆನ್ನುವ ಪಿತೂರಿಗಾರರು ಹಿಂದೂ ಮುಸ್ಲಿಂ ಎನ್ನುವ ಗೋಡೆಗಳನ್ನು ಕಟ್ಟಿ ಬೇಲಿಯನ್ನು ನೆಟ್ಟು ಯುದ್ಧೋತ್ಸಾಹ ತುಂಬಿ ಬದುಕನ್ನು ಕುರೂಪಗೊಳಿಸು ತ್ತಿದ್ದಾರೆ. ತಮ್ಮ ದಾಹಕ್ಕಾಗಿ ದೇಶದ್ರೋಹ, ಸಮಾಜಘಾತುಕ ಕೃತ್ಯದಲ್ಲಿ ಹಲವು ಅಮಾಯಕರನ್ನು ತೊಡಗಿಸುವ ಹುನ್ನಾರ ನಡೆಸಿದ್ದಾರೆ. ಅಲ್ಪಸಂಖ್ಯೆಯಲ್ಲಿರುವ ಈ ದುರಾತ್ಮರು ಬೃಹತ್ ಕಾಡು, ಮಹಾನದಿಗಳು, ದೊಡ್ಡ ದೊಡ್ಡ ನಗರಗಳನ್ನು ಸಹ ದಹಿಸುವ ಭಯಂಕರ ಬೆಂಕಿಯಾಗುತ್ತಿದ್ದಾರೆ. ಇಂಥವರನ್ನು ಬೇರುಸಹಿತ ಬಗಿದು ಸುಟ್ಟುಹಾಕಬೇಕು. ಯಾರಲ್ಲೇ ವಿನಾಶ ಕಾರಿಯಾದ ವಿಷ ತುಂಬಿಕೊಂಡಿದ್ದರೂ ಅದನ್ನು ದಮನ ಮಾಡುವ ಸಂಜೀವಿನಿ ನಾವಾಗಬೇಕು. ಎಲ್ಲವನ್ನೂ ಸಮಾ ಧಾನದಿಂದ ಸಹಿಸಿಕೊಂಡು ಶತೃಗಳನ್ನು ಸಹ ಮಿತ್ರರನ್ನಾಗಿ ಪರಿವರ್ತಿಸಬೇಕು.

ದ್ವೇಷಕ್ಕೆ ದ್ವೇಷ ಮದ್ದು ಅಲ್ಲ. ಬದಲಾಗಿ ದ್ವೇಷಕ್ಕೆ ಪ್ರೀತಿ ಮದ್ದಾಗಬೇಕು. ಪರಸ್ಪರ ಪ್ರೀತಿ, ಸಹನೆ, ಸೌಹಾರ್ದತೆ, ಸಹಕಾರ, ಸಹಬಾಳ್ವೆ, ಸಹಜೀವನದಂಥ ಅಸ್ತ್ರಗಳನ್ನು ಬಳಸಿ ಎಲ್ಲರ ಬದುಕೂ ಅರಳುವಂತೆ ಮಾಡಬೇಕು. ಅದೊಂದು ಸುಂದರ ಹೂದೋಟವಾಗಬೇಕು. ಇದನ್ನು ಬಿಟ್ಟು ರಾಮಮಂದಿರ, ಬಾಬರಿ ಮಸೀದಿ, ದತ್ತಪೀಠ, ದರ್ಗಾ ಎಂದೆಲ್ಲ ಕಟ್ಟುವ, ಕೆಡವುವ ಕಿಡಿಗೇಡಿತನದಲ್ಲೇ ತೊಡಗಿದರೆ ಕಾಲವೇ ನಮಗೆ ತಕ್ಕ ಪಾಠ ಕಲಿಸುವುದು. ವಿನಾಶಕಾಲಕ್ಕೆ ವಿಪರೀತ ಬುದ್ಧಿ ಎನ್ನುವಂತೆ ಆಗಬಾರದು. ಈಗಲೇ ನಾವು ಮಳೆ ಬೆಳೆ ಕಾಣದಂತಾಗಿದ್ದೇವೆ. ನೆಲೆ, ಒಲೆ ಮಂಕಾಗಿವೆ. ಮಲೆನಾಡು ಬಯಲಾಗಿದೆ. ನದಿಗಳು ದುರ್ನಾಥದ ಮಹಾನ್ ಚರಂಡಿಗಳಾಗಿವೆ. ಜಲಧಾರೆ ಬತ್ತಿ ಬಸವಳಿದಿದೆ. ಈ ಅಪಾಯದ ಬಗ್ಗೆ ಸಮಸ್ತ ಮನುಕುಲ ಚಿಂತಿಸದಿದ್ದರೆ ಹೇಗೆ? ನಾವಾಗಿಯೇ ನಮ್ಮ ತಲೆಯ ಮೇಲೆ ಚಪ್ಪಡಿ ಎಳೆದುಕೊಳ್ಳುವ ಅವಿವೇಕ ಬೇಡ.

ಕೇವಲ ವ್ಯಕ್ತಿಗತ ಸ್ವಾರ್ಥ ಪ್ರತಿಷ್ಠೆಗಳನ್ನೇ ಮುಂದೆ ಮಾಡಿ ಕೊಂಡರೆ ವ್ಯಕ್ತಿಯೂ ಬದುಕುವುದಿಲ್ಲ. ಸಮಾಜವೂ ಉಳಿಯುವುದಿಲ್ಲ. ದೇಶವೂ ಉದ್ಧಾರ ಆಗುವುದಿಲ್ಲ. ಈ ನೆಲೆಯಲ್ಲಿ ಕೋಮುವಾದಿಗಳನ್ನು ಮಟ್ಟಹಾಕುವ ಮನಸ್ಸು ಎಲ್ಲರಲ್ಲೂ ಉದಯವಾಗಬೇಕಾಗಿದೆ. ಹಿಂದೂ ಮುಸಲ್ಮಾನರ ನ್ನುವವರು ತಮ್ಮ ತಮ್ಮ ಧರ್ಮಾಂಧತೆ, ಮತಾಂಧತೆ, ಜಾತ್ಯಂಧತೆಯ ಕಪಿಮುಷ್ಟಿಗೆ ಸಿಲುಕದೆ ಅಲ್ಲಿರುವ ಕಸಕಡ್ಡಿ ಗಳನ್ನು ಸುಟ್ಟುಹಾಕಬೇಕು. ಇಲ್ಲವಾದಲ್ಲಿ ನಾಳೆ ಬೆಳಗಿಂತ ಕಳೆಯೇ ಹೆಚ್ಚಾಗಿ ಹೊಲ ಬರಡಾಗುವುದು. ಮನುಷ್ಯ ಅನ್ನ

ನೀರಿಲ್ಲದೆ ಸಾಯುವನು. ಧರ್ಮ ಸಾವು ತರುವಂತಹುದಲ್ಲ, ಅದು ಜೀವನೋತ್ಸಾಹ ಹೆಚ್ಚಿಸಿ ಕೂಡಿ ಬದುಕುವುದನ್ನು ಕಲಿಸುವಂತಹುದು. ಧರ್ಮದ ಕೆಲಸ ಜೋಡಿಸುವುದೇ ಹೊರತು ವಿಭಾಗಿಸುವುದಲ್ಲ, ಧರ್ಮ ಯಾವಾಗಲೂ ಸೂಜಿಯ ಕಾರ್ಯ ಮಾಡುವುದೇ ವಿನಾ ಕತ್ತರಿಯ ಕಾರ್ಯವನ್ನಲ್ಲ.

ನಮ್ಮ ಬಿಡಾರದ ಮೇಲೆ ನಿಂತು ಎದುರಿಗಿರುವ ಸುಂದರ ಉದ್ಯಾನವನ ನೋಡುತ್ತಿದ್ದೆವು. ತಿಂದು ಬಿಸಾಕಿದ ತೆಂಗಿನ ಚಿಪ್ಪಿನಲ್ಲಿದ್ದ ಕೊಬ್ಬರಿಯನ್ನು ನಾಯಿಯೊಂದು ಹಲ್ಲಿನಿಂದ ಕಚ್ಚಿ ತಿನ್ನುತ್ತಿತ್ತು. ಕಾಗೆಗಳು ಆ ನಾಯಿಯ ಸುತ್ತಲೂ ಕೂತು ಅವು ಸಹ ತೆಂಗಿನ ಚಿಪ್ಪಿನಲ್ಲಿರುವ ಕೊಬ್ಬರಿಗೆ ತಮ್ಮ ಕೊಕ್ಕನ್ನು ಚುಚ್ಚಿ ಚುಚ್ಚಿ ತಿನ್ನುತ್ತಿದ್ದವು. ಅವು ಒಂದನ್ನೊಂದು ಓಡಿಸಲು ಹಾತೊರೆಯುತ್ತಿರಲಿಲ್ಲ. ಬಸವಣ್ಣನವರ ವಚನ ನೆನಪಾಯಿತು: ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ...ಮಾನವನಾಗಿ ಭಕ್ತಿಪಕ್ಷವಿಲ್ಲದಿದ್ದರೆ ಆ ಕಾಗೆ ಕೋಳಿಗಳಿಗಿಂತ ಕರಕಷ್ಟ ಕೂಡಲಸಂಗಮದೇವಾ. ಆ ಕಾಗೆ, ನಾಯಿಗೆ ಧರ್ಮ ಹೇಳಿದವರಾರು? ಸೌಹಾರ್ದತೆಯಿಂದ ಕೂಡಿ ಬಾಳಬೇಕೆಂಬ ತಿಳುವಳಿಕೆ ನೀಡಿದವರಾರು. ಸಹನಾವವತು...ಎನ್ನುವ ತತ್ವ ಅವುಗಳಿಗೆ ತಿಳಿಯದು. ಆದರೆ ಅಂಥ ತತ್ವಬದ್ಧ ಬದುಕು ಆ ಪ್ರಾಣಿ ಪಕ್ಷಿಗಳದಾಗಿರುವಾಗ ಧರ್ಮವೇ ಉಸಿರೆಂದು ಉಬ್ಬುಬ್ಬಿ ಮಾತನಾಡುವ ಮಾನವ ಅವುಗಳಂತೆ ಬಾಳದಿದ್ದರೆ ಅವನ ಧರ್ಮಕ್ಕೇನು ಬೆಲೆ?

ಕೆಲವು ವರ್ಷಗಳ ಹಿಂದೆ ದಾವಣಗೆರೆ ನಗರದಲ್ಲಿ ಒಂದು ಹಂದಿಯ ಮೊಲೆಗೆ ನಾಲ್ಕಾರು ನಾಯಿಮರಿಗಳು ಬಾಯಿ ಹಾಕಿ ಕುಡಿಯುವುದನ್ನು ನೋಡಿದ್ದೆವು. ಆ ಹಂದಿಯ ಮೈಮೇಲೆ ಕುಳಿತ ಕಪಿಯೊಂದು ದುರ್ಬಲ ನಾಯಿಮರಿಯನ್ನು ಹಂದಿಯ ಮೊಲೆಯ ಹತ್ತಿರ ತಂದು ಬಿಡುತ್ತಿತ್ತು. ೪/೧೨/೨೦೦೩ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಚಿತ್ರಸಮೇತ ಬಂದಿರುವ 'ಹಾಲುಣಿಸುವ ಪ್ರಾಣ ಬೇರೆ, ಪ್ರೀತಿಗೆಲ್ಲಿ ಭೇದ...?' ಎನ್ನುವ ವರದಿ ಚಿಂತನಾರ್ಹವಾಗಿದೆ.

'ದಾವಣಗೆರೆ, ಡಿ. ೩- ನಗರದ ಗಲ್ಲಿ ಗಲ್ಲಿ, ಬೀದಿ ಬೀದಿಗಳಲ್ಲಿ ವರಗುಟ್ಟುತ್ತಾ ದುಡುದುಡನೆ ಓಡಿಹೋಗುವ ಹಂದಿಗಳು, ದಿನವಿಡೀ ಮಲಗಿ, ರಾತ್ರಿ ಇಡಿ ಬೋ..ಎಂದು ಊಳಿಡುವ ನಾಯಿಗಳು ತೀರಾ ಸಾಮಾನ್ಯ. ಆದರೆ ಇದಕ್ಕೆ ಅಪವಾದವೆಂಬಂತೆ ಇದೇ ದಾವಣಗೆರೆಯ ಒಂದು ನಾಯಿ ಮೂರು ಹಂದಿಗಳಿಗೆ ತನ್ನದೊಂದು ಮರಿಯೊಟ್ಟಿಗೆ ಸಮನಾಗಿ ಹಾಲುಣಿಸುತ್ತ ಜನರ ಆಕರ್ಷಣೆಯ ಕೇಂದ್ರವಾಗಿದೆ. ಅವುಗಳಲ್ಲಿ ಜಾತಿಯ ಭೇದವಿಲ್ಲ, ಬಣ್ಣದ ಗೊಡವೆ ಇಲ್ಲ, ತಮ್ಮ ಧ್ವನಿ, ರೂಪಗಳ ಬಗ್ಗೆಯೂ ತಕರಾರಿಲ್ಲ, ಎಲ್ಲಾ ಸೇರಿ ಒಟ್ಟಿಗೆ ವಿವಿಧತೆಯಲ್ಲಿ ಏಕತೆ ಸಾರುತ್ತಿವೆ.

ದಾವಣಗೆರೆ ಲೆನಿನ್ ನಗರ, ೫ನೇ ಮುಖ್ಯರಸ್ತೆಯ, ಕಾಳಿಕಾ ಮೆಡಿಕಲ್ ಹಿಂಭಾಗದ ಈ ಬೀದಿ ನಾಯಿಗೆ ಹೆಸರೇ ಇಲ್ಲ. ಹುಟ್ಟಿದಂದಿನಿಂದ ಅಲ್ಲೇ ಇದೆ. ಅವರಿವರು ಹಾಕುವುದನ್ನು ತಿನ್ನುತ್ತದೆ. ಅದು ಹಾಕಿದ ಮರಿಗಳನ್ನು ಬೇಕಾದವರು ತೆಗೆದುಕೊಂಡು ಹೋಗಿದ್ದು ಒಂದು ಮರಿ ಮಾತ್ರ ಉಳಿದಿದೆ. ಕೆಲವಾರಗಳ ಹಿಂದೆ ೩ ಹಂದಿಮರಿಗಳು ಈ ನಾಯಿಗೆ ಜೊತೆಯಾಗಿವೆ. ನಾಯಿಯ ಮರಿಯೊಂದಿಗೆ ಹಾಲು ಕುಡಿಯುತ್ತವೆ. ಚಿನ್ನಾಟವಾಡುತ್ತವೆ. ಇದೊಂದು ಅಪ್ಪಟ ಆದರ್ಶ ಸಂಸಾರದಂತಾಗಿದೆ.

ಧರ್ಮ ಮತ್ತು ಕೋಮುವಾದ ಪರಸ್ಪರ ವಿರುದ್ಧವಾದ ಪದಗಳು. ನೈಜ ಧರ್ಮ ಇರುವಲ್ಲಿ ಕೋಮುವಾದಕ್ಕೆ ಅವಕಾಶವೇ ಇರುವುದಿಲ್ಲ. ಕೋಮುವಾದ ಇರುವಲ್ಲಿ ನೈಜ ಧರ್ಮ ಇರುವುದಿಲ್ಲ. ಧರ್ಮ ಸಹಬಾಳ್ವೆಯನ್ನು ಎತ್ತಿಹಿಡಿಯುವುದು. ಹಿಂಸೆಯನ್ನು ವಿರೋಧಿಸುವುದು. ದಯೆಯನ್ನು ಸಾರುವುದು. ಆದರೆ ಕೋಮುವಾದ ಧರ್ಮದ ಈ ಎಲ್ಲ ಗುಣಗಳನ್ನು ಧಮನ ಮಾಡಿ ಹಿಂಸೆ ಭುಗಿಲೇಳುವಂತೆ ಮಾಡುವುದು. ಸಹಬಾಳ್ವೆಯನ್ನು ಸುಟ್ಟುಹಾಕುವುದು. ದಯೆಯ ಸ್ಥಾನದಲ್ಲಿ ಭಯ ಆವರಿಸುವಂತೆ ಮಾಡುವುದು. ಈ ನೆಲೆಯಲ್ಲಿ ನೈಜಧರ್ಮದ ಪರಿಚಯ ಜನರಿಗೆ ಮತ್ತು ಜನ ನಾಯಕರಿಗೆ ಆಗಬೇಕಾಗಿದೆ.

ಎಲ್ಲಿಯವರೆಗೆ ಇವುಗಳ ಬಾಂಧವ್ಯ ಎಂದರೆ ಇವು ಹಾಲುಣಿಸುತ್ತಿರುವ ನಾಯಿ ಹಾಗೂ ಅದರ ಮರಿಯನ್ನು ತೊರೆದು ಇತರ ಹಂದಿಗಳೊಂದಿಗೆ ಹೋಗುತ್ತಿಲ್ಲ. ಅವುಗಳೊಂದಿಗೆ ಸೇರುವುದೂ ಇಲ್ಲ ಎಂದು ಅಲ್ಲಿನ ನಿವಾಸಿ ಚಂದ್ರಕಾಂತ ಪುಟಾಣ್‌ಕರ್ ಹೇಳುತ್ತಾರೆ. ಅಪೂರ್ವವಾಗಿರುವ ಈ ಸಂಸಾರ ಇಲ್ಲಿನ ಜನರಿಗೆ ನಿತ್ಯ ಮನರಂಜನೆ ವಿಷಯವಾಗಿದೆ'.

ನಾಯಿ ಹಂದಿಯ ಮರಿಗಳಿಗೆ ಹಾಲುಣಿಸುವುದು ಮನರಂಜನೆಯ ವಿಷಯ ಮಾನವನಿಗೆ. ಆದರೆ ವಾಸ್ತವವಾಗಿ ಇದು ಮನರಂಜನೆಯ ವಿಷಯವಾಗದೆ ಮನೋವಿಕಾಸದ, ಆದರ್ಶಪಾಲನೆಯ ವಿಷಯವಾಗಬೇಕಾಗಿತ್ತು. ತಾನು ಆ ನಾಯಿಗಿಂತ ಮೇಲಾಗುವುದು ಯಾವಾಗ ಎಂದು ತನ್ನ ಹೀನ ಕೃತ್ಯಕ್ಕೆ ಮರುಗಬೇಕಾಗಿತ್ತು. ತನ್ನ ಬದುಕಿನಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗಿತ್ತು. ಇದನ್ನು ಬಿಟ್ಟು ಅದನ್ನು ಕೇವಲ ಮನರಂಜನೆಯ ವಿಷಯವಾಗಿಸಿಕೊಂಡರೆ ಮನುಷ್ಯತ್ವಕ್ಕೆ, ಆತ ಪ್ರತಿಪಾದಿಸುವ ಧರ್ಮಕ್ಕೆ ಕಳಂಕ. ಮಾನವನ ವಿಚಿತ್ರ ಗುಣವನ್ನು ಕಂಡು ಎಷ್ಟೋ ಸಹ ಅಸಹ್ಯಭಾವನೆ ಬರುವುದು.

ಇತ್ತೀಚಿನ ಪತ್ರಿಕೆಯೊಂದರಲ್ಲಿ ಅಪರೂಪದ, ಆಶ್ಚರ್ಯಕರ ಸುದ್ದಿಯೊಂದು ಬಿತ್ತರಗೊಂಡಿತ್ತು. ಚನ್ನಗಿರಿ ಸಮೀಪದ ಹಳ್ಳಿಯಲ್ಲಿ ವ್ಯಕ್ತಿಯೊಬ್ಬನಿಗೆ ಹಾವು ಕಚ್ಚಿದೆ. ಅವನು ಅದನ್ನು ತುಳಿದಿದ್ದಾನೆ. ಅದು ಸಿಟ್ಟಿನಿಂದ ಅವನನ್ನು ಬೆನ್ನಟ್ಟಿದೆ. ಆಗ ಆ ಮನುಷ್ಯ ಹಾವನ್ನು ಎರಡೂ ಕೈಗಳಿಂದ ಹಿಡಿದು ಬಾಯಿಂದ ಕಚ್ಚಿ ಕಚ್ಚಿ ಸಾಯಿಸಿದ್ದಾನೆ. ಈಗ ಗೊತ್ತಾಯಿತೇ ಮಾನವನ ದ್ವೇಷ, ವಿಷಕಾರುವ ಗುಣ ಎಂತಹುದೆಂದು. ಮನುಷ್ಯ ಮೃದುತ್ವ ಕಳೆದುಕೊಳ್ಳುತ್ತಿದ್ದಾನೆ. ಅವನು ಪಡೆಯುವ ಶಿಕ್ಷಣ ಅವನನ್ನು ಸುಶಿಕ್ಷಿತ, ಸುಸಂಸ್ಕೃತನನ್ನಾಗಿಸದೆ ಸ್ವಾರ್ಥಿಯನ್ನಾಗಿ, ದುಷ್ಟನನ್ನಾಗಿ, ಭ್ರಷ್ಟನನ್ನಾಗಿ ಮಾಡುತ್ತಿದೆ. ಅವನು ಪರಿಪಾಲಿಸುವ ಧರ್ಮ ದಯಾಗುಣ ಬೆಳೆಸದೆ ಭಯೋತ್ಪಾದಕನನ್ನಾಗಿಸುತ್ತಿದೆ. ಮತೀಯ ಮತ್ತಿನ ಕಳ್ಳು ಕುಡಿಸಿ ಮದೋನ್ಮತ್ತನಾಗುವ ಹಾಗೆ ಮಾಡುತ್ತಿದೆ. ಹೀಗಿರುವಾಗ ಕೋಮುವಾದವನ್ನು ಅವನಿಂದ ಹತ್ತಿಕ್ಕುವುದು ಹೇಗೆ?

ಧರ್ಮ ಮತ್ತು ಕೋಮುವಾದ ಪರಸ್ಪರ ವಿರುದ್ಧವಾದ ಪದಗಳು. ನೈಜ ಧರ್ಮ ಇರುವಲ್ಲಿ ಕೋಮುವಾದಕ್ಕೆ ಅವಕಾಶವೇ ಇರುವುದಿಲ್ಲ. ಕೋಮುವಾದ ಇರುವಲ್ಲಿ ನೈಜ ಧರ್ಮ ಇರುವುದಿಲ್ಲ. ಧರ್ಮ ಸಹಬಾಳ್ವೆಯನ್ನು ಎತ್ತಿಹಿಡಿಯುವುದು. ಹಿಂಸೆಯನ್ನು ವಿರೋಧಿಸುವುದು. ದಯೆಯನ್ನು ಸಾರುವುದು. ಆದರೆ ಕೋಮುವಾದ ಧರ್ಮದ ಈ ಎಲ್ಲ ಗುಣಗಳನ್ನು ಧಮನ ಮಾಡಿ ಹಿಂಸೆ ಭುಗಿಲೇಳುವಂತೆ ಮಾಡುವುದು. ಸಹಬಾಳ್ವೆಯನ್ನು ಸುಟ್ಟುಹಾಕುವುದು. ದಯೆಯ ಸ್ಥಾನದಲ್ಲಿ ಭಯ ಆವರಿಸುವಂತೆ ಮಾಡುವುದು. ಈ ನೆಲೆಯಲ್ಲಿ ನೈಜಧರ್ಮದ ಪರಿಚಯ ಜನರಿಗೆ ಮತ್ತು ಜನ ನಾಯಕರಿಗೆ ಆಗಬೇಕಾಗಿದೆ. ಯಾವ ಧರ್ಮವೂ ಹಿಡಿ, ಬಡಿ, ಹೊಡಿ, ಕಡಿ ಎನ್ನುವುದಿಲ್ಲ. ಬದಲಾಗಿ ಹಾಗೆ ಹೇಳುವ ಮನುಸ್ಸುಗಳನ್ನು ಪರಿವರ್ತಿಸಿ ಎಲ್ಲರಲ್ಲೂ ಪ್ರೀತಿ, ವಿಶ್ವಾಸ ಅಂಕುರಿಸುವಂತೆ ಮಾಡುವುದು. ಈ ಹಿನ್ನೆಲೆಯಲ್ಲಿ ಧರ್ಮ ಧರ್ಮವಾಗಿಯೇ ಉಳಿದಾಗ, ಬೆಳೆದಾಗ ಕೋಮುವಾದಕ್ಕೆ ತಾಣವೇ ಇಲ್ಲವಾಗುವುದು. ಆದುದರಿಂದ ನೈಜ ಧರ್ಮದ ಪರಿಚಯ, ಅನುಸಂಧಾನ ತುರ್ತಾಗಿ ಆಗಬೇಕಾಗಿದೆ. ಅಂಥ ನೈಜ ಧರ್ಮ ಕಾಣುವುದು ವೇದೋಪನಿಷತ್ತು, ಶರಣರ ವಚನ ಸಾಹಿತ್ಯ, ದಾಸರ ಕೀರ್ತನೆ ಮತ್ತಿತರ ಕೃತಿಗಳಲ್ಲಿ. ಇವುಗಳನ್ನು ಯಥಾವತ್ತಾಗಿ ತಿಳಿಯುವ, ತಿಳಿಸುವ ಮಹತ್ಕಾರ್ಯಕ್ಕೆ ಮುಂದಾದಾಗ ಮಾತ್ರ ಕೋಮುವಾದ ಕಮರುವುದು. □

ಪೂರ್ಣಚಂದ್ರ ತೇಜಸ್ವಿ: ಒಂದು ಭಾಷಣ; ಒಂದು ಸಂವಾದ

ಚಿತ್ರಗಳು : ಅಂದಾದರ ಹೊನ್ನಾಪುರ

ಡಾ|| ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ನಾಡು ಕಂಡ ಅಪರೂಪದ ಸಾಹಿತಿ, ವಿಚಾರವಾದಿ-ಚಿಂತಕ ಮತ್ತು ಪರಿಸರ ಪ್ರೇಮಿ. ಮಾನವೀಯ ಮೌಲ್ಯಗಳು ಮತ್ತು ಅವುಗಳನ್ನು ಸಾಕಾರಗೊಳಿಸವ ಪ್ರಯತ್ನಗಳಿಗೆ ದಕ್ಕೆ ಬಂದಾಗಲೆಲ್ಲಾ ತಮ್ಮ ಸಾತ್ವಿಕ ಸಿಟ್ಟಿನಿಂದ ಪ್ರತಿಭಟಿಸುವ ಪ್ರಗತಿಪರರು. ಇತ್ತೀಚೆಗೆ 'ಮಾನವ ಮಂಟಪ' ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಅಂತರ್ಜಾತಿ ವಿವಾಹಿತರಿಗೆ ಮೀಸಲಾತಿ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ತೇಜಸ್ವಿಯವರು ಭಾಗವಹಿಸಿ ಮಾಡಿದ ಭಾಷಣ ಹಾಗೂ ಸಂವಾದದ ವಿವರಗಳು ಇಲ್ಲಿವೆ.

ನಟರಾಜ್ ಹುಳಿಯಾರ್ ಅವರೆ, ಇಲ್ಲಿ ಇರುವ ಗಣ್ಯರೆ. ಸಭೆಯಲ್ಲಿ ಉಪಸ್ಥಿತರುವ ನಿಮ್ಮನ್ನೆಲ್ಲಾ ಗುರುತಿಸಿ ಹೇಳೋದಕ್ಕೆ ನನಗೆ ಬಹಳ ಕಷ್ಟ ಆಗ್ತಿದೆ. ಯಾಕೆಂದರೆ ನಾನು ಬೆಂಗಳೂರಿಗೆ ಬರುವುದು ಅಪರೂಪ. ಆದ್ದರಿಂದ ಪರಿಚಯ ಇರೋರೂ ಮರೆತು ಹೋಗಿರ್ತಾರೆ. ಆದ್ದರಿಂದ ಅದನ್ನ ತಾವು ಮನಸ್ಸಿಗೆ ತೆಗೆದುಕೊಳ್ಳಬಾರದಾಗಿ ವಿನಂತಿ. ನಾನು ಇಲ್ಲಿ ಬರ್ತಿನೀ ಅಂತ ಹೇಳ್ದಾಗ ನಟರಾಜ್ ಒಂದ್ ಮಾತು ಹೇಳಿದ್ರು. ಏನೂ ಅಂದ್ರೆ, ನೀವು ಭಾಷಣ ಗೀಷಣ ಮಾಡೊ ಅಗತ್ಯವೇ ಇಲ್ಲ ಸಾರ್. ನಾವೆಲ್ಲಾ ಚರ್ಚೆ ಮಾಡ್ತಾ ಇರ್ತಿವಿ, ನೀವು ಭಾಗವಹಿಸಿ ಸಾಕು ಅಂತ. ಬಾಳ ಒಳ್ಳೇದಾಯ್ತು ಅಂತ ಹೇಳಿ ಆಯ್ತು ಹಂಗೇ ಇದ್ರೆ ಬರ್ತಿನಿ ಅಂತ ಹೇಳ್ದೆ. ಈ ವೇದಿಕೆ, ಅದರ ಮೇಲೆ ಕುರ್ಚಿಗಳನ್ನು ಹಾಕಿ ಕೂರಿಸ್ತಾರೆ ಅಂತ ಗೊತ್ತಿದ್ರೆ ನಾನು ಬರುತ್ತಿರಲಿಲ್ಲ, ಯಾಕೆಂತ ಹೇಳಿದ್ರೆ ೧೯೬೪ನೇ ಇಸವಿಯಿಂದಲೂ ವೇದಿಕೆ ಹತ್ತಿ ಇಳಿದು, ಹತ್ತಿ ಇಳಿದು ಸಾಕಾಗಿ ಹೋಗಿದೆ. ಆದ್ದರಿಂದ ಯಾವ ಪ್ರಯೋಜನಾನೂ ಇಲ್ಲ.

ಕೆಲವು ಮುಖ್ಯವಾದ ಅಂಶಗಳನ್ನು ನಟರಾಜ್ ಇವತ್ತು ಪ್ರಸ್ತಾಪ ಮಾಡಿದರು. ಧಾರ್ಮಿಕ ಮತೀಯ ವಾದದ ಬಗ್ಗೆ ಮಾತಾಡ್ತಾ, 'ಈ ಮತೀಯವಾದದ ಹಿಂದೆ ಹೋಗ್ತಾ ಇರುವ ಹುಡುಗರಿಗೆ ಸಮರ್ಪಕವಾದ ಪ್ರೀತಿ ಸಿಕ್ತಾ ಇಲ್ಲ, ಆದ್ದರಿಂದ ಅವರು ಮತೀಯವಾದಿಗಳಾಗ್ತಾ ಇದ್ದಾರೆ' ಅಂತ ಹೇಳಿದ್ರು. ಹುಡುಗೀರು ಕುಂಕುಮ ಹಾಕೊಂಡಿರೋರನ್ನ ಪ್ರೀತಿ ಸೋದಿಲ್ಲಾ ಅಂತಾದರೆ ಆ ಹುಡುಗರೆಲ್ಲ ಗಾಬರಿ ಬಿದ್ದು ಬೇಗ ಬೇಗ ಕುಂಕುಮ ಅಳಿಸಿ ಹಾಕಿಬಿಡ್ತಾರೆ ಅಂತ ನಟರಾಜ್ ತಿಳ್ಕೊಂಡಿದ್ದಾರೆ. ಆದ್ರೆ ಇಲ್ಲಿ ಎಷ್ಟು ತಾಪತ್ರಯ ಇದೆ ಅಂತೇಳಿದ್ರೆ, ಒಬ್ಬ ಮನುಷ್ಯ ಒಂದು ಲೋಕಾತೀತವಾದ ಕಾರಣಕ್ಕಾಗಿ ಕೆಲಸ ಮಾಡೋಕೆ ಶುರುಮಾಡಿದರೆ ಅವನಿಗೆ ಹ್ಯಾಗೆ ರಿಪೇರಿ ಮಾಡಬೇಕು ಅನ್ನೋದು ನಮಗೆ ಗೊತ್ತಿಲ್ಲ. ಇದೇ ಮೂಲಭೂತ ಸಮಸ್ಯೆ. ಬೆನ್ನಿಗೆ ಬಾಂಬು ಕಟ್ಕೊಂಡು ಒಬ್ಬ ಹಿಂದೂನೇ ಆಗ್ಲಿ, ಕಾಫಿರನ್ನೇ ಆಗ್ಲಿ ಕೊಂದರೆ ಇನ್ನು ಹದಿನಾಲ್ಕು ತಲೆಮಾರಿಗೆ ಸದ್ಗತಿ ಸಿಕ್ಕುತ್ತೆ ಅಂತ ಒಬ್ಬ ನಂಬಿಕೊಂಡಿದ್ರೆ ಅವನ್ನ ಯಾವ ಧರ್ಮಬೋಧನೆ ಮಾಡಿ ರಿಪೇರಿ ಮಾಡೋದಕ್ಕೆ ಸಾಧ್ಯ? ಬಹಳ ಕಷ್ಟ ಇದೆ ಅಂತ ನಾನು ನಟರಾಜ್ ಹುಳಿಯಾರ್‌ಗೆ ಹೇಳಿದ್ದು ಈ ಕಾರಣಕ್ಕಾಗಿ.

ನಾವೇನಾದರೂ ಇದು ಧಾರ್ಮಿಕವಾಗಿ ತಪ್ಪು ಅಂತಲೋ, ದೇವರ ದೃಷ್ಟಿಲಿ ನೀನು ಮಾಡುತ್ತಿರುವುದು ತಪ್ಪು ಅಂತಲೋ ಹೇಳಿದರೆ ದೇವರ ದೃಷ್ಟಿಯಲ್ಲಿ ನಾನು ಮಾಡುತ್ತಿರೋದು ಕರೆಕ್ಟ್ ಅಂತಾನೇ ನಾನು ಇಲ್ಲಿಗೆ ಬಂದಿರೋದು ಅಂತ ಅವನು ಹೇಳ್ತಾನೆ. ೧೪ ವರ್ಷದಿಂದ ಕಾಶ್ಮೀರದಲ್ಲಿ, ಮತ್ತೊಂದು ಕಡೆ ಗುಜರಾತಲ್ಲಿ ಹಿಂದೂಗಳೂ, ಮುಸ್ಲಿಮರೂ ಮಾಡ್ತಾ ಬಂದಿರೋದು ಇಷ್ಟೇ. ಅವರೇನೂ ಇಲ್ಲಿ ವೈಯಕ್ತಿಕ ಲಾಭಕ್ಕೆ ಮಾಡ್ತಾ ಇಲ್ಲಾ, ಸತ್ತ ಮೇಲೆ ನಮಗೆ ಸಿಕ್ಕೋ ಪರಮ ಪದವಿಗಾಗಿ ಇಲ್ಲಿ ಕೆಲ್ಸ ಮಾಡ್ತ ಇದ್ದೀವಿ ಅಂತ ಹೇಳ್ತಾರೆ. ಆದ್ದರಿಂದ ಅವರನ್ನ ತಿದ್ದೋದು ಬಹಳ ಕಷ್ಟ ನಿಮ್ಮನ್ನೇ ಕನ್‌ವಿನ್ಸ್ ಮಾಡೋಕೆ ಹೊರಟಿರೋರನ್ನ ಕನ್‌ವಿನ್ಸ್ ಮಾಡೋದು ಇದೆಯಲ್ಲ, ಅದು ಬಾಳ ಕಷ್ಟ ಆಗ್ತದೆ. ಆ ಕಾರಣಕ್ಕಾಗಿ ನಾನು ಇದು ಬಾಳ ಕಷ್ಟ ಅಂದೆ. ಇರ್ಲಿ, ಅದ್ನ ಆಮೇಲೆ ತೀರ್ಮಾನ ಮಾಡೋಣ. ಬರಿ ಹುಡ್ಗೀರು ಅವರಿಗೆ ಕುಂಕುಮ ಅಳಿಸಿ ಅಂತ ಹೇಳಿದ್ರೆ ಸಾಕು, ಅವರು ರಿಪೇರಿ ಆಗಿಬಿಡ್ತಾರೆ ಅಂತ ತಿಳ್ಕೋಳೊದು ತಪ್ಪು. ಅವರು ರಿಪೇರಿ ಆಗೋ ಮಟ್ಟಿಗೆ ಕಾಣೆ, ನನ್ನ ಕೇಳಿದ್ರೆ.

ಆದರೆ ಈ ಸ್ವಾತಂತ್ರ್ಯ ಬಂದು ೫೦ ವರ್ಷಗಳ ತರುವಾಯ ಈ ಜಾತ್ಯತೀತ ಸಮಾಜ ಒಂದನ್ನು ನಿರ್ಮಾಣ ಮಾಡ್ಬೇಕು ಅಂತ ಹೇಳಿ ಹೊರಟು ನಾವು ಇಲ್ಲಿ ಬಂದಿದ್ದೀವಿ. ಮೀಸಲಾತಿ ಮುಂತಾದವನ್ನೆಲ್ಲ ಸಪೋರ್ಟ್ ಮಾಡ್ಕೊಂಡು ಮಾಡ್ಕೊಂಡು ಇದು ಎಲ್ಲಾ ಯಾವತ್ತೋ ಒಂದು ದಿವಸ ಜಾತ್ಯತೀತ ಸಮಾಜವಾಗಿ ಮಾರ್ಪಡುತ್ತದೆ ಅಂತ ತಿಳ್ಕೊಂಡು ಬಂದಿದ್ದೀವಿ. ಆದ್ರೆ ಇವತ್ತು ನೋಡಿದ್ರೆ ಜಾತ್ಯತೀತತೆ ಕಡೆಗೆ ನಾವು ಹೋಗೋ ಸೂಚನೆಗಳು ಕಾಣ್ತಾ ಇಲ್ಲಾ. ದಿವ್ಸ ದಿವ್ಸ ಉಲ್ಟಾ ಆಗ್ತಾ ಇದೆ. ಅಷ್ಟೆ ಅಲ್ಲದೇನೆ, ನಾವಿಲ್ಲೆಲ್ಲಾ ಸೆಕ್ಯುಲರಿಸಂ ಬಗೆಗೆ ಇಷ್ಟೊಂದು ಮಾತಾಡ್ತಾ ಇದ್ದೀವಲ್ಲಾ, ನಾವಾದರೂ ಇದರ ಬಗ್ಗೆ ಸೀರಿಯಸ್ ಆಗಿ ಇದ್ದೀವಾ? ಯಾಕೆಂದರೆ ೫೦ ವರ್ಷಗಳ ತರುವಾಯ ಕೂಡ ನಾವು ಇದೇ ದಾರೀಲಿ, ಇದೇ ಗೋಳಲ್ಲಿ ಸಿಗಾಕ್ಕೊಂಡಿದ್ದೀವಲ್ಲಾ ಯಾಕೆ ಅಂತ ಯೋಚ್ನೆ ಮಾಡ್ದೇನೆ ೩೦ ವರ್ಷದಿಂದ ಯಾವ್ಯಾವ ರೀತಿ ರೋಗ ಪರೀಕ್ಷೆ ಮಾಡಿದ್ದವ್ರೋ, ಯಾವ್ಯಾವ ವಿಶ್ಲೇಷಣೆ ಮಾಡಿದ್ದೆವ್ರೋ, ಯಾವ್ಯಾವ ತೀರ್ಮಾನ ತೆಗೆದುಕೊಂಡಿದ್ದೆವ್ರೋ, ಅದೇ ನುಡಿಗಟ್ಟುಗಳನ್ನ, ಅದೇ ತೀರ್ಮಾನಗಳನ್ನ, ಅದೇ ವಿಶ್ಲೇಷಣೆಗಳನ್ನ, ಭಾಷಣಗಳನ್ನ ೩೦ ವರ್ಷದ ತರುವಾಯಾನೂ ಮಾಡ್ಕೊಂಡು ಓಡಾಡ್ತಾ ಇದ್ದೀವಿ. ಪರಿಸ್ಥಿತಿ ಹಿಂಗಿರಬೇಕಾದ್ರೆ, ಹ್ಯಾಗೆ, ಯಾರು ಇದಕ್ಕೆ ಸಪೋರ್ಟ್ ಮಾಡೋರಿದ್ದಾರ?

ಸ್ವಾತಂತ್ರ ಬಂದ ಹೊಸದ್ರಲ್ಲಿ ಜಾತಿ ಪದ್ಧತಿಯಿಂದ ತೊಂದರೆಗೆ ಒಳಗಾದಂತಹ ಅಗಾಧ ಜನಸಮುದಾಯ ಇತ್ತು. ಅವರಿಗೆ ಜಾತಿಪದ್ಧತಿಯ ಅನ್ಯಾಯಗಳಿಂದ ಆಚೆ ಹೋಗಬಹುದಾದ ಸಾಧ್ಯತೆ ಇದೆ ಈ ಜಾತ್ಯತೀತತೆಯಲ್ಲಿ ಅಂತ ಅನ್ನಿಸ್ತಾ ಇತ್ತು. ಆದ್ರೆ ಇವತ್ತು ಏನಾಗಿದೆ ಅಂದ್ರೆ, 'ಜಾತಿ ಪದ್ಧತಿಯಿಂದ ಅತ್ಯಂತ ತೊಂದರೆಗೆ ಒಳಗಾಗಿರೋ ಜಾತಿಗಳು ಸಹ ಜಾತಿ ಬಿಡೋದಕ್ಕೆ ತಯಾರಾಗಿಲ್ಲ'. ಎಲ್ಲರಿಗೂ ಜಾತೀಯತೆ ಹತ್ತಿದೆ. ಎಲ್ಲ ಜಾತಿಗಳವರೂ ಮಠಗಳನ್ನ, ಒಂದೊಂದು ಅಡ್ಡ ಪಲ್ಲಕ್ಕಿಯನ್ನ, ಒಬ್ಬೊಬ್ಬ ಜಗದ್ಗುರುಗಳನ್ನ ಮಾಡ್ಕೊಂಡು ಓಡಾಡ್ತಾ ಇದ್ದಾರೆ. ನಾವು ಇರೋ ಜಾತಿಗಳಲ್ಲದೇ ಇಲ್ದೆ ಇರೋ ಜಾತಿಗಳಲ್ಲಿ ನಮ್ಮನ್ನು ಸೇರಿಸ್ತಿದ್ದಾರೆ, ನಾವು ಆ ಜಾತೀನೇ ಅಲ್ಲ, ನಮ್ಮನ್ನ ತಕ್ಕೊಂಡೋಗಿ ಅವರಿಗೆ ಸೇರಿಸಿಬಿಟ್ಟಿದ್ದಾರಲ್ಲಾ, ಎಂಥಾ ಅನ್ಯಾಯ ಆಯ್ತು ಸಾರ್, ನಾವು ಬೇರೆ ಜಾತಿ. ನಾವು ಅವರಿಗಿಂತ ಹಿಂದುಳಿದು ಹಾಳಾಗಿ ಹೋಗಿರೋದ್ರಿಂದ ನಮ್ಗೆ ಒಂದೆರಡು ಮೂರು ಪರ್ಸೆಂಟ್ ರಿಸರ್ವೇಶನ್ ಕೊಡಿಸ್ಬೇಕು ಅಂತ ಶುರು ಮಾಡ್ತಿದ್ದಾರೆ. ಅಂಬೇಡ್ಕರ್ ಮೀಸಲಾತಿ ಕೊಟ್ಟ್ರೆ ಏನಾಗುತ್ತೆ ಅಂಥ ತೀರ್ಮಾನ ಮಾಡಿದ್ರೂ ಅಂದ್ರೆ, ಜಾತಿಗಳಲ್ಲಿ ಒಂದು ಮಟ್ಟದ ಸಮಾನತೆ ಬರ್ತಾ ಇದ್ದಾ ಹಾಗೆ ಇವಕ್ಕೆ ವರ್ಗದ ಲಕ್ಷಣ ಬರುತ್ತೆ ವರ್ಣಕ್ಕೆ ವರ್ಗದ ಲಕ್ಷಣ ಬರುತ್ತೆ ಅಂದ್ರೆ ಅವುಗಳ ನಡುವೆ ಚಲನೆ ಬಂದುಬಿಡುತ್ತೆ ಅಂತ.

ನಮ್ಮಲ್ಲಿ ಬಾಳಾ ಜಾತಿಗಳು ತತ್ವದ ನೆಲೆಯಿಂದ ಬಂದಂಥ ಜಾತಿಗಳಲ್ಲ, ಮೇದರ, ಕೊರಚ, ಗಾಣಿಗ, ಕುಂಬಾರ, ಅವರಿವರೆಲ್ಲಾ ಪಾಪ ಅವರವರ ಕೆಲ್ಸ ಏನೇನೋ ಸಮಾಜದಲ್ಲಿ ಮಾಡ್ಕೊಂಡಿದ್ದರೋ ಅವರಿಗೆ ಅದೇ ಜಾತಿ ಅಂತ ಹೇಳಿಬುಟ್ರು ಇವ್ರು. ಅವರೆಲ್ಲ ಯಾವ ಫಿಲಾಸಫಿಯಿಂದಾನೂ ಆ ಜಾತಿಯಲ್ಲಿ ಇದ್ದವರಲ್ಲ, ಗಾಣ ಸುತ್ತಾ ಇದ್ರಿಂದ ಗಾಣಿಗ ಆಗಿದ್ದ, ಮಡಕೆ ಮಾಡ್ತಾ ಇದ್ರಿಂದ ಕುಂಬಾರ ಆಗಿದ್ದ. ಆದ್ದರಿಂದ ಈ ಜಾತಿಗಳಲ್ಲೇ ಏನಾಗುತ್ತೆ ಅಂದ್ರೆ, ಇವರಲ್ಲಿ ಆರ್ಥಿಕ ಸಮಾನತೆ ಬರ್ತಿದ್ದ ಹಂಗೇನೆ ಸಡಿಲವಾಗಿ ಬಿಡ್ತವೆ ಇವು, ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಚಲನೆ ಶುರು ಆಗುತ್ತೆ ಆ ಜಾತಿಯವರ್ನ ಇವ್ರು ಮದುವೆ ಆಗೋದು, ಈ ಜಾತಿಯವರ್ರು ಊಟ ಮಾಡುವಲ್ಲಿ ಇವರು ಬಂದು ಕೂರೋದು ಆಗುತ್ತೆ, ಆದ್ದರಿಂದ ಜಾತಿಗಳಲ್ಲಿ ಸಮಾನತೆ ತರೋದ್ರಿಂದ ಜಾತ್ಯತೀತತೆಯ ಕಡೆಗೆ ಹೋಗೋದಕ್ಕೆ ಸಾಧ್ಯ ಅಂತ ಅಂಬೇಡ್ಕರ್ ತಿಳ್ಕೊಂಡಿದ್ರು. ಅಂಬೇಡ್ಕರ್, ಜಯ ಪ್ರಕಾಶ್ ನಾರಾಯಣ, ಮತ್ತು ಸಂವಿಧಾನದ ಕರ್ತೃಗಳೆಲ್ಲಾ ಹೀಗೇ ತಿಳ್ಕೊಂಡಿದ್ರು. ಇದನ್ನ ಸುಳ್ಳು ಅಂತ ನಾನು ಹೇಳ್ತಾ ಇಲ್ಲ, ಯಾಕೆಂದ್ರೆ ಜಾತಿಗಳಲ್ಲಿ ಸಮಾನತೆ ಸಾಧಿಸ್ತಾ ಇದ್ದಾಂಗೇನೇ ಚಲನೆ ಶುರುವಾಗಿರುವುದನ್ನೂ ನಾವು ನೋಡಿದ್ದೇವೆ. ಪೇಟೆಗಳಲ್ಲಿ ಎಲ್ಲಾ ಮುಂದುವರಿದ, ಒಳ್ಳೊಳ್ಳೆ ಸಂಬಳ ಪಡೆಯುವ ಬೇರೆ ಬೇರೆ ಜಾತಿಯವರು ಬೇರೆ ಬೇರೆ ಜಾತಿ ಹೆಣ್ಮಕ್ಕಳನ್ನ ಮದುವೆ ಆಗಿರೋದು ಸಾವಿರಾರು ಇದ್ದಾವೆ. ಅಂದ್ರೆ, ಅಂಬೇಡ್ಕರ್ ಊಹೆಯ ಹಾಗೆ ಜಾತಿಗಳು ವರ್ಣದ ಲಕ್ಷಣವನ್ನ ಪಡೀತಾ ಬಂದಿದ್ದು ನಿಜ.

ಆದ್ರೆ, ಜನ ಅಂತರ್‌ಜಾತಿ ವಿವಾಹ ಆದಮೇಲೂ ಸಹ ನಮ್ಮ ಸಂವಿಧಾನ ಏನ್ ಮಾಡ್ತು ಅಂದ್ರೆ ಇವ್ರು ಪ್ರತ್ಯೇಕ ಗುಂಪು

ನಮ್ಮಲ್ಲಿ ಬಾಳಾ ಜಾತಿಗಳು ತತ್ವದ ನೆಲೆಯಿಂದ ಬಂದಂಥ ಜಾತಿಗಳಲ್ಲ, ಮೇದರ, ಕೊರಚ, ಗಾಣಿಗ, ಕುಂಬಾರ, ಅವರಿವರೆಲ್ಲಾ ಪಾಪ ಅವರವರ ಕೆಲ್ಸ ಏನೇನೋ ಸಮಾಜದಲ್ಲಿ ಮಾಡ್ಕೊಂಡಿದ್ದರೋ ಅವರಿಗೆ ಅದೇ ಜಾತಿ ಅಂತ ಹೇಳಿಬುಟ್ರು ಇವ್ರು. ಅವರೆಲ್ಲ ಯಾವ ಫಿಲಾಸಫಿಯಿಂದಾನೂ ಆ ಜಾತಿಯಲ್ಲಿ ಇದ್ದವರಲ್ಲ, ಗಾಣ ಸುತ್ತಾ ಇದ್ರಿಂದ ಗಾಣಿಗ ಆಗಿದ್ದ, ಮಡಕೆ ಮಾಡ್ತಾ ಇದ್ರಿಂದ ಕುಂಬಾರ ಆಗಿದ್ದ. ಆದ್ದರಿಂದ ಈ ಜಾತಿಗಳಲ್ಲೇ ಏನಾಗುತ್ತೆ ಅಂದ್ರೆ, ಇವರಲ್ಲಿ ಆರ್ಥಿಕ ಸಮಾನತೆ ಬರ್ತಿದ್ದ ಹಂಗೇನೆ ಸಡಿಲವಾಗಿ ಬಿಡ್ತವೆ ಇವು, ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಚಲನೆ ಶುರು ಆಗುತ್ತೆ.



ಅಂತ ಗುರುತ್ಸೋದಕ್ಕೆ ಹೋಗ್ತಾ ಇಲ್ಲಾ, ಗಂಡನ ಜಾತಿಯ ಜೊತೆಗೋ, ಹೆಂಡತಿ ಜಾತಿಯ ಜೊತೆಗೋ ಅವರ ಮಕ್ಕಳು identify ಮಾಡ್ಕೋಬೇಕಾಗಿ ಬಂತು. ಒಕ್ಕಲಿಗನ್ನ ಮದುವೆಯಾಗಿದ್ದರೆ ಅವರ ಮಕ್ಕಳು ಒಕ್ಕಲಿಗ ಅಂತ ಬರೆಸಬೇಕು. ಹರಿಜನರನ್ನ ಮದುವೆಯಾಗಿದ್ದರೆ ಅವರ ಮಕ್ಕಳು ಹರಿಜನ ಅಂತ ಬರಿಸ್ಬೇಕು, ಹೀಗಾಯ್ತು. ಆಗ ಏನಾಯ್ತು ಅಂದ್ರೆ ಅವರ ಅಪ್ಪ ಅಮ್ಮನ್ನೆಲ್ಲಾ ಎದುರು ಹಾಕ್ಕೊಂಡು, ಇಡೀ ಸಮಾಜಾನಾ ಎದುರು ಹಾಕ್ಕೊಂಡು ಆ ಸಬ್‌ರಿಜಿಸ್ಟ್ರಾರ್ ಆಫೀಸಿನ ಕ್ಲರ್ಕುಗಳನ್ನೂ ಎದುರು ಹಾಕ್ಕೊಂಡು ಅಂತರ್ಜಾತೀಯ ವಿವಾಹ ಆಗ್ತಾ ಇದ್ದಾರೆ.

ಆದ್ರೆ ನಮ್ಮ ಸಂವಿಧಾನ ಇದನ್ನ ಮತಾಂತರವನ್ನಾಗಿ ಮಾಡ್ತಾ ಹೋಗ್ತಾ ಇದೆ. ನೀನು ಅವನ್ನ ಮದುವೆ ಆದ್ರೆ ಅವ್ನ ಜಾತಿ ಒಪ್ಪು ಅಂತ. ಇದೇ ಬಹಳ ದೊಡ್ಡ ಸಮಸ್ಯೆ. ಅಂಬೇಡ್ಕರ್‌ಗೆ ಇದು ಗೊತ್ತಿರಲಿಲ್ಲ ಅಂತಲ್ಲ, ಯಾಕೆ ಅಂದ್ರೆ ಭಾರತದಲ್ಲಿ ಒಬ್ಬನ ಅಸ್ತಿತ್ವವನ್ನು ಯಾವುದೋ ಒಂದು ಜಾತಿಯ ಮುಖಾಂತರಾನೇ ಪಡೆದುಕೊಳ್ಳಬೇಕಾದ ಅನಿವಾರ್ಯತೆ ಇದೆ. ಆದ್ದರಿಂದಲೇ ಜಾತ್ಯತೀತರನ್ನೆಲ್ಲಾ ಬೇರೆ ಗ್ರೂಪ್ ಅಂತ ಪರಿಗಣಿಸದೇ ಇದ್ರೆ ಇವರು ಮತ್ತೆ ಅದೇ ಜಾತಿಗಳಿಗೆ ಸೇರ್ಕೊಂಡು ಕೂತಿರ್ತಾರೆ ಅನ್ನೋದು ಅಂಬೇಡ್ಕರ್‌ರಿಗೆ ಗೊತ್ತಿರಲಿಲ್ಲ ಅನ್ನೋದನ್ನ ನಾನು ಒಪ್ಪೋದಿಲ್ಲಾ, ಯಾಕೆಂತ ಕೇಳಿದ್ರೆ ಅವರೇ ಬೌದ್ಧಧರ್ಮಕ್ಕೆ ಸೇರಿದ್ರು. ಆದರೆ ಅವರು ತಮ್ಮ ಮಟ್ಟಿಗೆ ವೈಯಕ್ತಿಕವಾಗಿ ಸಮಸ್ಯೆಯನ್ನು ಪರಿಹರಿಸಿದರೇ ಹೊರತು ಇದಕ್ಕೆ ಒಂದು ಸಾಂವಿಧಾನಿಕ ಪರಿಹಾರವನ್ನು ರೂಪಿಸಲಿಲ್ಲ. ನಾನು ಯಾವ ಜಾತಿಗೂ ಸೇರಲ್ಲ ಅಂತ ಹೇಳೋರು ಅಂತರ್ ಪಿಶಾಚಿ ಆಗಿಬಿಡ್ತಾರೆ. ನೀನು ಯಾವ ಜಾತಿಗೂ ಸೇರೋದಿಲ್ಲಾ ಅಂತಾದ್ರೆ ನಿನಗೇ ಒಂದು ವರ್ಗ ಇದೆ ಅಂತ ಹೇಳ್ಬೇಕು. ಅದನ್ನ ನಾವು ಮಾಡಿಲ್ಲ, ಈಗ ನೋಡಿದ್ರೆ ಯಾರಿಗೂ ಸೆಕ್ಯುಲರಿಸಂ ಬೇಕಾಗಿಲ್ಲ, ಜಾತ್ಯಾತೀತತೇನೂ ಬೇಕಾಗಿಲ್ಲ, ಇರೋ ಜಾತಿಗೇ ಮೂರ್ಕಾಸೋ, ಆರ್ಕಾಸೋ ಲಾಭ ಸಿಕ್ತಾ ಇರ್ಬೇಕಾದ್ರೆ ಅದಕ್ಕೂ ಕಲ್ಲು ಹಾಕೋಕೆ ಬಂದಿದ್ದಾರೆ ಅಂತ ಅವರೇ ನಮ್ಗೆ ಬೈತಾರೆ. ಈಗ ನಮಗೆ ಯಾರು, ಹೇಗೆ ನೆರವಾಗಬಹುದು?

ನೀವು ಸೀರಿಯಸ್ ಆಗಿದ್ರೆ ಇಷ್ಟೊತ್ತಿಗೆ ಈ ಪ್ರಶ್ನೆ ನಿಮಗೆ ಬಂದಿರ್ತಿತ್ತು. ನಿಮ್ಮಲ್ಲಿ ಅರ್ಧ ಜನ 'ಏನ್ ತೊಂದರೆ, ನಿದಾನಕ್ಕಾಗ್ಲಿ, secular society ಹಿಂಗೇ ನಡ್ಕೊಂಡು ಹೋಗ್ತಾ ಇರ್ಲಿ, ಪರ್ವಾಗಿಲ್ಲ, ಇನ್ನು ೫೦ ವರ್ಷ ಇದೇ ತರ ಒಂದ್ ಜಾತಿಯವರನ್ನ ಇನ್ನೊಂದ್ ಜಾತಿಯವರು ಬೈತಾ ಒಬ್ಬರ ಮೇಲ್ ಒಬ್ರು ಜಗಳ ಆಡ್ತಾ ಕಚ್ಚಾಡ್ತಾ ನಡ್ಕೊಂಡು ಹೋಗ್ತಾ ಇರ್ಲಿ' ಅನ್ನುವವರಿದ್ದೀರ. ಇನ್ನೂ ೫೦ ವರ್ಷ ಹಿಂಗೇ ಕಳೆಯೋಕೆ ತಯಾರಾಗಿದ್ದೀರಾ. ಆದ್ದರಿಂದ ಇದು

ಪರಿಹಾರ ಆಗಲ್ಲ. ಇದಕ್ಕೇ ಟೆಕ್ನಿಕಲ್ ಆಗಿ ನಾವು ಯಾವುದಾದ್ರೊಂದು ಪರಿಹಾರ ಕಂಡುಹಿಡಿಯ ಬೇಕು. ಈ ಕಾರಣಕ್ಕಾಗಿಯೇ ನಾನು ಜಾತ್ಯತೀತರು ಅಂತ ಹೇಳಿ ಇವ್ರನ್ನ ಪರಿಗಣಿಸಿ, ಇವರಿಗೆ ೧% ರಿಸರ್ವೇಶನ್ ಕೊಡಿ ಅಂತ ಹೇಳಿದ್ದು. ೧% ರಿಸರ್ವೇಶನ್‌ನಿಂದ ಇವರ್ಗೆ ಏನೂ ಆಗಬೇಕಾಗಿಲ್ಲ. ಜಾತ್ಯತೀತರಿಗೆ recognition ಬೇಕು. ಸರ್ಕಾರ ಅವರನ್ನ ಗುರುತಿಸಬೇಕು. They are a separate group ಅಂತ ಗುರುತಿಸಬೇಕು. ವಾಜಪೇಯಿ ಅವರು ಎರಡ್ಮೂರು ವರ್ಷದ ಹಿಂದೆ ಹೇಳಿದ್ರು - ಕಾಮನ್ ಸಿವಿಲ್ ಕೋಡ್ ಬೇಕೂಂತ. ಇಂಡಿಯಾ ದೇಶಕ್ಕೊಂದು ಸಮಾನ ನಾಗರಿಕ ಸಂಹಿತೇನ ಕೊನೆ ಪಕ್ಷ ಐಚ್ಛಿಕವಾಗಿ ಆದ್ರೂ ತರೋಣ. ಭಾರತೀಯ ಅಂತ ನಾನು ಬರ್ಕಂಡು ಬಿಡ್ತಿನಪ್ಪ. ನನಗೆ ಯಾವ ಜಾತೀನೂ ಬೇಡ, ಯಾವ ಗೋಳೂ ಬೇಡ ಅಂತ ಹೇಳೋರೂ ಯಾರಾದರೂ ಇದ್ರೆ, ಅದ್ರಲ್ಲಿ ತಮ್ಮ ಹೆಸರನ್ನ ನಮೂದನೆ ಮಾಡ್ಲಿ. ನಾವು ಕಡ್ಡಾಯವಾಗಿ ಅಂತರ್‌ಜಾತೀಯ ವಿವಾಹವಾದವರೆಲ್ಲಾ ಅದಕ್ಕೆ ಬರಿಸ್ಬೇಕು ಅಂತನೂ ಅಲ್ಲ. ಈ ಜಾತೀಲೇ ಉಳಿಕ್ಕೊಂಡಿರ್ತಿ ಅಂತಾದ್ರೆ ಉಳ್ಕೋಪ್ಪಾ ಅನ್ನೋಣ. ಆದ್ರೆ ಈ ದೇಶದಲ್ಲಿ ನಿಜವಾಗಲೂ ಈ ಹಾಳು ಜಾತಿಗಳ ತಾಪತ್ರಯಗಳಿಂದ ಆಚೆ ಹೋಗ್ಬೇಕು ಅಂತ ಇರೋರು, ಹೋಗದೆ ಇರುವವರು ಎಷ್ಟು ಜನ ಅಂತ ಇದ್ದಾರೆ ಅಂತ ಆದರೂ ಗೊತ್ತಾಗುತ್ತಿತ್ತು.

ನಾನು ಹೇಳುವ ಕಾಮನ್ ಸಿವಿಲ್ ಕೋಡ್ ಏನೂಂದ್ರೆ ನಾವು ಯಾವ ಜಾತಿಗೂ ಸೇರಿದವರಲ್ಲ, ನಾವು ರಾಷ್ಟ್ರೀಯ ನಾಗರಿಕ ಸಂಹಿತೆಗೆ ಸಂಬಂಧ ಪಟ್ಟವರು. ಈ ಹಾಳು ದೇವರುಗಳು, ಆಚಾರಿಗಳು, ಶಾಸ್ತ್ರಗಳು ಎಲ್ಲಾದರೂ ಜೀವ್ನ ಮಾಡ್ಕಳ್ಳಿ, ನಮಗೆ ಸಂವಿಧಾನವೇ ನಮ್ಮ ಆಚಾರ ಸಂಹಿತೆ ಅಂತ ಹೇಳೋ ಅಂತವರು. ಅಂಥವರು ಯಾರಾದರೂ ಇದ್ದರೆ ಅದ್ರಲ್ಲಿ sign ಮಾಡಿಕೊಳ್ಳಿ. ಕೊನೆ ಪಕ್ಷ



ಐಚ್ಛಿಕವಾಗಿಯಾದರೂ ಇಷ್ಟ ಇದ್ದೋರು ಸೇರಕ್ಕಾದರೂ ಅದರಲ್ಲಿ ಆಗ್ತಿತ್ತು. ಆದರೆ ಅಷ್ಟೊತ್ತಿಗೆ ಏನಾಯಿತು, ಓಹೋ ಇದು ಹಿಂಗ್ ಮಾಡಿಬಿಟ್ಟರೆ ಹೆಂಗೆ ಅಂತ ತರಲೆ ಶುರುವಾಯ್ತು. ಜಾತಿ ಇಲ್ಲದೇನೆ ಉಸಿರಾಡೋಕ್ಕೆ ಆಗೋದಿಲ್ಲಾ ನಮ್ಮ ರಾಜಕೀಯ ಪಕ್ಷಗಳಿಗೆ. ಇವರ ಹತ್ತಿರ ಜಾತಿ ಬಿಟ್ಟರೆ ಬೇರೆ ಬಂಡವಾಳವೇ ಇಲ್ಲಾ. ಬರೀ ಜಾತಿ ಇರೋವರೆಗೆ ಮಾತ್ರ ಅವು ಬದುಕಿರುತ್ತವೆ. ನಮ್ಮ ಅರ್ಥ ರಾಜಕೀಯ ಪಕ್ಷಗಳೆಲ್ಲಾ ಜಾತಿ ಇರುವರೆಗೆ ಮಾತ್ರ ಬದುಕಿರುತ್ತವೆ. ಸಾಬರಿರುವರೆಗೆ ಮಾತ್ರ ಬಿಜೆಪಿ ಆಟ. ಸಾಬರ ಸಮಸ್ಯೆ ಪರಿಹಾರ ಆಯ್ತು ಅಂದ್ರೆ ಇವರಿಗೆ ಓಟಲ್ಲ. ಆದ್ದರಿಂದ ಏನಾಯ್ತು ಇವರು ಹೋಗಿ ನಮ್ಮನ್ನೆಲ್ಲಾ ಹಾಳುಮಾಡ್ತೀರಾ ತೆಗೀತೀರಾ ಅಂತ ಗಲಾಟೆ ಮಾಡಿದ್ರು. ಆಮೇಲೆ ವಾಜಪೇಯಿ ಮಾತಾಡಲಿಲ್ಲ. ನಾನು ಇವರಿಗೆ ಹೇಳಿದ್ದು, ಸಂವಿಧಾನ ಬದಲಾವಣೆ ಮಾಡಿ ಅಲ್ಲಿ ರಿಪೇರಿ ಮಾಡೋದು ನಮ್ಮ ಕೈಲಿ ಆಗದೇ ಇರೋ ಕೆಲಸ. ಕಾನೂನು ಮಂತ್ರಿ ಚಂದ್ರೇ ಗೌಡರ ಹತ್ತಿರ ಹೇಳಿದೆ: 'ರವಿವರ್ಮಕುಮಾರ್ ವರದಿಯಲ್ಲಿ ಶಿಫಾರಸ್ಸು ಮಾಡಿದಂತೆ, ಅಂತರ್ ಜಾತೀಯ ವಿವಾಹಿತರಿಗೆ

ನಾನು ಹೇಳುವ ಕಾಮನ್ ಸಿವಿಲ್ ಕೋಡ್ ಏನೂಂದ್ರೆ ನಾವು ಯಾವ ಜಾತಿಗೂ ಸೇರಿದವರಲ್ಲ, ನಾವು ರಾಷ್ಟ್ರೀಯ ನಾಗರಿಕ ಸಂಹಿತೆಗೆ ಸಂಬಂಧ ಪಟ್ಟವರು. ಈ ಹಾಳು ದೇವರುಗಳು, ಆಚಾರಿಗಳು, ಶಾಸ್ತ್ರಗಳು ಎಲ್ಲಾದರೂ ಜೀವ್ನ ಮಾಡ್ಕಳ್ಳಿ, ನಮಗೆ ಸಂವಿಧಾನವೇ ನಮ್ಮ ಆಚಾರ ಸಂಹಿತೆ ಅಂತ ಹೇಳೋ ಅಂತವರು. ಅಂಥವರು ಯಾರಾದರೂ ಇದ್ದರೆ ಅದ್ರಲ್ಲಿ sign ಮಾಡಿಕೊಳ್ಳಿ. ಕೊನೆ ಪಕ್ಷ ಐಚ್ಛಿಕವಾಗಿಯಾದರೂ ಇಷ್ಟ ಇದ್ದೋರು ಸೇರಕ್ಕಾದರೂ ಅದರಲ್ಲಿ ಆಗ್ತಿತ್ತು. ಜಾತಿ ಇಲ್ಲದೇನೆ ಉಸಿರಾಡೋಕ್ಕೆ ಆಗೋದಿಲ್ಲಾ ನಮ್ಮ ರಾಜಕೀಯ ಪಕ್ಷಗಳಿಗೆ. ಇವರ ಹತ್ತಿರ ಜಾತಿ ಬಿಟ್ಟರೆ ಬೇರೆ ಬಂಡವಾಳವೇ ಇಲ್ಲಾ. ಬರೀ ಜಾತಿ ಇರೋವರೆಗೆ ಮಾತ್ರ ಅವು ಬದುಕಿರುತ್ತವೆ.

ಒಂದು ಪರ್ಸೆಂಟ್ ಮೀಸಲಾತಿ ಕೊಡಿಸಿ' ಅಂತ. ಅವರಿಗೆ ಒಂದು ನೂರು ಸರಿ ಹೇಳಿದ್ದೀನಿ ಕಂಡ್ರಿ. ಎಲ್ಲರಿಗೂ ನೋಡಿ, ಒಳಗೊಳಗಿನಿಂದನೇ ಜಾತ್ಯತೀತತೆ ಅಂದ್ರೆ ಏನೋ ವಾಸ್ನೆ ಸಿಕ್ಕುತ್ತೆ ಅವರಿಗೆ, ಏನೋ ಅಪಾಯ ಇದೆ ಇದ್ರಲ್ಲಿ ನಮ್ಗೆ ಅಂತ ಅವರಿಗೆ ಅನ್ನಿಸುತ್ತೆ. ಯಾವುದೂ ಗೊತ್ತಾಗದಿದ್ದರೂನೂ ಇದರಲ್ಲಿ ಏನೋ danger ಇದೆ ಅಂತ ಅವರಿಗೆ ಅನ್ಸುತ್ತೆ. ಹಾಗೇ ಮಾಡೋಣ ಬಿಡಿ ಅಂತಾರೆ, ಆದ್ರೆ ಮಾಡಲ್ಲ.



ನಮ್ಮ ಸುಪ್ರೀಂಕೋರ್ಟ್ ಆಗಲಿ, ಯಾವ ಕೋರ್ಟೇ ಆಗಲಿ ಇದು ತಪ್ಪು, ಇದು ಬ್ಯಾಡ ಅಂತ ಹೇಳಲ್ಲಾ. ಯಾರೂ ಇದು ಬೇಡ ಅಂತ ಬೈಯೋದಿಲ್ಲಾ. ಇದಕ್ಕೆ ವಿರೋಧಾನೇ ಇಲ್ಲಾ. ಆದ್ರೂ ಇದನ್ನ ಮಾಡ್ತಾ ಇಲ್ಲ. ಆದ್ದರಿಂದ ಏನಾಗುತ್ತೆ ಅಂದ್ರೇ ಇದು ಹೀಗೆ ನಡ್ಕೊಂಡು ನಡ್ಕೊಂಡು ಹೋಗ್ತಾ ಇದೆ. ನಾನೇಳಿದ್ದು ಅದಕ್ಕೇ ಅವರಿಗೆ ೧% ಮೀಸಲಾತಿ ಕೊಡಿ. ಆಗ ಏನಾಗುತ್ತೆ ಅಂದ್ರೆ, ಇಲ್ಲಿ ನೀವು ಅಂತರ್ಜಾತೀಯ ವಿವಾಹಿತರನ್ನು ಪ್ರತ್ಯೇಕ ವರ್ಗ ಅಂತ ಗುರುತಿಸಿದ ತಕ್ಷಣ ಅದನ್ನ ಸಂವಿಧಾನದ ಮುಖಾಂತರ ಸಹಿತ ಮಾಡಬೇಕಾಗುತ್ತೆ. ನಿಧಾನವಾಗಿ ಅದು ಸಂವಿಧಾನ ಬದಲಾವಣೆ ಮಾಡೋ ಮಟ್ಟಕ್ಕೂ ಹೋಗಬಹುದೇನೊ. ಆದ್ದರಿಂದ, ಒಂದು ಹೆಜ್ಜೆ ಮುಂದೆ ಇಡಿ ಅಂತ ಹೇಳಿ ನಾನು ರವಿವರ್ಮಕುಮಾರ್ ಆಯೋಗಕ್ಕೆ ಬರೆದೆ. ಅವರಿಗೂ ಅರ್ಥವಾಯಿತು. ಪಾಪ, ಅವರು ತಮ್ಮ ಪರಿಮಿತಿಯೊಳಗೆ ಏನು ಮಾಡಬೇಕೋ ಅದನ್ನ ಮಾಡಿದ್ದಾರೆ. ಅವರು ಇಷ್ಟೆಲ್ಲಾ ಮಾಡಿದ ಮೇಲೂ ಅದನ್ನ ತೆಗೆದು ಬಿಸಾಕಿಕೊಂಡು ಕೂತಿದ್ದಾರೆ ಈ ಸರ್ಕಾರದವರು. ಅವರಿಗೆ ಹ್ಯಾಗೆ ಬುದ್ಧಿ ಹೇಳೋದೂಂತ ನನಗೆ ಗೊತ್ತಿಲ್ಲ.

ನಮ್ಮ ಜೊತೆ ಯಾರಿದ್ದಾರೆ ಅಂತಾನೂ ಅನುಮಾನವಿದೆ. ನಿಜವಾಗಲೂ ನಮ್ಮ ಜೊತೆ ಯಾರಿದ್ದಾರೆ ಅಂತ ಕೂಡ ಅನುಮಾನವಿದೆ. ಇನ್ನು ನಮ್ಮ ಮಾತು ತಕ್ಕೊಂಡು ಓಟು ಹಾಕುವವರಾದರೂ ಇದಾರೋ ಅನ್ನೋದೆ ಗೊತ್ತಿಲ್ಲದೇ ಇರೋ groupನ ಪೂಸಿ ಹೊಡೆದು ಏನೋ ಆಗಬೇಕಾಗಿಲ್ಲ ಅವರಿಗೆ. So ಹಾಗೇ ಇರಲಿ ಅಂತ ಆ ಇಡೀ ರವಿವರ್ಮಕುಮಾರ್ ವರದಿಯನ್ನು ಹಂಗೇ ಬಿಸಾಕಿದ್ದಾರೆ. ಇನ್ನು ಯಾವ ತರ ಆಗುತ್ತೋ ಗೊತ್ತಿಲ್ಲ. ಅದಕ್ಕೆ ಹ್ಯಾಗೆ ಒತ್ತಡ ಸೃಷ್ಟಿ ಮಾಡಬೇಕೋ ಯೋಚನೆ ಮಾಡಿ ಅನ್ನೋದೇ ನನ್ನ ವಿನಂತಿ. ಇಷ್ಟು ಹೇಳಿ ನನ್ನ ಮಾತನ್ನ ಮುಗಿಸುತ್ತಿದ್ದೇನೆ. ದಯವಿಟ್ಟು ತಾವು ಹೇಳತಕ್ಕಂತದ್ದು ಇದ್ದರೆ ಹೇಳಿ. ಕೇಳತಕ್ಕಂಥದ್ದು ಇದ್ದರೆ ಕೇಳಿ.

ಸಂವಾದ

ಅಂತರ್ಜಾತಿ ವಿವಾಹಿತರಿಗೆ ಮೀಸಲಾತಿ ಬೇಕು

೧) ಪಠ್ಯ ಪುಸ್ತಕಗಳಲ್ಲಿ ಜಾತ್ಯತೀತತೆ, ಅಂತರ್‌ಜಾತಿ ವಿವಾಹಗಳ ಬಗ್ಗೆ ಪಾಠಗಳನ್ನು ಇಟ್ಟರೆ ಪ್ರಯೋಜನ ಆಗಬಹುದೇ?

(ನಗು) ಆಗಬಹುದು. ಪಾಠಗಳು ಇದ್ದರೆ ಅದಕ್ಕೆ ಪರೀಕ್ಷೆಗಳು ಇರುವುದರಿಂದ ಪ್ರಯೋಜನ ಆಗೋದು ಕಷ್ಟ! ಯಾವ್ಯಾವ ಪಾಠಗಳಿಗೆ ಪರೀಕ್ಷೆ ಇದೆಯೋ ಅವು ಬಾಳ un-popular ಆಗ್ತವೆ. ಆದ್ದರಿಂದ ಇಪ್ಪತ್ತೆಂಟು ಯೋಜನೆ ಮಾಡೋದು ಬ್ಯಾಡ. ಇವಾಗ ಕನಿಷ್ಟ ಕಾರ್ಯಕ್ರಮವನ್ನು ಯೋಚನೆ ಮಾಡೋಣ. ಪಾಠಗಳಲ್ಲಿ ಇದನ್ನ ಮಾಡಿ ಅನ್ನೋದು, ಆಮೇಲೆ ವಿಲೋಮ ಪದ್ಧತಿ, ಅನುಲೋಮ ಪದ್ಧತಿ ವಿವಾಹಗಳು ಅನ್ನೋದು, ಆಮೇಲೆ ಮೀಸಲಾತೀನೇ ಕಿತ್ತುಹಾಕಿಬಿಡೋಣ ಅಂತ ಹೇಳಿಬಿಡೋದು.... ಈ ತರ ಒಬ್ಬೊಬ್ಬರೂ ಒಂದೊಂದು ತಲೆಗೆ ಬಂದಂಗೆ ಮಾತಾಡ್ತ ಇದ್ದರೆ, ಇವು ಯಾರಿಗೂ ಏನೂ ಆಗಬೇಕಾಗಿಲ್ಲ ಅಂತ ಚಂದ್ರೇಗೌಡರು ಆರಾಮಾಗಿ ನಿದ್ದೆ ಮಾಡ್ತಾ ಇರ್ತಾರೆ. see ನೀವು ಮಾತಾಡುವ ಭಂಗಿಯಲ್ಲೇ, ನಿಮ್ಮ ಉಕ್ತಿ ಕ್ರಮದಲ್ಲೇ ಅವರಿಗೆ ಸ್ಪಷ್ಟವಾಗಿ ಗೊತ್ತಾಗುತ್ತೆ- ಇವ್ನು ಅಕ್ಕಪಕ್ಕದವರ ಇಂಪ್ರೆಸ್ ಮಾಡೋಕೆ ಮಾತಾಡ್ತಾ ಇರವ್ನು, ಅಷ್ಟೇ ಹೊರತು ಇವನಿಗೆ ಆಗಬೇಕಾದದ್ದು ಏನೂ ಇಲ್ಲ ಅನ್ನೋದು. ರಾಜಕಾರಣಿಗಳಿಗೆ ಸ್ಪಷ್ಟವಾಗಿ ಗೊತ್ತಾಗುತ್ತೆ- ಬೊಗಳೆ ಬೊಗಳಿಕೊಂಡು ತಿರುಗ್ತಾ ಇರೋರು ಇವ್ರು ಅಂತ.

ಆದ್ರಿಂದ ಕೆಲವು ಕನಿಷ್ಟ ಕಾರ್ಯಕ್ರಮಗಳನ್ನು ಹಾಕ್ಕೊಂಡು ಅದನ್ನ ಹ್ಯಾಗ್ಯಾದ್ರೂ ಮಾಡಿ ಅನುಷ್ಠಾನಕ್ಕೆ ತರೋದಕ್ಕೆ ಪ್ರಯತ್ನ ಮಾಡಿ. ಅದು ಹಿಂಗೆ ಮಾಡಿದ್ರೆ ಆಗಬೋದಲ್ಲಾ, ಹಂಗೆ ಮಾಡಿದ್ರೆ ಆಗಬೋದಲ್ಲಾ ಅನ್ನೋದನ್ನ ಇನ್ನು ಮಾತಾಡಬಾರದು. ನಾವು ಹೇಳ್ತಾ ಇರೋದು ಏನು, ಅಂತರ್‌ಜಾತಿ ವಿವಾಹ ಆಗಬೇಕು, ಆದೋರಿಗೆ ಅವರದೇ ವಿಶಿಷ್ಟವಾದ ಗುಂಪು ಅಂತ ನಿಷ್ಕರ್ಷ ಮಾಡಿ ನೀವು ೧% ಮೀಸಲಾತಿ ಕೊಡಿ, ಅಷ್ಟೆ ಇದು ನಮ್ಮ ಪ್ರೋಗ್ರಾಂ. ಪಠ್ಯ ಪುಸ್ತಕಗಳಲ್ಲಿ ಇಡಿ, ಅವೆಲ್ಲಾ ನಿಧಾನಕ್ಕೆ. ಇದಾದ ಮೇಲೆ ಮೀಸಲಾತಿ ಮುಂದುವರಿದಂಗೂ ಮುಂದುವರಿದಂಗೂ ಬೇರೆ ಬೇರೆ ಮೀಸಲಾತಿ ಕೆಳಗೆ ಹೋಗುತ್ತಲ್ಲಾ, ಅದನ್ನೆಲ್ಲಾ ತೆಗೆದು ಜಾತ್ಯತೀತ ಪಂಗಡಕ್ಕೆ ಮೀಸಲಾತಿ ಹಾಕ್ತಾ ಬರ್‍ಲಿ, ಅದರ ಬಗ್ಗೆ ನಿಮ್ಮನ್ನ ಕೇಳಿದ್ರೆ ಹೇಳಿ. ಇಲ್ಲದೆ ಹೋದ್ರೆ ಈ ವಿಷಯಾನೇ ಎತ್ತಬೇಡಿ. ೧% ಮೀಸಲಾತಿ ಕೊಡಿ. ಅರ್ಧ ಪರ್ಸೆಂಟ್ ಬೇಕಾದರೂ ಕೊಡಿ. reservation ಕೊಡಿ. who is really secular group ಅನ್ನೊದನ್ನ define ಮಾಡಲಿ. ಹೆಚ್ಚಿಗೆ ಮಾತಾಡಿದಂಗೆ ಬೊಗಳೆ ದಾಸರಾಗಿ ಹೋಗ್ತೀವಿ. ಅಷ್ಟು ನನ್ನ ಅಭಿಪ್ರಾಯ.

೨) ನಿಮ್ಮ ಬರವಣಿಗೆಯಿಂದ ವರ್ಷಕ್ಕೆ ಒಂದು ನೂರು ಯುವಕರು ಪರಿವರ್ತನೆ ಆದರೆ ಅದೇ ಅದ್ಭುತ ಸಾಧನೆಯಲ್ಲವೆ? ಅದು ನಿಮ್ಮಿಂದ ಸಾಧ್ಯ.

ಆಯ್ತು ಸಾರ್, ಅದಕ್ಕೇನಂತೆ ಮಾಡೋಣ! ಅಲ್ಲಾ ಆ ವಿಷಯದಲ್ಲಿ ಸತ್ಯವ್ರತ ಅವರಿಗೂ ನನಗೂ ಬಾಳ ವ್ಯತ್ಯಾಸ ಇದೆ. ಮೀಸಲಾತಿಯ ಆಸೆಗೋಸ್ಕರ ಅಂತರ್‌ಜಾತಿಯ ವಿವಾಹ ಆಗಬೇಕು ಅಂತ ಆಗ್ಲಿ, ಅಥವಾ ಸಮಾಜ ಪರಿವರ್ತನೆ ಮಾಡಕ್ಕಾಗಿ ಅಂತರ್‌ಜಾತಿಯ ವಿವಾಹ ಆಗಬೇಕು ಅಂತನೇ ಆಗ್ಲಿ ನಾವು ಬೇರೆಯವರಿಗೆ ಹೇಳೋದು ಬಾಳ

> **ಅಂತರ್‌ಜಾತಿ ವಿವಾಹ ಆಗಬೇಕು, ಆದೋರಿಗೆ ಅವರದೇ ವಿಶಿಷ್ಟವಾದ ಗುಂಪು ಅಂತ ನಿಷ್ಕರ್ಷ ಮಾಡಿ ನೀವು ೧% ಮೀಸಲಾತಿ ಕೊಡಿ, ಅಷ್ಟೆ ಇದು ನಮ್ಮ ಪ್ರೋಗ್ರಾಂ. ಪಠ್ಯಪುಸ್ತಕಗಳಲ್ಲಿ ಇಡಿ, ಅವೆಲ್ಲಾ ನಿಧಾನಕ್ಕೆ, ಇದಾದ ಮೇಲೆ ಮೀಸಲಾತಿ ಮುಂದುವರಿದಂಗೂ ಮುಂದುವರಿದಂಗೂ ಬೇರೆ ಬೇರೆ ಮೀಸಲಾತಿ ಕೆಳಗೆ ಹೋಗುತ್ತಲ್ಲಾ, ಅದನ್ನೆಲ್ಲಾ ತೆಗೆದು ಜಾತ್ಯತೀತ ಪಂಗಡಕ್ಕೆ ಮೀಸಲಾತಿ ಹಾಕ್ತಾ ಬರ್‍ಲಿ, ೧% ಮೀಸಲಾತಿ ಕೊಡಿ. ಅರ್ಧ ಪರ್ಸೆಂಟ್ ಬೇಕಾದರೂ ಕೊಡಿ. reservation ಕೊಡಿ. who is really secular group ಅನ್ನೊದನ್ನ define ಮಾಡಲಿ.**

ತಪ್ಪು, ಜಾತಕ ನೋಡಿ ಮದುವೆ ಮಾಡೋದು ಎಷ್ಟು ಕೆಟ್ಟದ್ದೋ, ಅಷ್ಟೇ ಕೆಟ್ಟದ್ದು ಇದು. ನೀನು ನಿನಗೆ ತೋಚಿದೋರನ್ನ ಮದುವೆ ಆಗು. ಅವರು ಆಕಸ್ಮಾತ್ ಬೇರೆಯವರಾಗಿದ್ದರೆ ಒಳ್ಳೆಯದಾಯ್ತು, ಇಲ್ದೇ ಬೇರೆ ಜಾತಿಯವಳನ್ನೇ ಹುಡುಕಿಕೊಂಡು ಹೋಗಿ ಮದುವೆ ಆಗ್ತೀನಿ ಅಂತ ಹೇಳಿದ್ರೆ, ಜಾತಕ ಕೂಡಿ ಬರೋದಿಲ್ಲಾ ಅಂತ ಹುಡುಕಿಕೊಂಡು ಮದುವೆ ಆಗೋದು ಎಷ್ಟು ಕೆಟ್ಟದ್ದೊ, ಇದೂ ಅಷ್ಟೇ ಕೆಟ್ಟದಾಗಿರುತ್ತೆ ಅಂತ ನನ್ನ ಅಭಿಪ್ರಾಯ.

೩) ಆಧುನಿಕ ನಾಗರಿಕತೆ ಈ ಜಾತೀಯತೆಯನ್ನು ನಾಶಗೊಳಿಸಬಲ್ಲದು ಎನ್ನಿಸಿದೆಯೇ?

ಆಧುನಿಕ ನಾಗರಿಕತೆ ಯಾವ ರೀತಿಯಿಂದ ನಾಶಗೊಳಿಸಬಲ್ಲದು ಅನ್ನೋದಕ್ಕೆ ನನ್ನಲ್ಲಿ ಕೆಲವು ಸುಳಿವು ಇದೆ. ಈಗ ನಾವು ಏನೂ ಮಾಡ್ದೆ ಇದ್ರೋನೂ ಈ ಜಾತಿ ಅನಂತ ಕಾಲವೂ ಮುಂದುವರಿದುಕೊಂಡು ಹೋಗೋದು ಸುಳ್ಳು. ಈಗಾಗಲೇ ಎಲ್ಲರಿಗೂ ತಲೆಕೆಟ್ಟು ಹೋಗುವಷ್ಟು ಬೇಜಾರಾಗಿ ಹೋಗಿವೆ ಈ ಜಾತಿ ಜಗಳಗಳು. ಕಾಶ್ಮೀರದಲ್ಲಿ, ಗುಜರಾತ್‌ನಲ್ಲಿ ಬೇರೆ ಕಡೆಗಳಲ್ಲಿ ಎಲ್ಲಾ ಯಾವ ಲೆವೆಲ್‌ನಲ್ಲಿ ನಡೀತಾ ಇದೆ ಅಂದ್ರೆ, ಎಲ್ಲರಿಗೂ ತಲೆ ಚಿಟ್ಟು ಹಿಡಿದು ಹೋಗಿದೆ. ಆದ್ದರಿಂದ ಮುಂದಿನ ದಾರಿ ಏನು ಅಂತ ನೋಡಬೇಕು. ಇಲ್ದೆ ಇದ್ರೆ globalisation is going to change this ಅನ್ನೋ ಊಹೆ ನನ್ನದು. ಯಾಕೆ ಅಂತ ಹೇಳಿದರೆ, ಈ ಜಾಗತಿಕ ಬದಲಾವಣೆ ಇದೆ ನೋಡಿ, ನಿಮಗಿಂತ ಸಮರ್ಥವಾದ, ನಿಮಗಿಂತ ದಕ್ಷವಾದ ಇನ್ನೊಂದು ನಾಗರಿಕತೆಯ ಸವಾಲು ಇದೆಯಲ್ಲಾ ಅದನ್ನ ನಾವು ಅವ್ನು ಬ್ರಾಹ್ಮಣ, ಇವ್ನು ಇಂತೋನು ಅಂತ ಹೇಳಿಕೊಂಡು ಕೂತಿರೋ ಅಂತ ಒಂದು ಸಮಾಜ ಎದುರಿಸೋಕೆ ಸಾಧ್ಯ ಆಗಲ್ಲ, ಇಲ್ಲಾ ಅಂದ್ರೆ ಅದರ ಆಚೆಗೆ ಬರಬೇಕು. ಇಲ್ಲಾ, ಈ ರೈತರು ನೇಣುಹಾಕಿಕೊಂಡಿದ್ದಾರಲ್ಲಾ, ಹಂಗೆ ಎಲ್ಲರಿಗೂ ಎಲ್ಲರ ಕುತ್ತಿಗೆಗೂ ಬರುತ್ತೆ ನೇಣು. ಆದ್ದರಿಂದ ಈ ಗ್ಲೋಬಲ್ ಚಾಲೆಂಜನ್ನ ಎದುರಿಸಬೇಕು. ಕುತ್ತಿಗೆಗೆ ಬರ್‍ದೆ ಇದ್ರೆ ನಮ್ಮ ದೇಶ ಇನ್ನೂ ೫೦ ವರ್ಷ ಹಿಂಗೆ ಇರುತ್ತೆ, ಲಂಚಾನೂ ಹೊಡಿತಿರ್ತಾರೆ ಇಲ್ಲಿ, ಪ್ರವಚನಾನೂ ಹೇಳ್ತ ಇರ್ತಾರೆ, ಭಗವದ್ಗೀತೇನೂ ಓದ್ತಾ

ಇರ್ತಾರೆ. ಮಂದಿರ ಕಟ್ಟಬೇಕು, ಮಸೀದಿ ಕಟ್ಟಬೇಕು ಅಂತ ತೀರ್ಮಾನ ಮಾಡಿ ಗಲಾಟೆ ಮಾಡ್ತ ಇರ್ತಾರೆ ಇನ್ನೂ ೫೦ ವರ್ಷ. ಒಂದೆರಡು ವರ್ಷ ಅಲ್ಲ ಇನ್ನೂ ೫೦ ವರ್ಷ ಹಿಂಗೆ ಮಾಡ್ತಾರೆ, ಬೇಕಾದರೆ. If you want to survive you have yo getout of these things. Make yourself efficient, tighten your belt, work hard. ಆದ್ರೆ ಅದಕ್ಕೆ ಅದರದೇ ಆದ ಪರಿಣಾಮಗಳು, ಕಷ್ಟಗಳು ಎಲ್ಲಾ ಇದ್ದಾವೆ. ಅದೆಲ್ಲ ಬಾಳ ಸುಲಭಕ್ಕೆ ಆಗಿಬಿಡೋದು ಅಂತ ಅಲ್ಲಾ. ಸುಮಾರು ಜನಕ್ಕೆ ಸುಮಾರು ರೀತಿಯ ತೊಂದರೆ ತಾಪತ್ರಯಗಳೂ ಆಗ್ತಾವೆ. ಅದನ್ನ ತಡೆಯೋದಕ್ಕೇನೆ ನಾವು ಪಾಸಿಟಿವ್ ಆಗಿ ಏನಾದರೂ ಮಾಡೋಣ ಅಂತ ಹೇಳ್ತೇನೆ.



೪) ತೇಜಸ್ವಿಯವರೇ, ನಮ್ಮನ್ನು ನಡುನೀರಿನಲ್ಲಿ ಕೈಬಿಟ್ಟು ನೀವು ಕಾಡಿಗೆ ಹೋಗಿದ್ದು ನ್ಯಾಯವೇ?

ಅಲ್ರಿ, ಇವ್ರು ಎಲ್ಲಾ ಬೆಚ್ಚಗೆ ಮನೇಲಿ ಕೂತಿದ್ರು. ನಾನು ಕರೆದುಕೊಂಡು ಬಂದು ಇವ್ರನ್ನ ನಡುನೀರಲ್ಲಿ ಕೈಬಿಟ್ಟೆ ಅಂತ ಹೇಳ್ತಾರೆ. ನಾನು ಇವ್ರನ್ನ ನೋಡಿದ್ದೇ ನಡುನೀರಲ್ಲಿ. ಇನ್ನು ಬಿಟ್ಟು ಹೋಗಿದ್ದು ಎಲ್ಲಿಗೆ? ಏನ್ ನಟರಾಜ, ಈ ಬಡ್ಡಿಮಕ್ಳು ನಿಂತಿದ್ದೇ ಆ ನಡುನೀರಲ್ಲಿ. ನಾನು ಬಿಟ್ಟು ಹೋದೆನಂತೆ. ಅವ್ರನ್ನ ನಾನು ಕಂಡಿದ್ದೇ ನಡುನೀರಿನಲ್ಲಿ.

೫) ಜಾತ್ಯತೀತರಿಗೆ ಮೀಸಲಾತಿ ನೀಡುವುದಕ್ಕಿಂತ ಜಾತೀಯತೆಯ ಆಧಾರದ ಮೇಲೆ ನೀಡುತ್ತಿರುವ ಮೀಸಲಾತಿಯನ್ನು ಹೋಗಲಾಡಿಸುವುದು ಸರಿಯಲ್ಲವೆ?

ಮೀಸಲಾತಿ ಅನ್ನೋದೇ ಜಾತಿ ಆಧಾರದ ಮೇಲೆ recognise ಮಾಡ್ಬೇಕು ಅಂತ ಇರೋದು. ಅವರು ಆ ಜಾತಿಯ ಕಾರಣಗಳಿಂದಲೇ ಹಿಂದುಳಿದಿರೋದು. ಇದನ್ನ ಗುರುತಿಸೋಕೆ ಇರುವ ಸಾಧನ ಜಾತಿ ಒಂದೇ. ಆದ್ದರಿಂದ ಅವರವರ ಜಾತಿಯ ಆಧಾರದ ಮೇಲೆ ಹಿಂದುಳಿದಿರುವಿಕೆಯನ್ನು ಗುರುತಿಸಿ ಮೀಸಲಾತಿ ಕೊಡೋ ಅನಿವಾರ್ಯತೆ ಇರುತ್ತೆ.

೬) ಅಂತರ್‌ಜಾತೀಯ ವಿವಾಹಗಳಿಗೆ ಮೀಸಲಾತಿ ರೂಪದಲ್ಲಿ ಪ್ರೋತ್ಸಾಹ ಕೊಟ್ರೆ ಮುಂದೊಂದು ದಿನ ಈ ಮೀಸಲಾತಿ ಹೊಸದೊಂದು ಜಾತಿ ಆಗೋ ಅಪಾಯವಿಲ್ಲವೆ?

ಮುಂದೊಂದು ದಿನ ಅಂಥಾ ಆ ಅಪಾಯ ಬರ್ತದೆ ಅಂತ ಹೇಳಿ ಈಗ ನಾವು ಇದೇ ಜಾತಿ ಪದ್ಧತಿಯನ್ನ ಅನುಸರಿಸೋ ಅಗತ್ಯ ಇಲ್ಲ. ಮುಂದೊಂದು ದಿನ ಅಪಾಯ ಬಂದಾಗ ನೋಡಿಕೊಳ್ಳೋಣ, ಏನಾಗುತ್ತೆ ಅಂತ . It is very difficult to find out what will happen tomorrow. ಒಂದು ಹೆಜ್ಜೇನೂ ತೆಗೆದುಕೊಳ್ಳದೇನೆ, ಕೂತಲ್ಲೆ

ಮೀಸಲಾತಿ ಅನ್ನೋದೇ ಜಾತಿ ಆಧಾರದ ಮೇಲೆ recognise ಮಾಡ್ಬೇಕು ಅಂತ ಇರೋದು. ಅವರು ಆ ಜಾತಿಯ ಕಾರಣಗಳಿಂದಲೇ ಹಿಂದುಳಿದಿರೋದು. ಇದನ್ನ ಗುರುತಿಸೋಕೆ ಇರುವ ಸಾಧನ ಜಾತಿ ಒಂದೇ. ಆದ್ದರಿಂದ ಅವರವರ ಜಾತಿಯ ಆಧಾರದ ಮೇಲೆ ಹಿಂದುಳಿದಿರುವಿಕೆಯನ್ನು ಗುರುತಿಸಿ ಮೀಸಲಾತಿ ಕೊಡೋ ಅನಿವಾರ್ಯತೆ ಇರುತ್ತೆ.

ಕೂತ್ಕೊಂಡು ಮುಂದೊಂದು ದಿವ್ಸ ಹಿಂಗಾದ್ರೆ ಅಂತ ಯೋಚ್ನೆ ಮಾಡಿದ್ರೆ ಅರ್ಥ ಉಂಟೇನ್ರಿ ಅದಕ್ಕೆ?

೮) ವಿಶ್ವಮಾನವ ಸಂದೇಶದ ಕಲ್ಪನೆ ಜಾತ್ಯತೀತವಾದಕ್ಕೆ ಅಗತ್ಯ ಎಂಬುದನ್ನ ಒಪ್ಪುವಿರಾ?

You are right. ಅದ್ರಲ್ಲಿ ಕುವೆಂಪು ಮಂತ್ರ ಹೇಳಿದ್ದಾರೆ. ಅದನ್ನ ಅನುಷ್ಠಾನಗೊಳಿಸೋ ತಂತ್ರ ಹೇಳೋಕೆ ಆಗಲಿಲ್ಲ ಅವ್ರಿಗೆ. ನಾವೀಗ ತಂತ್ರ ಹುಡುಕ್ತಾ ಇದ್ದೇವೆ.

೯) ಮೀಸಲಾತಿಯನ್ನ ಜಾತಿಗಳನ್ನ ಗುರುತಿಸಿ ಕೊಡೋದರ ಬದಲು ಕುಟುಂಬವನ್ನು ಗುರುತಿಸಿ ಮೀಸಲಾತಿ ಕೊಡೋ ಪದ್ಧತಿ ಜಾರಿಗೊಳಿಸಿದರೆ ಜಾತಿ ವಿನಾಶಕ್ಕೆ ಅಗತ್ಯ ಬಲ ಬರುತ್ತದೆ ಎಂಬುದು ನನ್ನ ಅಭಿಪ್ರಾಯ. ಇದಕ್ಕೆ ಏನಾದರೂ ಬಾಧಕಗಳಿವೆಯೆ?

ಅಲ್ಲಾ, ಏನು ಕುಟುಂಬ ಅಂದ್ರೆ ನಿಮ್ಮ ಅರ್ಥದಲ್ಲಿ? ಯಾಕೇಂದ್ರೆ ಕುಟುಂಬವೂ ಸಹ ಜಾತಿಯ ಒಂದು ಇನ್ನೊಂದು ಘಟಕವೇ. ಇಂಥ ಜಾತಿ, ಇಂಥ ಕುಟುಂಬ ಅಂತ ಹೇಳ್ತೀವೇ ಹೊರತು ಕುಟುಂಬಕ್ಕೆ ಜಾತಿ ಬಿಟ್ಟು ಅಸ್ತಿತ್ವವೇ ಇರೋದಿಲ್ಲಾ. ಮೀಸಲಾತಿ ಇರೋದೇ ಐದು ಸಾವಿರ ವರ್ಷಗಳಿಂದ ಈ ಜಾತಿಗಳು ಎದುರಿಸಿದ ಅನ್ಯಾಯಗಳನ್ನ ಸರಿಪಡಿಸೋಕೆ. ಅವ್ರು ಆ ಜಾತೀಲಿ ಇರುವ ಕಾರಣದಿಂದ, ತೊಂದರೆ ಉಂಟಾಗಿರುವುದರಿಂದ ಆ ಜಾತಿಯ ಮುಖಾಂತರ ಅವರನ್ನ recognise ಮಾಡಿ ಅವರಿಗೆ ಮೀಸಲಾತಿ ಕೊಡಬೇಕು ಅಂತಾನೇ ಈ ಮೀಸಲಾತಿ ಪದ್ಧತಿ ಇರೋದು. ಈಗ ಒಂದು ಕುಟುಂಬ ಹಿಂದುಳಿದಿರುತ್ತೆ ಅವ್ರಿಗೆ ಸಹಾಯ ಮಾಡಬೇಕು ಅಂತ ಹೇಳಿದ್ರೆ, ನಾವೇನೂ ಬ್ಯಾಡ ಅಂತ ಹೇಳೋದಿಲ್ಲಾ. ಆದ್ರೆ ಅದು ಬೇರೆ ಕಾರ್ಯಕ್ರಮದಡಿ ಇರುತ್ತೆ. ಇದ್ಯಾಕೆ ಹೇಳ್ತಾ ಇದ್ದೀನಿ ಅಂತ ಹೇಳಿದ್ರೆ ಎರಡು, ಮೂರು ಸಾವಿರ ವರ್ಷದಿಂದ ಗರ ಬಡಿದುಕೊಂಡಿರೋರಿಗೆ ಜಾತಿ ಆಧಾರದ ಮೇಲೇ ಅವರನ್ನ recognise ಮಾಡಿ ಅವರಿಗೆ ಮೀಸಲಾತಿ ಕೊಡಬೇಕಾದ ಅನಿವಾರ್ಯತೆಗೆ ಸಿಕ್ಕಿಹಾಕಿಕೊಂಡಿದ್ದೀವಿ. ಅದೇನೂ ಬಾಳ ಸಂತೋಷವಾದ ಸಂಗತಿ ಏನಲ್ಲ. ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಬಾಳ ಹಿಂದುಳಿದಿರವರನ್ನೆಲ್ಲಾ recognise ಮಾಡಿ ಅವರಿಗೆ ನಾವು ಮೀಸಲಾತಿ ಕೊಡಬೇಕು ಅಂತ ಹೇಳೋದೇ ಆದ್ರೆ ಅದಕ್ಕೆ ಈ ದೇಶ ಶಕ್ತವಾಗಿದ್ದರೆ, ಅದಕ್ಕೆ ಬೇರೆ ಕಾರ್ಯಕ್ರಮ ಬೇಕೇ ಹೊರತು social injustice ಕಾರ್ಯಕ್ರಮದಡಿ ಅಲ್ಲ.

೧೦) ಸಂವಿಧಾನದ ೧೭ನೇ ಕಾಲಂನ ಪ್ರಕಾರ ಅಸ್ಪೃಶ್ಯತೆಯ ರದ್ಧತಿ ಇರುವ ಹಾಗೆ ಜಾತಿ ರದ್ಧತಿಯ ಕುರಿತೂ ಸಂವಿಧಾನ ತಿದ್ದುಪಡಿ ಮಾಡಬಹುದಲ್ಲವೇ?

ಮೀಸಲಾತಿಯಿಲ್ಲದೇ ಜಾತಿಯನ್ನು ರದ್ದು ಮಾಡಿಬಿಟ್ಟರೆ ಜಾತಿ ಖಾಯಂ ಆಗಿ ಹೋಗಿಬಿಡುತ್ತೆ. ಮುಂದುವರಿದ ಜಾತಿಗಳ ಜೊತೆ ಸ್ಪರ್ಧಿಸಲಾಗದೆ ಶಾಶ್ವತವಾಗಿ ನೀವು ಹಿಂದುಳಿದ ವರಾಗೇ ಉಳಿದುಕೊಂಡು ಬಿಡುತ್ತೀರಿ. ಆದ್ದರಿಂದಲೇ ಮೀಸಲಾತಿ ಕೊಟ್ಟು ನಿಮ್ಮನ್ನು ಮೇಲಕ್ಕೆ ತಂದ ಮೇಲೆ ಒಂದು ರೀತಿಯ ಆರ್ಥಿಕ ಸಮಾನತೆಗಾದರೂ ನೀವು ಬಂದ್ರೆ, ಆಮೇಲೆ ಸಮಾನವಾಗಿ ಸ್ಪರ್ಧೆ ಮಾಡಬಹುದು ಅಂತ ಹೇಳಿ ಮೀಸಲಾತಿ ತಂದಿರೋದು. ಆದ್ರಿಂದ ಇದ್ದಕ್ಕಿದ್ದಂಗೆ caste should be abolished ಅಂತ ಅಂದುಬಿಟ್ರೆ ಬಾಳ ಕಷ್ಟ ಆಗುತ್ತೆ.

೧೧) ಭ್ರಷ್ಟ ಕೋಮುವಾದಿಗಳನ್ನ ನಿವಾರಿಸೋದಕ್ಕೆ ಸಮಾನ ಮನಸ್ಕರೊಂದಿಗೆ ನೀವೇ ಏಕೆ ನಾಯಕತ್ವ ವಹಿಸಲು ಮುಂದಾಗಬಾರದು?

ಸಾಮಾಜಿಕ ಆಂದೋಲನಗಳು, ವೈಚಾರಿಕ ಆಂದೋಲನಗಳು ಇವಕ್ಕೆಲ್ಲಾ ಯಾವನೋ ಒಬ್ಬ ಲೀಡರ್ ಬೇಕು ಅಂತ ಯೋಚ್ನೆ ಮಾಡೋದೇ ತಪ್ಪು. ನಮಗ್ಯಾವನ್ರೀ ಲೀಡರ್ ಇದ್ದಾ! ನಾಯಕ ಬೇರೆ ಬೇಕಾ ನಿಮ್ಗೆ. ನಿಮ್ಮ ಮಕ್ಕಳ ಸಿಂಬಳ ತೆಗೆಯೋಕೂನೂ ಗವರ್ನಮೆಂಟ್‌ನೋರೇ ಬರಬೇಕು ಅಂತ ಹೇಳ್ತಾ ಇರ್ತೀರಾ ಕೊನೆಗೆ ಅಷ್ಟೇ. ನಿಮಗೇನು ಕೈಯಿಲ್ವಾ, ಕಾಲಿಲ್ವಾ, ಸ್ವಂತ ಬುದ್ಧಿ ಇಲ್ವಾ? ಜಾತ್ಯತೀತತೆ ಆಗಲಿ, ಜಾತೀಯತೆ ಅನ್ನೋದೇ ಆಗಲಿ, ಮೀಸಲಾತಿ ಅನ್ನೋದೆ ಆಗಲಿ they are all the product of your mind. ಅಂತರಂಗದಲ್ಲೇ ಆಗಬೇಕಾದಂತ ಪರಿವರ್ತನೆಗಳು ಇವೆಲ್ಲಾ. ಅದಕ್ಕೆ ಒಬ್ಬ ನಾಯಕ ಬೇಕಾ? ಸರ್ಕಾರದಲ್ಲಾದರೆ ಅವನೊಬ್ಬ ಸಿಎಂ, ಇವನೊಬ್ಬ ಸಚಿವ ಆಗಬೇಕು. ಚುನಾವಣೇನ ಯಾವನ ಗೈಡೆನ್ಸ್‌ನಲ್ಲಿ ಮಾಡಬೇಕು ಅಂತ ಹೇಳಿ ಅವರವರು ತೀರ್ಮಾನ ಮಾಡ್ಕಂತಾರೆ. ಇದು ಹಂಗೇನೂ ಇಲ್ಲವಲ್ಲ. ಇದಕ್ಕೆ ಯಾವ ನಾಯಕನ ಅಗತ್ಯ

ಇಲ್ಲಾ, ನಮಗ್ಯಾವ ನಾಯಕ ಇದ್ದರಪ್ಪಾ ಹೇಳಿ? ಅಂತಾದ್ರಲ್ಲಿ ಬೇರೆಯವರಿಗೆ ನಾಯಕನಾಗು ಅಂತ ಪ್ರಿಸ್ಕ್ರೈಬ್ ಮಾಡೋಕೆ ವನಗೇನೂ ಹುಚ್ಚು ಹಿಡಿದಿಲ್ಲ, ನಾನು ನಾಯಕತ್ವನಾ ವಹಿಸೋನೂ ಅಲ್ಲಾ.

೧೨) ಅಂತರ್‌ಧರ್ಮೀಯ ವಿವಾಹದ ಬಗ್ಗೆ ನಿಮ್ಮ ನಿಲುವೇನು?

ಅವೆಲ್ಲಾ ಒಂದೇ ಅನ್ನಿಸುತ್ತೆ ನನಗೆ. Inter-religion ಅಂದ್ರೂನೂ Inter-caste ಅಂದ್ರೂನೂ ಎಲ್ಲಾ ಒಂದೇ category. Inter-religion ಅಂತ ಹೇಳಿ ಮೊನ್ನೆ ಮೊನ್ನೆಯ ವರಿಗೆ ಅವ ಶೆಟ್ಟನೋ ಎಂತವ್ನೊ ಆಗಿದ್ದೋನ್ನ ಸಾಬರು ಅಂತ ಹೇಳಿ ಸೇರಿಸಿ ತೆಗೆದುಕೊಂಡು ಹೋಗಿರುತ್ತಾರೆ ಅಷ್ಟೇನೆ. ಅವನೇನೂ ಅರೇಬಿಯಾದಿಂದ ಬಂದವನಲ್ಲಾ, ಏನೂ ಅಲ್ಲಾ, ಇವೆಲ್ಲಾ ನಾಮಕರಣಗಳನ್ನು ಬೇರೆ ಮಾಡ್ಕೊಂಡು ಓಡಾಡ್ತ ಇರೋರು. ಆದ್ರಿಂದ ಇವ್ರಲ್ಲಿ ವ್ಯತ್ಯಾಸ ಇದೇ ಅಂತ ಅನ್ನಿಸೊಲ್ಲ, ಅಂತರಧರ್ಮೀಯ ಅಂತಾದ್ರೂ ಒಂದೇ, ಅಂತರ್‌ಜಾತಿ ಅಂತಾದ್ರೂ ಒಂದೇ. ಎಲ್ಲಾ ಒಂದೇನೇನೆ.

೧೩) ಬೆಂಗಳೂರಿಗೆ ಮೆಟ್ರೊ ಬೇಕೆ ?

ಅದೆಲ್ಲಾ ನಂಗೆ ಗೊತ್ತಿಲ್ಲ ಸಾರ್. ಅದು ಇತ್ತೀಚೆಗೆ ಬಂದಿರೋ ಸಮಸ್ಯೆ. ಮೆಟ್ರೊ ವಿಷಯ ನನಗೇನೂ ಗೊತ್ತಿಲ್ಲ, ಮೊನ್ನೆ ತಾನೇ ಪೇಪರಲ್ಲಿ ನೀವೆಲ್ಲಾ ಓದಿರೋ ಹಂಗೆ ನಾನೂ ಓದಿರೋದು. ಚಂದ್ರಶೇಖರ್ ಪಾಟೀಲ್ ಅವರು ಅಲ್ಲಿಗೆ ಹೋಗಿ ಗಲಾಟೆ ಮಾಡಿ, ಇದರ ದೆಸೆಯಿಂದ ಮುಂದೆ ನಮಗೆ ಬಾಳ ತೊಂದರೆಯಾಗುತ್ತೆ ಹುಷಾರು ಅಂತ ಎಲ್ಲರಿಗೂ ಹೆದರಿಸಿದ್ದಾರಂತೆ. ಅದಕ್ಕಿಂತ ಹೆಚ್ಚಿಗೆ ಏನೂ ಗೊತ್ತಿಲ್ಲ ಗೊತ್ತಿಲ್ಲದೇ ಇರೋ ವಿಷಯಕ್ಕೆಲ್ಲ ತಲೆಹರಟೆ ಮಾಡೋಕೆ ನಾನು ತಯಾರಿಲ್ಲ.

೧೪) ನೀವು ಹೇಳಿದಂತೆ, ನಾನು ಭಾರತೀಯ ಅನ್ನೋ ಗ್ರೂಪ್ ನಿರ್ಮಾಣವಾದರೆ ಈ ಜಾತಿಯನ್ನ ಪರಿಗಣಿಸೋ ವ್ಯವಸ್ಥೆಯಲ್ಲಿ ಈ ಗುಂಪಿಗೂ ಹೊಸ ವ್ಯವಸ್ಥೆ ಅಗತ್ಯ ವಾಗುತ್ತದೆಯೇ?

ಆ ಗುಂಪಿಗೆ ಶೇಕಡಾ ನೂರು ಮೀಸಲಾತಿ ಕೊಡೋಣ ಕಣ್ರಿ. ನಾವೀಗ ಅಂತರ್ಜಾತೀಯ ವಿವಾಹಿತರಿಗೆ ೧% ಮೀಸ ಲಾತಿ ಕೇಳ್ತಾ ಇದ್ದೀವಲ್ಲಾ, ಅದರ ಮುಖ್ಯ ಉದ್ದೇಶ ಏನೂಂದ್ರೆ ಬೇರೆ ಜಾತಿಗಳೆಲ್ಲಾ ಆರ್ಥಿಕವಾಗಿ ಮುಂದುವರಿದು ಅವರ ಮೀಸಲಾತಿಯೆಲ್ಲಾ ಕಡಿಮೆಯಾಗುತ್ತಾ ಬಂದಂಗೂ, ಬಂದಂಗೂ, ಅದನ್ನೆಲ್ಲಾ ತೆಗೆದು ಜಾತ್ಯತೀತರಿಗೆ ಕೊಡೋಣ. ಇದನ್ನ ಇಷ್ಟು ದೊಡ್ಡ ದೇಶವನ್ನಾಗಿ ಮಾಡೋ ದಕ್ಕೆ ತ್ಯಾಗ ಮಾಡ್ಕೊಂಡು ಇವ್ರು ಜಾತಿ ಪದ್ಧತಿಯನ್ನೆಲ್ಲ ತಿರಸ್ಕರಿಸಿ ಇವ್ರು ಜಾತ್ಯತೀತ ರಾಷ್ಟ್ರ ಕಟ್ಟೋದಕ್ಕೆ ಪ್ರಯತ್ನ ಮಾಡ್ತಾ ಇರೋ ಹಂಗಿದ್ರೆ, ಶೇಕಡಾ ೧೦೦ ಮೀಸಲಾತಿಯ ಅವರಿಗೇ ಕೊಡೋಣ ಕಣ್ರಿ. ಆದ್ದರಿಂದ ಇಲ್ಲಿ ನನಗೆ ಏನೂ ತೊಂದರೆ ಕಾಣ್ತಾ ಇಲ್ಲಾ, ಶುರುವಿಗೆ ೧% ಕೊಡಿ ಅಂತ ಹೇಳ್ತಾ ಇರೋದು ನಾವು. ಉಳಿದವರಿಗೆಲ್ಲಾ ತೆಗೆದು ಹಾಕಿದ ಮೇಲೆ ಅಷ್ಟು reservation ತೆಗೆದು ಅಂತರಜಾತಿ ವಿವಾಹ ವಾದವರಿಗೆ ತೆಗೆದುಕೊಂಡು ಹೋಗ್ರಪ್ಪಾ ಏನ್ ಮಾಡ್ತೀರೋ ಮಾಡಿ ಅಂತ ಹೇಳೋದು.

ಇವತ್ತು ನಮ್ಮಲ್ಲಿ ನಿಜವಾಗಲೂ ಜಾತ್ಯತೀತವಾದ ಧೋರಣೆ ಇರೋ ಧರ್ಮ ಅಂತ ಯಾವುದಾದರೂ ಇದ್ರೆ ಅದು ಬೌದ್ಧಧರ್ಮ. ಅದಕ್ಕಿಂತ ದೊಡ್ಡ ಧರ್ಮವೇ ಇಲ್ಲ. ಆದರೆ ನಾನೇಳೋದು ಏನೂ ಅಂದ್ರೆ , ಜಾತ್ಯತೀತರಿಗೆ ಒಂದು ಸಾಂವಿಧಾನಿಕ ಪರಿಹಾರ ಸೃಷ್ಟಿ ಮಾಡ್ಬೇಕು. ಅದು ಇನ್ನೂ greater. ಈಗ ನಾನು ದಲಿತರಿಗೆ ಇವರಿಗೆಲ್ಲಾ ಮೊದಲು ಈ ಜಾತೀಯತೆಯಿಂದ ಆಚೆಗೋಗೋ ಕ್ಷಿಪ್ರ ಮಾರ್ಗ ಅಂದ್ರೆ ಬೌದ್ಧಮತಕ್ಕೆ ಸೇರಿಕೊಳ್ಳೋದು ಬಿಟ್ಟು ಇನ್ನೂ ಯಾವ ದಾರೀನೋ ಇಲ್ಲಾ.

೧೫) ಯುವಜನರಲ್ಲಿ, ಮಕ್ಕಳಲ್ಲಿ ಜಾತ್ಯತೀತ ಮನೋ ಭಾವನೆ ಬೆಳೆಸಲು ಸರಳ ಉಪಾಯಗಳೇನು?

ಏನೋಪ್ಪ ನನಗೆ ಗೊತ್ತಾಗ್ತಿಲ್ಲ ಕಂಡ್ರಿ. ನೋಡಿ, ಮಕ್ಕಳಿಗೆ ಬಿಸಿಊಟದ ಪ್ರೋಗ್ರಾಂ ಮಾಡಿದ್ರೆ ಅವಳು ಅಡಿಗೆ ಮಾಡೋಳು ದಲಿತರ ಜಾತಿಯವಳು ಅಂತ ಅದೆಂಗೋ ಕಂಡುಹಿಡಿದುಕೊಂಡು ಒಂದಷ್ಟು ಜನ ತರ್ಲೆ ಮಾಡ್ತಿದ್ದಾರೆ. ಆ ಹುಡುಗರು, ಮಕ್ಕಳಿಗೆ ಆ ಅಭಿಪ್ರಾಯಾನೇ ಇರಲ್ಲ, ಮನೆ ಯಲ್ಲಿ ಶಿಕ್ಷಣ ಕೊಟ್ಟಿರ್ತಾರೆ- ಹಿಂಗಿಂಗೇ ಮಾಡಿ ಅಂತ ಹೇಳಿ. ಪಾಕಿಸ್ತಾನದಲ್ಲಿ ಇಂಡಿಯಾ ದೇಶದ ವಿರುದ್ಧ ದ್ವೇಷ ಕಾರೋ ದನ್ನ ಚಿಕ್ಕಮಕ್ಕಳಿಗೇ ಶಿಕ್ಷಣ ಕೊಡೋ ಲೆವೆಲ್‌ಗೇ ತೆಗೆದು ಕೊಂಡು ಹೋಗಿದ್ದಾರೆ ಅಂತ ಹೇಳ್ತಾರಲ್ಲಾ, ಈ ಪಾಪಿಗಳು ಮಾಡ್ತಾ ಇರೋ ಕೆಲಸಾನೂ ಅದೇನೆ. ಬಿಸಿಊಟ ನಮಗೆ ಬ್ಯಾಡ, ನಾವು ಊಟ ಮಾಡೋಲ್ಲ ಯಾಕೆ ಅಂದ್ರೆ ದಲಿತರ ಹೆಂಗಸರ ಕೈಯಲ್ಲಿ ಮಾಡಿಸುತ್ತಾರೆ ಅಂತಾರೆ ಇವ್ರು. ಇವರು challenge ಮಾಡಿದ್ದಾದರೆ, ಊಟ ಮಾಡದಿದ್ದರೆ ಸಾಯ್ರಿ ನೀವು, ನಾವು ಮಾತ್ರ ಇವರ ಕೈಯಲ್ಲೇ ಮಾಡ್ಸಿ ಊಟ ಮಾಡೋದು ಅಂತ ಹೇಳಿ ಅವ್ರು ಯಾರ‍್ಯಾರ ಮನೆ ಮಕ್ಕಳು ಅಂತ ಹೇಳಿ ಅವರನ್ನೆಲ್ಲಾ ಎಳ್ಕೊಂಡು ಬಂದು ಅವರ ಮೇಲೆಲ್ಲಾ untouchability case ಹಾಕಿ, ಒಂದು ಕಡೆ ಗಲಾಟೆ ಮಾಡಿದರೆ ಸಾಕು, ಹೆದ್ರಿ ಸತ್ತೋಗ್ತಾರೆ ಎಲ್ಲರೂನೂ. ಅದನ್ನ ಮಾಡದೆ ಪಾಪ ಮಕ್ಕಳ್ಯಾಕೆ ಹಸಿದುಕೊಂಡಿರಬೇಕು, ಹೋಗ್ಲಿ ಬನ್ನಿ ಅಂತೇಳಿ ಇನ್ನೊಬ್ಬರನ್ನ ಕರೆದುಕೊಂಡು ಬಂದು ಅಡಿಗೆ ಮಾಡಿಸಿಬಿಡೋದು ಮಾಡ್ತಿದ್ದಾರೆ. ಬಾಳ ಕಷ್ಟ ಇದೆ ಇದು.

೧೬) ಬೌದ್ಧಧರ್ಮ ಮಾನವ ವಿರೋಧಿ ಧರ್ಮ ಎಂದು ಭೈರಪ್ಪನವರು ಹೇಳಿದ್ದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ನನ್ನ ಅಭಿಪ್ರಾಯ, ಅವರು ಹೇಳಿರೋದು ತಪ್ಪು ಅಂತ ಅಷ್ಟೇನೇನೆ. ಇವತ್ತು ನಮ್ಮಲ್ಲಿ ನಿಜವಾಗಲೂ ಜಾತ್ಯತೀತವಾದ ಧೋರಣೆ ಇರೋ ಧರ್ಮ ಅಂತ ಯಾವುದಾದರೂ ಇದ್ರೆ ಅದು ಬೌದ್ಧಧರ್ಮ. ಅದ ಕ್ಕಿಂತ ದೊಡ್ಡ ಧರ್ಮವೇ ಇಲ್ಲ, ಆದರೆ ನಾನೇ ಳೋದು ಏನೂ ಅಂದ್ರೆ, ಜಾತ್ಯತೀತರಿಗೆ ಒಂದು ಸಾಂವಿಧಾನಿಕ ಪರಿಹಾರ ಸೃಷ್ಟಿ ಮಾಡ್ಬೇಕು. ಅದು ಇನ್ನೂ greater. ಈಗ ನಾನು ದಲಿತರಿಗೆ ಇವರಿಗೆಲ್ಲಾ ಮೊದಲು ಈ ಜಾತೀಯತೆಯಿಂದ ಆಚೆಗೋಗೋ ಕ್ಷಿಪ್ರ ಮಾರ್ಗ ಅಂದ್ರೆ ಬೌದ್ಧಮತಕ್ಕೆ ಸೇರಿ ಕೊಳ್ಳೋದು ಬಿಟ್ಟು ಇನ್ನೂ ಯಾವ ದಾರೀನೋ ಇಲ್ಲಾ ಅಂತ ಹೇಳ್ತೀನಿ. ಆದರೂ ಇದು ಸಾಮು ದಾಯಿಕ ಪರ್ಯಾಯ ಆಗೋದಿಲ್ಲಾ, ಸಾಬರ ಧರ್ಮ ದಲ್ಲೇ ಎಂಬತ್ತು ಜಾತಿಗಳಿದ್ದಾವೆ ಅಂತ ಹೇಳಿದ್ರೆ, ಅರ್ಥಮಾಡಿಕೊಳ್ಳಿ ನೀವು. ನಿಧಾನಕ್ಕೆ ಶ್ರೇಣೀಕರಣ ಶುರುವಾಗಿ ಎಲ್ಲಾ ಭ್ರಷ್ಟವಾಗುತ್ತವೆ. ಆದ್ದರಿಂದಲೇ ಈ ಧರ್ಮಗಳು ಸಂವಿಧಾನದತ್ತವಾದ ಜಾತ್ಯತೀತ ತೆಗೆ ಸಮಾ ಅಂತ ಮಾತ್ರ ನಾನು ಒಪ್ಪೋದಿಲ್ಲಾ, ಆದ್ರೆ ಇವತ್ತು ಜಗತ್ತಿನಲ್ಲಿ ಇರೋ ಎಲ್ಲಾ ಧರ್ಮಗಳಿಗಿಂತ ಅತ್ಯಂತ ಜಾತ್ಯತೀತವಾದ ಧರ್ಮ ಅಂತ ಹೇಳಿದ್ರೆ ಬೌದ್ಧಧರ್ಮ ಮಾತ್ರ ಅಂತ ಜ್ಞಾಪಕ ಇಟ್ಟುಕೊಳ್ಳಿ. ಸದ್ಯಕ್ಕೆ ನಮಗೆ ಅದೇ solution. ದೀರ್ಘಾವಧಿ ಪರಿಹಾರವನ್ನು ಮಾತ್ರ ನಮ್ಮ ಸಂವಿಧಾನದ ಜಾತ್ಯತೀತತೆನೇ ತಂದು ಕೊಡೋದು ಅಂತ ನನ್ನ ಅಭಿಪ್ರಾಯ. □

ಭಾರತೀಯ ಸಾಮಾಜಿಕ ಪರಿಸ್ಥಿತಿಯಲ್ಲಿ ದಲಿತರು-ಹಿಂದುಳಿದವರು ಮತ್ತು ಅಲ್ಪಸಂಖ್ಯಾತರ ಸಮಸ್ಯೆಗಳು ಒಂದೇ ಆಗಿದ್ದರೂ ಇತ್ತೀಚಿಗಿನ ಅನೇಕ ಕಾರಣಗಳಿಂದಾಗಿ ಪರಸ್ಪರರಲ್ಲಿ ನಂಬಿಕೆ-ಸಾಮರಸ್ಯ ಕಡಿಮೆಯಾಗುತ್ತಿರುವುದನ್ನು ಅವಕಾಶವಾದಿ ರಾಜಕಾರಣಿಗಳು ಮತ್ತು ಕೋಮುವಾದಿಗಳು ತಮ್ಮ ಹಿತಾಸಕ್ತಿಗಳ ಕಾರ್ಯಾಚರಣೆಗಾಗಿ ಬಳಸಿಕೊಳ್ಳುತ್ತಿರುವುದು ದುರಂತ. ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರನ್ನು ಒಂದೇ ವೇದಿಕೆಗೆ ತರಬೇಕೆಂಬ ಹಂಬಲ ಹೊತ್ತ 'ಸಂವಾದ', ವಿಶೇಷಾಂಕಕ್ಕಾಗಿ ಈ ವರ್ಗಗಳ ಸಂಬಂಧ, ಹೋರಾಟ ಇತ್ಯಾದಿ ಕುರಿತು ನಾಡಿನ ಕೆಲವು ಪ್ರಮುಖ ಪ್ರಗತಿಪರ ಚಿಂತಕರು/ಲೇಖಕರ ಪ್ರತಿಕ್ರಿಯೆಯನ್ನು ಕೇಳಿತ್ತು. ಅವರ ಅಭಿಪ್ರಾಯಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ಪ್ರಶ್ನೆಗಳು

೧ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಸಮಾಜ ವ್ಯವಸ್ಥೆಯ ಒಟ್ಟಾರೆ ಶೋಷಣೆಗೆ ಗುರಿಯಾಗಿದ್ದರೂ ಒಂದಾಗಿ ಹೋರಾಡುತ್ತಿಲ್ಲ ಯಾಕೆ?

೨ ಬ್ರಾಹ್ಮಣಶಾಹಿಯನ್ನು ವಿರೋಧಿಸುವಾಗ ದಲಿತರು ಹಾಗೂ ಅಲ್ಪಸಂಖ್ಯಾತರನ್ನು ಒಳಗೊಳ್ಳುವ ಹಿಂದುಳಿದ ವರ್ಗಗಳು ಸಾಮಾಜಿಕ ಬಿಕ್ಕಟ್ಟಿನ ವಿಷಯ ಬಂದಾಗ ಬ್ರಾಹ್ಮಣಶಾಹಿಯನ್ನು ಓಲೈಸಿ ದಲಿತರು ಹಾಗೂ ಅಲ್ಪಸಂಖ್ಯಾತರನ್ನು ವಿರೋಧಿಸುವುದು ಯಾಕೆ?

೩ ಕೋಮು ಬಿಕ್ಕಟ್ಟುಗಳು ಉಲ್ಬಣಗೊಂಡಾಗಲೆಲ್ಲಾ ಪುರೋಹಿತಶಾಹಿಯ ತುಳಿತಕ್ಕೊಳಗಾದ ಹಿಂದುಳಿದವರು ಮತ್ತು ದಲಿತರು ಅವರೊಂದಿಗೇ ಷಾಮೀಲಾಗಿ, ಅಲ್ಪಸಂಖ್ಯಾತರ ವಿರುದ್ಧ ತಿರುಗಿ ಬೀಳುವುದೇಕೆ?

೪ ದಲಿತರು ಮತ್ತು ಬ್ರಾಹ್ಮಣರು ಒಂದಾಗಿ ರಾಜ್ಯಾಡಳಿತ ಹಿಡಿಯಬೇಕೆನ್ನುವ ವಿಚಾರ ಈಚೆಗೆ ಚಾಲ್ತಿಗೆ ಬಂದಿದೆ. ನೀವೇನೆನ್ನುತ್ತೀರಿ?

೫ ಇಡೀ ದೇಶವನ್ನೇ ಕಬಳಿಸಲು ಹವಣಿಸುತ್ತಿರುವ ಮೂಲಭೂತವಾದಿಗಳನ್ನು ಹಿಮ್ಮೆಟ್ಟಿಸುವಲ್ಲಿ ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ದಲಿತರ ಪಾತ್ರ ಏನು?

ಸಮಾನ ಶೋಷಿತರು, ಆದರೂ ಒಗ್ಗಟ್ಟಿಲ್ಲ

○ಪ್ರೊ॥ ರಹಮತ್ ತರೀಕೆರೆ

ಚರ್ಚೆ

ನೀವು ಕೇಳಿದ ಪ್ರಶ್ನೆಗಳು ಮೇಲುನೋಟಕ್ಕೆ ಸರಳವಾಗಿವೆ. ಆದರೆ ಉತ್ತರಿಸುವುದು ಸರಳವಾಗಿಲ್ಲ. ನನಗೆ ಸಮಾಜಶಾಸ್ತ್ರೀಯವಾಗಿ, ರಾಜಕೀಯ ಪರಿಹಾರ ಕೊಡುವಂತೆ ಖಚಿತವಾದ ದನಿಯಲ್ಲಿ ಉತ್ತರಿಸುವುದಕ್ಕೂ ಬರುವುದಿಲ್ಲ. ನಾನು ಉತ್ತರ ಹುಡುಕುತ್ತಿರುವವನು. ಹೀಗಾಗಿ ನನ್ನ ಗೊಂದಲ ಅನುಮಾನಗಳನ್ನು ಪ್ರತಿಪ್ರಶ್ನೆಗಳ ರೂಪದಲ್ಲಿ ಇಡುತ್ತೇನೆ, ಸಂವಾದಕ್ಕಾಗಿ. ನಿಮ್ಮ ಪ್ರಶ್ನೆಗಳಲ್ಲಿ ಆರೋಗ್ಯವಂತ ಹೊಸ ಸಮಾಜ ಕಟ್ಟುವ ಕನಸು ಕಾಳಜಿ ಇದೆ. ಆದರೆ ಇವುಗಳಲ್ಲಿ ನನಗೆ ಕಾಣುವ ಕೆಲವು ತಾತ್ವಿಕ ಸಮಸ್ಯೆಗಳೆಂದರೆ;

೧) ಈ ಪ್ರಶ್ನೆಗಳಲ್ಲಿ ಎದ್ದು ಕಾಣುವ ಜಾಗತೀಕರಣದ ಗೈರುಹಾಜರಾತಿ. ಭೂಮಂಡಲವನ್ನ ಆವರಿಸುತ್ತಿರುವ ಮಾರುಕಟ್ಟೆ ಎಕಾನಮಿ, ಯುದ್ಧ ಸಂಸ್ಕೃತಿ, ಬೆದರಿಸಿ ಮಣಿಸುವ ನೀತಿಗಳನ್ನು ಅನುಸರಿಸುತ್ತಿರುವ ಅಮೇರಿಕೆಯ ಸಾಮ್ರಾಜ್ಯಶಾಹಿ ಈಗ ಮೂರ್ತರೂಪದಲ್ಲಿ ಕಾಣುತ್ತಿದೆ. ಇರಾಕಿನ ಮೇಲಿನ ಯುದ್ಧವು ಒಂದು ಉದಾಹರಣೆ ಅಷ್ಟೆ ಇದರ ವಿರುದ್ಧ ಕರ್ನಾಟಕದಲ್ಲಿ ಸಮರ್ಥನೆಗಳೂ ಇವೆ. ಸಂಘರ್ಷಗಳೂ ನಡೆಯುತ್ತಿವೆ. ಇಲ್ಲಿನ ಸರಕಾರ, ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಹಿಂದುತ್ವವಾದವು ಈ ಜಾಗತೀಕರಣದ ಯಜಮಾನರ ಜತೆ ಮೈತ್ರಿ ಇರಿಸಿಕೊಂಡಿವೆ. ಅದರಲ್ಲೂ ಸಂಘಪರಿವಾರವು ಸ್ಥಳೀಯವಾಗಿ ಎಬ್ಬಿಸುವ ಸಣ್ಣ ದೊಂಬಿಯ ಹಿಂದೆ ಅಂತರಾಷ್ಟ್ರೀಯ ಯಜಮಾನರ ನೆರಳಿರುವಂತಿದೆ. ಯಾಕೆ ಸಂಘಪರಿವಾರಕ್ಕೆ ರೈತರ ಸಾವು ಕಾಡುವುದಿಲ್ಲ, ಯಾಕೆ ಧರ್ಮದ ಹೆಸರಲ್ಲಿ ಅದು ನಮ್ಮ ಸಮಾಜವನ್ನು ಯಾಕೆ ಸೀಳುತ್ತಿದೆ ಎಂಬ ಪ್ರಶ್ನೆಗಳಿಗೂ ಅದರ ಅಂತಾರಾಷ್ಟ್ರೀಯ ಯಜಮಾನರ ಜತೆ ಅದು ಇರಿಸಿಕೊಂಡಿರುವ ಮೈತ್ರಿಗೂ ಸಂಬಂಧವಿದೆ. ಇದನ್ನು ಗಣಿಸದಿದ್ದರೆ ಎಲ್ಲ ಸಮಸ್ಯೆಗಳು ನಮ್ಮ ಸಮಾಜದ ಒಳಗೇ ಇರುವ ಅಂತಃಕಲಹಕ್ಕೆ ಸಂಬಂಧಿಸಿದವು ಎಂಬರ್ಥ ಬರುತ್ತದೆ. ಅಂತರಾಷ್ಟ್ರೀಯ ರಾಜಕೀಯ ಆರ್ಥಿಕ ವಿದ್ಯಮಾನಗಳ ಜತೆಗೆ ಸ್ಥಳೀಯ ಸಮಸ್ಯೆಗಳನ್ನು ಜೋಡಿಸಿ ಚಿಂತಿಸುವ ವಿಷಯದಲ್ಲಿ ದಲಿತ ಶೂದ್ರಚಿಂತನೆಗಳು ಮೊದಲಿಂದಲೂ ಹಿಂಜರಿಕೆ ಮಾಡಿಕೊಂಡು ಬಂದಿವೆ. ಇದಕ್ಕೆ ಕಾರಣ ಅವು ಮಾರ್ಕ್ಸ್‌ವಾದದ ಜತೆ ಇರಿಸಿಕೊಂಡಿರುವ ಅನುಮಾನಗಳಿರಬಹುದು. ಇದಕ್ಕೆ ಭಾರತದ ಕಮ್ಯೂನಿಷ್ಟರೂ ಕಾರಣವಾಗಿರಬಹುದು. ಹೀಗಾಗಿ ಕೂಡ ತಾತ್ವಿಕವಾಗಿ ವೈಚಾರಿಕವಾಗಿ ಸ್ಥಳೀಯ ನೆಲೆಯಲ್ಲಿ ಎಲ್ಲ ಸಮಸ್ಯೆಗಳು ಇವೆ ಅವನ್ನು ಸ್ಥಳೀಯವಾಗಿಯೇ ಬಗೆಹರಿಸಿಕೊಳ್ಳಬಹುದು ಎಂಬ ಚಿಂತನೆ ಇದ್ದಂತಿದೆ. ನಮ್ಮ ರೈತರ ಆತ್ಮಹತ್ಯೆಗಳು, ಬಹುರಾಷ್ಟ್ರೀಯ ಕಂಪನಿಗಳು ರಾಜ್ಯಾಧಿಕಾರವನ್ನು ನಿಯಂತ್ರಿಸುವುದು, ಇವೆಲ್ಲ ಕೇವಲ ಸ್ಥಳೀಯವಲ್ಲ ತಾನೆ. ಅಂತರಾಷ್ಟ್ರೀಯ ಸನ್ನಿವೇಶಗಳನ್ನು 'ನಮಗೆ ಸಂಬಂಧ ಇಲ್ಲದ್ದು' ಎಂಬಂತೆ ಕೇವಲ ಸ್ಥಳೀಯ ರಾಜಕಾರಣ ಮಾಡಬಹುದೆ?

೨) ಎರಡನೆಯದಾಗಿ ಅಲ್ಪಸಂಖ್ಯಾತರು ಹಿಂದುಳಿದ ವರ್ಗಗಳು ದಲಿತರು (ಅಹಿಂದ) ಹೊರತು ಪಡಿಸಿದ ಜನಸಮುದಾಯಗಳ ಪಾತ್ರದ ಗೈರುಹಾಜರಾತಿ, ಸಾಮಾನ್ಯವಾಗಿ ಅಹಿಂದದ ರಾಜಕೀಯ ಚಿಂತನೆಯಲ್ಲಿ ಯಾವಾಗಲೂ ಬ್ರಾಹ್ಮಣ್ಯವಿರೋಧಿ ನಿಲುವು ತೀವ್ರವಾಗಿರುತ್ತದೆ. ಆದರೆ ಕನಸಿನ ಹೊಸ ಸಮಾಜ ಕಟ್ಟುವಲ್ಲಿ ಅಹಿಂದೇತರ ಸಮುದಾಯಗಳ ಜತೆ ಅಹಿಂದದ ಸಂಬಂಧ ಎಂತಹದು ಎಂಬ ಪ್ರಶ್ನೆ ನನಗೆ ಮುಖ್ಯವೆಂದು ತೋರುತ್ತದೆ. ಯಾಕೆಂದರೆ ನಮ್ಮ ಸಮಾಜದ ಉಚ್ಚ ಜಾತಿಯ ಒಂದು ಭಾಗ ತಂತನ್ನ ಮತದ ಸನಾತನವಾದದಿಂದ ಬಿಡುಗಡೆ ಪಡೆದು ಒಟ್ಟು ಸಮಾಜದ ಆರೋಗ್ಯಕ್ಕಾಗಿ ಕೆಲಸ ಮಾಡುತ್ತಿದೆ. ಅಹಿಂದದ ಹೊಸರಾಜಕಾರಣದಲ್ಲಿ ತಂತಮ್ಮ ಜಾತಿಯ ಸನಾತನವಾದದಿಂದ ಬಿಡಿಸಿಕೊಂಡು ಒಟ್ಟು ಸಮಾಜದ ಹೋರಾಟಗಳಲ್ಲಿ ಬರುತ್ತಿರುವ ಈ ಮಾನವತಾವಾದಿಗಳನ್ನು ಕೂಡಿಕೊಳ್ಳುವ ಬಾಹುಗಳೆ ಕಡಿಮೆ ಎಂದು ನನಗೆ ಅನುಮಾನ. ತಾವೂ ಬಿಡುಗಡೆಯಾಗುತ್ತ ಒಟ್ಟು ಸಮಾಜದ ಬಿಡುಗಡೆಯಲ್ಲಿ ತೊಡಗಿರುವ ಈ ಧಾರೆಯನ್ನು ಒಟ್ಟು ಸಾಮಾಜಿಕ ಬದಲಾವಣೆಯ ಹೋರಾಟದಲ್ಲಿ ಸೇರುವ ನದಿಯೆಂದು ಭಾವಿಸಿದ್ದರೆ, ನಮ್ಮ ಸಾಮಾಜಿಕ ಬದಲಾವಣೆಯ ಪರಿಕಲ್ಪನೆ ಅರೆಬರೆಯಾಗುವುದಿಲ್ಲವೆ? ಆಯಾ ಸಾಮಾಜಿಕ ಸಮುದಾಯವು ತನ್ನ ಕಷ್ಟಗಳಿಗೆ ತಾನೇ ಹೋರಾಡಬೇಕು ಎಂಬಂಥ ವಾತಾವರಣ ನಿರ್ಮಾಣವಾಗಿಬಿಟ್ಟರೆ, ಕೂಡು ಹೋರಾಟದ

ಪರಿಕಲ್ಪನೆಯು ಬಲಗೊಳ್ಳದಿದ್ದರೆ. ಯಾವುದೇ ಪ್ರಗತಿಪರ ರಾಜಕಾರಣದ ಮಾನವೀಯತೆಯೇ ಮುಕ್ಕಾಗುವುದಿಲ್ಲವೆ ಎಂಬ ಆತಂಕ ಕಾಡುತ್ತಿದೆ.

೩) ಅಲ್ಪಸಂಖ್ಯಾತರು ಹಿಂದುಳಿದ ವರ್ಗಗಳು ದಲಿತರು (ಅಹಿಂದ) ಎನ್ನುವಾಗ ಅವು ಒಂದು ಬಗೆಯ ಆಲೋಚನೆ ಮಾಡುವ ಗುಂಪುಗಳು ಎಂಬ ಗ್ರಹಿಕೆ ಪ್ರಶ್ನೆಗಳಲ್ಲಿದೆ. ಆದರೆ ಅವು ಏಕರೂಪಿ ಚಿಂತನೆ ಮಾಡುವ ಗುಂಪುಗಳಲ್ಲ, ಅವುಗಳ ಒಳಗೆ ಸಾಮಾಜಿಕ ಆರ್ಥಿಕ ಭೇದಗಳಿವೆ, ತಾತ್ವಿಕವಾಗಿ ವಿಭಿನ್ನ ಚಿಂತನೆಯ ಧಾರೆಗಳಿವೆ. ಅವು ಅನೇಕ ವಾದಗಳಲ್ಲಿ, ಸಂಘಟನೆಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ ಚದುರಿಹೋಗಿವೆ. ಇಲ್ಲಿರುವ ಗುಂಪುಗಳಲ್ಲಿ ಸಾಮಾಜಿಕವಾದ ಏಕತೆಯನ್ನು ತಾತ್ಕಾಲಿಕವಾಗಿ ಕಲ್ಪಿಸಿಕೊಳ್ಳಬಹುದು. ಆದರೆ ಇವುಗಳ ಒಳಗೇ ಇರುವ ನಿರ್ಗತಿಕರು ಹಾಗೂ ಉಳ್ಳವರ ನಡುವೆ ವ್ಯತ್ಯಾಸವನ್ನು ಮರೆಯುವಂತಿಲ್ಲ. ಈ ವರ್ಗಭೇದಗಳು ಅಮುಖ್ಯವಾದರೆ ಅಹಿಂದದ ರಾಜಕೀಯ ಏಕತೆಯೂ ಇಲ್ಲಿರುವ ಬಲಿಷ್ಠರ ಪಾಲಿಗೆ ಹಾಲುಹಿಂಡುವ ಹಸುವಾಗುವುದಿಲ್ಲವೆ?

೪) ಇನ್ನು ಮುಸ್ಲಿಮರ ಬಹುಮುಖಿ ಕಷ್ಟಗಳ ಸಮಸ್ಯೆ. ಮುಸ್ಲಿಮರಲ್ಲಿ ದೊಡ್ಡ ಪ್ರಮಾಣದ ಜನಸಂಖ್ಯೆಯು ಇವತ್ತು ತನ್ನ ಬಡತನ ಸಾಮಾಜಿಕ ಹಿಂದುಳಿವಿಕೆಗಳ ಅನಕ್ಷರತೆಗಳ ವಿರುದ್ಧ ಸೆಣಸುತ್ತಿದೆ. ತಮ್ಮ ಬದುಕುವ ಹಕ್ಕನ್ನೇ ನಿರಾಕರಿಸುತ್ತಿರುವ ಸಂಘಪರಿವಾರದ ವಿರುದ್ಧ ಜತೆ ಮುಖಾಮುಖಿಯಾಗಬೇಕಿದೆ. ಜತೆಜತೆಗೆ ತಮ್ಮದೇ ಧರ್ಮದ ಮೂಲಭೂತವಾದದ ವಿರುದ್ಧವೂ ಸೆಣಸ ಬೇಕಾದ ವಿಚಿತ್ರ ಇಕ್ಕಟ್ಟಿನಲ್ಲಿದೆ. ಹೀಗಾಗಿ ಹಿಂದೂ ಕೋಮು ವಾದದ ವಿರುದ್ಧದ ನಿಷ್ಠುರ ನಿಲುವನ್ನು ತಳೆಯುವಂತೆಯೇ ಮುಸ್ಲಿಂ ಮೂಲಭೂತವಾದದ ವಿರುದ್ಧವೂ ಸೂಕ್ತ ನಿಲುವು ತಳೆಯುವುದು ಅಗತ್ಯವಿಲ್ಲವೆ?

೫) ಅಹಿಂದದ ಪರ್ಯಾಯ ರಾಜಕಾರಣ ಕಲ್ಪನೆಯಲ್ಲಿ ಮಹಿಳೆಯರ ಬುಡಕಟ್ಟುಗಳ ಭಾಗವಹಿಸುವಿಕೆಯ ಪ್ರಸ್ತಾಪಗಳು ಇರುವುದೆ ಕಡಿಮೆ. ಇವತ್ತು ಕೋಮುವಾದ, ಒಕ್ಕಲೆಬ್ಬಿಸುವಿಕೆ, ರೈತರ ಆತ್ಮಹತ್ಯೆ ಇವೆಲ್ಲದರಿಂದಾದ ದುರಂತಗಳ ಹೊರೆಯನ್ನು ಹೆಚ್ಚು ಹೊರುತ್ತಿರುವವರು ಮಹಿಳೆಯರು. ಹೀಗಾಗಿ ಪರ್ಯಾಯ ರಾಜಕಾರಣದಲ್ಲಿ ಮಹಿಳೆಯ ಸಮಸ್ಯೆಗಳೂ ಅವರ ಭಾಗವಹಿಸುವಿಕೆಯೂ ಮುಖ್ಯವಲ್ಲವೆ?

ಇವು ನನಗೆ ನಾನೆ ಕೇಳಿಕೊಳ್ಳುತ್ತಿರುವ ಪ್ರಶ್ನೆಗಳು. ಇಷ್ಟು ಸಮಸ್ಯೆಯನ್ನು ಹೇಳುತ್ತಿರುವುದು ನಮ್ಮೆದುರು ಇರುವ ಸಾಮಾಜಿಕ, ರಾಜಕೀಯ, ಆರ್ಥಿಕ ಸನ್ನಿವೇಶದ ಸಂಕೀರ್ಣತೆ ಸೂಚಿಸಲು. ಎಂತಲೇ ಉತ್ತರಗಳು ಸರಳವಾಗಿರುವುದಿಲ್ಲ ಎಂದಿದ್ದು.

ಸಮಾನ ಶೋಷಿತರು. ಆದರೂ ಒಗ್ಗಟ್ಟಿಲ್ಲ

ದಲಿತರು, ಓಬಿಸಿಗಳು, ಮುಸ್ಲಿಮರು, ಕ್ರೈಸ್ತರು ಒಂದುಗೂಡಬೇಕು ಎಂಬ ಕಲ್ಪನೆ ಈ ಹೊತ್ತಿನ ಚಾರಿತ್ರಿಕ ಅಗತ್ಯವಾಗಿರಬಹುದು. ಪ್ರಶ್ನೆ ಎಂದರೆ ಒಗ್ಗೂಡುವಿಕೆ ಯಾಕಾಗಿ ಮತ್ತು ಹೇಗೆ ಎಂಬುದು. ಇವರನ್ನು ಸೇರಿಸುವ ಸೇರಿದ ಮೇಲೆ ಕೂಡಿಕೆಯನ್ನು ಕಾಯ್ದುಕೊಳ್ಳುವ ಸಮಾನ

ದಲಿತರು, ಓಬಿಸಿಗಳು, ಮುಸ್ಲಿಮರು, ಕ್ರೈಸ್ತರು ಒಂದುಗೂಡಬೇಕು ಎಂಬ ಕಲ್ಪನೆ ಈ ಹೊತ್ತಿನ ಚಾರಿತ್ರಿಕ ಅಗತ್ಯವಾಗಿರಬಹುದು. ಪ್ರಶ್ನೆ ಎಂದರೆ ಒಗ್ಗೂಡುವಿಕೆ ಯಾಕಾಗಿ ಮತ್ತು ಹೇಗೆ ಎಂಬುದು. ಇವರನ್ನು ಸೇರಿಸುವ ಸೇರಿದ ಮೇಲೆ ಕೂಡಿಕೆಯನ್ನು ಕಾಯ್ದುಕೊಳ್ಳುವ ಸಮಾನ ತತ್ವ ಯಾವುದು? ಸಮಾನ ತತ್ವವಿಲ್ಲದೆ ಸಮಾನ ಶತ್ರುವಿನ ವಿರುದ್ಧ ಸೇರುವ ಯಾವ ಏಕತೆಗಳು ಎಷ್ಟು ಕಾಲ ಬದುಕುತ್ತವೆ? ದಲಿತರು, ಮುಸ್ಲಿಮರು, ಕ್ರೈಸ್ತರು ಕೆಳಜಾತಿ ಯವರು ಎಂದೊಡನೆ ನಮ್ಮ ಸಮಾಜದ ವಿಭಿನ್ನ ಜಾತಿ ಧರ್ಮಗಳು ಅವುಗಳ ಒಳಗಿನ ಭೇದಗಳು ನೆನಪಾಗುತ್ತವೆ. ಈ ಭೇದಗಳನ್ನು ಇಟ್ಟುಕೊಂಡೇ ಜನ ನಿತ್ಯಜೀವನದಲ್ಲಿ ಬದುಕುತ್ತಾರೆ ಎಂದು ಭಾವಿಸಬೇಕಿಲ್ಲ.

ತತ್ವ ಯಾವುದು? ಸಮಾನ ತತ್ವವಿಲ್ಲದೆ ಸಮಾನ ಶತ್ರುವಿನ ವಿರುದ್ಧ ಸೇರುವ ಯಾವ ಏಕತೆಗಳು ಎಷ್ಟು ಕಾಲ ಬದುಕುತ್ತವೆ? ದಲಿತರು, ಮುಸ್ಲಿಮರು, ಕ್ರೈಸ್ತರು ಕೆಳಜಾತಿ ಯವರು ಎಂದೊಡನೆ ನಮ್ಮ ಸಮಾಜದ ವಿಭಿನ್ನ ಜಾತಿ ಧರ್ಮಗಳು ಅವುಗಳ ಒಳಗಿನ ಭೇದಗಳು ನೆನಪಾಗುತ್ತವೆ. ಈ ಭೇದಗಳನ್ನು ಇಟ್ಟುಕೊಂಡೇ ಜನ ನಿತ್ಯಜೀವನದಲ್ಲಿ ಬದುಕುತ್ತಾರೆ ಎಂದು ಭಾವಿಸಬೇಕಿಲ್ಲ. ಆದರೆ ಶತಮಾನಗಳ ಚರಿತ್ರೆಯುಳ್ಳ ಈ ಭೇದಗಳನ್ನು ಅಮುಖ್ಯಗೊಳಿಸುವ ತತ್ವ ಕಾರ್ಯಕ್ರಮ ಯಾವುದು? ಸಾಮಾನ್ಯವಾಗಿ ಮುಸ್ಲಿಮರ ಬಗ್ಗೆ ನಗರದಲ್ಲಿರುವ ಮಧ್ಯಮವರ್ಗದ ಹೆಚ್ಚಿನ ದಲಿತರು ಸವರ್ಣೀಯರಂತೆಯೇ ಆಲೋಚಿಸುತ್ತಾರೆ. ಹೆಚ್ಚಿನ ಮುಸ್ಲಿಮರು ಹಾಗೂ ಹಿಂದುಳಿದ ಜಾತಿಗಳು ದಲಿತರ ಬಗ್ಗೆ ಸವರ್ಣೀಯರಂತೆ ಆಲೋಚಿಸುತ್ತಾರೆ. ನಮ್ಮ ಗ್ರಾಮಗಳಲ್ಲಿ ದಲಿತ ಹಿಂದುಳಿದ ಜಾತಿ ಹಾಗೂ ಮುಸ್ಲಿಮರ ಸಂಬಂಧಗಳು ನಗರಗಳಲ್ಲಿ ಕುಳಿತು ರಾಜಕೀಯವಾಗಿ ಮಾಡುವ ಏಕತೆಯ ಲೆಕ್ಕಾಚಾರಗಳಿಗೆ ಅನುಗುಣವಾಗಿಲ್ಲ. ದಲಿತರಲ್ಲೇ ಇರುವ ಸಾಮಾಜಿಕ ಒಳಭೇದಗಳು ದೊಡ್ಡ ಪ್ರಶ್ನೆಯಾಗಿ ಹೊರಹೊಮ್ಮುವ ದಲಿತ ಎಂಬ ಪರಿಕಲ್ಪನೆಯನ್ನೇ ಎಡಗೈ ಬಲಗೈ ಎಂದು ಚೂರುಮಾಡಿರುವ ಹೊತ್ತಿದು. ಪರಿಶಿಷ್ಟ ಜಾತಿಗಳಲ್ಲಿ ಸ್ಪೃಶ್ಯ-ಅಸ್ಪೃಶ್ಯ ಭೇದಗಳು ತಲೆಯೆತ್ತುತ್ತಿರುವ ಹೊತ್ತಿದು. ಮೀಸಲಾತಿಯ ಒಂದೇ ಕೆಟಗರಿಯಲ್ಲಿ ಬರುವ ಜಾತಿಗಳು ಪಾಲಿಗಾಗಿ ಮಾಡುವ ಒಳಜಗಳಗಳು ಬಹಳ ತೀವ್ರವಾಗಿರುವ ಹೊತ್ತಿದು. ಇಂಥ ವಿಶಾಲ ಚೌಕಟ್ಟಿನ ಅಹಿಂದದ ರಾಜಕೀಯ ಸಾಮಾಜಿಕ ಏಕತೆ ಬಗ್ಗೆ ಯೋಚಿಸುತ್ತಿದ್ದೇವೆ. ತಂತಮ್ಮ ಜಾತಿಗುರುತುಗಳನ್ನು ಒಳಗೆ ಆಳವಾಗಿ ಹಿಡಿದುಕೊಂಡೇ ಒಗ್ಗೂಡುವಿಕೆ ಈ ಏಕತೆಯು ಸಣ್ಣ ಭಿನ್ನಾಭಿಪ್ರಾಯ ಬಂದರೂ ಕುಸಿದುಬೀಳುವುದಿಲ್ಲವೆ? ತಂತಮ್ಮ ಜನಾಂಗಗಳ ಪಾಲು ಪಡೆಯುವ ಹಪಾಪಿತನ ಹಕ್ಕುದಾರಿಕೆಗಳು ಅವಕಾಶವಾದಿತನ ಹೆಚ್ಚಿಸುವುದಿಲ್ಲವೆ? ಈ ಕಾರಣಕ್ಕಾಗಿಯೇ ಬ್ರಾಹ್ಮಣ ವಿರೋಧ ಮಾಡುವುದಕ್ಕೆ ಉತ್ಸಾಹ ತೋರುವ ಆದರೆ ದಲಿತ ಅಲ್ಪಸಂಖ್ಯಾತರನ್ನು ಒಳಗೊಳ್ಳುವ ಉಳಿದಂತೆ ದ್ವೇಷಿಸುವ ಓಬಿಸಿಗಳ ವಿಚಿತ್ರ ಸಮಾಜಶಾಸ್ತ್ರವು ಹುಟ್ಟಿರುವುದು.

ಎಂತಲೇ ಅಹಿಂದದ ರಾಜಕೀಯ ಏಕತೆ, ಶಿಕ್ಷಣ, ನೌಕರಿ, ರಾಜಕೀಯ ಅಧಿಕಾರಗಳೆಲ್ಲ ಮೀಸಲಾತಿ ಪ್ರಕಾರ ಪಾಲು ಹಂಚಿಕೊಳ್ಳುವ ನೆಲೆಯಿಂದ ಬಹಳ ಮೇಲಕ್ಕೇಳುವುದಿಲ್ಲ; ಇದು ಜಾತಿಧರ್ಮಗಳನ್ನು ಕೆಲಮಟ್ಟಿಗಾದರೂ ಬೈಪಾಸ್ ಮಾಡಬಲ್ಲ ಆರ್ಥಿಕ ರಾಜಕೀಯ ಇಶ್ಯೂಗಳ ಮೇಲೆ ನಾವು ಒಗ್ಗೂಡು ವುದು ಸಾಧ್ಯವೇ ಇಲ್ಲ ಎಂಬ ಸಾಧ್ಯತೆಯತ್ತ ಕರೆದೊಯ್ಯಬಹುದು. ಜಾತಿಮತಗಳ ಹಂಗನ್ನು ಬೈಪಾಸ್ ಮಾಡಬಲ್ಲ ಕಾರ್ಯಕ್ರಮಗಳೆಂದರೆ ರೈತರ ಸಮಸ್ಯೆ, ಬಡತನದ ಸಮಸ್ಯೆ, ಮಹಿಳೆಯರ ಕಷ್ಟಗಳು, ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧದ ಕೂಡುವಿಕೆ ಅಂತಹದು. ಮಾನವ ಹಕ್ಕುಗಳ ವಿಷಯದಲ್ಲಿ ಕೂಡುವಿಕೆ. ಕೋಮುವಾದದ ವಿರುದ್ಧ ಕೂಡುವಿಕೆ ಇಂಥವು. ಇವು ತಮಗಾಗಿ ಹೋರಾ ಡುವ ಬದಲು ಇಡೀ ಸಮಾಜದ ಹದುಳಕ್ಕಾಗಿ ಕೆಲಸ ಮಾಡುವ ವಿಶಾಲನೆಲೆಯನ್ನು ಕೊಡುತ್ತವೆ ಎಂದು ಯೋಚಿಸುತ್ತಿದ್ದೇನೆ.

ಕೋಮುವಾದದ ಕೈಯ್ಯ ಬಡಿಗೆಗಳು

ಸಾಮಾಜಿಕ ಸಂಘಟನೆ ಚಳವಳಿ ಆದರ್ಶವಾದಿ ಆಶಯವನ್ನು ವ್ಯಕ್ತಮಾಡುವುದು ಸುಲಭ. ಸಾಮಾ ಜಿಕ ವಾಸ್ತವದಲ್ಲಿ ಸಮುದಾಯಗಳ ಸಂಬಂಧಗಳು ಬಹಳ ಜಟಿಲವಾಗಿರುತ್ತವೆ. ಉದಾ. ಕೋಮು ವಾದವು ಹೆಚ್ಚಿನ ದಲಿತರಿಗೆ, ಕೆಳಜಾತಿಯವರಿಗೆ ಉರಿಯುವ ಸಮಸ್ಯೆ ಎಂದು ಯಾಕೆ ಅನಿಸಿಲ್ಲ. ದಲಿತರು ಜಾತಿದಬ್ಬಾಳಿಕೆಗೆ ಸೆನ್ಸಿಟಿವ್ ಆಗಿರುವಷ್ಟು ದಲಿತರು ಕೋಮುವಾದಕ್ಕೆ ಯಾಕೆ ಸೆನ್ಸಿಟಿವ್ ಆಗಿರುವುದಿಲ್ಲ ಎಂದು ಅನೇಕ ಸಲ ಕೇಳಿಕೊಂಡಿ ದ್ದೇನೆ. ಇದಕ್ಕೆ ಕಾರಣ ಗ್ರಾಮೀಣ ಭಾಗದಲ್ಲಿ ಇವು ಮುಸ್ಲಿಮರ ಜತೆ ಇಟ್ಟುಕೊಂಡಿರುವ ಸಹಜ ಸಂಬಂಧಗಳ ಕಾರಣಕ್ಕಿರಬಹುದು; ಅನೇಕ ದಲಿತ ಚಿಂತಕರಿಗೆ ಕೋಮುವಾದವು ಮುಸ್ಲಿಮರನ್ನು ಹದ್ದುಬಸ್ತಿನಲ್ಲಿಡಲು ಹುಟ್ಟಿರುವ ರಾಜಕಾರಣ ಎಂಬ ತಿಳುವಳಿಕೆಯ ಕಾರಣವಿರಬಹುದು; ಅದರಲ್ಲೂ ಉತ್ತರದಲ್ಲಿ ಬಿಎಸ್‌ಪಿ, ಬಿಜೆಪಿ ಜತೆ ಸರಕಾರ ಮಾಡಿದ ಅನುಭವ ಕೂಡ ಕಾರಣ ಇರಬಹುದು; ಆದರೆ ಸಂಘಪರಿವಾರಕ್ಕೆ ಆಳದಲ್ಲಿ ಭಯವಿರು ವುದು ಮುಸ್ಲಿಮರ ಮೇಲಲ್ಲ, ದಲಿತರ ಮೇಲೆ. ಪಾಕಿಸ್ತಾನ ವಿದೇಶಿನಿಷ್ಠೆ ಪರಕೀಯ ಧರ್ಮ ಎಂಬ ಆಯುಧ ಬಳಸಿ ಮುಸ್ಲಿಮರನ್ನು ಅದು ಕಟಕಟೆ

(೩೪ನೇ ಪುಟಕ್ಕೆ)

ಚರ್ಚೆ

○ಪ್ರೊ॥ ರವಿವರ್ಮ ಕುಮಾರ್

ಜಾತಿ ವಿನಾಶದಿಂದ ಮಾತ್ರ ಶೋಷಿತರ ಒಗ್ಗಟ್ಟು ಸಾಧ್ಯ

೧) ಜಾತ್ಯಾತೀತ ಸಮಾಜವೆನಿಸುವ ದೃಷ್ಟಿಯಿಂದ ಭಾರತದ ಸಂವಿಧಾನ, ಮೀಸಲಾತಿ ಮತ್ತು ಅಲ್ಪಸಂಖ್ಯಾತರ ಹಕ್ಕುಗಳನ್ನು ಗುರುತಿಸಿದೆ. ಇದರ ಫಲಾನುಭವಿಗಳು ಈ ಪ್ರಯೋಜನದಡಿಯಲ್ಲಿ ಜಾತಿರಹಿತ ಕೋಮುರಹಿತ ಸಮಾಜ ನಿರ್ಮಾಣದೆಡೆಗೆ ಸಜ್ಜಾಗುವುದರ ಬದಲು ಈ ಚೌಕಟ್ಟಿನಲ್ಲೇ ಜಾತಿ ಮತ್ತು ಕೋಮುಗಳನ್ನು ಗಟ್ಟಿ ಮಾಡುತ್ತಾ ಅವುಗಳಿಗೆ ಪ್ರಜಾತಂತ್ರದ ಹೊಸ ಆಯಾಮಗಳನ್ನು ಸೃಷ್ಟಿಸಿರುವುದು ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡಿದೆ. ಜಾತಿ ವ್ಯವಸ್ಥೆಯನ್ನು ನಾಶಮಾಡುವ ಬದಲು ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಜಾತಿವ್ಯವಸ್ಥೆಗೇ ಕಾಯಕಲ್ಪ ಮಾಡುವ ಮೂಲಕ ಈಗಿರುವ ಅಸಮಾನತೆಯನ್ನು ಧೃಡೀಕರಿಸಿ ಶೋಷಣೆಯು ನಿರಂತರವಾಗಿ ಮುನ್ನಡೆಯುವುದಕ್ಕೆ ಸಾಧ್ಯಮಾಡಿಕೊಟ್ಟಿದ್ದಾರೆ. ಜಾತಿ ಈ ಸಮಾಜದಲ್ಲಿ ಆಳವಾಗಿ ಬೇರೂರಿದೆ. ಸಾವಿರಾರು ವರ್ಷಗಳಿಂದ ಬಂದ ಎಲ್ಲ ವಿರೋಧಗಳನ್ನೂ ಜೀರ್ಣಿಸಿಕೊಂಡು ಮುಂದೆ ಸಾಗಿದೆ. ಅದನ್ನು ವಿನಾಶಗೊಳಿಸಬಹುದಾಗಿದ್ದ ಬೌದ್ಧಧರ್ಮ, ಜೈನ ಧರ್ಮ, ವೀರಶೈವಧರ್ಮ, ಸಿಖ್‌ಧರ್ಮ, ಮೊಘಲರ ಆಡಳಿತ, ಇಂಗ್ಲೀಷ್ ಶಿಕ್ಷಣ, ಕೈಗಾರೀಕರಣ ಈಗ ಸ್ವಾತಂತ್ರ್ಯ ಮತ್ತು ಪ್ರಜಾತಂತ್ರ ಎಲ್ಲವನ್ನೂ ಅರಗಿಸಿಕೊಂಡು ಜಾಗತೀಕರಣ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಹೊಸ ಚೈತನ್ಯವನ್ನು ಕಂಡುಕೊಂಡಿದೆ. ಶೋಷಿತರು ಜಾತಿವಿನಾಶ ಮಾಡದೆಯೇ ಮೀಸಲಾತಿಯಂತಹ ಪ್ರಬಲ ಅಸ್ತ್ರವನ್ನು ವ್ಯರ್ಥಮಾಡಿ ಸತ್ಯ ನಾರಾಯಣ ಯಜ್ಞಗಳಲ್ಲಿ ಬ್ರಾಹ್ಮಣೀಕರಣಕ್ಕೆ ಬಲಿಪಶುಗಳಾಗುತ್ತಿದ್ದಾರೆ. ಜಾತಿ ವ್ಯವಸ್ಥೆಯನ್ನು ಉಳಿಸಿ, ಪೋಷಿಸಿ ಒಡೆದಾಳುವ ಅದರ ನೀತಿಗೆ ಬಲಿಯಾಗುವುದು ಅನಿವಾರ್ಯ. ಜಾತಿವಿನಾಶದಿಂದ ಮಾತ್ರ ಶೋಷಿತರ ಒಗ್ಗಟ್ಟು ಸಾಧ್ಯ.

> ಜಾತಿ ಈ ಸಮಾಜದಲ್ಲಿ ಆಳವಾಗಿ ಬೇರೂರಿದೆ. ಸಾವಿರಾರು ವರ್ಷಗಳಿಂದ ಬಂದ ಎಲ್ಲ ವಿರೋಧಗಳನ್ನೂ ಜೀರ್ಣಿಸಿಕೊಂಡು ಮುಂದೆ ಸಾಗಿದೆ. ಅದನ್ನು ವಿನಾಶಗೊಳಿಸಬಹುದಾಗಿದ್ದ ಬೌದ್ಧಧರ್ಮ, ಜೈನ ಧರ್ಮ, ವೀರಶೈವಧರ್ಮ, ಸಿಖ್‌ಧರ್ಮ, ಮೊಘಲರ ಆಡಳಿತ, ಇಂಗ್ಲೀಷ್ ಶಿಕ್ಷಣ, ಕೈಗಾರೀಕರಣ ಈಗ ಸ್ವಾತಂತ್ರ್ಯ ಮತ್ತು ಪ್ರಜಾತಂತ್ರ ಎಲ್ಲವನ್ನೂ ಅರಗಿಸಿಕೊಂಡು ಜಾಗತೀಕರಣ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಹೊಸ ಚೈತನ್ಯವನ್ನು ಕಂಡುಕೊಂಡಿದೆ.

೨) ಬ್ರಾಹ್ಮಣ ಶಾಹಿಯನ್ನು ಯಾರೂ ಕಾಯಾ, ವಾಚಾ, ಮನಸಾ, ವಿರೋಧಿಸುತ್ತಿಲ್ಲ. ಎಲ್ಲ ಬ್ರಾಹ್ಮಣೇತರರೂ ಬ್ರಾಹ್ಮಣ ಶಾಹಿಯನ್ನು ಓಲೈಸಲು ಬದುಕುವುದು ಜಾತಿಪದ್ಧತಿಯ ಮೂಲ ತತ್ವ. ಅದಕ್ಕನುಗುಣವಾಗಿ ಎಲ್ಲರೂ ಶಕ್ತ್ಯಾನುಸಾರ ಸ್ಪರ್ಧೆಗಿಳಿದಿದ್ದಾರೆ. ಇದಕ್ಕೆ ಬ್ರಾಹ್ಮಣಶಾಹಿಯನ್ನು ದೂರುವುದು ನಿಷ್ಪ್ರಯೋಜಕ. ಸ್ವಾತಂತ್ರ್ಯ, ಸಮಾನತೆ ಮತ್ತು ಪ್ರಜಾ ತಂತ್ರ ಸತ್ವಯುತವಾಗಿ ಬೆಳೆಯದೇ ಜಾತೀಯತೆ ಮುಂದುವರಿಯುತ್ತಿರುವುದರಿಂದ ನಿಯಮಿತ ಶ್ರೇಣೀಕರಣದಲ್ಲೇ ಸ್ಪರ್ಧೆ ನಡೆಯುತ್ತಿದೆ ಎನ್ನಬಹುದು. ಜ್ಯೋತಿಬಾಪುಲೆ, ಪೆರಿಯಾರ್ ರಾಮಾಸ್ವಾಮಿ, ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ರಾಮಮನೋಹರ ಲೋಹಿಯಾ ಸೂಚಿಸಿದ ಜಾತಿವಿನಾಶದತ್ತ ಸಾಗಿದರೆ ಮಾತ್ರ ಇದಕ್ಕೆ ಪರ್ಯಾಯವಾದ ಸಂಸ್ಕೃತಿಯನ್ನು ಬಯಸಬಹುದು.

೩) ಸಾಮಾನ್ಯ ಹಿಂದೂ ಒಬ್ಬನನ್ನು ಮುಸಲ್ಮಾನರ ವಿರುದ್ಧವಾಗಲೀ ಕ್ರೈಸ್ತರ ವಿರುದ್ಧವಾಗಲೀ ತಿರುಗಿಸುವುದು ಭಾರತದಲ್ಲಿ ಅತ್ಯಂತ ಸುಲಭವಾಗಿ ಸಾಧಿಸಬಹುದಾದ ಕೆಲಸ. ನಿಜ ಜೀವನದಲ್ಲಿ ಸಾಮಾಜಿಕ ಅಸಮಾನತೆಗೆ ತುತ್ತಾಗಿ ತಲೆತಲಾಂತರದಿಂದ ಕೋಮುದಳ್ಳುರಿಯಲ್ಲಿ ಬೆಂದ ಜನ ಮತ್ತೊಬ್ಬರ ವಿರುದ್ಧ ಕೋಮುಗಲಭೆ ಪ್ರಚೋದಿಸಲು ಸುಲಭವಾಗಿ ತುತ್ತಾಗುತ್ತಾರೆ. ಹಿಂದುಳಿದವರು ಮತ್ತು ದಲಿತರು ತಾವೆಲ್ಲಾ ಹಿಂದೂ ಧರ್ಮಕ್ಕೆ ಸೇರಿದವರೆಂಬ ಪ್ರಜ್ಞೆ ಸುಲಭವಾಗಿ ಪರ ಧರ್ಮಗಳ ವಿರುದ್ಧ ಬಳಸಬಹುದಾದ ಅಸ್ತ್ರ. ಜಾತ್ಯಾತೀತತೆ ಹಿಂದೂಗಳಲ್ಲಿ ಸ್ವಾಭಾವಿಕವಾಗಿ ಇರಲೇಬೇಕಾದಂತಹ ಸಂಸ್ಕೃತಿ. ಬೇರಾವ ಧರ್ಮದಲ್ಲೂ ಇಷ್ಟೊಂದು ಸಂಖ್ಯೆಯಲ್ಲಿ ಬೇರೆ ಜಾತಿಗಳು, ಬುಡಕಟ್ಟುಗಳು, ಭಾಷೆಗಳು, ಸಂಸ್ಕೃತಿಗಳು, ಉಪಸಂಸ್ಕೃತಿಗಳು ಮತ್ತು ದೇವರುಗಳು ಹುಟ್ಟಿನಿಂದಲೇ ಪರಿಚಯವಾಗುವುದಿಲ್ಲ. ಬಹುರೂಪಿ ಸಮಾಜ ಭಾರತೀಯರಿಗೆ ಪಿತ್ರಾರ್ಜಿತ ಆಸ್ತಿ. ಆದ್ದರಿಂದ ಪರಧರ್ಮ ಸಹಿಷ್ಣುತೆ ಭಾರತೀಯರ ಮೂಲಭೂತ ಸಂಸ್ಕೃತಿ. ಈ ಸಂಸ್ಕೃತಿಯನ್ನು ಕ್ರಿಯಾತ್ಮಕವಾಗಿ ಜಾತ್ಯಾತೀತತೆ ಸ್ಥಾಪಿಸುವ ಪ್ರಯತ್ನವಾಗದೆ ಈ ಸಂಸ್ಕೃತಿ ದಿನೇ ದಿನೇ ನಾಶವಾಗುತ್ತಿದೆ. ಮೂಲ ಸಂಸ್ಕೃತಿಯ ಸ್ಥಾನದಲ್ಲಿ ಮೂಲಭೂತವಾದ ತಲೆಯೆತ್ತುತ್ತಿದೆ. ಸಾಂಪ್ರದಾಯಿಕ ಶೋಷಣಾ ವ್ಯವಸ್ಥೆಯ ಫಲಾನುಭವಿಗಳಿಗೆ ಶೋಷಿತರನ್ನು ಒಡೆದಾಳುವುದು ಅನಿವಾರ್ಯ ಸಂಸ್ಕೃತಿ. ಎರಡೂ ಧರ್ಮಗಳಲ್ಲಿ ಕಂಡು ಬರುವ ಜಾತ್ಯಾತೀತ ಮನೋಭಾವ ಮತ್ತು ನಾಯಕತ್ವದ ಕೊರತೆ ಮೂಲಭೂತವಾದ ತಲೆಯೆತ್ತಲು ಸಾಧ್ಯಮಾಡಿ ಕೊಟ್ಟಿದೆ. ಹಿಂದುಳಿದವರು ಮತ್ತು ದಲಿತರು ಧಾರ್ಮಿಕವಾಗಿ ಪಡೆದ ಪ್ರಯೋಜನಕ್ಕಿಂತಲೂ ಧರ್ಮದ ಹೆಸರಿನಲ್ಲಿ ಸುಲಭ ವಾಗಿ ಬಲಿಪಶುಗಳಾಗುತ್ತಿದ್ದಾರೆ.

೪) ದಲಿತರು ಮತ್ತು ಬ್ರಾಹ್ಮಣರು ಯಾವ ಕ್ಷೇತ್ರದಲ್ಲಿ ಒಟ್ಟಾದರೂ ಅದು ಸ್ವಾಗತಾರ್ಹ. ಶ್ರೇಣೀಕೃತ ಸಮಾಜದಲ್ಲಿ ಅತೀ ಎತ್ತರದಲ್ಲಿರುವ ಬ್ರಾಹ್ಮಣರು ದಲಿತರ ಒಡನಾಡಿಗಳಾಗುತ್ತಾರೆ ಎಂಬುದೇ ಕ್ರಾಂತಿಕಾರಕ ಚಿಂತನೆ. ಜಡಗಟ್ಟಿದ ಜಾತಿ ವ್ಯವಸ್ಥೆಯ ಶಿಖರದಲ್ಲಿ ಜಡವಾಗಿರುವ ಬ್ರಾಹ್ಮಣರು ಬುಡದಲ್ಲಿರುವ ದಲಿತರೊಡನೆ ರಾಜಕೀಯ ಸಂಗಾತಿಗಳಾಗುತ್ತಿದ್ದಾರೆ ಎಂದರೆ ಇಡೀ ಜಾತಿ ವ್ಯವಸ್ಥೆಯೇ ಬುಡಮೇಲಾಗುತ್ತಿದೆ ಎಂದು ಭಾವಿಸಬಹುದು. ಲೋಹಿಯಾ ನುಡಿದಂತೆ "ಚಲನಾಶೀಲತೆ ಕಳೆದುಕೊಂಡ ವರ್ಗವ್ಯವಸ್ಥೆಯೇ ಜಾತಿ ವ್ಯವಸ್ಥೆ. ಚಲನಾಶೀಲ ಜಾತಿವ್ಯವಸ್ಥೆಯೇ ವರ್ಗ ವ್ಯವಸ್ಥೆ..." ಹಾಗಾಗಿ ನೀವು ಸೂಚಿಸಿದ ಚಿಂತನೆ, ಜಡಜಾತಿ ವ್ಯವಸ್ಥೆಗೆ ಚಲನಾಶೀಲತೆಯನ್ನು ಒದಗಿಸಿ ಜಾತಿವಿನಾಶಕ್ಕೆ ಸೂಕ್ತ ಪರಿಸರವನ್ನು ನಿರ್ಮಾಣಮಾಡುತ್ತದೆ.

೫) ಮೂಲಭೂತವಾದಕ್ಕೆ ಪ್ರತಿವಾದ ಮಾಡುವುದೇ ಜಾತ್ಯಾತೀತರ ಕಾರ್ಯಕ್ರಮವಾಗಿದೆ. ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರತೆ ಇವುಗಳ ಸೋಂಕಿಲ್ಲದೆ ಬೆಳೆಯುತ್ತಿರುವ ಯುವ ಸಮಾಜ ಮೂಲಭೂತವಾದಕ್ಕೆ ಹೇಳಿ ಮಾಡಿಸಿದ ಆಹಾರ. ಪಠ್ಯಕ್ರಮದಲ್ಲಿ ಮತ್ತು ಶಿಕ್ಷಕರ ಬಾಯಲ್ಲಿ ತಾಂಡವವಾಡುತ್ತಿರುವ ಹಿಂದುತ್ವ ರಾಷ್ಟ್ರದ ಉದ್ಗಲಕ್ಕೂ ಯುವ ಜನಾಂಗವನ್ನು ಮೂಲಭೂತವಾದದಲ್ಲಿ ಪದವಿಗೇರಿಸುತ್ತಿದೆ. ಇದಕ್ಕೆ ಪರ್ಯಾಯವಾಗಿ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳದೆ ಮೂಲಭೂತವಾದವನ್ನು ತಗ್ಗಿಸುತ್ತೇವೆನ್ನುವುದು ಹಗಲುಗನಸು. ಸ್ವಾತಂತ್ರ್ಯ, ಸಮಾನತೆ, ಸೋದರತೆಯನ್ನು ಮಕ್ಕಳಿಗೆ ಪರಿಚಯಿಸದ ಶಿಕ್ಷಣವ್ಯವಸ್ಥೆಯೇ ಸಮಾಜಕ್ಕೆ ಮಾರಕವಾಗಲಿದೆ. ಅಲ್ಪಸಂಖ್ಯಾತರು, ದಲಿತರು, ಹಿಂದುಳಿದವರು ಎಲ್ಲಿಯವರೆಗೆ ಜಾತಿವ್ಯವಸ್ಥೆಯ ಚೌಕಟ್ಟಿನಲ್ಲಿ ಶರೀರವಾಗಿ ಬದುಕಲು ಹವಣಿಸುತ್ತಾರೋ ಅಲ್ಲಿಯವರೆಗೆ ಮೂಲಭೂತವಾದಕ್ಕೆ ಸುಲಭವಾಗಿ ತುತ್ತಾಗುತ್ತಾರೆ. ಜಾತಿ ವಿನಾಶ ಒಂದೇ ಮೂಲಭೂತವಾದಕ್ಕೆ ಉತ್ತರ. □

ಚರ್ಚೆ

○ಡಾ|| ನಟರಾಜ್ ಹುಳಿಯಾರ್

ಜಾತಿ ಧರ್ಮಗಳೇ ಅಡ್ಡಗೋಡೆಗಳು

೧) ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ದಲಿತರನ್ನು ಭಾವನಾತ್ಮಕವಾಗಿ ಬೆಸೆಯುವಲ್ಲಿ ಜಾತಿ ಹಾಗೂ ಧರ್ಮಗಳ ಅಡ್ಡಗೋಡೆಗಳಿವೆ. ಈ ಮೂರೂ ವರ್ಗಗಳನ್ನು ಆರ್ಥಿಕ ನೆಲೆಯಲ್ಲಿ ಒಗ್ಗೂಡಿಸಿ, ಬಡತನದ ವಿರುದ್ಧ ಹೋರಾಟಕ್ಕೆ ಅಣಿಮಾಡುವ ದೊಡ್ಡ ಸಂಘಟನೆಗಳು ಕಾಣುತ್ತಿಲ್ಲ, ಹಾಗೆಯೇ ಅವನ್ನು ವೈಚಾರಿಕವಾಗಿ ಅಣಿಗೊಳಿಸಬಲ್ಲ ಪೆರಿಯಾರ್, ಲೋಹಿಯಾ ಮಾದರಿಯ ಚಳವಳಿ ಕೂಡ ಈಗ ಇಲ್ಲ. ದಲಿತ ವರ್ಗಗಳಲ್ಲಿ ಕಾಣಬರುವಂತೆ ಪೂರ್ಣಾವಧಿ ನಾಯಕತ್ವ ವಹಿಸಿಕೊಳ್ಳಬಲ್ಲ ವಿಚಾರವಂತ ಮುಂದಾಳುಗಳು ಹಿಂದುಳಿದ ವರ್ಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸುತ್ತಿಲ್ಲ. ಇನ್ನು ಕ್ರಿಶ್ಚಿಯನ್ನರಲ್ಲಿ ಪ್ರಜ್ಞಾವಂತ ನಾಯಕರಿದ್ದರೂ, ಅವರಲ್ಲಿ ಅನೇಕರು ನಗರಗಳ ಎನ್.ಜಿ.ಓ. ಪ್ರತಿಭಟನೆಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಕಂಡು ಕಣ್ಮರೆಯಾಗುತ್ತಿದ್ದಾರೆ. ಮುಸ್ಲಿಮರಲ್ಲಿನ ಬಿಡಿಬಿಡಿ ಬುದ್ಧಿಜೀವಿ ಹೋರಾಟಗಾರರು ತಮ್ಮ ಸಮುದಾಯದ ವೈಚಾರಿಕ ನಾಯಕರಾಗುವ ಸನ್ನಿವೇಶ ಇನ್ನೂ ನಿರ್ಮಾಣವಾದಂತಿಲ್ಲ. ತಮ್ಮೆಲ್ಲರ ಸಮಾನ ವೈರಿಯಾದ ಕೋಮುವಾದದ ವಿರುದ್ಧವಾದರೂ ಈ ವರ್ಗಗಳು ಒಂದಾಗಬಲ್ಲವೇ ಎಂಬುದನ್ನು ಕಾದು ನೋಡಬೇಕಾಗಿದೆ.

> ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ದಲಿತರನ್ನು ಭಾವನಾತ್ಮಕವಾಗಿ ಬೆಸೆಯುವಲ್ಲಿ ಜಾತಿ ಹಾಗೂ ಧರ್ಮಗಳ ಅಡ್ಡಗೋಡೆಗಳಿವೆ. ಈ ಮೂರೂ ವರ್ಗಗಳನ್ನು ಆರ್ಥಿಕ ನೆಲೆಯಲ್ಲಿ ಒಗ್ಗೂಡಿಸಿ, ಬಡತನದ ವಿರುದ್ಧ ಹೋರಾಟಕ್ಕೆ ಅಣಿಮಾಡುವ ದೊಡ್ಡ ಸಂಘಟನೆಗಳು ಕಾಣುತ್ತಿಲ್ಲ, ಹಾಗೆಯೇ ಅವನ್ನು ವೈಚಾರಿಕವಾಗಿ ಅಣಿಗೊಳಿಸಬಲ್ಲ ಪೆರಿಯಾರ್, ಲೋಹಿಯಾ ಮಾದರಿಯ ಚಳವಳಿ ಕೂಡ ಈಗ ಇಲ್ಲ.

೨) ಭಾರತದಲ್ಲಿ ಬ್ರಾಹ್ಮಣಶಾಹಿ ಎನ್ನುವುದು ಕ್ಷತ್ರಿಯ ಶಾಹಿಯ ಜೊತೆಗೂ, ವ್ಯಾಪಾರಿ ವರ್ಗ ಹಾಗೂ ಶೂದ್ರ ಶಾಹಿಯ ಜೊತೆಗೂ ಆಗಾಗ್ಗೆ ಒಂದಾಗುತ್ತಾ ಬಂದಿದೆ. ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆ ಕುರಿತಂತೆ ಬಹುಸಂಖ್ಯೆಯ ಹಿಂದುಳಿದ ವರ್ಗಗಳ ಜನರು ಬ್ರಾಹ್ಮಣರಂತೆಯೇ ಯೋಚಿಸುತ್ತಾರೆಯೇ ಹೊರತು ದಲಿತರಂತಲ್ಲ. ಹಿಂದೂ ಜಾತೀಯ ಮನಸ್ಸು ಸದಾ ಒಂದಲ್ಲ ಒಂದು ಬಗೆಯ ಅಸ್ಪೃಶ್ಯತೆಯನ್ನು ಸೃಷ್ಟಿಸುತ್ತಾ ಬೆಳೆಯುತ್ತಾ ಕಾಲ ಹಾಕುತ್ತಾ ಬಂದಿದೆ. ದಲಿತರು ಹಾಗೂ ಅಲ್ಪಸಂಖ್ಯಾತರನ್ನು ಅಸ್ಪೃಶ್ಯರಂತೆ ಕಾಣುವ ಅವಕಾಶ ಸಿಕ್ಕ ತಕ್ಷಣ, ಈ ಹಿಂದುಳಿದ ವರ್ಗದವರು ಬ್ರಾಹ್ಮಣರ ಜೊತೆ ಸೇರಿ, ಕಳ್ಳ ಮೇಲರಿಮೆಯ ಸುಖ ಅನುಭವಿಸ ತೊಡಗುತ್ತಾರೆ.

೩) ಹಿಂದಿನ ಪ್ರಶ್ನೆಗೆ ಕೊಟ್ಟ ಉತ್ತರವನ್ನು ಇಲ್ಲಿ ಇನ್ನಷ್ಟು ಮುಂದುವರಿಸಬಹುದು. ಅಸ್ಪೃಶ್ಯತೆಯಿಂದ ನೊಂದ ದಲಿತರಿಗೂ ಅಸ್ಪೃಶ್ಯತೆಯನ್ನು ಆಚರಿಸುವ ತವಕ ಇರುವಂತೆ ಕಾಣುತ್ತದೆ. ಆ ವರೆಗೆ ತಮ್ಮನ್ನು ದೂರವಿಟ್ಟ ಸವರ್ಣೀಯರು ತಮ್ಮ ಬಗ್ಗೆ ಕೊಂಚ ಆತ್ಮೀಯತೆ ತೋರಿಸಲಾರಂಭಿಸಿದ ತಕ್ಷಣ, ಆ ಸವರ್ಣೀಯರು ಹೇಳಿದ್ದನ್ನೆಲ್ಲಾ ಮಾಡಬೇಕೆಂಬ ಗುಲಾಮ ಆಸೆ ಕೆಲವು ದಲಿತರೊಳಗೂ ಮೂಡಿದರೆ ಅಚ್ಚರಿಯಿಲ್ಲ. ಸವರ್ಣೀಯನಿಗೆ ಹತ್ತಿರವಾಗಿ ಕೊಂಚ ಮೇಲರಿಮೆ ಸಾಧಿಸುವ ಮಾರ್ಗವಾಗಿ ದಲಿತನೂ ಅಲ್ಪಸಂಖ್ಯಾತರ ವಿರುದ್ಧ ತಿರುಗಿಬೀಳಲೆತ್ನಿಸಬಹುದು. ಇಷ್ಟಾಗಿಯೂ, ಈವರೆಗೆ ದಲಿತರು ಹಾಗೂ ಅಲ್ಪಸಂಖ್ಯಾತರು ಬಹುಮಟ್ಟಿಗೆ ಸಹನೆಯ ಹಾಗೂ ಪರಸ್ಪರರ ಕಷ್ಟಬಲ್ಲ ಸಮಾಜ ಜೀವಿಗಳಂತೆ ತಮ್ಮ ಸಂಬಂಧ ಮುಂದುವರಿಸಿದ್ದಾರೆ ಎಂಬುದು ನನ್ನ ನಂಬಿಕೆ. ನಾನು ಹುಡುಗನಾಗಿದ್ದಾಗ, ನಮ್ಮೂರಿನ ಪಂಚಾಯತಿ ಚುನಾವಣೆಯಲ್ಲಿ ಗೆದ್ದ ರಹಮತುಲ್ಲಾಖಾನ್ ಅಲ್ಲೇ ಕಾಖಿ ಚಡ್ಡಿಯಲ್ಲಿ ನಿಂತಿದ್ದ ಜಾಡಮಾಲಿಯನ್ನು 'ನೀವು ಕಣ್ರೋ..' ಎಂದು ಭಾವುಕವಾಗಿ ಉದ್ಗರಿಸುತ್ತಾ ಅಪ್ಪಿಕೊಂಡ ಚಿತ್ರ ನನ್ನ ಕಣ್ಣೊಳಗೆ ಖಾಯಮ್ಮಾಗಿ ಉಳಿದುಬಿಟ್ಟಿದೆ. ರಹಮತುಲ್ಲಾನ ಜಾಗದಲ್ಲಿ ಇನ್ನೊಬ್ಬ ಸವರ್ಣೀಯ ಇಷ್ಟು ಆತ್ಮೀಯವಾಗಿ ನಡೆದುಕೊಂಡದ್ದನ್ನು ನಮ್ಮೂರಿನಲ್ಲಿ ನಾನು ಮತ್ತೆ ಕಂಡಿಲ್ಲ.

೪) ಬ್ರಾಹ್ಮಣರ ನಯನಾಜೂಕು ಹಾಗೂ ಅನೇಕ ವಿದ್ಯಾವಂತ ಬ್ರಾಹ್ಮಣರಲ್ಲಿ ಕಾಣುವ ನಿಜವಾದ ಜಾತ್ಯತೀತತೆ, ದೈಹಿಕ ಹಿಂಸೆ ಕುರಿತಂತೆ ಬ್ರಾಹ್ಮಣರ ಮೇಲುನೋಟದ ಹಿಂಜರಿಕೆ ದಲಿತರಿಗೆ ಪ್ರಿಯವಾಗಲೂಬಹುದು. ಜಾತಿ ನಿಯಮಗಳನ್ನು ರೂಪಿಸಿದವರಿಗಿಂತ, ದಿನನಿತ್ಯ ಜಾತಿಯನ್ನು ಆಚರಿಸುವ ತಮ್ಮ ಕಣ್ಣೆದುರಿಗಿನ ಶೂದ್ರನೇ ದಲಿತರಲ್ಲಿ ಜಿಗುಪ್ಸೆ ಹುಟ್ಟಿಸಿರಬಹುದು. ಬ್ರಾಹ್ಮಣರು ಗುಟ್ಟಾಗಿ ಮಾಡುವ ದಲಿತ ವಿರೋಧಿ ಅಪಪ್ರಚಾರಕ್ಕಿಂತ, ತಮ್ಮ ಮೇಲೆ ನೇರವಾಗಿ ಹರಿಹಾಯುವ, ಸುಡಲು ಬರುವ ಶೂದ್ರರೇ ತಮ್ಮ ಶತ್ರುಗಳಂತೆ ದಲಿತರಿಗೆ ಕಂಡಿರಬಹುದು. ಆದರೆ, ನೀವು ಹೇಳುತ್ತಿರುವ ಈ ಬ್ರಾಹ್ಮಣ-ದಲಿತ ಸಂಯೋಜನೆಯ ಸಾಧ್ಯತೆ ಬಿಎಸ್‌ಪಿ-ಬಿಜೆಪಿಗಳ ತಾತ್ಕಾಲಿಕ ವಿವಾಹ ವಿಚ್ಛೇದನದ (ಇಲ್ಲಿ 'ತಾತ್ಕಾಲಿಕ' ಎಂಬ ಪದವನ್ನು ವಿವಾಹಕ್ಕೂ ಅನ್ವಯಿಸಬಹುದು; ವಿಚ್ಛೇದನಕ್ಕೂ ಅನ್ವಯಿಸಬಹುದು!) ನಂತರದ ಸನ್ನಿವೇಶದಲ್ಲಿ ಸ್ವಲ್ಪ ಹಿನ್ನೆಲೆಗೆ ಸರಿದಂತಿದೆ. ಆದರೂ, ಅಂತರ್‌ಧರ್ಮೀಯ ವಿವಾಹದ ಕೂಸಾಗಿದ್ದರೂ ಬ್ರಾಹ್ಮಣ ರಾಜೀವರ ಮಗಳೆಂದು ಉತ್ತರ ಪ್ರದೇಶದ ಬ್ರಾಹ್ಮಣರು ಪುಳಕಗೊಳ್ಳುವ ಪ್ರಿಯಾಂಕಾ ಅಲ್ಲಿನ ರಾಜಕೀಯಕ್ಕೆ ಬಂದರೆ ಮತ್ತೆ ಬ್ರಾಹ್ಮಣ-ದಲಿತ ಪಕ್ಷಗಳ ಜೋಡಿ ಶುರುವಾಗಬಹುದು. ಅದೇನೇ ಇರಲಿ, ಮಾಯಾವತಿಯವರಂತೆ ಬ್ರಾಹ್ಮಣ ಪಕ್ಷದೊಂದಿಗೆ ಅಧಿಕಾರ ಹಂಚಿಕೊಂಡರೂ ಬ್ರಾಹ್ಮಣರನ್ನು ಹದ್ದುಬಸ್ತಿನಲ್ಲಿಡಬಹುದಾದರೆ, ಈ ಬ್ರಾಹ್ಮಣ-ದಲಿತ ಸಂಯೋಜನ ಕೂಡ ಪರವಾಗಿಲ್ಲ ಎಂದು ಕೆಲವರಿಗನ್ನಿಸಬಹುದು. ಆದರೆ ಬಹುಜನರು ಕೊನೆಪಕ್ಷ ಜೆ.ಪಿ. ಚಳವಳಿಯಂಥ ತಾತ್ವಿಕ ಚಳವಳಿಯ ಹಿನ್ನೆಲೆಯಿಲ್ಲಾದರೂ ಅಧಿಕಾರ ಹಿಡಿದಾಗ ಮಾತ್ರ ಅವರ ಪ್ರಜ್ಞೆಯ ಮಟ್ಟದಲ್ಲಿ ಸ್ವಲ್ಪವಾದರೂ ಬದಲಾವಣೆ ಆಗಬಹುದು. ಆದರೂ ದಲಿತರು ಅಧಿಕಾರದಲ್ಲಿರುವುದು ಜನಪರ ಚಳವಳಿಗಳ ದೃಷ್ಟಿಯಿಂದ ಒಳ್ಳೆಯದು.

೫) ಸಮುದಾಯಗಳ ಬೆಂಬಲವಿರುವ ದಲಿತ ಚಳವಳಿಗಳು ಮಾತ್ರ ಮೂಲಭೂತವಾದಿಗಳನ್ನು ದೊಡ್ಡ ಮಟ್ಟದಲ್ಲಿ ಹಿಮ್ಮೆಟ್ಟಿಸಬಲ್ಲವು ಎಂಬುದು ನನ್ನ ಖಚಿತ ನಂಬಿಕೆ. ಹಿಂದುಳಿದ ವರ್ಗಗಳನ್ನು ರೈತ ಸಂಘದ ವೈಚಾರಿಕತೆ ಈ ಬಗೆಯ ಮೂಲಭೂತವಾದದ ವಿರೋಧಕ್ಕೆ ಅಣಿಗೊಳಿಸಬಲ್ಲದು. ಈ ಜೋಡಿ ಜೊತೆಯಾಗಿ ನಡೆದರೆ, ಅಲ್ಪಸಂಖ್ಯಾತರು ಅವರೊಡನೆ ಇದ್ದೇ ಇರುತ್ತಾರೆ. ಮತ್ತು ಉಳಿದೆಲ್ಲ ಜಾತಿಗಳಿಗಿಂತ ಹೆಚ್ಚಿನ ನಿಷ್ಠೆಯಿಂದ ಇವರ ಹೆಗಲಿಗೆ ಹೆಗಲು ಕೊಡುತ್ತಾರೆ.

ಕೊನೇ ಮಾತು: ನಿಮ್ಮ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಟ್ಟ ಮೇಲೆ ಅನ್ನಿಸಿದ್ದು: ಒಂದು ಮಟ್ಟದಲ್ಲಾದರೂ ಅಸ್ಪೃಶ್ಯತೆಯ ವಿರುದ್ಧ ಅಭಿಪ್ರಾಯ ಮೂಡಿಸುವ, ಜಾತ್ಯತೀತ ಕೆಲಸ ಮಾಡುವ ಕೆಲವಾದರೂ ವೀರಶೈವ ಮಠಗಳನ್ನು ಹಾಗೂ ಆ ಜಾತಿಯ ವೈಚಾರಿಕರ ಪಾತ್ರದ ಬಗೆಗಿನ ಚರ್ಚೆಯನ್ನು ನಿಮ್ಮ ಪ್ರಶ್ನೆಗಳ ವ್ಯಾಪ್ತಿಯಿಂದ ಹೊರಗಿಟ್ಟಿರುವುದು ಈ ಸಂವಾದವನ್ನು ಅಪೂರ್ಣವಾಗಿಸಿದೆ. □

ಚರ್ಚೆ

ಸಮಾನ ಶೋಷಿತರು, ಆದರೂ ಒಗ್ಗಟ್ಟಿಲ್ಲ

(೩೨ನೇ ಪುಟದಿಂದ)

ಯಲ್ಲಿ ನಿಲ್ಲಿಸಿಬಿಡುತ್ತದೆ. ಅವರ ತಪ್ಪೇನು ಎಂದು ಸಾಬೀತಾಗುವ ಮೊದಲೆ ಶಿಕ್ಷಿಸಿಬಿಡುತ್ತದೆ. (ಗೋಧ್ರಾದಲ್ಲಿ ರೈಲಿಗೆ ಬೆಂಕಿ ಹಚ್ಚಿದವರು ಯಾರೆಂಬುದು ತೀರ್ಪು ಬರುವ ಮೊದಲೆ ಮುಸ್ಲಿಮರಿಗೆ ಶಿಕ್ಷೆ ಆಗಿಬಿಟ್ಟಿದೆ) ಆದರೆ ದಲಿತರ ವಿಷಯ ಬಂದಾಗ ತಾನೇ ಕಟಕಟೆಗೆ ನಿಲ್ಲುವ ಸ್ಥಿತಿಬರುತ್ತದೆ. ಎಂತಲೇ ಅದು ತನ್ನ ಆತ್ಮಪರೀಕ್ಷೆ ಮಾಡಿಕೊಳ್ಳುವ ತಪ್ಪೊಪ್ಪಿಕೊಳ್ಳುವ ಸನ್ನಿವೇಶ ನಿವಾರಿಸಿಕೊಳ್ಳಲು ಮುಸ್ಲಿಮರ ಚಾರಿತ್ರಿಕ ಹಾಗೂ ವರ್ತಮಾನದ ತಪ್ಪುಗಳನ್ನು ಮುಂದಿಡುವ ತಂತ್ರ ಬಳಸುತ್ತಾ ಬಂದಿದೆ. ಮತಾಂತರ, ಗೋಹತ್ಯೆ, ದೇವಸ್ಥಾನ ಕೆಡವಿದ ಘಟನೆಗಳನ್ನು ಮುಂದುಮಾಡುತ್ತಿರುವುದು ಹೀಗೆ.

ಮುಸ್ಲಿಮರು ಮತ್ತು ದಲಿತರು ಎರಡು ವಿಷಯಗಳಲ್ಲಿ ಒಟ್ಟಾಗಿ ಹೆಚ್ಚು ಚರ್ಚೆಗೆ ಬರುತ್ತಾರೆ. ಅದು ಮತಾಂತರ ಹಾಗೂ ದನದ ಮಾಂಸದ ಪ್ರಶ್ನೆಯಲ್ಲಿ. ದಲಿತರು ಮತಾಂತರ ಮಾಡುವುದು ಇಸ್ಲಾಂ ಧರ್ಮ ಆಕರ್ಷಣೆಯಿಂದಲ್ಲ. ಹಿಂದೂ ಜಾತಿವ್ಯವಸ್ಥೆಗೆ ರೋಸಿ, ಅದನ್ನು ಧಿಕ್ಕರಿಸಿ ಅಪಮಾನಿಸಬೇಕು ಎಂಬ ರೋಷದಿಂದ. ನನ್ನ ಪ್ರಕಾರ ಮತಾಂತರವು ದಲಿತರಿಗೆ ಈಗಲೂ ನೇತ್ಯಾತ್ಮಕ ಪ್ರತಿಭಟನೆಯ ಮಾರ್ಗವಾಗಿದೆ. ವಾಸ್ತವದಲ್ಲಿ ದಲಿತರು ಇಸ್ಲಾಮಿಗೆ ಮತಾಂತರವಾಗುವುದು ಕಡಿಮೆ. ಬೌದ್ಧಧರ್ಮಕ್ಕೆ ಹೆಚ್ಚು. ಆದರೂ ಸಂಘಪರಿವಾವು ಕೊನೆಗೆ ಹರಿಹಾಯುವುದು ಮುಸ್ಲಿಮರ ಮೇಲೆ. ಎರಡು ತಿಂಗಳ ಹಿಂದೆ ಅಷ್ಟೊಂದು ದಲಿತರು ಬೌದ್ಧಧರ್ಮಕ್ಕೆ ಸೇರುವಾಗ ಅದು ತುಟಿ ಒಡೆಯಲಿಲ್ಲ ಎನ್ನುವುದು ಗಮನಾರ್ಹ. ದಲಿತರು ಮತಾಂತರವಾಗಲಿ ಬಿಡಲಿ, ಮತಾಂತರ ಹಾಕಿದಾಗೆಲ್ಲ ಸಂಘಪರಿವಾರ ಆತ್ಮವಿಮರ್ಶೆಗೆ ಇಳಿಯುವ ಬದಲು, ಮುಸ್ಲಿಮ್ ದ್ವೇಷವನ್ನು ಹೆಚ್ಚಿಸಿಕೊಳ್ಳುತ್ತದೆ. ಇದರಿಂದ ದಲಿತರು ಅಪರೋಕ್ಷವಾಗಿ ಮುಸ್ಲಿಮ ದ್ವೇಷವನ್ನು ಹೆಚ್ಚಿಸುತ್ತಾರೆಯೇ ಎಂದು ಅಂದುಕೊಂಡಿದ್ದೇನೆ.

ಇನ್ನು ದನದ ಮಾಂಸದ ಪ್ರಶ್ನೆ. (ನಾನು 'ಗೋಮಾಂಸ' ಎಂಬ ಶಬ್ದ ಬಳಸುವುದಿಲ್ಲ. ಯಾಕೆಂದರೆ ಇದು 'ಬೀಫ್' ತಿನ್ನುವ ಯಾರೂ ಬಳಸುವ ಪದವಲ್ಲ. ದನದ ಮಾಂಸಕ್ಕೆ ಧಾರ್ಮಿಕ ಸಂವೇದನೆಯ ಆಯಾಮ ಕೊಟ್ಟು ಅದನ್ನು ತಿನ್ನುವವರು ದುಷ್ಟರೆಂಬಂತೆ ಚಿತ್ರಿಸಲು ಸಂಘಪರಿವಾರ ಉದ್ದೇಶಪೂರ್ವಕವಾಗಿ ಸೃಷ್ಟಿಸಿದ ಪದವಿದು. ಆದ್ದರಿಂದ ದನದ ಮಾಂಸದ ಚರ್ಚೆಯಲ್ಲಿ ಪ್ರಗತಿಪರರು ಗೋಮಾಂಸ ಎಂಬ ಶಬ್ದವನ್ನು ಎಂದೂ

ಇಸ್ಲಾಮಿನಲ್ಲಿ ಧಾರ್ಮಿಕ ಮೂಲಭೂತವಾದವಿದೆ. ಇದು ಗತಕಾಲದ ನಿಯಮಗಳಿಗೆ ವರ್ತಮಾನವನ್ನು ನಿಷ್ಠವಾಗಿಸಲು ಯತ್ನಿಸುತ್ತದೆ. ಮಹಿಳೆಯರನ್ನು ಪ್ರಗತಿಪರರನ್ನು ದಮನಿಸುತ್ತದೆ. ಆಧುನಿಕ ಪ್ರಗತಿಯಿಂದ ತನ್ನ ಸಮುದಾಯವನ್ನು ಪ್ರಗತಿಯಿಂದ ವಂಚಿಸಿ ದಮನಿಸುತ್ತದೆ. ಅದಕ್ಕೆ ಮುಸ್ಲಿಮರ ಬಡತನ ಹಸಿವುಗಳಿಗಿಂತ ಅವನರನ್ನು ಸ್ವರ್ಗಕ್ಕೆ ಕಳಿಸುವುದು ಮುಖ್ಯ. ಈ ಕಾರಣಕ್ಕೆ ತನ್ನ ಸಮುದಾಯವನ್ನು ತಾನೇ ನಾಶಮಾಡುವ ಭಸ್ಮಾಸುರ ಅದು. ಆದರೆ ಹಿಂದುತ್ವವಾದವು ಧಾರ್ಮಿಕ ಶ್ರದ್ಧೆಯಿಂದ ಹುಟ್ಟಿದ ಮೂಲಭೂತವಾದವಲ್ಲ. ಅದು ತನ್ನ ವರ್ಗಗಳ ಹಿತಾಸಕ್ತಿ ಕಾಪಾಡಲು ಹುಟ್ಟಿರುವ ಯೋಜನಾ ಬದ್ಧ ರಾಜಕಾರಣ.

ಬಳಸಬಾರದು.) ಚಾರಿತ್ರಿಕ ದಾಖಲೆಗಳು ಹೇಳುವಂತೆ ಒಂದು ಕಾಲಕ್ಕೆ ಬ್ರಾಹ್ಮಣರ ಪೂರ್ವಜರು ದನದಮಾಂಸವನ್ನು ಸೇವಿಸುತ್ತಿದ್ದರು. ಆದರೂ ಈ ಚರಿತ್ರೆಗೆ ಹಂಗೇ ಇಲ್ಲದಂತೆ ಸಂಘಪರಿವಾರ ಮಾತಾಡುತ್ತದೆ. ದನದ ಮಾಂಸದ ಪ್ರಶ್ನೆ ಬಂದಾಗಲೆಲ್ಲ ಅದು ಹಲ್ಲೆ ಮಾಡುವುದು ಮುಸ್ಲಿಮರ ಮೇಲೆ. ವಾಸ್ತವದಲ್ಲಿ ಇದು ದಲಿತರನ್ನು ಒಳಗೊಂಡಂತೆ ನಾಗರಿಕ ಸಮಾಜದಲ್ಲಿ ಒಬ್ಬರ ಆಹಾರದ ಹಕ್ಕಿನ ಪ್ರಶ್ನೆ. ದನದ ಮಾಂಸವನ್ನು ಯಾರೂ ಮತ್ತೊಬ್ಬರ ಧಾರ್ಮಿಕ ಭಾವನೆ ನೋಯಿಸಲು ತಿನ್ನುವುದಿಲ್ಲ. ಅದು ಕುರಿಕೋಳಿಕೊಳ್ಳಲಾಗದ ಬಡವರ ಆಹಾರಕೂಡ. ದನ ಕೊಯ್ದು ಮಾಂಸ ಮಾರಾಟಮಾಡುವ ಕೆಲಸವನ್ನು ಮುಸ್ಲಿಮರು ಮಾಡುತ್ತಾರೆ, ನಿಜ. ಆದರೆ ತಿನ್ನುವವರಲ್ಲಿ ಮುಸ್ಲಿಮೇತರರು ಮತ್ತು ಬಡವರು ಹೆಚ್ಚು. ಇದು ಬೀಫ್ ಅಂಗಡಿಯಲ್ಲೊ ಹೋಟೆಲಲ್ಲೊ ಕೂತರೆ ಗೊತ್ತಾಗುತ್ತದೆ. ಮತಾಂತರ ಹಾಗೂ ದನದ ಮಾಂಸದ ವಿಷಯದಲ್ಲಿ ಸಂಘಪರಿವಾರವು ಆಳದಲ್ಲಿ ದಲಿತರ ಧಾರ್ಮಿಕ ಮತ್ತು ಆಹಾರದ ಹಕ್ಕುಗಳ ಮೇಲಿನ ಹಲ್ಲೆಯನ್ನು ಮಾಡುತ್ತಿದೆ. ನೆಪಕ್ಕೆ ಅದು ಹಸುವಿನ ಹೆಗಲ ಮೇಲೆ ತುಪಾಕಿಯಿಟ್ಟು ಮತ್ತೆ ಮತ್ತೆ ಮುಸ್ಲಿಮರನ್ನೇ ಗುರಿಮಾಡಿ ಹೊಡೆಯುತ್ತಿದೆ ಅಷ್ಟೇ.

ಕೋಮುವಾದ ಮತ್ತು ಆಹಿಂದ:

ಹಿಂದುತ್ವವಾದವನ್ನು ಮೂಲಭೂತ (ಫಂಡಮೆಂಟಲಿಸಂ) ಎಂದು ಕರೆಯುವುದಕ್ಕಿಂತ ಕೋಮುವಾದ (ಕಮ್ಯುನಲಿಸಂ) ಎಂದು ಕರೆಯುವುದು ತಾತ್ವಿಕವಾಗಿ ಉಚಿತ. ಇಸ್ಲಾಮಿನಲ್ಲಿ ಧಾರ್ಮಿಕ ಮೂಲಭೂತವಾದವಿದೆ. ಇದು ಗತಕಾಲದ ನಿಯಮಗಳಿಗೆ ವರ್ತಮಾನವನ್ನು ನಿಷ್ಠವಾಗಿಸಲು ಯತ್ನಿಸುತ್ತದೆ. ಮಹಿಳೆಯರನ್ನು ಪ್ರಗತಿಪರರನ್ನು ದಮನಿಸುತ್ತದೆ. ಆಧುನಿಕ ಪ್ರಗತಿಯಿಂದ ತನ್ನ ಸಮುದಾಯವನ್ನು ಪ್ರಗತಿಯಿಂದ ವಂಚಿಸಿ ದಮನಿಸುತ್ತದೆ. ಅದಕ್ಕೆ ಮುಸ್ಲಿಮರ ಬಡತನ ಹಸಿವುಗಳಿಗಿಂತ ಅವನರನ್ನು ಸ್ವರ್ಗಕ್ಕೆ ಕಳಿಸುವುದು ಮುಖ್ಯ. ಈ ಕಾರಣಕ್ಕೆ ತನ್ನ ಸಮುದಾಯವನ್ನು ತಾನೇ ನಾಶಮಾಡುವ ಭಸ್ಮಾಸುರ ಅದು. ಆದರೆ ಹಿಂದುತ್ವವಾದವು ಧಾರ್ಮಿಕ ಶ್ರದ್ಧೆಯಿಂದ ಹುಟ್ಟಿದ ಮೂಲಭೂತವಾದವಲ್ಲ. ಅದು ತನ್ನ ವರ್ಗಗಳ ಹಿತಾಸಕ್ತಿ ಕಾಪಾಡಲು ಹುಟ್ಟಿರುವ ಯೋಜನಾಬದ್ಧ ರಾಜಕಾರಣ. ಅದು ದೇಶಭಕ್ತಿಯ ಎಷ್ಟೇ ಕೂಗಾಟ ಮಾಡಿದರೂ ದೇಶಕ್ಕೆ ವಿರುದ್ಧವಾಗಿ ಅದು ಯಾವತ್ತೂ ಪರಕೀಯ ಶಕ್ತಿಗಳ ಜತೆ ಕೈ ಜೋಡಿಸಿದೆ. ಹಿಂದೆ ಅದು ಬ್ರಿಟಿಷರ ಜತೆ ಕೈಜೋಡಿಸಿತ್ತು. (ಸಾವರ್ಕರರು ಅಂಡಮಾನಿನ ಜೈಲಿನಲ್ಲಿ ಬರೆದುಕೊಟ್ಟ ತಪ್ಪೊಪ್ಪಿಗೆ ಪತ್ರ ಒಂದು ನಿದರ್ಶನ ಮಾತ್ರ) ಈಗ ಜಗತ್ತಿನ ಶಕ್ತಿಶಾಲಿ ಮಿಲಿಟರಿಶಕ್ತಿಯ ಜತೆ ಕೈಜೋಡಿಸಿದೆ. ಅದಕ್ಕೆ ಜಿಯೋನಿಸಂ ಜತೆ ಮಾತ್ರ ಹೋಲಿಸಬಹುದು. ಎರಡಕ್ಕೂ ತನ್ನ ಜತೆ ಸಹಜೀವನ ಮಾಡುವ ಸಮುದಾಯನ್ನು ದ್ವೇಷಿಸುವ ಮತ್ತು ದಮನಿಸುವ ಗುಣವಿದೆ. ತಮಗಿಂತ ಬಲಿಷ್ಠ ಶಕ್ತಿಯ ಜತೆ ಅಪವಿತ್ರ ಮೈತ್ರಿ ಮಾಡಿಕೊಂಡು ಗುಲಾಮಗಿರಿಗೆ ದೂಡುವ ಗುಣ ಇದೆ. ಸಂಘಪರಿವಾರದ ಹಿತವಚನದಲ್ಲಿ ನಡೆಯುತ್ತಿರುವ ಕೇಂದ್ರ ಸರಕಾರ ಪ್ಯಾಲೆಸ್ಟೇನಿನ ನೆಲವನ್ನು ಸೈನಿಕಬಲದಿಂದ ಕಬಳಿಸಿರುವ ಇಸ್ರೇಲಿನ ಜತೆ ಗಾಢ ಗೆಳೆತನ ಬೆಳೆಸುತ್ತಿರುವುದು ಆಕಸ್ಮಿಕವಲ್ಲ. ತೊಗಾಡಿಯಾ ಅಮೆರಿಕದ ಯುದ್ಧಗಳನ್ನು ಭಾರತ ಬೆಂಬಲಿಸಬೇಕೆಂದು ಕರೆಗೊಟ್ಟಿದ್ದು ಆಕಸ್ಮಿಕವಲ್ಲ. ಸಂಘಪರಿವಾರವು ಜಗತ್ತಿನ ಏಕೈಕ ಹಿಂದೂ ರಾಷ್ಟ್ರ ಎಂದು ಕರೆಯುವ ನೇಪಾಳವನ್ನು ಬಲಿಕೊಟ್ಟಿರುವ ರೀತಿ ಗಮನಿಸಿದರೆ ಅದರ ನೀತಿ ತಿಳಿಯುತ್ತದೆ. ಅಮೆರಿಕ ಹೇಳಿದಂತೆ ಕೇಳುತ್ತಿರುವ ತನ್ನ ದೇಶದ ಜನಬೆಂಬಲವನ್ನು ಕಳೆದುಕೊಂಡಿರುವ ನೇಪಾಳದ ಒಬ್ಬ ಫ್ಯೂಡಲ್ ಹಿಂದೂ ದೊರೆಗೆ ಭಾರತದ ಸಂಘಪರಿವಾರದ ಸರಕಾರ ಬೆಂಬಲಿಸುತ್ತಿದೆ. ಆದರೆ ಬಡ ನೇಪಾಳಿಗಳು ರಾಜಶಾಹಿಯ ವಿರುದ್ಧ ಅಮೆರಿಕದ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ತಮ್ಮ ಬಡತನ ಹಿಂದುಳಿವಿಕೆ ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಈ ಹೋರಾಟವನ್ನು ದಮನಿಸಬಲ್ಲ ಅಮೆರಿಕದ ೫೦೦ ಜನ ಅಧಿಕಾರಿಗಳನ್ನು ನೇಪಾಳದಲ್ಲಿಟ್ಟಿದೆ. ಅಂದರೆ ಏನಾಯಿತು? ನೇಪಾಳವು ಅಮೆರಿಕಕ್ಕೆ ತುತ್ತಾದರೂ ಸರಿ. ನಮ್ಮ ಹಿಂದೂರಾಜ ಉಳಿಯಬೇಕು. ಕೋಮುವಾದಕ್ಕೆ ನಮ್ಮ ಸಮಾಜದ ಬಡವರ ಹಸಿವು ಸಂಕಟಗಳು ಎಂದೂ ಮುಖ್ಯವಲ್ಲ ಎಂಬುದರ ಸ್ಪಷ್ಟಸಂಕೇತ. ಇದನ್ನೇ ನಾನು ಸಂಘಪರಿವಾರದ ಅಂತಾರಾಷ್ಟ್ರೀಯ ರಾಜಕಾರಣದ ಜತೆ ಇರಿಸಿಕೊಂಡಿರುವ ಸಂಬಂಧ ಎಂದು ಕರೆದಿದ್ದು. ಸ್ಥಳೀಯವಾಗಿ ಒಂದು ಕೋಮುಗಲಭೇ ಮಾಡಿದರೂ ಅದರ ಹಿಂದೆ ಈ ವಿದೇಶಿ ಸಂಬಂಧದ ನೆರಳಿರುತ್ತದೆ ಎಂದಿದ್ದು ಅಮೆರಿಕದ ಯೂರೋಪುಗಳ ಮಾರುಕಟ್ಟೆ ಅರ್ಥಶಾಸ್ತ್ರ ಹಾಗೂ ಭಾರತದ ಕೋಮುವಾದವು ಗುಪ್ತವಾಗಿ ಒಂದಾಗಿದೆ. ಅವತ್ತು

ಅವಕ್ಕೆ ಸಮಾನ ಶತ್ರುಗಳೆಂದರೆ ಒಂದು ಇಸ್ಲಾಂ. ಎರಡು ಜನರ ಆರ್ಥಿಕ ಸಂಕಟಗಳ ಬಗ್ಗೆ ದನಿಯೆತ್ತುವ ಸಾಮ್ರಾಜ್ಯ ಶಾಹಿಯ ಯುದ್ಧಗಳನ್ನು ಅಥವಾ ಕೋಮುಸಂಘರ್ಷಗಳನ್ನು ವಿರೋಧಿಸುವ ಜನಪರ ಎಡ ಪಂಥೀಯ ಹೋರಾಟಗಳು. ಇಂತಹ ಸಂಘಪರಿವಾದ ಜತೆ ರಾಜಕೀಯ ಲಾಭಕ್ಕಾಗಿ ದಲಿತರು ಜತೆಗೂಡಬಹುದು ಎಂದರೆ ಏನು ಹೇಳಿ ದಂತಾಯಿತು?

ಆದರೆ ವಾಸ್ತವವೆಂದರೆ ದಲಿತ ಮಧ್ಯಮವರ್ಗಗಳೊಳ ಗಿಂದ, ನಿರುದ್ಯೋಗಿ ದಲಿತರ ಒಳಗಿಂದ 'ಯಾರಾದರೂ ಸರಿ ನಮಗೆ ರಾಜಕೀಯ ಅಧಿಕಾರ ಸಿಗಲಿ' ಎಂಬ ಹೊಂದಾ ಣಿಕೆಯ ರಾಜಕೀಯ ಚಿಂತನೆ ಬಲವಾಗಿ ಹುಟ್ಟುತ್ತಿದೆ. ಇದೊಂದು ಬಗೆಯಲ್ಲಿ ರಾಜಕೀಯವಾಗಿ ವಾಸ್ತವವಾದಿ ಇನ್ನೊಂದು ಬಗೆಯಲ್ಲಿ ವಿಚಿತ್ರವಾಗಿ ಅವಕಾಶವಾದಿ. ಯಾಕೆಂದರೆ ಇದರಲ್ಲಿ ನಗರದ ದಲಿತರ ಮಧ್ಯಮವರ್ಗದ ಹಿತಗಳಿರುವ ಹಾಗೆ, ಗ್ರಾಮೀಣ ಭೂರಹಿತ ದಲಿತರಿಗೆ ಯಾವ ಪರಿಹಾರವಿಲ್ಲ, ಹೀಗಾಗಿ ಕೂಡ ಬ್ರಾಹ್ಮಣಶಾಹಿಯ ಹೊಸ ಅವತಾರದ ಸಂಘಪರಿವಾರದ ಕೋಮುವಾದದ ಹುನ್ನಾರ ಅನೇಕ ಕಲಿತ ದಲಿತರಿಗೆ ಮುಖ್ಯ ಸಮಸ್ಯೆ ಅನಿಸುತ್ತಿರಬೇಕು; ಜಾಗತಿಕರಣ ಮುಖ್ಯ ಸಮಸ್ಯೆಯಲ್ಲ ಅನಿಸುತ್ತಿರಬೇಕು. ನಮಗೆ ಅಧಿಕಾರ ಬೇಕು, ಕೆಲಸ ಬೇಕು; ಯಾವ ಪಕ್ಷವಾದರೇನು ತತ್ವವಾದರೇನು ಅನಿಸುತ್ತಿರಬೇಕು. ಬಿಎಸ್‌ಪಿ ಜತೆ ಕೆಲಸ ಮಾಡುತ್ತಿರುವ ಯಾವುದೆ ವಿದ್ಯಾವಂತ ನಿರುದ್ಯೋಗಿ ದಲಿತ ತರುಣನನ್ನು ಮಾತಾಡಿಸಿದರೆ ಇದು ಗೊತ್ತಾಗುತ್ತದೆ. ನನ್ನ ವಿದ್ಯಾರ್ಥಿ ಕುಶಾಲ ಬಹಳ ದಿನಗಳ ಬಳಿಕ ಸಿಕ್ಕಾಗ ಹೇಳಿದರು. 'ಕರ್ನಾಟಕದ ಬುದ್ಧಿಜೀವಿಗಳಿಗೆ ಮಾಯಾವತಿ ಬಿಜೆಪಿ ಜತೆ ಹೊಂದಾಣಿಕೆ ಮಾಡಿಕೊಂಡು ಮಾಡಿದ ರಾಜಕೀಯ ಪ್ರಯೋಗ ಅರ್ಥವೇ ಆದಂತಿಲ್ಲ. ರಾಜಕೀಯ ಅಧಿಕಾರ ಇಲ್ಲದೆ ದಲಿತರಿಗೆ ಯಾವ ಸವಲತ್ತೂ ಸಿಗುವುದಿಲ್ಲ. ಈ ಅಧಿಕಾರವು ಹಳೆ ದಲಿತ ಸಂಘರ್ಷ ಸಮಿತಿಯ ಚಳವಳಿಗಳಿಂದ ಸಾಧ್ಯವಿಲ್ಲ. ದಲಿತರು ಶಕ್ತಿ ರಾಜಕಾರಣದಲ್ಲಿ ಆದರ್ಶಗಳ ಹಂಗಿಲ್ಲದೆ ನೇರ ಚೌಕಾಸಿ ಮಾಡಿ ಅಧಿಕಾರ ಪಡೆಯಬೇಕು. ಇದನ್ನು ಅರ್ಥಮಾಡಿ ಕೊಳ್ಳಲು ನಿಮಗೆಲ್ಲ ಆಗೇ ಇಲ್ಲ'.

ಬಹುಶಃ ಕುಶಾಲ ವಾಸ್ತವಿಕವಾದ ಸತ್ಯವನ್ನೇ ಹೇಳುತ್ತಿರ ಬಹುದು. ಈ ಮಾತುಗಳನ್ನು ಆದರ್ಶಗಳ ಬೆನ್ನುಬಿದ್ದು ಯಾವ ನೌಕರಿಯೂ ಸಿಗದೆ ಅಲೆದು ಸಾಕಾದ ಬಳಿಕ ಅವನು ಆಡುತ್ತಿ ದ್ದಾನೆ ಎಂಬುದನ್ನು ಮರೆಯುವಂತಿಲ್ಲ. ಹೀಗಾಗಿ ದಲಿತರಲ್ಲಿ ಒಂದು ಗುಂಪು, ರಾಜಕೀಯ ಅಧಿಕಾರವನ್ನು ಪಡೆಯಲು ಇರುವ ಯಾವುದೇ ರಾಜಕೀಯ ಗುಂಪುಗಳ ಜತೆ ಹೊಂದಾ ಣಿಕೆ ಮಾಡಿಕೊಳ್ಳುವುದು ತಪ್ಪಿಲ್ಲ ಎಂದು ಭಾವಿಸಿದೆ. ಜೀವನ ಕೊಡದ ಭಾಷೆ, ಸಂಸ್ಕೃತಿ, ಆದರ್ಶ, ತತ್ವ ಇವುಗಳಿಗೆ ಬದ್ಧವಾಗಿರಬೇಕೆಂದು ಅವರ ನಿರುದ್ಯೋಗ, ಕಷ್ಟಗಳಲ್ಲಿ ಚಳವಳಿಗಳು ಹೇರಿದ ಭಾರಕ್ಕೆ ಹೊಸತಲೆಮಾರಿನ ಒಂದು ಭಾಗ ಹೀಗೆ ಪ್ರತಿಭಟಿಸುತ್ತಿರಬಹುದು. ಇದಕ್ಕೆ ಕಾರಣ ಪ್ರಭುತ್ವದ ಜತೆಗಿನ ದಲಿತರ ಸಂಬಂಧದಲ್ಲಿರು ವುದು. ಹಿಂದಿನಿಂದಲೂ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ಜಾತಿಗಳ ಪ್ರಭುತ್ವದ ಜತೆಗಿನ ಸಂಬಂಧ ಎಂದರೆ ಹಾಸ್ಟೆಲ್, ಶಾಲೆ, ನೌಕರಿ, ಮೀಸಲಾತಿ ಮುಂತಾದವನ್ನು ಗುದ್ದಾಡಿ ಪಾಲು

ಕೋಮುವಾದವು, ಅಮೆರಿಕದ ಮಾರುಕಟ್ಟೆ ನೀತಿಗಳು ಇಸ್ಲಾಮನ್ನು ಹಾಗೂ ಮುಸ್ಲಿಮರನ್ನು ಏಕಕಾಲಕ್ಕೆ ಸಮಾನ ಶತ್ರುವೆಂದು ಭಾವಿಸಿರುವ ಈ ಚಾರಿತ್ರಿಕ ಸಂದರ್ಭದಲ್ಲಿ, ತಮ್ಮ ರಕ್ಷಣೆಗಾಗಿ ಕೋಮುವಾದ ಎದುರಿಸಲು ಮುಸ್ಲಿಮರು ಮೂಲಭೂತವಾದದ ಹಿಡಿತಕ್ಕೆ ಹೋಗುವ ಅಪಾಯಕಾರಿ ಸಾಧ್ಯತೆಯಿದೆ. ಅರಬ್ ಸಮಾಜಗಳಲ್ಲಿ ಅಮೆರಿಕ ಯೂರೋಪುಗಳ ಆರ್ಥಿಕ, ರಾಜಕೀಯ ಆಕ್ರಮಣಗಳನ್ನು ತಡೆಯಲು ಪ್ರಗತಿಪರ ರಾಜಕಾರಣವು ಆಧುನಿಕ ನಾಗರಿಕ ಸಮಾಜವು ಇರದಿದ್ದ ಕಾರಣದಿಂದ ಇಸ್ಲಾಮಿಕ್ ಮೂಲ ಭೂತವಾದವೇ ದೇಶರಕ್ಷಣೆಯ ಯುದ್ಧವನ್ನು ಕೈಗೆತ್ತಿ ಕೊಂಡಿದೆ. ಮುಸ್ಲಿಂ ಮೂಲಭೂತ ವಾದವು ಸಮಸ್ಯೆ ನಿಜ. ಆದರೆ ಅದು ಜಗತ್ತಿನ ಅತಿದೊಡ್ಡ ಶತ್ರುವಾಗುತ್ತಿರುವ ಅಮೆರಿಕಾದ ಸಾಮ್ರಾಜ್ಯಶಾಹಿಯನ್ನು (ಧಾರ್ಮಿಕ ಕಾರಣ ಗಳಿಗಾಗಿಯೇ ಎಂದುಕೊಂಡರೂ) ಅಂತೂ ಮುಖಾಮುಖಿ ಮಾಡುತ್ತಿದೆ.

ಪಡೆಯುವುದು ಎಂಬಂತಾಗಿದೆ. ಹೀಗಾಗಿ ಪ್ರಭುತ್ವದ ಜತೆಗೆ ಸಂಘರ್ಷಕ್ಕಿಂತ ಚೌಕಾಸಿ ಮುಖ್ಯ. ಒತ್ತಡ ತಂತ್ರ ಮುಖ್ಯ. ಆಗ ಪ್ರಭುತ್ವವು ಯಾವ ಬಗೆಯ ಅಂತರ ರಾಷ್ಟ್ರೀಯ ನೀತಿಯನ್ನು ತಾಳುತ್ತದೆ ಎಂಬುದು ಸಂಬಂಧ ಇಲ್ಲದ ಸಂಗತಿಯಾಗುತ್ತದೆ. ಬಹುಶಃ ಕುಶಾಲ ಹೇಳಿದ್ದು ಸತ್ಯವೋ, ನಾವು ಹೊಸ ಪರ್ಯಾಯ ರಾಜಕಾರಣಕ್ಕಾಗಿ ಹೊಸ ಏಕತೆಯ ಆದರ್ಶಗಳನ್ನು ಜಪಿಸುವುದು ಸತ್ಯವೋ ನಿರ್ಣಯಿಸುವುದು ಕಷ್ಟವಾಗುತ್ತಿದೆ.

ಮುಸ್ಲಿಮರಿಗೊಂದು ಚಾರಿತ್ರಿಕ ಅವಕಾಶ:

ಕೋಮುವಾದವು, ಅಮೆರಿಕದ ಮಾರುಕಟ್ಟೆ ನೀತಿಗಳು ಇಸ್ಲಾಮನ್ನು ಹಾಗೂ ಮುಸ್ಲಿಮರನ್ನು ಏಕಕಾಲಕ್ಕೆ ಸಮಾನ ಶತ್ರುವೆಂದು ಭಾವಿಸಿರುವ ಈ ಚಾರಿತ್ರಿಕ ಸಂದರ್ಭದಲ್ಲಿ, ತಮ್ಮ ರಕ್ಷಣೆಗಾಗಿ ಕೋಮುವಾದ ಎದುರಿಸಲು ಮುಸ್ಲಿಮರು ಮೂಲಭೂತವಾದದ ಹಿಡಿತಕ್ಕೆ ಹೋಗುವ ಅಪಾಯಕಾರಿ ಸಾಧ್ಯತೆಯಿದೆ. ಅರಬ್ ಸಮಾಜಗಳಲ್ಲಿ ಅಮೆರಿಕ ಯೂರೋಪುಗಳ ಆರ್ಥಿಕ, ರಾಜಕೀಯ ಆಕ್ರಮಣಗಳನ್ನು ತಡೆಯಲು ಪ್ರಗತಿಪರ ರಾಜಕಾರಣವು ಆಧುನಿಕ ನಾಗರಿಕ ಸಮಾಜವು ಇರದಿದ್ದ ಕಾರಣದಿಂದ ಇಸ್ಲಾಮಿಕ್ ಮೂಲ ಭೂತವಾದವೇ ದೇಶರಕ್ಷಣೆಯ ಯುದ್ಧವನ್ನು ಕೈಗೆತ್ತಿ ಕೊಂಡಿದೆ. ಮುಸ್ಲಿಂ ಮೂಲಭೂತವಾದವು ಸಮಸ್ಯೆ ನಿಜ. ಆದರೆ ಅದು ಜಗತ್ತಿನ ಅತಿದೊಡ್ಡ ಶತ್ರುವಾಗುತ್ತಿರುವ ಅಮೆರಿಕಾದ ಸಾಮ್ರಾಜ್ಯಶಾಹಿಯನ್ನು (ಧಾರ್ಮಿಕ ಕಾರಣ

ಚರ್ಚೆ

ಗಳಿಗಾಗಿಯೇ ಎಂದುಕೊಂಡರೂ) ಅಂತೂ ಮುಖಾಮುಖಿ ಮಾಡುತ್ತಿದೆ. ಇವತ್ತು ಪಾಕಿಸ್ತಾನ ದಲ್ಲಿ, ಅಫಘಾನಿಸ್ಥಾನದಲ್ಲಿ ಅಮೆರಿಕನ್ ಸಾಮ್ರಾಜ್ಯ ಶಾಹಿಗೆ ದೊಡ್ಡ ಸವಾಲನ್ನು ಇಟ್ಟಿರುವುದು ಅಲ್ಲಿನ ಮುಸ್ಲಿಂ ಮೂಲಭೂತವಾದಿಗಳು. ಇಂತಹ ದೊಂದು ವಿಚಿತ್ರ ಸತ್ಯ ನಮ್ಮೆದುರು ಇದೆ. ಅಮೆರಿಕ ಯೂರೋಪುಗಳ ಆರ್ಥಿಕ ಸೈನಿಕ ದಾಳಿಗಳನ್ನು ತಡೆಯಲು ಪ್ರಜಾಪ್ರಭುತ್ವದ ಮಾರ್ಗವಾಗಿ ಆಯ್ಕೆಯಾಗಿ ಬಂದ ಸರಕಾರಗಳು ಅಥವಾ ಜನ ಪರ ಚಳವಳಿಗಳು ಸೋತುಹೋಗಿರುವ ಕಾರಣ ದಿಂದಾಗಿ ಈ ವಿಚಿತ್ರ ಸ್ಥಿತಿ ಬಂದಿರಬಹುದು.

ಇಂತಹ ಪ್ರಮಾದ ನಮ್ಮಲ್ಲಿ ಸಂಭವಿಸಬಾರದು ಎಂದರೆ, ಈ ಹೊತ್ತಲ್ಲಿ ಮುಸ್ಲಿಮರು ಪ್ರಗತಿಪರ ಚಳವಳಿಗಳ ಭಾಗವಾಗಬೇಕು. ಇದು ಅವರಿಗೆ ಇರುವ ಚಾರಿತ್ರಿಕ ಅವಕಾಶವೋ ಅನಿವಾರ್ಯ ತೆಯೋ ಗೊತ್ತಿಲ್ಲ. ಅಂತೂ ಆಗಬೇಕು. ಇದೇ ಹೊತ್ತಲ್ಲಿ ಈ ಸಮುದಾಯವನ್ನು ಪ್ರಗತಿಪರ ರಾಜಕಾರಣವು ತನ್ನ ಸಂಗಾತಿಯಾಗಿಸಿಕೊಳ್ಳಬೇಕು. ಮುಸ್ಲಿಮರ ಜತೆ ರಾಜಕೀಯ, ಸಾಮಾಜಿಕ ಕಾರಣ ಕ್ಕಾಗಿ ಹೊರ ಸಂಬಂಧ ಬೆಳೆಸಬೇಕು ಎಂದಾಗ ಅದು ಮುಸ್ಲಿಮರಲ್ಲಿ ಇರುವ ಧಾರ್ಮಿಕ ಮೂಲ ಭೂತವಾದಿಗಳು, ಬಂಡವಾಳಶಾಹಿಗಳು, ಕ್ರಿಮಿ ನಲ್ಲುಗಳ ಜತೆ ಎಂದರ್ಥವಲ್ಲ. ಬದುಕಲು ಸೆಣಸುತ್ತಿ ರುವ ಸಾಮಾನ್ಯ ಸಮುದಾಯ ಹಾಗೂ ಅದರ ಪ್ರಗತಿಪರ ಆಧುನಿಕ ಮನಸ್ಸಿನ ಮಧ್ಯಮವರ್ಗ ಎಂದರ್ಥ. ಸಮಸ್ಯೆ ಎಂದರೆ ಮುಸ್ಲಿಂ ಸಮುದಾಯ ವನ್ನು ಅದು ಮೂಲತಃ ಧರ್ಮಾಂಧವಾದುದು ಎಂದು ಪೂರ್ವಗ್ರಹೀತ ಪರಿಭಾಷೆಯಲ್ಲಿ ಪ್ರಗತಿ ಪರರೂ ಗ್ರಹಿಸಿರುವುದು. ಇದು ಕೋಮುವಾದೀ ಕರಣಗೊಂಡಿರುವ ಪಠ್ಯಪುಸ್ತಕಗಳು, ಚರಿತ್ರೆ, ಮಾಧ್ಯಮಗಳು ಬಹುಕಾಲದಿಂದ ಕೊಟ್ಟ ಸಾಮಾ ಜಿಕ ಶಿಕ್ಷಣದ ಪರಿಣಾಮ. ಎಂತಲೇ ಈ ಪೂರ್ವ ಗ್ರಹಗಳು ಆಧುನಿಕ ಶಿಕ್ಷಣ ಪಡೆದವರಲ್ಲಿ ಹೆಚ್ಚು. ಸ್ವಂತ ಅನುಭವಗಳ ಮೂಲಕವೇ ಮುಸ್ಲಿಮರನ್ನು ಗ್ರಹಿಸಿರುವ ಆಧುನಿಕ ಶಿಕ್ಷಣ ಪಡೆಯದ ಸಮು ದಾಯಗಳಲ್ಲಿ ಈ ಪೂರ್ವಗ್ರಹಗಳು ಕಡಿಮೆ ಎಂಬುದು ಗಮನಾರ್ಹ. ಪ್ರಶ್ನೆಯೆಂದರೆ ಈ ಜಾತಿ ಧರ್ಮದ ನೆಲೆಗಳ ಒಳಗೆ ರಾಜಕಾರಣ ಮಾಡುವ ಅಹಿಂದವು ಇದಕ್ಕೆ ಅವಕಾಶ ಕಲ್ಪಿಸಿಕೊಡುವಷ್ಟು ತಾತ್ವಿಕವಾಗಿ ಸಿದ್ಧವಾಗಿದೆಯೇ ಎಂಬುದು?

ಇದು ಕೂಡ ನನಗೆ ನಾನೇ ಕೇಳಿಕೊಳ್ಳುತ್ತಿರುವ ಪ್ರಶ್ನೆ. □

ಕಾವ್ಯ



ಕಾಳು ತುಂಬಿದ ಹೊಡೆಯೆತ್ತಿ ನಿಂತ ಹೊಳಿಸಾಲ ಭೂಮಿಯಂತೆ
ತುಂಬಿ ಹರಿಯುವಾ ಕೃಷ್ಣೆ-ತುಂಗೆಯರ ತುಂಬುಪಾತ್ರದಂತೆ;
ಬುದ್ಧಕಾವ್ಯ ರುಚಿ ಕಲ್ಲುಸಕ್ಕರೆಯ ಸವಿ ಅಚ್ಚ ಹರಳಿನಂತೆ
ಕೊರಡ ಕೊನರಿಸುವ ಭಾವ ಚಿಮ್ಮಿಸುವ ಜೀವಸತ್ವದಂತೆ.

ವಿಶ್ವಮಾನವರ ಬಾಳನೊಡೆವ ವಿಷಮತೆಯ ತೊಡೆಯುವಂತೆ
ಹಿಂಸೆಯಿಲ್ಲದೆಯೆ ವಿಶ್ವದಲ್ಲಿ ಸಮತೆಯನು ಸಾರಲೆಂದು;
ಕರುಣೆಯಾ ಸೆಲೆಯಾಗಿ ಉಕ್ಕಿ ಪ್ರವಹಿಸಿದ ವಿಶ್ವದೊಳಗೆ
ಬೋಧಿಸತ್ವ ಗುರುವಾಗಿ ಬಂದನೀ ಲೋಕಹಿತದ ಕರೆಗೆ.

ಸಪ್ಪನ್ನ ಬ್ಯಾಳಿಯನ್ನುಂಡು ಬರೆದವರ ಸವಳು ಕಾವ್ಯ ಬೇರೆ
ಉಪ್ಪು ಖಾರ ಹುಳಿಯೊಗರು ಸವಿದವರ ಕಾವ್ಯರುಚಿಯೆ ಬೇರೆ.
ರಾಮಚರಿತೆಯನೊ ಭೀಮಚರಿತೆಯನೊ ಕೇಳಿ ಮತ್ತೆ ಮತ್ತೆ
ಬಾಯಿ ರುಚಿಯ ಕಳಕೊಂಡ ಜನರಿಗಿದೊ ನವ್ಯ ಬುದ್ಧ ಚರಿತೆ.

ಯುದ್ಧ ಬಾಂಬುಗಳ ಭೀತಿಯಿಂದ ತತ್ತರಿಸುವಂಥ ಜನಕೆ
ಹಿಂಸೆಯಿಂದ ಧಗಧಗಿಸುತಿರುವ ಕುತ್ರಸ್ತ ಮನುಜ ಕುಲಕೆ;
ಶಾಂತಿಕರುಣೆಗಳ ಧಾರೆಯೆರೆವ ಅಪರೂಪ ನೆಲದ ಕವಿತೆ
ವಿಶ್ವಶಾಂತಿಗಿದೊ ಸ್ತೂಪವೆತ್ತಿ ನಿಂತಿಹುದು ಬುದ್ಧ ಚರಿತೆ.

ಕಾಲಗರ್ಭದಲಿ ಹೂತುಹೋದ ಇತಿಹಾಸವನ್ನು ಬಗಿದು
ಗತಿಸಿದಂಥ ಶತಮಾನದೊಡಲುಗಳ ಬಾಗಿಲನ್ನು ತೆಗೆದು
ಅಖಿಲ ಜಗಕೆ ತಿಳಿಬೆಳಕನಿತ್ತ ಸಿದ್ದಾರ್ಥ ಚರಿತೆಯನ್ನು
ಹೇಳುವೆನು ಸರಸ ಕನ್ನಡದ ಭಾಷೆಯಲಿ ಬುದ್ಧ ಕಾವ್ಯವನ್ನು.

ಅಂಧಕಾರ ಅಜ್ಞಾನ ಮುಸುಕಿದಾ ಕಷ್ಟಕಾಲದಲ್ಲಿ ಅವನು
ಪ್ರೀತಿ-ನೀತಿಗಳು ಭ್ರಷ್ಟಗೊಂಡು ಮಾನವರು ಬಳಲುವಲ್ಲಿ;
ಕರ್ಮಕಾಂಡದಲಿ ಸಿಕ್ಕಿಕೊಂಡು ಪ್ರಜ್ಞಾಜನರು ನರಳುವಂದು
ಉದಿಸಿದನು ಬುದ್ಧ ಬುವಿಯ ಮೇಲೆ ಹೊಸ ಸೂರ್ಯನಂತೆ ಅಂದು.

ಜಗದ ಮಾನವರ ನೋವ ನರಳಿಕೆಯ ನಿಗಿಸಲೆಂದು ಬಂದು
ನೊಂದ ಜೀವಿಗಳ ಸಂತವಿಡುವ ಮೂಲಿಕೆಯ ತಿರಿದು ತಂದು;
ಹುಟ್ಟು-ಸಾವುಗಳ ಹುಟ್ಟ ಕಡೆದು ಹೊಸ ದಂಡೆಯನ್ನು ಕಂಡು
ರೂಪಿಸಿದ ಬುದ್ಧ ಹೊಸ ಧರ್ಮವನ್ನು ಹರಿದೊಗೆದು ಕರ್ಮವನ್ನು.

ಬುದ್ಧ ಮಹಾಕಾವ್ಯದ ಪೀಠಿಕೆ

○ಡಾ॥ ಬುದ್ಧಣ್ಣ ಹಿಂಗಮಿರೆ

ಕಾಮ ಕ್ರೋಧಗಳ ಬಲೆಯ ಹೆಣೆದ ಈ ವಿಶ್ವರಂಗದಲ್ಲಿ
ಕಣ್ಣುಕುಕ್ಕಿಸುವ ಕುರುಡುಗೊಳಿಸುವೀ ಕೃತಕ ಥಳಕಿನಲ್ಲಿ;
ಬೋಗಿಸಲು ಬಂದ ಶ್ರೀ ಬೋಧಿಸತ್ವ ನಗೆಮುಗುಳ ಬೆಳಕ ಚೆಲ್ಲಿ
ಹಸಿಗೆಂಡ ಕಿಚ್ಚಿನಲಿ ಗಂಡು ಹೆಣ್ಣುಗಳು ನರಳುತಿರುವ ಬುವಿಗೆ

ಭೂಮಿ ಗಗನದಲಿ ಮೊಳಗುತಿತ್ತು ಹೊಸತೊಂದು ಬಗೆಯ ನಾದ
ಮೂಕವಾಗಿ ಕಿವುಡಾಗಿ ಹೋಗಿರಲು ಆಗ ಉಪನಿಷತ್ತು ವೇದ;
ಶಾಸ್ತ್ರ-ಗೀಸ್ತ್ರಗಳು ಮುದುಡಿಕೊಂಡವು ಬರುವ ಸೋಲು ನೆನೆದು
ಹಾಲಜಾಲ ತಿಳಿಯದೆಯೆ ನಡುಗಿದವು ನೀತಿ ಮೂಗ ಮುರಿದು

ಪಾಪ-ಪುಣ್ಯಗಳ ತೂಕಮಾಡುವಾ ಯಂತ್ರ ಇರುವುದೆಲ್ಲಿ?
ಕೋಪ-ತಾಪಗಳ ಕಳೆಯಬಲ್ಲ ಮಾಂತ್ರಿಕತೆ ಸಿಗುವುದೆಲ್ಲಿ?
ಕಲ್ಲುಮುಳ್ಳ ತುಳಿಯುತ್ತ ಸಾಗಿ ಈ ಜಗವ ಸುತ್ತಿ ಸುತ್ತಿ
ಕಾಳರಾತ್ರಿಯಲಿ ಪಯಣ ಹೊರಟವಗೆ ಈ ಕತೆಯು ಬಾಳಬುತ್ತಿ.

ಅಖಿಲ ಮಾನವರ ದುಃಖವನ್ನು ಕಳೆಯಬಲ್ಲ ಕವಿತೆ
ಸಕಲ ಪ್ರಾಣಿಗಳ ಜೀವ ರಕ್ಷಿಸುವ ನೆಲದ ನರನ ಚರಿತೆ;
ಜೀವರೂಪ ಸಸಿ ಬೆಳೆದು ನಿಂತು ಅದೆ ಬೋಧಿವೃಕ್ಷವಾಗಿ
ಬೆಳಗಿತ್ತು ಜಗದ ಜನಮನವ ಮತ್ತೆ ಅದ್ದ್ನ್ಯಾನದೀಪವಾಗಿ

ಜಗದ ಹಲವಾರು ಅನ್ಯಭಾಷೆಗಳ ರೂಪಕಗಳನ್ನು ಬಳಸಿ
ಕನ್ನಡದ ಭಾಷೆ ಶ್ರೀಮಂತಗೊಳ್ಳುವಾ ಕಲ್ಪನೆಗಳನು ಸ್ಮರಿಸಿ;
ಒಳಹೊಕ್ಕು ನೋಡಿದರೆ ಬುದ್ಧಕಾವ್ಯ ಉನ್ಮಾದವಿರದ ಹಾಗೆ
ಜಾನಪದದ ಸತ್ವ ಸಾಮರ್ಥ್ಯ ನುಡಿ ಸೊಗಸು ಸೊಗಡುಗಳನು ಬಳಸಿ

ರವೀಂದ್ರ ಅರವಿಂದರಂತೆ ಬದುಕನ್ನು ಸೂಕ್ಷ್ಮವಾಗಿ ಗ್ರಹಿಸಿ
ಸರ್ವಜ್ಞ್ನ ಡೀವಿಜಿ ಕಗ್ಗದಂತೆ ಜನಜೀವನದ ಎಚ್ಚರಿಸುವಂತೆ;
ನೋಡದಿರುವ ಆತ್ಮ ಆಧ್ಯಾತ್ಮಗಳ ನೆನಪು ಬರಲು ಸಹಜ
ಬುದ್ಧನಂತೆ ಕಣ್ಮುಚ್ಚಿ ಕುಳಿತು ಚಿಂತಿಸುತ ಮೌನವಾಗಿ.

ಮಹಾಕವಿ ಕುವೆಂಪು ಬೇಂದ್ರೆಗಳ ಕಾವ್ಯರಸವ ಹೀರಿ
ಸಾಮಾನ್ಯ ಜನರ ಮನವನ್ನು ತಟ್ಟುವಾ ಬುದ್ಧಣ್ಣ ಬರೆದ ಕಾವ್ಯ;
ಅಲ್ಲಸಲ್ಲದ ವಿಚಾರಗಳ ಶತಮಾನಗಳನು ಹೊಡೆದು ಹಾಕಿ
ಬಸವಣ್ಣ ಶರೀಫರ ಹಾಗೆ ಅಲ್ಲಲ್ಲಿ ನುಡಿಗಳನು ಬಳಸಿ.

ಕಾಳಿದಾಸನಿಗಿಂತ ಮುಂಚಿತವೆ ಈ ಶ್ರೇಷ್ಠ ಬುದ್ಧ ಚರಿತೆ
ಕವಿರಾಜ ಮಹಾಕವಿ ಅಶ್ವಘೋಷನಾ ಬುದ್ಧ ಚರಿತ ಗೀತೆ;
ಸಾವಿರಾರು ವರ್ಷಗಳ ತರುವಾಯ ಬಂದ ಬುದ್ಧಣ್ಣ ಭಾವಗೀತೆ
ಕಾಲಕ್ಕೆ ತಕ್ಕಂತೆ ಸಂಕ್ಷೇಪವಾಗಿ ಈ ಬುದ್ಧ ಮಹಾಕಾವ್ಯ ಚರಿತೆ.

(ಡಾ॥ ಬುದ್ಧಣ್ಣ ಹಿಂಗಮಿರೆ ಅವರು ರಚಿಸಿರುವ ಅಪ್ರಕಟಿತ
'ಬುದ್ಧ ಮಹಾಕಾವ್ಯ'ದ ಪೀಠಿಕಾ ಭಾಗದಿಂದ ಆಯ್ದು ಪ್ರಕಟಿಸಲಾಗಿದೆ.)

ಶ್ರಾದ್ಧ ಮಂತ್ರಗಳ ಅಪ್ರಸುತತೆ ಮತ್ತು 'ಪಿಂಡ್ ಪಿತರ್ ಯಜ್ಞ'

ಮೂಲ: **ರಾಮ ಅಯ್ಯರ್**
ಅನು : ಬಿ.ವಿ. ವೀರಭದ್ರಪ್ಪ



ನಿತ್ಯ ಜೀವನದಲ್ಲಿ ಒಂದು ಹಿಂದು ಕುಟುಂಬದ ಸಾಂಪ್ರದಾಯಿಕತೆ ಯಾವುದೇ ಸ್ತರದ್ದಾದರೂ ಅಲ್ಲಿ ಆಚರಿಸಲಾಗುವ 'ಶ್ರಾದ್ಧ' ಸಮಾರಂಭ ಅತ್ಯಂತ ಗೃಹ್ಯ ಸೂತ್ರಗಳು ಗೊತ್ತುಪಡಿಸಿದ ಕ್ರಮದಲ್ಲೇ ಆಚರಿಸಲಾಗುವುದು. ನಮ್ಮ ಮಾತಾ ಪಿತೃಗಳು ನಮ್ಮನ್ನು ಹೆತ್ತು-ಹೊತ್ತು, ಸಾಕಿ-ಸಲುಹಿ ಮೇಲಕ್ಕೆ ತಂದ ಸಮಯದಲ್ಲಿ ಸಂತೋಷದಿಂದ ಅನುಭವಿಸಿದ ತೊಂದರೆ ತಾಪತ್ರಯಗಳನ್ನು ನಾವು ನೆನಪಿಗೆ ತಂದುಕೊಳ್ಳುವ ಸುದಿನ ಆ ದಿನ. ನಮ್ಮ ಕುಟುಂಬದ ಹಿಂದಿನ ಸುಖದುಃಖಗಳ ಘಟನೆಗಳು ಅಂದು ನೆನಪಿಗೆ ಬಂದು ಕೆಲವು ಸಾರಿ ನಾವು ನಮ್ಮ ಮಾತಾ ಪಿತೃಗಳಿಗೆ ತೋರಿಸಬೇಕಾದಷ್ಟು ಕರ್ತವ್ಯ ನಿಷ್ಠೆಯನ್ನು ತೋರಿಸಲಾಗದಿದ್ದಕ್ಕೆ ವಿಷಾದವನ್ನು ಸಹ ಪಡುತ್ತೇವೆ. ನಾವು ಬೇರೆ ದಿನಗಳಿಗಿಂತ ಹೆಚ್ಚಾಗಿ ಅಂದು, 'ಶ್ರಾದ್ಧ' ದಿನ, ಅವರಲ್ಲಿ ಕ್ಷಮಾಯಾಚಿಸಿ ನಮ್ಮನ್ನು ಆಶೀರ್ವದಿಸಲು ಕೇಳಿಕೊಳ್ಳುತ್ತೇವೆ. ನಮ್ಮಿಂದ ಅಗಲಿ ದೂರವಾದ ಪಿತೃಗಳು ಕಷ್ಟಕರವಾದ ಹುಟ್ಟು ಸಾವುಗಳ ಪುನರಾವರ್ತನೆಯಿಂದ ಬಿಡುಗಡೆ ಹೊಂದಿ ಮೋಕ್ಷ ಹೊಂದಲು ಪ್ರಾರ್ಥನೆ ಸಲ್ಲಿಸುತ್ತೇವೆ.

ಬ್ರಾಹ್ಮಣರು ಆ ದಿನ ಯಜ್ಞಕುಂಡದಲ್ಲಿ ಪಿಂಡ ಅರ್ಪಿಸುವಾಗ ಪಠಿಸುವ ಸ್ವರಮಾಧುರ್ಯದಿಂದ ಕೂಡಿದ ಮಂತ್ರೋಚ್ಚಾರಕ್ಕೆ ವಿಶೇಷ ಧಾರ್ಮಿಕ ಮನ್ನಣೆ ಇದೆ. ಆದರೆ ಶ್ರಾದ್ಧ ಆಚರಿಸುವ ಗೃಹಸ್ಥನಿಗೆ ಹಾಗೂ ಅದರ ಪೌರೋಹಿತ್ಯವನ್ನು ನಿರ್ವಹಿಸುವವರಿಗೆ ಸಹ, ಅವುಗಳ ಅರ್ಥ ಮತ್ತು ಇಂಗಿತ ಗೊತ್ತಿರುವುದಿಲ್ಲ. ಈ ಮಾತಿಗೆ ಕೆಲವು ಅಪರೂಪದ ಅಪವಾದಗಳಿರಬಹುದು. ಪುರೋಹಿತನು ಪಠಿಸಿದಂತೆ ಪುನರುಚ್ಚರಿಸುವ ಮುಗ್ಧ ಗೃಹಸ್ಥನು ಆ ಮಂತ್ರಗಳಿಗೆ ಪವಿತ್ರವಾದ ಹರಕೆ ಮತ್ತು ಭಾವನೆಗಳಿರುತ್ತವೆ ಎಂದು ಸಾಮಾನ್ಯವಾಗಿ ನಂಬಿರುತ್ತಾನೆ. ಈ ಹಿನ್ನೆಲೆಯಲ್ಲಿ ಆಪಸ್ತಂಭ, ಬೋಧಾಯನ, ಹಿರಣ್ಯಕೇಶಿನ್ ಮುಂತಾದವರು ಆ ಸಂದರ್ಭದಲ್ಲಿ ಪಠಿಸಲು ಗೊತ್ತುಪಡಿಸಿರುವ 'ಮಂತ್ರಪಾಠ'ದಲ್ಲಿರುವ ಆರು ಮುಖ್ಯ ಮಂತ್ರಗಳು ನನಗೆ ಅತ್ಯಂತ ನಿರಾಶಾದಾಯಕವಾಗಿವೆ; ಅವು ಆಧುನಿಕ ಕಾಲದ ಯಾವೊಬ್ಬ ಸಭ್ಯವ್ಯಕ್ತಿಯೂ ಒಪ್ಪಲಾರದಂತಹ ವಿಚಾರಗಳು ಮತ್ತು ಭಾವನೆಗಳನ್ನು ಅಭಿವ್ಯಕ್ತಪಡಿಸುತ್ತವೆ. ಯಾವುದೇ ದೃಷ್ಟಿಯಿಂದ ನೋಡಿದರೂ ಅವು ಆ ಸಂದರ್ಭ ಮತ್ತು ಸನ್ನಿವೇಶಕ್ಕೆ ಅತ್ಯಂತ ಅಪ್ರಸ್ತುತವಾಗಿವೆ.

ಈಗ ಮಂತ್ರಗಳನ್ನು ಉದ್ಧರಿಸಿ ಅವುಗಳ ಅರ್ಥವನ್ನು ತಿಳಿಯೋಣ.

'ಯನ್ ಮೆ ಮಾತಾ ಪ್ರಲುಲೋಭ ಚರತಿ ಅನನುವ್ರತಾ ತನ್ ಮೆ ರೇತಾಃ ಪಿತಾ ವೃಂಗ್ತಮ್ ಮಾಭುರನ್ಯೋಪ ಪಾದ್ಯತ್ ಅಮುಷ್ಯೈ ಸ್ವಾಹಾ'

ಅದನ್ನು ಗದ್ಯಕ್ಕೆ ಹೀಗೆ ಅಳವಡಿಸಬಹುದು.

'ಮೇ ಮಾತಾ(ಭರ್ತಾಃ) ಅನನುವ್ರತ ಚರತಿ ಯತ್ ಪ್ರಲುಲೋಭ, ತತ್ ರೇತಾಃ ಮೆ ಪಿತಾ ವೃಂಗ್ತಮ್. ಮಾ ಅಭು ಅನ್ಯಾಃ(ಪಿತಾ) ಅವಪಾದ್ಯತಮ್'

'ತನ್ನ ಪತಿಗೆ ನಿಷ್ಠಳಲ್ಲದ ನನ್ನ ತಾಯಿ ಇನ್ನೊಬ್ಬನ ವೀರ್ಯವನ್ನು ಅತಿಯಾಗಿ ಬಯಸಿ ಜೀವಿಸಿದಳು. ನನ್ನ ತಂದೆಯು ಆ ವೀರ್ಯವನ್ನು ತನ್ನದು ಎಂದೇ ಅಂಗೀಕರಿಸಲಿ ಮತ್ತು ನಾನು ಅರ್ಪಿಸುವ ಪಿಂಡವನ್ನು ಪಡೆಯುವ ಹಕ್ಕುದಾರನೂ ನನಗೆ ಇನ್ನೊಬ್ಬನೂ(ತಂದೆ) ಆದವನನ್ನು ಹತಾಶನನ್ನಾಗಿಸಲಿ'

ವಾಖ್ಯಾನದ ನೆರವು : ಈ ಮಂತ್ರವನ್ನು ಒಂದು ಪ್ರಾರ್ಥನೆ ಎಂದು ಕರೆದರೂ ಆ ಪ್ರಾರ್ಥನೆ ಯಾವುದೇ ರೀತಿಯಿಂದಲೂ ಆತ್ಮೋನ್ನತಿದಾಯಕವಾದುದಾಗಿಲ್ಲ. ಹೆಣ್ಣು ಸ್ತ್ರೀ ಯಾರೇ ಆಗಿರಲಿ, ಶ್ರಾದ್ಧ ಮಾಡುವಾಗ ಅವನಿಗೆ ತನ್ನ ಜನನದ ಕ್ರಮಬದ್ಧತೆಯ ಬಗ್ಗೆ ಸಂಶಯವುಂಟಾಗುತ್ತದೆ. ಯಜ್ಞಕುಂಡದಲ್ಲಿ ಅರ್ಪಿಸಲಿರುವ 'ಪಿಂಡ'ವನ್ನು ಈ ಎರಡನೆಯ ತಂದೆ ಪಡೆಯಲೆತ್ನಿಸಬಹುದು ಎಂಬ ಭೀತಿ ತಲೆದೋರುತ್ತದೆ. ಆ ಅಕ್ರಮ ತಂದೆಯನ್ನು ಹೇಗಾದರೂ ಮಾಡಿ ದೂರವಿಡಲು ಈ ಅಕ್ರಮ ಮಗನು ಬಯಸುತ್ತಾನೆ! ಆದ್ದರಿಂದ ಈ ಮುಜಗರದ ಸನ್ನಿವೇಶದಿಂದ ಹೊರಬರಲು ಅವನು ತನ್ನ ತಾಯಿಯ 'ಮಾನಸ ವ್ಯಭಿಚಾರ'ದಿಂದ ಮಲಿನಗೊಂಡ ಅವಳ ಗರ್ಭವನ್ನು ತನ್ನದು ಎಂದೇ ಸ್ವೀಕರಿಸಲು ತನ್ನ ತಂದೆಯನ್ನು ಬೇಡಿಕೊಳ್ಳುತ್ತಾನೆ. ಈ ಮಂತ್ರದ ಮಾನಸಿಕ ಹಿನ್ನೆಲೆ ಇದಾಗಿರಬೇಕು.

ಗಂಡು ಯಾರೇ ಇರಲಿ, ಗತಿಸಿದ ಪಿತೃಗಳಿಗೆ ಸಲ್ಲಿಸುವ ಶ್ರಾದ್ಧದಂತಹ ಪವಿತ್ರ ಧಾರ್ಮಿಕ ಸಮಾರಂಭದಲ್ಲಿ, ಎಷ್ಟೇ ನಯವಾಗಿ ಹೇಳಿದರೂ ಈ ಮಂತ್ರದಿಂದ ನೀವು ನಿಮ್ಮ ತಾಯಿಯನ್ನು ಶೀಲಗೆಟ್ಟವಳು ಎಂದು ಅಪಾದಿಸುತ್ತೀರಿ. ನೀವು ಇನ್ನೂ ಮುಂದೆ ಹೋಗಿ ವ್ಯಭಿಚಾರಿಣಿ ಎಂದು ಅಪಾದಿಸುವಿರೋ ಇಲ್ಲವೋ ಎಂಬುದು ಭಿನ್ನ ವ್ಯಾಖ್ಯಾನಗಳನ್ನವಲಂಬಿಸಿದೆ. ಬಳಕೆಯಾಗಿರುವ ಪದಗಳು ವ್ಯಭಿಚಾರ ವರ್ತನೆಯ ಆರೋಪವನ್ನು ಒಳಗೊಳ್ಳುವಷ್ಟು ವಿಶಾಲಾರ್ಥವನ್ನು ಹೊಂದಿವೆ. ಆದರೆ ಹರದತ್ತ ಸರ್ವಜ್ಞ ನಾರಾಯಣ, ಕುಲ್ಲಕ ಮುಂತಾದ ವ್ಯಾಖ್ಯಾನಕಾರರು ಮೂಲ ಪಾಠದ ಅರ್ಥ ಕೇವಲ 'ಮಾನಸ ವ್ಯಭಿಚಾರ' ಎಂದು ಹೇಳಲು ಪ್ರಾಯಾಸ ಪಡುತ್ತಾರೆ. ಆ ಪಾಪದ ಫಲವೂ ವಾಸ್ತವ ವ್ಯಭಿಚಾರಕ್ಕಿಂತ ಕಡಿಮೆ ಘೋರವಾದುದೇನಲ್ಲ.

ತನ್ನ ಗಂಡನಲ್ಲದವನ ವೀರ್ಯಕ್ಕಾಗಿ ಹಂಬಲಿಸುವುದರಿಂದ ಆ ಮಹಿಳೆ ಪಾಪ ಲೇಪಿತಳಾಗುತ್ತಾಳೆ. ಹೀಗೆ ಅವಳ ಪಾತಿವ್ರತ್ಯ ಕೊನೆಗೊಳ್ಳುತ್ತದೆ. ಅಂತಹ ಆಕಾಂಕ್ಷೆಯಿಂದ ಅವಳ ಗರ್ಭ ಕಳಂಕಗೊಳ್ಳುತ್ತದೆ ಮತ್ತು ಅವಳು ಸ್ವೀಕರಿಸುವ ವೀರ್ಯ ಮಲಿನಗೊಳ್ಳುತ್ತದೆ. ಈ ಜಡ ತರ್ಕವನ್ನು ಹಿಗ್ಗಿಸಿ ಆ ಗಂಡು ಅವಳಿಗೆ ಎರಡನೆ ಪತಿ ಮತ್ತು ಅವಳ ಮಗನಿಗೆ ಎರಡನೆ ತಂದೆ ಎಂದು ಅವರು ಹೇಳುತ್ತಾರೆ.

ಈ ಮಗ ಮುಂದೆ ಒಂದು ದಿನ ತನ್ನ ಗತಿಸಿದ ಪೂರ್ವಜರಿಗೆ, ಅವರು ಪುರುಷ ಅಥವಾ

ಈ ಮಂತ್ರದಲ್ಲಿ ಅಡಕವಾಗಿರುವ 'ಮಾನಸ ವ್ಯಭಿಚಾರ'ದ ಸಿದ್ಧಾಂತ ಅತಿ ಎಂದರೆ, ಒಂದು ಅನಾನುಕೂಲ ಸನ್ನಿವೇಶ ದಿಂದ ಹೊರಬರಲು ಮಾಡಿದ ಒಂದು ಮಾನ ಉಳಿಸಿ ಕೊಳ್ಳುವ ಪ್ರಯತ್ನವಾಗಿದೆ. ಆ ಮಂತ್ರವು ಅದನ್ನು ಬಿಡಿಸಿ ಹೇಳುವುದಿಲ್ಲ. ಸಂಸ್ಕೃತ ಭಾಷೆಯಲ್ಲಿ ಸೂಕ್ತವಾದ ಪದ ಪುಂಜದ ಕೊರತೆಯೇನೂ ಇಲ್ಲ. 'ಪ್ರಲುಲೋಭ' ಎಂಬ ಪದಕ್ಕೆ ಒಂದು ಕೆಟ್ಟ ಒಳಾರ್ಥ ಇದೆ. 'ಚರತಿ' ಎಂಬ ಪದವೂ ಅದೇ ರೀತಿಯದು. 'ಪ್ರಲುಲೋಭ' ಎಂದರೆ 'ಪ್ರಕರ್ಷೇನ' (ಅತಿಶಯವಾದ, ಅತ್ಯಧಿಕವಾದ). 'ಇಯೇಷ' (ಬಯಸಿದುದು, ಆಶಿಸಿದುದು, ಹುಡುಕಲಾದುದು. ಆಯ್ಕೆ ಮಾಡಿಕೊಂಡುದು)

'ಚರತಿ' ಎಂದರೆ ನಡೆಯುವುದು, ನಡೆದುಕೊಳ್ಳುವುದು, ಜೀವಿಸುವುದು, ಅಭ್ಯಾಸಿಸುವುದು, ಪಾಪವನ್ನೆಸಗುವುದು. ಅದು ಒಂದು ಜೀವನ ಮಾರ್ಗವನ್ನು ಸೂಚಿಸುತ್ತದೆ. 'ಮಾತುರನ್ಯಾಃ'ದಲ್ಲಿರುವ ಅಥವಾ 'ಮಾಭುರನ್ಯಾಃ'ದಂತಹ ಮಂತ್ರದಲ್ಲಿರುವ 'ಅನ್ಯಾಃ' ಎಂಬ ಪದ ವಾಸ್ತವ ಸಂಪರ್ಕ ವಿದ್ದಾಗ ಮಾತ್ರ ಔಚಿತ್ಯಪೂರ್ಣ ವಾಗುತ್ತದೆ. ಈ ವ್ಯಾಖ್ಯಾನವನ್ನು ಸಾಂಖ್ಯಾಯನ ಗೃಹ್ಯಸೂತ್ರ (Sacred Books of the East ಮಾಲೆಯ ಸಂಪುಟ XXIX, ಪುಟಗಳು ೧೦೩-೧೦೪, ಖಾಂಡ ೧೩, ಅಧ್ಯಾಯ III, ಸೂತ್ರ ೫) ದಿಂದ ಮತ್ತಷ್ಟು ಬಲಪಡಿಸಬಹುದು.

ಶ್ರಾದ್ಧವನ್ನಾಚರಿಸುವವನು ಅಕ್ರಮ ಸಂತಾನವಾದರೆ 'ಮಹಾವ್ಯಾಹೃತಿ'ಗಳಿಗೆ ಬದಲಾಗಿ ಅವನು ನಾಲ್ಕು ಮಂತ್ರಗಳನ್ನು ಗೊತ್ತುಪಡಿಸುತ್ತಾನೆ. ಆ ನಾಲ್ಕು ಈ ರೀತಿ ಇವೆ: ೧) 'ಅಂತರ್ ದಧೇ ಪರ್ವತೈಃ...' ೨) 'ಅಂತರ್ ದಧೇ ಋತುಭಿರ್...' ೩) 'ಯಃ ತಿಷ್ಠಂತಿ...' ೪) 'ಯನ್ ಮೇ ಮಾತಾ...'. ಕೊನೆಯ ಮಂತ್ರದ ಭಾಷಾಂತರವನ್ನು ಆ ಪುಸ್ತಕದಲ್ಲಿ ಈ ಕೆಳಗಿನಂತೆ ಕೊಡಲಾಗಿದೆ:-

'ನನ್ನ ತಾಯಿಯು ಚಂಚಲ ಚಿತ್ತಳಾಗಿ ಅವಳ ಪತಿಗೆ ವಿಶ್ವಾಸ ದ್ರೋಹವೆಸಗಿ ದಾರಿತಪ್ಪಿ ನಡೆದಿದ್ದಾಳೆ. ಆ ವೀರ್ಯವನ್ನು ನನ್ನ ತಂದೆಯು ತನ್ನದನ್ನಾಗಿ ಸ್ವೀಕರಿಸಲಿ. ಆ ಇನ್ನೊಬ್ಬನು ತಾಯಿಯಿಂದ ದೂರ ಸರಿಯಲಿ' (ಪಾಠ 'ಮಾತುರ್ ಅನ್ಯಾಃ')

ಈ ನಾಲ್ಕು ಮಂತ್ರಗಳನ್ನು ಹಾಗೂ ದಾರಿತಪ್ಪಿದ ಅಜ್ಜಿ ಮತ್ತು ಮುತ್ತಜ್ಜಿಯರನ್ನು ಕುರಿತ ಇನ್ನೆರಡು ಮಂತ್ರಗಳನ್ನು ಆಪಸ್ತಂಭ ಮತ್ತು ಇತರ 'ಸೂತ್ರ'ಕಾರರು ಗೊತ್ತುಪಡಿಸಿದ ವಿಧಿಗಳ ಪ್ರಕಾರ ಇಂದು ನಾವು ಪಠಿಸುತ್ತಿದ್ದೇವೆ. ಸಾಂಖ್ಯಾಯನನು 'ಯನ್ ಮೇ ಪಿತಾಮಹಿ' ಮತ್ತು 'ಯನ್ ಮೆ ಪ್ರಪಿತಾ ಮಹಿ...' ಮಂತ್ರಗಳನ್ನು ಗೊತ್ತುಪಡಿಸುವುದಿಲ್ಲ. ಶ್ರಾದ್ಧವನ್ನಾಚರಿಸುವವನು ಅಕ್ರಮ ಸಂತಾನವಾದಾಗ ಮಾತ್ರ ಉಳಿದ ನಾಲ್ಕು ಮಂತ್ರಗಳು ಅನ್ವಯವಾಗುತ್ತವೆ ಎಂದು ಹೇಳುವ ಅವನ ಟಿಪ್ಪಣಿ ಅತ್ಯಂತ ತರ್ಕಬದ್ಧವಾಗಿದೆ ಮತ್ತು ಸುಸಂಗತವಾಗಿದೆ.

ಮಂತ್ರಗಳ ಪ್ರಸ್ತುತೆ: ಉಳಿದ ಸೂತ್ರಕಾರರು ಮಂತ್ರಗಳ ಅನುಕ್ರಮಣಿಕೆಯನ್ನು ಈ ಕೆಳಗಿನಂತೆ ಹಿಂದು ಮುಂದು ಮಾಡಿದ್ದಾರೆ:

೧) ಆಗಲೇ ಉಲ್ಲೇಖಿಸಿದ 'ಯನ್ ಮೆ ಮಾತಾ'

೨) 'ಯ ತಿಷ್ಠಂತಿ ಯ ಧವಂತಿಯ ಅರ್ಧೊಘ್ನ ಪರಿತಸ್ಥುಷಿಃ ಅದ್ಭಿರ್ ವಿಷ್ವಸ್ಯ ಭರ್ತ್ರೀಭಿ ಅಂತರ್ ಅನ್ಯಮ್ ಪಿತುರ್ ದಧೆ'.

ಪುರೋಹಿತಶಾಹಿಯ ಸ್ವಯಂ ಘೋಷಿತ ಶಾಸ್ತ್ರ-ಮಂತ್ರಗಳು, ಭಾರತೀಯ ಸಮಾಜದಲ್ಲಿ ಅನೂಚಾನವಾಗಿ ನಡೆದು ಬಂದಿದ್ದ ಜನ ಸಂಸ್ಕೃತಿಯ ಬೇರುಗಳನ್ನು ಅಲುಗಾಡಿಸಿದ್ದಷ್ಟೇ ಅಲ್ಲ, ಇಂದಿನ ಆಧುನಿಕ ಯುಗದಲ್ಲೂ ಅದು ತನ್ನ ವಿವಿಧ ರೀತಿಯ ಅರ್ಥರಹಿತ ಯಜ್ಞ-ಯಾಗಾದಿಗಳು ಮತ್ತು ಆಚರಣೆಗಳೊಂದಿಗೆ ಇಡೀ ಮಾನವ ಸಮಾಜವನ್ನು ನಿಯಂತ್ರಿಸುತ್ತಿರುವುದರಿಂದ ನಾಗರಿಕ ಸಮಾಜ ನಾಚಿ ತಲೆ ತಗ್ಗಿಸುವಂತಾಗಿದೆ. ಶ್ರಾದ್ಧ ಸಂದರ್ಭದಲ್ಲಿ ಹೇಳುವ ಮಂತ್ರಗಳಂತೂ ಎಷ್ಟು ಅಪ್ರಸ್ತುತ ಹಾಗೂ ಅಸಂಬದ್ಧ ಅನ್ನುವುದು ಈ ಲೇಖನ ಓದಿದರೆ ಗೊತ್ತಾಗುತ್ತದೆ.

'ನಿಂತ, ಹರಿಯುವ, ಎಲ್ಲ ದಿಕ್ಕುಗಳಲ್ಲೂ ಹರಡಿಕೊಂಡಿರುವ ಮತ್ತು ಎಲ್ಲ ಒಣ ಪ್ರದೇಶಗಳನ್ನು ಮುಳುಗಿಸುವ ನೀರು ಹಾಗೂ ವಿಶ್ವದೇವತೆಗಳ ನೆರವಿನಿಂದ, ಪಿಂಡವನ್ನು ಪಡೆಯಲು ಯತ್ನಿಸುವ ಆ ಇನ್ನೊಬ್ಬನನ್ನು ನಾನು ದೂರವಿಡುತ್ತೇನೆ'.

೩) 'ಯನ್ ಮೆ ಪಿತಾಮಹಿ ಪ್ರಲುಲೋಭ ಚರತ್ಯನನುವ್ರತಾ ತನ್ ಮೆ ರೇತಾಃ ಪಿತಾಮಹೊ ವೃಂಗ್ತಮ್ ಮಾಭುರನ್ಯೋವ ಪಾದ್ಯತಮ್'. ಇದು ಅಜ್ಜಿಗೆ ಅನ್ವಯವಾಗುವಂತೆ ಮಾಡಲಾದ 'ಯನ್ ಮೆ ಮಾತಾ'ದ ವಿಸ್ತರಣೆಯಾಗಿದೆ.

೪) 'ಅಂತರ್ ದಧೆ ಪರ್ವತೈರಂತರ್ಮಹ್ಯ ಪ್ರಥಿವ್ಯಾ ಅಭಿರ್ ದಿಗ್ಭಿರ್ ಅನಂತಭಿಃ ಅಂತರನ್ಯಮ್ ಪಿತಾಮಹರ್ ದಧೆ'. 'ನಾನು ನನ್ನ ಇನ್ನೊಬ್ಬ ಅಜ್ಜನನ್ನು ಪರ್ವತಗಳಾಚೆ, ವಿಶಾಲ ಜಗತ್ತಿನಾಚೆ, ನಾಲ್ಕು ದಿಕ್ಕುಗಳಾಚೆ, ಅನಂತ ಕಾಲದಾಚೆ ಇಡುತ್ತೇನೆ.

೫) 'ಯನ್ ಮೆ ಪ್ರಪಿತಾ ಮಹಿ ಪ್ರಲುಲೋಭ ಚರತ್ಯನನುವ್ರತಾ ತನ್ ಮೆ ರೇತಾಃ ಪ್ರಪಿತಾಮಹೊ ವೃಂಗ್ತಮ್ ಮಾಭರನ್ಯೋವಪಾದ್ಯತಮ್'. ಇದು ಮುತ್ತಜ್ಜಿಯನ್ನು ಅವಹೇಳನ ಮಾಡಲು ಒಂದು ಮತ್ತು ಮೂರನೆ ಮಂತ್ರಗಳ ಅಳವಡಿಕೆಯಾಗಿದ್ದು ಅಜ್ಜನ ಜನನದ ಕ್ರಮಬದ್ಧತೆಯನ್ನು ಸಂಶಯದಿಂದ ನೋಡುವ ಧೋರಣೆಯನ್ನು ಹೊಂದಿದೆ.

೬) 'ಅಂತರ್ ದಧೆ ಋತುಭಿರ್ ಹೋರಾತ್ರೈಸಂಧಿಭಿಃ ಅರ್ಧಮಾಸಾಯಿಸ್‌ಚ ಮಾಸಾಯಿಸ್‌ಚ ಅಂತರನ್ಯಮ್ ಪ್ರಪಿತಾಮಹರ್ ದಧೆ'. 'ನಾನು ಆ ಇನ್ನೊಬ್ಬ ಮುತ್ತಜ್ಜನನ್ನು ಋತುಗಳಾಚೆ, ಹಗಲು ರಾತ್ರಿಗಳಾಚೆ, ಪ್ರಾತಃಕಾಲ ಸಂಧ್ಯಾಕಾಲಗಳಾಚೆ, ಪಕ್ಷ ಮಾಸಗಳಾಚೆ ಇಡುತ್ತೇನೆ'.

ಈ ಮಂತ್ರಗಳಲ್ಲಿ ಯಾವುದೇ ಧಾರ್ಮಿಕ ಅಥವಾ ತಾತ್ವಿಕ ಭಾವನೆಗಳು ನನಗೆ ಕಾಣಿಸುತ್ತಿಲ್ಲ. ಅವು ತೀರ ಕೆಳಮಟ್ಟದವಾಗಿದ್ದು ಅರ್ಥಹೀನವಾಗಿವೆ. ದೂರವಿರಿಸಬೇಕಾದ 'ಅನ್ಯಃ', ಆ ಇನ್ನೊಬ್ಬ ವ್ಯಕ್ತಿಯು ಶಾಸ್ತ್ರೋಕ್ತ ತಂದೆಯ 'ಶ್ರಾದ್ಧ'ದಂದು ವಾಸ್ತವವಾಗಿ ಜೀವಂತವಿರಬಹುದು. ಮೃತವ್ಯಕ್ತಿಗೆ ಅರ್ಪಿಸಲಾಗುವ ಪಿಂಡವನ್ನು ಆ ಇನ್ನೊಬ್ಬ ವ್ಯಕ್ತಿ ತಾನೆ ಪಡೆಯಲು ಯತ್ನಿಸುತ್ತಾನೆ ಎಂದು ಊಹಿಸುವುದು ಹೇಗೆ?

ಉಪನಿಷತ್ತುಗಳು 'ಮಾತೃ ದೇವೋಭವ' ಎಂದು ನಮ್ಮ ಕಿವಿಯಲ್ಲಿ ಉಸಿರುತ್ತವೆ. ಮಗನಾದವನು ತಾಯಿಯ ಶೀಲವನ್ನು, ಅದು ವಾಸ್ತವವಿರಲಿ, ಮಾನಸವಿರಲಿ, ಪ್ರಶ್ನಿಸಲು ಅರ್ಹನೆ? ತಾಯಿಯು ಅಕ್ರಮ ನಡತೆಯುಳ್ಳವಳಾಗಿದ್ದರೆ ಸೂಕ್ತ ಕ್ರಮವನ್ನು ಕೈಗೊಳ್ಳುವುದು ತಂದೆಯ ಅಂದರೆ ಅವಳ ಪತಿಯ ಕರ್ತವ್ಯವಾಗಿತ್ತು. ಅವನು ಏನ ಮಾಡಿಲ್ಲ ವೆಂಬುದು ಸ್ವಯಂವೇದ್ಯ. ವಿವಾಹಿತ ಮಹಿಳೆಯು ಅಪವಿತ್ರ ಯೋಚನೆಗಳಿಂದ ಪಾಪವೆಸಗಿದ್ದರೆ ಅವಳು, ವಿಶೇಷವಾಗಿ ಮಹಿಳೆಯರಿಗಾಗಿಯೇ ಗೊತ್ತುಪಡಿಸಿರುವ 'ಋಷಿ ಪಂಚಮಿ' ಮತ್ತು ಇತರ ವ್ರತಗಳಂದು 'ಪ್ರಾಯಶ್ಚಿತ್ತ' ಮಾಡಿಕೊಳ್ಳಬೇಕಾಗುತ್ತದೆ. ಈ ಮಂತ್ರಗಳು ಆಗ ಹೆಚ್ಚು ಸೂಕ್ತವಾಗುತ್ತವೆ. ಶ್ರಾದ್ಧದಂತಹ ಪವಿತ್ರ ಸಮಾರಂಭದಂದು ಖಂಡಿತ ಅಲ್ಲ.

ಬಹುಪ್ರಾಚೀನ ಕಾಲದಿಂದ ಇಪ್ಪತ್ತನೆಯ ಶತಮಾನದ ಮೊದಲ ಕಾಲುಭಾಗದವರೆಗೆ ಹಿಂದು ಸಮಾಜದಲ್ಲಿ ಸ್ತ್ರೀಯರು ಪುರುಷರಿಗೆ ಭೋಗವಸ್ತುಗಳಾಗಿ ಮಾತ್ರ ಕಾಣುತ್ತಿದ್ದರು. ಕೆಲವು ಅಪರೂಪದ ಸಂದರ್ಭಗಳನ್ನು ಹೊರತು ಪಡಿಸಿದರೆ ಮಹಿಳೆಗೆ ಆಸ್ತಿಯ ಹಕ್ಕೆಂಬುದೇ ಇರಲಿಲ್ಲ. ಅವಳಿಗೆ ಮನೋ ವಾಕ್ ಕಾಯಗಳ ಮೂಲಭೂತ ಸ್ವಾತಂತ್ರ್ಯಗಳ ಕಲ್ಪನೆಯೇ ಇರಲು ಸಾಧ್ಯವಿರಲಿಲ್ಲ.

ಮನುಸ್ಮೃತಿಯು ಅವಳು ಹುಟ್ಟಿನಿಂದಲೇ ಅನೇಕ ಸಂಕೋಲೆಗಳ ಬಂಧನದಲ್ಲಿರುವುದನ್ನು ಪಟ್ಟಿ ಮಾಡಿದೆ. ಅವಳ ಜೀವಮಾನದ ಉದ್ದಕ್ಕೂ ಅವುಗಳನ್ನು ಅವಳ ಮೇಲೆ ಒತ್ತಾಯದಿಂದ ಹೇರಲಾಗಿತ್ತು. ಅದರ ಪರಿಣಾಮವಾಗಿ ಅವಳು ಒಂದಲ್ಲ ಒಂದು ಪಾಪ ಭೀತಿಯಿಂದ ಕೊರಗಬೇಕಾಗಿತ್ತು. ಇತರರ ಹಕ್ಕುಗಳನ್ನು ಮಾತ್ರ ಚಿಂತಿಸುವ ರೀತಿಯಲ್ಲಿ ಅವಳ ಮೆದುಳನ್ನು ಪೂರ್ವಗ್ರಹ ಪೀಡನೆಗೆ ಒಳಪಡಿಸಲಾಗಿತ್ತು. ಕನ್ಯಾವಸ್ಥೆಯಲ್ಲಿ ತನ್ನ ತಂದೆಯ, ಗೃಹಿಣಿಯಾಗಿ ತನ್ನ ಪತಿಯ ಮತ್ತು ವೃದ್ಧಾಪ್ಯದಲ್ಲಿ ತನ್ನ ಮಗನ ಒಡೆತನವನ್ನು ಅವಳು ಗೌರವಿಸಬೇಕಾಗಿತ್ತು. ಅವಳು ತನ್ನ ಜೀವಮಾನದ ಉದ್ದಕ್ಕೂ ಅವರಲ್ಲಿ ಯಾರಾದರೊಬ್ಬರ ರಕ್ಷಣೆಯಲ್ಲಿ ಬದುಕಬೇಕಾಗಿತ್ತು. ಅವಳಿಗೆ ವೈವಾಹಿಕ ಹಕ್ಕುಗಳಾವುವೂ ಇರಲಿಲ್ಲ; ಕೇವಲ ಕರ್ತವ್ಯಗಳನ್ನು ಮಾತ್ರ ಅವಳು ಹೊಂದಿದ್ದಳು.

ಮಾನವನು ತನ್ನ ಸ್ವಸ್ವರೂಪವನ್ನು ಪುತ್ರನ ರೂಪದಲ್ಲಿ ಪಡೆಯುತ್ತಾನೆ ಎಂಬ ಒಂದು ಪ್ರಿಯ ಸಿದ್ಧಾಂತವನ್ನು ಪ್ರಾಚೀನ ಋಷಿಗಳು ಪೋಷಿಸಿದರು.

ಹೆಂಡತಿಯು ತನ್ನ ಗಂಡನ ವೀರ್ಯವನ್ನು ತನ್ನಲ್ಲಿ ಹೊಂದಿ ಪೋಷಿಸಬೇಕಾಗಿತ್ತು ಮತ್ತು ಪತಿಯ ಸಂತಾನವೆಂದು ಅದನ್ನು ಹೆರಬೇಕಾಗಿತ್ತು. ಪತಿಯು ಎಷ್ಟು ಅಸೂಯಾಪರನೆಂದರೆ ಅವನು ಮಹಿಳೆಯರೆಲ್ಲಾ ಅವಿಶ್ವಾಸಿಗಳು, ಅವರು ವೈವಾಹಿಕ ಬಾಧ್ಯತೆಗೆ ವಿರುದ್ಧವಾಗಿ ಅಪರಿಚಿತರ ವೀರ್ಯಕ್ಕಾಗಿ ಹಂಬಲಿಸುತ್ತಾರೆ, ಈ ದುಷ್ಟ ಆಸೆಯೇ ಸಾಕು ಗರ್ಭದ ಪರಿಶುದ್ಧತೆಯನ್ನು ನಾಶಪಡಿಸುತ್ತದೆ, ಅಷ್ಟರಿಂದಲೇ ಅದು ಆಶಿಸಿದ ವ್ಯಕ್ತಿಯದಾಗುತ್ತದೆ, ಆದ್ದರಿಂದ ಹೀಗೆ ಹುಟ್ಟಿದ ಮಗು ಪತಿಯ ಸ್ವಸ್ವರೂಪವಲ್ಲ ಮತ್ತು ಅದು ಅಕ್ರಮವಾದದ್ದು ಎಂದು ನಂಬಿದ್ದ.

ಅವರ ಪ್ರಕಾರ ಯಾರನ್ನೂ ಹೊರತುಪಡಿಸದೆ ಎಲ್ಲ ಸ್ತ್ರೀಯರು ವಿಶ್ವಾಸದ್ರೋಹಿಗಳು, 'ಯನ್ ಮೆ ಮಾತಾ' ಮಂತ್ರವನ್ನು ಜಪಿಸುವುದರ ಮೂಲಕ ಮಾತ್ರ ತಾಯಿ ಹಾಗೂ ಮಗುವಿನ ಪರಿಶುದ್ಧತೆಯನ್ನು ಪುನಃ ಪಡೆಯಬಹುದು.

ಇದಕ್ಕೆ ಸಂವಾದಿಯಾದ ಒಂದು ಮನುಸ್ಮೃತಿಯನ್ನು ಇಲ್ಲಿ ಉಲ್ಲೇಖಿಸಬಹುದು:

ಯನ್ ಮೆ ಮಾತಾ ಪ್ರಲುಲೋಭ ವಿಚರಂತಿ ಅಪವಿತ್ರತಾ
ತನ್ ಮೆ ರೇತಾಃ ಪಿತಾ ವೃಂಗ್ತಮ್ ಇತ್ಯಸ್ಯೈವ್ಯನ್ನಿದರ್ಶನಮ್-(ಮನು ಅಧ್ಯಾಯ ೯, ನಿಯಮ ೨೦)

ಮನುವಿನ ಈ ಭಾಗದ ವ್ಯಾಖ್ಯಾನಕಾರರಾದ ಮೇದತಿಥಿ, ಸರ್ವಜ್ಞ ನಾರಾಯಣ, ಕುಲ್ಲಕ ಭಟ್ಟ, ರಾಘವಾನಂದ, ನಂದನ ಮುಂತಾದವರು ಎಲ್ಲ ಸ್ತ್ರೀಯರು ಸ್ವಾಭಾವಿಕವಾಗಿ ದುಷ್ಟರು ಎಂಬ ರೂಢಿಮೂಲವಾದ ನಂಬಿಕೆಯನ್ನೇ ಆಧರಿಸುತ್ತಾರೆ. 'ಸರ್ವಸ್ತ್ರೀಯಃ ದುಷ್ಟ ಸ್ವಭಾವಃ'. ಸ್ತ್ರೀಯರು ಇತರರ ಮನೆಗಳಿಗೆ ಹೋಗಿ ಅಲ್ಲಿ ಆಮೋದದಲ್ಲಿರುವ ಪರಪುರುಷರನ್ನು ನೋಡಿ, ಮೋಹಪರವಶರಾಗಿ ತಮ್ಮ ಆಸೆಗಳನ್ನು ಅವರ ಮೂಲಕ ಈಡೇರಿಸಿಕೊಳ್ಳುತ್ತಾರೆ ಎಂದು ಅವರು ಹೇಳುತ್ತಾರೆ. ಈ ಮಂತ್ರವು ಕೇವಲ ಒಂದು ದೃಷ್ಟಾಂತವಾಗಿದ್ದು ಸಂದರ್ಭಕ್ಕನುಸಾರವಾಗಿ ಅದನ್ನು ಅಳವಡಿಸಿಕೊಳ್ಳಬಹುದು ಎಂದೂ ಅವರು ಹೇಳುತ್ತಾರೆ.

ಆದರೂ ಕೆಲವು ಹಿರಿಯ ವಿದ್ವಾಂಸರು 'ಯತ್' ಪದವನ್ನು 'ಯದಿ' ಎಂದು ಪರಿಗಣಿಸಲು ಯತ್ನಿಸಿದ್ದಾರೆ. ಅವರ ಪ್ರಕಾರ ಮಂತ್ರವು ನೇರವಾಗಿ ತಾಯಿಯು ದಾರಿ ತಪ್ಪಿದ್ದಾಳೆ ಅಥವಾ ಮೋಹಪರವಶಳಾಗಿದ್ದಾಳೆ ಎಂದು ಹೇಳುವುದಿಲ್ಲ, ಆದರೆ 'ಹಾಗೆ ಆಗಿದ್ದರೆ ಇತ್ಯಾದಿ'ಯನ್ನು ಒಳಗೊಂಡಿದೆ. ಇದು ಹೆಚ್ಚು ಅಂದರೆ ಅವರ ಆಧಾರರಹಿತ ಪರಿಕಲ್ಪನೆ. 'ಏಕಾಗ್ನಿಕಾಂಡ'ದ ಭಾಷ್ಯಕಾರರಾದ ಹರಿದತ್ತ ಶರ್ಮ ಅವರು 'ಯತ್' ಎಂಬ ಈ ಪದವನ್ನು 'ರೇತೋನ್ಯಮ್' ಅಂದರೆ 'ಇನ್ನೊಬ್ಬರ ವೀರ್ಯ' ಎಂದು ವ್ಯಾಖ್ಯಾನಿಸುತ್ತಾರೆ. ಆ ವಾಕ್ಯ ಹೀಗಿದೆ: 'ಮೆ ಮಾತಾ ಯತ್ ಪ್ರಲುಲೋಭ ತತ್ ರೇತಾಃ (ಆ ವೀರ್ಯ) ಮೆ ಪಿತಾ ವೃಂಗ್ತಮ್'. 'ಯತ್' ಮತ್ತು 'ತತ್'ಗಳು ಅಕ್ಕಪಕ್ಕದಲ್ಲಿ ನಿಲ್ಲುತ್ತವೆ.

> **ಉಪನಿಷತ್ತುಗಳು 'ಮಾತೃ ದೇವೋಭವ' ಎಂದು ನಮ್ಮ ಕಿವಿಯಲ್ಲಿ ಉಸಿರುತ್ತವೆ. ಮಗನಾದವನು ತಾಯಿಯ ಶೀಲವನ್ನು, ಅದು ವಾಸ್ತವವಿರಲಿ, ಮಾನಸವಿರಲಿ, ಪ್ರಶ್ನಿಸಲು ಅರ್ಹನೇ? ತಾಯಿಯು ಅಕ್ರಮ ನಡತೆಯುಳ್ಳವಳಾಗಿದ್ದರೆ ಸೂಕ್ತ ಕ್ರಮವನ್ನು ಕೈಗೊಳ್ಳುವುದು, ತಂದೆಯ ಅಂದರೆ, ಅವಳ ಪತಿಯ ಕರ್ತವ್ಯವಾಗಿತ್ತು, ಅವನು ಏನು ಮಾಡಿಲ್ಲವೆಂಬುದು ಸ್ವಯಂವೇದ್ಯ. ವಿವಾಹಿತ ಮಹಿಳೆಯು ಅಪವಿತ್ರ ಯೋಚನೆಗಳಿಂದ ಪಾಪವೆಸಗಿದ್ದರೆ ಅವಳು, ವಿಶೇಷವಾಗಿ ಮಹಿಳೆಯರಿಗಾಗಿಯೇ ಗೊತ್ತುಪಡಿಸಿರುವ 'ಋಷಿ ಪಂಚಮಿ' ಮತ್ತು ಇತರ ವ್ರತಗಳಂದು 'ಪ್ರಾಯಶ್ಚಿತ್ತ' ಮಾಡಿಕೊಳ್ಳಬೇಕಾಗುತ್ತದೆ. ಈ ಮಂತ್ರಗಳು ಆಗ ಹೆಚ್ಚು ಸೂಕ್ತವಾಗುತ್ತವೆ. ಶ್ರಾದ್ಧದಂತಹ ಪವಿತ್ರ ಸಮಾರಂಭದಂದು ಖಂಡಿತ ಅಲ್ಲ.**

ಲಭ್ಯವಿರುವ ಸಂಸ್ಕೃತದ ಅಪಾರ ಸಾಹಿತ್ಯದಲ್ಲಿ 'ಯತ್' ಮತ್ತು 'ತತ್'ಗಳನ್ನು 'ಯಾವುದೊ' ಮತ್ತು 'ಅದು' ಎನ್ನುವ ಅರ್ಥದಲ್ಲಿ ಅಕ್ಕಪಕ್ಕದಲ್ಲಿ ನಿಲ್ಲಿಸಿರುವಂತಹ ಭಾಗವಿರುವುದನ್ನು ಯಾವ ವಿದ್ವಾಂಸನೂ ಇದುವರೆಗೆ ಗುರುತಿಸಿಲ್ಲ. ಮೇಲೆ ಉಲ್ಲೇಖಿಸಿರುವ 'ಯನ್ ಮೆ ಮಾತಾ' ಸರಣಿಯ ನಂತರದ ಮಂತ್ರದಲ್ಲಿರುವ 'ಯೆ ಚೆಹ ಪಿತರಃ' ಇತ್ಯಾದಿಯಲ್ಲಿ 'ಯದಿ' ಎಂಬ ಪದ ನಿರ್ದಿಷ್ಟವಾಗಿ '...ರೆ' ಎಂದು ಅರ್ಥೈಸಿದರೂ ಅದನ್ನು ಅಲ್ಲಿ ಪ್ರಸ್ತಾಪ ಮಾಡುವುದು ಆ ಸಂದರ್ಭಕ್ಕೆ ಅಪ್ರಕೃತ ಮತ್ತು ಅನುಚಿತ ವಾಗುವುದಿಲ್ಲವೆ?

'ಅವರು ಅರಿಯರು': ಅರ್ಥವನ್ನು ಗ್ರಹಿಸಲು ತೊಡಗಿದರೆ ಮೇಲಿನ ಮಂತ್ರಗಳು ಅತ್ಯಂತ ಅಸಹ್ಯಕರವಾಗಿವೆ. ಅವು ಸತ್ಯಕ್ಕೆ ಅನುಗುಣವಾಗಿರದೆ ನಮ್ಮ ಸಭ್ಯತೆ, ಸಜ್ಜನಿಕೆ ಮತ್ತು ನೈತಿಕ ಮೌಲ್ಯಗಳಿಗೆ ತೀವ್ರ ಆಘಾತವನ್ನುಂಟು ಮಾಡುತ್ತವೆ. ಅವುಗಳಿಗೆ ಮನ್ನಣೆಯಾಗಲಿ, ಪಾವಿತ್ರ್ಯವಾಗಲಿ ಅಥವಾ ಧಾರ್ಮಿಕತೆಯಾಗಲಿ ಇಲ್ಲ. ಅವು ತುಚ್ಛ ಮತ್ತು ಅರ್ಥಹೀನ. ಆದರೂ ಅವು ಬಹುಕಾಲದಿಂದ ಬಳಕೆಯಲ್ಲಿವೆ ಮತ್ತು 'ಸೂತ್ರ'ಕಾರರ ಬೆಂಬಲವನ್ನು ಪಡೆದಿವೆ ಎಂಬ ಬಗ್ಗೆ ಸಂಶಯವಿಲ್ಲ. ಕ್ರಿಸ್ತನು ತನ್ನನ್ನು ಹಿಂಸಿಸಿದವರ ಬಗ್ಗೆ 'ಅವರೇನು ಮಾಡುತ್ತಿದ್ದಾರೆ ಎಂಬುದರ ಅರಿವು ಅವರಿಗಿಲ್ಲ' ಎಂದು ಹೇಳಿದ. ತಾವು ಏನನ್ನು ಜಪಿಸುತ್ತಿದ್ದೇವೆ ಎಂಬುದನ್ನು ಬ್ರಾಹ್ಮಣರು ಅರಿಯರು.

ಗತಿಸಿದ ಮಾತಾ ಪಿತೃಗಳ 'ತಿಥಿ'ಯ ದಿನ 'ಶ್ರಾದ್ಧ'ವನ್ನಾಚರಿಸುವ ಪದ್ಧತಿ ಯಾವುದೇ ವೈದಿಕ ಪಠ್ಯಗಳನ್ನು ಅಥವಾ ಅನಂತರದ ಅನೇಕ ಗೃಹ್ಯಸೂತ್ರಗಳಲ್ಲಿ ಯಾವೊಂದನ್ನೂ ಆಧರಿಸಿಲ್ಲ. ವೇದಗಳು 'ಪಿಂಡ ಪಿತರ್'ಯಜ್ಞ'ವನ್ನು ಕುರಿತು ಹೇಳುತ್ತವೆ. (ನೋಡಿ ಕೃಷ್ಣಯಜುರ್ವೇದ, ತೈತ್ತರೀಯ ಬ್ರಾಹ್ಮಣ, ಮೊದಲ ಅಷ್ಟಕ, ಅಧ್ಯಾಯ ೩, ಅನ್ವ.೧೦)

ತಾವು ನಿರೂಪಿಸಿರುವ ಆಚರಣೆಗಳು ಯಾವ 'ಶ್ರುತಿ' ಪಾಠಗಳನ್ನು ಆಧರಿಸಿದರೆ ಕೇವಲ ಸಾಮಾಜಿಕ ಸಂಪ್ರದಾಯ ಮತ್ತು ಪದ್ಧತಿಗಳನ್ನು ಅವಲಂಬಿಸಿವೆ ಎಂಬುದನ್ನು ಸೂತ್ರಗಳೇ ಒಪ್ಪಿಕೊಳ್ಳುತ್ತವೆ. 'ಶ್ರಾದ್ಧ' ಮಾಡುವ ವ್ಯಕ್ತಿ ಪೂರ್ಣಶ್ರದ್ಧೆಯಿಂದ ಆಚರಿಸುವುದರಿಂದ 'ಶ್ರಾದ್ಧ' ಎಂಬ ಹೆಸರು ಅದಕ್ಕೆ ಬಂದಿದೆ-'ಶ್ರಾದ್ಧಾ ಸಮನ್ವಿತ' (ಮನು ೩, ೨೭೫)

ಈಗಾಗಲೇ ಸೂಚಿಸಿರುವಂತೆ ಯಾವುದೇ ಗೃಹ್ಯಸೂತ್ರ 'ಆಬ್ದಿಕ' ಅಥವಾ 'ಪ್ರತ್ಯಾಬ್ದಿಕ'ಗಳನ್ನು ಹೆಸರಿಸಿಲ್ಲ. ಪ್ರತಿ ತಿಂಗಳು ಕೃಷ್ಣಪಕ್ಷದಲ್ಲಿ ಮಾಡುವ 'ಮಾಸಿಕ ಶ್ರಾದ್ಧ'ಗಳನ್ನು ಮಾತ್ರ ಅವು ದಾಖಲಿಸಿವೆ. ಕೆಲವು ಸಾರಿ ಅವುಗಳನ್ನು 'ಪರ್ವಣ ಶ್ರಾದ್ಧ'ಗಳೆಂದು ಉಲ್ಲೇಖಿಸಲಾಗಿದೆ. 'ಮಾಸಿಕ ಶ್ರಾದ್ಧ'ದಲ್ಲಿ ಗೃಹಸ್ಥನು ಈ ಮುಂದಿನ ಸೂತ್ರಗಳ ಜೊತೆಗೆ ಪಿಂಡವನ್ನು ಅಗ್ನಿಗೆ ಅರ್ಪಿಸಬೇಕು: ಅಗ್ನಿಗೆ 'ಕವ್ಯವಾಹನ ಸ್ವಾಹಾ', ಸೋಮನಿಗೆ 'ಪಿತೃಮನ್ ಸ್ವಾಹಾ', ಯಮನಿಗೆ 'ಅಂಗೀರಸ್ವನ್ ಸ್ವಾಹಾ' (ನೋಡಿ: ಸಾಂಖ್ಯಾಯತ ಗೃಹ್ಯಸೂತ್ರ, ೪ನೇ ಅಧ್ಯಾಯ, ಖಾಂಡ ೧, ಸೂತ್ರಗಳು ೫-೭; ಅಶ್ವಾಲಾಯಣ ಗೃಹ್ಯಸೂತ್ರ, ೪ನೇ ಅಧ್ಯಾಯ, ೭ನೇ ಖಾಂಡ, ಸೂತ್ರ ೨೦; ಖದಿರ ಗೃಹ್ಯಸೂತ್ರ, ಖಾಂಡ ೫, ಸೂತ್ರ ೧೨)

ಅಗ್ನಿಯಲ್ಲಿ ಪಿಂಡವನ್ನು ಅರ್ಪಿಸಲು ಈ ಮೇಲಿನ ಸೂತ್ರಗಳನ್ನು ಗೊತ್ತುಪಡಿಸುವಾಗ ಸೂತ್ರಕಾರರು ಹೊಸದೇನನ್ನೂ ಪರಿಚಯಿಸಲಿಲ್ಲ. ಅವರು 'ಪಿಂಡ ಪಿತರ್ ಯಜ್ಞ'ಕ್ಕೆ ಸಂಬಂಧಿಸಿದ ವೈದಿಕ ಪಾಠಗಳನ್ನು ಪ್ರಾಮಾಣಿಕವಾಗಿ ಅನುಸರಿಸಿದರು. ವಾಸ್ತವವಾಗಿ ಅಗ್ನಿಯಲ್ಲಿ ಪಿಂಡವನ್ನರ್ಪಿಸುವ ಇತ್ಯಾದಿ ಆಚರಣೆಗಳು ಶ್ರೌತಸೂತ್ರದ 'ಪಿಂಡ ಪಿತರ್'ಯಜ್ಞ'ದಲ್ಲೇ ಪ್ರಕಟಿಸಲಾಗಿದೆ ಎಂದು ಸಾಂಖ್ಯಾಯನ (ಸೂತ್ರ ೧೩, ಖಾಂಡ ೧) ಸ್ಪಷ್ಟಪಡಿಸುತ್ತದೆ. ಸಾಂಖ್ಯಾಯನನು 'ಯನ್ ಮೆ ಮಾತಾ' ಇತ್ಯಾದಿ ಮಂತ್ರಗಳನ್ನು ಅಕ್ರಮವಾಗಿ ಜನಿಸಿದ ಮಗನು ತನ್ನ ತಾಯಿಯ ದುರ್ನಡತೆಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಸಲುವಾಗಿ ಮಾತ್ರ ಗೊತ್ತುಪಡಿಸಿರುವುದು ತುಂಬಾ ಸ್ಪಷ್ಟವಾಗಿದೆ. ಪಿತೃಗಳಿಗೆ ಆತ್ಮಶಾಂತಿಯನ್ನುಂಟು ಮಾಡಲು 'ಪಿಂಡ ಪಿತರ್ ಯಜ್ಞ' ಪರಿಪೂರ್ಣವೂ ಮತ್ತು ಅಧಿಕೃತವೂ ಆದ ವಿಧಿ ಎಂಬುದು ಈ ಹಂತದಲ್ಲಿ ಗಮನಾರ್ಹವಾದುದು. ಹೊಸ ಮಂತ್ರಗಳನ್ನು ಅದರಲ್ಲೂ 'ಯನ್ ಮೆ ಮಾತಾ'ದಂತಹವುಗಳನ್ನು ಸೇರಿಸುವ ಅಗತ್ಯವೇ ಇರಲಿಲ್ಲ. ಅನಂತರ ಕಾಲದ ಸೂತ್ರಕಾರರು ಏಕೆ ಈ ಮಂತ್ರಗಳನ್ನು ಸೇರಿಸಿದರು ಎಂಬುದನ್ನು ಅವರು ಎಲ್ಲೂ ಸೂಚಿಸಿಲ್ಲ. ಮೇಲೆ ಪ್ರಸ್ತಾಪಿಸಲಾದ ಮನುಧರ್ಮಶಾಸ್ತ್ರದ ವ್ಯಾಖ್ಯಾನಗಳಿಂದ ನಾವು ಅದಕ್ಕೆ ಕಾರಣವನ್ನು ಕಂಡು ಹಿಡಿಯಬೇಕಾಗಿದೆ.

ಗೃಹ್ಯಸೂತ್ರಗಳು: ಗೋಭಿಲ ಮತ್ತು ಅಪಸ್ತಂಭ ಇವರ ಗೃಹ್ಯಸೂತ್ರಗಳು ಮಂತ್ರಗಳ ಒಂದು ವಿಶೇಷ ಸಂಹಿತೆಯನ್ನ

ವಲಂಬಿಸಿವೆ; ಅವು ಅಂಕೆಗಳಿಂದ ಉಲ್ಲೇಖವಾಗಿವೆ. ಅವರ ಸೂತ್ರಗಳಲ್ಲಿ 'ಮಾಸಿಕ ಶ್ರಾದ್ಧ'ಗಳು 'ಪಿಂಡ ಪಿತರ್ ಯಜ್ಞ' ಸೂತ್ರ ಮತ್ತು ಪಾಠಗಳ ಆಚೆಗಿವೆ. ಆದರೆ ಹಿರಣ್ಯಕೇಶಿನ್‌ನು 'ಪಿಂಡ ಪಿತರ್ ಯಜ್ಞ'ದ ಸೂತ್ರಗಳು ಮತ್ತು ಮಂತ್ರಪಾಠಗಳನ್ನು ಒಟ್ಟುಗೂಡಿಸಿದ್ದಾನೆ. (ನೋಡಿ: ಹಿರಣ್ಯಕೇಸಿನ್‌ನ 'ಗೃಹ್ಯಸೂತ್ರ' Sacred Books of the East Series, Vol. XXIX, P.137, Prasna II, Patala 4, Section 10, Sutra 7)

'ಅವನು ಅನಂತರ ಈ ಮುಂದಿನ ಮಂತ್ರಗಳಿಂದ ಯಜ್ಞ ಮಾಡುತ್ತಾನೆ:
ಪಿತೃಪಕ್ಷದೊಡನೆ 'ಸೋಮ'ನಿಗೆ ಸ್ವಾಧಾ
'ಅಂಗೀರಸ'ನೊಡನೆ 'ಯಮ'ನಿಗೆ ಸ್ವಾಧಾ
ಪೂರ್ವದಲ್ಲಿ ಉಕ್ಕುವ ಜಲರಾಶಿಯೊಳಗೆ ನಾನು
ಇನ್ನೊಬ್ಬನನ್ನ ಸೇರಿಸುತ್ತೇನೆ.
ಪರ್ವತಗಳು ಇತ್ಯಾದಿಗಳ ಮೂಲಕ ನಾನು
ಇನ್ನೊಬ್ಬನನ್ನು ತಡೆಯುತ್ತೇನೆ.
ವಿಶಾಲಭೂಮಿ ಇತ್ಯಾದಿಗಳ ಮೂಲಕ ನಾನು ತಡೆಯುತ್ತೇನೆ
ಋತುಮಾನಗಳ ಇತ್ಯಾದಿಗಳ ಮೂಲಕ ನಾನು ತಡೆಯುತ್ತೇನೆ
ಎಲ್ಲಿ ನನ್ನ ತಾಯಿ ದಾರಿತಪ್ಪಿ ನಡೆದಿದ್ದಾಳೊ ಇತ್ಯಾದಿ
ಎಲ್ಲಿ ನನ್ನ ಅಜ್ಜ...
ಎಲ್ಲಿ ನನ್ನ ಮುತ್ತಜ್ಜ...

'ಮಾಸಿಕ ಶ್ರಾದ್ಧ'ಗಳ ಜೊತೆಗೆ ಏಕಾದಿಷ್ಟ ಸಂಪಿಂಡ ಕರಣ,ನಂದಿಶ್ರಾದ್ಧ ಏಕಾಷ್ಟಕ, ಅನ್ವಾಹಾರಿಕ, ಅನ್ವಾಷ್ಟಕ ಮತ್ತು ವೈಶ್ವದೇವಗಳನ್ನು ಮಾತ್ರ ಸೂತ್ರಗಳು ಉಲ್ಲೇಖಿಸುತ್ತವೆ. ಆ ಶ್ರಾದ್ಧಗಳಿಗೆ ಸಂಬಂಧಿಸಿದ ಪಾಠಗಳು ನಮ್ಮ ಪ್ರಸ್ತುತ ಚರ್ಚೆಗೆ ಯಾವ ರೀತಿಯಿಂದಲೂ ಸಹಕಾರಿಯಲ್ಲ. ನಾವು ಇಂದು ಆಚರಿಸುವುದು ಕೇವಲ ಆಬ್ದಿಕ ಮತ್ತು ಪ್ರತ್ಯಾಬ್ದಿಕ ಶ್ರಾದ್ಧಗಳನ್ನು ಮಾತ್ರ. ಅವು ಪ್ರದೇಶದಿಂದ ಪ್ರದೇಶಕ್ಕೆ ಮತ್ತು ಅಲ್ಲಿನ ಜನರ ಶಿಕ್ಷಣ, ಸಂಸ್ಕೃತಿ ಹಾಗೂ ಹಿನ್ನೆಲೆಯನ್ನವಲಂಬಿಸಿ ಭಿನ್ನವಾಗಿರುತ್ತವೆ. ದಕ್ಷಿಣ ಭಾರತದಲ್ಲಿ 'ವೈದ್ಯನಾಥ ದೀಕ್ಷಿತೀಯಂ' ಎಂಬ ಲಭ್ಯ ಗ್ರಂಥ ಈಗ ರೂಢಿಯಲ್ಲಿರುವ 'ಶ್ರಾದ್ಧ' ಆಚರಣೆ ಮತ್ತು 'ಮಂತ್ರ' ಪಾಠಗಳಿಗೆ ಆಧಾರವಾಗಿದೆ. ಆದರೆ ಅದರ ಉಗಮ ತೌಲನಿಕವಾಗಿ ಇತ್ತೀಚಿನದಾಗಿದೆ.

ವೇದಗಳಲ್ಲಿ ಮತ್ತು ಮಂತ್ರಗಳ ಅರ್ಥಗಳಲ್ಲಿ ಚೆನ್ನಾಗಿ ಪರಿಣಿತರಾದ ಪಂಡಿತರು ತುಂಬಾ ಅಪರೂಪ ಎಂಬುದು ಅತ್ಯಂತ ವಿಷಾದನೀಯ. ಅವರೂ ಸಹ ವೈಚಾರಿಕತೆ ಮತ್ತು ವಾಸ್ತವಾಂಶಗಳಿಂದ ಬಹುದೂರ. ಅವರ ವಿಚಾರಗಳು ಧಾರ್ಮಿಕ ದರ್ಪದಲ್ಲಿ ಆಳವಾಗಿ ಬೇರುಬಿಟ್ಟಿರುತ್ತವೆ. ಅವರಲ್ಲಿ ಚರ್ಚೆಗೆ ಅವಕಾಶವಿಲ್ಲ, ವೈದಿಕ ಮಂತ್ರಗಳ ಅರ್ಥವನ್ನು ಒಳಹೊಕ್ಕು ನೋಡುವ ಅಧಿಕಾರ ಯಾರಿಗೂ ಇಲ್ಲ, ಋಷಿಗಳು ಗೊತ್ತುಪಡಿಸಿದಂತೆ ಅವುಗಳನ್ನು ಪಠಿಸಬೇಕು ಅಷ್ಟೆ ಎಂದು ಅವರು ಹೇಳುತ್ತಾರೆ.

ಅವುಗಳನ್ನು ತಿದ್ದುಪಡಿ ಮಾಡಬಾರದೇಕೆ?: ನಾವು ಒಂದು ಸಾರಿ ಒಂದು ವೇದಗುಂಪಿನಲ್ಲಿ ಅಥವಾ ಒಂದು ಸೂತ್ರ ಗುಂಪಿನಲ್ಲಿ ಜನಿಸಿದರೆ ಅದನ್ನು ಬದಲಾಯಿಸಲು ಶಕ್ಯವಿಲ್ಲ ಎಂಬುದು ನಮ್ಮ ದಾರಿಯಲ್ಲಿರುವ ಇನ್ನೊಂದು ಅಡಚಣೆ. 'ಯನ್ ಮೆ ಮಾತಾ' ಮತ್ತು ಅದರಂತಹ 'ಮಂತ್ರ'ಗಳನ್ನು

'ಮಾಸಿಕ ಶ್ರಾದ್ಧ'ಗಳ ಜೊತೆಗೆ ಏಕಾದಿಷ್ಟ ಸಂಪಿಂಡ ಕರಣ,ನಂದಿಶ್ರಾದ್ಧ ಏಕಾಷ್ಟಕ, ಅನ್ವಾಹಾರಿಕ, ಅನ್ವಾಷ್ಟಕ ಮತ್ತು ವೈಶ್ವದೇವಗಳನ್ನು ಮಾತ್ರ ಸೂತ್ರಗಳು ಉಲ್ಲೇಖಿಸುತ್ತವೆ. ಆ ಶ್ರಾದ್ಧಗಳಿಗೆ ಸಂಬಂಧಿಸಿದ ಪಾಠಗಳು ನಮ್ಮ ಪ್ರಸ್ತುತ ಚರ್ಚೆಗೆ ಯಾವ ರೀತಿಯಿಂದಲೂ ಸಹಕಾರಿಯಲ್ಲ. ನಾವು ಇಂದು ಆಚರಿಸುವುದು ಕೇವಲ ಆಬ್ದಿಕ ಮತ್ತು ಪ್ರತ್ಯಾಬ್ದಿಕ ಶ್ರಾದ್ಧಗಳನ್ನು ಮಾತ್ರ. ಅವು ಪ್ರದೇಶದಿಂದ ಪ್ರದೇಶಕ್ಕೆ ಮತ್ತು ಅಲ್ಲಿನ ಜನರ ಶಿಕ್ಷಣ, ಸಂಸ್ಕೃತಿ ಹಾಗೂ ಹಿನ್ನೆಲೆಯನ್ನವಲಂಬಿಸಿ ಭಿನ್ನವಾಗಿರುತ್ತವೆ. ದಕ್ಷಿಣ ಭಾರತದಲ್ಲಿ 'ವೈದ್ಯನಾಥ ದೀಕ್ಷಿತೀಯಂ' ಎಂಬ ಲಭ್ಯ ಗ್ರಂಥ ಈಗ ರೂಢಿಯಲ್ಲಿರುವ 'ಶ್ರಾದ್ಧ' ಆಚರಣೆ ಮತ್ತು 'ಮಂತ್ರ' ಪಾಠಗಳಿಗೆ ಆಧಾರ ವಾಗಿದೆ. ಆದರೆ ಅದರ ಉಗಮ ತೌಲನಿಕವಾಗಿ ಇತ್ತೀಚಿನದಾಗಿದೆ.

ಪಠಿಸಲು ಸಾಮವೇದಿಗಳಿಗೆ, ಋಗ್ವೇದಿಗಳಿಗೆ ಮತ್ತು ಶುಕ್ಲ ಯಜುರ್ವೇದಿಗಳಿಗೆ ಅವರ ಸೂತ್ರಗಳು ನಿರ್ದೇಶಿಸಿಲ್ಲ.

ಗೃಹ್ಯಸೂತ್ರಗಳ ವಿಧಿಗಳು ಮತ್ತು ಮಂತ್ರಗಳು ಎಷ್ಟರ ಮಟ್ಟಿಗೆ ಕಟ್ಟಾಜ್ಞೆಗಳು ಎಂಬ ಪ್ರಶ್ನೆ ಈಗ ಉದ್ಭವಿಸುತ್ತದೆ. ಸೂತ್ರಗಳು ಆಯಾ ಕಾಲದೇಶಗಳ ಸಂಪ್ರದಾಯ ಮತ್ತು ಪದ್ಧತಿಗಳನ್ನು ಆಧರಿಸಿವೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಸಂಪ್ರದಾಯಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ವೇದಗಳ ಕಾಲದಲ್ಲಿ ಬ್ರಾಹ್ಮಣರು ಮಾಂಸಾಹಾರಿಗಳಾಗಿದ್ದರು. ಬೋಧಾಯನ ಆಪಸ್ತಂಭ ಮತ್ತು ಹಿರಣ್ಯಕೇಶಿನ್ ಸೂತ್ರಗಳಲ್ಲಿ ವಿವಾಹ, ಅತಿಥಿಯ ಆಗಮನ ಮತ್ತು ಶ್ರಾದ್ಧಗಳಂತಹ ಸಂದರ್ಭಗಳಲ್ಲಿ ಗೋವಧೆಯನ್ನು ಮಾಡಲು ಆಜ್ಞಾಪಿಸಲಾಗಿದೆ. ಅಲ್ಲಿ 'ಗೊತ್ತುಪಡಿಸಲಾದ ನೈವೇದ್ಯ ಹಸುವಿನ ವಪೆ'. (ನೋಡಿ: 'ಆಪಸ್ತಂಭ ಗೃಹ್ಯಸೂತ್ರ', ಪಟಲ ೮, ಭಾಗ ೨೨, ಸೂತ್ರಗಳು ೩-೫, ೧೧)

ಬೌದ್ಧರ ಆಳ್ವಿಕೆಯಲ್ಲಿ ಸಾವಿರಾರು ವರ್ಷ ಅಹಿಂಸೆ ರಾಷ್ಟ್ರಧರ್ಮವಾಗಿದ್ದಾಗ ಜನರು ಸಸ್ಯಾಹಾರಿಗಳಾಗಿ ರಕ್ತ ಸುರಿಸಲು ಹಿಂಜರಿದರು. ಆದ್ದರಿಂದ ಇಂದು ಶ್ರಾದ್ಧಗಳಿಗೂ ಸಹ, ಋಷೀಶ್ವರರ ಆದೇಶಗಳಿದ್ದರೂ ಜನರು ಮಾಂಸವನ್ನು ಬಳಸುವುದಿಲ್ಲ, ವಿವಾಹ ಪದ್ಧತಿಯಲ್ಲೂ ಬದಲಾವಣೆಗಳಾದವು. ಸ್ತ್ರೀಯರ ಪ್ರೌಢಾವಸ್ಥೆಯಲ್ಲಿ ನಡೆಯುತ್ತಿದ್ದ ವಿವಾಹಗಳು, ವೇದಗಳ ಕಾಲ ಮುಗಿದು ಮಹಮ್ಮದೀಯರ ಕಾಲದಲ್ಲಿ ಕನ್ಯಾವಸ್ಥೆಯಲ್ಲೇ ನಡೆಯುತ್ತಿದ್ದವು. ಈ ಮತ್ತೊಮ್ಮೆ ಸ್ತ್ರೀ ಪ್ರೌಢಸ್ಥಿತಿ ತಲುಪಿದ ನಂತರ ಮಾತ್ರ ವಿವಾಹವಾಗುವಂತೆ ಕಾನೂನುಗಳನ್ನು ರಚಿಸಲಾಗಿದೆ. ಶಾಸ್ತ್ರಗಳು ಬಾಲಕರ ಉಪನಯನಕ್ಕೆ ಒಂದು ಕಾಲ ಮಿತಯನ್ನು ಗೊತ್ತು ಪಡಿಸಿವೆ. ಇನ್ನೂ ಜನಿವಾರ ಧರಿಸದ ಮೂವತ್ತು ದಾಟಿದ ಯುವಕರು ಮತ್ತು ಸರ್ಕಾರದ ಸೇವೆಯಲ್ಲಿರುವವರು ಇಂದು ನಮ್ಮ ಕಣ್ಣೆದುರಿದ್ದಾರೆ. ಈ ರೀತಿ ಬದಲಾದ ಸಂಪ್ರದಾಯಗಳ ಅನೇಕ ದೃಷ್ಟಾಂತಗಳನ್ನು ನಾವು ಉಲ್ಲೇಖಿಸಬಹುದು.

ಆದ್ದರಿಂದ ನಾನು ಬ್ರಾಹ್ಮಣ ಸಮುದಾಯದ ಯಜುರ್ವೇದಿ ಪಂಗಡದವರ ಮುಂದೆ ಈ ಸಂಬಂಧಿಸಿದ ವಾಸ್ತವಾಂಶಗಳನ್ನು ಮಂಡಿಸಲು ಇಷ್ಟಪಡುತ್ತೇನೆ. ಅವರು ಸಂಸ್ಕೃತಿ ಮತ್ತು ಅಂತಃಪ್ರೇರಣೆಯಂತೆ ತಮ್ಮ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ನಾವು ನಮ್ಮ ಶ್ರಾದ್ಧಮಂತ್ರ ಗಳನ್ನು 'ಪಿಂಡ್ ಪಿತರ್ ಯಜ್ಞ' ಮಾದರಿಯಲ್ಲಿ ಅಳವಡಿಸಿಕೊಂಡು ನಮ್ಮ ಆಚರಣೆಗಳಲ್ಲಿ ಮೇಲೆ ಚರ್ಚಿಸಿದ ಪ್ರಶ್ನಾರ್ಹ ಮಂತ್ರಗಳನ್ನು ಕೈಬಿಡುವುದರಲ್ಲಿ ತಪ್ಪೇನೂ ಇಲ್ಲ ಎಂದು ನನಗೆ ಅನಿಸುತ್ತದೆ. ನಮ್ಮ ಧಾರ್ಮಿಕ ನಂಬಿಕೆಯನ್ನು ನಾವು ಬಹುಕಾಲದಿಂದ ಪುರೋಹಿತರಿಗೆ ಒಪ್ಪಿಸಿಬಿಟ್ಟಿದ್ದೇವೆ. ಆದಷ್ಟು ಬೇಗ ಅದನ್ನು ನಮ್ಮ ಕೈಯಲ್ಲಿ ವಾಪಾಸು ಪಡೆಯುವುದು ನಮಗೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ.

ನಮ್ಮ ಗೃಹಗಳಲ್ಲಿ ಆಚರಿಸುವ ಪ್ರತಿಯೊಂದು ಉತ್ಸವದ ಅರ್ಥ, ಉದ್ದೇಶ ಮತ್ತು ವ್ಯಾಪ್ತಿಗಳನ್ನು ತಿಳಿದುಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಬೇಕು ಮತ್ತು ಅವುಗಳಿಗೆ ಮಂತ್ರಗಳ ಸಾಮಾನ್ಯ ಅರ್ಥವನ್ನು ಸಹ ನಾವು ತಿಳಿದಿರಬೇಕು ಅಲ್ಲವೆ?

ಭ್ರಾಂತರಾದ ನಾವು ಇಂದು ಗಂಭೀರವಾದ ಪಾಪ ಕೃತ್ಯಗಳು ಎಂದು ತಿಳಿದಿದ್ದರೂ ಸಹ ಅವನ್ನು ಬಹಿರಂಗವಾಗಿಯೇ ಮಾಡುತ್ತಿದ್ದೇವೆ.

(Carvan, ಜೂನ್ II ೧೯೭೬ರ ಪಾಕ್ಷಿಕದಲ್ಲಿ ಪ್ರಕಟವಾದ Our Shradh Mantras ಲೇಖನದ ಕನ್ನಡಾನುವಾದ.) □

ಪರಿಸರ ಹೋರಾಟಗಳಿಂದ ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತಿವೆಯೇ ?

○ ಎ. ಚಂದ್ರಶೇಖರ ನಂಗಲಿ

ವ್ಯಕ್ತಿ-ಕುಟುಂಬ-ಹಳ್ಳಿ-ತಾಲೂಕು-ಜಿಲ್ಲೆ-ರಾಜ್ಯ-ರಾಷ್ಟ್ರ... ಅಭಿವೃದ್ಧಿಯ ಸೋಪಾನಮಾರ್ಗದಲ್ಲಿ ಇವು ಉತ್ತರೋತ್ತರ ಹಿರಿಮೆಯುಳ್ಳ ಕ್ಷೇತ್ರಗಳು. ಅಂದರೆ, ವ್ಯಕ್ತಿಯನ್ನು ಮೀರಿ ಕುಟುಂಬ, ಕುಟುಂಬವನ್ನು ಮೀರಿ ಹಳ್ಳಿ-ಹಳ್ಳಿಯನ್ನು ಮೀರಿ ತಾಲೂಕು... ಹೀಗೆ ವ್ಯಕ್ತಿಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ಅಭಿವೃದ್ಧಿ ಕಾರ್ಯಗಳು ಸಮಗ್ರ ದೃಷ್ಟಿಯಿಂದ ಸರ್ವವ್ಯಾಪಿಯಾಗಿ ಅನ್ವಯಗೊಳ್ಳಬೇಕೆಂಬುದೊಂದು ಆದರ್ಶ.

ಜನ್ಮಾಧಾರಿತ ಅಸಮಾನತೆಯೊಂದಿಗೆ, ಅರ್ಥಾಧಾರಿತ ಅಸಮಾನತೆಯನ್ನೂ ಮೈಗೂಡಿಸಿಕೊಂಡಿರುವ ಭಾರತದಂಥ ದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳು 'ಸಿಕ್ಕಿದವರಿಗೆ ಸೀರುಂಡೆ'ಯಾಗಿದೆ. ಜಾತಿ ಪದ್ಧತಿಯ ವಿಸ್ತೃತವೂ ಮತ್ತು ಸಂಕೀರ್ಣವೂ ಆದ ಅರ್ಥವ್ಯವಸ್ಥೆಯನ್ನುಳ್ಳ ಸಮಾಜದಲ್ಲಿ, ಜಾತಿಗಳ ಶ್ರೇಣೀಕರಣದಂತೆಯೇ 'ಅಭಿವೃದ್ಧಿಯ ಶ್ರೇಣೀಕರಣ'ವನ್ನು ಸ್ಪಷ್ಟವಾಗಿ ಗುರುತಿಸಬಹುದು. ವಿದ್ಯುತ್ತಿನ ಸಮುದ್ರದಲ್ಲಿ ಮುಳುಗಿರುವ (- ವಾಯು ಮಾಲಿನ್ಯದಿಂದ ತುಂಬಿ ತುಳುಕುತ್ತಿರುವ) ಬೆಂಗಳೂರಿನಂಥ ಮಹಾನಗರಗಳಿಂದ ಹಿಡಿದು ವಿದ್ಯುತ್ ಕೂಡ ಇಲ್ಲದ ಕುಗ್ರಾಮಗಳವರೆಗೆ (=ವಾಯು ಮಾಲಿನ್ಯವಿಲ್ಲದ ಹಳ್ಳಿಗಾಡು, ಗುಡ್ಡಗಾಡುಗಳು) ನಮ್ಮ ರಾಷ್ಟ್ರ ಮತ್ತು ರಾಜ್ಯಗಳು ವಿಸ್ತರಿಸಿಕೊಂಡಿದೆಯೆಂಬುದನ್ನು ಅರಿತರೆ, ಈ 'ಅಭಿವೃದ್ಧಿಯ ಶ್ರೇಣೀಕರಣ'ದ ಸ್ವರೂಪದರ್ಶನವಾಗದೆ ಇರದು!

ಜಾತಿಗಳ ಶ್ರೇಣೀಕರಣದ ದುಷ್ಟ ಭಾವಗಳ ಅರಿವಿದ್ದ ಲೋಹಿಯಾ ಅವರು ೧.ಹಳ್ಳಿ ೨.ಜಿಲ್ಲೆ ೩.ಪ್ರಾಂತ ೪.ಕೇಂದ್ರಗಳೆಂಬ ನಾಲ್ಕು ಕಂಬಗಳ ರಾಷ್ಟ್ರದ ಪರಿಕಲ್ಪನೆಯನ್ನು ಮುಂದಿಟ್ಟು ೧. ಗ್ರಾಮ ಪಂಚಾಯತ್ ೨. ಜಿಲ್ಲಾ ಪಂಚಾಯತ್ ೩. ರಾಜ್ಯ ಸರ್ಕಾರ ೪. ಕೇಂದ್ರ ಸರ್ಕಾರಗಳೆಂಬ ನಾಲ್ಕು ಆಡಳಿತ ವ್ಯವಸ್ಥೆಯನ್ನು ಪ್ರತಿಪಾದಿಸಿದ್ದರು. ಇದು ಸ್ಪಷ್ಟವಾಗಿ ಗಾಂಧಿಯವರ ಗ್ರಾಮ ಸ್ವರಾಜ್ ನೀತಿಯನ್ನು ಒಳಗೊಂಡ ಚಿಂತನೆಯಾಗಿದೆ. ಇದರಲ್ಲಿ ಜನ ಸಮೂಹಗಳ ಭಾಗವಹಿಸುವಿಕೆ ಮತ್ತು ಸ್ವಯಂ ಸರ್ಕಾರದ ಆಶಯಗಳಿದ್ದವು.

ಆದರೆ, ನೆಹರೂ ನೇತೃತ್ವದ ಪಡೆ ಕೇಂದ್ರ ಮತ್ತು ರಾಜ್ಯಗಳಿಗೆ ಕೊಟ್ಟ ವಿಶೇಷವಾದ ಪ್ರಾಶಸ್ತ್ಯದಿಂದಾಗಿ ಜಿಲ್ಲೆ ಮತ್ತು ಹಳ್ಳಿಯ ನೆಲೆಗಳು ನಿರ್ಲಕ್ಷ್ಯಕ್ಕೆ ಒಳಗಾದವು. ಇದರ ಪರಿಣಾಮವಾಗಿಯೇ ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವದ ಹೊತ್ತಿಗೆ ನಗರ ಪ್ರದೇಶಗಳು ಮತ್ತು ಗ್ರಾಮೀಣ ಪ್ರದೇಶಗಳೆಂಬ ವಿರುದ್ಧ ಧ್ರುವಗಳ ರಚನೆಯಾಯ್ತು..ಸಕಲ ಸೌಲಭ್ಯಗಳಿಂದ ಕೂಡಿದ ನಗರಪ್ರದೇಶಗಳು ಸಾವಿರ ಕಣ್ಣುಗಳುಳ್ಳ ನವಿಲಿನಂತೆ ಚಿತ್ತಾಪಹಾರಿಯಾಗಿದ್ದರೆ, ಕನಿಷ್ಠ ಸೌಲಭ್ಯಗಳು ಇಲ್ಲದ ಗ್ರಾಮೀಣ ಪ್ರದೇಶಗಳು ಅಷ್ಟಾವಕ್ರನಂತೆ ತೋರುತ್ತಾ ತಿರಸ್ಕಾರಕ್ಕೆ ತುತ್ತಾದವು. ಗ್ರಾಮೀಣ ತಿರಸ್ಕಾರವೆಂಬುದು ಸರ್ಕಾರದ ವೇತನ ನೀತಿಯಲ್ಲೂ ಹಾಸುಹೊಕ್ಕಾಗಿದೆ: ಸಮಾನ ಮೂಲ ವೇತನ ಪಡೆಯುತ್ತಿರುವ ನಗರಪ್ರದೇಶಗಳಲ್ಲಿರುವ ಸರ್ಕಾರಿ ನೌಕರರು ಗ್ರಾಮೀಣ ಪ್ರದೇಶಗಳಲ್ಲಿರುವ ಸರ್ಕಾರಿ ನೌಕರಿಗಿಂಥ ಅತಿ ಹೆಚ್ಚಿನ ತುಟ್ಟಿ ಭತ್ಯೆ ಮತ್ತಿತರ ಭತ್ಯೆಗಳನ್ನು ಪಡೆಯುತ್ತಿದ್ದು ಕೆಲವೊಂದು ಹುದ್ದೆಗಳಲ್ಲಿ ಇದರ ಅಂತರವು ಸಾವಿರಾರು ರೂಗಳನ್ನು ಮೀರಿದೆ. ಗ್ರಾಮೀಣ ಸರ್ಕಾರಿ ನೌಕರನು ನಗರೀಯ ಸರ್ಕಾರಿ ನೌಗರರಿಗಿಂಥ ಕಡಿಮೆ ವೇತನ ಪಡೆಯುವುದೊಂದು ವೈಪರೀತ್ಯವೇ ಸರಿ! ಈ ಗ್ರಾಮೀಣ ಮತ್ತು ನಗರೀಯಗಳು ಪರಸ್ಪರ ಸಂಧಿಸಲಾಗದ ವಿರುದ್ಧ ಧ್ರುವಗಳಾಗಿರುವುದರಿಂದಲೇ ಇಂದು 'ನಗರಾಭಿವೃದ್ಧಿ' ಮತ್ತು 'ಗ್ರಾಮೀಣಾಭಿವೃದ್ಧಿ' ಎಂಬ ವಿಭಜನೆಯುಂಟಾಗಿ ಪರಸ್ಪರ ತಾಳ-ಮೇಳವಿಲ್ಲದ ಪರಿಸ್ಥಿತಿ ತಲೆದೋರಿದೆ. ಗಾಂಧಿಯವರ ಚಿಂತನೆಗಳಲ್ಲಿ ಮುನ್ನೋಟವೆಂಬಂತೆ ಪ್ರಕಟಗೊಂಡಿದ್ದ ಗ್ರಾಮ ಸ್ವರಾಜ್ ಮತ್ತು ಪರಿಸರ ಸ್ನೇಹಿ ವಿಚಾರಗಳನ್ನು ನೆಹರೂ ಯುಗದಲ್ಲಿ ಒಂಟಿದನಿಯೆಂಬಂತೆ ಎತ್ತಿ ಹಿಡಿದ ಲೋಹಿಯಾ ಅವರ ವಿಚಾರಧಾರೆ ಇಂದು ನಮಗೆ ತುಂಬಾ ಪ್ರಸುತ್ತವಾಗಿ ಕಾಣುತ್ತದೆ.



ನಿಸರ್ಗದ ಮೇಲೆ ನಡೆಯುತ್ತಿರುವ ರಾಸಾಯನಿಕ ಸಮರದ ವಿರುದ್ಧ ವಿಶ್ವಮಟ್ಟದಲ್ಲಿ ಗಟ್ಟಿದನಿ ಮೂಡಿಸಿದ ಶ್ರೀಮತಿ ರಾಶೆಲ್ ಕಾರ್ಸನ್ ಮತ್ತು ನಗರ ತ್ಯಾಜ್ಯಗಳನ್ನು ನದಿಗಳಿಗೆ ಬಿಡುತ್ತಿರುವ ಮಾಲಿನ್ಯದ ವಿರುದ್ಧ ರಾಷ್ಟ್ರಮಟ್ಟದಲ್ಲಿ ಜಾಗೃತಿ ಮೂಡಿಸಿದ ಲೋಹಿಯಾ ಅವರ ವೈಚಾರಿಕತೆ ಪರಿಸರ ಸ್ನೇಹಿಯಾದುದು. ಆದರೆ, ಇಂದಿನ ಅಭಿವೃದ್ಧಿ ಕಾರ್ಯಗಳು ಪರಿಸರ ಮಾರಕವಾಗಿದ್ದು ಪರಿಸರ ಹೋರಾಟಗಳಿಂದ ಪ್ರತಿರೋಧಗಳನ್ನು ಎದುರಿಸುತ್ತಿರುವುದು ಸ್ಥಳೀಯ ಮಾತ್ರವಲ್ಲ; ಜಾಗತಿಕ ವಿದ್ಯಮಾನವಾಗಿದೆ. ಯಾವುದನ್ನೂ ಲೆಕ್ಕಿಸದ ಪ್ರಗತಿ ಮೀಮಾಂಸೆ ಮದಗಜದಂತೆ ಮುನ್ನುಗ್ಗುತ್ತಿದ್ದರೆ ಪರಿಸರ ಹೋರಾಟಗಳ ಕೂಗು ಸಿಂಹಗರ್ಜನೆಯಾಗಿ ಕೇಳಿಬರುತ್ತಿದೆ. ಈ ಆನೆ ಮತ್ತು ಸಿಂಹಗಳ ರೂಪಕದಲ್ಲಿ ಒಂದಕ್ಕೊಂದು ಅಂಜದ ಅಭಿವ್ಯಕ್ತಿಯಿದೆ:

ಅಪರಿಮಿತದ ಕತ್ತಲೆಯೊಳಗೆ
ವಿಪರೀತದ ಬೆಳಗನಿಕ್ಕಿದವರಾರೋ ?
ಬೆಳಗೂ ಅದೆ! ಕತ್ತಲೆಯೂ ಅದೆ!
ಇದೇನು ಚೋದ್ಯವೊ ? ಒಂದಕ್ಕೊಂದುಂಜದು!
ಆನೆಯೂ ಸಿಂಹವೂ ಒಂದಾಗಿ ಉಂಬುದ ಕಂಡು
ಬೆರಗಾದೆನು ಕಾಣು, ಗುಹೇಶ್ವರ!

ಶತಶತಮಾನಗಳ ಕತ್ತಲೆಯಲ್ಲಿ ಮುಳುಗಿದ್ದ ನಮಗೆ ಆಧುನಿಕ ಪ್ರಗತಿ ತತ್ವವು ವಿಪರೀತದ ಬೆಳಗಲ್ಲವೆಂದು ವಾದಿಸಲಾಗದು. ಆದರೆ, ಈ ಬೆಳಕಿನ ದೀಪದ ಕೆಳಗೆ ಕತ್ತಲೆಯೂ ಇದೆಯೆಂಬುದನ್ನು ಮರೆಯಬಾರದು. ಈ ಮುಖಾಮುಖಿಯನ್ನು ಲಕ್ಷಿಸಿಯೇ ಆನೆಯೂ ಸಿಂಹವೂ ಒಂದಾಗಿ ಉಂಬುವ

ಚೋದ್ಯವೆಂದು ಕರೆಯಬಹುದು. ಪ್ರಗತಿವಾದಿಗಳಿರಲಿ ಅಥವಾ ಪರಿಸರವಾದಿಗಳಿರಲಿ, 'ಒಂದಕ್ಕೊಂದಂಜದು' ಎಂಬಂತೆ ಪರಸ್ಪರ ಎದುರಿಸಿ ಬದುಕುವುದು ಅನಿವಾರ್ಯ ವಾಗಿದೆ.

...'ಪ್ರಗತಿ ಎಂದರೆ 'ಮುಂದೆ ಹೋಗುವುದು' ಎಂದು ಅರ್ಥ. ಆದರೆ, ಮುಂದೆ ಹೋಗುವುದು ಯಾವಾಗಲೂ ಒಳ್ಳೆಯದು ಎಂಬ ಭರವಸೆ ಇದೆಯೇ? ಥಾಮಸ್ ಹಾರ್ಡಿಯ ಒಂದು ಕಾದಂಬರಿಯಲ್ಲಿ ಕುರಿಗಳನ್ನು ನೋಡಿಕೊಳ್ಳುವ ಒಂದು ನಾಯಿಯ ಉಲ್ಲೇಖವಿದೆ. ಕುರಿಗಳು ಯಾವಾಗಲೂ ಮುಂದೆ ಹೋಗುವಂತೆ ನೋಡುವುದೇ ಈ ನಾಯಕರ ಹೊಣೆಯಾಗಿತ್ತಂತೆ. ಯಾವಾಗಲೂ ಒಂದು ಕುರಿಯೂ ಹಿಂದುಳಿಯದಂತೆ ನೋಡುತ್ತಿತ್ತು ಈ ನಾಯಿ. ಒಂದು ದಿನ ಕುರಿಗಳ ಹಿಂಡು ನಡೆಯುತ್ತ ಒಂದು ಸ್ಥಳಕ್ಕೆ ಬಂದಿತು. ಮುಂದೆ ಹೆಜ್ಜೆಯಿಟ್ಟರೆ ಒಂದು ಆಳವಾದ ಕಂದರ. ಆದುದರಿಂದ ಕುರಿಗಳು ನಿಂತವು. ಪ್ರಗತಿಶೀಲ ನಾಯಕರಿಗೆ ಇದು ಸರಿಬರಲಿಲ್ಲ. ಹಿಂದಿನಿಂದ ಒತ್ತಾಯಪಡಿಸ ತೊಡಗಿತು. ಪಾಪ! ಕುರಿಗಳು ಮುಂದೆ ಹೋದವು, ಒಂದರ ಮೇಲೊಂದರಂತೆ ಕಂದರದಲ್ಲಿ ಬಿದ್ದು ಸತ್ತವು. ಪ್ರಗತಿಶೀಲತೆಯ ಪರಾಕಾಷ್ಠೆಯಲ್ಲವೆ ಇದು?'... ಇವು ನನ್ನ ಮಾತುಗಳಲ್ಲ. 'ಪ್ರಗತಿ ಮೀಮಾಂಸೆ'-ಎಂಬ ಲೇಖನದಲ್ಲಿ ಶ್ರೀರಂಗರು ನೀಡಿರುವ ವಿವರಣೆಯಿದು. ಅಭಿವೃದ್ಧಿಯನ್ನು ಕುರಿತ ಚರ್ಚೆಯಲ್ಲಿ ಇದು ಉಚಿತವೆನಿಸಿದ್ದರಿಂದ ಇಲ್ಲಿ ಉಲ್ಲೇಖಿಸಿದ್ದೇನೆ.

ನಮ್ಮ ದೇಶದ ಆರ್ಥಿಕ ಅಭಿವೃದ್ಧಿ, ವಿವಿಧ ರೀತಿಯ ಯೋಜನೆಗಳು ಮತ್ತು ಅನುಷ್ಠಾನ 'ಮನುಷ್ಯ ಕೇಂದ್ರಿತ' ವಾಗಿದೆ. ಸೃಷ್ಟಿಯ ಇತರೆಲ್ಲ ಸಹಜೀವಿ ಸಂಕುಲಗಳನ್ನು ನಿರ್ಲಕ್ಷಿಸಿ, ಮನುಷ್ಯನ ಹಿತವನ್ನು ಮಾತ್ರ ಲಕ್ಷಿಸುವ ದೃಷ್ಟಿಕೋನವೇ 'ಮನುಷ್ಯ ಕೇಂದ್ರಿತ'ವೆನಿಸಿಕೊಳ್ಳುತ್ತದೆ. ಆದರೆ, ಮನುಷ್ಯನನ್ನೂ ಒಳಗೊಂಡಂತೆ ಸೃಷ್ಟಿಯ ಇತರೆಲ್ಲ ಸಹಜೀವಿ ಸಂಕುಲಗಳ ಹಿತದೊಡನೆ, ಮನುಷ್ಯನ ಹಿತವೂ ಬೆಸೆದುಕೊಂಡಿದೆಯೆಂದು ತಿಳಿಯುವುದೇ 'ಜೀವಕೇಂದ್ರಿತ' ದೃಷ್ಟಿಯಾಗುತ್ತದೆ. ಉದಾ: ಬೆಂಗಳೂರು ಮಹಾನಗರದಲ್ಲಿಂದು ಶುಭ್ರಪರಿಸರದ ಸೂಚಕಗಳೆನ್ನಬಹುದಾದ ಗುಬ್ಬಚ್ಚಿಗಳು, ಕಪ್ಪೆಗಳು, ಲೈಕೆನ್ನುಗಳು ಯಾಕೆ ಇಲ್ಲವಾಗಿವೆ? 'ಹಿತ್ತಲ ಮದ್ದು' ಎನ್ನಬಹುದಾದ ಸಣ್ಣ ಪುಟ್ಟ ಗಿಡಮೂಲಿಕೆಗಳು ತಂತಾನೆ ಬೆಳೆದುಕೊಳ್ಳುವ ಜಾಗಗಳೇ ಇಲ್ಲವಾಗಿದೆ. ಜಾಂಡೀಸ್ ಅಥವಾ ಕಾಮಾಲೆ ರೋಗಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಕಿರುನೆಲ್ಲಿ ಅಥವಾ ನೆಲನೆಲ್ಲಿ ಸೊಪ್ಪು ರಾಮಬಾಣವಾಗಿದ್ದು ಪರಿಣಾಮಕಾರಿಯಾದ ನಿಸರ್ಗ ಚಿಕಿತ್ಸೆಯಾಗಿದೆ. ಆದರೆ, ನೀಲಗಿರಿ ತೋಪುಗಳಂತೆ ಬೃಹತ್ತಾದ ಮಾನವ ತೋಪುಗಳಾಗಿರುವ ಮತ್ತು ಸಹಜೀವಿ ಸಂಕುಲಗಳ ಮಸಣವಾಗಿರುವ ಮಹಾನಗರಗಳ ಹಾದಿ-ಬೀದಿಗಳಲ್ಲಿ ಕಿರುನೆಲ್ಲಿ, ಒಂದೆಗಲ, ಸುಗಂಧಿ, ಮಂಗರವಳ್ಳಿ ಮುಂತಾದ ಗಿಡ ಮೂಲಿಕೆಗಳನ್ನು ಕಾಣಲು ಸಾಧ್ಯವೇನು? ಇದರ ಪರಿಣಾಮವಾಗಿ ಹಿತ್ತಿಲುಗಳನ್ನು ಕಳೆದುಕೊಂಡಿರುವ ಮಹಾನಗರಗಳು ಬಗೆಬಗೆಯ ಬಜಾರುಗಳನ್ನು ಭವ್ಯವಾಗಿ ನಿರ್ಮಾಣಮಾಡಿ ಕೊಂಡಿವೆ. ಇದು ಸ್ಪಷ್ಟವಾಗಿ 'ಮನುಷ್ಯ ಕೇಂದ್ರಿತ' ಯೋಜನೆಯ ಫಲಶ್ರುತಿಯಾಗಿದೆ.

ಮನುಷ್ಯನಾದಿಯಾಗಿ ಸಕಲ ಜೀವರಾಶಿಗಳೆಲ್ಲವೂ ಪರಿಸರದಿಂದ ಪ್ರೇರಿತವಾದುವುಗಳು. ಆದರೆ ಸ್ವಾರ್ಥತೆಯ ಬೆನ್ನೇರಿ ಹೊರಟ ಹುಲುಮಾನವ, ಪರಿಸರ ವಿನಾಶಕ್ಕೆ ಮುಂದಾಗಿ ತನ್ನ ಸಾವಿನ ಗುಂಡಿಯನ್ನು ತಾನೇ ತೋಡಿಕೊಳ್ಳುತ್ತಿರುವುದು ವಿಪರ್ಯಾಸ. ಈ ಬಗ್ಗೆ ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪರಿಸರ ರಕ್ಷಣೆಯ ಹೋರಾಟಗಳು ಯತೇಚ್ಛವಾಗಿ ದೇಶಾದ್ಯಂತ ನಡೆಯುತ್ತಿರುವುದರ ನಡುವೆ, ಈ ಚಳವಳಿಗಳು ಕ್ಷಿಪ್ರ ಪ್ರಗತಿಯ ಉದ್ದೇಶ ಹೊತ್ತಿರುವ ಸರ್ಕಾರಗಳ ಅಭಿವೃದ್ಧಿ ಕಾರ್ಯಗಳಿಗೆ ತೊಡಕುಂಟಾಗುತ್ತಿವೆಯೆಂಬ ಆರೋಪ ಅಲ್ಲಲ್ಲಿ ಕಂಡುಬರುತ್ತಿದ್ದು ಈ ಬಗ್ಗೆ ವಿಷದವಾದ ಚರ್ಚೆ ಈ ಲೇಖನದಲ್ಲಿದೆ.

'ಕರ್ನಾಟಕದ ಕಾಶ್ಮೀರ'ವೆಂಬ ಹೆಮ್ಮೆಗೆ ಪಾತ್ರವಾಗಿರುವ ದಾಂಡೇಲಿ ಅಭಯಾರಣ್ಯದ ವ್ಯಾಪ್ತಿಗೆ ಸೇರಿದ 'ಕುಳಗಿ ನಿಸರ್ಗಧಾಮ' ತನ್ನ ವನ್ಯ ಸಿರಿಯಿಂದ ಎಲ್ಲರನ್ನು ಆಕರ್ಷಿಸುವ ತಾಣವೂ ಆಗಿದೆ. ಈ ನಿಸರ್ಗಧಾಮದ ಪ್ರವೇಶದ್ವಾರದಲ್ಲಿ ಕಮಾನಿನ ಆಕಾರದ ವಿನ್ಯಾಸವಿದ್ದು ಇದರ ಮೇಲೆ ಬರೆಸಿರುವ ಬರಹ ಹೀಗಿದೆ: 'ನಿಸರ್ಗ ನಗುತಿದೆ ಹಸಿರಾಗಿ, ಮಾನವನ ಪ್ರಗತಿಗಾಗಿ'- ಪದ್ಯದಂತೆ ಪ್ರಾಸಬದ್ಧವಾಗಿರುವ ಈ ಸಾಲಿನಲ್ಲಿ ಪ್ರಗತಿಯ ತಪ್ಪು ದೃಷ್ಟಿಕೋನವು ಎದ್ದು ಕಾಣುತ್ತದೆ. ಕೇಂದ್ರಿತ ದೃಷ್ಟಿಯ ಪರಿಣಾಮವೇ ಇಲ್ಲಿ ತಲೆಬರಹವಾಗಿ ಪ್ರಕಟವಾಗಿದೆ. ಈ ಮನುಷ್ಯ ಕೇಂದ್ರಿತ ನೆಲೆಯ ಅಭಿವೃದ್ಧಿ ಯೋಜನೆಗಳ ಹ್ರಸ್ವದೃಷ್ಟಿಯನ್ನು ಮನಗಾಣಬೇಕಾದರೆ ನೀರಿನ ಸಮಸ್ಯೆಯೊಂದನ್ನು ಪರಿಶೀಲಿಸಿದರೆ ಸಾಕೆನಿಸುತ್ತದೆ.

ತೀವ್ರವಾದ ಜನಸಂಖ್ಯಾ ಸ್ಫೋಟದಿಂದಾಗಿ ಜೀವನಾವಶ್ಯಕವಾದ 'ನೀರು' ಕೂಡ ಬೇಡಿಕೆಯ ಸ್ಫೋಟಕ್ಕೊಳಗಾಗಿ ಜನತೆಯು ಜಲಕ್ಷಾಮವನ್ನು ಎದುರಿಸುವ ಪರಿಸ್ಥಿತಿ ಏರ್ಪಟ್ಟಿದೆ. ಒಂದು ನಿರ್ದಿಷ್ಟ ಉದಾಹರಣೆ ಕೊಡುವುದಾದರೆ, ಯಾವುದೇ ಜೀವನದಿಗಳಿಲ್ಲದ ಕೋಲಾರ ಜಿಲ್ಲೆಯ ಜಲ ಸಂಪನ್ಮೂಲಗಳು ಮತ್ತು ಜಲ ಯೋಜನೆಗಳನ್ನು ಕುರಿತು ವಿಚಾರ ಮಾಡಬಹುದು. 'ನೇತ್ರಾವತಿ ನದಿ ತಿರುವು ಯೋಜನೆ'ಯ ರೂವಾರಿಗಳಾದ ನಿವೃತ್ತ ಸೂಪರಿಂಟೆಂಡೆಂಟ್ ಎಂಜಿನಿಯರ್ ಟಿ.ಎಸ್. ಪರಮ ಶಿವಯ್ಯ ಅವರು ತಮ್ಮ ಪ್ರಾಥಮಿಕ ವರದಿಯನ್ನು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಸಲ್ಲಿಸಿದ ಸಂದರ್ಭದಲ್ಲಿ ಪ್ರಕಟವಾಗಿರುವ ಪತ್ರಿಕಾ ವರದಿಯೊಂದು ಹೀಗಿದೆ:

'ಬೆಂಗಳೂರು, ಮಾರ್ಚ್ ೨೩-ಕರ್ನಾಟಕದ ಹತ್ತು ಜಿಲ್ಲೆಗಳ ೬೨ ಬರಪೀಡಿತ ತಾಲೂಕುಗಳಿಗೆ ನೇತ್ರಾವತಿ ನದಿಯನ್ನು ತಿರುಗಿಸಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಯೋಜನೆಯ ಬಗ್ಗೆ ತಾಂತ್ರಿಕ ಅಧ್ಯಯನ ನಡೆಸಲು ಈ ಆಯವ್ಯಯದಲ್ಲಿ ಐದು ಕೋಟಿ ರೂಪಾಯಿ ನೀಡುವುದಾಗಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಇಂದು ತಿಳಿಸಿದರು.'

ನಿವೃತ್ತ ಸೂಪರಿಂಟೆಂಡೆಂಟ್ ಎಂಜಿನಿಯರ್ ಟಿ.ಎಸ್. ಪರಮಶಿವಯ್ಯ ನೇತೃತ್ವದ ಸಮಿತಿ ನೀಡಿದ ಪ್ರಾಥಮಿಕ ವರದಿಯನ್ನು ಸ್ವೀಕರಿಸಿದ ಮುಖ್ಯಮಂತ್ರಿಗಳು, 'ಪಶ್ಚಿಮ ಘಟ್ಟದಲ್ಲಿ ಜನಿಸಿ ಅರಬ್ಬಿ ಸಮುದ್ರಕ್ಕೆ ಹರಿಯುವ ನೇತ್ರಾವತಿ ನದಿಯನ್ನು ಕುಡಿಯುವ ನೀರಿನ ಬರಸ್ಥಿತಿ ಎದುರಿಸುತ್ತಿರುವ ಪ್ರದೇಶಗಳಿಗೆ ತಿರುಗಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದರು..' (ಪ್ರಜಾವಾಣಿ, ಪು. ೬, ೨೪-೩-೨೦೦೧) ನದಿಯ ದಿಕ್ಕನ್ನೇ ಬದಲಿಸಿ, ಜಲಕ್ಷಾಮವನ್ನು ನೀಗುವ ಈ ಬೃಹತ್ ಯೋಜನೆಯಲ್ಲಿ 'ಯಾವುದೇ ವಿವಾದ ಎದುರಾಗದು'-ಎಂಬ ವಿಶ್ವಾಸವನ್ನು ಸಹ ಮುಖ್ಯಮಂತ್ರಿಗಳು ವ್ಯಕ್ತಪಡಿಸಿದ್ದಾರೆ. ಬೃಹತ್ ಈ ಕಾಮಗಾರಿ ಆರಂಭವಾದಲ್ಲಿ ಎದುರಾಗುವ ವಿಘ್ನಪರಂಪರೆಗಳ ಅರಿವಿಲ್ಲದೆ ಆಡಿರುವ ಮಾತುಗಳಿವು.

ಈ ನದಿ ತಿರುವು ಯೋಜನೆಯು ಅಭಿವೃದ್ಧಿ ಕಾರ್ಯ ಎನ್ನುವುದಾದರೆ, ನೇತ್ರಾವತಿ ನದಿ ಹರಿವಿನ ಸ್ಥಳೀಯರು ಮತ್ತು ಪರಿಸರವಾದಿಗಳು ಇದನ್ನೇಕೆ ವಿರೋಧಿಸುತ್ತಾರೆ ಎಂಬುದನ್ನು ಸಾವಧಾನದಿಂದ ಪರಿಶೀಲಿಸೋಣ. 'ಬೆಣ್ಣೆ ಹತ್ತಿರ ಇಟ್ಟು ಕೊಂಡು ತುಪ್ಪಕ್ಕಾಗಿ ಅಲೆಯುವರು' ಎಂಬ ಗಾದೆ ಮಾತು ಇಲ್ಲಿ ನೆನಪಾಗುತ್ತದೆ. ಏಕೆಂದರೆ, ಕೋಲಾರದಲ್ಲಿ ವರ್ಷದುದ್ದಕ್ಕೂ ಹರಿಯುವ ಜೀವನದಿಗಳು ಇಲ್ಲವೆಂಬ ಮಾತು ಎಷ್ಟು ಸತ್ಯವೋ, ಕೋಲಾರದಲ್ಲಿರುವಷ್ಟು ಕೆರೆಗಳು ನಮ್ಮ ರಾಜ್ಯದಲ್ಲೆಲ್ಲೂ ಇಲ್ಲವೆಂಬ ಮಾತು ಕೂಡ ಅಷ್ಟೇ ಸತ್ಯವಾಗಿದೆ. ಆದ್ದರಿಂದಲೇ ಕೋಲಾರವನ್ನು ಕೆರೆಗಳ ಜಿಲ್ಲೆಯೆಂದೂ ಕರೆಯಲಾಗಿದೆ. ಹಿಂದೆಲ್ಲ ರಸ್ತೆಗಳ ಇಕ್ಕೆಲದಲ್ಲಿ ಸಾಲುಮರಗಳನ್ನು ನೆಡಿಸುತ್ತಿದ್ದಂತೆಯೇ ನಮ್ಮ ಪೂರ್ವಿಕರು ಕೋಲಾರ ಜಿಲ್ಲೆಗೆ ಕೊಟ್ಟ ವಿಶಿಷ್ಟ ಕೊಡುಗೆಯೇ

ಸಾಲುಕೆರೆಗಳು. ಕೋಲಾರಮ್ಮನ ಕೊರಳಿಗೆ ನಮ್ಮ ಪೂರ್ವಿಕರು ತೊಡಿಸಿದ ಬಂಗಾರದ ಕಾಸುಗಳ ಸರ ಮಾಲೆಯೇ ಈ ಸಾಲುಕೆರೆಗಳ ಹಾರವೆಂದರೆ ಉತ್ಪ್ರೇಕ್ಷೆಯಲ್ಲ. ಭಾರತದ ದಖ್ಖನ್ ಪ್ರಸ್ಥ ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿರುವುದರಿಂದ ಇಂಥ ಮೇಲ್ಮೈಲಕ್ಷಣಗಳುಳ್ಳ ಒಂದು ಸುವಿಶಾಲ ಬಯಲು ತಟ್ಟೆಯೇ ಕೋಲಾರ ಜಿಲ್ಲೆ. ಈ ಜಿಲ್ಲೆ ಕೂಡ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದ್ದು ಅಲ್ಲಲ್ಲಿ ನಿಂತು ಹರಿಯುವ ಮಳೆನೀರು ಪೂರ್ವಾಭಿಮುಖವಾಗಿ ಚಲಿಸುತ್ತದೆ. ಮಳೆನೀರಿನ ಈ ಪೂರ್ವಾಭಿಮುಖ ಚಲನೆಯನ್ನು ಮನಗಂಡಿದ್ದ ನಮ್ಮ ಪೂರ್ವಿಕರು ಹರಿವ ನೀರಿನ ಪಾತ್ರದುದ್ದಕ್ಕೂ (=ಇವೆಲ್ಲ ಬೇಸಿಗೆಯಲ್ಲಿ ಬತ್ತಿ ಮಾಯದಂಥ ಮಳೆಗಾಲದಲ್ಲಿ ತುಂಬಿ ಹರಿಯುವ ಉಪನದಿಗಳು ಅಥವಾ ಸಣ್ಣ ಪುಟ್ಟ ತೊರೆಗಳು) ಕೆರೆಕಟ್ಟೆಗಳನ್ನು ನಿರ್ಮಿಸುವುದರ ಮೂಲಕ ನಾವಿಂದು 'ಮಳೆಕೊಯ್ಲು' ಎಂದು ಕರೆಯುವ ತಂತ್ರಜ್ಞಾನವನ್ನೇ ಕಾರ್ಯತಃ ಧರೆಗಿಳಿಸಿದ್ದರು. ಮೇಲ್ದಂಡೆಯ ಕೆರೆಗಳು ತುಂಬಿ ಕೋಡಿ ಹರಿದರೆ, ಮಳೆ ಬೀಳದಿದ್ದರೂ ಕೆಳ ದಂಡೆಯ ಕೆರೆಗಳು ಕೂಡ ತುಂಬಿಕೊಳ್ಳುವಂಥ ಸರಪಳಿ ಸಂಬಂಧವನ್ನು ಹೊಂದಿದ್ದ ಸಾಲು ಕೆರೆಗಳು ಮೂಡಲ ಸೀಮೆಯ 'ದೇಸಿ' ಎಂಜಿನಿಯರಿಂಗ್ ಕೌಶಲ್ಯವಾಗಿದೆ.



ಆದರೆ, ಆಧುನಿಕ 'ಮಾರ್ಗ'ದ ಕೃಷೀಕರಣ, ನಗರೀಕರಣ ಮತ್ತು ಚರಂಡೀಕರಣಗಳಂಥ ಮೂರು ದಿಕ್ಕುಗಳ ದಾಳಿಗೊಳಗಾಗಿ ಬಂಗಾರದ ಕಾಸುಗಳಂತಿದ್ದ ಕೆರೆಯಂಗಳಗಳು ಇನ್ನಿಲ್ಲದಂತೆ ಮಂಗಮಾಯವಾದವು. 'ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ'-ಎಂಬ ಗಾದೆಯಂತೆ ಬೆಂಗಳೂರಿನಲ್ಲಿ ಕೆರೆಗಳಿಗೊದಗಿದ ದುರ್ಗತಿಯೇ ಕೋಲಾರದಲ್ಲೂ ಬಹುತೇಕ ಕೆರೆಗಳಿಗೆ ಪ್ರಾಪ್ತವಾಯಿತು. ಮಹಾನಗರ ಬೆಂಗಳೂರು ಕಾವೇರಿ ನೀರನ್ನು ಹಲವು ಹಂತಗಳಲ್ಲಿ ಬರಮಾಡಿಕೊಳ್ಳುವುದರ ಮೂಲಕ ತನ್ನಲ್ಲಿದ್ದ ಕೆರೆಯಂಗಳಗಳ ನಿರ್ನಾಮದ ಕೊರತೆಯನ್ನು ತುಂಬಿಕೊಂಡಿತು. ಆದರೆ ಕೋಲಾರ ಜಿಲ್ಲೆಗೇನು ಗತಿ? ಜನಸಂಖ್ಯಾ ಸ್ಫೋಟಕ್ಕನುಗುಣವಾಗಿ ಚೆನ್ನಾಗಿ ಒಣಗಿನಿಂತ ಬಹಳಷ್ಟು ಕೆರೆಗಳು ವಿಸ್ತೃತ ಬಡಾವಣೆಗಳು, ಬಸ್ ಸ್ಟಾಂಡ್‌ಗಳು, ಸ್ಟೇಡಿಯಂಗಳು ಆಗಿ ಪರಿವರ್ತನೆಗೊಂಡಿದ್ದಲ್ಲದೆ ಸಾಲುಕೆರೆಗಳೆಂಬ ಸರಪಳಿ ಸಂಬಂಧವನ್ನು ಕತ್ತರಿಸಿ ಹಾಕಿದವು. ಸುದೀರ್ಘ ಸರಪಳಿಯೊಂದು ಅಲ್ಲಲ್ಲಿ ಕೊಂಡಿ ಕಳಚಿಕೊಂಡು ನೂರಾರು ತುಂಡುಗಳಾದಂತೆ ಕೋಲಾರ ಜಿಲ್ಲೆಯ ಕೆರೆಗಳು ಸಾಲು ಸಂಬಂಧವನ್ನು ಸಂಪೂರ್ಣವಾಗಿ ಕಳೆದುಕೊಂಡದ್ದು ದುರಾದೃಷ್ಟವೇ ಸರಿ! ಜೊತೆಗೆ, ತೀವ್ರ ಪೈಪೋಟಿಯ ಕೊಳವೆ ಬಾವಿಗಳಿಂದ ನೆಲ ಮಟ್ಟದ ತೆರೆದ ಬಾವಿಗಳು ಮೊದಲ ಬಲಿಪಶುಗಳಾದಂತೆಯೇ, ಎರಡನೆಯ ಬಲಿಪಶುಗಳಾಗುವ ಸರದಿ ಸಾಲು ಕೆರೆಗಳದಾಯ್ತು. ಹೀಗೆ, ಜನ ಸಮುದಾಯಗಳ ನಿರ್ಲಕ್ಷ್ಯಕ್ಕೆ ಒಳಗಾದ ಕೆರೆಗಳಲ್ಲಿ ಹೂಳು ತುಂಬಿಕೊಂಡು ಮಳೆನೀರನ್ನು ಇಂಗಿಸಿ, ಸಂಗ್ರಹಿಸಿಟ್ಟುಕೊಳ್ಳುವ ಸಾಮರ್ಥ್ಯ ಕೂಡ ಕುಸಿಯಿತು..ಇದೆಲ್ಲ ಅಭಿವೃದ್ಧಿ ಕಾರ್ಯಗಳ ಫಲಶ್ರುತಿ.

ಆಧುನಿಕ 'ಮಾರ್ಗ'ದ ಕೃಷೀಕರಣ, ನಗರೀಕರಣ ಮತ್ತು ಚರಂಡೀಕರಣಗಳಂಥ ಮೂರು ದಿಕ್ಕುಗಳ ದಾಳಿಗೊಳಗಾಗಿ ಬಂಗಾರದ ಕಾಸುಗಳಂತಿದ್ದ ಕೆರೆಯಂಗಳಗಳು ಇನ್ನಿಲ್ಲದಂತೆ ಮಂಗಮಾಯವಾದವು. 'ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ'-ಎಂಬ ಗಾದೆಯಂತೆ ಬೆಂಗಳೂರಿನಲ್ಲಿ ಕೆರೆಗಳಿಗೊದಗಿದ ದುರ್ಗತಿಯೇ ಕೋಲಾರದಲ್ಲೂ ಬಹು ತೇಕ ಕೆರೆಗಳಿಗೆ ಪ್ರಾಪ್ತವಾಯಿತು. ಮಹಾನಗರ ಬೆಂಗಳೂರು ಕಾವೇರಿ ನೀರನ್ನು ಹಲವು ಹಂತಗಳಲ್ಲಿ ಬರಮಾಡಿಕೊಳ್ಳುವುದರ ಮೂಲಕ ತನ್ನಲ್ಲಿದ್ದ ಕೆರೆಯಂಗಳಗಳ ನಿರ್ನಾಮದ ಕೊರತೆಯನ್ನು ತುಂಬಿಕೊಂಡಿತು. ಆದರೆ ಕೋಲಾರ ಜಿಲ್ಲೆಗೇನು ಗತಿ? ವಿಶ್ವಮಟ್ಟದಲ್ಲಿ ಹಿರೋಶಿಮಾ ಮತ್ತು ನಾಗಸಾಕಿಯ ಮೇಲೆ ನಡೆದ ಬಾಂಬುಧಾಳಿ ಹಾಗೂ ಸ್ಥಳೀಯ ಮಟ್ಟದಲ್ಲಿ ಕೊಳಚೆಯ ಗುಂಡಿಯಾಗಿರುವ ಕೋಲಾರಮ್ಮನ ಕೆರೆ- ಇವೆರಡು ನಿದರ್ಶನಗಳನ್ನು ಧ್ಯಾನಿಸಿ ವಿಚಾರ ಮಾಡಿದರೆ ಇಪ್ಪತ್ತನೇ ಶತಮಾನದ ಅಭಿವೃದ್ಧಿ ಕಾರ್ಯಗಳ ಸ್ವರೂಪ ದರ್ಶನವಾಗದೆ ಇರದು.

ಕೋಲಾರ ನಗರವೊಂದನ್ನೆ ಉದಾಹರಣೆಗೆತ್ತಿಕೊಂಡರೆ, ಮನೆಗಳು, ಕೈಗಾರಿಗಳು ಮತ್ತು ಆಸ್ಪತ್ರೆಗಳ ತ್ಯಾಜ್ಯಗಳೆಲ್ಲ ಸೇರಿದ ಕೊಳಚೆನೀರು ನೇರವಾಗಿ ಕೋಲಾರಮ್ಮನ ಕೆರೆಗೆ ರವಾನೆಯಾಗುತ್ತಿದೆ. ಈ ಕೆರೆಯಂಗಳದ ಉದ್ದಕ್ಕೂ ಹಾಸ್ಟೆಲ್ಲುಗಳು, ಕಾಲೇಜುಗಳು, ಬಡಾವಣೆಗಳು, ತಿಪ್ಪೆಗುಂಡಿಗಳು, ಕಚೇರಿಗಳು, ಇಟ್ಟಿಗೆಗೂಡು-ಹೆಂಚಿನ ಕಾರ್ಖಾನೆಗಳು, ಪ್ರತಿಷ್ಠಿತ ಮೋಟೆಲ್ಲುಗಳು, ಡಾಬಗಳು ಇತ್ಯಾದಿಗಳೆಲ್ಲ ವಿಸ್ತರಿಸಿಕೊಂಡಿವೆ. ಕೋಲಾರ ನಗರದ ಇಡೀ ಕೊಳಚೆಯನ್ನೆಲ್ಲ ತನ್ನಲ್ಲಿ ತುಂಬಿಕೊಳ್ಳುತ್ತಿರುವ ಕೋಲಾರಮ್ಮನ ಕೆರೆಯಂಗಳದಲ್ಲೆ ಕುಡಿವ ನೀರಿನ ಕೊಳವೆ ಬಾವಿಗಳು ಕೂಡು ಇರುವುದು ದುರಂತ ವ್ಯಂಗ್ಯವೇ ಸರಿ! ವಸ್ತುಸ್ಥಿತಿ ಹೀಗಿದ್ದರೂ, ಇಂಥ ಕೆರೆಗೆ ಆಗಾಗ್ಗೆ ಸೈಬೀರಿಯಾ ಪಕ್ಷಿಗಳು, ಪೆಲಿಕಾನ್ ಮುಂತಾದವು ಭೇಟಿ ಕೊಟ್ಟು ವಾಸ್ತವ್ಯ ಹೂಡುತ್ತವೆಯೆಂದರೆ ನಂಬುವುದಕ್ಕೆ ಸಾಧ್ಯವಿಲ್ಲ.

ವಿಶ್ವಮಟ್ಟದಲ್ಲಿ ಹಿರೋಶಿಮಾ ಮತ್ತು ನಾಗಸಾಕಿಯ ಮೇಲೆ ನಡೆದ ಬಾಂಬುಧಾಳಿ ಹಾಗೂ ಸ್ಥಳೀಯ ಮಟ್ಟದಲ್ಲಿ ಕೊಳಚೆಯ ಗುಂಡಿಯಾಗಿರುವ ಕೋಲಾರಮ್ಮನ ಕೆರೆ- ಇವೆರಡು ನಿದರ್ಶನಗಳನ್ನು ಧ್ಯಾನಿಸಿ ವಿಚಾರ ಮಾಡಿದರೆ ಇಪ್ಪತ್ತನೇ ಶತಮಾನದ ಅಭಿವೃದ್ಧಿ ಕಾರ್ಯಗಳ ಸ್ವರೂಪ ದರ್ಶನವಾಗದೆ ಇರದು. ಹೀಗಾಗಿ, ಇಪ್ಪತ್ತೊಂದನೆ ಶತಮಾನದಲ್ಲಿ ಕೆರೆಗಳ ಜೀರ್ಣೋದ್ಧಾರದಂಥ ಪರಿಸರ ಸ್ನೇಹಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕಾದ್ದು ಅನಿವಾರ್ಯವಾಗಿದೆ.

ಆದ್ದರಿಂದಲೇ ಪಾಶ್ಚಾತ್ಯ ಮತ್ತು ಪೌರ್ವಾತ್ಯಗಳೆಂಬ ಭೇದಗಳಿಲ್ಲದಂತೆ ವಿಶ್ವದೆಲ್ಲೆಡೆಗಳಲ್ಲಿ ಪರಿಸರವಾದಿಗಳು ಮತ್ತು ಪರಿಸರ ಚಳವಳಿಗಳು ಹೆಚ್ಚುತ್ತಿವೆ..ಸ್ವಾರ್ಥಸಾಧನೆಯ ಬಂಡವಾಳಶಾಹಿಗಳು ಮತ್ತು ಇವುಗಳೊಂದಿಗೆ ಕೈಜೋಡಿಸಿರುವ ರಾಜಕಾರಣಿಗಳು ಪರಿಸರ ಹೋರಾಟಗಳೆಂದರೆ ಮೂಗು ಮುರಿಯುವುದು ಸಾಮಾನ್ಯವಾಗಿದೆ.

ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಿಗೆ 'ವೇಗ ನಿಯಂತ್ರಕ'ಗಳನ್ನು ಏಕೆ ಅಳವಡಿಸಿರುತ್ತಾರೆಂಬುದನ್ನು ಗ್ರಹಿಸಿದರೆ ಅಭಿವೃದ್ಧಿ ಕಾರ್ಯಗಳ 'ವೇಗ'ಕ್ಕೆ ಪರಿಸರ ಹೋರಾಟಗಳೆಂಬ 'ನಿಯಂತ್ರಕ'ಗಳ ಅವಶ್ಯಕತೆಯಿರುವುದು ಮನದಟ್ಟಾಗುತ್ತದೆ. ಸಾರ್ವಜನಿಕ ಎನ್ನಬಹುದಾದ ಎಷ್ಟೋ ಕ್ಷೇತ್ರಗಳು ಸರ್ಕಾರೀಕರಣದಿಂದ ಖಾಸಗೀಕರಣಕ್ಕೆ ಹಾಣಾಂತರಗೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಅಭಿವೃದ್ಧಿಯ ಕಾರ್ಯಗಳು ಖಾಸಗಿ ಹಿತಾಸಕ್ತಿಗನುಗುಣವಾಗಿ ನಡೆಯುವ ಸಾಧ್ಯತೆಗಳಿರುವುದರಿಂದ, ಸಾರ್ವಜನಿಕ ಹಿತಾಸಕ್ತಿಯ ಪರಿಸರ ಹೋರಾಟಗಳು 'ವೇಗ ನಿಯಂತ್ರಕ'ದ ಪಾತ್ರ ವಹಿಸುವುದನ್ನು ಅಲ್ಲಗಳೆಯುವಂತಿಲ್ಲ. □

ದ್ವೀಪವಿಗಳು



○ ಜಂಬಣ್ಣ ಅಮರಚಿಂತ



ನಿನ್ನದೊಂದು ದೀಪ ಬೆಳಗಲು, ನೂರಾರು ದೀಪ ನಂದಿಸಿದೆ
ಒಂದು ದೀಪ ಕೈಯಲ್ಲಿ ಹಿಡಿದು, ದೀಪಾವಳಿ ಆಚರಿಸಿದೆ

ಹಾಗೆ ನೋಡಿದರೆ ಈ ನೆಲ, ಈ ಜಲ, ಈ ತೋಟ ನಮ್ಮದು
ಅರಳಿದ ಹೂಗಳು ದೇಶಿಯವಲ್ಲ; ಎಲ್ಲಾ ವಿದೇಶಿಯವು

ಬೆಳಕಿನಲಿ ನಿನ್ನ ಅಸ್ತಿತ್ವವೇನು, ಎಂತು ವಿಚಾರ ಮಾಡು
ನಿನಗಿಂತ ನಿನ್ನ ನೆರಳುಗಳೇ ಉದ್ದವಾಗಿರುವವು ನೋಡು

ಸೂರ್ಯನ ಪ್ರಖರ ಬಿಸಿಲು ನಮ್ಮ ಮೇಲೆ ಬಿದ್ದರೆ ಬೀಳಲಿ
ನಾವೇನೂ ಮಂಜಿನ ಹನಿಗಳಲ್ಲ; ನಿಂತಲ್ಲಿ ಕರಗಿ ಹೋಗ

ಸುಡುವ ರೆಕ್ಕೆಗಳ ಧರಿಸಿ ಹಾರುತ್ತಿರುವೆವು ನೋಡು
ಬೂದಿಯಾದರೂ ಬೂದಿಯಿಂದ ಮೇಲೆದ್ದು ಬಂದೆವು ನೋಡು

ಚೆಹರೆ ಹಿಂದಿನ ನೋವನು ಓದಿ ಮನನ ಮಾಡಿಕೊಳ್ಳಿ
ಹಳಸಿದ ದಿನ ಪತ್ರಿಕೆಯಂತೆ ಓದಿ ಬೀಸಾಡಬೇಡಿ

ದಡದ ಮೇಲೆ ದೀಪ ಬೆಳಗಿಸಿ ಯಾರನ್ನು ಹುಡುಕುತ್ತಿರುವಿರಿ
ಮುಳುಗುವವರೆಂದೋ ಮುಳುಗಿದರು; ಯಾರಿಗಾಗಿ ಬಲೆ ಬೀಸಿರುವಿರಿ

ಸ್ವಚ್ಛ ಬಿಳಿಕಾಗದದ ಮೇಲೆ ಏನೂ ಬರೆದರೂ ಮೂಡುವುದು
ಹೃದಯವೆಂಬ ಕಾಗದದ ಮೇಲೆ ಏನೂ ಬರೆದರೂ ಗೋಚರಿಸದು

ಬೊಗಸೆ ತುಂಬಾ ಶಬ್ಧಗಳ ಹಿಡಿದು ಎಲ್ಲಿಯಂತ ಅಲೆಯೋಣ
ನಮ್ಮಂತೆ ನಮ್ಮ ಶಬ್ದಾರ್ಥಗಳು ಅಸ್ಪೃಶ್ಯವಾದವು ನೋಡು

ಶಿಲೆಯು ನಾನೇ; ಶಿಲ್ಪಿಯೂ ನಾನೇ; ಶಿಲೆಯೊಳಡಗಿದ ರೂಪ ನಾನೇ
ಕೆತ್ತಿಕೊಂಡು ನನ್ನಯ ರೂಪ; ಪ್ರತ್ಯಕ್ಷವಾಗುವೆ ನನ್ನಷ್ಟಕ್ಕೆ ನಾನೇ

ಕಥೆ

ಮೂಗೋಂಕ

○ ಕೇಶವರೆಡ್ಡಿ ಹಂದ್ರಾಳ

ಬ್ಯಾಲ್ಯದ ಬಾಲಾಜಿ ಟೂರಿಂಟ್ ಟಾಕೀಸಿನಾಗೆ ಎರಡನೆ ಶೋ ಬೈಸ್ಕೋಪು ಮುಗಿದು 'ಯಾರಿಗೆ ಯಾರುಂಟು ಯರವಿನ ಸಂಸಾರ' ಮೇಲಕ್ಕೆ ಕೊಟ್ಟಿದ್ದರೂ ದಿವಂಗತ ಶವುಟನ ಮಗ ನರಸಿಮ್ಮ ಉರೂಫ್ ಮೂಗನಿಗೆ ನಿದ್ರಾದೇವಿ ಸೆರಗು ಹಾಸಿ ಮಲಗಿಸುವುದರಲ್ಲಿ ಸೋತು ಸುಣ್ಣವಾಗಿದ್ದಳು. ಸುಮಾರು ಮೂರು ದಶಕಗಳಿಂದಲೂ ನಿರಂತರವಾಗಿ ಟೆಂಟಿನ ಮೈಕ್‌ಸೆಟ್ಟಿನಲ್ಲಿ ಮುಂದುವರೆದುಕೊಂಡು ಬಂದಿರುವ 'ಯಾರಿಗೆ ಯಾರುಂಟು ಯರವಿನ ಸಂಸಾರ' ಹಾಡು ವಿಶ್ವೇಶ್ವರಯ್ಯನ ಕಾಲದ ಗ್ರಾಮಪೋನಿನಲ್ಲಿ ಸವೆದು ಸವೆದು ಸವೆದು ಮಳೆಗಾಲದ ಹೊಂಡು ನೀರಿನಲ್ಲಿ ಬ್ಯಾಲ್ಯದ ಸುತ್ತೆಂಟು ಊರಿನ ಜನರಿಗೆ ಮಾತ್ರ ಇಂದಿಗೂ ಮಧುರವಾದ ಸಂಗೀತದಂತೆ ಭಾಸವಾಗುತ್ತಿರುವುದು ಸೋಜಿಗದ ಸಂಗತಿಯೇ ಸರಿ. ಬೆಲ್ಲದ ವ್ಯಾಪಾರಿ ಮೈಲಾರ ಲಿಂಗ ಸಾರಾಯಿ ಗಡಂಗಿನಲ್ಲಿ ಲೋಡಾಗಿ ದಾರಿಗುಂಟಾ 'ಯೇಡು ಕೊಂಡಲ ಸ್ವಾಮಿ ಯಕ್ಕಾಡುನ್ನಾವಯ್ಯ' ಎಂದು ರಾಗವಾಗಿ ಹಾಡುತ್ತಾ ತಟ್ಟಾಡುತ್ತಾ ನಡೆಯುತ್ತಿದ್ದದ್ದು ಮೂಗನಿಗೆ ಪದದ ತರಂಗಗಳಿಂದಲೇ ಅಂದಾಜಾಗುತ್ತಿತ್ತು. ಮೈಲಾರ ಲಿಂಗನ ಪದ ಕೇಳಿ ಬಂತೆಂದರೆ, ಅದು ಕರೆಕ್ಟಾಗಿ ಕಲ್ಲು ನೀರು ಕರಗುವ ಹೊತ್ತಿನ ಆಜುಬಾಜೆಂದು ಊರಿನವರಿಗೆಲ್ಲ ಖಾತರಿಯಾಗಿ ಬಿಟ್ಟಿದೆ. ಪ್ರತಿನಿತ್ಯವೂ ಒಂದೊಂದೂರಿನ ಸಂತೆಗೆ ಬೆಲ್ಲದ ವ್ಯಾಪಾರಕ್ಕೆಂದು ಹೋಗುವ ಮೈಲಾರ ಲಿಂಗ ಕಡೆ ಬಸ್ಸಾದ ಬಿಲಾಲಿಯಲ್ಲಿ ಬಂದು ಬ್ಯಾಲ್ಯದಲ್ಲಿ ಇಳಿದು ಅರ್ಧ ಲೀಟರ್ ಸಾರಾಯಿ ಏರಿಸಿ ಹೊರಟನೆಂದರೆ ಊರು ತಲುಪುವವರೆಗೂ ಘಂಟಸಾಲನ ಫೇಮಸ್ಸು ಸಾಂಗ್‌ಗಳು ಮೈಲಾರ ಲಿಂಗನ ನಾಲಿಗೆಯ ಮೇಲೆ ತೆಲಗು ಸಿನಿಮಾ ರಾಣಿ ಶ್ರೀದೇವಿಯಂತೆ ಈಜ್ಡಿಯಾಗಿ ಡ್ಯಾನ್ಸು ಮಾಡುತ್ತವೆ. ಹೀಗೆ ಮೈಲಾರಲಿಂಗನ ಹಾಡುಗಳನ್ನು ಯಾರಾದರೂ ಕೇಳಿಸಿಕೊಂಡ ಪಕ್ಷದಲ್ಲಿ, ಅವರು ಯಾವುದಾದರೂ ಘನವಾದ ಚಿಂತೆಯಿಂದಲೋ ಇಲ್ಲ ಖಾಯಿಲೆಯಿಂದಲೋ ನರಳುತ್ತಿದ್ದಾರೆಂದೇ ಖಾತ್ರಿ. 'ಮಜಾ ಅಂದ್ರೆ ಮೈಲಾರ ಲಿಂಗನ ಬದುಕು, ಕೇಳ್ಕೊಂಡ್ ಹುಟ್ಟಿನ್ನೆ ಭೂಪ' ಅಂದುಕೊಂಡ ಮೂಗ. ಪಕ್ಕದ ಕೇರಿಯ ಗುವ್‌ಪಿತ್ಲೊಂದೂ ಅವರ ಹೆಂಡ್ತೀದೂ ಅಡಿಕೆಲೆ ಕಡ್ಡಿಪುಡಿಗಾಗಿ ಸ್ಟಾರ್ಟ್ ಆದ ಜಗಳ ಕ್ಲೈಮಾಕ್ಸು ಮುಟ್ಟಿತ್ತು.

'ಓಹೋ...ಮುಚ್ಕಂಡ್ ಮಲಿಕ್ಕಮ್ತೀರೋ ಇಲ್ವೋ. ನಿರ್‍ವಾಕ್ವಿಲ್ದ ಗಂಡ ಹೆಂಡ್ತೀರು ನೀವು. ಒಳ್ಳೆ ನಾಯಿಗ್ಳಂಗೆ ವಯ್ಕವಯ್ಕ ಬಡ್ಕತೀರ. ದೆವ್ವಗ್ಳು ಕುಣ್ಯೋ ಹೊತ್ತಾದ್ರು ನಿಮ್ ಪಂಚಾಯ್ತಿ ಮುಗಿಲಿಲ್ಲ.' ಎಂದು ಎದುರು ಮನೆಯ ಕಾಮಣ್ಣಜ್ಜ ಗದರಿಕೊಂಡಿದ್ದ. ಅದಕ್ಕೆ ಗುವ್‌ಪಿತ್ಲೋನ ಹೆಂಡ್ತಿ ರಾಮಿ ಖಾರವಾಗಿಯೇ ಉತ್ತರಿಸಿದ್ದಳು: 'ನಿಂಗೇನೋ ಮುದ್ಕ ಹಿಂದಿಲ್ಲ ಮುಂದಿಲ್ಲ. ನನ್ ಬಾಧೆ ನಂಗೊತ್ತು. ಈ ಹೇಡಿಯಂಥ ಮನುಷ್ಯಂತಾವ ಯೇಗಿ ಯೇಗಿ ಸಾಕಾಗೈತೆ. ನಗ ಬ್ಯಾಡ ನ್ಯಾಣ್ಯ ಬ್ಯಾಡ, ಎಲ್ಡ್ ಅಡಿಕೆ ಗೋಟು ಎಲ್ಡ್ ಎಲೆ ಚಟಾಕ್ ಕಡ್ಡಿಪುಡಿ ಇಲ್ದ್ ಮ್ಯಾಕೆ ಯಾತ್ರು ಬದ್ಕು. ನಮ್ಮ ಹಟ್ಟಿ ಮುಂದೆ ನಾವೆಂಗಾದ್ರೂ ಕಿತ್ತಾಡ್‌ಕಂಬ್ತೀವಿ ನಿಂಗ್ಯಾಕಿದ್ದಾತು ಪುಟ್ಗೋಸಿ ಅಧಮಿಕಂಡು ಬಿದ್ಕ.' 'ಥೂತ್ ಲಮ್ಡಿ ಅದಕ್ಕೆ ಮಳೆ ಬೆಳೆ ಪಾತಾಳಕ್ಕೆ ಇಳ್ದಿರೋದು' ಎಂದು ಗೊಣಗಿದ ಕಾಮಣ್ಣಜ್ಜ.

'ಆ ಕಜ್ಜಿನಾಯಿಗಳನ್ನು ಯಾಕ್ ಕೆಣಕ್ತೀಯೋ ಕಾಮಣ್ಣ, ಯಂಗಾದ್ರೂ ಕಚ್ಚಾಡ್ಕಂಡ್ ಸಾಯ್ಲಿ...' ಎಂದು ಪಕ್ಕದ ಮನೆಯ ಪಾಪನಾಯ್ಕನೂ ದನಿ ಸೇರಿಸಿದ್ದು ಮೂಗನ ಕಿವಿಗೆ ಬಿದ್ದು ಅವನು ಸಣ್ಣದಾಗಿ ಆಕಾಶದ ಕಡೆ ನಕ್ಕ. ಅಷ್ಟರಲ್ಲಿ ಬೋರ್‌ವೆಲ್ ಕೇರಿಯ ವರ್ದಡ್ಲು ಹನುಮಂತ್ರಾಯ ಬೀಜದಲ್ಲಿ ನೋವು ಕಾಣಿಸಿಕೊಂಡು 'ಯಮ್ಮೊ..ಯಪ್ಪೊ..' ಎಂದು ಜೋರಾಗಿ ನರಳತೊಡಗಿದ. ಅದ್ಯಾವ ಖಾಯ್ಲೇನೋ ದೇವ್ರಿಗೆ ಗೊತ್ತು; ಹನುಮಂತ್ರಾಯನ ಬೀಜಗಳು ದಿನೇ ದಿನೇ ಬೆಳೆಯುತ್ತಾ ಪರಂಗಿಕಾಯಿ ಗಾತ್ರದಷ್ಟಾಗಿದ್ದವು. ಮೊದ್ಲು ಮೊದ್ಲು ನೋವಿರ್‍ಲಿಲ್ಲ, ಆದ್ರೆ ಬರ್‌ಬರ್ತಾ ನೋವುಟ್ಟಿಕೊಂಡು ಅದು ಹಾಗೇ ಇಮ್ಮಡಿಯಾಗತೊಡಗಿತು. ಈ ಖಾಯಿಲೆಯಿಂದಾಗಿ ಪ್ರತಿ ವರ್ಷವೂ ಹನುಮಂತ್ರಾಯನ ಮದುವೆ ಪೋಸ್ಟ್‌ಪೋನ್ ಆಗ್ತಾ ಕಡೆಗೆ ಅವನು ಪರ್ಮನೆಂಟ್ ಬ್ರಹ್ಮಚಾರಿಯಾಗಿಬಿಟ್ಟ. ಇತ್ತೀಚೆಗಂತೂ ಗಂಟ್ಲತನ್ಕ ನೋವು ಕಾಣಿಸಿಕೊಂಡು ನರಳಾಡುತ್ತಿದ್ದ. ಕೂಲಿನಾಲಿಗೆ ಹೋಗುವುದಕ್ಕಾಗದೆ ಸದಾ ಹಟ್ಟಿಮುಂದೆಯೇ ಕುಂತಿರುತ್ತಿದ್ದ. ಕುಲಮತ ಭೇದವಿಲ್ಲದೆ, ವಯಸ್ಸಿನ ಅಂತರವಿಲ್ಲದೆ ಹೋಗಿ ಬರುವವರನ್ನೆಲ್ಲ ಬೀಡಿಗಾಗಿ ಪೀಡಿಸುತ್ತಿದ್ದ. 'ಬೀಡಿ ಸೇದ್ಬೇಡ್ವೊ.. ಸೇದ್ಬೇಡ್ವೊ ಅಂದ್ರೆ ಕೇಳ್ತೀಯಾ...' ಎಂದು ಅವನ ರೋದನೆಯಿಂದ ಎಚ್ಚರಗೊಂಡ ತಾಯಿ ನಂಜಕ್ಕ ಬೈಯ್ಯತೊಡಗಿದಳು. 'ನಾನೊರ್‍ಗೋಗ್ತಿನೇಳ್ರಿ. ಆಮೇಲೆ ಉಗಾದಿ ಹಬ್ಬಮಾಡಿ ಒಬ್ಬಟ್ಟು ತುಪ್ಪ ಉಣ್ಣೇವ್ರಂತೆ..' ಎಂದು ದುಃಖ, ಅಸಹಾಯತೆಗಳನ್ನು ಹೊರಗೆಡವಿದ್ದ. ಅದ್ಯಾತರ ಗಂಜರಗೋಳಿನ ಬದುಕೊ ಹನುಮಂತ್ರಾಯಂದು ಅಂದುಕೊಂಡ ಮೂಗ.

ಈ ಯಾವ ವಿದ್ಯಮಾನಗಳೂ ಮೂಗನ ನಿದ್ದೆಗೆ ಭಂಗ ತರುವುದಕ್ಕೆ ಕಾರಣವಾಗಿರಲಿಲ್ಲ! ನಾಳೆಯ ಅಕ್ಕಿರಾಂಪುರದ ಸಂತೆಗೆ ಹೋಗಿ ಮೇಕೆ ಖರೀದಿಸುವ ಸಡಗರ ಸಂಭ್ರಮಗಳು ನಿದ್ರಾದೇವಿಯನ್ನು ಬಳಿ ಬರಗೊಡಿಸಿರಲಿಲ್ಲ. ಹರಿದ ಒಂದೆರಡು ಸಿನಿಮಾ ರೋಲಿನ ತುಂಡುಗಳೊಂದಿಗೆ ಕಟ್ಟಿಕೊಂಡಿದ್ದ ಮುನ್ನೂರು ನಲವತ್ತೆಂಟು ರೂಪಾಯಿಗಳ ಗಂಟನ್ನು ಆಗಾಗ ಸವರಿಕೊಂಡು ಆನಂದ ತುಂದಿಲನಾಗುತ್ತಿದ್ದ. ಮೂರು ವರ್ಷಗಳ ಹಿಂದೆ ಮಧುಗಿರಿ ಮಾರೆಮ್ಮನ ಜಾತ್ರೆಯಲ್ಲಿ ಮಾರೆಮ್ಮನ ಗುಡಿಯ ಮುಂದೆ ಬಲಿಗಾಗಿ ಸಾಲುಗಟ್ಟಿದ್ದ ಕೊಬ್ಬಿದ ಕುರಿ ಮೇಕೆಗಳ ಹಿಂಡು, ಕತ್ತರಿಸಿ ಗುಡ್ಡೆ ಹಾಕಿದ್ದ ಮಾಂಸವನ್ನು ನೋಡಿ ಮೂಗನ ಬಾಯಲ್ಲಿ ನೀರೂರುವುದರೊಂದಿಗೆ ತಾನೂ ಒಂದು ಮೇಕೆಯನ್ನು ಮೇಯಿಸಬೇಕೆಂಬ ಹಂಬಲವು ಬಲವಾಗಿ ಬೇರೂರಿತ್ತು. ತನ್ನ ಈ ಅದಮ್ಯ ಬಯಕೆಯನ್ನು ಯಾರೊಂದಿಗೂ ಬಯಲುಗೊಳಿಸದೆ ತಾನು ಕೂಲಿಗೆ ಹೋಗುತ್ತಿದ್ದ ಕಡೆಯಲ್ಲೆಲ್ಲ ಹೊಂಗೆ ಬೀಜ, ಬೇವಿನ ಬೀಜಗಳನ್ನು ಸಂಗ್ರಹಿಸಿ ಶೆಟ್ಟರ ಅಂಗಡಿಯಲ್ಲಿ ಮಾರಿ, ಕೂಲಿಯಿಲ್ಲದ ಬಿಡುವಿನ ವೇಳೆಯಲ್ಲಿ ದಿನ್ನೆಯಿಂದ ಒಣ ಸೌದೆಯನ್ನು ಆರಿಸಿ ಬ್ಯಾಲ್ಯದ ಭದ್ರಯ್ಯನ ಹೋಟೆಲ್‌ಗೆ ಹಾಕಿ ಕೂಡಿಟ್ಟಿದ್ದ ಪುಡಿ ಪುಡಿ ಕಾಸು ಮೂರು ವರ್ಷಗಳಲ್ಲಿ ಮುನ್ನೂರು ನಲವತ್ತೆಂಟು ರೂಪಾಯಿಗಳ ಗಂಟಾಗಿ ಬೆಳೆದಿತ್ತು. ನಾಳೆ ಅಕ್ಕಿರಾಂಪುರದ ಸಂತೆಗೆ ಹೋಗಿ ಮೇಕೆ ಮರಿಯನ್ನು ತರುವುದಾಗಿ ಹೇಳಿದಾಗ ತಾಯಿ ನಿಂಗಮ್ಮನಿಗೆ ವಸಿ ಜಾಸ್ತಿಯೇ ಖುಷಿಯಾಗಿತ್ತು. ಎಮರ್ಜೆನ್ಸಿ ಟೈಮಿನಲ್ಲಿ ಎರಡನೇ ಸಲ ಮಕ್ಕಾಗ್ಟಿದ್ದಂಗೆ ಆಪರೇಷನ್ ಮಾಡಿಸಿಕೊಂಡಿದ್ದರಿಂದ ಜ್ವರ ಬಂದು ಮಲಗಿದವನಿಗೆ ಹಿಂದ್ ಮುಂದ್ ರೋಗ ಅಂಟಿಕೊಂಡು ಹರಹರ ಅಂದ ಗಂಡ ಶವುಟನೂ ಒಂದೊಮ್ಮೆ ಬನ್ನೂರು ಕುರಿಯನ್ನು ತಂದು ಮೇಯಿಸಿ, ಮಾರ್ನಮಿ ಹಬ್ಬದಲ್ಲಿ ಕೊಯ್ದು ಗುಡ್ಡೆ ಹಾಕಿದ್ದ. ಮೂರು ದಿನ ಕಕ್ಕೊಳ್ಳಂಗೆ ಬಾಡು ತಿಂದಿದ್ದಲ್ಲದೆ ನೂರು ರೂಪಾಯಿ ಲಾಭಗಳಿಸಿದ್ದು ನೆನಪಾಗಿ, ಮಗನಿಗೂ ಅಪ್ಪನ ಖಯ್ಯಾಲಿ ಹುಟ್ಟಿಕೊಂಡಿರುವುದು ಒಳ್ಳೆಯದೇ ಅನ್ನಿಸಿ 'ಸಂತೇಲಿ ಹುಷಾರಾಗಿ ಯಾಪಾರ ಮಾಡು, ಟೋಪಿ ಹಾಕ್ತರೆ. ಯಾರಾದ್ರೂ ಗುರ್ತಿರೋ ದಳ್ಳಾಳಿ ಹತ್ರ ಮಾತಾಡಿ ವೈನಾಗಿರೋ ಮರೀನ ಖರೀದಿ ಮಾಡು. ಎಳೆ ಮರೀನ ಬಸ್ಸಲ್ಲಿ ಹಾಕ್ಕೊಂಬಾ...ನಡೆಸಿಗಿಡಿಸ್ಬೇಡ. ಬೆಳಿಗ್ಗೆ ರೊಟ್ಟಿ ಖಾರ ಬುತ್ತಿ ಕಟ್ಟಿಕೊಡ್ತಿನಿ...' ಎಂದು ಸಪೋರ್ಟು ಮಾಡಿದ್ದರಿಂದ ಮೂಗನಿಗೆ ಇನ್ನಷ್ಟು ಸಂತಸವಾಗಿತ್ತು. ನಿಂಗಮ್ಮನಿಗೆ ಮಗ ನರಸಿಮ್ಮನೆಂದರೆ ಪ್ರಾಣ. ಗಂಡ ಸತ್ತ ಮೇಲೆ ದಿಕ್ಕೆದಡೆ ತೌರುಮನೆ ದೇವರಾದ ಮುತ್ಯಲಮ್ಮನ ಮೇಲೆ ಬದುಕಿನ ಭಾರವನ್ನು ಹಾಕಿ ಮಗನನ್ನು ಬೆಳೆಸಿದ್ದಳು. ಕೊಡ್ಲಾಪುರದ ಅಣ್ಣಯ್ಯ ಕದುರಪ್ಪ ಆಗಾಗ ಬಂದು ತಂಗಿಯನ್ನು ವಿಚಾರಿಸಿಕೊಂಡು ಹೋಗುತ್ತಿದ್ದ. ಮೂಗ ತಾಯಿ ಮಾತನ್ನು ಅರ್ಗೀಸ್ ದಾಟುತ್ತಿರಲಿಲ್ಲ. ಅವನು ಯಾರೊಂದಿಗೂ ಹೆಚ್ಚಾಗಿ ಬೆರೆಯುತ್ತಿರಲಿಲ್ಲ, ಮಾತನಾಡುತ್ತಿರಲಿಲ್ಲ. ಹಾಗಾಗಿ ಅವನಿಗೆ 'ಮೂಗ' ಎಂಬ ಅಡ್ಡ ಹೆಸರು ಬಿತ್ತು. ಅದು ಹಾಗೆಯೇ ಓಟರ್‍ಸ್ ಲಿಸ್ಟ್‌ನಲ್ಲೂ ಸೇರಿಕೊಂಡಿತ್ತು. ತಾಯಿಯ ಜೊತೆ ಕೂಲಿಯ ಕೆಲಸಗಳಿಗೆ ಶ್ರದ್ಧೆಯಿಂದ ಹೋಗುತ್ತಿದ್ದರಿಂದ ಬೇಸಾಯದ ಕೆಲಸಗಳನ್ನು ಬೇಗನೆ ಕಲಿತು ದುಡಿಮೆಯಲ್ಲಿ ತಾಯಿಗೆ ಹೆಗಲು ಕೊಡುತ್ತಿದ್ದ. ಹಟ್ಟಿಯಲ್ಲಿ ಜನ ತಮ್ಮ ಮಕ್ಕಳಿಗೆ ಬುದ್ಧಿ ಹೇಳುವಾಗ ಮೂಗನ ಉದಾಹರಣೆಯನ್ನು ಕೊಡುತ್ತಾ 'ಆ ಮೂಗನ ಕಾಲು ಕೆಳಗೆ ತೂರಿ ಬುದ್ಧಿ ಬರ್ತದೆ' ಎನ್ನುತ್ತಿದ್ದರು. ಇತ್ತೀಚೆಗೆ ನಿಂಗಮ್ಮ ಮಗನಿಗೆ ಮದುವೆ ಮಾಡುವ ಆಲೋಚನೆಯಲ್ಲಿದ್ದು ಕೋಡ್ಲಾಪುರದ ಕದುರಪ್ಪಣ್ಣನ ಕೊನೆಯ ಮಗಳು ಉಂಗ್ಲಿಯನ್ನು ತಂದುಕೊಳ್ಳುವ ನಿರ್ಧಾರ ಮಾಡಿದ್ದಳು. ಸಂತೆಗೆ ಹೋಗುವ ಮೂಗನ ಸಂಭ್ರಮದ ಕ್ಷಣಗಳನ್ನು ಕಡೆಗೂ ಆಕಾಶದಲ್ಲಿ ತುಂಬಿದ್ದ ಸಹಸ್ರಾರು ನಕ್ಷತ್ರಗಳು ಮೆಲ್ಲಮೆಲ್ಲನೆ ನುಂಗಿಕೊಂಡು ಅದ್ಯಾವುದೋ ಹೊತ್ತಿನಲ್ಲಿ ನಿದ್ರಾದೇವಿಯು ಮೂಗನನ್ನು ಗಬಕ್ಕನೆ ಕವುಚಿ ಹಾಕಿಕೊಂಡಿದ್ದಳು.

ಗಂಡ ಸತ್ತ ಮೇಲೆ ದಿಕ್ಕೆದಡೆ ತೌರುಮನೆ ದೇವರಾದ ಮುತ್ಯಲಮ್ಮನ ಮೇಲೆ ಬದುಕಿನ ಭಾರವನ್ನು ಹಾಕಿ ಮಗನನ್ನು ಬೆಳೆಸಿದ್ದಳು. ಕೊಡ್ಲಾಪುರದ ಅಣ್ಣಯ್ಯ ಕದುರಪ್ಪ ಆಗಾಗ ಬಂದು ತಂಗಿಯನ್ನು ವಿಚಾರಿಸಿಕೊಂಡು ಹೋಗುತ್ತಿದ್ದ. ಮೂಗ ತಾಯಿ ಮಾತನ್ನು ಅರ್ಗೀಸ್ ದಾಟುತ್ತಿರಲಿಲ್ಲ. ಅವನು ಯಾರೊಂದಿಗೂ ಹೆಚ್ಚಾಗಿ ಬೆರೆಯುತ್ತಿರಲಿಲ್ಲ ಮಾತನಾಡುತ್ತಿರಲಿಲ್ಲ. ಹಾಗಾಗಿ ಅವನಿಗೆ 'ಮೂಗ' ಎಂಬ ಅಡ್ಡ ಹೆಸರು ಬಿತ್ತು. ಅದು ಹಾಗೆಯೇ ಓಟರ್‍ಸ್ ಲಿಸ್ಟ್‌ನಲ್ಲೂ ಸೇರಿಕೊಂಡಿತ್ತು.

ಅದೇ ಸಮಯದಲ್ಲಿ ಮೂಗನಿಗೆ ಘನವಾದ ಕನಸೊಂದು ಬಿತ್ತು. ಮೂಗ ಸುತ್ತೆಂಟು ಊರುಗಳಲ್ಲಿ ದೊಡ್ಡ ಕುರುಬನಾಗಿ ಹೆಸರುಗಳಿಸಿದ್ದಾನೆ. ನಿಂಗಮ್ಮ ಪೆಟಾರಿಯಿಂದ ದೊಡ್ಡ ದುಡ್ಡಿನ ಗಂಟನ್ನು ತೆಗೆದುಕೊಂಡು ಕ್ಯಾಮೇನಳ್ಳಿ ಜಾತ್ರೆಯಿಂದ ಒಂದು ಮಂದೆ ಮೇಕೆಯನ್ನು ಖರೀದಿಸಿ ತರಲು ಹೇಳುತ್ತಾಳೆ. ಮೂಗ ಕಮಾನು ಗಾಡಿಯಲ್ಲಿ ದುಡ್ಡಿನ ಗಂಟನ್ನು ಇಟ್ಟುಕೊಂಡು ಕ್ಯಾಮೇನಳ್ಳಿ ಜಾತ್ರೆಗೆ ಹೋಗುತ್ತಾನೆ. ಜಾತ್ರೆಯಲ್ಲಿ ಥರಾವರಿ ಕುರಿ, ಮೇಕೆಗಳ ಮಂದೆಯೊಂದನ್ನು ನೋಡುತ್ತಾನೆ. ಯಾರೋ ಒಬ್ಬ ಮಿರ ಮಿರ ಮಿನುಗುವ ಮೇಕೆಯೊಂದನ್ನು ವ್ಯಾಪಾರಕ್ಕೆ ಇಟ್ಟಿರುತ್ತಾನೆ. ಮೂಗ ಹತ್ತಿರ ಹೋಗಿ ನೋಡುತ್ತಾನೆ. ಆದೊಂದು ಅದ್ಭುತವಾದ ಬೆಳ್ಳಿಯ ಮೇಕೆಯಾಗಿರುತ್ತದೆ. ಮೂಗನನ್ನು ಕಂಡು ಪರಿಚಯ ಇರುವಂತೆ ಮೇಲೆ ಹಾರುತ್ತದೆ. ಮೂಗ ತಂದಿದ್ದ ದುಡ್ಡನ್ನೆಲ್ಲ ಕೊಟ್ಟು ಬೆಳ್ಳಿಯ ಮೇಕೆಯನ್ನು ಖರೀದಿಸುತ್ತಾನೆ. ಕಮಾನು ಗಾಡಿಯಲ್ಲಿ ಹತ್ತಿಸಿಕೊಂಡು ಊರಿನ ಕಡೆ ಸಾಗುತ್ತಾನೆ. ಅರ್ಧದಾರಿ ಸವೆದಿರಬೇಕು. ಕುದುರೆಗಳ ಮೇಲೆ ಬಂದ ರಾಜಭಟರು ಮೂಗನ ಗಾಡಿಯನ್ನು ಸುತ್ತುವರಿಯುತ್ತಾರೆ. ರಾಜನ ಬೆಳ್ಳಿಯ ಮೇಕೆಯನ್ನು ಮೂಗನೇ ಕದ್ದವನೆಂದು ಅಪರಾಧ ಹೊರಿಸಿ, ಮೂಗನನ್ನು ಸೆರೆಮನೆಗೆ ತಳ್ಳುತ್ತಾರೆ. ಭಟರು ಮೂಗನ, ಬೆನ್ನಿನ ಮೇಲೆ ಛಡಿಯೇಟನ್ನು ಭಾರಿಸುತ್ತಾರೆ. ಮೂಗ ನೋವನ್ನು ತಾಳಲಾರದೆ 'ಅಮ್ಮಾ..ಅಮ್ಮಾ..' ಎಂದು ಚೀರಾಡುತ್ತಾನೆ. ಅದು ಕನವರಿಕೆಯ ರೂಪ ತಾಳುತ್ತದೆ. ನಿಂಗಮ್ಮನಿಗೆ ಎಚ್ಚರವಾಗಿ 'ಯಾಕೊ ಮಗಾ ಕನವರಿಸಿಕೊಳ್ತಿದ್ದೀಯ..' ಎಂದು ಕೇಳುತ್ತಾಳೆ. ಆದರೆ ಮೂಗನಿಗೆ ಎಚ್ಚರವಾಗುವುದಿಲ್ಲ. ನಾಳೆ ಸಂತೆಗೋಗೊ ಸಿರೀಲಿ ಏನೋ ಕನಸು ಬಿದ್ದಿರಬೇಕೆಂದುಕೊಂಡು ನಿಂಗಮ್ಮ ಮತ್ತೆ ನಿದ್ದೆಗೆ ಜಾರುತ್ತಾಳೆ.

ಥಳಥಳ ಹೊಳೆಯುವ ತನ್ನವಳು ಕುದುರೆಗಳ ರಥದ ಮೇಲೆ ಕುಳಿತ ಸೂರ್ಯ ಪರಮಾತ್ಮನ ಯುದ್ಧಕ್ಕೆ ಹೊರಡುತ್ತಲೇ ಆತನ ಹಗಲೆಂಬ ಅನುದಿನದ ಪ್ರೇಯಸಿ ಬೆಳ್ಳಂಬೆಳಕಿನ ಗೆಜ್ಜೆಗಳನ್ನು ಕಟ್ಟಿಕೊಂಡು ಧರಣಿಯ ಮೇಲೆಲ್ಲ ತನ್ನ ನೃತ್ಯ ಪ್ರಾರಂಭಿಸಿದ್ದಳು. ನೃತ್ಯ ಮಾಡುವಾಗ ಬೆಳಕಿನ ಗೆಜ್ಜೆಯೊಂದು ಮೂಗನ ಮನೆಯಂಗಳದಲ್ಲೂ ಬಿದ್ದ ಪರಿಗೆ 'ಪರಮಾತ್ಮ' ಎಂದು ಧ್ಯಾನಿಸುತ್ತ ಎದ್ದ ಮೂಗನ ಕಿವಿ ಮತ್ತು ಮೂಗನ್ನು ಆವರಿಸಿದ ರಾಗಿರೊಟ್ಟಿಯನ್ನು ಸುಡುತ್ತಿದ್ದ 'ಸುಂಯ್' ಅನ್ನುವ ಸದ್ದು ಮತ್ತು 'ಘಮ್' ಎನ್ನುವ ವಾಸನೆ ರಾತ್ರಿ

ಬಹುಹೊತ್ತಿನವರೆಗೂ ಕಾಡಿದ ಸಂತೆಯ ನೆನಪಿನ ಸಂಭ್ರಮವನ್ನು ಜೀವಂತಗೊಳಿಸಿದ್ದವು. ತಲೆದಿಂಬು ಮತ್ತು ಗೋಣಿತಾಟನ್ನು ವಾಡೆಯ ಮೇಲೆ ಬಿಸಾಕಿ ಕ್ವಾಟಮ್ಮನ ಕುಂಟೆಯ ಕಡೆ ಹೋಗಿ ನಿರಾಳನಾದ. ಸ್ಕೂಲ್ ಮುಂದಿನ ಬೋರ್‌ವೆಲ್‌ನಲ್ಲಿ ಕೈಕಾಲು ಮುಖ ತೊಳೆದುಕೊಂಡು ಬರುವಷ್ಟರಲ್ಲಿ ನಿಂಗಮ್ಮ ಬುತ್ತಿ ರೆಡಿ ಮಾಡಿದ್ದಳು. ಎರಡು ರೊಟ್ಟಿತಿಂದವನಿಗೆ ಪೆಟಾರಿಯಿಂದ ಒಗೆದ ಪಂಚೆ ಮತ್ತು ಟವಲ್ಲು ಕೊಟ್ಟಳು. ಉಡಿದಾರಕ್ಕೆ ಕಟ್ಟಿಕೊಂಡಿದ್ದ ಗಂಟನ್ನು ತಡವಿ ಕೊಂಡು ರಾಂಪುರಕ್ಕೆ ಬಸ್ಸು ಹತ್ತಲು ಮೈಲಿದೂರದ ಬ್ಯಾಲ್ಯದ ದಾರಿಯನ್ನು ಹಿಡಿದ ಮೂಗನಿಗೆ 'ಜೋಪಾನ ಮಗಾ.. ಕತ್ಲಾಗೋದ್ರೊಳ್ಗೆ ಬಂದ್ ಬಿಡು..' ಎಂದು ನಿಂಗಮ್ಮ ಎಚ್ಚರಿಸಿದ್ದಳು.

ಬ್ಯಾಲ್ಯದ ಬಸ್ಟಾಂಡಿನಲ್ಲಿ ಜನ ಮಸ್ತಾಗಿದ್ದರು. ರಾಂಪುರದ ಸಂತೆಯಾದ್ದರಿಂದ ಮಧುಗಿರಿ ಕಡೆ ಯಿಂದ ಬಂದ ಬಿಲಾಲಿ ಬಸ್ಸು ಬಸುರಿ ಹೆಂಗಸಿನಂತೆ ಜನರಿಂದ ತುಂಬಿ ತುಳುಕುತ್ತಿತ್ತು. ಇಳಿಯುವವರು ಕಮ್ಮಿಯಿದ್ದು ಹತ್ತುವವರೇ ಜಾಸ್ತಿಯಿದ್ದರು. ಪರಿ ಚಯದ ಒಂದಿಬ್ಬರು 'ಏನೋ ಮೂಗ ಸಂತೆಗೆ ಹೊಂಟೇನೋ' 'ಹೆಣ್‌ಗಿಣ್ ನೋಡಾಕೆ ಹೋಗ್ತಿದೀಯ ಮೂಗ' ಎಂದು ಮಾತನಾಡಿಸಿದ್ದರು. ಮೂಗ ಮಾಮೂಲಿನಂತೆ ಮಾತನಾಡದೆ ಸಣ್ಣನೆಯ ನಗೆ ತೇಲಿಸಿದ್ದ. ವಿಪರೀತ ರಶ್ ಇದ್ದಿದ್ದರಿಂದ ಮೂಗ ಒಂದು ಕೈಯಿಂದ ಕಂಬಿಯನ್ನು ಹಿಡಿದಿದ್ದರೆ, ಇನ್ನೊಂದು ಕೈಯಿಂದ ಸೊಂಟದಲ್ಲಿದ್ದ ದುಡ್ಡಿನ ಗಂಟನ್ನು ಹಿಡಿದಿದ್ದ. ಹಾಗೂ ಹೀಗೂ ವಾಲಾಡುತ್ತಾ ಬಿಲಾಲಿ ಬಸ್ಸು ಅಕ್ಕಿರಾಂಪುರವನ್ನು ತಲುಪಿತ್ತು. ಒಮ್ಮೆಲೇ ಜನರೆಲ್ಲ ಖಾಲಿಯಾಗಿ ಬಸ್ಸು ಆಗ ತಾನೆ ಹಡೆದ ಬಾಣಂತಿ ಯಂತಾಯಿತು.

ಅಷ್ಟೊತ್ತಿಗಾಗಲೇ ಸಂತೆ ಮುಕ್ಕಾಲು ನೆರೆದಿತ್ತು. ಮುಖ್ಯ ಸಂತೆಯಿಂದ ಸ್ವಲ್ಪ ದೂರ ಹುಣಸೇ ಮರಗಳ ತೋಪಿನಲ್ಲಿ ದನಗಳ ವ್ಯಾಪಾರ ಒಂದು ಕಡೆ, ಕುರಿ ಮೇಕೆ ವ್ಯಾಪಾರ ಒಂದು ಕಡೆ, ಕೋಳಿ ವ್ಯಾಪಾರ ಇನ್ನೊಂದು ಕಡೆ ನಡೆಯುತ್ತಿತ್ತು. ಗೊಂದಳ್ಳಿ ಶೆಟ್ಟಿಯು ಅಷ್ಟೊತ್ತಿಗೇ ತೇಲಿಸಿ ರಾಶಿ ಹಾಕಿದ ಪಕೋಡದ ಘಮಘಮ ವಾಸನೆ ಸಂತೆಯನ್ನೆಲ್ಲ ವ್ಯಾಪಿಸಿತ್ತು. ಹೋಗುವಾಗ ಅಮ್ಮನಿಗೆ ಎರಡು ರೂಪಾಯಿ ಪಕೋಡ ಕಟ್ಟಿಸಿಕೊಂಡು ಹೋಗಬೇಕೆಂದು ನಿರ್ಧರಿಸಿದವನು ನಿಧಾನವಾಗಿ ಹುಣಸೇ ತೋಪಿನ ಕಡೆಗೆ ಹೆಜ್ಜೆ ಕಿತ್ತಿಟ್ಟ. ಮೇಕೆ ಖರೀದಿಸುವುದೋ ಇಲ್ಲ ಕುರಿ ಖರೀದಿಸುವುದೋ ಎಂದು ಗೊಂದಲಕ್ಕೆ ಬಿದ್ದವನು ನೆರೆದಿದ್ದ ಕುರಿ ಮೇಕೆಗಳನ್ನು ಒಂದು ಕಡೆಯಿಂದ ನೋಡುತ್ತಾ ನಡೆದ. ತಾಯಿ ಹೇಳಿದ ಮಾತು ನೆನಪಾಯಿತು. ಪರಿಚಯದವರಿಗಾಗಿ ತಡಕಾಡುತ್ತಿದ್ದಾಗ ಯಾರೋ ಹೆಗಲ ಮೇಲೆ ಕೈಇಟ್ಟಂತಾಗಿ ಅತ್ತ ನೋಡಿದ. ಕೋಡಗದಾಲದ ಪಿತ್ತೆ ನಾಗ ನಿಂತಿದ್ದ. ಪಿತ್ತೆನಾಗ ಮೂಗನಿಗೆ ದೂರದ ಸಂಬಂಧಿಯೇ ಆಗಬೇಕು. ಅವನು ದನಗಳ ದಳ್ಳಾಳಿ. ಸುತ್ತಮುತ್ತಲ ಸಂತೆಗಳಲ್ಲಿ ಅವನಿಲ್ಲದಿದ್ದರೆ ದನಗಳ ವ್ಯಾಪಾರಕ್ಕೆ ಖದರ್ ಇರುವುದಿಲ್ಲ.

'ಏನೋ ಮೂಗ ಸಂತೆಗೆ ಬಂದಿದ್ದು...' ವಿಚಾರಿಸಿದ್ದ ಪಿತ್ತೆನಾಗ.

'ಮೂಗ ಹೇಳಲೋ ಬೇಡವೋ ಎಂದು ಹಿಂದುಮುಂದು ನೋಡಿ.

'ಹೇಳೋ, ಏನ್ಸಮಾಚಾರ..?' ಏರು ಧ್ವನಿಯಲ್ಲಿ ಕೇಳಿದ್ದ.

'ಕುರಿ ಮರಿನೋ..ಮೇಕೆ ಮರಿನೋ ಬೇಕಿತ್ತು..' ಬಾಯಿಬಿಟ್ಟ.

'ಏನುಕ್ಲಾ....?' ಪ್ರಶ್ನಿಸಿದ್ದನಾಗ.

'ಹಿಂದ್ ಬಿಟ್ಕೊಂಡ್ ಸಾಕೋಕೆ...' ಹೇಳಿದ ಮೂಗ.

ಪಿತ್ತೆನಾಗ ಮೂಗನನ್ನು ಅಲ್ಲೆ ಇದ್ದ ಗುಡ್ಲು ಹೋಟೆಲ್‌ಗೆ ಕರೆದುಕೊಂಡು ಹೋಗಿ ಕಾಫಿ ಕೊಡಿಸಿ ಹೇಳಿದ: 'ನನ್ ಕೇಳಿದ್ರೆ ಮೇಕೆ ಮರಿನ ಸಾಕೋದು ಒಳ್ಳೇದು. ಥಂಡಿಗೆ ಕುರಿ ತಟ್ಕಲ್ಲ, ಒಳ್ಳೆ ಮೇಕೆ ಮರಿನ ಒಂದರ‍್ಡೊರ್ಷ ಸಾಕಿದ್ರೆ ಎರ‍್ಡು ಸಾವ್ರ ಗ್ಯಾರಂಟಿ..' ನಾಗನ ಮಾತುಗಳು ಮೂಗನ ಮನಸ್ಸಿಗೆ ನಾಟಿದ್ದವು.

ಥಳಥಳ ಹೊಳೆಯುವ ತನ್ನವಳು ಕುದುರೆಗಳ ರಥದ ಮೇಲೆ ಕುಳಿತ ಸೂರ್ಯ ಪರಮಾತ್ಮನ ಯುದ್ಧಕ್ಕೆ ಹೊರಡುತ್ತಲೇ ಆತನ ಹಗಲೆಂಬ ಅನುದಿನದ ಪ್ರೇಯಸಿ ಬೆಳ್ಳಂಬೆಳಕಿನ ಗೆಜ್ಜೆಗಳನ್ನು ಕಟ್ಟಿಕೊಂಡು ಧರಣಿಯ ಮೇಲೆಲ್ಲ ತನ್ನ ನೃತ್ಯ ಪ್ರಾರಂಭಿಸಿದ್ದಳು. ನೃತ್ಯ ಮಾಡುವಾಗ ಬೆಳಕಿನ ಗೆಜ್ಜೆಯೊಂದು ಮೂಗನ ಮನೆಯಂಗಳದಲ್ಲೂ ಬಿದ್ದ ಪರಿಗೆ 'ಪರಮಾತ್ಮ' ಎಂದು ಧ್ಯಾನಿಸುತ್ತ ಎದ್ದ ಮೂಗನ ಕಿವಿ ಮತ್ತು ಮೂಗನ್ನು ಆವರಿಸಿದ ರಾಗಿರೊಟ್ಟಿಯನ್ನು ಸುಡುತ್ತಿದ್ದ 'ಸುಂಯ್' ಅನ್ನುವ ಸದ್ದು ಮತ್ತು 'ಘಮ್' ಎನ್ನುವ ವಾಸನೆ ರಾತ್ರಿ ಬಹುಹೊತ್ತಿನವರೆಗೂ ಕಾಡಿದ ಸಂತೆಯ ನೆನಪಿನ ಸಂಭ್ರಮವನ್ನು ಜೀವಂತಗೊಳಿಸಿದ್ದವು.

'ನೀನ ಹೇಳ್ದಂಗೆ ಆಯ್ತು ಬಿಡಣ್ಣ..' ಎಂದು ಒಪ್ಪಿಗೆ ಸೂಚಿಸಿದ.

'ಎಷ್ಟುತಂದಿದ್ದೀಯ?'

'ಒಂದ್ಮೂನ್ನೂರೈತೆ..' ಬುದ್ಧಿವಂತಿಕೆಯನ್ನು ತೋರಿದ್ದ ಮೂಗ ನಲವತ್ತೆಂಟು ರೂಪಾಯಿಗಳನ್ನು ತೇಲಿಸಿ ಬಿಟ್ಟಿದ್ದ.

'ಓಹ್..ಒಳ್ಳೆ ಮ್ಯಾಮ್ಮರಿ ಮರೀನೆ ಖರೀದಿಸ್ಬೋದು. ನೀನು ಸಂತೆನಾಗ ಓಡಾಡ್ಕೊಂಡ್ ಬಾ. ಯಾರ‍್ಗೋ ಒಂದ್ ಜೊತೆ ಎತ್ತು ಕೊಡಿಸಿ ಬರ‍್ತೀನಿ...' ಎಂದು ಪಿತ್ತೆನಾಗ ದನಗಳ ಹಿಂಡಿನ ಕಡೆ ನಡೆದ.

ಪಿತ್ತೆನಾಗನು ಬರುವಷ್ಟರಲ್ಲಿ ಒಂದು ಮೇಕೆ ಮರೀನ ನೋಡಿಟ್ಟರೋಣ ಅಂತ ಮೂಗ ಆ ಕಡೆ ನಡೆದ. ಒಂದೊಂದು ಮರಿಯನ್ನೂ ಅಧ್ಯಯನ ಮಾಡುವವನಂತೆ ನೋಡುತ್ತಿದ್ದವನಿಗೆ ಅಲ್ಲೆ ವ್ಯಾಪಾರ ಮಾಡುತ್ತ ನಿಂತಿದ್ದ ಮುದ್ದಯ್ಯನ ಪಾಳ್ಯದ ಕೂರೆಗಂಟ್ಲ್ ನರಸೀಯಪ್ಪ ಕಾಣಿ ಸಿದ. ಅವನೂ ತಾಯಿ ಕಡೆಯಿಂದ ಹತ್ತಿರದ ಸಂಬಂಧಿ ಮೂಗನನ್ನು ಕಣ್ಣಲ್ಲೆ ಕರೆದಿದ್ದ. ಸಮೀಪ ಹೋದ ಮೂಗನನ್ನು 'ಅದೇನ್ ಇವೊತ್ತು ಸಂತೆ ಹತ್ತಿದ್ದೀಯ..' ಎಂದ.

'ಮೇಕೆ ಮರಿ ಬೇಕಾಗಿತ್ತು ಸಾಕೋದಕ್ಕೆ..' ಮೂಗನೆಂದ.

'ಖರೀದಿಸಿ ಕೊಡ್ಬೇಕಾ..?' ಕೇಳಿದ ನರಸೀಯಪ್ಪ.

'ಪಿತ್ತೆನಾಗಣ್ಣ ಕೊಡಿಸ್ತೀನಿ ಅಂತ ಹೇಳವ್ನೆ..' ಎಂದ ಮೂಗ.

'ಪಿತ್ತೆನಾಗ್ನೆ? ಬಲ್ ತಾರತಿಗ್ನಿ ನನ್ಮಗ ಅವ್ನು. ದನದ ದಳ್ಳಾಳಿ ಕುರಿ ಮೇಕೆ ವ್ಯಾಪಾರ ಮಾಡಂಗಿಲ್ಲ. ಅದು ವ್ಯಾಪಾರದ ನಿಯಮ. ಬರಿ ಗಾಳಿಗಂಟ್ಲ್ ವ್ಯಾಪಾರ ಅವುಂದು. ಎಲ್ಲಾ ಸಂತೆಗ್ಳಲ್ಲೂ ಡೂಪ್ಲಿಕೇಟ್ ಅಂತ ಹೆಸರು ತಂಗಡವ್ನೆ. ಬೇಕಾದ್ರೆ ಯಾರತ್ರನಾದ್ರೂ ಕೇಳು. ಒಳ್ಳೆ ಮರೀನ ತೆಗ್ದು ಕೊಡ್ತೀನಿ. ಮೂರ್‌ಗಂಟೆ ಹಾಲಿನ ಲಾರಿಗೆ ಹಾಕ್ಕೊಂಡೋಗು ಬೆಳಕಿದ್ದಂಗೆ ಊರು ಸೇರ‍್ಬೋದು..' ಎಂದವನ ಮಾತಿಗೆ ಹೂಂಗುಟ್ಟಿದ ಮೂಗ. ಪಿತ್ತೆನಾಗನಿಗಿಂತಲೂ ನರಸೀಯಪ್ಪ ಅವನಿಗೆ ಹೆಚ್ಚು ಪರಿಚಯವಿದ್ದ. ಅಮ್ಮ ಕಟ್ಟಿಕೊಟ್ಟಿದ್ದ ಬುತ್ತಿಯನ್ನು ಬಿಚ್ಚಿ ನರಸೀಯಪ್ಪನಿಗೂ ಎರಡು ರೊಟ್ಟಿಗಳನ್ನು ಕೊಟ್ಟು ತಾನೂ ಎರಡು ತಿಂದಿದ್ದ. ಆ ಕಡೆಗೆ ಬಂದ ಪಿತ್ತೆನಾಗನು ಮೂಗನ ಜೊತೆ ನರಸೀಯಪ್ಪನಿರುವುದನ್ನು ನೋಡಿ 'ಕೆಲ್ಸ ಕೆಡ್ತು' ಅಂತ ಬೇರೆ ದಿಕ್ಕಿಗೆ ಹೊರಟ. ಅವನು ಹೋಗುವುದನ್ನು ಮೂಗನಿಗೆ ತೋರಿಸಿ ನರಸೀಯಪ್ಪ ನಕ್ಕ.

ನರಸೀಯಪ್ಪ ಸೀರಿಯಸ್ಸಾಗಿ ಪರಿಶೀಲಿಸಿ ಒಂದು ಐನಾತಿ ಮರಿಯನ್ನ ಆರಿಸಿದ. ಮೂನ್ನೂರು ಎಪ್ಪತ್ತು ರೂಪಾಯಿ ಬೆಲೆ ಹೇಳಿದ ಅದರ ಮಾಲೀಕ. ನರಸೀಯಪ್ಪ ದಳ್ಳಾಳಿ ಮಾತು ಗಳಿಂದ ಮೂನ್ನೂರು ಹತ್ತು ರೂಪಾಯಿಗೆ ಕೊಡಲು ಒಪ್ಪಿದ. ಮೂಗ ಉಡಿದಾರದಿಂದ ಗಂಟನ್ನು ಬಿಚ್ಚಿ ಮೂನ್ನೂರ ಹತ್ತು ರೂಪಾಯಿ ಎಣಿಸಿ ನರಸೀಯಪ್ಪನ ಕೈಗೆ ಕೊಟ್ಟ. ನರಸೀಯಪ್ಪ ಅದನ್ನು ಮತ್ತೊಮ್ಮೆ ಎಣಿಸಿ ಮೇಕೆ ಮರಿಯ ಒಡೆಯನಿಗೆ ಕೊಟ್ಟ. ಮೇಕೆ ಮರಿಯ ಹಗ್ಗವನ್ನು ಮೂಗನ ಕೈಗೆ ಕೊಡಲಾಯಿತು. ಮೂಗ ತಡೆಯಲಾರದೆ ಮೇಕೆಯ ಬೆನ್ನಿನ ಮೇಲೆ ಕೈಯ್ಯಾಡಿಸಿದ. ಅದು ಚಂಗನೆ ನೆಗೆದಿತ್ತು.

'ಒಂದೆರ‍್ಡು ದಿನ, ವಾಸ್ನೆ ಹಿಡ್ಯೋಗಂಟ..' ಎಂದು ಅದರ ಮಾಜಿ ಒಡೆಯ ಹಾಲಿ ಒಡೆಯನಾದ ಮೂಗನಿಗೆ ಹೇಳಿದ್ದ. ನರಸೀಯಪ್ಪನಿಗೆ ಬೇಡಬೇಡವೆಂದರೂ ಹದಿನೈದು ರೂಪಾಯಿ ಕೊಟ್ಟ ಮೂಗ ಪಕೋಡದ ಜೊತೆಗೆ ಎರಡು ಸೇರು ಬುರುಗು, ಅರ್‌ಪಾವು ಕಡ್ಲೆ ಪಪ್ಪು ಚಟಾಕು ಖಾರ ಹಾಕಿಸಿಕೊಂಡು ಟವಲ್ಲಿನಲ್ಲಿ ಗಂಟು ಸುತ್ತಿಕೊಂಡು ಮೇಕೆ ಮರಿಯನ್ನು ಎಳೆದುಕೊಂಡು ಬಸ್ಟ್ಯಾಂಡಿಗೆ ಬರುವುದಕ್ಕೂ ಹಾಲು ಲಾರಿ ಬರುವುದಕ್ಕೂ ಒಂದೇ ಆಯಿತು. ನರಸೀಯಪ್ಪನೂ ಅಲ್ಲಿಯವರೆಗೆ ಜೊತೆಯಲ್ಲಿ ಬಂದಿದ್ದರಿಂದ ಮೂಗನಿಗೆ ಲಾರಿ ಹತ್ತುವುದು ಕಷ್ಟವಾಗಲಿಲ್ಲ. 'ಎಷ್ಟ್ ಬಿತ್ತು' 'ಒಳ್ಳೆ ವೈನಾಗೆ ಐತೆ, ಸಾಕಿದ್ರೆ ದನದ್ ಥರ ಆಗ್ತೈತೆ' 'ಹೆಣ್ ಮೇಕೆನೊ ಹೋತಾನೊ' 'ಚನ್ನಾಗಿ ಮೇಯ್ಸಿದ್ರೆ ಮುಂದಿನ ಉಗಾದಿಗೆ ಒಂದೂವರೆ ಬಾಳ್ತೈತೆ..' ಇತ್ಯಾದಿಯಾಗಿ ಲಾರಿಯಲ್ಲಿದ್ದವರು ಮೂಗನನ್ನು ಮಾತನಾಡಿಸಿದ್ದರು. ಅವರ ಮಾತುಗಳು ಮೂಗನಲ್ಲಿ ಇನ್ನಷ್ಟು ಹುರುಪು ಮತ್ತು

ಸಡಗರವನ್ನು ಮೂಡಿಸಿ ಮೇಕೆ ಮರಿಯನ್ನು ನೋಡುತ್ತಾ ಮನೆಗೆ ಹೋದ ಕೂಡಲೇ ಮೇಕೆಗೆ ದೃಷ್ಟಿ ನಿವಾಳಿಸಬೇಕೆಂದುಕೊಂಡು.

ಮೂಗ ಮೇಕೆ ಮರಿಯನ್ನು ಖರೀದಿಸಿ ತಂದಿರುವುದು ತಾಸರ್ಧದಲ್ಲಿ ಇಡೀ ಹಟ್ಟಿಗೆ ಬಿಸಿ ಸುದ್ದಿಯಾಗಿ ತಗುಲಿಕೊಂಡಿತ್ತು. ಕೆಲವು ಗಂಡಸರು ಮೂಗನ ಹಟ್ಟಿಯ ಕಡೆ ಎಡತಾಕಿದ್ದರು. ಮೇಕೆ ಬಂದ ಖುಷಿಯ ಸಂದರ್ಭಕ್ಕೆಂದು ಅರ್ಧ ತಪ್ಪಲೆ ಟೀ ಕಾಯಿಸಿದ ನಿಂಗಮ್ಮ ಬಂದವರಿಗೆಲ್ಲ ಅರ್ಧರ್ಧ ಗ್ಲಾಸು ಟೀ ಕೊಟ್ಟಿದ್ದಳು. ತಾನೇ ಕೂಡಿಟ್ಟ ಹಣದಿಂದ ಮೂಗ ಮೇಕೆ ಖರೀದಿಸಿರುವ ರಹಸ್ಯ ಬಯಲಾಗಿ ಹಿರಿಯರು ಮೂಗನನ್ನು ಕೊಂಡಾಡಿದ್ದರು. ತಂದೆ ಇಲ್ಲದಿದ್ದರೂ ಮೂಗ ದಾರಿ ತಪ್ಪದೆ ಹೇಗೆ ಬದುಕುತ್ತಿದ್ದಾನೆ ನೋಡಿರೆಂದು ತಮ್ಮ ತಮ್ಮ ಮಕ್ಕಳಿಗೆ ಬುದ್ಧಿವಾದ ಹೇಳಿದ್ದರು. ನಿಂಗಮ್ಮ ಗರಿ ಪೊರಕೆಯಿಂದ ಮೇಕೆಗೆ ದೃಷ್ಟಿ ತೆಗೆದಿದ್ದಳು. 'ನರಸೀಯಪ್ಪ ತಕ್ಕಡಿ ಬಿಕ್ಕಡಿ ಮನುಷ್ಯ ಅಲ್ಲ, ಒಳ್ಳೆ ಮೇಕೆ ಮರೀನ ಖರೀದಿ ಮಾಡಿ ಕಳಿಸೆವ್ನೆ.' ಎಂದು ನಿಂಗಮ್ಮ ದಳ್ಳಾಳಿ ನರಸೀಯಪ್ಪನನ್ನು ಕೊಂಡಾಡಿದ್ದಳು. ಇನ್ನು ಮೇಲೆ ಮೂಗನೇ ತನ್ನ ಒಡೆಯನೆಂದು ಮೇಕೆಗೆ ತಿಳಿದುಹೋಗಿದ್ದರಿಂದ, ಅದು ಅವನೊಂದಿಗೆ ಚೆಲ್ಲಾಟದಲ್ಲಿ ತೊಡಗಿತ್ತು.

ಮೂಗ ಮೇಕೆಯ ಕೊರಳಿಗೊಂದು ಹೊಸ ಕಣ್ಣಿ ಮತ್ತು ಹಗ್ಗವನ್ನು ತಂದು ಕಟ್ಟಿದ. ಅದಕ್ಕೊಂದು ಒಳ್ಳೆಯ ಹೆಸರಿಡಬೇಕೆಂದು ಜಿಜ್ಞಾಸೆ ಮೂಡಿತು. ಬ್ಯಾಲ್ಯದ ಟೆಂಟಿನಲ್ಲಿ ನೋಡಿದ ಅನೇಕ ಸಿನಿಮಾಗಳು ನೆನಪಾದವು. ಅವನಿಗೆ ತುಂಬಾ ಹುಚ್ಚು ಹಿಡಿಸಿದ್ದ ಸಿನಿಮಾವೆಂದರೆ ಸುವರ್ಣ ಸುಂದರಿ. ಅದನ್ನು ಮೂರು ನಾಲ್ಕು ಬಾರಿ ನೋಡಿದ್ದ. ಅದರ ನಾಯಕಿ ಅಂಜಲಿ ಒಂದೆರಡು ಬಾರಿ ಮೂಗನ ಕನಸಿಗೂ ಬಂದಿದ್ದಳು. ಆದರೆ ಗಂಡು ಮೇಕೆಗೆ ಅಂಜಲಿ ಎನ್ನುವ ಹೆಸರು ಸರಿ ಕಾಣುವುದಿಲ್ಲವೆಂದು ತನ್ನ ಆರಾಧ್ಯ ದೈವವಾದ ಎನ್.ಟಿ.ರಾಮರಾವ್‌ನ ಹೆಸರನ್ನು ಮೊಟಕುಗೊಳಿಸಿ 'ರಾಮ' ಎಂದು ನಾಮಕರಣ ಮಾಡಿದ. ತಾನು ಕೂಲಿಗೆ ಹೋಗುವ ಕಡೆಗೆಲ್ಲಾ ಜೊತೆಯಲ್ಲಿ ಕರೆದುಕೊಂಡು ಹೋಗಿ, ನೆರಳಲ್ಲಿ ಕಟ್ಟಿ ಅಗಸೆ ಸೊಪ್ಪನ್ನೊ ಬೇವಿನ ಸೊಪ್ಪನ್ನೊ ತಂದು ಹಾಕುತ್ತಿದ್ದ. ತಾನು ಉಣ್ಣುವಾಗ ಕಡೆಯೆರಡು ತುತ್ತನ್ನು ಸಾರಿನಲ್ಲಿ ಅದ್ದಿ ಅದಕ್ಕೆ ತಿನ್ನಿಸುತ್ತಿದ್ದ. ಹಾಲು ಡೈರಿ ಸೆಕ್ರೇಟರಿ ರಾಮದಾಸಪ್ಪ ಹೇಳಿದ್ದರಿಂದ ಬ್ಯಾಲ್ಯಕ್ಕೆ ಹೋಗಿ ಎರಡು ಕೆ.ಜಿ. ಕಡ್ಲೆ ಹಿಂಡಿಯನ್ನು ತಂದು ದಿನಾ ಎರಡೆರಡು ಚಕ್ಕೆ ತಿನ್ನಿಸಿದ. ಅದು ಹಿಂಡಿಯನ್ನು ಕಟುಂ ಕಟುಂ ಅಂತ ತಿನ್ನುತ್ತಿದ್ದರೆ, ಮೂಗ ತಾನು ಮಿಠಾಯಿ ತಿಂದಷ್ಟು ಆನಂದ ಪಡುತ್ತಿದ್ದ. ಹೀಗೆ ದಿನ ಕಳೆದಂತೆ ಮೂಗ ಮತ್ತು ಮೇಕೆಯ ಒಡನಾಟ ದಟ್ಟವಾಗತೊಡಗಿತ್ತು. ಅವನು ಓಡಿದರೆ ಓಡುತ್ತಿತ್ತು; ನಿಂತರೆ ನಿಲ್ಲುತ್ತಿತ್ತು. 'ರಾಮ' ಎಂದು ಮೂಗ ಕೂಗಿದರೆ ಬಾಲ ಅಲ್ಲಾಡಿಸಿ 'ಉಂ..ಮ್ಮೆ..' ಎಂದು ಕೂಗುತ್ತಿತ್ತು. ಅಷ್ಟೇಕೆ, ರಾತ್ರಿಹೊತ್ತು ಅವನ ಪಕ್ಕದಲ್ಲೆ ಮಲಗುತ್ತಿತ್ತು.

ಮೇಕೆ ಮರಿಯನ್ನು ತಂದು ಎರಡು ತಿಂಗಳು ಹೇಗೆ ಕಳೆಯಿತೋ ಮೂಗನಿಗೆ ತಿಳಿಯಲೇ ಇಲ್ಲ. ಒಂದು ದಿನ ಗುಲ್ಲೀರಣ್ಣನ ರಾಗಿ ಹೊಲದಲ್ಲಿ ಕಳೆ ಕೀಳಲು ಹೋದಾಗ, ಮೇಕೆ ಮೇಯದೆ ಮಂಕಾಗಿ ನಿಂತಿತ್ತು. ಮೂಗ ಕಳವಳಗೊಂಡಿದ್ದ. ಗುಲ್ಲೀರಣ್ಣನೂ ಹೀಗೆ ಅನೇಕ ಬಾರಿ ಕುರಿ-ಮೇಕೆ ಗಳನ್ನು ಹಿಂದೆ ಬಿಟ್ಟುಕೊಂಡು ಮೇಯಿಸಿರುವ ಮನುಷ್ಯ. ಗುಲ್ಲೀರಣ್ಣ ಮೇಕೆಯನ್ನು ಮುಟ್ಟಿನೋಡಿ 'ಲೇ ಮೂಗ, ದೊಡ್ಡಸಳ್ಳಿಗೆ ಹೋಗಿ ಮೇಕೆ ಬೀಜ ಬಡಿಸ್ಕೊಂಡ್ ಬಾ. ಇಲ್ಲಾಂದ್ರೆ ಲಮ್ಡಿ ಮೈ ಕಟ್ಟಲ್ಲ..' ಎಂದು ಹೇಳಿದ್ದ. ಮೂಗ ಮನೆಗೆ ಬಂದು ತಾಯಿಯ ಹತ್ತಿರ ಹೇಳಿದಾಗ 'ಊನ್ಲಾ ಮಗ, ಮರ್ತಿದ್ದೆ ನೋಡು. ಬೀಜ ಹಾಕಿಸ್ಕೊಂಡ್ ಬರ್ದಿದ್ರೆ ಉಂಡದ್ದು ಊರ್ಜಿತವಾಗಲ್ಲ. ಎಷ್ಟೇ ಆಗ್ಲಿ ಈರಣ್ಣ ಅನುಭವಸ್ಥ' ಎಂದು ನಿಂಗಮ್ಮ ಗುಲ್ಲೀರಣ್ಣನ ಮಾತನ್ನು ಅನುಮೋದಿಸಿದ್ದಳು.



ಮೇಕೆ ಮರಿಯನ್ನು ತಂದು ಎರಡು ತಿಂಗಳು ಹೇಗೆ ಕಳೆಯಿತೋ ಮೂಗನಿಗೆ ತಿಳಿಯಲೇ ಇಲ್ಲ. ಒಂದು ದಿನ ಗುಲ್ಲೀರಣ್ಣನ ರಾಗಿ ಹೊಲದಲ್ಲಿ ಕಳೆ ಕೀಳಲು ಹೋದಾಗ, ಮೇಕೆ ಮೇಯದೆ ಮಂಕಾಗಿ ನಿಂತಿತ್ತು. ಮೂಗ ಕಳವಳಗೊಂಡಿದ್ದ. ಗುಲ್ಲೀರಣ್ಣನೂ ಹೀಗೆ ಅನೇಕ ಬಾರಿ ಕುರಿ-ಮೇಕೆಗಳನ್ನು ಹಿಂದೆ ಬಿಟ್ಟುಕೊಂಡು ಮೇಯಿಸಿರುವ ಮನುಷ್ಯ. ಗುಲ್ಲೀರಣ್ಣ ಮೇಕೆಯನ್ನು ಮುಟ್ಟಿನೋಡಿ 'ಲೇ ಮೂಗ, ದೊಡ್ಡಸಳ್ಳಿಗೆ ಹೋಗಿ ಮೇಕೆ ಬೀಜ ಬಡಿಸ್ಕೊಂಡ್ ಬಾ. ಇಲ್ಲಾಂದ್ರೆ ಲಮ್ಡಿ ಮೈ ಕಟ್ಟಲ್ಲ..' ಎಂದು ಹೇಳಿದ್ದ. ಮೂಗ ಮನೆಗೆ ಬಂದು ತಾಯಿಯ ಹತ್ತಿರ ಹೇಳಿದಾಗ 'ಊನ್ಲಾ ಮಗ, ಮರ್ತಿದ್ದೆ ನೋಡು. ಬೀಜ ಹಾಕಿಸ್ಕೊಂಡ್ ಬರ್ದಿದ್ರೆ ಉಂಡದ್ದು ಊರ್ಜಿತವಾಗಲ್ಲ. ಎಷ್ಟೇ ಆಗ್ಲಿ ಈರಣ್ಣ ಅನುಭವಸ್ಥ' ಎಂದು ನಿಂಗಮ್ಮ ಗುಲ್ಲೀರಣ್ಣನ ಮಾತನ್ನು ಅನುಮೋದಿಸಿದ್ದಳು.

ಮಾರನೆಯ ದಿನ ಬೆಳಿಗ್ಗೆ ತಂಗಳುಂಡು ಮೂಗ ಗುಮಕಾರನ ಹಳ್ಳಿ ಕಾಲುವೆಗುಂಟಾ ದೊಡ್ಡಸಳ್ಳಿಯ ದಾರಿ ಹಿಡಿದ. ಅವನ ಹಿಂದೆ ಮೇಕೆ ತಲೆ ತಗ್ಗಿಸಿಕೊಂಡು ನಡೆಯುತ್ತಿತ್ತು. ದೊಡ್ಡಸಳ್ಳಿಯ ಬುಡೇನ್ ಸಾಬಿ ಮೇಕೆ, ಕುರಿ , ಹೋರಿಗಳಿಗೆ ಬೀಜ ಹೊಡೆಯುವುದರಲ್ಲಿ ಸುತ್ತಮುತ್ತಲಿಗೆ ಹೆಸರು ಗಳಿಸಿದ್ದ. ಬೀಜ ಹೊಡೆಯುವುದಕ್ಕೆ ಸಾಬಿ ಹತ್ತು ರೂಪಾಯಿ ತೆಗೆದುಕೊಳ್ಳುತ್ತಿದ್ದ. ಮೂಗ ಸಾಬಿಯ ಮನೆಯ ಮುಂದಿದ್ದ ಗೂಟಕ್ಕೆ ಮೇಕೆಯನ್ನು ಕಟ್ಟಿದ. ಸಾಬಿಯ ಮಕ್ಕಳಿಬ್ಬರು ಮೇಕೆಯ ಕಾಲುಗಳನ್ನು ಹಿಡಿದುಕೊಂಡರು. ಮೂಗ ಅದರ ತಲೆಯನ್ನು ಹಿಡಿದುಕೊಂಡ. ಸಾಬಿ ಉಪಾಯವಾಗಿ ಇಕ್ಕಳದಿಂದ ಕಸಿ ಮಾಡಿದ್ದ. ನೋವು ತಾಳಲಾರದೆ ಮೇಕೆ 'ಉ ಊ . ಮೇ' ಎಂದು ಅರಚಿಕೊಂಡು ಕಣ್ಣಲ್ಲಿ ನೀರು ಹಾಕಿತ್ತು. ಆ ದೃಶ್ಯವನ್ನು ನೋಡಿ ಮೂಗನ ಕಣ್ಣುಗಳು ತೇವಗೊಂಡಿದ್ದವು. 'ನಿಧಾನಕ್ಕೆ ನಡೆಸಿಕೊಂಡು ಹೋಗು. ಮೂರ್ ದಿನ ಕಡ್ಲೆ ಹಿಂಡಿ, ಅಗ್ಸೆ ಸೊಪ್ಪು ಹಾಕ್ಬೇಡ. ಒಳ್ಳೆ ಕುದ್ರೆ ಬೆಳ್ದಂಗೆ ಬೆಳಿತದೆ. ಅಂದಂಗೆ ರಾಂಪುರದಾಗೆ ತಂದಾ? ಎಷ್ಟು ಬಿತ್ತು..' ಎಂದು ವಿಚಾರಿಸಿಕೊಂಡ ಸಾಬಿ. 'ಹೂಂ.. ಸಾಬಣ್ಣ ಮೂನ್ನೂರು ಬಿತ್ತು..' ಎಂದ. 'ಮೇಕೆಗೆ ಬೀಜ ಹೊಡುದ್ರೆ ನಿನ್ ಕಣ್ಣಿನಾಗೆ ನೀರು ಬಂದೈತಲ್ಲೊ. ಒಳ್ಳೆ ಏನಾತಿ ಆಸಾಮಿ ನೀನು. ಯಜಮಾನ ಅಂದ್ರೆ ಯಿಂಗಿರ್ಬೇಕು ನೋಡು...' ಎಂದು ಬೀಳ್ಕೊಟ್ಟ ಸಾಬಿ.

ಬೀಜ ಹೊಡೆಸಿದ ಮೂರು ದಿನ ಮೇಕೆ ಮಂಕಾಗಿತ್ತು. ಅಕ್ಕರೆಯಿಂದ ಏನನ್ನೂ ತಿನ್ನುತ್ತಿರಲಿಲ್ಲ. ಮೂಗ ಮತ್ತು ನಿಂಗಮ್ಮ ಇಬ್ಬರೂ ಗಾಬರಿಗೊಂಡಿದ್ದರು. ಆದರೆ ನಾಲ್ಕನೆಯ ದಿನದಿಂದ ಮೇಕೆ ಚಂಗನೆ ಎಗರಾಡಿಕೊಂಡು ಮೂಗನ ಜೊತೆ ಮಾಮೂಲಿಯಾಗಿ ತಿರುಗಾಡತೊಡಗಿತ್ತು. ಮೂಗನಿಗಂತೂ ದಿನ ಸವೆಯುವುದೇ ತಿಳಿಯುತ್ತಿರಲಿಲ್ಲ. ಮೇಕೆಯನ್ನು ಕೊಂಡ್ಬಾಪಿ ದಿನ್ನೆಗೆ, ಹೊಸಳ್ಳಕ್ಕೆ ಕರೆದುಕೊಂಡು ಹೋಗಿ ಚೆನ್ನಾಗಿ ಮೇಯಿಸಿಕೊಂಡು ಬರುತ್ತಿದ್ದ. ವಾರಕ್ಕೊಮ್ಮೆ ಕುಂಟೆಯಲ್ಲಿಯೇ, ಯಾರದಾದರೂ ಪಂಪ್‌ಸೆಟ್ ಹತ್ತಿರವೋ ಮೈಸೂರು ಸ್ಯಾಂಡಲ್ ಸೋಪಿನಿಂದ ಮೇಕೆಯ ಮೈ ತೊಳೆಯುತ್ತಿದ್ದ. ಕಿವಿ ಮತ್ತು ತೊಡೆ ಸಂದಿಯಲ್ಲಿರುತ್ತಿದ್ದ ಪಿಡದಗಳನ್ನು ಕಿತ್ತು ಸ್ವಚ್ಛ ಮಾಡುತ್ತಿದ್ದ. ಹಟ್ಟಿಯ ಜನರೆಲ್ಲ ಮೂಗನ ಶ್ರದ್ಧೆಯನ್ನು ಕಂಡು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದರು. ಚಂದಮಾಮದ ಕಥೆಗಳಲ್ಲಿ ನಾಳೆ ಬೆಳೆಯುವ ರಾಜಕುಮಾರ ರಾಜಕುಮಾರಿಯರು ಇಂದೇ ಬೆಳೆಯುವಂತೆ ಮೇಕೆಯು ಸೊಂಪಾಗಿ ಬೆಳೆಯತೊಡಗಿತ್ತು. ಹೀಗೆ ಮೇಕೆಯೊಂದು ಮೂಗನ ಮನೆಯಲ್ಲಿ ನರ ಮನುಷ್ಯನೊಬ್ಬನ

ಸ್ಥಾನವನ್ನು ಪಡೆದುಕೊಂಡು ಬೆಳೆಯುತ್ತಿರಬೇಕಾದರೆ, ಹಟ್ಟಿಯಲ್ಲಿ ಅವರ ಈ ಪರಿಯ ಕಂಡು ಕರುಬಿದವರೂ ಉಂಟು. ಆನಂದ ಪಟ್ಟವರೂ ಉಂಟು. ಆಗಾಗ ಬ್ಯಾಲ್ಯದ ಟೂರಿಂಗ್ ಟಾಕೀಸಿನಲ್ಲಿ ಒಳ್ಳೆ ಸಿನಿಮಾ ಹಾಕಿದಾಗ ಹೋಗುತ್ತಿದ್ದ ಮೂಗ, ಮೇಕೆ ಬಂಧಾಗಿನಿಂದ ಟೆಂಟಿಗೆ ಕಾಲಿಟ್ಟಿರಲಿಲ್ಲ. ಇಂತಹ ಅನ್ಯೋನ್ಯವಾದ ಸಂಬಂಧಕ್ಕೆ ಅದೊಂದು ಕೆಟ್ಟ ಘಳಿಗೆ ಎಳ್ಳು ನೀರನ್ನು ಬಿಟ್ಟಿತ್ತು.

ಅವೊತ್ತು ನಿಂಗಮ್ಮ ಮತ್ತು ಮೂಗ ಇಬ್ಬರೂ ಭೂಪುರರೆಡ್ಡಿಯ ಮೇಗಳ ದಿನ್ನೆಯ ಕಬ್ಬಿನ ತೋಟದಲ್ಲಿ ಕಳೆ ಕೀಳಲು ಹೋಗಿದ್ದರು. ಅವರ ಜೊತೆಯಲ್ಲಿ ಮೇಕೆಯೂ ಹೋಗಿತ್ತು. ಮೂಗನು ಮೇಕೆಯನ್ನು ಹನುಮಂತಪುರದ ಗುರೆಪ್ಪನ ಕೂಳೆ ಮೆಣಸಿನ ಗಿಡದಲ್ಲಿನ ಅಗಸೇ ಮರಕ್ಕೆ ಕಟ್ಟಿ ಒಂದಿಷ್ಟು ಅಗಸೇ ಸೊಪ್ಪನ್ನು ಕಿತ್ತು ಹಾಕಿ ಬಂದಿದ್ದ. ಹನ್ನೊಂದು ಗಂಟೆಗೆಲ್ಲ ಹಿಟ್ಟು ಬಂದಿತ್ತು. 'ಹಿಟ್ನೊತ್ತಾಯ್ತು ಮೇಕೆಗೆ ತೊಟ್ಟಿಯಲ್ಲಿ ನೀರು ಕುಡ್ಸಿ ಬಾ..' ಎಂದು ನಿಂಗಮ್ಮ ಹೇಳಿದಾಗ 'ಅರೆ, ಮರೆತೇ ಹೊಗಿದ್ದೆ.' ಎಂದು ಮೂಗನು ಎರಡು ತುತ್ತು ಹಿಟ್ಟನ್ನೂ ಕೈಯ್ಯಲ್ಲಿಟ್ಟು ಕೊಂಡು ಮೇಕೆಗೆ ತಿನ್ನಿಸಲು ಮೆಣಸಿನ ಗಿಡದ ಕಡೆ ನಡೆದ. ತಾನು ಕಟ್ಟಿದ್ದ ಜಾಗದಲ್ಲಿ ಹಗ್ಗವೊಂದೇ ಇದ್ದು ಮೇಕೆ ಇರಲಿಲ್ಲ. ಸುತ್ತಲೂ ಕಣ್ಣು ಹಾಯಿಸಿದ. 'ರಾಮ...ರಾಮ..' ಎಂದು ಕೂಗಿಕೊಂಡ. ಆದರೆ ತನ್ನ ಕೂಗೊಂದಕ್ಕೆ ಎಲ್ಲಿದ್ದರೂ ಚಂಗನೆ ಓಡಿ ಬರುತ್ತಿದ್ದ ಮೇಕೆ ಬಳಿ ಸಾರಲಿಲ್ಲ. ಮೂಗನ ಎದೆ ಧಸಕ್ಕೆಂದಿತ್ತು. ಏನು ಮಾಡಬೇಕೆಂದು ತೋಚದ ಮೂಗನು ಕಬ್ಬಿನ ತೋಟಕ್ಕೆ ಬಡಬಡ ಓಡಿ ಬಂದವನೆ ನಿಂಗಮ್ಮನಿಗೆ ಸುದ್ಧಿ ಮುಟ್ಟಿಸಿದ. ಈ ಸುದ್ಧಿ ಕಬ್ಬಿನ ಗದ್ದೆಯಲ್ಲಿ ಕೆಸಲ ಮಾಡುತ್ತಿದ್ದ ಕೆಲವರಲ್ಲಿ ಅಚ್ಚರಿಯನ್ನುಂಟುಮಾಡಿದ್ದರೆ, ಇನ್ನು ಕೆಲವರು ಅದು ತಮಗೆ ಸಂಬಂಧವಿಲ್ಲದ ವಿಷಯವೇನೋ ಎಂದು ಸುಮ್ಮ ನಿದ್ದರು. ಮತ್ತೆ ಕೆಲವರು 'ಇಲ್ಲೆ ಎಲ್ಲೊ ಮೇಯ್ತಾ ಇರ್ಬೇಕು ನೋಡು..' ಎಂದು ಕಾಳಜಿಯನ್ನು ವ್ಯಕ್ತಪಡಿಸಿದ್ದರು. 'ಯಾವುದಾದ್ರೂ ಮಂದೆ ಜೊತ್ಗೆ ಹೋಯ್ತೊ ಏನೋ ' ಎಂದು ನಿಂಗಮ್ಮ ಗುಮಾನಿಗೆ ಬಿದ್ದಳು. ಭೂಪುರ್‌ರೆಡ್ಡಿಯ ಹೆಂಡತಿ 'ಆಯ್ತು ನೀನು ಮೇಕೆ ಹುಡ್ಕ್ಕೊಂಡು ಬಾ ಹೋಗು ಮೂಗ. ನಿಂಗೆ ಪೂರ್ತಿ ಕೂಲಿ ಕೊಡಿಸ್ತೀನಿ' ಎಂದು ಕರುಣೆ ತೋರಿದ್ದಳು. 'ಜೋಪಾನ..' ಎಂದ ನಿಂಗಮ್ಮನ ಮಾತುಗಳನ್ನು ಕೇಳಿಸಿ ಕೊಳ್ಳದೆ ಮೂಗನು ದೂರದಲ್ಲಿ ಕಾಣುತ್ತಿದ್ದ ಕುರಿ, ಮೇಕೆ ಮಂದೆಗಳ ಕಡೆ ಚಪ್ಪಲಿಗಳಿಲ್ಲದ ಪಾದಗಳನ್ನು ಬಿರಬಿರನೆ ಕಿತ್ತಿಟ್ಟ

ಸೂರ್ಯ ಪರಮಾತ್ಮನು ಕೊಂಡ್ಬಾಡಿ ಗುಡ್ಡಗಳಲ್ಲಿ ಹೂತು ಹೋಗಿ ಗಂಟೆಯ ಮೇಲಾಗಿತ್ತು. ಕೂಲಿನಾಲಿಗೋಗಿದ್ದ ಹಟ್ಟಿಯ ಜನ ತಮ್ಮ ತಮ್ಮ ಸೂರು ಸೇರಿಕೊಂಡು ಬೆಚ್ಚಗಿದ್ದರು. ನಿಂಗಮ್ಮ ಮಿಣಮಿಣ ಅಂತಿದ್ದ ಸೀಮೆಎಣ್ಣೆ ಬುಡ್ಡಿಯನ್ನು ನಡುಮನೆಯಲ್ಲಿಟ್ಟುಕೊಂಡು, ಮೇಕೆ ಕಳೆದುಹೋದ ಸಂಗತಿಯನ್ನೆ ಹೊಟ್ಟೆ ತುಂಬಿಸಿಕೊಂಡು ಮಗ ಯಾವಾಗ ಬರುವನೋ, ಏನು ಸುದ್ದಿಯನ್ನು ತರುವನೋ ಎಂಬ ವ್ಯಥೆಯನ್ನು ಹಾಸಿಕೊಂಡು ಕುಳಿತಿದ್ದಳು. ಮೇಕೆ ನಾಪತ್ತೆಯಾಗಿರುವ ಸುದ್ದಿಯನ್ನು ತಿಳಿದ ಕೆಲವರು ಬಂದು ಇಣುಕಿ ಇಣುಕಿ ನಿಂಗಮ್ಮನ ಕರುಣಾಜನಕ ಸ್ಥಿತಿಯನ್ನು ಕಣ್ತುಂಬಿಸಿಕೊಂಡು ಹೋಗುತ್ತಿದ್ದರು. ಎಂಟು ಗಂಟೆಯ ಕತ್ತಲಿಗೆ ಬರಿಗೈಲಿ ಮನೆಯೊಳಕ್ಕೆ ಕಾಲಿಟ್ಟ ಮಗನನ್ನು ಕಂಡು ನಿಡುಸುಯ್ದಳು. ಮೂಗ ಊರಲ್ಲಿನ ಎಲ್ಲಾ ಕುರಿರೊಪ್ಪಗಳನ್ನೂ ಎಡತಾಕಿ ಬಂದಿದ್ದ. ಯಾವ ಮಂದೆಯಲ್ಲೂ ಮೂಗನ ಮೇಕೆ ಸೇರಿಕೊಂಡಿರಲಿಲ್ಲ. ತಾಯಿ ಮಗ ಇಬ್ಬರಿಗೂ ದೊಡ್ಡ ಗಂಡಾಂತರವೊಂದು ಬಂದೆರಗಿದಂತಾಗಿ ಮಂಕು ಕವಿದಿತ್ತು. ಅಂದು ರಾತ್ರಿ ಇಬ್ಬರೂ ಊಟ ಮಾಡಲಿಲ್ಲ. 'ನಾಳೆ ಹೊತ್ತಾರೇನೆ ಹನುಮಂತ್ಪುರ, ತಗ್ಗಳ್ಳಿ, ಕೊಂಡ್ಬಾಡಿಗೆ ಹೋಗಿ ಕುರಿರೊಪ್ಪಗಳ್ನ ತಲಾಸ್ ಮಾಡಿ ಬಾ, ಭಗವಂತವ್ನೆ..' ಎಂದು ನಿಂಗಮ್ಮ ಮೂಗನಿಗೆ ಸಮಾಧಾನ ಹೇಳಿದ್ದಳು. ಮೇಕೆ ಸಿಕ್ಕಿದರೆ, ಬಂದು ಮಗನ ಮುಡಿ ಕೊಡುತ್ತೇನೆಂದು ಮನೆ ದೇವರಾದ ಕದ್ರಿ ನರಸಿಮ್ಮನಿಗೆ ಎಂಟಾಣೆಯನ್ನು ಅರಶಿಣದ ಬಟ್ಟೆಯಲ್ಲಿ ಕಟ್ಟಿ ಹರಕೆ ಹೊತ್ತಳು. ತನ್ನ ತೌರೂರಿನ ದೇವತೆಯಾದ ಮುತ್ಯಾಲಮ್ಮನಿಗೂ ಮೇಕೆ ಸಿಕ್ಕಿದರೆ ಒಂದು ಬೆಳ್ಳಿ ಕಣ್ಣು ಮಾಡಿಸಿಕೊಡುವುದಾಗಿ ಹೊಂಗೆ ಎಣ್ಣೆಯ ದೀಪ ಹಚ್ಚಿದಳು. ರಾತ್ರಿ ಎಷ್ಟು ಹೊತ್ತಾದರೂ ಮೂಗನಿಗೆ ನಿದ್ದೆ ಹತ್ತಲಿಲ್ಲ. ಮಂಪರು ಹತ್ತಿದರೆ ಸಾಕು ಮೇಕೆ ಬಂದು ಕಾಲಿಗೆ ಉಜ್ಜಿದಂತೆ, ಹೊಟ್ಟೆಯನ್ನು ತಿವಿದಂತೆ, ಮುಖವನ್ನು ನೆಕ್ಕಿದಂತಾಗಿ ಮಿಟ್ಟು ಬಿದ್ದು ಎಚ್ಚರಗೊಳ್ಳುತ್ತಿದ್ದ. ಮತ್ತೆ ಮಂಪರಿಗೆ ಬೀಳುತ್ತಿದ್ದ. ಬ್ಯಾಲ್ಯದ ಟೆಂಟಿನಲ್ಲಿ ಎರಡನೇ ಶೋ ಬೈಸ್ಕೋಪ್ ಮುಗಿದು ಮೇಲಕ್ಕೆ ಕೊಟ್ಟಿದ್ದ 'ಯಾರಿಗೆ ಯಾರುಂಟು ಯರವಿನ ಸಂಸಾರ' ಅಲೆಅಲೆಯಾಗಿ ತೇಲಿ ಬಂದು ಮೂಗನ ಕಿವಿಗಳಲ್ಲಿ ಸೀಸ ಸುರಿದಂತೆ ಸಂಕಟವಾಗುತ್ತಿತ್ತು.

'ನೀನೇನೂ ಯೋಚ್ನೆ ಮಾಡ್ಬೇಡ. ಇವೊತ್ತೆಂಗೂ ದಿನ ಚೆನ್ನಾಗ್ಯೆತೆ. ಗೋಧೂಳಿ ಸಂಜೆನಾಗೆ ದೇವ್ರ್ ಮೇಲೆ ಭಾರ ಹಾಕಿ ಅಂಜನದಾಗೆ ನೋಡಾನ. ಅಂದಂಗೆ ಅದಕ್ಕೊಂದು ಮೊಟ್ಟೆ ಕೋಳಿ ಬೇಕಾಗ್ಯೆತೆ. ಯಂಗೂ ನಿಂಗಮ್ಮತ್ತೆ ಕೋಳಿ ಸಾಕಿರ್ಬೇಕು. ಅಂಗೆ ಒಂದಿಪ್ಪತ್ತು ರೂಪಾಯಿ ಕೊಡು, ಬ್ಯಾಲ್ಯಾವುಕ್ಕೆ ಹೋಗಿ ಬೇಗ ಪೂಜೆ ಸಾಮಾನು ತರ್ತೀನಿ...' ಎಂದ ಸುಂಕಪ್ಪನ ಮಾತುಗಳಿಗೆ ಕಟ್ಟುಬಿದ್ದ ಮೂಗ ನಿಕ್ಕರ್ ಜೇಬಿನಿಂದ ಹತ್ತು ರೂಪಾಯಿ ತೆಗೆದುಕೊಡುತ್ತಾ, 'ಹತ್ತೈತೆ ಇಟ್ಕೊ ಸುಂಕಪ್ಪಣ್ಣ..ಇದ್ರಾಗೆ ಅಡ್ಜಸ್ಟ್‌ಮಾಡ್ಕೊ. ಸಾಕಿರೊ ಕೋಳಿ ಅವೆ. ಅದ್ರಾಗೆ ಒಂದ್ ಹಿಡ್ಕೊಬತ್ತೀನಿ' ಎಂದು ಮನೆಯ ಕಡೆ ನಡೆದ.

ಕೋಳಿ ಕೂಗುವ ಮೊದಲೇ ಎದ್ದು ಮೂಗ ತಗ್ಗಳ್ಳಿಯ ಕಡೆ ಹೊರಟ. ಅಲ್ಲಿದ್ದ ಮೂರ್ನಾಲ್ಕು ರೊಪ್ಪಗಳಲ್ಲಿ ಮೇಕೆಯ ಬಗ್ಗೆ ವಿಚಾರಿಸಿದ. ಪ್ರಯೋಜನವಾಗಲಿಲ್ಲ. ಅಲ್ಲಿಂದ ಕೊಂಡ್ಬಾಡಿಗೆ ನಡೆದ. ಸಂಬಂಧಿಕರೊಬ್ಬರ ಮನೆಗೆ ಹೋಗಿ ವಿಷಯ ತಿಳಿಸಿದ. ಅವರೂ ಮುತುವರ್ಜಯಿಂದ ಮೂಗನ ಜೊತೆ ಗೂಡಿ ಹುಡುಕಿದರೂ ಫಲ ಸಿಗಲಿಲ್ಲ. ಬಲವಂತಕ್ಕೆ ಸಂಬಂಧಿಕರ ಮನೆಯಲ್ಲಿ ಹಿಟ್ಟುಂಡು ಎರಡು ಮೈಲಿ ದೂರದ ಹನುಮಂತಪುರಕ್ಕೆ ದಿನ್ನೆ ಹೊಲಗಳ ಮೂಲಕ ಬಿರಬಿರನೆ ಹೆಜ್ಜೆ ಹಾಕಿದ. ಮೂಗನ ಮೇಕೆ ಕಳೆದು ಹೋದ ಸುದ್ಧಿ ಹನುಮಂತಪುರದಲ್ಲಾಗಲೇ ತಂಗಳಾಗಿತ್ತು. ಅಲ್ಲೂ ತನ್ನ ಮೇಕೆಯ ಸುಳಿವು ಸಿಗದೆ ಹತಾಶನಾಗಿ ಮೂಗ ಊರು ಸೇರಿದ.

ನಡು ಮನೆಯಲ್ಲಿ ಊಸೂರನೆ ಕುಂತ ಮಗನನ್ನು ಕುರಿತು ನಿಂಗಮ್ಮ 'ಸುಂಕುಂತಾವ ಒಂದಪ ಅಂಜ್ನ ಹಾಕ್ಸಿ ನೋಡ್ಸಾನ. ಭಗವಂತನ್ಗೆ ನಮ್ಮ ನಿಟ್ಟುಸಿರು ತಟ್ಟಿದ್ರೂ ತಟ್ಬೋದು..' ಎಂದಾಗ ಅದೂ ಒಂದು ನೋಡಿ ಬಿಡಾನ ಅಂತ ಮೂಗ ದೆವ್ವ ಬಡಿದವನಂತೆ ಸುಂಕಪ್ಪನ ಮನೆಯ ಕಡೆ ತಿರುಗಿದ. ಸುಂಕಪ್ಪ ಬಹಳ ವರ್ಷಗಳ ಹಿಂದೆ ಆಂಧ್ರಸೀಮೆಯಿಂದ ಬಂದವನು. ಮಂತ್ರವಾದಿಯೆಂದು ಸುತ್ತೆಂಟು ಊರುಗಳಲ್ಲಿ ಪ್ರಸಿದ್ಧಿ ಪಡೆದವ್ನೆ. ತಲೆ ಶೂಲೆ ಬರ್ಲಿ, ಚೇಳು ಕುಕ್ಲಿ, ಹುಳ ಮುಟ್ಲಿ, ದೆವ್ವ ಹಿಡಕಲ್ಲಿ, ಸನ್ನಿ ಆಗ್ಲಿ, ಬಸಿರು ಇಳಿಸ್ಬೇಕಾಗ್ಲಿ ಜನ ಸುಂಕಪ್ಪನ ಹತ್ರ ಬರ್ತಾರೆ. ಅವರ ಕೈಗುಣ ಚನ್ನಾಗಿದೆ ಅಂತ ಜನ ನಂಬಿದ್ದಾರೆ. ಈಗೀಗ ಅಂಜನ ಹಾಕೋದನ್ನೂ ಕಲ್ತವ್ನೆ. ಮೊದ್ಲು ಮೊದ್ಲು ಕೂಲಿನಾಲಿಗೆ ಹೋಗ್ತಿದ್ದೋನು ಐದಾರು ವರ್ಷಗಳಿಂದ ಫುಲ್‌ಟೈಮ್ ವೈದ್ಯಕೀಯಕ್ಕೆ ಇಳಿದವ್ನೆ. ಜನತಾ ಮನೆ ಕಟ್ಟಿಕೊಂಡು ದುಡ್ನ ಬಡ್ಡಿಗೆ ಬಿಟ್ಟವ್ನೆ. ಮೂಗ ಸುಂಕಪ್ಪನ ಮನೆಯ ಬಳಿ ಬಂದಾಗ ಮನೆಯ ಮುಂದಿನ ಎಕ್ಕದ ಗಿಡದ ಮುಂದೆ ಕುಂತು ಪೂಜೆ ಮಾಡುತ್ತಿದ್ದ. ಮೂಗ ಬಂದಿದ್ದನ್ನು ನೋಡಿದ ಸುಂಕಪ್ಪ ಕಣ್ಣುಗಳಲ್ಲೆ ಕುಳಿತುಕೊಳ್ಳುವಂತೆ ಹೇಳಿ ನಿಮಿಷಾರ್ಧದಲ್ಲಿ ಪೂಜೆ ಮುಗಿಸಿ 'ಮೂಗಣ್ಣ ನೀನು ಬಂದಿರೋ ವಿಷಯ ತಿಳೀತು. ಪಾಪ, ಯಿಂಗಾಗ್ಬಾರ್ದಾಗಿತ್ತು..' ಎಂದು ಮರುಕಪಟ್ಟ

'ನನ್ನ ಪ್ರಾಣ್ದಂಗಿತ್ತು ಸುಂಕಪ್ಪಣ್ಣ..' ಮೂಗನ ಧ್ವನಿಯಲ್ಲಿ ರೋಧನವಿತ್ತು.

'ನೀನೇನೂ ಯೋಚ್ನೆ ಮಾಡ್ಬೇಡ. ಇವೊತ್ತೆಂಗೂ ದಿನ ಚೆನ್ನಾಗ್ಯೆತೆ. ಗೋಧೂಳಿ ಸಂಜೆನಾಗೆ ದೇವ್ರ್ ಮೇಲೆ ಭಾರ ಹಾಕಿ ಅಂಜನದಾಗೆ ನೋಡಾನ. ಅಂದಂಗೆ ಅದಕ್ಕೊಂದು ಮೊಟ್ಟೆ ಕೋಳಿ ಬೇಕಾಗ್ಯೆತೆ. ಯಂಗೂ ನಿಂಗಮ್ಮತ್ತೆ ಕೋಳಿ ಸಾಕಿರ್ಬೇಕು. ಅಂಗೆ ಒಂದಿಪ್ಪತ್ತು ರೂಪಾಯಿ ಕೊಡು, ಬ್ಯಾಲ್ಯಾವುಕ್ಕೆ ಹೋಗಿ ಬೇಗ ಪೂಜೆ ಸಾಮಾನು ತರ್ತೀನಿ...' ಎಂದ ಸುಂಕಪ್ಪನ ಮಾತುಗಳಿಗೆ ಕಟ್ಟುಬಿದ್ದ ಮೂಗ ನಿಕ್ಕರ್ ಜೇಬಿನಿಂದ ಹತ್ತು ರೂಪಾಯಿ ತೆಗೆದುಕೊಡುತ್ತಾ, 'ಹತ್ತೈತೆ ಇಟ್ಕೊ ಸುಂಕಪ್ಪಣ್ಣ..ಇದ್ರಾಗೆ ಅಡ್ಜಸ್ಟ್‌ಮಾಡ್ಕೊ.ಸಾಕಿರೊ ಕೋಳಿ ಅವೆ. ಅದ್ರಾಗೆ ಒಂದ್ ಹಿಡ್ಕೊಬತ್ತೀನಿ' ಎಂದು ಮನೆಯ ಕಡೆ ನಡೆದ. ಪೂಜೆ ಸಾಮಾನಿನ ಜೊತೆಗೆ, ರಾತ್ರಿ ಕೋಳಿ ಸಾರಿಗೆ ನಂಜಲು ಅಂಗೇ ಒಂದರ್ಧ ಲೀಟ್ರು ಸಾರಾಯಿ ತರೋಣ ಅಂತ ಸೀಸೇನ ಪಂಚೆಯಲ್ಲಿ ಸುತ್ತಿಕೊಂಡು ಬ್ಯಾಲ್ಯದ ದಾರಿ ಹಿಡಿದ ಸುಂಕಪ್ಪ.

ಹೊತ್ತು ಮುಳುಗಿ ತಾಸೊತ್ತಿಗೆ ಮೂಗ ಸುಂಕಪ್ಪನ ಮನೆಯ ಕಡೆ ಹೊರಟ. ಅವನ ಹಿಂದೆ ತಲೆ ತುಂಬಾ ಸೆರಗು ಹೊದ್ದು ನಿಂಗಮ್ಮನೂ ನಡೆದಳು. ಮೂಗನ ಕಂಕುಳಲ್ಲಿದ್ದ ಕೋಳಿ 'ಕೊಕ್ಕೊ' ಎನ್ನುತ್ತಾ ಅವರು ಸುಂಕಪ್ಪನ ಮನೆಗೆ ಹೋಗುತ್ತಿರುವ ಸುದ್ದಿಯನ್ನು ಟಾಮ್‌ಟಾಮ್ ಸಾರುತ್ತಿತ್ತು. ಕೆಲವು ಆಸಕ್ತರು ಅಂಜನ ಹಾಕಿ ಸುಂಕಪ್ಪ ಹೇಳುವ ವಿಷಯವನ್ನು ತಿಳಿದುಕೊಳ್ಳಲು ಮೂಗ, ನಿಂಗಮ್ಮರೊಟ್ಟಿಗೆ ಸುಂಕಪ್ಪನ ಮನೆಯ ಮುಂದೆ ಜಮಾಯಿಸಿದ್ದರು. ಸುಂಕಪ್ಪ ಮಾಮೂಲಿಯಾಗಿ ಎಕ್ಕದ ಗಿಡದ ಮುಂದೆ ಆಂಜನೇಯನ ಚಿತ್ರ ಬಿಡಿಸಿ, ನಿಂಬೆಹಣ್ಣು ಮಂತ್ರಿಸಿ, ಕೋಳಿಕೊಯ್ದು ಶಾಂತಿ ಮಾಡಿ, ಅಂಜನದ ಡಬ್ಬಿಯನ್ನು ಸ್ವಲ್ಪವೇ ತೆಗೆದು ಅದರಲ್ಲಿ ದೃಷ್ಟಿ ನೆಟ್ಟು ಧ್ಯಾನಿಸತೊಡಗಿದ. ಸುಂಕಪ್ಪನ ಮುಖದಲ್ಲಿ ಬೆವರು ಮೂಡಿ, ಬದಲಾಗುತ್ತಿದ್ದ ಅವನ ಚಹರೆಯನ್ನು ಹಿಡಿದು, ಅವನು ಏನು ಹೇಳಬಹುದೆಂಬದನ್ನು ಕೆಲವರು ಅಂದಾಜು ಮಾಡುತ್ತಿದ್ದರು. ಆದರೆ ಇಂದು ಸುಂಕಪ್ಪನ ಮುಖದ ಚಹರೆಯನ್ನು ಓದಲು ಯಾರಿಗೂ ಸಾಧ್ಯವಾಗುತ್ತಿಲ್ಲ. 'ಏನೋ ಎಡವಟ್ಟಾಗಿದೆ..' ಎಂದು ಕೆಲವರು ಪಿಸುಗುಟ್ಟಿದ್ದರೆ. ಮೂಗ ಮತ್ತು ನಿಂಗಮ್ಮ ಮಾತ್ರ ಸುಂಕಪ್ಪನು ಒಳ್ಳೆಯ ಸುದ್ದಿಯನ್ನು ಹೇಳಲೆಂದು ಕಣ್ಮುಚ್ಚಿ ಮನೆದೇವರಲ್ಲಿ ಪ್ರಾರ್ಥಿಸುತ್ತಿದ್ದರು. ಕಾಲು ಗಂಟೆಗಿಂತಲೂ ಹೆಚ್ಚು ಹೊತ್ತು ಅಂಜನದ ಡಬ್ಬಿಯಲ್ಲಿ ದೃಷ್ಟಿ ನೆಟ್ಟಿದ್ದ ಸುಂಕಪ್ಪ ಈಗ ತಲೆ ಎತ್ತಿ ಸುತ್ತಲೂ ನೆರದವರನ್ನೊಮ್ಮೆ ನೋಡಿ 'ನಿಂಗಮ್ಮತ್ತೆ ನಿನ್ ಮೇಕೆ ದೇವ್‌ಮೂಲೇಲಿ ಕಾಣ್ತ ಐತೆ..' ಎಂದು ಉಸಿರುಬಿಟ್ಟ. ಯಜಮಾನ್ ನಾಗಪ್ಪನಿಗೆ ಸುಂಕಪ್ಪನ ಮಾತುಗಳಿಂದ ಅನುಮಾನ ಇಣುಕಿದಂತಾಗಿ 'ಬದುಕೈತೋ..ಯಂಗೋ ಸುಂಕಪ್ಪ' ಎಂದು ಕೇಳಿದ. 'ಸತ್ತಿದ್ರೆ ಅಂಜನದಾಗೆ ಯಂಗ್ ಬೀಳ್ತೈತೆ ನಾಗಪ್ಪ ಮಾವ. ಮುಂದಿನ ಆಯಿತ್ವಾರದೊಳಗೆ ಖಚಿತವಾಗಿ ಅದ್ರ ವರ್ತಮಾನ ಸಿಕ್ತೈತೆ..' ಎಂದು ಸುಂಕಪ್ಪ ಘೋಷಿಸುವುದರೊಂದಿಗೆ ನೆರೆದ ಜನವೆಲ್ಲ ಕತ್ತಲಲ್ಲಿ ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡಿದ್ದರು. ಬೆಳಿಗ್ಗೆ ಏನಾದ್ರಾಗ್ಲಿ ದೇವ್‌ಮೂಲೆ ದಿಕ್‌ನಾಗೆ ಕೊಡಿಗೇನಳ್ಳಿ, ಪೋಲೆನಳ್ಳಿಗಂಟಾ ಹೋಗಿ ಬರಬೇಕೆಂದು ಮೂಗ ತೀರ್ಮಾನಿಸಿದ ಹೊತ್ತಿನಲ್ಲಿ ಸುಂಕಪ್ಪ ತನ್ನ ಹೆಂಡತಿಯ ಜೊತೆಗೂಡಿ ಸಾರಾಯಿ ನಂಜುತ್ತಾ ಹುರಿದ ನಿಂಗಮ್ಮನ ಕೋಳಿಯ ಎಮಕೆಗಳನ್ನು ಹಿತವಾಗಿ ಕಡಿಯುತ್ತಿದ್ದ.

ಮೂಗ ಕೊಂಡ್ಬಾಡಿ ಮೂಲಕ ನಡೆದು ಕೋಡ್ಲಾಪುರ, ಚಿಕ್ಕಮಳ್ಳೂರು, ಕೊಡ್ಗೇನಳ್ಳಿ, ಪೋಲೆನಳ್ಳಿ ಇತ್ಯಾದಿ ದೇವಮೂಲೆಗಂಟಿದ ಊರುಗಳನ್ನೆಲ್ಲ ಮೂರು ದಿನ ಸುತ್ತುಹಾಕಿದ. ಹೋದ ಕಡೆಯಲ್ಲೆಲ್ಲ ಅವನ ನೆಂಟರು ಹುಡುಕಲು ನೆರವಾಗಿದ್ದರು. ಆದರೆ ಅದ್ಯಾಕೊ ದೇವರ ದಯೆ ಮೂಗನ ಮೇಲೆ ಬಿದ್ದಿರಲಿಲ್ಲ. ಮೂರು ದಿನಗಳಲ್ಲಿ ಸರಿಸುಮಾರು ಮುವತ್ತು-ನಲವತ್ತು ಮೈಲಿ ನಡೆದಾಡಿದ್ದರಿಂದ ಮೂಗನ ಕಾಲುಗಳು ಬಾತುಕೊಂಡಿದ್ದವು. ಊರಿಗೆ ಬರಿಗೈಲಿ ವಾಪಸ್ಸಾದವನನ್ನು ಸುಸ್ತು ಮತ್ತು ಜ್ವರ ಅಮರಿಕೊಂಡಿದ್ದವು. ನಿಂಗಮ್ಮ 'ಮಗನೆ, ಆಗಿದ್ದು ಆಗೋಯ್ತು. ಭಗವಂತ ಹಣೇಲಿ ಯಂಗ್ ಬರೆದವ್ನೊ ಅಂಗೇ ನಡ್ಯೋದು. ಮೇಕೆನ ತಂದೇ ಇರ್ಲಿಲ್ಲ, ಮೇಯಿಸೇ ಇರ್ಲಿಲ್ಲ ಅಂತ ತಿಳ್ಕೊ. ಇನ್ಮೇಲೆ ಅಂತ ಕಸುಬು ನಮ್ಗೆ ಬೇಡ...' ಎಂದು ಸಮಾಧಾನ ಪಡಿಸಿದ್ದಳು. ಉಪ್ಪಿನ ಗಡಿಗೆಯಲ್ಲಿ ಕೂಡಿಟ್ಟದ್ದ ಐವತ್ತು ರೂಪಾಯಿ ತೆಗೆದು, ಮೂಗನನ್ನು ಬ್ಯಾಲ್ಯದ ವಸಂತಕುಮಾರ ಭಟ್ಟನ ಶ್ಯಾಪಿಗೆ ಕರೆದುಕೊಂಡು ಹೋಗಿ ಎರಡು ಇಂಜಕ್ಸನ್ ಹಾಕಿಸಿಕೊಂಡು ಬಂದಿದ್ದಳು. ಭಟ್ಟ ಹೇಳಿದಂತೆ ಮೂಗ ಎರಡು ದಿನ ರಗ್ಗೊದ್ದು ರೆಸ್ಟು ತೆಗೆದುಕೊಂಡವನು ನಾಲ್ಕನೆಯ ದಿನದಿಂದ ಎದ್ದು ಕೂಲಿಗೆ ಹೊರಟಿದ್ದ. ಸುಂಕಪ್ಪನು ಹೇಳಿದ ಆಯಿತ್ವಾರದೊತ್ತಿಗೆ ಮೇಕೆಯ ಬಗ್ಗೆ ಏನಾದರೂ ವರ್ತಮಾನ ಸಿಗಬಹುದೆಂಬ ದೂರದ ಆಸೆಯನ್ನು ಎದೆಯಲ್ಲಿ ಬಚ್ಚಿಟ್ಟುಕೊಂಡಿದ್ದ.

ಅಂದು ಆಯಿತ್ವಾರ. ಹನುಮಂತಪುರದ ಭರಮಪ್ಪನ

'ಯಾರೊ ಕಳ್‌ನನ್ಮಕ್ಳು ಬಾಡ್ನ ಸಸ್ತವಾಗಿ ಗುಡ್ಡೆ ಹಾಕಿದ್ರು. ಎಲ್ಲೊ ಕದ್ ಮರಿ ಇರ್ಬೇಕು. ನಾನು ಹೋದ ಘಳಿಗೆ ಚೆನ್ನಾಗಿತ್ತು. ನಂಗೂ ಎರ್ಡ್ ಗುಡ್ಡೆ ಸಿಕ್ತು. ಮೂಗನಿಗೆ ಖಂಡ ಅಂಥಾದ್ ಹಾಕು. ಎಮಕೆ ಅಂಥಾದ್ ನಂಗಾಕು...' ಎಂದು ಹುರುಪಿನಿಂದ ಕದುರಪ್ಪ ಮಾವ ತಾನೂ ತುತ್ತನ್ನು ಸಾರಿನಲ್ಲಿ ಉರುಳಾಡಿಸುತ್ತಿದ್ದ. ಇನ್ನೇನು ತುತ್ತನ್ನು ಬಾಯಲ್ಲಿ ಇಟ್ಟುಕೊಳ್ಳಬೇಕೆನ್ನುವಷ್ಟರಲ್ಲಿ ಅತ್ತೆ ಮಾವನ ಮಾತುಗಳು ಮೂಗನ ಕಿವಿಯಲ್ಲಿ ಸೀಸ ಸುರಿದಂತಾಗಿ, ತುತ್ತು ಕೈಯಿಂದ ಜಾರಿ ತಣಿಗೆಗೆ ಬಿತ್ತು.

ರಾಗಿಹೊಲದಲ್ಲಿ ಕಳೆ ಕೀಳಲು ಹೋದ ಮೂಗನು ಹಾಗೆಯೇ ಒಂದು ಹೊರೆ ಹುಲ್ಲನ್ನು ಭರಮಪ್ಪನ ಮನೆಯ ಹತ್ತಿರ ಹಾಕಿ, ಅವರು ಕೊಟ್ಟ ಕಾಫಿನೀರನ್ನು ಕುಡಿದು ಹಟ್ಟಿಗೆ ಬರುವ ಹೊತ್ತಿಗೆ ದೀಪ ಹಚ್ಚಿ ಅರ್ಧ ಗಂಟೆಯಾಗಿತ್ತು. ಹಟ್ಟಿ ಮುಂದೆ ಕೋಡ್ಲಾಪುರದ ಅತ್ತೆ ಕುಳಿತಿದ್ದಳು.

'ಚೆಂದಾಗಿದ್ದೀಯಾ ಮಗಾ...?' ಮಾತನಾಡಿಸಿದ್ದಳು ಅತ್ತೆ.

'ಯಾವಾಗ್ಬಂದ್ರಿ...' ವಿಚಾರಿಸಿಕೊಂಡಿದ್ದ ಮೂಗ.

'ಕಲ್ಯಾಣಿ ಬಸ್‌ನಾಗೆ ಬಂದು ಸಂಕಾಪುರದ ಕ್ರಾಸಿನಾಗೆ ಇಳಿದು ನೆಡ್ಕ ಬಂದ್ವಿ...' ಎಂದಳು ಅತ್ತೆ. ಮಾವ ಒಳಗೆ ಅಮ್ಮನ ಹತ್ತಿರ ಮದುವೆಯ ಪ್ರಸ್ತಾಪದಲ್ಲಿದ್ದ. ಮೂಗನನ್ನು ನೋಡಿದ ಕದುರಪ್ಪ 'ಸರಿ, ತಣ್ಗೆ ಹಾಕಮ್ಮ ಅವ್ನೂ ಬಂದ..' ಎಂದು ನಿಂಗಮ್ಮನಿಗೆ ಹೇಳಿದ. ಮಸಾಲೆಯ ಘಮಘಮ ವಾಸನೆ ಮನೆಯಲ್ಲೆಲ್ಲ ತುಂಬಿಕೊಂಡಿತ್ತು. ಅಣ್ಣ ಬಂದಿರುವುದಕ್ಕೆ ಅಮ್ಮ ಕೋಳಿ ಕೊಯ್ದಿರಬೇಕೆಂದು ಕೊಂಡು ಮೂಗ ಕೈಕಾಲು ತೊಳೆದುಕೊಂಡು ಬಂದ. ಮೊದಲು ಗಂಡಸರಿಬ್ಬರಿಗೂ ತಣಿಗೆ ಹಾಕಿ ದಳು ನಿಂಗಮ್ಮ. ಬಿಸಿಬಿಸಿ ಮುದ್ದೆಯನ್ನು ಇಟ್ಟು ಸಾರು ಸುರುವಿದಳು. 'ಮೂಗ ನಿಗೆ ಬಾಡ್ಸಾರ್ ಇಷ್ಟ ಅಂತ ಇವ್ರು ಸಂಕಾಪುರ್‌ದಾಗೆ ಆಡು ಕೂದವ್ರೆ ಅಂತ ಗೊತ್ತಾಗಿ ಎರ್ಡ್ ಗುಡ್ಡೆ ಬಾಡು ಕಟ್ಟಿಸ್ಕಂಡ್ರು. ಚೆನ್ನಾಗಿ ಉಂಬ್ಲ ಮಗಾ..ಜ್ವರ ಬಂದು ಬಾಯಿ ಕೆಟ್ಟೋಗಿರ್ತೈತೆ.' ಅತ್ತೆ ಮೂಗನನ್ನು ರಮಿಸಲು ಹೇಳಿದ್ದಳು.

'ಯಾರೊ ಕಳ್‌ನನ್ಮಕ್ಳು ಬಾಡ್ನ ಸಸ್ತವಾಗಿ ಗುಡ್ಡೆ ಹಾಕಿದ್ರು. ಎಲ್ಲೊ ಕದ್ ಮರಿ ಇರ್ಬೇಕು. ನಾನು ಹೋದ ಘಳಿಗೆ ಚೆನ್ನಾಗಿತ್ತು. ನಂಗೂ ಎರ್ಡ್ ಗುಡ್ಡೆ ಸಿಕ್ತು. ಮೂಗನಿಗೆ ಖಂಡ ಅಂಥಾದ್ ಹಾಕು. ಎಮಕೆ ಅಂಥಾದ್ ನಂಗಾಕು...' ಎಂದು ಹುರುಪಿನಿಂದ ಕದುರಪ್ಪ ಮಾವ ತಾನೂ ತುತ್ತನ್ನು ಸಾರಿನಲ್ಲಿ ಉರುಳಾಡಿಸುತ್ತಿದ್ದ. ಇನ್ನೇನು ತುತ್ತನ್ನು ಬಾಯಲ್ಲಿ ಇಟ್ಟುಕೊಳ್ಳಬೇಕೆನ್ನುವಷ್ಟರಲ್ಲಿ ಅತ್ತೆ ಮಾವನ ಮಾತುಗಳು ಮೂಗನ ಕಿವಿಯಲ್ಲಿ ಸೀಸ ಸುರಿದಂತಾಗಿ, ತುತ್ತು ಕೈಯಿಂದ ಜಾರಿ ತಣಿಗೆಗೆ ಬಿತ್ತು. ಆ ಕ್ಷಣ ತಣಿಗೆಯಿಂದ 'ಉ ಊ ಮೆ..' ಎನ್ನುವ ಕೂಗು ಕೇಳಿಸಿದಂತೆ ಭಾಸವಾಗಿ ತಣಿಗೆಯಲ್ಲಿನ ಬಾಡಿನ ತುಂಡುಗಳನ್ನು ಮೂಗ ಕೈಯಿಂದ ಸವರಿದ. ಹೌದು, ಅವು ತನ್ನ ಮೇಕೆ ರಾಮನ ಮೈ ಖಂಡಗಳೇ ಆಗಿದ್ದವು. ಮೂಗ ತಣಿಗೆಯಲ್ಲಿ ಕೈ ತೊಳೆದು ಹೊರಕ್ಕೆ ಓಡಿ ಬಂದು ಹಟ್ಟಿ ಮೂಲೆಯ ಕತ್ತಲೆಯಲ್ಲಿ ಕುಳಿತು ಬಿಕ್ಕಳಿಸುತ್ತಾ ಅಳತೊಡಗಿದ. ಅರೆಗಳಿಗೆಯಲ್ಲಿ ನಿಂಗಮ್ಮನ ಕಣ್ಣುಗಳೂ ನೀರು ತುಂಬಿಕೊಂಡಿದ್ದವು. ಭೂಮಂಡಲದ ಸುಖ-ದುಃಖಗಳೆಲ್ಲವನ್ನೂ ಸೀಳಿ ಕೊಂಡು ಮೂಗನ ಬಿಕ್ಕಳಿಕೆ ಆಕಾಶದಲ್ಲಿನ ನಕ್ಷತ್ರಗಳ ಕಡೆ ನೆಗೆಯುತ್ತಿತ್ತು. □

ವೇದ-ಶಾಸ್ತ್ರ-ಪುರಾಣಗಳು ಮತ್ತು ಧಾರ್ಮಿಕ ಕಂದಾಚಾರಗಳ ಹೆಸರಿನಲ್ಲಿ ಸಾವಿರಾರು ವರ್ಷಗಳಿಂದ ಶೋಷಿಸಲ್ಪಟ್ಟ ದುರ್ಬಲರು ಹಾಗೂ ಕೆಳಜಾತಿಗಳಂತೆಯೇ ಹೀನಾಯವಾಗಿ ಇಂದಿಗೂ ಹಿಂಸಿಸಲ್ಪಡುತ್ತಿರುವವರೆಂದರೆ ಮಹಿಳೆಯರು. ಆಧುನಿಕತೆ-ನಾಗರಿಕತೆಗಳು ಬೆಳೆದಂತೆಲ್ಲಾ ಮಹಿಳಾ ಶೋಷಣೆ ಹೊಸ ರೂಪ ಪಡೆದುಕೊಳ್ಳುತ್ತಿರುವಂತೆಯೇ ಇಂದು ಮಹಿಳಾ ಪರ ಚರ್ಚೆ-ಹೋರಾಟಗಳು ತೀವ್ರವಾಗಿ ನಡೆಯುತ್ತಿರುವುದನ್ನು ಅಲ್ಲಗೆಳೆಯುವಂತಿಲ್ಲ. ಮಹಿಳಾ ಚಳವಳಿಯ ಬಲವರ್ಧನೆ ಸಂವಾದದ ಬಯಕೆಗಳಲ್ಲಿ ಒಂದು. ಆ ನಿಟ್ಟಿನಲ್ಲಿ ಮಹಿಳಾ ವಿಮೋಚನೆ ಮತ್ತು ಸವಾಲುಗಳನ್ನು ಕುರಿತು ಹಲವು ಜನ ಪ್ರಗತಿಪರ ಸಂಶೋಧಕರು ಮತ್ತು ಲೇಖಕಿಯರು ನೀಡಿದ ಪ್ರತಿಕ್ರಿಯೆಗಳು ಇಲ್ಲಿವೆ.

ಪ್ರಶ್ನೆಗಳು:

೧ ಸ್ತ್ರೀವಾದದ ಕಲ್ಪನೆ ಮತ್ತು ಮಹಿಳಾ ಸಮಾನತೆಯ ಪ್ರತಿಪಾದನೆ ದಲಿತ ಮತ್ತು ಹಿಂದುಳಿದ ವರ್ಗದ ಮಹಿಳೆಯರನ್ನು ಎಷ್ಟರಮಟ್ಟಿಗೆ ಪ್ರತಿನಿಧಿಸುತ್ತಿದೆ? ಅದು ಕೇವಲ ಮೇಲ್ವರ್ಗದ ಮಹಿಳೆಯರ ಚಳವಳಿಯಾಗಿದೆ ಎಂಬ ಟೀಕೆಗೆ ನೀವೇನನ್ನುತ್ತೀರಿ?

೨ ಸ್ತ್ರೀ ಸಂವೇದನೆಯೊಂದಿಗೆ ಹೊರ ಬಂದ(ಬರುತ್ತಿರುವ) ಸಾಹಿತ್ಯ ಮತ್ತು ಚಳವಳಿಗಳು ದಮನಿತ ವರ್ಗದ ಸ್ತ್ರೀಯರಿಗೆ ನ್ಯಾಯ ಒದಗಿಸಿವೆಯೆ?

೩. ಹೆಚ್ಚುತ್ತಿರುವ ಕೋಮುವಾದ, ಸಾಮಾಜಿಕ ಅಂಧಶ್ರದ್ಧೆ ಮತ್ತು ಲಿಂಗ ತಾರತಮ್ಯಗಳಿಂದ ಶೋಷಿತ ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವ ಬಗೆ ಹೇಗೆ?

೪ ಸ್ಥಳೀಯ ಸಂಸ್ಥೆಗಳ ಮೀಸಲು ನೀತಿ, ದಲಿತ-ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆಯರು ಮುಖ್ಯವಾಹಿನಿಗೆ ಬರಲು ಸಹಕಾರಿಯಾಗಿದಿಯೆ? ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಉದ್ದೇಶಿತ ಮಸೂದೆಯಲ್ಲಿ ಜಾತಿ ಮೀಸಲಾತಿ ನೀಡಬೇಕೆನ್ನುವ ಬಗೆಗೆ ನಿಮ್ಮ ಪ್ರತಿಕ್ರಿಯೆ ಏನು?

೫ ದುರ್ಬಲ ವರ್ಗಗಳ ಮಹಿಳೆಯರಿಗೆ ಹಾಗೂ ಅಸಹಾಯಕ ಮಹಿಳೆಯರ ರಕ್ಷಣೆಗೆ ಮಹಿಳಾ ಚಳವಳಿಗಳು ಏನೂ ಮಾಡುತ್ತಿಲ್ಲ ಎಂಬ ಟೀಕೆ ಇದೆ. ಇದರ ಬಗ್ಗೆ ನೀವು ಏನು ಹೇಳುತ್ತೀರಿ?

ನಿರ್ಲಕ್ಷಿತರನ್ನು ಅಲಕ್ಷಿಸಿರುವ ಸ್ತ್ರೀವಾದ



ಚರ್ಚೆ

ಡಾ|| ಶೈಲಜಾ ಹಿರೇಮಠ

೧) ವರ್ಣನಿಷ್ಠ ಜಾತಿನಿಷ್ಠ ವರ್ಗನಿಷ್ಠ ಭಾರತೀಯ ಸಮಾಜದಲ್ಲಿ 'ಮಹಿಳೆ' ಎನ್ನುವ ಸಾಮಾನ್ಯ ಪರಿಕಲ್ಪನೆಯಿಂದ ಹೊರಡುವ ಚಿಂತನೆಗಳು ಎಲ್ಲಾ ಸಮುದಾಯದ ಮಹಿಳೆಯರ ಹಿತಾಸಕ್ತಿಗಳನ್ನು ಪರಿಗಣಿಸಿರುತ್ತವೆ ಎಂದು ಹೇಳಲಾಗುವುದಿಲ್ಲ. 'ಮಾನವ' ಎಂಬ ಪದವು ಮೇಲ್ನೋಟಕ್ಕೆ ಹೆಣ್ಣು ಗಂಡುಗಳಿಬ್ಬರನ್ನೂ ಒಳಗೊಂಡಂತೆ ಕಂಡು ಬಂದರೂ ಅಧ್ಯಯನ ಮಾಡುವವರು ಪುರುಷರಾಗಿದ್ದರಿಂದ, ಸಾಮಾಜಿಕ, ರಾಜಕೀಯ, ಧಾರ್ಮಿಕ ಎಲ್ಲ ಅಧಿಕಾರ ವಲಯಗಳು ಅವರ ಪರವಾಗಿಯೇ ಇದ್ದುದರಿಂದ, ಪುರುಷಕೇಂದ್ರಿತವಾಗಿಯೇ ಜ್ಞಾನವಲಯಗಳು ರೂಪುಗೊಂಡವು. ಚಿಂತನೆ ರೂಪಿಸುವವರು ಹಾಗೂ ಅಧ್ಯಯನ ಮಾಡುವವರು ಯಾವ ಅಧಿಕಾರಕೇಂದ್ರಕ್ಕೆ ಸೇರಿದವರಾಗಿರುತ್ತಾರೋ ಅವರಿಂದ ರೂಪಗೊಳ್ಳುವ ಸಿದ್ಧಾಂತಗಳೆಲ್ಲ ಅವರ ಪರ ವಕಾಲತ್ತು ವಹಿಸಿಕೊಳ್ಳುತ್ತವೆ. 'ಮಹಿಳೆ' ಎನ್ನುವ ಸಾಮಾನ್ಯ ಪರಿಕಲ್ಪನೆಯನ್ನಿಟ್ಟು ಕೊಂಡು ಹೊರಡುವ ಸಮಾನತೆಯ ಪ್ರತಿಪಾದನೆಗಳೆಲ್ಲ, ಅಧ್ಯಯನ ಮಾಡುವ ಮಹಿಳೆಯರ ಜಾತಿಸಮುದಾಯಗಳ ಹಿತಾಸಕ್ತಿಗನುಗುಣವಾಗಿ ರೂಪಗೊಂಡಿರುತ್ತವೆ. ೧೯ನೇ ಶತಮಾನದಲ್ಲಿನ ರಾಷ್ಟ್ರೀಯವಾದಿಗಳು ಕೆಳ ಸಮುದಾಯದ ಮಹಿಳೆಯರ ಬಗ್ಗೆ ಆಲೋಚಿಸಲೇ ಇಲ್ಲ. ನವೋದಯದ ಸಂದರ್ಭದಲ್ಲಿದ್ದ ಮಂದಗಾಮಿ, ಸಮಾಜ ಸುಧಾರಣವಾದಿಗಳು ರೂಪಿಸಿದ ಬಾಲ್ಯ ವಿವಾಹ ನಿಷೇಧ, ಸ್ತ್ರೀ ಶಿಕ್ಷಣದಂತಹ ಮಹಿಳಾ ಅಭಿವೃದ್ಧಿ ನೀತಿಗಳು ದಲಿತ ಮಹಿಳೆಯರನ್ನು ಒಳಗೊಂಡಿದ್ದವು ಎಂದು ಒಪ್ಪಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ.

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ರೂಪ ಪಡೆದ 'ಭಾರತೀಯ ಮಹಿಳೆ' ಎನ್ನುವ ಏಕಶಿಲ್ಪದ ಪರಿಕಲ್ಪನೆ ಸ್ವಾತಂತ್ರ್ಯಾನಂತರವೂ ಮುಂದುವರೆಯಿತು. ತೀರ ಇತ್ತೀಚೆಗೆ Grassroots feminism ಹೆಸರಿನಲ್ಲಿ ಶೂದ್ರ ದಲಿತ ಮಹಿಳೆಯರ ಬಗ್ಗೆ ಪ್ರಸ್ತಾಪವಾಗುತ್ತಿದೆಯಾದರೂ ಅದು ಸಿದ್ಧಾಂತವಾಗಿ ಬೆಳೆದಿಲ್ಲ. ಸ್ತ್ರೀವಾದಗಳು ನಿರ್ಲಕ್ಷಿತ ಮಹಿಳಾ ಸಮುದಾಯಗಳನ್ನು ಅಲಕ್ಷಿಸಿವೆ. ಆಳದಲ್ಲಿ ಎಲ್ಲ ಮಹಿಳೆಯರೂ ಶೋಷಿತರೇ ಆದರೂ ವರ್ಣ, ಜಾತಿ, ವರ್ಗ ತಾರತಮ್ಯವುಳ್ಳ ಭಾರತೀಯ ಸಮಾಜದಲ್ಲಿ ಮಹಿಳಾ ಸಮಸ್ಯೆಗಳನ್ನು ಒಂದೇ ರೂಪದಲ್ಲಿಟ್ಟು ಚರ್ಚಿಸಲಾಗುವುದಿಲ್ಲ. ಮೇಲ್ಜಾತಿಯವರು ಸೃಷ್ಟಿಸಿದ ಜಾತಿ ಶ್ರೇಣೀಕರಣವನ್ನಿಟ್ಟು ಕೊಂಡೇ ಮಹಿಳಾ ಸಮಾನತೆಯನ್ನು ಪ್ರತಿಪಾದಿಸಬೇಕಿದೆ. ಪಶ್ಚಿಮದಲ್ಲಿ ಕಪ್ಪು ಮತ್ತು ಬಿಳಿ ಮಹಿಳೆಯರ ಶೋಷಣೆಯ ಅಂತರವನ್ನು ಗುರುತಿಸಿಕೊಂಡಂತೆಯೇ ಭಾರತದಲ್ಲಿ ಶೂದ್ರ ಸ್ತ್ರೀವಾದ, ಪಂಚಮ ಸ್ತ್ರೀವಾದ, ವೈದಿಕ ಸ್ತ್ರೀವಾದ, ಮುಸ್ಲಿಂ ಸ್ತ್ರೀವಾದ, ಕ್ರಿಶ್ಚಿಯನ್ ಸ್ತ್ರೀವಾದಗಳ ಪ್ರತ್ಯೇಕ-ಪ್ರತ್ಯೇಕ ಅಧ್ಯಯನ ನಡೆಯುವ ಜರೂರಿದೆ. ಈ ಪ್ರತ್ಯೇಕತೆ ವೈದಿಕ ಮಹಿಳಾ ಕಥನಕ್ಕೆ ವಿರುದ್ಧವಾದುದಲ್ಲ. ದಲಿತ ಮಹಿಳೆಯರ ಸಮಸ್ಯೆಗಳನ್ನು ವೈದಿಕ ಮಹಿಳೆಯ ಸಮಸ್ಯೆಯ ಜೊತೆಗೂಡಿಸಿ ಸಾಮಾಜಿಕ ನ್ಯಾಯ ಪ್ರತಿಪಾದಿಸಲಾಗುವುದಿಲ್ಲ. ಒಂದೊಂದು ಜಾತಿ, ಒಂದೊಂದು ಧರ್ಮ ಪ್ರತಿಯೊಬ್ಬರಿಗೂ ಒಂದೊಂದು ಬಗೆಯ ತಾರತಮ್ಯವನ್ನು, ಹಿಂಸೆಯನ್ನು ಸೃಷ್ಟಿಸಿರುತ್ತದೆ. ಪ್ರತಿಯೊಂದು ಜಾತಿಯಲ್ಲೂ ಪಿತೃಪ್ರಧಾನ ಅಧಿಕಾರ ಸಂಬಂಧಗಳು ವಿಭಿನ್ನವಾಗಿದ್ದು ವಿಭಿನ್ನ ಶೋಷಣೆಯ ನೆಲೆಗಳನ್ನು ಸೃಷ್ಟಿಸಿರುತ್ತವೆ.

೨) ಸ್ತ್ರೀ ಬವಣೆಯನ್ನು ಪ್ರಧಾನ ಚರ್ಚೆಯಾಗಿಟ್ಟುಕೊಂಡು ಹೊರ ಬಂದ ಬಹುಪಾಲು ಸಾಹಿತ್ಯ ಅಧ್ಯಯನಗಳು ದಮನಿತ ವರ್ಗದ ಮಹಿಳೆಯರನ್ನು ಸ್ವಾತಂತ್ರ್ಯ ಮತ್ತು ಶಕ್ತಿಯ ನೆಲೆಯಲ್ಲಿ ನಿರ್ವಚಿಸಿವೆ. ಮೇಲ್ಜಾತಿ ಮೇಲ್ವರ್ಗದ ಸ್ತ್ರೀಯರನ್ನು ಶೋಷಣೆಯ ನಿಲುಮೆಯಲ್ಲಿ ವ್ಯಾಖ್ಯಾನಿಸುತ್ತ ಅವರ ಬಂಧಿತ ಬದುಕಿನ ಮುಕ್ತಿಯ ಆಶಯ ಮಾದರಿಗಳನ್ನಾಗಿ ಕೆಳ ಸಮುದಾಯದ ಹೆಣ್ಣುಮಕ್ಕಳ ಜೀವನ ಶೈಲಿಯನ್ನು ಕಟ್ಟಿಕೊಡುತ್ತವೆ. ಕೆಳಜಾತಿಯ, ಕೆಳವರ್ಗದ ಮಹಿಳೆಯರ ಮಾತೃವಂಶೀಯರು, ಪ್ರತಿಭಟಿಸುವ ಛಾತಿಯುಳ್ಳವರು, ಬಂಧನದ ಬದುಕಿಗೆ ಅಳವಡದವರು, ಕುಟುಂಬದಲ್ಲಿ ಮತ್ತು ಅವರ ಸಮಾಜದಲ್ಲಿ ಉನ್ನತ ಸ್ಥಾನಮಾನವುಳ್ಳವ

ಎನ್ನುವ ಗ್ರಹಿಕೆಗಳನ್ನೇ ಇದುವರೆಗಿನ ಅಧ್ಯಯನಗಳು ಕಟ್ಟಿಕೊಟ್ಟಿವೆ. ಡಿ.ಆರ್.ನಾಗರಾಜ ಅವರಂತಹ ಸಾಂಸ್ಕೃತಿಕ ಚಿಂತಕರು ಕೂಡ ಶೂದ್ರಾತಿಶೂದ್ರ ಲೋಕಗಳಲ್ಲಿ ಸ್ತ್ರೀಶಕ್ತಿ ಮಾನ್ಯತೆ ಇದೆ ಎಂದು ನಂಬುತ್ತಾರೆ. ಮೇಲ್ಜಾತಿ, ಮೇಲ್ವರ್ಗದವರು ಶೂದ್ರ ಮತ್ತು ದಲಿತ ಮಹಿಳೆಯರ ಕುರಿತು ನೀಡುವ ಈ ಬಗೆಯ ನಿರ್ವಚನಗಳು, ಕೆಳ ಸಮುದಾಯದ ಮಹಿಳೆಯರು ಶೋಷಿತರು ಎಂದು ಆಲೋಚಿಸಲು ಯಾವುದೇ ರೀತಿಯ ಅವಕಾಶವನ್ನು ನೀಡುವುದಿಲ್ಲ. ಮೇಲ್ಜಾತಿ, ಮೇಲ್ವರ್ಗದ ಸ್ತ್ರೀಯರು ದೌರ್ಜನ್ಯಕ್ಕೆ ಒಳಗಾದವರು ಎನ್ನುವ ಗ್ರಹಿಕೆಯು ಅವರ ಸಮಸ್ಯೆಗಳನ್ನು ಕೇಳಿಸಿಕೊಳ್ಳುವ ಒಲವನ್ನು ಸಮಾಜದಲ್ಲಿ ಹುಟ್ಟು ಹಾಕುತ್ತದೆ. ನನ್ನ ಒಟ್ಟು ವಾಗ್ವಾದದಲ್ಲಿ ದಲಿತ, ದಮನೀತ ಎನ್ನುವ ಪದವನ್ನು ಅತ್ಯಂತಿಕವಾಗಿ ಬಳಸಿಲ್ಲ. ವಿಶ್ಲೇಷಣಾತ್ಮಕ ನೆಲೆಯಲ್ಲಿ ಪ್ರಯೋಗಿಸಲಾಗಿದೆ. ಮೀಸಲಾತಿ ಪಡೆಯದೆ ಇರುವ ದಲಿತ ಮಹಿಳೆಯರ ಸಮಸ್ಯೆಗಳನ್ನು ಪ್ರಮುಖವಾಗಿಟ್ಟುಕೊಂಡು ಚರ್ಚೆ ಬೆಳೆಸಿರುವೆ.

ರಾಷ್ಟ್ರೀಯ ಚಳವಳಿಯಲ್ಲಿ ಕಾಣಿಸಿಕೊಂಡ ಮಂದಗಾಮಿ ಸಮಾಜ ಸುಧಾರಕರು ಕೊಳಗೇರಿಯಲ್ಲಿ ಮಹಿಳೆಯರಿದ್ದಾರೆ, ಅವರಿಗೂ ಸಮಸ್ಯೆಗಳಿವೆ ಎನ್ನುವುದನ್ನು ಆಲೋಚಿಸಲೇ ಇಲ್ಲ. ಮೇಲ್ಜಾತಿಯ ಮಧ್ಯಮ ವರ್ಗದ ಪುರುಷರೇ ಈ ಚಳವಳಿಯಲ್ಲಿ ತೊಡಗಿಸಿಕೊಂಡದ್ದು ಇದಕ್ಕೆ ಮುಖ್ಯ ಕಾರಣವಾಗಿರಬಹುದು. ಇದೇ ಸಂದರ್ಭದಲ್ಲಿ ಅಂಬೇಡ್ಕರ್, ಜ್ಯೋತಿಬಾ ಪುಲೆ, ರಾಮಸ್ವಾಮಿ ಪೆರಿಯಾರ್ ಮೊದಲಾದ ದಲಿತ ನೇತಾರರು ಚಳವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರೂ ಅವರ ಮುಖ್ಯ ಕಾಳಜಿ ಜನಾಂಗದ ಅಸ್ತಿತ್ವಕ್ಕೆ ಸಂಬಂಧಿಸಿತ್ತೆ ಹೊರತು, ದಲಿತ ಮಹಿಳೆಯರ ಸಮಸ್ಯೆಗಳಿಗಲ್ಲ. ಸ್ತ್ರೀಶಿಕ್ಷಣಕ್ಕಾಗಿ ಹೋರಾಡಿದ ಪುಲೆ ಅವರು ಶೂದ್ರಾತಿಶೂದ್ರ ಪುರುಷರು ಒಳಗಾಗುವ ತುಳಿತಕ್ಕೂ, ಒಟ್ಟು ಮಹಿಳೆಯರ ಮೇಲೆ ನಡೆಯುವ ಶೋಷಣೆಗೂ ಸಾಮ್ಯತೆಯನ್ನು ಕಲ್ಪಿಸುತ್ತಾರೆ. ಎಲ್ಲ ಮಹಿಳೆಯರೂ ಶೋಷಿತರಾದರೂ ಜಾತಿ ನಿಷ್ಠವಾದ ಭಾರತದಲ್ಲಿ ಯಾರು ಹೆಚ್ಚು ಅನ್ಯಾಯಕ್ಕೆ ಒಳಗಾದವರು ಎನ್ನುವುದನ್ನು ವಿಶ್ಲೇಷಿಸಲು ಹೋಗದೇ, 'ಮಹಿಳೆ' ಎನ್ನುವ ಸಾಮಾನ್ಯ ಪರಿಕಲ್ಪನೆಯಲ್ಲಿಯೇ ಅವರ ಮೇಲೆ ನಡೆಯುವ ಅನ್ಯಾಯಗಳನ್ನು ವಿವರಿಸಿ ಬಿಡುತ್ತಾರೆ. ದಲಿತ ನೇತಾರರಿಂದಲೇ ದಲಿತ ಮಹಿಳೆ ನಿರ್ಲಕ್ಷ್ಯಕ್ಕೆ ಒಳಗಾದಳು. ಇವತ್ತಿನ ಮಹಿಳಾ ಚಳವಳಿ ಮತ್ತು ಸಾಹಿತ್ಯದಲ್ಲಿ ಪ್ರಸ್ತಾಪಗೊಳ್ಳುತ್ತಿರುವ ಮಹಿಳಾ ವಿಷಯಗಳೆಂದರೆ, ವರದಕ್ಷಿಣೆ ನಿಷೇದ, ಸ್ತ್ರೀ ಭ್ರೂಣಹತ್ಯೆ, ಅತ್ಯಾಚಾರ, ಆಸ್ತಿಹಕ್ಕು, ಸಮಾನ ನಾಗರಿಕ ಹಕ್ಕುಗಳು, ಸಮಾನ ಉದ್ಯೋಗಗಳು, ಚರ್ಚೆಗೊಳಗಾಗುತ್ತಿರುವ ಈ ಸಮಸ್ಯೆಗಳೆಲ್ಲಾ ಮೇಲ್ಜಾತಿ, ಮೇಲ್ವರ್ಗದ ಹಾಗೂ ಮಧ್ಯಮ ಜಾತಿ, ಮಧ್ಯಮ ವರ್ಗದ ಮಹಿಳೆಯರ ಕಾಳಜಿಯನ್ನೇ ಪ್ರಧಾನವಾಗಿಸಿಕೊಂಡಿವೆ.

೩) ಕೋಮುವಾದಿಗಳು ಹೆಣ್ಣನ್ನು ಆಸ್ತಿ ಎಂದೇ ಪರಿಗಣಿಸುತ್ತಾರೆ. ಹೀಗಾಗಿ ಅವಳನ್ನು ಜತನದಿಂದ ಕಾಯುತ್ತಾರೆ. ಅವಳಿಗೆ ಧಕ್ಕೆ ಬಂದಿದೆ ಎಂದು ಭಾವಿಸಿದಾಗ ತೀವ್ರವಾಗಿ ಪ್ರತಿಕ್ರಿಯಿಸುತ್ತಾರೆ. ಭಾರತ, ಪಾಕಿಸ್ತಾನಗಳಾದಾಗ ಕಾರಣಾಂತರಗಳಿಂದಾಗಿ ಭಾರತದ ಅನೇಕ ಮಹಿಳೆಯರು ಪಾಕಿಸ್ತಾನದಲ್ಲುಳಿದರು. ಪಾಕಿಸ್ತಾನದ ಅನೇಕ ಮಹಿಳೆಯರು ಭಾರತದಲ್ಲುಳಿದರು. ಇಂತಹ ಮಹಿಳೆಯರಿಗಾಗಿ ಸರಕಾರ ಮಟ್ಟದಲ್ಲಿಯೇ exchange program ನಡೆಯಿತು. ಆ ಹೊತ್ತಿನಲ್ಲಿ exchangeಗೆ ಒಳಗಾದ ಮಹಿಳೆಯರಿಗೆ ನೀವು ಎಲ್ಲಿರಬಯಸುತ್ತೀರಿ ಎಂದು ಯಾರೂ ವಿಚಾರಿಸಿಕೊಳ್ಳಲಿಲ್ಲ. ಪಾಕಿಸ್ತಾನದವರು ನಾವಿಷ್ಟು ಸಂಖ್ಯೆಯಲ್ಲಿ ಹೆಣ್ಣು ಮಕ್ಕಳನ್ನು ಭಾರತಕ್ಕೆ ಹಿಂತುರಿಗಿಸಿದೆವು ಎಂದು ಹೇಳಿಕೊಂಡರೆ, ಭಾರತದವರು, 'ಪಾಕಿಸ್ತಾನದವರ ಹಾಗೆ ನಾವು ಅವರ ಹೆಣ್ಣು ಮಕ್ಕಳನ್ನು ನಡೆಸಿಕೊಳ್ಳಲಿಲ್ಲ, ಅವರ ಸ್ತ್ರೀಯರನ್ನು ಸುರಕ್ಷಿತವಾಗಿ ಅವರ ದೇಶಕ್ಕೆ ಹಸ್ತಾಂತರಿಸಿದೆವು' ಎಂದು ಬೀಗಿದರು. ಹೀಗೆ 'ಆಸ್ತಿ'ಯಾಗಿ ಪರಿಗಣಿತವಾದ ಮಹಿಳೆಯರು ಸ್ವಂತ ಆಸ್ತಿಯನ್ನು, ಅಸ್ತಿತ್ವವನ್ನು ಕಳೆದುಕೊಂಡವರಾಗಿಬಿಡುತ್ತಾರೆ. ಹೆಚ್ಚುತ್ತಿರುವ ಕೋಮುವಾದವು ಮತಾಂಧ ಪಿತೃಪ್ರಧಾನ ವ್ಯವಸ್ಥೆಯನ್ನು ಹುಟ್ಟುಹಾಕುತ್ತಿದೆ. ಹಿಂದೂ ಧರ್ಮದ ಹೆಸರಿನಲ್ಲಿ ವೈದಿಕ ಧರ್ಮವು ತನ್ನ ಹಳೆಯ ಮೌಲ್ಯಗಳನ್ನು ವಿಜೃಂಭಿಸುತ್ತಾ ಮಹಿಳೆಯರನ್ನು ಮತ್ತದೇ ಹಳೆಯ ಚೌಕಟ್ಟಿನಲ್ಲಿ ಬಂಧಿಸಿಡಲು ಆಸಕ್ತವಾಗಿದೆ. ಮುಸ್ಲಿಂ ಧರ್ಮದಲ್ಲಿ ಹೆಚ್ಚುತ್ತಿರುವ ಕೋಮುವಾದವು ಮುಸ್ಲಿಂ ಮಹಿಳೆಯರ ಮೇಲೆ ಅಡ್ಡ ಪರಿಣಾಮಗಳನ್ನು ಬೀರುತ್ತಿದೆ. ಕಡ್ಡಾಯವಾಗುತ್ತಿರುವ ಬುರ್ಖಾದೊಳಗೆ ಮಹಿಳೆಯರ ಕನಸುಗಳು ಉಸಿರುಗಟ್ಟುತ್ತಿವೆ. ಯಾವುದೇ ಧರ್ಮದ ಚೌಕಟ್ಟಿಗೆ ಬರದ ಕೆಳಜಾತಿ, ಬುಡಕಟ್ಟು ಮಹಿಳೆಯರ ಸ್ಥಿತಿಗತಿ ಮತ್ತಷ್ಟು ಭಯಾನಕವಾಗುತ್ತಿದೆ. ಮತಾಂಧತೆ ಹೆಚ್ಚಿದಂತೆಲ್ಲಾ ಜಾತಿ ಶ್ರೇಣೀಕರಣಕ್ಕನು ಗುಣವಾಗಿದ್ದ ಪಿತೃ ಪ್ರದಾನ ಮೌಲ್ಯಗಳು ಪ್ರಬಲಗೊಳ್ಳುತ್ತಿವೆ. ದಲಿತ ಪುರುಷರು ಸಂಸ್ಕೃತಿಯ ಹೆಸರಿನಲ್ಲಿ ಪುರುಷ ನಿಷ್ಠ ಮೌಲ್ಯಗಳನ್ನು ಗಟ್ಟಿಗೊಳಿಸುತ್ತಿದ್ದಾರೆ. ಇದೆ ತಾನೆ ಎಚ್ಚೆತ್ತು ಸಂಘಟನೆಗೊಳ್ಳುತ್ತಿರುವ ಮಹಿಳೆಯರ ಮೇಲೆ ಕೋಮುವಾದವು ಗಾಢವಾದ ಪರಿಣಾಮವನ್ನು ಬೀರುತ್ತಿದೆ.

ಶೋಷಿತ ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವ ಬಗೆ ಗೊತ್ತಾಗಿದ್ದಿದ್ದರೆ ಬಹುಶಃ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಚರ್ಚೆಗಳೇ ಇರುತ್ತಿರಲಿಲ್ಲ. ದೇವದಾಸಿಯರನ್ನೇ ಇಟ್ಟುಕೊಂಡು ಮಹಿಳಾ ಹಕ್ಕು ಮತ್ತು ಸ್ವಾತಂತ್ರ್ಯವನ್ನು ವಿಶ್ಲೇಷಿಸಬಯಸುತ್ತೇನೆ. ದೇವದಾಸಿಯರಲ್ಲಿ ಜಾಗ್ರತೆ ಪ್ರಜ್ಞೆ ಮೂಡಿದೆ ಎಂದು ಕಂಡುಬಂದರೂ ಅದು ಅವರ ಒಳಗಿನ ಅರಿವಿನಿಂದ ರೂಪ ಪಡೆದುಕೊಂಡದ್ದಲ್ಲ. ದೇವದಾಸಿಯರನ್ನು ಪ್ರಶ್ನಿಸಿದಾಗ ಲೈಂಗಿಕ ವೃತ್ತಿ ಬೇಕು ಇಲ್ಲವೆ ಬೇಡ ಎನ್ನುವ ಎರಡು ಸಿದ್ಧ ಉತ್ತರಗಳು ಅವರಿಂದ ದೊರೆಯುತ್ತವೆ. ಲೈಂಗಿಕ ವೃತ್ತಿ ಬೇಡ ಎಂದೆನ್ನುವವರು ಮದುವೆಯನ್ನು ಪರ್ಯಾಯ ಪರಿಹಾರವಾಗಿ ಭಾವಿಸುತ್ತಿದ್ದಾರೆ. ಹೀಗೆ ಹೇಳುವವರು ಸರಕಾರ, ಮತ್ತು ಸಂಘಸಂಸ್ಥೆಗಳ ಕಾರ್ಯಕ್ರಮಗಳಿಂದ ಪ್ರಭಾವಿತರಾದವರು. ಸರಕಾರವಾಗಿಲಿ, ಸಂಘಸಂಸ್ಥೆಗಳಾಗಲಿ, ಉದಾರವಾಗಿ ಆಲೋಚಿಸುತ್ತಿದೆ ಎಂದುಕೊಂಡರೂ ಅವುಗಳು ಪುರುಷ ನಿಷ್ಠಮೌಲ್ಯಗಳಿಂದ ಹೊರಬಂದಿಲ್ಲ. ದೇವದಾಸಿಯರಲ್ಲಿ ಕೆಲವರು ತಮ್ಮ ವೃತ್ತಿಯನ್ನು ಕಾನೂನು ಬದ್ಧಗೊಳಿಸಲು ಸರಕಾರವನ್ನು ಒತ್ತಾಯಿಸುತ್ತಿದ್ದಾರೆ. ಇದು ಕೂಡ ಅವರ ಸ್ವಂತದ ಅಭಿಪ್ರಾಯವಲ್ಲ. ಪುರುಷಕೇಂದ್ರಿತ ಲೈಂಗಿಕ ಮಾರುಕಟ್ಟೆಯ ದಲ್ಲಾಳಿಗಳು ಹೇಳಿಕೊಟ್ಟ ಗಿಳಿಪಾಠವಾಗಿದೆ.

೪) ಮೇಲ್ಜಾತಿಯ, ಮೇಲ್ವರ್ಗದ ಮಹಿಳೆಯರು ಶಿಕ್ಷಣ, ಉದ್ಯೋಗ, ಉದ್ದಿಮೆಗಳಂತಹ ಕಾರಣಗಳಿಂದಾಗಿ ಗ್ರಾಮಗಳಿಂದ ತಾಲೂಕುಗಳಿಗೆ, ಜಿಲ್ಲೆಗಳಿಗೆ ವಲಸೆ ಹೋಗಿರುವರು. ಈ ಸಧ್ಯಕ್ಕಂತೂ ಗ್ರಾಮ ಪಂಚಾಯತಗಳಿಗೆ ಹೇಳಿಕೊಳ್ಳು, ವಂತಹ ಸ್ವತಂತ್ರ ಅಧಿಕಾರವೇನೂ ಇಲ್ಲ. ಮೇಲ್ಜಾತಿ,

(೫೭ನೇ ಪುಟಕ್ಕೆ)

> **ಪಶ್ಚಿಮದಲ್ಲಿ ಕಪ್ಪು ಮತ್ತು ಬಿಳಿ ಮಹಿಳೆಯರ ಶೋಷಣೆಯ ಅಂತರವನ್ನು ಗುರುತಿಸಿಕೊಂಡಂತೆಯೇ ಭಾರತದಲ್ಲಿ ಶೂದ್ರ ಸ್ತ್ರೀವಾದ, ಪಂಚಮ ಸ್ತ್ರೀವಾದ, ವೈದಿಕ ಸ್ತ್ರೀವಾದ, ಮುಸ್ಲಿಂ ಸ್ತ್ರೀವಾದ, ಕ್ರಿಶ್ಚಿಯನ್ ಸ್ತ್ರೀವಾದಗಳ ಪ್ರತ್ಯೇಕ-ಪ್ರತ್ಯೇಕ ಅಧ್ಯಯನ ನಡೆಯುವ ಜರೂರಿದೆ. ಈ ಪ್ರತ್ಯೇಕತೆ ವೈದಿಕ ಮಹಿಳಾ ಕಥನಕ್ಕೆ ವಿರುದ್ಧವಾದುದಲ್ಲ. ದಲಿತ ಮಹಿಳೆಯರ ಸಮಸ್ಯೆಗಳನ್ನು ವೈದಿಕ ಮಹಿಳೆಯ ಸಮಸ್ಯೆಯ ಜೊತೆಗೂಡಿಸಿ ಸಾಮಾಜಿಕ ನ್ಯಾಯ ಪ್ರತಿಪಾದಿಸಲಾಗುವುದಿಲ್ಲ. ಒಂದೊಂದು ಜಾತಿ, ಒಂದೊಂದು ಧರ್ಮ ಪ್ರತಿಯೊಬ್ಬರಿಗೂ ಒಂದೊಂದು ಬಗೆಯ ತಾರತಮ್ಯವನ್ನು, ಹಿಂಸೆಯನ್ನು ಸೃಷ್ಟಿಸಿರುತ್ತದೆ. ಪ್ರತಿಯೊಂದು ಜಾತಿಯಲ್ಲೂ ಪಿತೃಪ್ರಧಾನ ಅಧಿಕಾರ ಸಂಬಂಧಗಳು ವಿಭಿನ್ನವಾಗಿದ್ದು, ವಿಭಿನ್ನ ಶೋಷಣೆಯ ನೆಲೆಗಳನ್ನು ಸೃಷ್ಟಿಸಿರುತ್ತವೆ.**

ರಾಷ್ಟ್ರೀಯ ಚಳವಳಿಯಲ್ಲಿ ಕಾಣಿಸಿಕೊಂಡ ಮಂದಗಾಮಿ ಸಮಾಜ ಸುಧಾರಕರು ಕೊಳಗೇರಿಯಲ್ಲಿ ಮಹಿಳೆಯರಿದ್ದಾರೆ, ಅವರಿಗೂ ಸಮಸ್ಯೆಗಳಿವೆ ಎನ್ನುವುದನ್ನು ಆಲೋಚಿಸಲೇ ಇಲ್ಲ.

ಚರ್ಚೆ

ದಮನಿತ ಮಹಿಳೆಯರ ಹೋರಾಟವಾಗಬೇಕು

ಡಾ|| ಎಂ. ಸುಮಿತ್ರ

೧) ಸ್ತ್ರೀವಾದದ ಕಲ್ಪನೆಯೇ ಪಾಶ್ಚಾತ್ಯರ ಪ್ರಭಾವದಿಂದ ಸೃಷ್ಟಿಯಾದದ್ದು. ಇನ್ನು ಮಹಿಳಾ ಸಮಾನತೆಯನ್ನು ಕುರಿತು ಹೇಳುವುದಾದರೆ, ಭಾರತ ದೇಶದ ಪರಿಸ್ಥಿತಿಯಲ್ಲಿ ಇಲ್ಲಿನ ಸ್ತ್ರೀಯರು ಬಹುಪಾಲು ವೈದಿಕ ಪರಂಪರೆಯ ಹಿನ್ನೆಲೆ ಯಲ್ಲಿಯೇ ತಮ್ಮ ಬದುಕನ್ನು ರೂಪಿಸಿಕೊಳ್ಳಲಿಕ್ಕೆ ಪ್ರಯತ್ನಿಸು ತ್ತಿರುವುದರಿಂದ ಅವರಿಗೆ ಸಮಾನತೆಯೂ ಇಲ್ಲ ಸ್ವತಂತ್ರ ವ್ಯಕ್ತಿತ್ವವೂ ಇಲ್ಲ. ಸ್ತ್ರೀಯರನ್ನು ಶೂದ್ರರ ಜೊತೆಯಲ್ಲಿ ಪರಿಗಣಿಸಿರುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರ ಬಗ್ಗೆ ಅನುಕಂಪ ಹುಟ್ಟಿಸುವಂತಹ ಹಾಗೂ ಸಮಾನತೆಯನ್ನು ಪ್ರತಿ ಪಾದಿಸುವ ಬರವಣಿಗೆಗಳು ಅತಿಯಾಗಿ ಬಂದರೂ ಅವುಗಳು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಪುರುಷರ ಅಧೀನವಾಗಿಯೇ ಚಿತ್ರಿಸಿವೆ.

ಮೇಲ್ವರ್ಗದ ಪುರುಷ ಮತ್ತು ಸ್ತ್ರೀ ಸುಧಾರಣಾವಾದಿಗಳು ರೂಪಿಸಿಕೊಂಡ ಸ್ತ್ರೀಮಾದರಿಗಳು ವೈದಿಕ ಪರಂಪರೆಯ ನಂಬಿಕೆಗಳನ್ನು ವಿರೋಧಿಸಲಿಕ್ಕೆ ಸಾಧ್ಯವಾಗಲಿಲ್ಲ. ಮೇಲ್ವರ್ಗದ ಸ್ತ್ರೀಯರ ಸ್ಥಿತಿಗತಿಗಳೇ ಹೀಗಾದರೆ ಹಿಂದುಳಿದ ಮತ್ತು ದಲಿತ ವರ್ಗಗಳ ಮಹಿಳೆಯರ ಸ್ಥಿತಿಗತಿಗಳು ಹೇಗಿರಬಹುದೆಂಬುದನ್ನು ಊಹಿಸಿಕೊಳ್ಳಬಹುದು.

ಆಧುನಿಕ ಸಂದರ್ಭದಲ್ಲಿ ಪಾಶ್ಚಾತ್ಯರ ಪ್ರೇರಣೆಯಿಂದ ಸ್ತ್ರೀ ವಾದದ ಚಳವಳಿ ರೂಪುಗೊಂಡರೂ ಈ ಚಳವಳಿಗಳು ಕೇವಲ ಮೇಲ್ವರ್ಗದ ಮಹಿಳೆಯರ ಮತ್ತು ಶ್ರೀಮಂತ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿವೆ. ಇದರಿಂದ ಶೋಷಿತ ವರ್ಗದ ಮಹಿಳೆಯರಿಗೆ ಸಾಮಾಜಿಕ ನ್ಯಾಯ, ಆರ್ಥಿಕ, ರಾಜಕೀಯ ಸಮಾನತೆಯಾಗಲೀ, ಸ್ವಾತಂತ್ರ್ಯವಾಗಲೀ ಮಹಿಳಾ ಚಳವಳಿಗಳಿಂದ ಸಿಗಲಿಕ್ಕೆ ಸಾಧ್ಯವಾಗುತ್ತಿಲ್ಲ.

೨) ಖಂಡಿತ ಇಲ್ಲ. ಆಧುನಿಕ ಸಾಹಿತ್ಯದಲ್ಲಿ ಸ್ತ್ರೀಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಬರಹಗಾರರು ಮೇಲ್ನೋಟಕ್ಕೆ ಎತ್ತಿ ಹಿಡಿದಂತೆ ಕಂಡರೂ ಅದು ವಾಸ್ತವವಾಗಿ ಪುರುಷ ಪ್ರಧಾನ ಸಂಸ್ಕೃತಿಯ ಮೌಲ್ಯಗಳನ್ನೇ ಪ್ರತಿನಿಧಿಸುತ್ತಿವೆ. ಸ್ತ್ರೀ ಸಂವೇದನೆಯನ್ನು ಕುರಿತು ಬರೆದ ಬರಹಗಾರರಾಗಲೀ ಅಥವಾ ಬರಹಗಾರ್ತಿಯರಾಗಲೀ ಬಹುಪಾಲು ಮೇಲ್ವರ್ಗದಿಂದ ಬಂದವ ರಾದ್ದರಿಂದ, ಅವರು ಕೆಲವು ಸಾಮಾಜಿಕ ಸುಧಾರಣೆಗಳನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಿಗೊಳಿಸಿದರೇ ಹೊರತು ಸ್ತ್ರೀ ಸಮಸ್ಯೆಗಳು ಒಂದು ಚಳವಳಿಯಾಗಿ ರೂಪುಗೊಳ್ಳುವಂತೆ ಸಕ್ರಿಯಾತ್ಮಕವಾಗಿ ಪ್ರಯತ್ನಿಸಿದವರಲ್ಲ.

ಹೀಗಾಗಿ ಈ ಬರಹಗಾರರು ಶ್ರೀಮಂತ ವರ್ಗದ ಸ್ತ್ರೀ ಸಮಸ್ಯೆಗಳನ್ನು ಹೆಚ್ಚಾಗಿ ಚಿಂತಿಸಿದರೇ ಹೊರತು, ಹಿಂದುಳಿದ ಮತ್ತು ದಲಿತ ವರ್ಗಗಳ ಮಹಿಳೆಯರ ಸಮಸ್ಯೆಗಳನ್ನಲ್ಲ. ಅವರ ಸ್ವಾತಂತ್ರ್ಯ ಮತ್ತು ಸಮಾನತೆಗಳ ಅರಿವನ್ನು ಮೂಡಿಸುವ ಅಂಶಗಳು ಹೆಚ್ಚಾಗಿ ಸಮಾನತೆಗಳ ಅರಿವನ್ನು ಮೂಡಿಸುವ ಅಂಶಗಳು ಹೆಚ್ಚಾಗಿ ಕಾಣಸಿಕೊಳ್ಳಲೇ ಇಲ್ಲ. ಇದರಿಂದ ಹಿಂದುಳಿದ ಮತ್ತು ದಲಿತ ವರ್ಗದ ಮಹಿಳೆಯರ ಅನೇಕ ಪ್ರಗತಿಪರ ಆಚಾರ-ವಿಚಾರಗಳು ಮೇಲ್ವರ್ಗದ ಸ್ತ್ರೀಯರ ಪ್ರಭಾವದಿಂದ ಹತ್ತಿಕ್ಕಲ್ಪಟ್ಟಿದ್ದಷ್ಟೇ ಅಲ್ಲ, ಅವರ ಬರಹಗಳ ಲ್ಲಿಯೂ ವಾಸ್ತವಿಕ ಸಂಗತಿಗಳ ಕಡೆ ಗಮನಹರಿಸದೆ ಕೀಳರಿಮೆ ಯಿಂದ ಮೇಲ್ವರ್ಗದ ಸ್ತ್ರೀಯರ ಬದುಕನ್ನು, ಚಿಂತನೆಗಳನ್ನು ಅನುಕರಣೆ ಮಾಡುವ ಸಾಹಿತ್ಯ ಸೃಷ್ಟಿಯಾಯಿತು. ಇದರಿಂದ ಸ್ತ್ರೀ ಸಂವೇದನಾ ಸಾಹಿತ್ಯ ಮತ್ತು ಚಳವಳಿಗಳಲ್ಲಿ ಬಹುಪಾಲು ಮೇಲ್ವರ್ಗದವರ ಪಾತ್ರ ಹೆಚ್ಚಾಗಿದ್ದುದರಿಂದ ದಮನಿತ ಮಹಿಳೆಯರ ಸ್ವಾತಂತ್ರ್ಯ ಮತ್ತು ಸಮಾನತೆಗಳು ಅಭಿವ್ಯಕ್ತಗೊಳ್ಳಲು ಸಾಧ್ಯವಾಗದೇ ಇರುವುದರಿಂದ ನ್ಯಾಯ ಒದಗಿಸಲು ವಿಫಲವಾಗಿರುವುದು ವಿಷಾದವೆನಿಸುತ್ತದೆ.

೩) ಕೋಮುವಾದ, ಸಾಮಾಜಿಕ ಮೂಢನಂಬಿಕೆ ಮತ್ತು ಲಿಂಗತಾರತಮ್ಯ ಇವುಗಳು ಶೋಷಿತ ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯಗಳಿಗೆ ಬಲವಾದ ಪೆಟ್ಟನ್ನು ಕೊಡುತ್ತಿವೆ. ಇಂತಹ ಅಂಧಶ್ರದ್ಧೆಗಳಿಂದ ಸ್ತ್ರೀಯರು ಬಹುಬೇಗ ಹೊರ ಬರಬೇಕಾಗಿದೆ. ಸ್ತ್ರೀವಾದದ ಚಳವಳಿಗಳು ತೀವ್ರಗೊಂಡಷ್ಟು ಸ್ತ್ರೀಯರು ಮತ್ತಷ್ಟು ಶೋಷಣೆಗೆ ಒಳಗಾಗುತ್ತಿರುವುದು ದುರಂತವೇ ಸರಿ. ಸ್ತ್ರೀಶೋಷಣೆಯಲ್ಲಿ ಪುರುಷರ ಜೊತೆಯಲ್ಲಿ ಸ್ತ್ರೀಯರು ಪಾಲ್ಗೊಳ್ಳುತ್ತಿರುವುದು ಮತ್ತಷ್ಟು ದುರಂತ. ಈ ರೀತಿಯ ಸಮಸ್ಯೆಗಳಿಗೆ ಸ್ತ್ರೀಯರೇ ಪರಿಹಾರ ಕಂಡುಕೊಳ್ಳಬೇಕಾಗಿದೆ. ಸ್ತ್ರೀಯರ ನಡುವೆ ಪರಸ್ಪರ ಸಂವಾದ ನಡೆಯಬೇಕು. ಸ್ತ್ರೀ ಸಮಸ್ಯೆಗಳನ್ನು ಮೊದಲು ಸ್ತ್ರೀಯರೇ ಅರ್ಥಮಾಡಿಕೊಂಡು ಅವರಿಗೆ ಸ್ಪಂದಿಸಬೇಕು. ಸ್ತ್ರೀಯರಲ್ಲಿ ವೈಚಾರಿಕತೆ ಮೂಡಿ ಅವರಲ್ಲಿ ಸ್ತ್ರೀ ಸ್ವಾತಂತ್ರ್ಯದ ಪ್ರಜ್ಞೆ ಜಾಗೃತಗೊಳ್ಳುವಂತೆ ಮಾಡಬೇಕು.

ಇವೆಲ್ಲದರ ಜೊತೆಯಲ್ಲಿ ಶೋಷಿತ ಮಹಿಳೆಯರು ತಮ್ಮ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ರಕ್ಷಿಸಿಕೊಳ್ಳಬೇಕಾದರೆ ಮೊದಲು ಸುಶಿಕ್ಷಿತರಾಗಿ ಸಂಘಟಿತರಾಗಬೇಕು. ತಮ್ಮ ಹಕ್ಕುಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ತಮ್ಮ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ಬರದಂತೆ ಆತ್ಮವಿಶ್ವಾಸದಿಂದ ಸೆಟೆದು ನಿಲ್ಲಬೇಕು. ಸ್ತ್ರೀಯರ ಸಮಸ್ಯೆಗಳನ್ನು ಕುರಿತ ಕಾರ್ಯಾಗಾರಗಳು, ವಿಚಾರ ಸಂಕಿರಣಗಳು, ಚಳವಳಿಗಳು ನಡೆಯಬೇಕು. ಅಷ್ಟೇ ಅಲ್ಲ, ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲಗೊಳಿಸುವ ಯೋಜನೆಗಳು ಜಾರಿಗೆ ಬರಬೇಕು. ಇದರೊಂದಿಗೆ ಶೋಷಿತ ವರ್ಗದ ಮಹಿಳೆಯರಿಂದಲೇ ಉತ್ತಮ ನಾಯಕತ್ವ ಮೂಡಿಬರಬೇಕು.

೪) ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಕೇವಲ ಸ್ಥಳೀಯ ಸಂಸ್ಥೆಗಳ ಮೀಸಲು ನೀತಿಯಿಂದ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆಯರು ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಲು ಸಹಕಾರಿಯಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಏಕೆಂದರೆ, ಮೀಸಲಾತಿ ಸೌಲಭ್ಯಗಳಿಂದ ಈ ವರ್ಗಗಳ ಮಹಿಳೆಯರು ಅಭಿವೃದ್ಧಿ ಹೊಂದುತ್ತಿದ್ದಾರೆ ಎಂದು ಮೇಲ್ನೋಟಕ್ಕೆ ಅನುಕಂಪದ ಮಾತುಗಳನ್ನು ಮೇಲ್ವರ್ಗದವರು ಮಾತನಾಡುತ್ತಿದ್ದಾರೆ. ಆದರೆ ವಾಸ್ತವವಾಗಿ ಈ

ಕೋಮುವಾದ, ಸಾಮಾಜಿಕ ಮೂಢನಂಬಿಕೆ ಮತ್ತು ಲಿಂಗತಾರತಮ್ಯ ಇವುಗಳು ಶೋಷಿತ ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯಗಳಿಗೆ ಬಲವಾದ ಪೆಟ್ಟನ್ನು ಕೊಡುತ್ತಿವೆ. ಇಂತಹ ಅಂಧಶ್ರದ್ಧೆಗಳಿಂದ ಸ್ತ್ರೀಯರು ಬಹುಬೇಗ ಹೊರ ಬರಬೇಕಾಗಿದೆ. ಸ್ತ್ರೀವಾದದ ಚಳವಳಿಗಳು ತೀವ್ರಗೊಂಡಷ್ಟು ಸ್ತ್ರೀಯರು ಮತ್ತಷ್ಟು ಶೋಷಣೆಗೆ ಒಳಗಾಗುತ್ತಿರುವುದು ದುರಂತವೇ ಸರಿ. ಸ್ತ್ರೀಶೋಷಣೆಯಲ್ಲಿ ಪುರುಷರ ಜೊತೆಯಲ್ಲಿ ಸ್ತ್ರೀಯರು ಪಾಲ್ಗೊಳ್ಳುತ್ತಿರುವುದು ಮತ್ತಷ್ಟು ದುರಂತ. ಈ ರೀತಿಯ ಸಮಸ್ಯೆಗಳಿಗೆ ಸ್ತ್ರೀಯರೇ ಪರಿಹಾರ ಕಂಡುಕೊಳ್ಳಬೇಕಾಗಿದೆ. ಸ್ತ್ರೀಯರ ನಡುವೆ ಪರಸ್ಪರ ಸಂವಾದ ನಡೆಯಬೇಕು. ಸ್ತ್ರೀ ಸಮಸ್ಯೆಗಳನ್ನು ಮೊದಲು ಸ್ತ್ರೀಯರೇ ಅರ್ಥಮಾಡಿಕೊಂಡು ಅವರಿಗೆ ಸ್ಪಂದಿಸಬೇಕು. ಸ್ತ್ರೀಯರಲ್ಲಿ ವೈಚಾರಿಕತೆ ಮೂಡಿ ಅವರಲ್ಲಿ ಸ್ತ್ರೀ ಸ್ವಾತಂತ್ರ್ಯದ ಪ್ರಜ್ಞೆ ಜಾಗೃತಗೊಳ್ಳುವಂತೆ ಮಾಡಬೇಕು.

ಮಾತುಗಳನ್ನಾಡುವವರೇ ಸಾಮಾಜಿಕ ವ್ಯವಸ್ಥೆ ಸಡಿಲಗೊಳ್ಳದಂತೆ ಸುವ್ಯವಸ್ಥಿತವಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ಮೀಸಲಾತಿಯ ನೆಪದಲ್ಲಿ ಸ್ತ್ರೀಯರ ಅಧಿಕಾರ ಮತ್ತು ಹಕ್ಕುಗಳನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ.

ಮೀಸಲಾತಿ ನೀತಿಯಿಂದ ಬಂದ ಮಹಿಳೆಯರು ಕೇವಲ ಉತ್ಸವ ಮೂರ್ತಿಗಳಂತೆ ಸ್ಥಾನವನ್ನಲಂಕರಿಸಿದ್ದಾರೆಯೇ ಹೊರತು ನಿಜವಾಗಿಯೂ ಅವರೇ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಆ ಸ್ಥಾನದಲ್ಲಿ ಆಕೆಯ ಅಣ್ಣನೋ, ಗಂಡನೋ, ತಂದೆಯೋ ಪರೋಕ್ಷವಾಗಿ ಪ್ರಭಾವ ಬೀರುತ್ತಿರುತ್ತಾರೆ. ಇದರಿಂದ ಪುರುಷ ಸಮಾಜದ ಆಲೋಚನೆಗಳು, ಮೌಲ್ಯಗಳೇ ಅಲ್ಲಿ ವಿಜೃಂಭಿಸುತ್ತಿರುತ್ತವೆ. ಈ ಕಾರಣ ಮೀಸಲಾತಿ ಪ್ರಯೋಜನ ಬಹುಮಟ್ಟಿಗೆ ವಿಫಲವಾಗುತ್ತದೆ.

ಈ ರೀತಿಯ ಮಹಿಳೆಯರ ಅಧಿಕಾರ ಮತ್ತು ಸ್ವಾತಂತ್ರ್ಯದ ದುರುಪಯೋಗವನ್ನು ತಡೆಗಟ್ಟಬೇಕಾದರೆ ಶೋಷಿತ ವರ್ಗದ ಮಹಿಳೆಯರು ತಮ್ಮ ವ್ಯಕ್ತಿತ್ವವನ್ನು ಸ್ವತಂತ್ರವಾಗಿ ಗುರುತಿಸಿಕೊಳ್ಳಬೇಕು. ತಮ್ಮಲ್ಲಿರುವ ಕೀಳರಿಮೆ, ಭಯ, ಮೌಢ್ಯತೆಗಳನ್ನು ತೊರೆದು ಜವಾಬ್ದಾರಿಯುತವಾಗಿ ಗಂಭೀರವಾಗಿ ಚಿಂತಿಸಬೇಕು. ಮೀಸಲಾತಿಯನ್ನು ತಮ್ಮ ಹಕ್ಕು ಎಂದು ಭಾವಿಸಿ ಸಮಾಜದಲ್ಲಿ ಇತರ ವರ್ಗದ ಮಹಿಳೆಯರಂತೆ ಮುಕ್ತ ವಾತಾವರಣವನ್ನು ನಿರ್ಮಿಸಿಕೊಂಡು ಬದುಕಬೇಕಾಗಿದೆ. ಆಗ ಮಾತ್ರ ಮೀಸಲಾತಿ ನೀತಿ ಅರ್ಥಪೂರ್ಣವೂ ಫಲಪ್ರದವೂ ಆಗುತ್ತದೆ. ಅಷ್ಟೇ ಅಲ್ಲ ಉಳಿದ ವರ್ಗದ ಮಹಿಳೆಯರಂತೆ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ.

ವಿಧಾನಸಭೆ ಮತ್ತು ಲೋಕಸಭೆಗಳಲ್ಲಿ ಪ್ರತ್ಯೇಕ ಜಾತಿ ಮೀಸಲಾತಿ ಅತ್ಯಾವಶ್ಯಕವಾಗಿದೆ. ಏಕೆಂದರೆ, ಬುದ್ಧಿ, ಹಣ ಮತ್ತು ಜಾತಿಯ ಪ್ರಭಾವದಿಂದ ಮೇಲ್ವರ್ಗದ ಸ್ತ್ರೀಯರೇ ರಾಜಕೀಯ ಕ್ಷೇತ್ರದಲ್ಲಿ ಪ್ರವೇಶ ಪಡೆದು ಮೇಲುಗೈ ಪಡೆಯುವಲ್ಲಿ ಸಫಲರಾಗಿದ್ದಾರೆ. ಈ ಕಾರಣಗಳಿಂದ ದುರ್ಬಲವರ್ಗದ ಸ್ತ್ರೀಯರಿಗೆ ಪ್ರತ್ಯೇಕ ಮೀಸಲಾತಿ ಇಲ್ಲದಿದ್ದರೆ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವ ಗಾದೆ ಮಾತಂತೆ ಪ್ರಾತಿನಿಧ್ಯವೇ ಸಿಗುವುದಿಲ್ಲ. ಹೀಗಾಗಿ ಜಾತಿ ಮೀಸಲಾತಿ ದುರ್ಬಲ ವರ್ಗದ ಸ್ತ್ರೀಯರಿಗೆ ಅಗತ್ಯವಾಗಿದ್ದು ಆ ಕ್ಷೇತ್ರದಿಂದ ಆರಿಸಿ ಬಂದ ಮಹಿಳೆಯರು ದಮನಿತ ಮಹಿಳೆಯರ ಸಮಸ್ಯೆಗಳತ್ತ ಗಮನಹರಿಸಲು ಸಾಧ್ಯವಾಗುತ್ತದೆ.

೫) ಈ ಟೀಕೆ ಖಂಡಿತ ಸತ್ಯ. ಏಕೆಂದರೆ, ಸ್ತ್ರೀ ಚಳವಳಿಗಳ ಬಹುಪಾಲು ನಾಯಕತ್ವವನ್ನು ಮೇಲ್ವರ್ಗದ ಸ್ತ್ರೀಯರು ವಹಿಸಿಕೊಂಡಿರುವುದರಿಂದ ದುರ್ಬಲ ವರ್ಗ ಮತ್ತು ಅಸಹಾಯಕ ಸ್ತ್ರೀಯರಿಗೆ ಇದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಕೆಳವರ್ಗದ ದುರ್ಬಲ ಸ್ತ್ರೀಯರು ಮೇಲ್ವರ್ಗದ ಸ್ತ್ರೀಯರ ಪ್ರಭಾವ ಮತ್ತು ಅವರೊಡ್ಡುವ ಆಮಿಷಗಳಿಗೆ ಒಳಗಾಗಿ ತಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಹೀಗಾಗಿ ಕೇವಲ ಮಹಿಳಾ ಚಳವಳಿಗಳಿಂದ ದುರ್ಬಲ ಸ್ತ್ರೀಯರ ರಕ್ಷಣೆ ಸಾಧ್ಯವಾಗುವುದಿಲ್ಲ. ಕೆಳ ವರ್ಗದ ಸ್ತ್ರೀಯರ ನಾಯಕತ್ವದಿಂದ ಚಳವಳಿ ನಡೆದರೆ ಮಾತ್ರ ಇಂತಹ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯ. □

ಚರ್ಚೆ

○ಡಾ|| ಎನ್. ಗಾಯತ್ರಿ

ದುರ್ಬಲ ಮಹಿಳೆಯರ ಹಿತರಕ್ಷಣೆಯೇ ಮಹಿಳಾ ಚಳವಳಿಯ ಮುಖ್ಯಗುರಿ

೧) ಲಿಂಗಾಧಾರಿತ ಮೌಲ್ಯ ವ್ಯವಸ್ಥೆಯ ವಿರುದ್ಧದ ರಾಜಕೀಯ, ಆರ್ಥಿಕ, ಸಾಮಾಜಿಕ ಹೋರಾಟದ ಸಿದ್ಧಾಂತ ರೂಪವೇ ಸ್ತ್ರೀವಾದ. ಜೈವಿಕ ಕಾರಣಗಳನ್ನೊಡ್ಡಿ ಸ್ತ್ರೀಪುರುಷ ಅಸಮಾನತೆಯನ್ನು ಉಂಟು ಮಾಡಿರುವ ಸಾಮಾಜಿಕ ಅನ್ಯಾಯವನ್ನು ನಿವಾರಿಸುವುದು ಈ ಸ್ತ್ರೀವಾದದ ಗುರಿ. ಈ ಸಿದ್ಧಾಂತ ಅರ್ಥವಾದರೆ ಇದರಲ್ಲಿ ಲಿಂಗಜಾತಿಗೆ ಸೇರಿದ ಎಲ್ಲ ವರ್ಗದ ಮಹಿಳೆಯರೂ ಒಳಗೊಂಡಿರುತ್ತಾರೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಕರ್ನಾಟಕ, ಆಂಧ್ರದ ಹಳ್ಳಿಗಳಲ್ಲಿನ ಮಹಿಳೆಯರು ನಡೆಸುವ ಮದ್ಯಪಾನದ ವಿರುದ್ಧ ಹೋರಾಟ, ಆದಿವಾಸಿ ಮಹಿಳೆಯರು ಭೂಮಿಯ ಹಕ್ಕಿಗಾಗಿ ನಡೆಸುವ ಹೋರಾಟ, ಬಳ್ಳಾರಿಯ ಎರ್ರಮ್ಮನ ಬೆತ್ತಲೆ ಅನ್ಯಾಯದ ವಿರುದ್ಧ, ರಾಜಸ್ಥಾನದ ಭಾಂವ್ರಿದೇವಿಗಾದ ಅನ್ಯಾಯದ ವಿರುದ್ಧದ ಚಳವಳಿ, ವರದಕ್ಷಿಣೆ ಕ್ರೌರ್ಯ, ಕೌಟುಂಬಿಕ ಹಿಂಸೆಯ ವಿರುದ್ಧದ ಚಳವಳಿ, ಆನೇಕಲ್ಲಿನ ಮಂಜುಳಾ ಸಾವಿನ ವಿರುದ್ಧದ ಪ್ರತಿಭಟನೆ, ವಿಶ್ವಸುಂದರಿ ಸ್ಪರ್ಧೆಯ ವಿರೋಧದ ಚಳವಳಿ– ಎಲ್ಲವೂ ನನ್ನ ದೃಷ್ಟಿಯಲ್ಲಿ ಮಹಿಳಾ ಚಳವಳಿಯೇ. ಕೆಲವೊಮ್ಮೆ ಮೇಲ್ವರ್ಗದ ಮಹಿಳೆಯರು ಈ ಚಳವಳಿಯ ನೇತೃತ್ವ ವಹಿಸಿರಬಹುದಾದರೂ ಚಳವಳಿಯ ಫಲಾನುಭವಿಗಳು ಬಡ, ಶೋಷಿತ ಮಹಿಳೆಯರಾಗಿರುತ್ತಾರೆ. ಮಹಿಳಾ ಚಳವಳಿಯ ಟೀಕಾಕಾರರ ದೃಷ್ಟಿಯಲ್ಲಿನ 'ಮಹಿಳಾ ಚಳವಳಿ'ಯ ಕಲ್ಪನೆ ಯಾವುದೋ ಯಾರಿಗೆ ಗೊತ್ತು?

೨) 'ಸ್ತ್ರೀ ಸಂವೇದನೆ'ಯೆನ್ನುವುದು ಮಾನವೀಯ ಮೌಲ್ಯವೇ. ಆದ್ದರಿಂದ ಅದು ದಲಿತ ವಿರೋಧಿಯಲ್ಲ. ಅನ್ಯಾಯವೆಸಗುವ ಪ್ರಶ್ನೆಯೇ ಇಲ್ಲ. ಸಾಹಿತ್ಯ ಮತ್ತು ಸಾಹಿತ್ಯ ಚಳವಳಿಗಳು ನೇರವಾಗಿ ಸಾಮಾಜಿಕ ನ್ಯಾಯ ಒದಗಿಸಿರುವ ನಿದರ್ಶನಗಳನ್ನು ನಾನು ಚರಿತ್ರೆಯಲ್ಲಿ ಕಂಡಿಲ್ಲ. ಸಾಹಿತ್ಯವು ಪ್ರತಿಫಲಿಸುವ ಪ್ರಜ್ಞೆ ಹೋರಾಟಕ್ಕೆ ಅಸ್ತ್ರವಾಗಬಹುದು. ಅದನ್ನು ಬಳಸಿಕೊಂಡು ಹೋರಾಡುವವರ ಸಂಕಲ್ಪ ನಿಷ್ಠೆಯನ್ನು ಚಳವಳಿಯ ಯಶಸ್ಸು ಅವಲಂಬಿಸಿರುತ್ತದೆ.

ಈ ದೃಷ್ಟಿಯಿಂದ ಸ್ತ್ರೀವಾದಿ ಸಾಹಿತ್ಯ ಚಳವಳಿ ಇತ್ತೀಚಿನದು. ಅದು ಎಲ್ಲ ಜಾತಿ, ವರ್ಗಗಳ ಮಹಿಳೆಯರ ಅನುಭವವನ್ನು ಒಳಗೊಂಡು ನಿಧಾನವಾಗಿ ಬೆಳೆಯುತ್ತಿದೆ. ದಲಿತ ಸಮುದಾಯವನ್ನು ಕುರಿತ ಮೌನ, ಅವಗಣನೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಂಡುಬಂದಿದ್ದರೆ ಅದಕ್ಕೆ ಚಾರಿತ್ರಿಕ ಕಾರಣಗಳಿರುತ್ತವೆ. ಅದರ ನಿವಾರಣೆಯತ್ತ ಮುಖ್ಯ ಹೆಜ್ಜೆಯೆಂದರೆ ಮಹಿಳಾ ಸಮುದಾಯದ ಸಾಕ್ಷರತೆ ಮತ್ತು ಸಾರ್ವತ್ರಿಕ ಅನುಭವದ ಗ್ರಹಿಕೆ ವಿಸ್ತಾರವಾಗಬೇಕು.

೩) ಶೋಷಿತ ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವಲ್ಲಿ ಎಲ್ಲ ಪ್ರಗತಿಪರರೂ ಒಟ್ಟಾಗಬೇಕು. ಎಲ್ಲರೂ ಪರಸ್ಪರ ಟೀಕೆ ಮಾಡಿಕೊಳ್ಳುತ್ತಾ ಸಮಯ ಮತ್ತು ಶ್ರಮವನ್ನು ವ್ಯರ್ಥ ಮಾಡಿಕೊಳ್ಳದೆ ಅನಕ್ಷರತೆ ಮತ್ತು ಬಡತನದ ವಿರುದ್ಧ ಹೋರಾಟ ಮಾಡಬೇಕು. ಸಾಕ್ಷರರಾದ, ಜಾಗೃತರಾದ, ಆರ್ಥಿಕವಾಗಿ, ಸ್ವತಂತ್ರವಾಗಿ ಚಿಂತಿಸಬಲ್ಲ ಸಾಮರ್ಥ್ಯಗಳಿಸಿಕೊಂಡ ಸಂಘಟಿತ ಸ್ತ್ರೀಸಮೂಹವು ತನ್ನ ಹಕ್ಕು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯ ಪಡೆಯಬಲ್ಲದು.

೪) ಸ್ಥಳೀಯ ಸಂಸ್ಥೆಗಳ ಮೀಸಲು ನೀತಿಯಿಂದ ಕೆಳಸ್ತರದ ಮಹಿಳೆಯರು ಮುಖ್ಯವಾಹಿನಿಗೆ ಬರಲು ಸ್ವಲ್ಪ ಮಟ್ಟಿಗಾದರೂ ಸಹಾಯವಾಗಿದೆ. ಲೋಕಸಭೆ, ಶಾಸನ ಸಭೆಯಲ್ಲಿ ಜಾತಿ ಮೀಸಲಾತಿ ಕೊಟ್ಟರೆ ನನ್ನದೇನೂ ಅಡ್ಡಿಯಿಲ್ಲ. ಆದರೆ ಜಾತಿ ಮೀಸಲಾತಿಯ ನೆಪವೊಡ್ಡಿ ಮೀಸಲಾತಿ ಮಸೂದೆಗೆ ಅಡ್ಡಿಪಡಿಸುತ್ತಿರುವ ಎಲ್ಲ ಜಾತಿ, ವರ್ಗಗಳ ಸ್ತ್ರೀವಿರೋಧಿ ನೀತಿಗೆ ನನ್ನ ಖಂಡನೆ ಇದೆ. ಮೊದಲು ಮೀಸಲಾತಿ ಮಸೂದೆ ಬರಲಿ, ನಂತರ ಉಳಿದ ಮಾತು.

೫) ದುರ್ಬಲ ವರ್ಗಗಳ ಮಹಿಳೆಯರ ಹಾಗೂ ಅಸಹಾಯಕ ಮಹಿಳೆಯರ ರಕ್ಷಣೆಯ ಜವಾಬ್ದಾರಿಯ ಗುತ್ತಿಗೆ ಯನ್ನು ಮಹಿಳಾ ಚಳವಳಿ ಹೊತ್ತುಕೊಂಡಿಲ್ಲ. ಅದನ್ನು ಯಾರು ಮಾಡಿದರೂ ಒಳ್ಳೆಯದೇ. ಆದರೂ ನಾನು 'ವ್ಯಾಖ್ಯಾನಿಸುವ' ಮತ್ತು ನಾನು 'ಗುರುತಿಸಿಕೊಳ್ಳುವ' ಮಹಿಳಾ ಚಳವಳಿಯಲ್ಲಿ ದುರ್ಬಲ ವರ್ಗಗಳ ಮತ್ತು ಅಸಹಾಯಕ ಮಹಿಳೆಯರ ಹಕ್ಕು ಮತ್ತು ಹಿತರಕ್ಷಣೆಯೇ ಮುಖ್ಯವಾದ ಉದ್ದೇಶ ಮತ್ತು ಕಾರ್ಯಕ್ರಮವಾಗಿದೆ. □

ಚರ್ಚೆ

ಚಿಂತನಾ ಸ್ತರದ ಮಿತಿಗಳನ್ನು ಸರಿಪಡಿಸಬೇಕು

○ ಡಾ॥ ಸಬಿಹಾ ಭೂಮಿಗೌಡ

೧) ಸ್ತ್ರೀವಾದದ ಕುರಿತು ಹರಿಯಬಿಟ್ಟಿರುವ ಹಲವು ಅಪಕಲ್ಪನೆಗಳಲ್ಲಿ 'ಸ್ತ್ರೀವಾದ ಕೇವಲ ಮೇಲ್ವರ್ಗದ ಮಹಿಳೆಯರ ಚಳವಳಿ' ಎಂಬುದೂ ಒಂದು. ಸ್ತ್ರೀವಾದವು ನಿರ್ದಿಷ್ಟವಾಗಿ ಶೋಷಿತ ಮಹಿಳೆಯ, ವಿಸ್ತೃತವಾಗಿ ಶೋಷಿತಾದ ಎಲ್ಲ ಸಮುದಾಯದ ಬಿಡುಗಡೆಯ ಕುರಿತು ಚಿಂತಿಸುತ್ತದೆ ಹಾಗೂ ಹೋರಾಟಕ್ಕೆ ನೆಲೆಯನ್ನು ಒದಗಿಸುತ್ತದೆ. ಈಗಿರುವ ಸ್ಥಾಪಿತ ಹಿತಾಸಕ್ತಿಗಳು ಸ್ತ್ರೀಯ ದಮನಕ್ಕೆ ಕಾರಣವಾದಂತೆ ಪುರುಷ ವರ್ಗದ ಮೇಲೂ ಅನಗತ್ಯ ಒತ್ತಡವನ್ನು ಹಾಕುತ್ತವೆ ಎಂಬುದನ್ನು ಸ್ತ್ರೀವಾದ ಗ್ರಹಿಸುತ್ತದೆ. ಆದುದರಿಂದ ಸ್ತ್ರೀವಾದ ಎಂಬುದು ಕೇವಲ ಚಿಂತನಾಕ್ರಮವಲ್ಲ, ಅದು ಬದುಕನ್ನು ನೋಡುವ ಒಂದು ದೃಷ್ಟಿಕೋನ ಹಾಗೂ ನಮ್ಮಲ್ಲಿ ಅಳವಡಿಸಿಕೊಳ್ಳಬೇಕಾದ ಜೀವನವಿಧಾನ ಕೂಡಾ ಆಗಿದೆ. ಹಾಗಾದರೆ ಇಂತಹ ಅಪಕಲ್ಪನೆಗಳು ಯಾಕೆ ಹುಟ್ಟಿಕೊಂಡವು ಎಂಬುದಕ್ಕೆ ನಾವು ಉತ್ತರಿಸಬೇಕಿದೆ. ವಾಸ್ತವದಲ್ಲಿ ಸ್ತ್ರೀವಾದಿ ಚಿಂತನಾಕ್ರಮ ಅಕಾಡೆಮಿಕ್ ವಲಯಗಳಲ್ಲಿ, ಶಿಕ್ಷಣ, ವೃತ್ತಿಪರ ರಂಗಗಳಲ್ಲಿ ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಪ್ರವೇಶ ಪಡೆದು, ಸಮಾನತೆಯ, ಸಮಾನ ಸೌಲಭ್ಯದ, ಸಮಾನ ಅವಕಾಶದ ಹಕ್ಕೊತ್ತಾಯ ಕೇಳಿ ಬರುತ್ತದೆ. ಹೀಗಾಗಿ ಮೇಲೆ ಸೂಚಿಸಿದ ರಂಗಗಳಲ್ಲೂ ಹೆಚ್ಚಾಗಿ ಮೇಲ್ಜಾತಿ ಎಂದು ಗುರುತಿಸಲಾಗುವ ವರ್ಗದ ಮಹಿಳೆಯರು ಗರಿಷ್ಠ ಪ್ರಮಾಣದಲ್ಲಿ ಇರುವ ಕಾರಣ, ಇಂತಹ ಅಪಕಲ್ಪನೆಗಳು ಹುಟ್ಟಿಕೊಂಡಿವೆ ಎಂದು ಭಾವಿಸುತ್ತೇನೆ. ಸ್ತ್ರೀವಾದ ಇನ್ನೂ ತನ್ನ ಆರಂಭದ ಹಂತದಲ್ಲಿ ಇದೆ. ಮುಂದಿನ ದಿನಗಳಲ್ಲಿ ಎಲ್ಲ ವರ್ಗದ ಮಹಿಳೆಯರನ್ನೂ, ಎಲ್ಲ ದಮನಿತ ವರ್ಗದವರನ್ನೂ ಪ್ರತಿನಿಧಿಸುತ್ತದೆ ಮತ್ತು ಪ್ರತಿನಿಧಿಸಬೇಕು ಎಂಬುದು ನನ್ನ ಆಶಯವಾಗಿದೆ.

೨) ಸ್ತ್ರೀ ಸಂವೇದನೆಯಿಂದ ಹೊರ ಬರುತ್ತಿರುವ ಸಾಹಿತ್ಯ ದಮನಿತ ವರ್ಗದ ಸ್ತ್ರೀಯರಿಗೆ ನ್ಯಾಯ ಒದಗಿಸಿದೆಯೇ ಎಂಬುದು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ. ಇಲ್ಲಿಯವರೆಗಿನ ಸಾಹಿತ್ಯವನ್ನು ಗಮನಿಸಿದಾಗ, ಪ್ರತಿಯೋರ್ವ ಲೇಖಕಿಯೂ ತನ್ನ ಸಮುದಾಯದ, ಜಾತಿ, ವರ್ಗದ ಮಹಿಳಾ ಜಗತ್ತನ್ನು ಕಟ್ಟಿಕೊಡುವ ಪ್ರಯತ್ನ ಮಾಡಿರುವುದು ನಿಚ್ಚಳವಾಗಿದೆ. ತನಗೆ ಅನ್ಯವೆನಿಸಿದ ವರ್ಗದ ಸ್ತ್ರೀಲೋಕದ ಅನಾವರಣ ಅಷ್ಟಾಗಿ ಆಗಿಲ್ಲ. ದಲಿತ ವರ್ಗದ ಮಹಿಳೆಯರಲ್ಲಿ ಇಂದು ಅಕ್ಷರಸ್ಥರು, ಉದ್ಯೋಗಸ್ಥರು ಹಾಗೂ ಸಾಹಿತ್ಯಿಕ ವಲಯದ ಇತರ ಪ್ರಕಾರಗಳಲ್ಲಿ ಗುರುತಿಸಿಕೊಂಡವರು ಇದ್ದರಾದರೂ, ಅದು ಯಾಕೋ ಸೃಜನಶೀಲ ಸಾಹಿತ್ಯದಲ್ಲಿ ಅವರು ಅಷ್ಟಾಗಿ ತೊಡಗಿಸಿಕೊಂಡಿಲ್ಲ. ಹೀಗಾಗಿ ದಲಿತ ಅನುಭವಲೋಕ ಅದರಲ್ಲೂ ಸ್ತ್ರೀನಿಷ್ಠ ನೆಲೆಯ ದಲಿತಾನುಭವ ಸಾಹಿತ್ಯದಲ್ಲಿ ಪ್ರವೇಶ ಪಡೆದದ್ದು ಇಲ್ಲವೆನ್ನುವಷ್ಟು ವಿರಳ. ಇದು ಹೆಚ್ಚಾದಾಗ ದಮನಿತ ವರ್ಗದ ಸ್ತ್ರೀಯರ ಇಕ್ಕಟ್ಟುಗಳು, ಸಂವೇದನೆಗಳು ಪ್ರಧಾನವಾಹಿನಿಯನ್ನು ತಲುಪಲು ಸಾಧ್ಯ. ಆ ಮೂಲಕ ಸಮಾನತೆ, ನ್ಯಾಯಕ್ಕಾಗಿ ಹೋರಾಡಲು ಅದು ಅನುವು ಮಾಡಿಕೊಡುತ್ತದೆ.

ಮಹಿಳಾ ಚಳವಳಿಗೆ ಈ ಮಿತಿ ಇಲ್ಲ. ಅಸಂಘಟಿತ ವಲಯದ ಮಹಿಳಾ ಸಮಸ್ಯೆಗಳ ಬಗ್ಗೆ, ದಲಿತ, ಶೋಷಿತ, ಬರ್ಬರ ಹಲ್ಲೆಗಳಿಗೆ ಒಳಗಾದ ಸ್ತ್ರೀಯರ ಸಮಸ್ಯೆಗಳ ಬಗ್ಗೆ ಮಹಿಳಾ ಸಂಘಟನೆಗಳು ಹೋರಾಟವನ್ನು ನಿರಂತರ ನಡೆಸಿಕೊಂಡು ಬಂದಿವೆ. ವರದಕ್ಷಿಣೆ, ವಧುದಹನ, ಸಹಗಮನ, ಕೌಟುಂಬಿಕ ಹಿಂಸೆ, ಕ್ರೌರ್ಯಗಳ ಕುರಿತು ಹೋರಾಟ ನಡೆದಂತೆ, ಹಾನಿಕಾರಕ ಗರ್ಭನಿರೋಧಕಗಳ ಬಳಕೆಯ ವಿರುದ್ಧ ಲೈಂಗಿಕ ಹಲ್ಲೆಗಳಿಗೆ ಒಳಗಾದ ಸ್ತ್ರೀಯರಿಗೆ ನೈತಿಕ ಬೆಂಬಲ ಮತ್ತು ಸಾಮಾಜಿಕ ನ್ಯಾಯ ಒದಗಿಸಲು, ರಾಜಕೀಯದಲ್ಲಿ ಮಹಿಳಾ ಮೀಸಲಾತಿಯ ಬಗ್ಗೆ, ಶಾಬಾನು ಪ್ರಕರಣ, ಮಹಿಳೆಯರ ರಕ್ಷಣೆಗೆ ಸಂವಿಧಾನಾತ್ಮಕ ತಿದ್ದುಪಡಿಗಳ ಬಗ್ಗೆ-ಒಟ್ಟಿನಲ್ಲಿ ಹಿಂದುಳಿದ, ದಲಿತ ವರ್ಗದ ಮಹಿಳೆಯರ ಸಮಸ್ಯೆಗಳೂ ಮಹಿಳಾ ಚಳವಳಿಯ ಮುಖ್ಯ ಕಾಳಜಿಗಳಾಗಿವೆ.

> ಸ್ತ್ರೀವಾದ ಎಂಬುದು ಕೇವಲ ಚಿಂತನಾ ಕ್ರಮವಲ್ಲ, ಅದು ಬದುಕನ್ನು ನೋಡುವ ಒಂದು ದೃಷ್ಟಿಕೋನ ಹಾಗೂ ನಮ್ಮಲ್ಲಿ ಅಳವಡಿಸಿಕೊಳ್ಳಬೇಕಾದ ಜೀವನವಿಧಾನ ಕೂಡಾ ಆಗಿದೆ. ಹಾಗಾದರೆ ಇಂತಹ ಅಪಕಲ್ಪನೆಗಳು ಯಾಕೆ ಹುಟ್ಟಿಕೊಂಡವು ಎಂಬುದಕ್ಕೆ ನಾವು ಉತ್ತರಿಸಬೇಕಿದೆ. ವಾಸ್ತವದಲ್ಲಿ ಸ್ತ್ರೀವಾದಿ ಚಿಂತನಾಕ್ರಮ ಅಕಾಡೆಮಿಕ್ ವಲಯಗಳಲ್ಲಿ, ಶಿಕ್ಷಣ, ವೃತ್ತಿಪರ ರಂಗಗಳಲ್ಲಿ ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಪ್ರವೇಶ ಪಡೆದು, ಸಮಾನತೆಯ, ಸಮಾನ ಸೌಲಭ್ಯದ, ಸಮಾನ ಅವಕಾಶದ ಹಕ್ಕೊತ್ತಾಯ ಕೇಳಿ ಬರುತ್ತದೆ. ಹೀಗಾಗಿ ಮೇಲೆ ಸೂಚಿಸಿದ ರಂಗಗಳಲ್ಲೂ ಹೆಚ್ಚಾಗಿ ಮೇಲ್ಜಾತಿ ಎಂದು ಗುರುತಿಸಲಾಗುವ ವರ್ಗದ ಮಹಿಳೆಯರು ಗರಿಷ್ಟ ಪ್ರಮಾಣದಲ್ಲಿ ಇರುವ ಕಾರಣ, ಇಂತಹ ಅಪಕಲ್ಪನೆಗಳು ಹುಟ್ಟಿಕೊಂಡಿವೆ ಎಂದು ಭಾವಿಸುತ್ತೇನೆ. ಇನ್ನೂ ಆರಂಭದ ಹಂತದಲ್ಲಿರುವ ಸ್ತ್ರೀವಾದ ಮುಂದಿನ ದಿನಗಳಲ್ಲಿ ಎಲ್ಲ ವರ್ಗದ ಮಹಿಳೆಯರನ್ನೂ, ಪ್ರತಿನಿಧಿಸುತ್ತದೆ ಎಂಬುದು ನನ್ನ ಆಶಯವಾಗಿದೆ.

೩). ಕೋಮುವಾದವನ್ನು ಹುಟ್ಟುಹಾಕುತ್ತಿರುವ ಶಕ್ತಿಗಳು ಮತ್ತು ಅವುಗಳ ಹಿತಾಸಕ್ತಿಗಳೇ ಬೇರೆ. ಆದರೆ ಅದರ ಪರಿಣಾಮವನ್ನು ಮಾತ್ರ ಅಮಾಯಕರು ಅನುಭವಿಸ ಬೇಕಿದೆ. ರಾಜಕೀಯ ಹಾಗೂ ಧಾರ್ಮಿಕ ಯಾಜಮಾನ್ಯದ ಹಿತಾಸಕ್ತಿಗಳನ್ನು ಅರಿಯದ ಹೊರತು ಅದಕ್ಕೆ ಪ್ರತಿರೋಧ ಒಡ್ಡುವುದು ಕಷ್ಟಸಾಧ್ಯ. ಕೋಮುವಾದವನ್ನು ಹುಟ್ಟು ಹಾಕಲಾಗುತ್ತದೆ; ಪ್ರಚಾರ ಮಾಡಲಾಗುತ್ತದೆ. ಆದರೆ ಕೋಮು ಸೌಹಾರ್ದ ಬದುಕಾಗಿದೆ; ನಮ್ಮೆಲ್ಲರ ವಾಸ್ತವವಾಗಿದೆ. ಹೀಗಾಗಿ ಕೋಮುಸೌಹಾರ್ದದ ನಮ್ಮ ಸುತ್ತಲಿನ ಬದುಕನ್ನು, ಅಂತಹ ವಿಶಿಷ್ಟ ತಾಣಗಳನ್ನು ಗುರುತಿಸಿ, ಅವುಗಳಿಗೆ ಬೆಳಕು ಚೆಲ್ಲುವ ಕೆಲಸ ಆಗಬೇಕಿದೆ.

ಲಿಂಗತಾರತಮ್ಯ ನೀತಿಯಿಂದ ಮುಕ್ತರಾಗಲು ಲಿಂಗತ್ವ ಸೂಕ್ಷ್ಮತೆ (Gender Sensitivity) ಯನ್ನು ಸ್ತ್ರೀ-ಪುರುಷರಿಬ್ಬರಿಗೂ ಕಲಿಸಬೇಕಿದೆ. ಇದು ಬೆಳವಣಿಗೆಯ ಎಳವೆಯ ಹಂತದಲ್ಲೇ ನಡೆಯಬೇಕಾಗಿರುವ ಕೆಲಸ. ಈಗಿರುವ ಲಿಂಗ ತಾರತಮ್ಯ ನೀತಿಯ ಉಣಿಸನ್ನು ತಿಪ್ಪೆಸೆದು, ವ್ಯಕ್ತಿಯ ದ್ವಿಲಿಂಗತ್ವಕ್ಕೆ ಮಾನ್ಯತೆ ನೀಡುವ, ಲಿಂಗ ಸಮಾನತೆಯ ಬುನಾದಿಯ ಹೊಸ ಚಿಂತನೆಯನ್ನು ಸಾಂಘಿಕವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿ ಮಾಡಬೇಕಿದೆ.

ಇವುಗಳಿಗೆಲ್ಲ ಬೇಕಾದುದು ಮೂಲಭೂತವಾಗಿ ಶಿಕ್ಷಣ ನೀಡುವುದು-ಎಂದರೆ ಜನರನ್ನು ಕೇವಲ ಅಕ್ಷರಸ್ಥರನ್ನಾಗಿ ಮಾಡುವುದಲ್ಲ; ಪ್ರಜ್ಞಾವಂತರನ್ನಾಗಿ ಮಾಡುವುದು ಹಾಗೂ ವೈಚಾರಿಕ ಚಿಂತನೆಗೆ ಪರಿಸರವನ್ನು ನಿರ್ಮಿಸುವುದು. ಈ

ಪ್ರಕ್ರಿಯೆ ನಿಧಾನಗತಿಯದು ಹಾಗೂ ಹಲವು ಎಡರುಗಳ ನಡುವೆ ನಡೆಯಬೇಕಾಗಿರುವ ಕಾರಣ, ಪ್ರಗತಿಯ ಮಟ್ಟವನ್ನು ಸುಲಭದಲ್ಲಿ ಹಾಗೂ ಹತ್ತಿರದಲ್ಲಿ ಗ್ರಹಿಸುವುದು ಕಷ್ಟ

೪) ಸ್ಥಳೀಯ ಸಂಸ್ಥೆಗಳ ಮೀಸಲು ನೀತಿಯಿಂದಾಗಿ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆಯರು ಮುಖ್ಯ ವಾಹಿನಿಗೆ ಬರಲು ಸಾಧ್ಯವಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಇಂದು ಗ್ರಾಮ ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಇವರ ಪಾಲ್ಗೊಳ್ಳುವಿಕೆಯ ಪ್ರಮಾಣದ ಏರಿಕೆ ಆಶಾದಾಯಕವಾಗಿದೆ. ಅಷ್ಟೇ ಅಲ್ಲ, ಈ ವರ್ಗದ ಮಹಿಳೆಯರು ಈ ಮೀಸಲು ನೀತಿಯಿಂದಾಗಿ ಗ್ರಾಮ ಮತ್ತು ಜಿಲ್ಲಾ ಪಂಚಾಯತಿಗಳ ಅಧ್ಯಕ್ಷ ಇಲ್ಲವೆ ಉಪಾಧ್ಯಕ್ಷ ಸ್ಥಾನವನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಮೀಸಲಾತಿ ಇಲ್ಲದೆ ಹೋಗಿದ್ದಲ್ಲಿ ಇಂದಿಗೂ ಇದು ಅಸಂಭವವಾಗಿತ್ತು.

ಈ ದಾರಿ ಮಹಿಳೆಯರಿಗೆ ಹೂವಿನ ಹಾಸಿಗೆ ಆಗಿಲ್ಲ. ದಲಿತ ಮಹಿಳೆ ಗ್ರಾಮ ಪಂಚಾಯತಿ ಅಧ್ಯಕ್ಷಳಾಗುವುದನ್ನು ತಪ್ಪಿಸಲು ಸಾಮೂಹಿಕ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸುವುದು, ಧ್ವಜಾರೋಹಣ ಮಾಡಿದ್ದಕ್ಕಾಗಿ ಬಾಸುಂಡೆ ಬರುವಂತೆ ಥಳಿಸುವುದು ಅಥವಾ ಇತ್ತೀಚೆಗೆ ನಡೆದ ಚುನಾಯಿತ ಸದಸ್ಯೆಯೋರ್ವರ ಆತ್ಮಹತ್ಯೆ ಪ್ರಕರಣ, ಅಥವಾ ಸಭೆಗಳಲ್ಲಿ ನಡೆದ ಮಾರಾಮಾರಿ ಯಲ್ಲಿ ಪ್ರಜ್ಞಾಶೂನ್ಯರಾದ ಸದಸ್ಯೆಯರ ಸ್ಥಿತಿ-ಇವೆಲ್ಲ ರಾಜಕೀಯ ವಲಯದ ಹೊಲಸೆದ್ದ ಸ್ಥಿತಿಯ ಸೂಚಕ. ಈ ಎಡರುಗಳನ್ನು ದಾಟಿ ಮಹಿಳಾ ಪ್ರತಿನಿಧಿಗಳು ವಿಜಯಿಗಳಾಗಬೇಕಿದೆ ಹಾಗೂ ತಮ್ಮ ಛಾಪನ್ನು ಮೂಡಿಸಬೇಕಿದೆ. ಅಲ್ಲಲ್ಲಿ ಈ ಕೆಲಸನೂ ನಡೆಯುತ್ತಿದೆ.

ವಿಧಾನಸಭೆ ಮತ್ತು ಲೋಕಸಭೆಗಳಲ್ಲಿ ಮಹಿಳೆಯರಿಗೆ ನೀಡಬೇಕಿರುವ 33% ಮೀಸಲಾತಿಯನ್ನು ಮೊದಲು ನೀಡಲಿ, ಅದರಲ್ಲೂ ಒಳಮೀಸಲಾತಿಯನ್ನು ವಿರೋಧಿಸುವುದಲ್ಲ; ಆದರೆ ಕೊಡಬೇಕಾದುದನ್ನು ಕೊಡದೆ, ಪೊಳ್ಳೆ ನೆವಗಳನ್ನು ಹೇಳುತ್ತ ಮೀಸಲಾತಿ ಮಸೂದೆ ಜಾರಿಯಾಗ ದಂತೆ ಮಾಡುವ ಹುನ್ನಾರ ತಪ್ಪಲಿ.

೫) ಇದಕ್ಕೆ ಉತ್ತರ ಎರಡನೆ ಪ್ರಶ್ನೆಗೆ ಉತ್ತರಿಸುವಾಗಲೇ ತಿಳಿಸಲಾಗಿದೆ. ಇಂತಹ ಪ್ರಶ್ನೆಗಳ ಹಿಂದಿನ ಮನೋಭಾವ ಎಂತಹದು ಎಂದು ಕೇಳಬೇಕಾಗಿದೆ. ಮಹಿಳೆಯರ ಸಮಸ್ಯೆಗೆ ಮಹಿಳೆಯರು ಹೋರಾಡಬೇಕು. ಮಹಿಳಾ ಚಳವಳಿಗಳು ಪರಿಹಾರ ಹುಡುಕಬೇಕು ಎಂಬ ನಿಲುವು ಈ ಪ್ರಶ್ನೆಯಲ್ಲಿ ಅಡಕವಾಗಿದೆ. ವಾಸ್ತವದಲ್ಲಿ ಮಹಿಳೆಯರ ಸಮಸ್ಯೆ, ಪುರುಷರ ಸಮಸ್ಯೆ ಎಂದು ಪ್ರತ್ಯೇಕಿಸಲು ಸಾಧ್ಯವಿದೆಯೇ? ಮೂಲದಲ್ಲಿ ಇದು ಮಹಿಳಾ ವರ್ಗ ಎದುರಿಸುವ ಸಮಸ್ಯೆಯಾದರೂ, ಪರಿಣಾಮದಲ್ಲೂ ಅದು ಒಟ್ಟು ಸಮು ದಾಯಕ್ಕೆ ಅನ್ವಯವಾಗುತ್ತದೆ. ಅಷ್ಟೇ ಅಲ್ಲ ಮಹಿಳಾ ವಿಮೋ ಚನಾ ಚಳವಳಿಗಳು ಸ್ತ್ರೀವಾದಿ ನಿಲುವಿನ ಸ್ತ್ರೀ-ಪುರುಷರ ಸಹಭಾಗಿತ್ವದಲ್ಲೇ ಉದ್ದಕ್ಕೂ ನಡೆದು ಕೊಂಡು ಬಂದಿವೆ. ಆದುದರಿಂದ ದುರ್ಬಲ ವರ್ಗದ ಅಸಹಾಯಕ ಮಹಿಳೆ ಯರ ರಕ್ಷಣೆಗೆ ಸಂವಿಧಾನದಲ್ಲಿ ಇರುವ ಲೋಪ ದೋಷಗಳನ್ನು ಹಾಗೂ ಸಾಮಾಜಿಕ ಚಿಂತನಾಸ್ತರದ ಮಿತಿ ಗಳನ್ನು ಸರಿಪಡಿಸುವ ಕೆಲಸ ನಮ್ಮೆಲ್ಲರ ಸಾಂಘಿಕ ಪ್ರಯತ್ನದಿಂದ ಮಾತ್ರ ಸಾಧ್ಯವೆಂಬುದು ನನ್ನ ಅಭಿಮತವಾಗಿದೆ. □

ನಿರ್ಲಕ್ಷಿತರನ್ನು ಅಲಕ್ಷಿಸಿರುವ ಸ್ತ್ರೀವಾದ

(೫೩ನೇ ಪುಟದಿಂದ)

ಮೇಲ್ವರ್ಗದ ಹೆಣ್ಣು ಮಕ್ಕಳು ಅಧಿಕಾರ ಕೇಂದ್ರಿತ ಸ್ಥಾನಗಳನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ. ಹೀಗಾಗಿ ಗ್ರಾಮ ಪಂಚಾಯತಿಗಳಲ್ಲಿ ದಲಿತ ಮಹಿಳಾ ಮೀಸಲು ನೀತಿಯನ್ನು ಅನ್ವಯಿಸದಿದ್ದರೂ, ದಲಿತ, ಹಿಂದುಳಿದ ಸ್ತ್ರೀಯ ರಲ್ಲದೆ ಬೇರಾರೂ ಬರುವುದಿಲ್ಲ. ಸ್ಥಳೀಯ ಸಂಸ್ಥೆಗಳ ಮೀಸಲು ನೀತಿಯಿಂದಾಗಿ ಗ್ರಾಮ ಪಂಚಾಯತಿಗಳಲ್ಲಿ ಮಹಿಳೆ ಸದಸ್ಯಳು, ಅಧ್ಯಕ್ಷಳು ಆಗಿದ್ದರೂ ಅವಳು ಸ್ವತಂತ್ರವಾಗಿ ಆಡಳಿತ ನಡೆಸಲಾಗುವುದಿಲ್ಲ. ಕಾರಣಗಳು ಅನೇಕ ಇವೆ. ನೇರವಾಗಿ ಆಡಳಿತ ನಡೆಸುವ ಅಧಿಕಾರ ಗ್ರಾಮಪಂಚಾಯತಿ ಗಳಿಗಿರುವುದಿಲ್ಲ. ಗ್ರಾಮಪಂಚಾಯತಿಗಳನ್ನು ತಾಲೂಕು

> ದೇವದಾಸಿಯರಲ್ಲಿ ಜಾಗ್ರತೆ ಪ್ರಜ್ಞೆ ಮೂಡಿದೆ ಎಂದು ಕಂಡುಬಂದರೂ ಅದು ಅವರ ಒಳಗಿನ ಅರಿವಿನಿಂದ ರೂಪ ಪಡೆದುಕೊಂಡದ್ದಲ್ಲ. ದೇವದಾಸಿಯರನ್ನು ಪ್ರಶ್ನಿಸಿದಾಗ ಲೈಂಗಿಕ ವೃತ್ತಿ ಬೇಕು ಇಲ್ಲವೆ ಬೇಡ ಎನ್ನುವ ಎರಡು ಸಿದ್ಧ ಉತ್ತರಗಳು ಅವರಿಂದ ದೊರೆಯುತ್ತವೆ. ಲೈಂಗಿಕ ವೃತ್ತಿ ಬೇಡ ಎಂದೆನ್ನುವವರು ಮದುವೆಯನ್ನು ಪರ್ಯಾಯ ಪರಿಹಾರವಾಗಿ ಭಾವಿಸುತ್ತಿದ್ದಾರೆ. ಹೀಗೆ ಹೇಳುವವರು ಸರಕಾರ, ಮತ್ತು ಸಂಘಸಂಸ್ಥೆಗಳ ಕಾರ್ಯಕ್ರಮಗಳಿಂದ ಪ್ರಭಾವಿತರಾದವರು. ಸರಕಾರವಾಗಿಲಿ, ಸಂಘಸಂಸ್ಥಗಳಾಗಲಿ, ಉದಾರವಾಗಿ ಆಲೋಚಿಸುತ್ತಿದೆ ಎಂದುಕೊಂಡರೂ ಅವುಗಳು ಪುರುಷ ನಿಷ್ಠಮೌಲ್ಯಗಳಿಂದ ಹೊರಬಂದಿಲ್ಲ. ದೇವದಾಸಿಯರಲ್ಲಿ ಕೆಲವರು ತಮ್ಮ ವೃತ್ತಿಯನ್ನು ಕಾನೂನು ಬದ್ಧಗೊಳಿಸಲು ಸರಕಾರವನ್ನು ಒತ್ತಾಯಿಸುತ್ತಿದ್ದಾರೆ. ಇದು ಕೂಡ ಅವರ ಸ್ವಂತದ ಅಭಿಪ್ರಾಯವಲ್ಲ. ಪುರುಷಕೇಂದ್ರಿತ ಲೈಂಗಿಕ ಮಾರುಕಟ್ಟೆಯ ದಲ್ಲಾಳಿಗಳು ಹೇಳಿಕೊಟ್ಟ ಗಿಳಿಪಾಠವಾಗಿದೆ.

ಹಾಗೂ ಜಿಲ್ಲಾ ಪಂಚಾಯತಿಗಳು, ವಿಧಾನಸಭೆ, ಲೋಕಸಭೆಗಳು ನಿಯಂತ್ರಿಸುತ್ತಿರುತ್ತವೆ. ಇದರಿಂದಾಗಿ ಗ್ರಾಮ ಪಂಚಾಯತದ ಸಂರಚನೆಯೊಳಗೆ ಅಧಿಕಾರದ ಅವಕಾಶ ಗಳು ಬಹಳ ಕಡಿಮೆ ಇರುತ್ತವೆ. ಗಮನಿಸಬೇಕಾದ ಮತ್ತೊಂದು ಮಹತ್ವದ ಸಂಗತಿಯೆಂದರೆ ಗ್ರಾಮಪಂಚಾ ಯತಿಗಳಲ್ಲಿ ಮಹಿಳಾ ಸದಸ್ಯರು, ಮಹಿಳಾ ಅಧ್ಯಕ್ಷರು, ಚುನಾಯಿತರಾಗಿರುವುದು ಕಡಿಮೆ, ನೇಮಕ ಗೊಂಡಿರುವುದೇ ಹೆಚ್ಚು. ಊರಿನ ಜಮಿನ್ದಾರನೇ ಇಂತಹ ಮಹಿಳೆಯನ್ನು ಸದಸ್ಯಳನ್ನಾಗಿ, ಇಂಥವಳನ್ನು ಅಧ್ಯಕ್ಷಳನ್ನಾಗಿ ನೇಮಕಾತಿ ಮಾಡಬೇಕು ಎಂದು ನಿರ್ಧರಿಸುತ್ತಾನೆ. ಹೀಗೆ ನೇಮಕಗೊಂಡ ದಲಿತ, ಹಿಂದುಳಿದ ಮಹಿಳಾ ಸದಸ್ಯರು, ಮಹಿಳಾ ಅಧ್ಯಕ್ಷರು ಜಮಿನ್ದಾರನ ಮಾತನ್ನು ಕೇಳುವುದು ಅನಿ ವಾರ್ಯವಾಗುತ್ತದೆ. ಅವರು ಅನೇಕ ಮುಜುಗರದ ಪ್ರಸಂಗಗಳನ್ನು ಎದುರಿಸುತ್ತಿರುತ್ತಾರೆ. ಮೀಸಲು ನೀತಿಯಿಂದಾಗಿ ನೇಮಕಗೊಂಡ ಮಹಿಳಾ ಸದಸ್ಯರು ತುತ್ತು ಕೂಳಿಗಾಗಿ ಜಮಿನ್ದಾರನ ಹೊಲ ಮನೆಗಳಿಗೆ ಕೆಲಸಕ್ಕೆ ಹೋಗುತ್ತಿರುತ್ತಾರೆ. ಮತ್ತೊಂದೆಡೆ ಗ್ರಾಮ ಪಂಚಾಯತಿಗಳಲ್ಲಿ ಅಧಿಕಾರ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾರೆ. ಇವೆರಡೂ ಒಂದ ಕ್ಕೊಂದು ತಾಳೆಯಾಗುವುದಿಲ್ಲ. ಹೀಗಾಗಿಯೇ ಗ್ರಾಮಪಂಚಾಯತ ಮಹಿಳಾ ಅಧ್ಯಕ್ಷರು, ಮಹಿಳಾ ಸದಸ್ಯರು ಒಡೆಯ ಹೇಳಿದ್ದಕ್ಕೆ ಹೆಬ್ಬೆಟ್ಟು ಒತ್ತಿ ಬರುತ್ತಾರೆ. ಒಂದು ವೇಳೆ ಹಿಂದುಳಿದ, ದಲಿತ ಮಹಿಳಾ ಸದಸ್ಯರು ಉತ್ತಮ ಆರ್ಥಿಕ ಹಿನ್ನೆಲೆಯನ್ನು ಹೊಂದಿದ್ದರೂ, ಅಂಥವರಿಗೂ ಅಧಿಕಾರವನ್ನು ಬಳಸಿಕೊಳ್ಳಲು ಅಡೆತಡೆಗಳಿರುತ್ತವೆ. ಇಂತಹ ಬಹುಪಾಲು ಮಹಿಳೆಯರು ಕುಟುಂಬದಲ್ಲಿಯ ಪಿತೃ ಪ್ರಧಾನ ಮೌಲ್ಯಗಳಿಂದ ನಿಯಂತ್ರಿತರಾಗುತ್ತಿರು ತ್ತಾರೆ. ಮನೆಯ ಆರ್ಥಿಕ ವರಮಾನದ ಖರ್ಚು ವೆಚ್ಚದ ವ್ಯವಹಾರದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಹೆಣ್ಣುಮಕ್ಕಳು ಗ್ರಾಮ ಪಂಚಾಯತಗಳಲ್ಲಿ ಮತ್ತಷ್ಟು ಅವಗಣನೆಗೆ ಗುರಿಯಾಗುವರು. .

ವಿಧಾನ ಸಭೆ ಮತ್ತು ಲೋಕಸಭೆಯಲ್ಲಿ ದಲಿತ ಮತ್ತು ಹಿಂದುಳಿದ ಮಹಿಳೆಯರಿಗೆ ಈಗಾಗಲೇ ಒಳಮೀಸಲಾತಿ ನೀಡಲಾಗಿದೆ. ಅದಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಂದ ಬಹುಮತ ದೊರೆತಿದೆ. ಆದರೆ ಕೆಲವೇ ಕೆಲವರು ಎತ್ತಿದ OBC ಮೀಸ ಲಾತಿ ಪ್ರಶ್ನೆಯನ್ನು ನೆಪವಾಗಿಟ್ಟುಕೊಂಡು ಮೀಸಲಾತಿ ಮಸೂದೆಯನ್ನು ತಡೆಹಿಡಿಯಲಾಗಿದೆ. ಸರಕಾರ ಮನಸ್ಸು ಮಾಡಿದರೆ ಈಗಲೂ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೆ ತರಬಹುದು. ಆಡಳಿ ತಾಂಗಕ್ಕೆ ಮಹಿಳಾ ಮೀಸಲಾತಿ ಮಸೂದೆಯ ಬಗ್ಗೆ ನಿಜವಾದ ಒಲವಿಲ್ಲ. ಅದಕ್ಕಾಗಿ OBC ಮಹಿಳಾ ಮೀಸಲಾತಿಯ ಪ್ರಶ್ನೆಯನ್ನು ಮುಂದುಮಾಡಿ, ಉದ್ದೇಶಪೂರ್ವಕವಾಗಿ ಮೀಸಲಾತಿ ಮಸೂದೆ ಯನ್ನು ತಡೆಹಿಡಿಯಲಾಗಿದೆ. ಲೋಕಸಭೆ, ವಿಧಾನ ಸಭೆಗಳಲ್ಲಿ ಸ್ತ್ರೀಯರಿಗೆ ಮೀಸಲಾತಿ ಕೊಡುವ

(ಮುಂದಿನ ಪುಟಕ್ಕೆ)

ನಿರ್ಲಕ್ಷಿತರನ್ನು ಬಲಪಡಿಸಿರುವ ಸ್ತ್ರೀವಾದ

ಮೀಸಲು ನೀತಿ ಮಹಿಳೆಯರ ಆತ್ಮವಿಶ್ವಾಸ ಹೆಚ್ಚಿಸಬಲ್ಲದು

(ಹಿಂದಿನ ಪುಟದಿಂದ)

ಕಾಳಜಿ ಪ್ರಾಮಾಣಿಕವಾಗಿದ್ದಿದ್ದರೆ, ದಲಿತ ಹಿಂದುಳಿದ ಮೀಸಲಾತಿಯಂತೆ, OBC ಮೀಸಲಾತಿಯನ್ನು ಅಳವಡಿಸಿ ತಕ್ಷಣವೇ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಗೆ ತರಬಹುದಾಗಿತ್ತು. ಸರಕಾರವು ಅಂದರೆ ಪುರುಷಕೇಂದ್ರಿತ ಅಧಿಕಾರ ವಲಯವು ಮನಸ್ಸು ಮಾಡಬೇಕಷ್ಟೆ

೫) ಜಾತಿನಿಷ್ಠವಾದ ಸಮಾಜದಲ್ಲಿ ಬದುಕುತ್ತಿರುವ ಮೇಲ್ಜಾತಿಯ, ಮೇಲ್ವರ್ಗದ ಹಾಗೂ ಮಧ್ಯಮ ಜಾತಿಯ, ಮಧ್ಯಮ ವರ್ಗದ ಮಹಿಳೆಯರು ಅವರಿಗೆ ಗೊತ್ತಿಲ್ಲದಂತೆ ಕೆಳ ಸಮುದಾಯದ ಮಹಿಳೆಯರ ಮೇಲೆ ತಮ್ಮ ಜಾತಿಯ ಪುರುಷರು ನಡೆಸುತ್ತಿರುವ ದೌರ್ಜನ್ಯಗಳನ್ನು ಒಪ್ಪಿಕೊಂಡು ಬಿಟ್ಟಿರುತ್ತಾರೆ. ಮೇಲ್ಜಾತಿಯ ಮೇಲ್ವರ್ಗದ ಬಹುಪಾಲು ಮಹಿಳೆಯರು ವೇಶ್ಯಾವೃತ್ತಿಯನ್ನು, ಸಾಮಾಜಿಕ ಆರೋಗ್ಯದ ನೆಲೆಯಲ್ಲಿ ಸಮರ್ಥಿಸುವರು. 'ನೆಲೆ' ಸ್ವಯಂ ಸೇವಾ ಸಂಘಟನೆಯ ಕಾರ್ಯದರ್ಶಿ ಲೀಲಾ ಸಂಪಿಗೆ ಅವರು ನಡೆಸಿ ಕೊಟ್ಟ (ಅಕ್ಟೋಬರ್ ೧೬, ೨೦೦೩) 'ಲೈಂಗಿಕ ವೃತ್ತಿ ಮತ್ತು ಮೂಲಭೂತ ಸಮಸ್ಯೆಗಳು' ಎನ್ನುವ ವಿಚಾರಸಂಕಿರಣದ ಒಟ್ಟು ನಿಲುವುಗಳನ್ನು ಆಧಾರವಾಗಿಟ್ಟುಕೊಂಡು ನಿಮ್ಮ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸುತ್ತೇನೆ. ಈ ಕಾರ್ಯಕ್ರಮವನ್ನು ಉದ್ಘಾಟಿಸಿದ ನಿವೃತ್ತ ನ್ಯಾಯಮೂರ್ತಿಗಳಾದ ವಿ.ಎಸ್.ಮಳಿಮಠ ಅವರ ಮಾತುಗಳನ್ನು ಗಮನಿಸಬೇಕು. 'ಸಮಾಜದ ಸ್ವಾಸ್ಥ್ಯ ಕಾಪಾಡುವ ವೇಶ್ಯೆರ ಬಗ್ಗೆ ಅದೇ ಸಮಾಜ ಹೇಸಿಗೆ ಭಾವನೆ ಬೆಳೆಸಿಕೊಂಡಿದೆ. ಅವರು ಸಮಾಜದ ರಕ್ಷಣಾ ಗೋಡೆಗಳಿದ್ದಂತೆ. ಅವರಿಲ್ಲದಿದ್ದಲ್ಲಿ ಸಮಾಜದಲ್ಲಿ ಅವ್ಯಾಹತ ಅತ್ಯಾಚಾರ, ಭಯೋತ್ಪಾದಕರ ಜಾತ್ರೆಯೇ ನೆರೆದಿರುತ್ತಿತ್ತು. ಪುರುಷರ ತೃಷೆಗೆ ಬಲಿಯಾಗುವ ಈ ಮಹಿಳೆಯರ ಬಗ್ಗೆ ಎಲ್ಲಿಯವರೆಗೆ ಜನರ ಅನಾದರ, ಅಗೌರವದ ಮನೋಭಾವ ಬದಲಾಗುವುದಿಲ್ಲವೋ ಅಲ್ಲಿಯವರೆಗೆ ಶೋಷಣೆ ತಪ್ಪಿಸಲು ಸಾಧ್ಯವಿಲ್ಲ. ಲೈಂಗಿಕ ವೃತ್ತಿಯಲ್ಲಿರುವವರ ಹಿತರಕ್ಷಣೆಗೆ ಸರಕಾರವು ವಿಶೇಷ ಅಧಿಕಾರಿಯೊಬ್ಬರನ್ನು ನೇಮಿಸಬೇಕು. ಮತ್ತು ನಿವೃತ್ತಿ ವೇಶ್ಯೆಯರಿಗೆ ಪಿಂಚಣಿ ನೀಡುವ ವ್ಯವಸ್ಥೆ ಶೀಘ್ರ ಆರಂಭವಾಗಬೇಕು' (ಪ್ರಜಾವಾಣಿ ೧೭, ಅಕ್ಟೋಬರ್ ೨೦೦೩). ಮಳಿಮಠರ ಈ ಮಾತಿಗೆ ಯಾವುದೇ ರೀತಿ ಪ್ರತಿಕ್ರಿಯಿಸದ ಲೀಲಾ ಸಂಪಿಗೆ ಅವರು ಲೈಂಗಿಕ ವೃತ್ತಿಯಲ್ಲಿರುವವರಿಗೆ ಪಡಿತರ ಚೀಟಿ, ಮತದಾನದ ಹಕ್ಕು ನೀಡಬೇಕೆಂದು ಒತ್ತಾಯಿಸಿದರು. ಮಳಿಮಠರ ಹೇಳಿಕೆಗಳು ಲೀಲಾ ಅವರಲ್ಲಿ

ಚರ್ಚೆ

> ಎನ್‌ಜಿಓಗಳಂತಹ ಅನೇಕ ಸಂಘ ಸಂಸ್ಥೆಗಳು ಅಸಹಾಯಕ ಮಹಿಳೆಯರ ಪರವಾಗಿ ಕೆಲಸ ಮಾಡುತ್ತಿರುವಂತೆ ಕಂಡುಬಂದರೂ, ಅವುಗಳು ಸ್ತ್ರೀಯರ ಸಮಸ್ಯೆಗಳನ್ನು ಮಾರುಕಟ್ಟೆ ಗಿಟ್ಟು ಬದುಕುತ್ತಿವೆ ಎನಿಸುತ್ತಿದೆ. ಸರಕಾರದಿಂದ, ಇನ್ನಿತರ ಸಂಘ ಸಂಸ್ಥೆಗಳಿಂದ ಹಣ ಕಿತ್ತುಕೊಳ್ಳಲು ದುರ್ಬಲ ವರ್ಗದ ಮಹಿಳಾ ಸಮಸ್ಯೆಗಳನ್ನು projectಗಳಾಗಿ ರೂಪಿಸಿಕೊಳ್ಳುತ್ತಿವೆ. ಹಸಿದವರ ವಿಷಯಗಳನ್ನು ಮಾತನಾಡುತ್ತಾ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿವೆ.

ಯಾವುದೇ ರೀತಿಯ ತಳಮಳ, ತಲ್ಲಣ, ಆತಂಕಗಳನ್ನು ಸೃಷ್ಟಿಸಲಿಲ್ಲ. ಲೀಲಾ ಅವರ ಕಾಳಜಿಯನ್ನು ನಾನು ಸಂಶಯಿಸುತ್ತಿಲ್ಲ. ಆದರೆ ಅವರ ಒಳಗಿರುವ ವೇಶ್ಯೆಯರ ಬಗೆಗಿನ ತುಡಿತವು ಮೇಲ್ಜಾತಿ, ಮೇಲ್ವರ್ಗದ ಪಿತೃಪ್ರಧಾನ ಮೌಲ್ಯಗಳ ಪ್ರಭಾವದಿಂದ ಬಿಡಿಸಿಕೊಂಡಿಲ್ಲದ್ದನ್ನು ಪ್ರಶ್ನಿಸುತ್ತಿರುವೆ. ಮಳಿಮಠರು ವೇಶ್ಯೆಯರನ್ನು ಸಮಾಜದ ರಕ್ಷಣಾ ಗೋಡೆಗಳಿದ್ದಂತೆ ಎಂದಿರುವರು. ಯಾವ ವರ್ಗದ, ಯಾವ ಜಾತಿಯ ಮಹಿಳೆಯರನ್ನು ರಕ್ಷಿಸಲು ವೇಶ್ಯೆಯರು ತಮ್ಮ ದೇಹವನ್ನು ಬೀದಿಯಲ್ಲಿ ಬಿಕರಿಯಾಗಿಸ ಬೇಕಾಯ್ತು, ಅದಕ್ಕಾಗಿ ವೇಶ್ಯೆಯರು ಎದುರಿಸಿದ ಸಾಮಾಜಿಕ ಅಪಮಾನಗಳೆಷ್ಟು, ದೈಹಿಕ ಹಿಂಸೆಗಳೆಷ್ಟು, ಸಮಾಜದೊಳಗಿದ್ದೂ ಅನುಭವಿಸಿದ ಅನಾಥತೆ ಎಂಥದ್ದು ಮೊದಲಾದವುಗಳನ್ನು ಅರ್ಥಮಾಡಿಕೊಳ್ಳುವ ಹೃದಯವನ್ನು ಕಸಿಗೊಳಿಸುವ ಅಗತ್ಯವಿದೆ. ವೇಶ್ಯೆಯರಿಗೆ ಪಿಂಚಣಿ ಕೊಡುವುದು ಹಾಗೂ ಅವರ ವಿಶೇಷ ರಕ್ಷಣೆಗಾಗಿ ಸರಕಾರಿ ಅಧಿಕಾರಿಯೊಬ್ಬರನ್ನು ನೇಮಿಸಬೇಕೆನ್ನುವ ಮಳಿಮಠರ ಸಲಹೆಗಳು ವೇಶ್ಯಾವೃತ್ತಿಯನ್ನು ಮತ್ತಷ್ಟು ಅಧಿಕೃತಗೊಳಿಸುತ್ತವೆ. ಶಾಸನದಲ್ಲಿ ದೇವದಾಸಿ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ ನ್ಯಾಯಮೂರ್ತಿಯೊಬ್ಬರು ಸಾಮಾಜಿಕ ಆರೋಗ್ಯದ ಹಿನ್ನೆಲೆಯಲ್ಲಿ ಲೈಂಗಿಕ ವೃತ್ತಿಯನ್ನು ಸಮರ್ಥಿಸುತ್ತಿರುವುದು ವಿಷಾದನೀಯ. ವೇಶ್ಯಾವೃತ್ತಿಯನ್ನು ಕಾನೂನುಬದ್ಧಗೊಳಿಸಿದರೆ, ವ್ಯವಸ್ಥೆಗೆ ಯಾವ ವರ್ಗದ, ಯಾವ ಜಾತಿಯ ಮಹಿಳೆಯರು ಬಲಿಪಶುಗಳಾಗುತ್ತಾರೆ ಎನ್ನುವುದನ್ನು ಆಲೋಚಿಸಬೇಕಿದೆ. ಮತ್ತೆ ಅದೇ ಕೆಳಜಾತಿಯ, ಕೆಳವರ್ಗದ ಸ್ತ್ರೀಯರು ವೇಶ್ಯಾವೃತ್ತಿಯ ಅಲಗಿಗೆ ಕೊರಳುಕೊಡಬೇಕಾಗುತ್ತದೆ. 'ಎಲ್ಲ ಜಾತಿಯ ಮಹಿಳೆಯರೂ, ವೇಶ್ಯಾವೃತ್ತಿಯಲ್ಲಿದ್ದಾರೆ. ದೇವದಾಸಿ ಸಂಪ್ರದಾಯದಲ್ಲಿಯಂತೆ ನಿರ್ದಿಷ್ಟ ಜಾತಿಗಳ ಸ್ತ್ರೀಯರು ಲೈಂಗಿಕ ವೃತ್ತಿಯಲ್ಲಿಲ್ಲ' ಎನ್ನುವುದು ಕೆಲವರ ಅಂಬೋಣ. ಲೈಂಗಿಕ ವೃತ್ತಿಯಲ್ಲಿರುವವರನ್ನು ಸರ್ವೆ ಮಾಡಿದಾಗ ಯಾವ ಜಾತಿಯ, ಯಾವ ವರ್ಗದ ಹೆಣ್ಣು ಮಕ್ಕಳು ಈ ವೃತ್ತಿಯಲ್ಲಿ ತೊಡಗಿಸಿಕೊಂಡಿರುವರು ಎನ್ನುವುದು ಬೆಳಕಿಗೆ ಬರುತ್ತದೆ. ಯಾವ ಮಹಿಳೆಯರೇ ಆಗಲಿ ಪುರುಷರ ಭೋಗಾಸಕ್ತಿಗೆ ಬಲಿಯಾಗುವುದನ್ನು ವಿರೋಧಿಸಬೇಕು. ವಿಧವ ವಿವಾಹ, ಸತಿನಿಷೇಧ, ಸ್ತ್ರೀಭ್ರೂಣ ಹತ್ಯೆ, ವರದಕ್ಷಿಣೆ ನಿಷೇಧ ಮೊದಲಾದ ಕಾಯ್ದೆಗಳಲ್ಲಿ, ಚಳವಳಿಗಳಲ್ಲಿ ವೇಶ್ಯಾವೃತ್ತಿ ಕುರಿತಂತೆ ಪ್ರಕಟಗೊಂಡ ದ್ವಂದ್ವಗಳು ಕಾಣಿಸುವುದಿಲ್ಲ. ಇವುಗಳು ಮೇಲ್ಜಾತಿ, ಮೇಲ್ವರ್ಗ ಹಾಗೂ ಮಧ್ಯಮಜಾತಿ, ಮಧ್ಯಮ ವರ್ಗದ ಮಹಿಳೆಯರ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡಿರುವುದಿಂದ ಸ್ಪಷ್ಟವಾದ ಸಾಮಾಜಿಕ ನೀತಿಯನ್ನು ಪ್ರತಿಪಾದಿಸುತ್ತಿರುತ್ತವೆ. ಮೇಲ್ಜಾತಿ, ಮೇಲ್ವರ್ಗ ಹಾಗೂ ಮಧ್ಯಮ ಜಾತಿ, ಮಧ್ಯಮ ವರ್ಗದ ಬಹುಪಾಲು ಸ್ತ್ರೀ ಪುರುಷರು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ತಮ್ಮ ಸಮುದಾಯದ ಮಹಿಳೆಯರ ಸಮಸ್ಯೆಗಳನ್ನು ಅರ್ಥೈಸುವ ಬಗೆಗೂ ಹಾಗೂ ತಳ ಸಮುದಾಯದ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ರೀತಿಗೂ ವ್ಯತ್ಯಾಸವಿದೆ. ಅದ'ಕ್ಕಾಗಿಯೇ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ದೇವದಾಸಿ ಪದ್ಧತಿಯನ್ನು ನಿಷೇದಿಸುವುದು, ಅದೇ ಹೊತ್ತಿನಲ್ಲಿ ವೇಶ್ಯಾವೃತ್ತಿಯನ್ನು ಸಮಾಜದ ಆರೋಗ್ಯದ ನೆಲೆಯಲ್ಲಿ ಕಾನೂನುಬದ್ಧಗೊಳಿಸುವ ವಿಪರ್ಯಾಸಗಳು ಕಂಡುಬರುತ್ತವೆ.

NGOಗಳಂತಹ ಅನೇಕ ಸಂಘ ಸಂಸ್ಥೆಗಳು ಅಸಹಾಯಕ ಮಹಿಳೆಯರ ಪರವಾಗಿ ಕೆಲಸ ಮಾಡುತ್ತಿರುವಂತೆ ಕಂಡುಬಂದರೂ, ಅವುಗಳು ಸ್ತ್ರೀಯರ ಸಮಸ್ಯೆಗಳನ್ನು ಮಾರುಕಟ್ಟೆಗಿಟ್ಟು ಬದುಕುತ್ತಿವೆ ಎನಿಸುತ್ತಿದೆ. ಸರಕಾರದಿಂದ, ಇನ್ನಿತರ ಸಂಘ ಸಂಸ್ಥೆಗಳಿಂದ ಹಣ ಕಿತ್ತುಕೊಳ್ಳಲು ದುರ್ಬಲ ವರ್ಗದ ಮಹಿಳಾ ಸಮಸ್ಯೆಗಳನ್ನು projectಗಳಾಗಿ ರೂಪಿಸಿಕೊಳ್ಳುತ್ತಿವೆ. ಹಸಿದವರ ವಿಷಯಗಳನ್ನು ಮಾತನಾಡುತ್ತಾ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿವೆ. ಶೋಷಿತ ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸುತ್ತಾ ಶೋಕಿ ಜೀವನ ನಡೆಸುತ್ತಿವೆ. ಹೀಗಾದಾಗ ಚಳವಳಿಯ ಉದ್ದೇಶಗಳು ಅರಳುವ ಮುನ್ನವೇ ಕಮರಿಹೋಗುತ್ತವೆ. ಅದಕ್ಕಾಗಿ ದಲಿತ ಮಹಿಳೆಯ ಅಜೆಂಡಾಗಳನ್ನು ಪ್ರಧಾನಧಾರೆಯ ಗಮನಕ್ಕೆ ತರುವ ಚಳವಳಿಗಳು ರೂಪಗೊಳ್ಳಬೇಕಿದೆ. ಪುರುಷಾಧಿಪತ್ಯದ ನೆಲೆಯ ನಿರ್ವಚನೆಗಳನ್ನೆ ಪ್ರಧಾನವಾಗಿಟ್ಟುಕೊಂಡಿರುವ ಮಹಿಳಾ ಚಳವಳಿಗಳು ಜಾತಿ, ವರ್ಗ ಶ್ರೇಣೀಕರಣಗಳತ್ತ ಹೊರಳಬೇಕಿದೆ. ಅದಕ್ಕಾಗಿ ಸಿದ್ಧಾಂತಗಳನ್ನು ರೂಪಿಸುವ ಅಗತ್ಯವಿದೆ. ಅವುಗಳನ್ನು ಆಚರಣೆಯಲ್ಲಿ ಅಭಿವೃದ್ಧಿ ಪಡಿಸುವ ತುರ್ತಿದೆ. □

ಚರ್ಚೆ

ಒಟ್ಟುಗೂಡಿ ಕಟ್ಟಿಕೊಳ್ಳುವ ಶಕ್ತಿ

○ಡಾ|| ಎಚ್.ಎಸ್. ಶ್ರೀಮತಿ

ಪುರುಷಪ್ರಧಾನ, ಪಿತೃಪ್ರಧಾನ ಸಂಸ್ಕೃತಿಯು ಬೇರಾವುದೇ ಯಜಮಾನ ಸಂಸ್ಕೃತಿಯು ತನ್ನ ಅಧೀನದ ಸಮುದಾಯದೊಂದಿಗೆ ಹೂಡುವ ಹುನ್ನಾರವನ್ನೇ, ಮಹಿಳಾ ಸಮುದಾಯದ ಬಗೆಗೂ ಹೂಡುತ್ತಾ ಬಂದಿದೆ. ಮಹಿಳೆಯರನ್ನು ಅವರವರ ಮನೆಗಳ ಗೋಡೆಗಳಲ್ಲೇ ಉಳಿಸುವ ತಂತ್ರವನ್ನು ಪ್ರಬಲವಾಗಿ ಜಾರಿಗೊಳಿಸಿದೆಯಾಗಿ, ಮಹಿಳೆಯರಿಗೆ ದೊರೆಯುವ ಅನಿವಾರ್ಯ ಸಾಮಾಜಿಕ ಪರಿಸರದಲ್ಲಿ ಆತ್ಮವಿಶ್ವಾಸ, ಬುದ್ಧಿಶಕ್ತಿ ವ್ಯವಹಾರಜ್ಞಾನಗಳೆಂಬುವು ಅತಿ ಕಷ್ಟದಿಂದ ಸಂಪಾದಿಸಬೇಕಾದ ಗುಣಗಳೇ ಹೊರತು ಸಹಜವಾಗಿ ಒದಗುವಂಥವಲ್ಲ. ಈ ವ್ಯವಸ್ಥೆಯಲ್ಲಿ ಮಹಿಳೆಯರು ಚರಿತ್ರೆಯ ನೆರಳೇ ದಟ್ಟವಾಗಿರುವ ವರ್ತಮಾನದಲ್ಲಿ ಬದುಕುತ್ತಾ ಭವಿಷ್ಯದ ಕನಸುಗಳನ್ನು ಕಾಣಲು ಸಾಧ್ಯವೇ ಇಲ್ಲದ ಪರಿಸ್ಥಿತಿಯಲ್ಲಿದ್ದಾರೆ. ಈ ಬಂಧನದಿಂದ ಅಷ್ಟಿಷ್ಟು ಬಿಡುಗಡೆ ಪಡೆಯಲು ಅವಕಾಶ ದೊರೆತ ಮಹಿಳೆಯರು, ಪೂರ್ಣರೂಪದ ವಿಮೋಚನೆಯ ಕನಸುಗಳನ್ನು ಹೆಣೆಯುತ್ತಾ ಸ್ತ್ರೀವಾದದ ಚಿಂತನೆ ಮತ್ತು ಸಮಾನತೆಯ ಪ್ರತಿಪಾದನೆಯನ್ನು ಮಾಡುತ್ತಿದ್ದಾರೆ. ಈ ಚಿಂತನೆ ಪ್ರದಾನವಾಗಿ, ಸ್ತ್ರೀಪುರುಷ ಸಂಬಂಧಗಳ ಪ್ರಶ್ನೆಯನ್ನೇ ಗುರಿಯಾಗಿಟ್ಟುಕೊಂಡು ಆರಂಭವಾದದ್ದು ಸಹಜವೇ. ಮಹಿಳೆಯರು ಎಲ್ಲ ಜಾತಿ, ವರ್ಗ, ಜನಾಂಗಗಳಲ್ಲೂ ಹಂಚಿಹೋಗಿರುತ್ತಾರೆಂಬ ಸಹಜ ಸಂಗತಿಯೇ ಮಹಿಳಾ ಸಮುದಾಯ ಎಂಬುದನ್ನು ಉಳಿದ ದಮನಿತ ಸಮುದಾಯಗಳಂತೆ, ಏಕಘಟಕವಾಗಿ ಕಲ್ಪಿಸಲು ಅಸಾಧ್ಯ ಎಂಬುದನ್ನು ಹೇಳುತ್ತದೆ. ವೈವಿಧ್ಯಮಯ ಸಾಮಾಜಿಕ ನೆಲೆಗಳಲ್ಲಿ ಚದುರಿ ಹೋಗಿರುವ ಹೆಣ್ಣುಗಳ, ಅಷ್ಟೆ ವೈವಿಧ್ಯಮಯ ಸಮಸ್ಯೆಗಳನ್ನು ಒಂದೇ ಉಸಿರಿಗೆ ಕೈಗೆತ್ತಿಕೊಳ್ಳುವುದು ಯಾರ ಸಾಮರ್ಥ್ಯಕ್ಕೂ ನಿಲುಕದ ವಿಷಯವೇ ಸರಿ. ಇದೊಂದು ಸಂಕೀರ್ಣವಾದ ಸಂದರ್ಭ. ಇದನ್ನು ನಿಭಾಯಿಸುವಲ್ಲಿ ಸ್ತ್ರೀವಾದಿ ಚಿಂತನೆ ಹಾಗೂ ಚಳವಳಿಗಳ ಪ್ರಯತ್ನಗಳಲ್ಲೂ ಕುಂದುಕೊರತೆಗಳು ಕಂಡಿದ್ದರೆ ಅದು ತೀರಾ ಸಹಜ.

ಆದರೆ ನನಗೊಂದು ಪ್ರಶ್ನೆ ಇದೆ. ಅತ್ಯಂತ ಆತಂಕದಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈಗೀಗ ಮಹಿಳಾ ಸಮುದಾಯ ಎಂಬುದಕ್ಕೆ ಅಷ್ಟಿಷ್ಟು ಆಕಾರ ದಕ್ಕುತ್ತಿದ್ದು ಈ ಸಾಮುದಾಯಿಕ ಪ್ರಯತ್ನದಿಂದಾಗಿಯೇ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಜಾಗ್ರತಾವ್ಯವಸ್ಥೆಗೆ ಮರಳುತ್ತಿದ್ದಾರೆ. ತಮ್ಮ ಅಸ್ತಿತ್ವದ ಪ್ರಶ್ನೆಗಳ ಮೂಲವನ್ನು ತಮ್ಮ ತಮ್ಮದೇ ಬಗೆಗಳಲ್ಲಿ ಕಂಡುಕೊಳ್ಳಲು ಯತ್ನಿಸುತ್ತಿದ್ದಾರೆ.

ಹಲ ಕೆಲವು ಸಂದರ್ಭಗಳಲ್ಲಾದರೂ ತಾವು ಮುನ್ನಡೆಯಬೇಕಾದ ಅಸ್ಪಷ್ಟ ಹಾದಿಗಳಾದರೂ ಕಾಣತೊಡಗಿವೆ ಇದು ಪುರುಷ ಪ್ರಧಾನ, ಪಿತೃ ಸಂಸ್ಕೃತಿಯ ಸಮಾಜಕ್ಕೆ ಎದೆ ಜಲ್ಲೆನಿಸುವ ಸಂಗತಿಯಾಗುತ್ತಿದೆ ಎಂಬುದರಲ್ಲಿ ಆಶ್ಚರ್ಯವಿಲ್ಲ. ಈಗ ಈ ಸಂಸ್ಕೃತಿಗೆ ಹೇಗಾದರೂ ಮಾಡಿ ಮಹಿಳೆಯರನ್ನು ಮತ್ತೆ ಪ್ರತ್ಯೇಕ ದ್ವೀಪಗಳಲ್ಲಿ ಹಿಡಿದು ಹಾಕುವುದು ಅಗತ್ಯವಾಗಿದೆ. ಆದರೆ, ಈ ಪೂರ್ವಸ್ಥಿತಿಯನ್ನು ತರುವುದಂತೂ ಅಸಾಧ್ಯ. ಹಾಗಾಗಿ, ಸಮುದಾಯ ಶಕ್ತಿಯನ್ನು ದುರ್ಬಲಗೊಳಿಸುವ ಅನೇಕ ಹುನ್ನಾರಗಳು ಆರಂಭವಾಗಿವೆ. ಈ ಹುನ್ನಾರಗಳ ಸ್ವರೂಪವನ್ನು ವಿವರಿಸುವುದು ಇಲ್ಲಿನ ಸಂಕ್ಷಿಪ್ತ ಅವಕಾಶದಲ್ಲಿ ಸಾಧ್ಯವಿಲ್ಲ, ಸಧ್ಯಕ್ಕೆ ಹೇಳಬಹುದಾದ್ದೆಂದರೆ, ಸಮಾಜ ವ್ಯವಸ್ಥೆಯ ಎಲ್ಲ ಜ್ಞಾನ, ಶಿಸ್ತುಗಳೂ ಕೂಡಿಯೇ ಮಹಿಳಾ ಸಮುದಾಯದಲ್ಲಿ ಪ್ರತ್ಯೇಕತೆಯ ಬೀಜವನ್ನು ಅನುಮಾನಗಳನ್ನು ಬಿತ್ತಲು ಯತ್ನಿಸುತ್ತಿವೆ. ಜ್ಞಾನಶಿಸ್ತುಗಳ ಯಜಮಾನಿಕೆ ಪುರುಷ ಚಿಂತನೆಯದು ಎಂಬುದರಲ್ಲೇನೂ ಅನುಮಾನವಿಲ್ಲವಲ್ಲ.

೧) ಸ್ತ್ರೀವಾದಿ ಚಿಂತನೆಯು ದಲಿತ ಮತ್ತು ಹಿಂದುಳಿದ ಜಾತಿ ವರ್ಗಗಳ ಮಹಿಳೆಯರನ್ನು ಮೊದಲ ಘಟ್ಟದಲ್ಲಿ ಒಳಗೊಳ್ಳಲಿಲ್ಲ, ಬಹುಶಃ ಮಹಿಳಾ ಸಮುದಾಯವನ್ನು ಏಕಘಟಕವಾಗಿ ಪರಿಗಣಿಸುವಲ್ಲಿ ಸಮಸ್ಯೆಗಳಿವೆ ಎಂಬ ಅರಿವು ತಡವಾಗಿ ಉಂಟಾದದ್ದೆ ಇದಕ್ಕೆ ಕಾರಣವೆನ್ನಬೇಕು. ಮಹಿಳಾ ಸಮಾನತೆ ಎಂಬುದು ಸ್ತ್ರೀಪುರುಷ ಸಂಬಂಧಗಳಿಗಷ್ಟೇ ಅನ್ವಯಿಸುವುದಿಲ್ಲ; ಅದು ಜಾತಿ, ವರ್ಗ, ಜನಾಂಗ ಮೊದಲಾದ ಹತ್ತೆಂಟು ಸಮಾನತೆಯ ಪ್ರಶ್ನೆಗಳನ್ನು ಒಳಗೊಂಡ ಸಂಕೀರ್ಣ ಸಮಸ್ಯೆಯಾಗಿದೆ, ಎಂಬ ಹೊಸ ಅರಿವಿನೊಂದಿಗೆ ಸಮಕಾಲೀನ ಸ್ತ್ರೀವಾದಿ ಚಿಂತನೆ ಹಾಗೂ ಚಳವಳಿಗಳು ಕೆಲಸ ಮಾಡಲಾರಂಭಿಸಿವೆ.

೨) ಸಾಹಿತ್ಯ ಮತ್ತು ಚಳವಳಿಯ ಚರ್ಚೆಗಳು ಸಾಮಾಜಿಕ ನ್ಯಾಯವನ್ನು ಒದಗಿಸುತ್ತವೆ ಎಂಬುದನ್ನೇ ಹಲವು ನೆಲೆಗಳಲ್ಲಿ ಪ್ರಶ್ನಿಸುವುದು ಸಾಧ್ಯವಿದೆ. ಎಲ್ಲಿ ದಮನಿತ ಸಮುದಾಯಗಳ ಸಂದರ್ಭಗಳಲ್ಲಿ ಇಂಥಾ ಬೌದ್ಧಿಕ ಪ್ರಧಾನವಾದ ಚರ್ಚೆಗಳು ಎಷ್ಟು ಪರಿಣಾಮಕಾರಿಯಾಗಿವೆಯೋ ಅಷ್ಟೆ ಪ್ರಮಾಣದಲ್ಲಿ ದಮನಿತ ವರ್ಗದ ಸ್ತ್ರೀಯರಿಗೆ ನ್ಯಾಯಪರಿಕಲ್ಪನೆಯ ವಿಚಾರದಲ್ಲೂ ಆಗುತ್ತಿದೆ. ಈ ಪ್ರಮಾಣವನ್ನು ಅಳೆಯಲು ದಮನಿತರಲ್ಲಿ 'ಸ್ತ್ರೀಯರು' ಎಂಬ ಪ್ರತ್ಯೇಕ ವಿಭಾಗ ಅನವಶ್ಯಕವಾದರೂ ಚಾಲ್ತಿಯಲ್ಲಿದೆ. ಇದೊಂದು ವಿಶಿಷ್ಟ ಬಗೆಯ ರಾಜಕಾರಣ. ಬಹುಶಃ ಇಲ್ಲಿ ಅಷ್ಟನ್ನೆಲ್ಲಾ ಚರ್ಚಿಸುವುದು ಅಸಾಧ್ಯ.

೩) ಮಹಿಳಾ ಸಬಲೀಕರಣ ಎಂಬ ಆಶಯದ ಚಿಂತನೆ, ಯೋಜನೆ ಹಾಗೂ ಕಾರ್ಯಕ್ರಮಗಳು ಅರ್ಥಪೂರ್ಣವಾಗಬೇಕು. ಮೊತ್ತ ಮೊದಲಿಗೆ ಹೊಟ್ಟೆ ಬಟ್ಟೆಗೆ ಪರಾವಲಂಬಿಯಾಗಬೇಕಾದ ಪರಿಸ್ಥಿತಿಯಿಂದ ಹೆಂಗಸಿಗೆ ಮುಕ್ತಿ ದೊರೆಯಬೇಕು. ಇದು ಕ್ರಮೇಣವಾಗಿ ಉಳಿದ ಕ್ಷೇತ್ರಗಳ ಸ್ಥಾನಮಾನಗಳನ್ನು ಗಳಿಸಿಕೊಡುತ್ತದೆ. ಮಹಿಳಾ ಸಮುದಾಯವು ಇದಕ್ಕಾಗಿ ತನ್ನದೇ ಆದ ಮಹಿಳಾ ರಾಜಕಾರಣವನ್ನೇ ರೂಪಿಸಿಕೊಳ್ಳುವ ಅಗತ್ಯವೂ ಇದೆ. ಮಹಿಳೆಯರು ಪ್ರತ್ಯೇಕವಾಗಿ, ಅದಕ್ಕಿಂತ ಮುಖ್ಯವಾಗಿ ಸಮುದಾಯವಾಗಿ, ಈ ರಾಜಕೀಯ ಶಕ್ತಿಯನ್ನು ಗಳಿಸದ ಹೊರತು ಅವರ ಮೇಲೆ ನಡೆಯುವ ಹಿಂಸೆ, ದೌರ್ಜನ್ಯ, ಆಕ್ರಮಣಗಳು ನಿಲ್ಲುವುದಿಲ್ಲ, ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಲು ಅವರೇ ಒಟ್ಟುಗೂಡಿ ಕಟ್ಟಿಕೊಳ್ಳುವ ಈ ರಾಜಕೀಯ ಶಕ್ತಿಗೆ ಮಾತ್ರವೇ ಸಾಧ್ಯ.

೪) ಈ ಪ್ರಶೆಯ ಬಹುಪಾಲು ಅಂಶಕ್ಕೆ ಪ್ರಸ್ತಾವನಾ ಭಾಗವೇ ಉತ್ತರ. ಮೀಸಲು ನೀತಿ ಎಂಬುದೇ ಭ್ರಮಾತ್ಮಕವಾದುದೇನೋ ಎಂಬ ಅನುಮಾನ ನನಗೆ. ಆದರೆ, ಕಾಲೂರಿ ನಿಲ್ಲಲೂ ಸಾಧ್ಯವಿಲ್ಲ ಎಂಬ ಸಾಮಾಜಿಕ ಪರಿಸ್ಥಿತಿಗಳನ್ನು ಹುಟ್ಟು ಹಾಕಲಾಗಿದೆ ಎಂದ ಮೇಲೆ, ಕನಿಷ್ಠ ಅಳಿವು-ಉಳಿವಿಗಾದರೂ ಮೀಸಲು ನೀತಿಯನ್ನು ಸ್ವಾಗತಿಸದೆ ವಿಧಿ ಇಲ್ಲ, ಆದರೆ, ಮೀಸಲು ನೀತಿಯು ಅದನ್ನು ಪಡೆಯುವವರಿಂದ ದೊಡ್ಡ ಪ್ರಮಾಣದ ಬೆಲೆಯನ್ನು ವಸೂಲು ಮಾಡುತ್ತದೆ ಎಂಬುದು ಗಮನಾರ್ಹ. ಏಕೆಂದರೆ ಇಂಥ ಮೀಸಲು ನೀತಿಯನ್ನು ರೂಪಿಸಿ ಜಾರಿಗೊಳಿಸುವ ಎಲ್ಲ ನಿಯಂತ್ರಣಗಳೂ ಪ್ರಬಲ ಸಮುದಾಯಗಳ ಕೈಲೇ ಇರುವುದು. ಹಾಗಾಗಿ, ಈ ರಾಜಕಾರಣವನ್ನು ಗ್ರಹಿಸುವುದು ಬಹಳ ಮುಖ್ಯ.

ಮಹಿಳಾ ಮೀಸಲಾತಿ ಮಸೂದೆಯ ಮಂಡನೆ, ನಿರಾಕರಣೆಯ ನಾಟಕಗಳು ಸಾಕಷ್ಟು ನಡೆದ ಮೇಲೆ ಇದ್ದಕ್ಕಿದ್ದಂತೆ ಸೇರಿಕೊಂಡ ಜಾತಿ ಮೀಸಲಾತಿಯ ಪ್ರಶ್ನೆಯೂ ಮುಖ್ಯವಾಗಿ ಪುರುಷ ರಾಜಕಾರಣದ ಕುತಂತ್ರವೇ ಎಂಬುದು ನನ್ನ ಸ್ಪಷ್ಟ ತಿಳುವಳಿಕೆ. ಸ್ವಲ್ಪದರಲ್ಲಿ ವಿವರಿಸಲಾಗದ ಈ ಮಾತು ಕೂಡ ದೀರ್ಘ ಸಂವಾದಗಳನ್ನು ಅಪೇಕ್ಷಿಸುವಂಥದು.

೫) ಎಲ್ಲ ವರ್ಗ, ಜಾತಿ ಮುಂತಾದ ನೆಲೆಗಳಲ್ಲೂ ಮಹಿಳೆಯರು ಅರಕ್ಷಿತರೇ ಆಗಿದ್ದಾರೆ. ವೈವಿಧ್ಯಮಯ ಆಕಾರ, ಸ್ವರೂಪಗಳಲ್ಲಿ ಎಲ್ಲರೂ ಅತ್ಯಂತ ಅಪಾಯಕಾರಿಯಾದ ಪರಿಸ್ಥಿತಿಗಳಲ್ಲೇ ಇದ್ದಾರೆ. ಇದನ್ನು ನಿರೂಪಿಸಲು ಅಸಂಖ್ಯ ಪ್ರಕರಣಗಳ ಗುಡ್ಡೆಯನ್ನೇ ಹಾಕಬಹುದು. ಮಹಿಳಾ ಚಳವಳಿಗಳಿಗೆ ಸದ್ಯದಲ್ಲಂತೂ ಇಂಥಾ ದೊಡ್ಡ ಸಮಸ್ಯೆಯನ್ನು ಕೈಗೆತ್ತಿ ಕೊಳ್ಳುವ ಶಕ್ತಿಯಿಲ್ಲ, ಏಕೆಂದರೆ, ನಾನು ಮೊದಲೇ ಹೇಳಿದಂತೆ ಅದು ಒಂದು ರಾಜಕೀಯ ಶಕ್ತಿಯಾಗಿ ಬೆಳೆಯುವವರೆಗೂ, ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯಗಳ ಪ್ರಶ್ನೆ ಹೀಗೆಯೇ ಮುಂದುವರೆಯುತ್ತದೆ. □

ಸಮಕಾಲೀನ ಸಂದರ್ಭದಲ್ಲಿ ಸಿದ್ಧಾಂತಗಳು :

ತಲ್ಲಣಗಳೋ ಅಥವಾ ದಾರಿದೀಪಗಳೋ ?



○ ಡಾ॥ ತಾರಕೇಶ್ವರ್ ವಿ.ಬಿ.

ಅಕಾಡೆಮಿಕ್ ವಲಯಗಳಲ್ಲಿ ಇತ್ತೀಚೆಗೆ ಸಿದ್ಧಾಂತ (Theory) ಎನ್ನುವುದನ್ನು ಬಹಳ ಸೀಮಿತ ಅರ್ಥದಲ್ಲಿ ಬಳಸಲಾಗುತ್ತಿದೆ. ಹೀಗೆ ಬಳಕೆ ಮಾಡುವಾಗ ಸಿದ್ಧಾಂತ ಎನ್ನುವುದನ್ನು ಕ್ಯಾಪಿಟಲ್ Tಯಿಂದಲೇ ಆರಂಭಿಸುತ್ತಾರೆ. ಕ್ಯಾಪಿಟಲ್ T ಯಿಂದ ಆರಂಭಿಸಿದಾಗ ಅದರ ಅರ್ಥ ಸಂರಚನೋತ್ತರ ಅಥವಾ ಆಧುನಿಕೋತ್ತರ ಸಿದ್ಧಾಂತಗಳು ಎಂದು ಅರ್ಥ. ಇವೆರಡೂ ಒಂದೇ ಅಲ್ಲ, ಆದರೂ ಅವುಗಳನ್ನು interchangable ಆಗಿ ಬಳಸಲಾಗುತ್ತದೆ. ಇದರ ಬಗ್ಗೆ ನಂತರ ಮಾತನಾಡುತ್ತೇನೆ. ಇವುಗಳನ್ನು ಆಧುನಿಕ ಸಿದ್ಧಾಂತಗಳಿಗೆ ವಿರುದ್ಧವಾದ ಸಿದ್ಧಾಂತಗಳಾಗಿ ಭಾವಿಸಲಾಗುತ್ತದೆ. ನಾವು ಇದುವರೆವಿಗೆ ನಂಬಿಕೊಂಡು ಬಂದ ಸಿದ್ಧಾಂತಗಳು ನಮ್ಮ ನೋಟವನ್ನು ನಿರ್ಧರಿಸುತ್ತಿದ್ದವು. ನಾವು ನೋಡಿದ್ದನ್ನು ಗ್ರಹಿಸಲು, ಗ್ರಹಿಸಿದ್ದನ್ನು 'ಒಳ್ಳೆಯದು', 'ಕೆಟ್ಟದು' ಎಂದು ನಿರ್ಧರಿಸಲು ಸಹಾಯಕವಾಗಿದ್ದವು. ನಾವು ನೋಡಿದ್ದನ್ನು ನಮಗೆ ಸರಿ ಎನಿಸದಿದ್ದರೆ ಬದಲಾಯಿಸಲು ಸಹ ಇವುಗಳು ಸಹಾಯಕವಾಗಿದ್ದವು. ಈ ಸಿದ್ಧಾಂಗಳನ್ನು ಕುರಿತು ಮೂಲಭೂತ ಪ್ರಶ್ನೆಗಳನ್ನು Theory ಎಂದು ಕೇಳುತ್ತದೆ. ಈ ಮೂಲಭೂತ ಪ್ರಶ್ನೆಗಳನ್ನು ಎದುರಿಸುವುದು ಅಷ್ಟು ಸುಲಭವಲ್ಲ, ಈ ಕಾರಣದಿಂದಾಗಿಯೇ Theory ಎನ್ನುವುದು ನಮ್ಮ ತಲ್ಲಣಗಳಿಗೆ ಕಾರಣವಾಗಿದೆ.

ನಾವು ಇದುವರೆವಿಗೆ ನಂಬಿಕೊಂಡು ಬಂದ ಆಧುನಿಕ ಸಿದ್ಧಾಂತಗಳ ಪ್ರಮುಖ ಲಕ್ಷಣಗಳನ್ನು ವಿವರಿಸಿದರೆ ಹೊಸ ಸಿದ್ಧಾಂತಗಳು ಮೂಡಿಸಿರುವ ತಲ್ಲಣಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗಬಹುದು. ಆಧುನಿಕತೆಯು ಸಮುದಾಯದ ಜಾಗದಲ್ಲಿ ವ್ಯಕ್ತಿಗಳನ್ನು (individuals) ರೂಪಿಸುತ್ತದೆ. ವ್ಯಕ್ತಿಗಳು ತಮ್ಮ ವೈಚಾರಿಕತೆಯನ್ನು (rationality reason) ಉಪಯೋಗಿಸಿ ತಮ್ಮ ಬದುಕನ್ನು ಅರ್ಥಮಾಡಿಕೊಳ್ಳುತ್ತಾರೆ, ರೂಪಿಸಿಕೊಳ್ಳುತ್ತಾರೆ. ಆಧುನಿಕತೆಯ ಸಂದರ್ಭದಲ್ಲಿ ಅದು ಗುರುತಿಸುವ ಏಕ ಮಾತ್ರ ಸಮುದಾಯವೆಂದರೆ, 'ರಾಷ್ಟ್ರ' ಮಾತ್ರ. ಪ್ರತಿಯೊಬ್ಬ ವ್ಯಕ್ತಿಯು ರಾಷ್ಟ್ರದ ಪ್ರಜೆಯಾಗಿರುತ್ತಾರೆ, ಇನ್ನಾವುದೇ ರೀತಿಯ ಗುರುತುಗಳು (identity) ಅವರಿಗೆ ಇರುವುದಿಲ್ಲ, ಇರಕೂಡದು. ರಾಷ್ಟ್ರವು 'ಜಾತ್ಯಾತೀಯ' (secular) ನೆಲೆಯಲ್ಲಿ ಕೆಲಸ ಮಾಡಬೇಕು, ಪ್ರತಿಯೊಬ್ಬ ಪ್ರಜೆಯು ಸಮಾನ ಹಕ್ಕುಗಳು ಮತ್ತು ಭಾದ್ಯತೆಗಳನ್ನು ಹೊಂದಿದವರಾಗಿರುತ್ತಾರೆ. ತಮಗೆ ಸರಿ ಎನ್ನಿಸಿದ ರೀತಿಯಲ್ಲಿ ಪ್ರಜಾಪ್ರಭುತ್ವದ ನಿಯಮಗಳನ್ನು ಅನುಸರಿಸಿ ತಮ್ಮ ರಾಷ್ಟ್ರದ ಮತ್ತು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆ ಎನ್ನುವುದನ್ನು ನಮ್ಮ ಇದುವರೆಗಿನ ಸಿದ್ಧಾಂತಗಳು ತಾತ್ವಿಕವಾಗಿ (ideologically) ಒಪ್ಪಿದ್ದವು.

ವೈಚಾರಿಕತೆಯ ಮೂಲಕ ನಮ್ಮ ಸುತ್ತಮುತ್ತಲಿನ ವಿದ್ಯಮಾನವನ್ನು (ಅಂದರೆ ವಾಸ್ತವವನ್ನು) ಯಥಾವತ್ತಾಗಿ ಗ್ರಹಿಸಲು ಸಾಧ್ಯ ಎಂಬುದು ಇದರ ಮೂಲ ತಳಹದಿಯಾಗಿತ್ತು, ಪ್ರತಿಯೊಬ್ಬ ವ್ಯಕ್ತಿ ಬೇರೆಬೇರೆಯಾಗಿ ವಾಸ್ತವವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ, ಬಿನ್ನಾಭಿಪ್ರಾಯಗಳನ್ನು ಮಾತುಕತೆಯ ಮೂಲಕ 'ಸಾರ್ವಜನಿಕ ವಲಯ'ದಲ್ಲಿ (public sphere) ಚರ್ಚೆಗಿಡುವ ಮೂಲಕ ಬಗೆಹರಿಸಿಕೊಳ್ಳಬಹುದು. ಚರ್ಚೆಯ ತಳಹದಿ ರ್‍ಯಾಷನಾಲಿಟಿಯಾಗಿರುತ್ತದೆ. ವೈಯಕ್ತಿಕ ಆಸೆ, ಆಕಾಂಕ್ಷೆಗಳು, ಸ್ವಾತಂತ್ರ್ಯ, ಸಮಾನತೆ, ಭಾತೃತ್ವಕ್ಕೆ (liberty, equality, fraternity) ದಾರಿ ಮಾಡಿಕೊಡಬೇಕು. ನಾವು ಸ್ವತಂತ್ರರು, ನಮಗಿಷ್ಟ ಬಂದಂತೆ ನಾವಿರಬಹುದು, ಆದರೆ ಅದು ಇನ್ನೊಬ್ಬರ ಸ್ವಾತಂತ್ರ್ಯ ಹರಣ ಮಾಡಬಾರದು, ಮಾಡಿದರೆ ಅದು ಸಮಾನತೆ ಮತ್ತು ಭಾತೃತ್ವ ತತ್ವದ ಉಲ್ಲಂಘನೆಯಾಗುತ್ತದೆ.

ಇದನ್ನು ಸ್ಥೂಲವಾಗಿ ಆಧುನಿಕತೆಯ ಪ್ರಮುಖ ಲಕ್ಷಣಗಳು ಎಂದು ಭಾವಿಸಬಹುದು. ಇದನ್ನು ಸಾಮಾನ್ಯವಾಗಿ ಆಧುನಿಕತೆಯ ತಾತ್ವಿಕತೆ ಎಂದು ಒಪ್ಪಲಾಗಿದೆ. ಆದರೆ ಇದು ಅದರಲ್ಲಿನ ಉದಾರವಾದಿ ಮಾನವತಾವಾದಿ ಸಿದ್ಧಾಂತ (liberal humanism) ಎಂಬುದು ಮಾತ್ರ ಎನ್ನುವುದನ್ನು ಸಾಮಾನ್ಯವಾಗಿ ಮರೆಯಲಾಗುತ್ತದೆ. ಇದು ಆಧುನಿಕತೆಯ ಹಲವು ಸಿದ್ಧಾಂತಗಳಲ್ಲಿ ಒಂದು ಮಾತ್ರ. ಇದರಷ್ಟೇ ಮಹತ್ವವಾದ ಮತ್ತೊಂದು ಆಧುನಿಕ ಸಿದ್ಧಾಂತ ಎಂದರೆ, ಮಾರ್ಕ್ಸ್‌ವಾದಿ ಸಿದ್ಧಾಂತ. ಆಧುನಿಕತೆಯ ಉದಾರವಾದಿ ಮಾನವತಾವಾದಿ ಅವತಾರವು ಬಂಡವಾಳಶಾಹಿಯನ್ನು ಒಪ್ಪುತ್ತದೆ, ಖಾಸಗಿ ಆಸ್ತಿಯ ಹಕ್ಕನ್ನು ಪ್ರತಿಪಾದಿಸುತ್ತದೆ. ಆಧುನಿಕತೆಯ ತಾತ್ವಿಕತೆಗೂ ಬಂಡವಾಳಶಾಹಿಯ ಉಗಮಕ್ಕೂ ಸಂಬಂಧವಿದೆ. ಯೂರೋಪಿನ ಊಳಿಗಮಾನ್ಯ ವ್ಯವಸ್ಥೆಯಿಂದ ಗುಲಾಮರನ್ನು ಬಿಡಿಸುವುದು ಬಂಡವಾಳಶಾಹಿಗೆ ಅಗತ್ಯವಿತ್ತು, ಹಾಗೆಯೇ ಹಳೆಯ ವ್ಯವಸ್ಥೆಯನ್ನು ಸಮರ್ಥಿಸುವ ಧರ್ಮವನ್ನು ಸುಧಾರಿಸಿ (reform), ಧರ್ಮವನ್ನು ರಾಜಕೀಯ ಮತ್ತು ಮಾರುಕಟ್ಟೆಯಿಂದ ದೂರವಿರಿಸುವುದು ಅದಕ್ಕೆ ಅಗತ್ಯವಿತ್ತು. ಅದು ಬೇರೆಯದೇ ಆದ ಕಥೆ, ಸಧ್ಯಕ್ಕೆ ಇಲ್ಲಿ ಬೇಡ.

ಈ ರೀತಿಯ ಆಧುನಿಕತೆಯ ಒಡಲಲ್ಲೇ ಬಂಡವಾಳಶಾಹಿಯನ್ನು ವಿರೋಧಿಸಿ ಸ್ವಾತಂತ್ರ್ಯ, ಸಮಾನತೆ, ಭಾತೃತ್ವಗಳನ್ನು ಪ್ರತಿಪಾದಿಸುವ ಮಾರ್ಕ್ಸ್‌ವಾದಿ ಸಿದ್ಧಾಂತ ಉಗಮಗೊಂಡಿತು. ನಮ್ಮ ಸುತ್ತಲಿನ ಸಮಾಜವನ್ನು ಗ್ರಹಿಸಿ ಅರ್ಥ ಮಾಡಿಕೊಳ್ಳಲು ವೈಚಾರಿಕತೆಯನ್ನು ಇದು ಪ್ರತಿಪಾದಿಸಿದರೂ, ಅದನ್ನು ಬದಲಾಯಿಸುವಲ್ಲಿ ಕೆಲವೊಮ್ಮೆ 'ಹಿಂಸೆ' ಅನಿವಾರ್ಯ ಎನ್ನುತ್ತದೆ ಈ ವಾದ. ಸಮಾಜ, ವರ್ಗದ ಆಧಾರದಲ್ಲಿ ಶ್ರೇಣೀಕೃತಗೊಂಡಿದೆ, ಮೇಲಿನ ಶ್ರೇಣಿಯಲ್ಲಿನ ವರ್ಗದವರು ತಮ್ಮ ಸವಲತ್ತುಗಳನ್ನು ಸುಲಭವಾಗಿ ಬಿಟ್ಟು ಕೊಡಲಾರರು, ಅವರು ಬಿಟ್ಟು ಕೊಡದ ಹೊರತು ನಿಜವಾದ ಸಮಾನತೆ (ಆರ್ಥಿಕ ಸಮಾನತೆ) ದೊರೆಯದು. ಆದ್ದರಿಂದ ಕೆಲವೊಮ್ಮೆ ಆರ್ಥಿಕ ಸಮಾನತೆ ತರಲು 'ಹಿಂಸೆ' ಅನಿವಾರ್ಯ ಎಂದು

ಇದು ವಾದಿಸುತ್ತದೆ. ನಮ್ಮ ಸುತ್ತಲಿನ ಸಮಾಜವನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಅದನ್ನು ಬದಲಾಯಿಸಲು ನಡೆದಿರುವ ಬಹುಪಾಲು ಸಾಂಘಿಕ ಹೋರಾಟಗಳಲ್ಲಿ ಈ ಸಿದ್ಧಾಂತದ್ದೇ ಸಿಂಹಪಾಲು. ಇದರರ್ಥ ಉದಾರ ಮಾನವತಾವಾದಿ ಸಿದ್ಧಾಂತ ಸಾಂಘಿಕ ಹೋರಾಟಗಳಿಗೆ ದಾರಿ ಮಾಡಿಕೊಟ್ಟಿಲ್ಲ ಎಂದೇನಲ್ಲ, ಆದರೆ ಈ ಹೋರಾಟಗಳು, ಉದಾರ ವಾದಿ ಪ್ರಜಾಪ್ರಭುತ್ವದಲ್ಲಿ ಒತ್ತಡ ಗುಂಪುಗಳಾಗಿ (pressure groups)ಕಾರ್ಯನಿರ್ವಹಿಸುತ್ತವೆ. ಇವುಗಳು ಮುಖ್ಯವಾಗಿ 'ರಾಷ್ಟ್ರಪ್ರಭುತ್ವ'ವನ್ನು (nation-state) ತಮ್ಮ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸುತ್ತವೆ. ಇಲ್ಲಿ ಆರ್ಥಿಕ ಅಸಮಾನತೆ ಅಥವಾ ಇತರೆ ರೀತಿಯ ಅಸಮಾನತೆಗಳನ್ನು ನಿವಾರಿಸುವ ಕೆಲಸ ರಾಷ್ಟ್ರಪ್ರಭುತ್ವದ್ದು. ಮಹಿಳಾ ಚಳವಳಿ ಯೂರೋಪಿನಲ್ಲಿ ಉಗಮವಾಗಿದ್ದೇ ಈ ಹಿನ್ನೆಲೆಯಲ್ಲಿ. ಪ್ರಜಾಪ್ರಭುತ್ವದಲ್ಲಿರುವ ಲಿಂಗ ತಾರತಮ್ಯವನ್ನು ಹೋಗಲಾಡಿಸಬೇಕೆಂದು ರಾಷ್ಟ್ರಪ್ರಭುತ್ವವನ್ನು ಒತ್ತಾಯಿಸುವುದು ಈ ಚಳವಳಿಯ ಮುಖ್ಯ ಗುರಿಯಾಗಿತ್ತು.

ಭಾರತದ ಸಂದರ್ಭದಲ್ಲೂ ನಾವು ಮೇಲಿನೆರಡೂ ರೀತಿಯ, ಸಮಾಜವನ್ನು ಗ್ರಹಿಸುವ ಅರ್ಥ ಮಾಡಿಕೊಂಡು ಅದನ್ನು ಬದಲಾಯಿಸುವ, ಸಾಂಘಿಕ ಪ್ರಯತ್ನಗಳನ್ನು ಕಾಣಬಹುದು. ಉದಾರವಾದಿ ಮಾನವತಾವಾದಿ ಸಿದ್ಧಾಂತವನ್ನು ಬಳಸಿ, ರಾಷ್ಟ್ರಪ್ರಭುತ್ವವನ್ನು ಒತ್ತಾಯಿಸುವ ಚಳವಳಿಗಳೂ ಇವೆ. ಇವುಗಳು ಆಧುನಿಕತೆಯ ತಾತ್ವಿಕತೆಯನ್ನೇ ಮುಂದು ಮಾಡಿ ಆಧುನಿಕ ರಾಷ್ಟ್ರಪ್ರಭುತ್ವಗಳ ಘೋಷಿತ ಉದ್ದೇಶಗಳಾದ ಸ್ವಾತಂತ್ರ್ಯ, ಸಮಾನತೆ, ಭಾತೃತ್ವಗಳಿಗೆ ತಕ್ಕಂತೆ ಸರಿಯಾಗಿ ನಡೆದುಕೊಳ್ಳುವುದು ರಾಷ್ಟ್ರಪ್ರಭುತ್ವಗಳ ಕರ್ತವ್ಯ ಎಂದು ಹೇಳುತ್ತವೆ. ಹಾಗೆಯೇ ಮಾರ್ಕ್ಸ್‌ವಾದಿ ಸಿದ್ಧಾಂತದಿಂದ ಪ್ರೇರಿತವಾದ ಸಾಂಘಿಕ ಹೋರಾಟಗಳೂ ಭಾರತದಲ್ಲಿ ಕಾಣಬಹುದು. ಇವುಗಳು ಭಾರತದ ರಾಷ್ಟ್ರಪ್ರಭುತ್ವವನ್ನು ಬಂಡವಾಳಶಾಹಿ ಪ್ರಣೀತವೆಂದು ವಾದಿಸಿ, ಪ್ರೊಲೆಟೇರಿಯಟ್ (proletariat) ಪ್ರಭುತ್ವವನ್ನು ಸ್ಥಾಪಿಸಬೇಕೆಂದು ವಾದಿಸುತ್ತವೆ. ಆದರೆ ಇದು ಸಿದ್ಧಾಂತಗಳ ಕಥೆ, ಚಳವಳಿಗಳನ್ನು ಪರಿಗಣಿಸಿದರೆ ಇವುಗಳ ನಡುವಿನ ವಿಭಿನ್ನ ಬೆರೆತಗಳ ತಾತ್ವಿಕತೆಯನ್ನು ನಾವು ಭಾರತದಲ್ಲಿ ಕಾಣಬಹುದು. ಉದಾಹರಣೆಗೆ, ಕರ್ನಾಟಕದ ದಲಿತ ಚಳವಳಿಯನ್ನು ಗಮನಿಸಿದರೆ, ಅದರ ಘೋಷಿತ ತಾತ್ವಿಕತೆಯಲ್ಲಿ ಗಾಂಧಿ, ಅಂಬೇಡ್ಕರ್, ಬುದ್ಧ ಬಸವ, ಮಾರ್ಕ್ಸ್, ಪೆರಿಯಾರ್‌ರೆಲ್ಲರ ತತ್ವವೂ ಕಾಣುತ್ತದೆ. ಹಾಗೆಯೇ ಪ್ರಜಾಪ್ರಭುತ್ವದಲ್ಲಿನ ಬೂರ್ಜ್ವಾಪ್ರಭುತ್ವವನ್ನು (bourgeois state) ಒಪ್ಪಿ ಹೋರಾಟ ನಡೆಸುತ್ತಿರುವ ಮಾರ್ಕ್ಸ್‌ವಾದಿ ಪಕ್ಷಗಳು ಮತ್ತು ಚಳವಳಿಗಳಿವೆ, ಬೂರ್ಜ್ವಾ ಪ್ರಜಾಪ್ರಭುತ್ವವನ್ನು ಧಿಕ್ಕರಿಸುವ ಮಾರ್ಕ್ಸ್‌ವಾದಿ ಚಳವಳಿಗಳಿವೆ. ಆದರೆ ಈ ಎಲ್ಲಾ ಚಳವಳಿಗಳೂ ಆಧುನಿಕವಾದ ಸಿದ್ಧಾಂತಗಳಿಂದಲೇ ಪ್ರೇರಣೆ ಪಡೆದು ನಡೆದಿರುವ ಸಾಂಘಿಕ ಪ್ರಯತ್ನಗಳು. ಇದರಲ್ಲಿ, ಗಾಂಧಿ ಮಾತ್ರ ಆಧುನಿಕತೆ ವಿರೋಧಿ ಸಿದ್ಧಾಂತವನ್ನು ರೂಪಿಸಲು ಪ್ರಯತ್ನಿಸಿದರು. ಆದರೆ ಅವರ ಪ್ರಯತ್ನವೂ ಕೂಡ ಆಧುನಿಕತೆಯ ಸಂದರ್ಭದಲ್ಲೇ, ಆಧುನಿಕತೆಯ ಆಯ್ದ ಅಂಶಗಳನ್ನು ಕೂಡಿಸಿದ ಮತ್ತು ಅದೇ ಕಾಲಕ್ಕೆ, 'ಸಂಪ್ರದಾಯ'ವೆಂದು ಅವರು ಭಾವಿಸುವ ಅಂಶಗಳನ್ನು ಆಧುನಿಕತೆಯ ಮೌಲ್ಯಗಳಿಗೆ ಅನುಗುಣವಾಗಿ ವ್ಯಾಖ್ಯಾನಿಸಿದ ಪ್ರಯತ್ನವೇ ಆಗಿದೆಯೇ ಹೊರತು ಆಧುನಿಕತೆ ವಿರೋಧಿ ಎಂದು ಭಾವಿಸಲು ಸಾಧ್ಯವಿಲ್ಲ.

ಆಧುನಿಕತೆಯ ಪ್ರಭಾವವೋ ಎಂಬಂತೆ ಒತ್ತಡಕ್ಕೆ ಸಿಕ್ಕ ಅನೇಕ ವಿಚಾರಗಳು, ನಂಬಿಕೆಗಳು ಕ್ಷಿಪ್ರಗತಿಯಲ್ಲಿ ಬದಲಾಗುತ್ತಿರುವುದನ್ನು ಕಾಣಬಹುದು. ಸಾರ್ವಕಾಲಿಕವೆಂದು ಬಲವಾಗಿ ನಂಬಲಾಗಿದ್ದ ಹಲವು ಸತ್ಯಗಳು, ಸಿದ್ಧಾಂತಗಳು ಬದಲಾವಣೆಯ ಬಿರುಗಾಳಿಗೆ ಸಿಕ್ಕು ಅನಾದರಣೆಗೊಳಗಾಗತ್ತಿರುವುದರಿಂದ ಅವುಗಳನ್ನೇ ನಂಬಿ ನಡೆಯುತ್ತಿದ್ದ ಸಮಾಜದಲ್ಲಿ ವಿಚಿತ್ರ ರೀತಿಯ ಬಿಕ್ಕಟ್ಟುಗಳು- ತಲ್ಲಣಗಳುಂಟಾಗಿರುವ ಕುರಿತು ಚಿಂತನೆ ಇಲ್ಲಿದೆ.

ಆದರೆ, ಈಗ ಆಧುನಿಕತೆಯ ತಾತ್ವಿಕತೆ ಮತ್ತು ಆಧುನಿಕ ವಿಚಾರಗಳ ಮೂಲಭೂತ ತತ್ವಗಳನ್ನು (fundamental priciples) ಆಧುನಿಕೊತ್ತರ ವಿಚಾರಧಾರೆ ಪ್ರಶ್ನೆ ಮಾಡುತ್ತಿರುವುದರಿಂದ ಒಂದು ರೀತಿಯ ಆತಂಕ ಕೆಲವರಿಗೆ ಪ್ರಾರಂಭವಾಗಿದೆ. ಉದಾಹರಣೆಗೆ ಹೇಳುವುದಾದರೆ ಫೂಕೋನ 'ವ್ಯಕ್ತಿತ್ವ' ಪರಿಕಲ್ಪನೆಯನ್ನು ಮತ್ತು 'ಸ್ವ' ಪರಿಕಲ್ಪನೆಯನ್ನು ತೆಗೆದುಕೊಳ್ಳಬಹುದು. ಆಧುನಿಕತೆ ವ್ಯಕ್ತಿಯನ್ನು ವೈಚಾರಿಕತೆಯಿಂದ ಕೂಡಿದ ಸಮಗ್ರ ವ್ಯಕ್ತಿತ್ವವಾಗಿ ಭಾವಿಸಿತು, ಮತ್ತು ತಮ್ಮ ನಿರ್ಧಾರಗಳನ್ನು ಅವರು ಸ್ವತಂತ್ರವಾಗಿ ತೆಗೆದುಕೊಳ್ಳಲು ಸಾಧ್ಯ ಎಂದು ಭಾವಿಸಿತು. ಈ ಅವಕಾಶವನ್ನು ರಾಷ್ಟ್ರಪ್ರಭುತ್ವ ಪ್ರತಿಯೊಬ್ಬವ್ಯಕ್ತಿಗೂ (ಪ್ರಜೆ, ನಾಗರಿಕ) ನೀಡಬೇಕು, ಅವುಗಳನ್ನು ಹತ್ತಿಕ್ಕಬಾರದು ಎಂದಿತು. ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳು ಹಾಗೂ ಮಾನವ ಹಕ್ಕುಗಳ ಪರಿಕಲ್ಪನೆ ಈ ನಿಟ್ಟಿನಲ್ಲೇ ಹುಟ್ಟಿರುವುದು. ನಮ್ಮ ಬಹುತೇಕ ಚಳವಳಿಗಳು ಸಂವಿಧಾನದ ಈ ಹಕ್ಕುಗಳನ್ನು, ಹಾಗೂ ಅದರಲ್ಲೇ ದತ್ತವಾಗಿರುವ ಸಮಾನತೆಯ ಪರಿಕಲ್ಪನೆಯ ಹಿನ್ನೆಲೆಯಲ್ಲೇ ಹುಟ್ಟಿರುವುದು. ಈ ಹಕ್ಕುಗಳು ಸರಿಯಾಗಿ ಜಾರಿಯಾಗಿಲ್ಲ, ಸರಕಾರ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎನ್ನುವುದು ಈ ಚಳವಳಿಗಳ ಬಹಳ ಮುಖ್ಯ ಅಂಶವಾಗಿರುತ್ತದೆ. ಆದರೆ ಫೂಕೋನ ವ್ಯಕ್ತಿತ್ವದ ವ್ಯಾಖ್ಯಾನ ವ್ಯಕ್ತಿಯನ್ನು ಆಧರಿಸಿಲ್ಲ, ವ್ಯಕ್ತಿತ್ವ ಎನ್ನುವುದು ವಿಚಾರಧಾರೆ (discourse)ಯ ಸೃಷ್ಟಿ ಯಾರು ಬೇಕಾದರು, ಯಾವುದೇ ವ್ಯಕ್ತಿತ್ವವನ್ನು ಧಾರಣೆ ಮಾಡಬಹುದು. ನಮ್ಮ ಸ್ವ ಎನ್ನುವುದನ್ನು ವಿಚಾರಧಾರೆಗಳು ಸೃಷ್ಟಿಸಿರುವುದರಿಂದ ಅದು ಸಮಗ್ರವಾದದ್ದಲ್ಲ, ಏಕತ್ರವಾದದ್ದಲ್ಲ. ಛಿದ್ರವಾದದ್ದು. ನಮ್ಮ ಸ್ವತಂತ್ರ ವಿಚಾರಗಳು ಎಂದು ನಾವು ಭಾವಿಸಿರುವುದು, ಚಾರಿತ್ರಿಕ ಸಂದರ್ಭದಲ್ಲಿ (ಫೂಕೋ genealogy ಎಂಬ ಪದವನ್ನು ಬಳಸುತ್ತಾನೆ, ಚಾರಿತ್ರಿಕಕ್ಕೂ ಈ ಪರಿಕಲ್ಪನೆಗೂ ವ್ಯತ್ಯಾಸವನ್ನು ಆತ ಪರಿಕಲ್ಪಿಸಿಕೊಳ್ಳುತ್ತಾನೆ, ಆದರೂ ಇಲ್ಲಿ ಅರ್ಥ ಸಂವಹನಕ್ಕಾಗಿ ತಪ್ಪಾದರೂ ಪರಿಚಿತ ಪರಿಕಲ್ಪನೆಯನ್ನೇ ನಾನು ಬಳಸಿದ್ದೇನೆ) ರೂಪುಗೊಂಡು ನಮಗೆ ದತ್ತವಾಗಿರುವಂಥದ್ದೂ ಎಂಬುದು ಆತನ ವಾದ. ವ್ಯಕ್ತಿಯ ವೈಚಾರಿಕತೆಯನ್ನೇ ಇದು ಪ್ರಶ್ನಿಸುತ್ತದೆ. ನಮ್ಮ ವ್ಯಕ್ತಿತ್ವಗಳ ರೂಪುಗೊಳ್ಳುವಿಕೆಯಲ್ಲಿ ವ್ಯಕ್ತಿಗಳ ಪಾತ್ರ ಏನೂ ಇಲ್ಲ ಎಂಬುದು, ವ್ಯಕ್ತಿಗಳು ತಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥಮಾಡಿಕೊಂಡು, ಬದಲಾಯಿಸಲು ಸಾಧ್ಯ ಎಂಬ ನಂಬಿಕೆಯನ್ನೇ ಬುಡಮೇಲು ಮಾಡುತ್ತದೆ. ವೈಚಾರಿಕತೆಯನ್ನೇ ಆತ ಎನ್‌ಲೈಟನ್‌ಮೆಂಟ್‌ನ (enlightenment) ಸಂದರ್ಭದಲ್ಲಿ ಹುಟ್ಟಿಕೊಂಡಿದ್ದು, ಇದು ಅವೈಚಾರಿಕ ಎಂದು ಕೆಲವು ರೀತಿಯ ಜ್ಞಾನ ಪರಂಪರೆಗಳನ್ನು ಪಕ್ಕಕ್ಕೆ ದೂಡಿದೆ ಎಂಬುದು ಆತನ ವಾದ. ವೈಚಾರಿ ಕತೆ ಎನ್ನುವ ಆಕೃತಿಯೇ ಚಾರಿತ್ರಿಕ ಸನ್ನಿವೇಶದಲ್ಲಿ ಆಧುನಿಕತೆಯನ್ನು ಸಮರ್ಥಿಸುವ ವಿಚಾರಧಾರೆ ಪರಿಣಾಮ ಎನ್ನುವುದು ಆತನ ವಾದ. ಇದು ವ್ಯಕ್ತಿಯನ್ನೇ ನಿರ್ವಚಿಸುವುದರಿಂದ, ವ್ಯಕ್ತಿ ಎನ್ನುವುದು ಸತ್ತಂತಾಗುತ್ತದೆ. ಆತನ ಬಹುಪಾಲು ಸಂಶೋಧನೆಗಳು ವಿಚಾರಧಾರೆಗಳು ಹೇಗೆ ಯಾವ ಯಾವ ವಿಧಾನ ಗಳಿಂದ ನಮ್ಮ 'ಸ್ವ'(self) ವನ್ನು ರೂಪಿಸಿದೆ ಎನ್ನುವುದಕ್ಕೆ ಸೀಮಿತವಾಗಿದೆ (technologies of production of self). ಆತ ನೀಷೆಯ (Nietzsche) god is dead ಎಂಬುದನ್ನು man is dead ಎಂದು ವಿಸ್ತರಿಸಿದ. ಇದೇ ಹಿನ್ನೆಲೆ ಯಲ್ಲೇ ಆತ ಲೇಖಕ (author-ಕರ್ತೃ) ಪರಿಕಲ್ಪನೆ ಯನ್ನೇ ನಿರಾಕರಿಸುತ್ತಾನೆ. ವ್ಯಕ್ತಿ ಎಂಬುದೇ ಸ್ವತಂತ್ರ ವಲ್ಲ ಎಂದಾದ ಮೇಲೆ, ವ್ಯಕ್ತಿ ಸಮಾಜವನ್ನು ಅರ್ಥ ಮಾಡಿಕೊಳ್ಳುವ, ಬದಲಾಯಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹೊಸ ಸಿದ್ಧಾಂತಗಳ ಈ ನಿಲುವೇ ಪ್ರಸ್ತುತ ಆತಂಕಕ್ಕೆ ಎಡೆ ಮಾಡಿಕೊಟ್ಟಿರುವುದು.

ಇದನ್ನು ಉದಾಹರಣೆಯೊಂದಿಗೆ ವಿವರಿಸಿದರೆ ಸ್ಪಷ್ಟವಾಗಬಹುದು. ಬ್ರಾಹ್ಮಣಶಾಹಿ ಹೇಗೆ 'ಪ್ರತಿಭೆ' ಎನ್ನುವ ಪರಿಕಲ್ಪನೆಯನ್ನು ರೂಪಿಸಿದೆ, ಅದನ್ನು ಒಂದು ಜಾತಿಯೊಂದಿಗೆ ಸಮೀಕರಿಸಿ ನಮ್ಮೆಲ್ಲರನ್ನೂ ಒಪ್ಪಿಕೊಳ್ಳುವಂತೆ ಮಾಡಿದೆ ಎನ್ನುವುದನ್ನು ವಿಶ್ಲೇಷಿಸುವುದು ಫೂಕೋನ ಸಿದ್ಧಾಂತದಿಂದ ಸಾಧ್ಯ. ಹೇಗೆ ಇದು ಬ್ರಾಹ್ಮಣಶಾಹಿಯ ಅಧಿಕಾರವನ್ನು ಮುಂದುವರೆಸುವಂತಹ ಸತ್ಯವಾಗಿ, ಜ್ಞಾನವಾಗಿ ರೂಪುಗೊಂಡಿದೆ ಎನ್ನುವುದನ್ನು ವಿವರಿಸಲು ಸಾಧ್ಯ. ಈ ಮುಖ ನಮ್ಮ ಪ್ರಮುಖ ಚಳವಳಿಗಳಿಗೆ ಆತಂಕಕಾರಿಯೇನಲ್ಲ, ಬದಲಾಗಿ ಪೂರಕವಾಗಿ ಕೆಲಸ ಮಾಡುತ್ತದೆ. ಇದರ ಇನ್ನೊಂದು ಮುಖವೂ ಇದೆ. ಇದೇ ಉದಾಹರಣೆಯನ್ನು ವಿಸ್ತರಿಸಿದರೆ ಅದು ಸ್ಪಷ್ಟವಾಗುತ್ತದೆ. ದಲಿತ ಚಳವಳಿ ದಲಿತ ಸ್ವ ಎನ್ನುವುದು ಇದೆ. ಅದು ಶತಮಾನಗಳಿಂದ ಶೋಷಣೆಗೊಳ್ಳುತ್ತಾ ಬಂದಿದೆ. ಈಗ ಅದು ಎಚ್ಚರಗೊಂಡಿದೆ. ತನ್ನ ಅನುಭವಗಳ ಹಿನ್ನೆಲೆಯಲ್ಲಿ ತನ್ನ ಮಾತನ್ನು ಕೇಳು ಎನ್ನುತ್ತಿದೆ ಎನ್ನುವುದನ್ನೂ ಒಂದು ವಿಚಾರಧಾರೆಯ

ಪರಿಣಾಮವಾಗಿ ರೂಪುಗೊಂಡಿದ್ದು ದಲಿತ ಸ್ವ ಎನ್ನುವುದು ಇಲ್ಲ, ಸ್ವ ಎನ್ನುವುದು ಸಮಗ್ರವಾದದ್ದಲ್ಲ ಛಿದ್ರವಾದದ್ದು ಎಂದು ಫೂಕೋನ ವಿಚಾರಗಳ ಹಿನ್ನೆಲೆಯಲ್ಲಿ ನಿರೂಪಿಸಲು ಸಾಧ್ಯ. ಈ ಮುಖವೇ 'ಪ್ರಗತಿಪರ' ಎಂದು ಕರೆಸಿಕೊಳ್ಳುವ ಚಳವಳಿಗಳಿಗೆ ಆತಂಕಕಾರಿಯಾದದ್ದು. ಪ್ರಸ್ತುತ ಆಧುನಿಕತೆಯ ವೈಚಾರಿಕತೆಯ ಹಿನ್ನೆಲೆಯಲ್ಲಿ ತಮ್ಮ ಚಳವಳಿಗಳನ್ನು ನಿರ್ವಹಿಸುತ್ತಿರುವವರಿಗೆ, ವೈಚಾರಿಕತೆ ಎನ್ನುವುದೇ ಇಲ್ಲ ಎಂದಾಗ, ಆಧುನಿಕತೆ ಸರಿಯಲ್ಲ ಎಂದಾಗ ಯಾವ ಆತಂಕ ಉಂಟಾಗಬಹುದು ಅದೇ ಈಗ ಆಗಿರುವುದು.

ಮತ್ತೊಬ್ಬ ಸಮಕಾಲೀನ ಪ್ರಮುಖ ಸಿದ್ಧಾಂತಿಯಾದ ಡೆರಿಡಾನ ವಿಚಾರಗಳನ್ನು ಇಲ್ಲಿ ಉದಾಹರಣೆಗೆ ತೆಗೆದುಕೊಳ್ಳಬಹುದು. ಡೆರಿಡಾ ಭಾಷೆಯನ್ನು ವಿಚಾರದ/ಅರ್ಥದ ವಾಹಕ ಎಂದು ನೋಡುವುದಿಲ್ಲ, ಬದಲಾಗಿ ನಮ್ಮ ವಾಸ್ತವವನ್ನು ರೂಪಿಸುವ ಪರಿಕರವಾಗಿ ನೋಡುತ್ತಾನೆ. ವಾಸ್ತವವೆನ್ನುವುದನ್ನು ನಾವು ತಿಳಿಯಲೇ ಸಾಧ್ಯವಿಲ್ಲ, ನಮ್ಮ ಭಾಷೆ ಏನನ್ನು ನಮಗೆ ತಿಳಿಸುತ್ತದೋ ಅದೇ ವಾಸ್ತವ ಎಂದು ನಾವು ಭಾವಿಸುತ್ತೇವೆ. ಭಾಷೆ ಒಂದು ಆಟ, ಅದು ನಿರ್ದಿಷ್ಟವಾದುದಲ್ಲವಾದ್ದರಿಂದ ಅದನ್ನು ಹೇಗೆ ಬೇಕೋ ಹಾಗೆ ವ್ಯಾಖ್ಯಾನಿಸಿ ವಾಸ್ತವವನ್ನು ಬದಲಾಯಿಸಲು ಸಾಧ್ಯ ಎಂದು ಆತ ವಾದಿಸುತ್ತಾನೆ. ವಾಸ್ತವವನ್ನು ಅರ್ಥ ಮಾಡಿಕೊಳ್ಳುವ, ಅದನ್ನು ಬದಲಾಯಿ ಸುವ ಕ್ರಿಯೆಯನ್ನು ಭಾಷೆಯ ಮಟ್ಟಕ್ಕೆ, ಆಟದ ಮಟ್ಟಕ್ಕೆ ಇಳಿಸಿದರೆ ಹೇಗೆ ಎನ್ನುವ ಆತಂಕ ಸಹಜವಾಗೇ ಇದರಿಂದ ಮೂಡುತ್ತದೆ. ವಾಸ್ತವವೆನ್ನುವುದನ್ನು ತಿಳಿಯಲು ಸಾಧ್ಯವಿಲ್ಲ ಎನ್ನುವುದು, ಶೋಷಣೆ ಇದೆ ಅದನ್ನು ಹೋಗಲಾಡಿಸಬೇಕು ಎನ್ನುವವರಿಗೆ ಆತಂಕಕಾರಿಯಾಗುತ್ತದೆ. ಡೆರಿಡಾನ ಸಿದ್ಧಾಂತವನ್ನು ಕೂಡ ಹೇಗೆ ಶೋಷಿತರನ್ನು ಶೋಷಿತ ವ್ಯವಸ್ಥೆಯ ಪರವಾಗಿರುವಂತೆ, ಅದನ್ನು ನಮ್ಮದು ಎನ್ನುವಂತೆ ನೋಡಲು, ಅರ್ಥಮಾಡಿಕೊಳ್ಳಲು ಭಾಷೆಯ ಮೂಲಕ ಸೃಷ್ಟಿಸಲಾಗಿದೆ ಎಂದು ಪ್ರಸ್ತುತದ ಯಾಜಮಾನ್ಯ ವ್ಯವಸ್ಥೆಯನ್ನು ವಿಶ್ಲೇಷಿಸಲು ಬಳಸಿಕೊಳ್ಳಲು ಸಾಧ್ಯ. ಹಾಗಾದಾಗ ಅದು ಆತಂಕ ಮೂಡಿಸುವ ಬದಲು, ಪ್ರಸ್ತುತದ 'ಪ್ರಗತಿಪರ' ಚಳವಳಿಗೆ ಪೂರಕವಾದ ಸಿದ್ಧಾಂತವಾಗುತ್ತದೆ.

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ, ಈ ಹೊಸ ಸಿದ್ಧಾಂತಗಳು ಕತ್ತಿಯಂತೆಯೂ, ಅದನ್ನು ಕಾಯಿ ಕತ್ತರಿಸಲು ಇಲ್ಲಾ ಬೇರೊಬ್ಬರನ್ನು ಕತ್ತರಿಸಲು ಬಳಸಿಕೊಳ್ಳಲು ಸಾಧ್ಯ ಎಂದು ನಾನು ಹೇಳುತ್ತಿಲ್ಲ, ಇಲ್ಲಿಯೇ ನಾನು ಮೊದಲಿಗೆ ಪ್ರಸ್ತಾಪಿಸಿದ ಆಧುನಿಕೋತ್ತರ ಮತ್ತು ಸಂರಚನೋತ್ತರ ಸಿದ್ಧಾಂತಗಳ ನಡುವಿನ ವ್ಯತ್ಯಾಸ ಮುಖ್ಯವಾಗುವುದು. ಇವುಗಳನ್ನು ಸಾಮಾನ್ಯವಾಗಿ interchangable ಆಗಿ ಬಳಸಲಾಗುತ್ತದೆ. ಆದರೆ ನಾನು ಮೇಲೆ ಉದಾಹರಿಸಿದ ಫೂಕೋನ ಸಿದ್ಧಾಂತಗಳು ಮತ್ತು ಡೆರಿಡಾನ ಸಿದ್ಧಾಂತಗಳನ್ನು ನಾನು ಸಂರಚನೋತ್ತರ ಸಿದ್ಧಾಂತಗಳನ್ನಾಗಿ ನೋಡುತ್ತೇನೆ. ಆಧುನಿಕೋತ್ತರ ಸಿದ್ಧಾಂತಗಳ ಭಾಗವೇ ಆದರೂ ಅವುಗಳನ್ನು ಬೇರೆಯಾಗಿ ನೋಡಬೇಕೆಂಬುದು ನನ್ನ ವಾದ. ಫೂಕೋ ಆಧುನಿಕತೆಯ ಸಂದರ್ಭದ ಜ್ಞಾನ ಮತ್ತು ಅಧಿಕಾರದ ಸಂಬಂಧಗಳನ್ನು ವಿಶ್ಲೇಷಣೆ ಮಾಡಿದ್ದಾನೆ, ಅವುಗಳು ಹೇಗೆ ವ್ಯಕ್ತಿ ಎಂಬ ಪರಿಕಲ್ಪನೆಯನ್ನು ಆಧುನಿಕತೆಯ ಸಂದರ್ಭದಲ್ಲಿ ಸೃಷ್ಟಿಸಿವೆ, ಅದಕ್ಕೂ ಆ ಕಾಲದ ಪ್ರಬಲ ವಿಚಾರಧಾರೆಗೂ ಇರುವ ಸಂಬಂಧ ಏನು ಎನ್ನುವುದನ್ನು ವಿಶ್ಲೇಷಿಸಿದ್ದಾನೆ. ಇದನ್ನು ವಿಸ್ತರಿಸಿ ಆಧುನಿಕತೆ ವಿರೋಧಿಸುವ ಸಿದ್ಧಾಂತಗಳು ರೂಪುಗೊಂಡಿವೆ. ಆಧುನಿಕತೆಯ ಸಂದರ್ಭವನ್ನು ಮಾತ್ರ ಫೂಕೋ ವಿಶ್ಲೇಷಿಸಿದ್ದರೂ ಪ್ರಸ್ತುತದ ಪರಿಕಲ್ಪನೆಯ ಜೀನಿಯಾಲಜಿಗಳನ್ನು ಟ್ರೇಸ್ ಮಾಡುವಾಗ ಆತ ಆಧುನಿಕ ಪೂರ್ವ ಸಂದರ್ಭದಲ್ಲಿ ಅಡ್ಡಾಡುತ್ತಾನೆ. ಆಧುನಿಕ ಪೂರ್ವದಲ್ಲಿದ್ದ ಪ್ರಬಲ ವಿಚಾರಧಾರೆ, ಸೃಷ್ಟಿಸಿದ ರೂಪಿಸಿದ ಪರಿಕಲ್ಪನೆ ಗಳನ್ನು ಮತ್ತು ವ್ಯಕ್ತಿತ್ವಗಳನ್ನೇನೂ ಆತ ಒಳ್ಳೆಯದು ಎಂದು ಹೇಳುವುದಿಲ್ಲ. ಆತನ ಸೈದ್ಧಾಂತಿಕ ವಿಚಾರಗಳನ್ನು ನಾವು ಆಧುನಿಕ ವಿಚಾರಧಾರೆ, ಆಧುನಿಕಪೂರ್ವ ವಿಚಾರಧಾರೆ ಮತ್ತು ಆಧುನಿಕೋತ್ತರ ವಿಚಾರಧಾರೆಗೂ ಅನ್ವಯಿಸಿ ವಿಶ್ಲೇಷಿಸಿ ಅವುಗಳು ರೂಪಿಸುತ್ತಿರುವ ವ್ಯಕ್ತಿತ್ವ, ಸ್ವ ಮತ್ತು ಆ ಜ್ಞಾನಕ್ಕೂ ಅಧಿಕಾರಕ್ಕೂ ಇರುವ ಸಂಬಂಧವನ್ನು ತೋರಿಸಬಹುದು. ಆ ಅಧಿಕಾರ ಸಂಬಂಧಗಳನ್ನು ಬದಲಾಯಿಸಿ, ಬೇರೆ ರೀತಿಯ ಸಂಬಂಧಗಳನ್ನು ಸೃಷ್ಟಿಸಲು ಅಗತ್ಯವಿರುವ ಜ್ಞಾನ ಉತ್ಪಾದನೆ ಮತ್ತು ವಿಚಾರಧಾರೆಯ ಪ್ರಸರಣಗಳನ್ನು ತೀವ್ರಗೊಳಿಸಬಹುದು. ಹೀಗೆ ಸಂರಚನೋತ್ತರ ಸಿದ್ಧಾಂತಗಳನ್ನು ಕೇವಲ ಆಧುನಿಕೋತ್ತರ ವಿಚಾರಧಾರೆಯ ಭಾಗವಾಗಿ ನೋಡದೆ, ಆಧುನಿಕೋತ್ತರ ಅಧಿಕಾರ ಸಂಬಂಧಗಳನ್ನು ಅನಾವರಣಗೊಳಿಸಲು ಬಳಸಬಹುದು. ಆದ್ದರಿಂದ ಸಂರಚನೋತ್ತರ ಸಿದ್ಧಾಂತಗಳನ್ನು ಪ್ರಸ್ತುತ ಸಂದರ್ಭದಲ್ಲಿ ಆಧುನಿಕೋತ್ತರ ರಚನೆಗಳನ್ನು ಒಡೆಯಲು, ಬದಲಾಯಿಸಲು ಸಾಧ್ಯವಿದೆ ಎನ್ನುವುದು ನನ್ನ ವಾದ.

ಆಧುನಿಕೋತ್ತರವಾದ ಎನ್ನುವುದು, ನಾವು ನವ್ಯ ಎಂದು ಗುರುತಿಸುವ modernismನ ನಂತರದ ಬೆಳವಣಿಗೆ. ಮುಖ್ಯವಾಗಿ ಕಲೆ, ಸಾಹಿತ್ಯ ಇತ್ಯಾದಿ ಪ್ರಕಾರಗಳಲ್ಲಿ ಬೆಳೆದ ಒಂದು ಹೊಸ ವಾದ. ಮಾಡರ್ನಿಸಂಗೆ ವಿರುದ್ಧವಾದ, ಅಥವಾ ವಿರುದ್ಧ ಎನ್ನುವುದಕ್ಕಿಂತ ಭಿನ್ನವಾದ ಚಿಂತನೆಗಳು ಇವು. ನಾವು ಮಾಡರ್ನಿಸಂ ಬಗ್ಗೆ ತಲೆಕೆಡಿಸಿಕೊಳ್ಳದಂತೆ, ಪೋಸ್ಟ್‌ಮಾಡರ್ನಿಸಂ ಬಗ್ಗೆ ಕೂಡ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಈ ಸಂದರ್ಭದಲ್ಲಿ, ನಾವು ಮುಖ್ಯವಾಗಿ ಯೋಚಿಸಬೇಕಾಗಿರುವುದು ಪೋಸ್ಟ್‌ಮಾಡರ್ನ್ ಡಿಸ್ಕೋರ್ಸ್ (ವಿಚಾರಧಾರೆ) ಕುರಿತು. ಇವುಗಳನ್ನು ಸ್ಥೂಲವಾಗಿ ಆಧುನಿಕೋತ್ತರ ಸಂದರ್ಭದ ವಿಚಾರಗಳು ಎನ್ನಬಹುದು. ಇದು ಆಧುನಿಕೋತ್ತರ ಸಂದರ್ಭ ಎಂದರೆ ಏನು? ಎಂಬ ಪ್ರಶ್ನೆಯನ್ನು ಮುಂದು ಮಾಡುತ್ತದೆ. ಆಧುನಿಕತೆ ಎಂಬ ಪರಿಕಲ್ಪನೆಯನ್ನು ಬಳಸುವಂತೆ, ಇದನ್ನು ಆಧುನಿಕೋತ್ತರತೆ (postmodernity) ಅಥವಾ ಅತ್ಯಾಧುನಿಕತೆ ಎಂದು ಕರೆಯಬಹುದೇನೊ.

ಈಗ ಆಧುನಿಕೋತ್ತರ ಸಿದ್ಧಾಂತ ಅಥವಾ ವಿಚಾರಧಾರೆ ಎಂದರೆ ಏನು ನೋಡೋಣ. ಮೊದಲಿಗೆ ಆಧುನಿಕೋತ್ತರ ವಿಚಾರಧಾರೆ (post-modern discourse) ಮತ್ತು ಆಧುನಿಕೋತ್ತರವಾದ (postmodernism) ಇವುಗಳನ್ನು ಅರ್ಥ ಮಾಡಿಕೊಳ್ಳೋಣ. ಆಧುನಿಕೋತ್ತರವಾದ ಎನ್ನುವುದು, ನಾವು ನವ್ಯ ಎಂದು ಗುರುತಿಸುವ modernismನ ನಂತರದ ಬೆಳವಣಿಗೆ. ಮುಖ್ಯವಾಗಿ ಕಲೆ, ಸಾಹಿತ್ಯ ಇತ್ಯಾದಿ ಪ್ರಕಾರಗಳಲ್ಲಿ ಬೆಳೆದ ಒಂದು ಹೊಸ ವಾದ. ಮಾಡರ್ನಿಸಂಗೆ ವಿರುದ್ಧವಾದ, ಅಥವಾ ವಿರುದ್ಧ ಎನ್ನುವುದಕ್ಕಿಂತ ಭಿನ್ನವಾದ ಚಿಂತನೆಗಳು ಇವು. ನಾವು ಮಾಡರ್ನಿಸಂ ಬಗ್ಗೆ ತಲೆಕೆಡಿಸಿಕೊಳ್ಳದಂತೆ, ಪೋಸ್ಟ್‌ಮಾಡರ್ನಿಸಂ ಬಗ್ಗೆ ಕೂಡ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ ಈ ಸಂದರ್ಭದಲ್ಲಿ, ನಾವು ಮುಖ್ಯವಾಗಿ ಯೋಚಿಸಬೇಕಾಗಿರುವುದು ಪೋಸ್ಟ್‌ಮಾಡರ್ನ್ ಡಿಸ್ಕೋರ್ಸ್ (ವಿಚಾರಧಾರೆ) ಕುರಿತು. ಇವುಗಳನ್ನು ಸ್ಥೂಲವಾಗಿ ಆಧುನಿಕೋತ್ತರ ಸಂದರ್ಭದ ವಿಚಾರಗಳು ಎನ್ನಬಹುದು. ಇದು ಆಧುನಿ ಕೋತ್ತರ ಸಂದರ್ಭ ಎಂದರೆ ಏನು? ಎಂಬ ಪ್ರಶ್ನೆಯನ್ನು ಮುಂದು ಮಾಡುತ್ತದೆ. ಆಧುನಿಕತೆ ಎಂಬ ಪರಿಕಲ್ಪನೆಯನ್ನು ಬಳಸುವಂತೆ, ಇದನ್ನು ಆಧುನಿಕೋತ್ತರತೆ (postmodernity) ಅಥವಾ ಅತ್ಯಾಧುನಿಕತೆ ಎಂದು ಕರೆಯಬಹುದೇನೊ. ಪೋಸ್ಟ್‌ಮಾಡರ್ನಿಟಿ ಬಹಳ ಮುಖ್ಯವಾಗಿ ನಾವು ತಲೆಕೆಡಿಸಿಕೊಳ್ಳಬೇಕಾಗಿರುವುದು. ಇದೇ ಇಂದಿನ ನಮ್ಮ ಸಮಕಾಲೀನ ಸಂದರ್ಭದ ಅನೇಕ ತಲ್ಲಣಗಳಿಗೆ ಕಾರಣವಾಗಿರುವುದು, ಸಂರಚನೋತ್ತರ ಸಿದ್ಧಾಂತ ಅಥವಾ ಆಧುನಿಕೋತ್ತರವಾದ ಅಲ್ಲ.

ಆಧುನಿಕೋತ್ತರತೆ ಎನ್ನುವುದನ್ನು ನಾವು ಫ್ರೆಡರಿಕ್ ಜೇಮ್‌ಸನ್ ಎಂಬ ವಿದ್ವಾಂಸ ಗುರುತಿಸುವಂತೆ ಅರ್ಥ ಮಾಡಿಕೊಂಡರೆ ಒಳ್ಳೆಯದು ಎಂದು ನನ್ನ ವಾದ. ಆತ ಅದನ್ನು ಲೇಟ್ ಲಾಜಿಕ್ ಆಫ್ ಕ್ಯಾಪಿಟಲಿಸಂ (Late Logic of Capitalism) ಎಂದು ವಿಶ್ಲೇಷಿಸುತ್ತಾನೆ. ಅಂದರೆ, ಬಂಡವಾಳಶಾಹಿಯ, ಕೊನೆ ಬೆಳವಣಿಗೆಯ ತರ್ಕ ಎಂದು. ಇದನ್ನು ನಾವು ಸ್ಥೂಲವಾಗಿ ಹೀಗೆ ಅರ್ಥ ಮಾಡಿಕೊಳ್ಳಬಹುದು. ಆಧುನಿಕತೆಯು ಬಂಡವಾಳಶಾಹಿಯ ಉಗಮದ ಸಂದರ್ಭದಲ್ಲಿನ ಚಿಂತನೆಗಳು ಎಂದು ಹಿಂದೆ ಹೇಳಿದಂತೆ, ಬಂಡವಾಳಶಾಹಿ ಬೆಳೆದು ನಿಂತ ಸ್ಥಿತಿಯ ಸಂದರ್ಭವೇ, ಅತ್ಯಾಧುನಿಕತೆ. ಆಧುನಿಕತೆ, ವ್ಯಕ್ತಿ ವಿಶಿಷ್ಟ ವಾದವನ್ನು ಸಮರ್ಥಿಸಿದರೂ ಜೊತೆಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭಾತೃತ್ವ ಎಂಬ ಪರಿಕಲ್ಪನೆಗಳನ್ನು ನೀಡಿತು. ಅಲ್ಲದೆ,

ವ್ಯಕ್ತಿಯನ್ನು ರಾಷ್ಟ್ರಪ್ರಭುತ್ವ ಎಂಬ ಸಮಷ್ಠಿ ಪರಿಕಲ್ಪನೆಯಲ್ಲಿ ಕಟ್ಟಿ ಹಾಕಿತು. ವಸಾಹತುಶಾಹಿಯು ಬಂಡವಾಳಶಾಹಿಯ ಬೆಳವಣಿಗೆಯ ಭಾಗವಾಗಿ ರೂಪುಗೊಂಡರೂ, ಕಾಲಾಂತರದಲ್ಲಿ ಆಧುನಿಕ ವಿಚಾರಗಳನ್ನು ತಲೆಗೆ ಹಚ್ಚಿಕೊಂಡ, ವಸಾಹತು ಪ್ರದೇಶಗಳ ಜನರು, ವಸಾಹತುಶಾಹಿಯನ್ನು ವಿರೋಧಿಸಿ ತಮ್ಮದೇ ಆದ ರಾಷ್ಟ್ರಪ್ರಭುತ್ವಗಳನ್ನು ಸೃಷ್ಟಿಸಿಕೊಂಡರು. ಈ ರಾಷ್ಟ್ರದ ಗಡಿಗಳು ಬಂಡವಾಳದ ಸುಗಮ ಚಲನೆಗೆ ಅಡ್ಡಿಯಾಗಿದ್ದವು. ನಮ್ಮ ದೇಶದ ಉದಾಹರಣೆ ನೀಡುವುದಾದರೆ, ವಿದೇಶಿ ಬಂಡವಾಳ ನಮ್ಮ ರಾಷ್ಟ್ರದಲ್ಲಿ ಬರುವುದು ಅಷ್ಟು ಸುಲಭವಾಗಿರಲಿಲ್ಲ, ಬಂದರೂ ಅದರ ಪಾಲು ಶೇ. ೪೯ಕ್ಕಿಂತ ಹೆಚ್ಚಿರಬಾರದೆಂದು ಕಂಡಿಶನ್ ಇತ್ತು. ಲೈಸೆನ್ಸ್ ಪಡೆಯುವುದು, ಪರ್ಮಿಶನ್ ಪಡೆಯುವುದು ಅಷ್ಟೇನೂ ಸುಲಭದ ಸಂಗತಿಯಾಗಿರಲಿಲ್ಲ. ಬಂಡವಾಳಶಾಹಿಯ ಸುಗಮ ಚಲನೆಗೆ ರಾಷ್ಟ್ರಪ್ರಭುತ್ವಗಳು ತಡೆಗೋಡೆಗಳಾಗಿದ್ದವು. ಇದು ಆಧುನಿಕತೆಯ ಕಥೆ. ಆದರೆ ಇಂದು ಸಂಗತಿ ಇದಲ್ಲ. ಬಂಡವಾಳಶಾಹಿ ರಾಷ್ಟ್ರದ ಗಡಿಗಳನ್ನು ಮೀರಿ ಸಂಚರಿಸತೊಡಗಿದೆ. ನಮ್ಮ ರಾಷ್ಟ್ರದ್ದೇ ಕಥೆ ಹೇಳುವುದಾದರೆ, ಲೈಸೆನ್ಸ್ ರಾಜ್, ಪರ್ಮಿಟ್ ರಾಜ್‌ಗಳು ಹೊರಟು ಹೋಗಿದೆ. ವಿದೇಶಿ ಬಂಡವಾಳ ಶೇ. ೪೯ಕ್ಕಿಂತ ಹೆಚ್ಚಿರಬಾರದು ಎಂಬುದು ಹೋಗಿ ಎಷ್ಟಾದರೂ ಇರಬಹುದು ಎಂದಾಗಿದೆ. ಅದು ಹೋಗಲಿ, ರಾಷ್ಟ್ರಪ್ರಭುತ್ವ ನಡೆಸುತ್ತಿದ್ದ ಎಷ್ಟೋ ಇಂಡಸ್ಟ್ರಿಗಳನ್ನು ವ್ಯವಸ್ಥಿತವಾಗಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಲಾಗುತ್ತಿದೆ. ಬಂಡವಾಳಶಾಹಿಯು ಇಂದು ಒಂದು ರಾಷ್ಟ್ರದ ಹೆಸರಿನ ಅಡಿಯಲ್ಲಿ ತನ್ನ ಕಾರ್ಯಗಳನ್ನು ನಿರ್ವಹಿಸುತ್ತಿಲ್ಲ, ಎಲ್ಲವೂ ಮಲ್ಟಿನ್ಯಾಷನಲ್ ಅಥವಾ ಟ್ರಾನ್ಸ್‌ನ್ಯಾಷನಲ್ (multi-national, transnational). ಹೊಸ ರೀತಿಯ ತಂತ್ರಜ್ಞಾನವೂ ಕೂಡ ಇದಕ್ಕೆ ಸರಿಸಮಾನವಾಗಿ ಬೆಳೆದಿದೆ. ಮಾಹಿತಿ ತಂತ್ರಜ್ಞಾನದ ಬೆಳವಣಿಗೆ (ಅಂತರ್ಜಾಲ, ಇಂಟರ್‌ನೆಟ್) ಇತ್ಯಾದಿ ಬಂಡವಾಳದ ಸುಗಮ ಚಲನೆಗೆ ಕಾರಣಕರ್ತವಾಗಿದೆ. ಸ್ವಿಟ್ಜರ್‌ಲ್ಯಾಂಡ್‌ನ ಬ್ಯಾಂಕ್‌ನ ಪ್ರತಿನಿತ್ಯದ ವ್ಯವಹಾರದ ಲೆಕ್ಕ ಪತ್ರಗಳು ಬೆಂಗಳೂರಿನಲ್ಲಿ ನಡೆಯುತ್ತವೆ. ಎಲ್ಲವೂ ಕ್ರೆಡಿಟ್‌ಕಾರ್ಡ್ ಮತ್ತು ಕಂಪ್ಯೂಟರ್ ಮೂಲಕ ನಡೆಯುವುದರಿಂದ ಅಂದಂದಿನ ಲೆಕ್ಕಗಳನ್ನು ಬೆಂಗಳೂರಿನ ಬಿ.ಕಾಂ. ಮಾಡಿದ ತರುಣ/ತರುಣಿಯರು ಬೆಂಗಳೂರಿನಲ್ಲಿ ಕುಳಿತು ನಿರ್ವಹಿಸುತ್ತಾರೆ. ಏಕೆ? ಇಲ್ಲಿ ಅವರಿಗೆ ಸಂಬಳ ಕಡಿಮೆ ಕೊಡಬಹುದು, ಅಲ್ಲಾದರೆ, ಜಾಸ್ತಿ ಕೊಡಬೇಕಾಗುತ್ತದೆ! ಅಷ್ಟೇ! ಇದು ಬಂಡವಾಳಶಾಹಿಯ ಹೊಸ ಕಾರ್ಯನಿರ್ವಹಣೆ.

ಇದು ಆಧುನಿಕೋತ್ತರತೆ ಅಥವಾ ಆಧುನಿಕೋತ್ತರ ಸಂದರ್ಭ. ಈ ಸಂದರ್ಭದ ಹೊಸ ವಿಚಾರಗಳೇ ಆಧುನಿಕೋತ್ತರ ವಿಚಾರಧಾರೆ. ಇವುಗಳನ್ನು ಇಲ್ಲಿ ಸ್ಥೂಲವಾಗಿ ಗಮನಿಸಿ, ಅವುಗಳು ನಮ್ಮ ಸಮಕಾಲೀನ ಸಂದರ್ಭವನ್ನು ರೂಪಿಸುತ್ತಿರುವ ರೀತಿಯನ್ನು ಅರಿತರೆ, ತಮ್ಮ ತಲ್ಲಣಗಳ ಮೂಲವನ್ನು ಮತ್ತು ಸ್ವರೂಪವನ್ನು ಅರಿಯಲು ಸಾಧ್ಯವಾಗುತ್ತದೆ.

ಆಧುನಿಕೋತ್ತರ ಸಂದರ್ಭದ ಪ್ರಮುಖ ಪ್ರಕ್ರಿಯೆಯಾದ ಜಾಗತೀಕರಣವನ್ನು ಕುರಿತು ಸಾಮಾನ್ಯವಾಗಿ, ನಮ್ಮ ಸ್ಥಳೀಯ ಸಂಸ್ಕೃತಿ, ಗುರುತುಗಳನ್ನು ಅಳಿಸಿ ಹಾಕಿ ಎಲ್ಲವನ್ನೂ ಒಂದೇ

ದಲಿತ ಚಳವಳಿಯನ್ನು ಗಮನಿಸಿದರೆ, ಇಂದು ಅದರ ಮುಂದೆ ಇರುವ ಪ್ರಬಲ ಸವಾಲುಗಳಲ್ಲಿ ಮುಖ್ಯವಾದದ್ದು ಆಂತರಿಕ ವೈರುಧ್ಯ. ದಲಿತ ಚಳವಳಿಯನ್ನು ಬಹುತೇಕ ಮಂದಿ ಜಾತಿ ಆಧಾರಿತ ಚಳವಳಿಯಾಗಿ ನೋಡುತ್ತಾರೆ. ಇದು ಸರಿಯಲ್ಲ. ಒಂದೇ ಸಮಸ್ಯೆಯನ್ನು ಎದುರಿಸುತ್ತಿರುವ ಹಲವಾರು ಜಾತಿಗಳು ಒಟ್ಟಾಗಿ ರೂಪಿಸಿದ ಚಳವಳಿ ದಲಿತ ಚಳವಳಿ. ದಲಿತ ಎನ್ನುವ ಪರಿಕಲ್ಪನೆ, ಮೂಲತಃ ಒಂದು ರಾಜಕೀಯ ಪರಿಕಲ್ಪನೆ ಮತ್ತು ಆಧುನಿಕವಾದ ಪರಿಕಲ್ಪನೆ. ದಲಿತ ಎನ್ನುವ ಪರಿಕಲ್ಪನೆ, ಹಲವಾರು ಜಾತಿ/ಸಮುದಾಯಗಳನ್ನು ಸಮಾನ ರಾಜಕೀಯ ಉದ್ದೇಶಕ್ಕಾಗಿ ಒಂದಾಗಿ ಬೆಸೆಯುತ್ತದೆ. ಹೀಗಾಗಿ ಇದು ಜಾತಿಯನ್ನು ಮೀರಿದ ಪರಿಕಲ್ಪನೆ ಮತ್ತು ಜಾತಿಯ ದೌರ್ಜನ್ಯವನ್ನು ವಿರೋಧಿಸಿ ಹುಟ್ಟಿದ ಪರಿಕಲ್ಪನೆ. ಆದರೆ ಇಂಥ ಚಳವಳಿಯ ಮುಂದೆ ಇರುವ ಬಹುದೊಡ್ಡ ಸವಾಲು ಈ ಪರಿಕಲ್ಪನೆಯನ್ನೇ ಅಡ್ಡಡ್ಡ ಸೀಳುವಷ್ಟು ಸಮರ್ಥವಾದದ್ದು. ನಾನಿಲ್ಲಿ ಎಸ್.ಸಿ/ಎಸ್.ಟಿಯಲ್ಲಿ ಒಳ ಮೀಸಲಾಗಿ ಕೋರುತ್ತಿರುವ ಚಳವಳಿಗಳ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದೇನೆ. ದಲಿತ ಚಳವಳಿ ತಾನು ವಿರೋಧಿಸುತ್ತಿರುವ ಯಾಜಮಾನ್ಯದ ವಿರುದ್ಧ ಹಲವಾರು ಶೋಷಿತ ಎನ್ನುವ ಜಾತಿಗಳನ್ನು ಒಟ್ಟಾಗಿಸುತ್ತಿದ್ದರೆ, ಅದರಲ್ಲೇ ಮತ್ತೊಂದು ರೀತಿಯ ಜಾತಿ ಧ್ರುವೀಕರಣ ಆರಂಭವಾಗಿದೆ.

ಮಾಡಿಬಿಡುತ್ತದೆ, ಎಲ್ಲವೂ ಅಮೇರಿಕನ್‌ಮಯವಾಗುತ್ತದೆ ಎಂದೆಲ್ಲ ಹೇಳಲಾಗುತ್ತದೆ. ಎಲ್ಲರನ್ನೂ ಜಾಗತಿಕ ಮಾರುಕಟ್ಟೆಯೊಂದಿಗೆ ಜೋಡಿಸುವ, ಎಲ್ಲರನ್ನೂ ಬಹುರಾಷ್ಟ್ರೀಯ ಕಂಪನಿಗಳ ಗ್ರಾಹಕರನ್ನಾಗಿ ಮಾಡಿಬಿಡುವ ಭೂತ ಜಾಗತೀಕರಣ ಎಂದು ವ್ಯಾಖ್ಯಾನಿಸುತ್ತಾರೆ. ಆದರೆ, ಇಂದು ಪ್ರಪಂಚದಾದ್ಯಂತ ಸಂಸ್ಕೃತಿ ಆಧಾರಿತ ಹೋರಾಟಗಳನ್ನು, ಬೃಹತ್ ಆದುದನ್ನು ಒಡೆದು, ಸಣ್ಣ ಸಾಂಸ್ಕೃತಿಕ ಗುರುತುಗಳನ್ನು ಕಟ್ಟಿಕೊಳ್ಳುವ ಚಳವಳಿಗಳನ್ನು ನಾವು ಗಮನಿಸಬಹುದು. ಇವುಗಳನ್ನು ಕೆಲವು ರಾಜಕೀಯಶಾಸ್ತ್ರಜ್ಞರು ಜಾಗತೀಕರಣಕ್ಕೆ ಪ್ರತಿಯಾಗಿ ಹುಟ್ಟುತ್ತಿರುವ ಚಳವಳಿಗಳಾಗಿ ನೋಡುತ್ತಾರೆ. ಇವರ ಪ್ರಕಾರ ಈ ವಿಭಿನ್ನ ಚಳವಳಿಗಳನ್ನು ಸಂಘಟಿಸಿ, ಜಾಗತೀಕರಣದ ವಿರುದ್ಧ ಹೋರಾಡಲು ಬಳಸಲು ಸಾಧ್ಯ. ಇದರ ಸಾಧ್ಯ ಅಸಾಧ್ಯತೆಗಳನ್ನು ಕುರಿತು ನಂತರ ಗಮನಿಸಬಹುದು.

ಇಲ್ಲಿ ನಾನು ಜಾಗತೀಕರಣ ಮತ್ತು ವಿಭಿನ್ನ ಛಿದ್ರವಾದ ಸಂಸ್ಕೃತಿ ಆಧಾರಿತ ಚಳವಳಿಗಳನ್ನು ಮತ್ತೊಂದು ರೀತಿಯಲ್ಲಿ ಪರಿಭಾವಿಸಿರುವ ರೀತಿಯನ್ನು ಪ್ರಸ್ತಾಪಿಸಲು ಬಳಸುತ್ತೇನೆ. ಜಾಗತೀ ಕರಣದ ಬಗ್ಗೆ ಕೆಲಸ ಮಾಡಿರುವ ಕೆಲವು ಅಧ್ಯಯನಕಾರರ ಪ್ರಕಾರ, ಈ ಸಂಸ್ಕೃತಿ ಆಧಾರಿತ ಚಳವಳಿಗಳೂ ಕೂಡ ಜಾಗತೀಕರಣ ಪ್ರಕ್ರಿಯೆಯ ಭಾಗವೇ. ಅವರ ಅರ್ಥದಲ್ಲಿ ಜಾಗತೀಕರಣಕ್ಕೆ ಪ್ರತಿಯಾಗಿ ಬಂದ ಚಳವಳಿಗಳೂ ಕೂಡ ಆ ಪ್ರಕ್ರಿಯೆಯ ಭಾಗವೇ ಆಗಿರುತ್ತದೆ. ಈ ಅರ್ಥದಲ್ಲಿ ಜಾಗತೀಕರಣವೆಂದರೆ, ಎಲ್ಲವನ್ನೂ ಬುಲ್‌ಡೋಜ್ ಮಾಡಿ ಏಕ ಸಂಸ್ಕೃತಿಯನ್ನು ಪ್ರತಿಷ್ಠಾಪಿಸುವುದೂ ಹೌದು, ಹಲವು ಸಂಸ್ಕೃತಿಗಳಿಗೆ ದಾರಿ ಮಾಡಿಕೊಡುವುದೂ ಹೌದು. ಇವು ಒಂದೇ ಪ್ರಕ್ರಿಯೆಯ ಭಾಗವೇ. ಅವರು ಇವುಗಳನ್ನು ಎರಡು ಬೇರೆ, ಬೇರೆಯಾದ ಪ್ರಕ್ರಿಯೆಗಳಾಗಿ ನೋಡುವುದಿಲ್ಲ, ಬದಲಿಗೆ ಈ ಸಂದರ್ಭದಲ್ಲಿ ಹೇಗೆ ಎರಡೂ ಒಂದರೊಳಗೊಂದು ಬೆರೆಯುತ್ತಿವೆ ಎಂದು ನೋಡುತ್ತಾರೆ. ಅವರ ಪ್ರಕಾರ ಇಂದು ಜಾಗತೀಕರಣ (globalization) ಮತ್ತು ಸ್ಥಳೀಕರಣ (localization) ಎರಡೂ ಒಂದರೊಳಗೊಂದು ಬೆರೆಯುತ್ತಿವೆ. ಇದನ್ನು ಗುರುತಿಸಲು ಅವರು ಮತ್ತೆರಡು ಪರಿಕಲ್ಪನೆಗಳನ್ನು ಬಳಸುತ್ತಾರೆ. ಅದು globalization ಮತ್ತು localization. ಅಂದರೆ ಜಾಗತಿಕವಾದುದು, ಸ್ಥಳೀಯವಾದ ಮುಖ ಧರಿಸುತ್ತಿದೆ. ಹಾಗೆಯೇ ಸ್ಥಳೀಯವಾದುದು ಜಾಗತಿಕವಾಗುತ್ತದೆ. ಇದನ್ನು ಒಂದು ಉದಾಹರಣೆ ನೀಡಿದರೆ ಸ್ಪಷ್ಟವಾಗಬಹುದು. ಕೋಕ್ ಕಂಪನಿಯ ಜಾಹೀರಾತಿನಲ್ಲಿ ಅಮೀರ್‌ಖಾನ್ ಹಿಮಾಲಯದ ತಪ್ಪಲಿನಲ್ಲಿ ಷೆರ್ಪಾ ಜನಾಂಗದವನಾಗಿ ಕೋಕ್ ಅನ್ನು ಪ್ರವಾಸಿಗರಿಂದ ಪಡೆದು ಕುಡಿದು ಕುಣಿಯುವ ದೃಶ್ಯ ಇಲ್ಲಿ ನೆನಪಿಸಿಕೊಳ್ಳಬಹುದು. ಸಣ್ಣ ಸಂಸ್ಕೃತಿಯ ಮುಖವಾಡದಲ್ಲೇ ಬಹು ರಾಷ್ಟ್ರೀಯ ಕಂಪನಿಯ ವಸ್ತು ಮಾರಾಟವಾಗಲು ಹವಣಿಸುತ್ತಿರುವುದನ್ನು ಈ ಜಾಹೀರಾತು ಪ್ರತಿನಿಧಿಸುತ್ತದೆ. ಹಾಗೆಯೇ ನಮ್ಮ ಜಾನಪದ ಕಲಾತಂಡಗಳಿಗೆ ವಿಶ್ವಮಾರುಕಟ್ಟೆ ಇದೆ. ಆದರೆ ಅದರ ಲಾಭ ವನ್ನು ಮಧ್ಯವರ್ತಿಗಳು ಲಪಟಾಯಿಸುತ್ತಿದ್ದಾರೆ ಅಷ್ಟೇ.

ಈಗ ನಮ್ಮ ಸಮಕಾಲೀನ ಸಂದರ್ಭದ ಚಳವಳಿಗಳನ್ನು ಗಮನಿಸಿದರೆ ಮೇಲಿನ ಕೆಲವು ವಿಷಯಗಳು ಸ್ಪಷ್ಟರೂಪ ಪಡೆಯಬಹುದು. ೭೦ ಮತ್ತು ೮೦ರ ದಶಕದಲ್ಲಿ ಕರ್ನಾಟಕದಲ್ಲಿ ನಾವು ಹಲವಾರು 'ಪ್ರಗತಿಪರ' ಎನ್ನುವ ಚಳವಳಿಗಳನ್ನು ಗಮನಿಸಬಹುದಾಗಿತ್ತು. ದಲಿತ ಚಳವಳಿ, ರೈತ ಚಳವಳಿ, ಹಿಂದುಳಿದ ವರ್ಗಗಳು, ಮಹಿಳಾವಾದಗಳು ಪ್ರಬಲಗೊಳ್ಳುತ್ತಿದ್ದ ಕಾಲ ಅದು. ಈ ಎಲ್ಲ ಚಳವಳಿಗಳನ್ನು ಒಟ್ಟಾಗಿಸಿ ಒಂದು ಪ್ರಗತಿಪರವಾದ ಪರ್ಯಾಯ ರಾಜಕೀಯ ವ್ಯವಸ್ಥೆಯನ್ನು ರೂಪಿಸ

ಬೇಕೆಂಬ ಹಂಬಲಕ್ಕೂ ಇದು ೮೦ರ ದಶಕದ ಮಧ್ಯ ಭಾಗದ ನಂತರ ದಾರಿಮಾಡಿಕೊಟ್ಟಿತ್ತು. ಆದರೆ ಆ ರೀತಿಯ ಪರ್ಯಾಯ ರೂಪುಗೊಳ್ಳಲೇ ಇಲ್ಲ. ಏಕೆ ಎನ್ನುವುದಕ್ಕೆ ಕಾರಣಗಳನ್ನು ವೈಯಕ್ತಿಕ ನೆಲೆಗಳಲ್ಲಿ, ವ್ಯಕ್ತಿಗತ ನೆಲೆಗಳಲ್ಲಿ ಹುಡುಕಲಾಗಿತ್ತು. ಈಗ ಸೈದ್ಧಾಂತಿಕವಾಗಿ ಅವುಗಳನ್ನು ಪರೀಕ್ಷಿಸಲು ಕಾಲ ಪಕ್ವವಾಗಿದೆ. ೮೦ರ ದಶಕದಲ್ಲಿ ಪ್ರಬಲವಾಗಿದ್ದ ಎಲ್ಲಾ ಚಳವಳಿಗಳೂ ಇಂದು ಬಹುತೇಕ ಛಿದ್ರ ಮನೆಗಳಾಗಿವೆ.

ಉದಾಹರಣೆಗೆ ದಲಿತ ಚಳವಳಿಯನ್ನು ಗಮನಿಸಿದರೆ, ಇಂದು ಅದರ ಮುಂದೆ ಇರುವ ಪ್ರಬಲ ಸವಾಲುಗಳಲ್ಲಿ ಮುಖ್ಯವಾದದ್ದು ಆಂತರಿಕ ವೈರುಧ್ಯ. ದಲಿತ ಚಳವಳಿಯನ್ನು ಬಹುತೇಕ ಮಂದಿ ಜಾತಿ ಆಧಾರಿತ ಚಳವಳಿಯಾಗಿ ನೋಡುತ್ತಾರೆ. ಇದು ಸರಿಯಲ್ಲ. ಒಂದೇ ಸಮಸ್ಯೆಯನ್ನು ಎದುರಿಸುತ್ತಿರುವ ಹಲವಾರು ಜಾತಿಗಳು ಒಟ್ಟಾಗಿ ರೂಪಿಸಿದ ಚಳವಳಿ ದಲಿತ ಚಳವಳಿ. ದಲಿತ ಎನ್ನುವ ಪರಿಕಲ್ಪನೆ, ಮೂಲತಃ ಒಂದು ರಾಜಕೀಯ ಪರಿಕಲ್ಪನೆ ಮತ್ತು ಆಧುನಿಕವಾದ ಪರಿಕಲ್ಪನೆ. ದಲಿತ ಎನ್ನುವ ಪರಿಕಲ್ಪನೆ, ಹಲವಾರು ಜಾತಿ/ಸಮುದಾಯಗಳನ್ನು ಸಮಾನ ರಾಜಕೀಯ ಉದ್ದೇಶಕ್ಕಾಗಿ ಒಂದಾಗಿ ಬೆಸೆಯುತ್ತದೆ. ಹೀಗಾಗಿ ಇದು ಜಾತಿಯನ್ನು ಮೀರಿದ ಪರಿಕಲ್ಪನೆ ಮತ್ತು ಜಾತಿಯ ದೌರ್ಜನ್ಯವನ್ನು ವಿರೋಧಿಸಿ ಹುಟ್ಟಿದ ಪರಿಕಲ್ಪನೆ. ಆದರೆ ಇಂಥ ಚಳವಳಿಯ ಮುಂದೆ ಇರುವ ಬಹುದೊಡ್ಡ ಸವಾಲು ಈ ಪರಿಕಲ್ಪನೆಯನ್ನೇ ಅಡ್ಡಡ್ಡ ಸೀಳುವಷ್ಟು ಸಮರ್ಥವಾದದ್ದು. ನಾನಿಲ್ಲಿ ಎಸ್.ಸಿ/ಎಸ್.ಟಿಯಲ್ಲಿ ಒಳಮೀಸಲಾಗಿ ಕೋರುತ್ತಿರುವ ಚಳವಳಿಗಳ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದೇನೆ. ದಲಿತ ಚಳವಳಿ ತಾನು ವಿರೋಧಿಸುತ್ತಿರುವ ಯಾಜಮಾನ್ಯದ ವಿರುದ್ಧ ಹಲವಾರು ಶೋಷಿತ ಎನ್ನುವ ಜಾತಿಗಳನ್ನು ಒಟ್ಟಾಗಿಸುತ್ತಿದ್ದರೆ, ಅದರಲ್ಲೇ ಮತ್ತೊಂದು ರೀತಿಯ ಜಾತಿ ಧೃವೀಕರಣ ಆರಂಭವಾಗಿದೆ. ನಾನಿಲ್ಲಿ ಈ ಬೆಳವಣಿಗೆ ಸರಿ ಎಂದಾಗಲಿ ತಪ್ಪು ಎಂದಾಗಲಿ ಹೇಳುತ್ತಿಲ್ಲ. ಸಣ್ಣ ಸಣ್ಣ ಸಾಂಸ್ಕೃತಿಕ ಎಂದು ಕರೆಯಲಾಗುವ ಗುರುತುಗಳು ಹೇಗೆ ಪ್ರಬಲವಾಗುತ್ತಿವೆ ಇಂದಿನ ಸಂದರ್ಭದಲ್ಲಿ ಎಂದಷ್ಟೇ ವಿವರಿಸುತ್ತಿದ್ದೇನೆ. ಏಕೆಂದರೆ ಈ ರೀತಿಯ ಸಣ್ಣ ಗುರುತುಗಳ ಪ್ರವರ್ಧಮಾನವನ್ನು ಎರಡೂ ನೆಲೆಯಲ್ಲಿ ನೋಡಲಾಗುತ್ತಿದೆ. ದಲಿತ ಪರಿಕಲ್ಪನೆಯಡಿ ಬರುವ ವಿವಿಧ ಜಾತಿಗಳಲ್ಲೇ ಅಸಮಾನತೆ ಇದೆ, ಅದನ್ನು ಹೋಗಲಾಡಿಸದೆ ಮುಂದೆ ಹೆಜ್ಜೆ ಇಡುವುದು ಒಳಗಿನ ಪ್ರಬಲ ಜಾತಿಗೆ ಅನುಕೂಲಕರವಾಗಿ ಒಳಗಿನ ಅಸಮಾನತೆಯನ್ನು ಹೆಚ್ಚು ಮಾಡುತ್ತದೆ ಎನ್ನುವ ವಾದ ಒಂದಾದರೆ, ಮತ್ತೊಂದು ಇದು ದಲಿತ ಚಳವಳಿಯನ್ನು ಒಡೆಯಲು ಮೇಲ್ಜಾತಿಗಳು ನಡೆಸಿರುವ ಹುನ್ನಾರ ಎಂದು ವಾದಿಸುತ್ತದೆ ಹಾಗೂ ಇದರಿಂದ ಅಂತಿಮವಾಗಿ ಯಾವುದೇ ರೀತಿಯ ಲಾಭ ದಲಿತರಿಗೆ ದಕ್ಕುವುದಿಲ್ಲ ಎನ್ನುತ್ತದೆ. ಈ ಎರಡೂ ವಾದಗಳ ಸತ್ಯಾಸತ್ಯತೆಯನ್ನು ಪರಿಶೀಲಿಸು ವುದು ಅಥವಾ ಅವುಗಳ ನಡುವೆ ಪಂಚಾಯತಿ ಮಾಡುವುದು ಈ ಲೇಖನದ ಉದ್ದೇಶವಲ್ಲ. ನಮಗಿಲ್ಲಿ ಮುಖ್ಯವಾಗಬೇಕಾದದ್ದು ಈ ರೀತಿಯ ಸಾಂಸ್ಕೃತಿಕ ಎನ್ನುವ ಗುರುತುಗಳ ಹೆಚ್ಚಳದ ಪ್ರಕ್ರಿಯೆಯ ಪರಿಣಾಮ ಏನು ಎನ್ನುವುದು ಹಾಗೂ ಎಷ್ಟರ ಮಟ್ಟಿಗೆ ಇದು ಸಮಕಾಲೀನ ಸಂದರ್ಭದ ಸವಾಲುಗಳನ್ನು ಎದುರಿಸುತ್ತಿದೆ ಎನ್ನುವುದು.

ಒಳಮೀಸಲಾತಿಯ ಆಗತ್ಯದ ಬಗ್ಗೆ ಪ್ರಸ್ತಾಪ ಮಾಡುತ್ತಿರುವುದು ಸರಕಾರಿ ಉದ್ಯೋಗಗಳಲ್ಲಿ ಮತ್ತು ಶಿಕ್ಷಣದಲ್ಲಿ ಮೀಸಲಾತಿಯನ್ನು ಗಮನದಲ್ಲಿ ಇಟ್ಟು ಮಾತನಾಡುತ್ತಿದ್ದಾರೆ. ಆದರೆ ಇಂದಿನ ಸಂದರ್ಭದಲ್ಲಿ, ರಾಷ್ಟ್ರಪ್ರಭುತ್ವ ಸರಕಾರಿ ಉದ್ಯೋಗಗಳನ್ನೇ ಮಾಯವಾಗಿಸುತ್ತಿದೆ ಮತ್ತು ಶಿಕ್ಷಣವನ್ನು ಸಂಪೂರ್ಣವಾಗಿ ಖಾಸಗಿಯವರ ಕೈಯಲ್ಲಿಡುವ ಮಾತನಾಡುತ್ತಿದೆ. ಹಾಗಾದರೆ ಸರಕಾರಿ ಉದ್ಯೋಗಗಳಲ್ಲಿ ಮತ್ತು ಶಿಕ್ಷಣದಲ್ಲಿ ಒಳಮೀಸಲಾತಿ ಕೇಳುವ ಉದ್ದೇಶ ಎಷ್ಟರಮಟ್ಟಿಗೆ ಸರಿ? ಉದ್ಯೋಗಗಳು ಖಾಸಗಿ ರಂಗದಲ್ಲಿ ಸೃಷ್ಟಿಯಾಗುತ್ತಿದ್ದರೆ ಅವುಗಳನ್ನು ಪಡೆಯುವುದು ಹೇಗೆ ಎನ್ನುವ ಪ್ರಶ್ನೆಯನ್ನೇ ಈಗಿನ ಪರಿಸ್ಥಿತಿ ನಗಣ್ಯವಾಗಿಸುತ್ತದೆ. ದಲಿತರು ಕಮ್ಮಿ ಪ್ರಮಾಣದಲ್ಲಿ ಶಿಕ್ಷಣ ಪಡೆಯುತ್ತಿದ್ದಾಗ ಕೆಲಸದ ಸಮಸ್ಯೆ ಇರಲಿಲ್ಲ. ದಲಿತರು ಹೆಚ್ಚೆಚ್ಚು ಪ್ರಮಾಣದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ, ಸರಕಾರಿ ಉದ್ಯೋಗಗಳಿಗೆ ಆಶಿಸುತ್ತಿದ್ದಾರೆ. ಆದರೆ ನೌಕರಿಯೇ ಇಲ್ಲ. ಉದ್ಯೋಗವಕಾಶಗಳು ಕಮ್ಮಿಯಾಗಿವೆ. ರಾಷ್ಟ್ರಪ್ರಭುತ್ವ ತನ್ನ ಹೊಣೆಗಾರಿಕೆಯಾದ ಆಡಳಿತ ಮತ್ತು ಸಮಾಜಕಲ್ಯಾಣ ತತ್ವಗಳಿಗೆ ಜಾಗತೀಕರಣದ ಸಂದರ್ಭದಲ್ಲಿ ತಿಲಾಂಜಲಿ ಇತ್ತಿರುವುದರಿಂದ ಈ ಸಮಸ್ಯೆ ಉಂಟಾಗಿದೆ ಎಂದು ನೋಡದೆ, ತಮ್ಮ ತಮ್ಮಲ್ಲೇ ಕಿತ್ತಾಡಲಿಕ್ಕೆ ಈ ಸಾಂಸ್ಕೃತಿಕ ಗುರುತುಗಳು ಕಾರಣವಾಗುತ್ತಿವೆ. ೪ ಉದ್ಯೋಗಗಳು ಇದ್ದು ೩ ಜನ ವಿದ್ಯಾವಂತರು ಇದ್ದಾಗ, ೩ ಜನ ಯಾವ ದಲಿತ ಜಾತಿಗೆ ಸೇರಿದವರು ಎಂಬ ಪ್ರಶ್ನೆ ಆರಂಭವಾಗಲಿಲ್ಲ. ಈ ಸಮಸ್ಯೆ ಆರಂಭವಾದದ್ದು ೪ ಉದ್ಯೋಗಗಳು ೩ ಆದಾಗ ಮತ್ತು ವಿದ್ಯಾವಂತ ದಲಿತರ ಸಂಖ್ಯೆ ೪ ರಿಂದ ೬ ಆದಾಗ ಎಂಬುದು ಮುಖ್ಯ. ನಾನಿಲ್ಲಿ ತಾತ್ವಿಕವಾಗಿ ಒಳಮೀಸಲಾತಿಯನ್ನು ವಿರೋಧಿಸುತ್ತಿಲ್ಲ ಅಥವಾ ಅದು ಮುಖ್ಯ ಸಮಸ್ಯೆ ಎಂದೂ ಹೇಳುತ್ತಿಲ್ಲ. ಅದಕ್ಕಿಂತ ಜರೂರಾದದ್ದು ಬೇರೆ ಇದೆ. ಆದರೆ ರಾಜಕೀಯ ಪರಿಕಲ್ಪನೆಯ ಬದಲು, ಸಾಂಸ್ಕೃತಿಕ ಗುರುತು ಎನ್ನುವ ಹೆಸರಲ್ಲಿ ಜನರನ್ನು ಸಂಘಟಿಸುತ್ತಿರುವ ಸಮಸ್ಯೆಗಳ ಬಗ್ಗೆ ಹೇಳುತ್ತಿದ್ದೇನೆ.

ಇನ್ನಷ್ಟು ಉದಾಹರಣೆಗಳು ನೀಡಿದರೆ ಇದು ಸ್ಪಷ್ಟಗೊಳ್ಳಬಹುದು. ಹಿಂದೆ ಸಾರ್ವಜನಿಕ ಉದ್ದಿಮೆಗಳಲ್ಲಿ ವರ್ಗ ಆಧಾರಿತ ಸಂಘಟನೆಗಳಷ್ಟೇ ಇದ್ದವು. ನಂತರ ಹಲವಾರು ಜಾತಿಗಳು ಸೇರಿದ ದಲಿತ ಸಂಘಟನೆಗಳು ಅಂಬೇಡ್ಕರ್ ಹೆಸರಲ್ಲೋ, ಎಸ್.ಸಿ./ಎಸ್.ಟಿ ಹೆಸರಲ್ಲೋ ಆರಂಭವಾದವು. ಅವೆರಡು ಕೂಡ ನಾವು ಪ್ರಗತಿಪರ ಎಂದು ಗುರುತಿಸುವ ಪರಿಧಿಯಲ್ಲೇ ಇದ್ದವು. ಆದರೆ ಈಗ ಕನಕ ಸಂಘ, ಬಸವೇಶ್ವರ ಸಂಘ, ವಾಲ್ಮೀಕಿ ಸಂಘ, ಕನ್ನಡ ಸಂಘ, ತಮಿಳು ಸಂಘ ಇತ್ಯಾದಿ ಸಾಂಸ್ಕೃತಿಕ ಗುರುತುಗಳನ್ನು ಆಧರಿಸಿದ ಸಂಘಟನೆಗಳು ಆರಂಭವಾಗಿ ಸಾರ್ವಜನಿಕ ಉದ್ದಿಮೆಗಳು ನೌಕರರನ್ನು ಸಂಘಟಿಸುತ್ತಿವೆ. ಇದು ಅಂತಿಮವಾಗಿ ಯಾರಿಗೆ ಲಾಭ? ಯೋಚಿಸಬೇಕಾಗಿದೆ.

ಹಾಗೆಯೇ ಬಹುರಾಷ್ಟ್ರೀಯ ಕಂಪನಿಗಳನ್ನು ವಿರೋಧಿಸಲು ಕೆಲವರು ಸಾಂಸ್ಕೃತಿಕ ಎಂದು ಗುರುತಿಸಲಾಗುವ ಗುರುತುಗಳನ್ನು ಆಧರಿಸಿ ಪ್ರತಿರೋಧ ರೂಪಿಸಬೇಕು ಎಂದು ವಾದಿಸುತ್ತಾರೆ. ಇವರ ಅರ್ಥದಲ್ಲಿ 'ಸಾಂಸ್ಕೃತಿಕ' ಎನ್ನುವುದು ಧರ್ಮ, ಜಾತಿ, ಪಂಗಡಗಳಿಗೆ ಸಂಬಂಧಿಸಿದ್ದು. ಇವರ ಕಾರ್ಯವೈಖರಿ ಹೇಗಿದೆ ಎಂದರೆ, ಒಂದು ಬಹುರಾಷ್ಟ್ರೀಯ ಕಂಪನಿ ಗಣಿಗಾರಿಕೆಯನ್ನು ಆರಂಭಿಸುತ್ತಿದೆ ಎಂದರೆ, ಇವರು ಅದಕ್ಕೆ ವಿರುದ್ಧವಾಗಿ ಅದು ಅಲ್ಲಿರುವ ಒಂದು ಪುರಾತನ

ಒಳಮೀಸಲಾತಿಯ ಅಗತ್ಯದ ಬಗ್ಗೆ ಪ್ರಸ್ತಾಪ ಮಾಡುತ್ತಿರುವುದು ಸರಕಾರಿ ಉದ್ಯೋಗಗಳಲ್ಲಿ ಮತ್ತು ಶಿಕ್ಷಣದಲ್ಲಿ ಮೀಸಲಾತಿಯನ್ನು ಗಮನದಲ್ಲಿ ಇಟ್ಟು ಮಾತನಾಡುತ್ತಿದ್ದಾರೆ. ಆದರೆ ಇಂದಿನ ಸಂದರ್ಭದಲ್ಲಿ, ರಾಷ್ಟ್ರಪ್ರಭುತ್ವ ಸರಕಾರಿ ಉದ್ಯೋಗಗಳನ್ನೇ ಮಾಯವಾಗಿಸುತ್ತಿದೆ ಮತ್ತು ಶಿಕ್ಷಣವನ್ನು ಸಂಪೂರ್ಣವಾಗಿ ಖಾಸಗಿಯವರ ಕೈಯಲ್ಲಿಡುವ ಮಾತನಾಡುತ್ತಿದೆ. ಹಾಗಾದರೆ ಸರಕಾರಿ ಉದ್ಯೋಗಗಳಲ್ಲಿ ಮತ್ತು ಶಿಕ್ಷಣದಲ್ಲಿ ಒಳಮೀಸಲಾತಿ ಕೇಳುವ ಉದ್ದೇಶ ಎಷ್ಟರಮಟ್ಟಿಗೆ ಸರಿ? ಉದ್ಯೋಗಗಳು ಖಾಸಗಿ ರಂಗದಲ್ಲಿ ಸೃಷ್ಟಿಯಾಗುತ್ತಿದ್ದರೆ ಅವುಗಳನ್ನು ಪಡೆಯುವುದು ಹೇಗೆ ಎನ್ನುವ ಪ್ರಶ್ನೆಯನ್ನೇ ಈಗಿನ ಪರಿಸ್ಥಿತಿ ನಗಣ್ಯವಾಗಿಸುತ್ತದೆ. ದಲಿತರು ಕಮ್ಮಿ ಪ್ರಮಾಣದಲ್ಲಿ ಶಿಕ್ಷಣ ಪಡೆಯುತ್ತಿದ್ದಾಗ ಕೆಲಸದ ಸಮಸ್ಯೆ ಇರಲಿಲ್ಲ. ದಲಿತರು ಹೆಚ್ಚೆಚ್ಚು ಪ್ರಮಾಣದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ, ಸರಕಾರಿ ಉದ್ಯೋಗಗಳಿಗೆ ಆಶಿಸುತ್ತಿದ್ದಾರೆ. ಆದರೆ ನೌಕರಿಯೇ ಇಲ್ಲ. ಉದ್ಯೋಗವಕಾಶಗಳು ಕಮ್ಮಿಯಾಗಿವೆ. ರಾಷ್ಟ್ರಪ್ರಭುತ್ವ ತನ್ನ ಹೊಣೆಗಾರಿಕೆಯಾದ ಆಡಳಿತ ಮತ್ತು ಸಮಾಜಕಲ್ಯಾಣ ತತ್ವಗಳಿಗೆ ಜಾಗತೀಕರಣದ ಸಂದರ್ಭದಲ್ಲಿ ತಿಲಾಂಜಲಿ ಇತ್ತಿರುವುದರಿಂದ ಈ ಸಮಸ್ಯೆ ಉಂಟಾಗಿದೆ ಎಂದು ನೋಡದೆ, ತಮ್ಮ ತಮ್ಮಲ್ಲೇ ಕಿತ್ತಾಡಲಿಕ್ಕೆ ಈ ಸಾಂಸ್ಕೃತಿಕ ಗುರುತುಗಳು ಕಾರಣವಾಗುತ್ತಿವೆ.

ಭೂಮಿ ತಾಯೆ ಪೂಜೆ



ಸುಗ್ಗಿಯ ಕಾಲ ಬಂದತು ನೋಡು ನಮ್ಮ ಕಾಡಿಗ
ನಮ್ಮ ಕಾಡಿಗ ನಮ್ಮ ಕಾಡಿಗ
ಹೊಲದ ಬೆಳೆ ಬಾಗಿ ನಿಂದತು ನೋಡು ನಮ್ಮ ಪೋಡಿಗ
ನಮ್ಮ ಪೋಡಿಗ ನಮ್ಮ ಪೋಡಿಗ
ಈ ಭೂಮಿ ತಾಯೆ ನಮ್ಮವ್ವೆ ನಮ್ಮ ಕೂಡಿದವಳೆ
ವನತಾಯೆ ಮೆರೆದು ನಮ್ಮ ನೋಡಿದವಳೆ
ನಮ್ಮೂರಿನ ಹಾಲನೂರ ಸಾಮಿಕ ಹಬ್ಬವ ತಂದವಳೆ

ತೂಗಿ ಕರೆದರೆ ಹೊಲ ಪೂರ
ತೊಗರಿಯ ಬೆಳೆಗ
ಬಾಗಿದವೆ ಬಾ ಎಂದು ಭೂಮಿಕ
ಬಾಳೆಯ ಗೊನೆಗ
ಮಣ್ಣುಮಾಳವೆಲ್ಲ ಹಸುರಾಡಿದದೆ
ಮೆಳೆ ಮರವೆಲ್ಲ ಉಸುರಾಡಿದದೆ
ಕಣ್ಣಿಗ ಕಣ್ಣು ತುಂಬ ಹಸುರೇ ಕಂಡದೆ
ವನದೇವಿ ತಾಯೆ ನಮ್ಮ ಕಾತವಳೆ

ಹೊಸ ಫಲದ ಹುಲುಸ ಎತ್ತಿ
ನೇರಿಯ ಸೊಪ್ಪಿನ ಸಪ್ಪರವ ಹಾಕಿ
ರೊಟ್ಟಿಯ ಹಬ್ಬವ ಮಾಡಿ
ಹಾಲನೂರಯ್ಯನಿಗ ಎಡೆಯ ಮಡಗಿ
ನಮ್ಮ ಹರಕೆಯ ತೀರೊ ಬಾರಿರೊ
ಸೆಂದಗಿ ಮಡಗುನು ಎನ್ನೊ ಬಾರಿರೊ
ಹೆಣ್ಣುಗಂಡೆಲ್ಲ ಕೂಡಿ ಬಾರಿರೊ
ಭೂಮಿ ತಾಯಿಕ ಪೂಜೆಯ ಮಾಡಗೆ ಬಾರಿರೊ

○ಎಂ. ಜೆಡಿಯ (ಮುಕುಂಜೆಕ)

ದೇವಸ್ಥಾನವನ್ನು ಹೇಗೆ ನಾಶ ಮಾಡುತ್ತದೆ ಎಂದು ವಿರೋಧಿಸುತ್ತಾರೆ. ಆದರೆ ಇದು ಎಷ್ಟರ ಮಟ್ಟಿಗೆ ಪ್ರತಿರೋಧವನ್ನು ರೂಪಿಸಬಹುದು? ಆ ಕಂಪನಿ ದೇವಸ್ಥಾನದ ಪುನರುದ್ಧಾರಕ್ಕೆ, ಅಭಿವೃದ್ಧಿಗೆ ಕೋಟ್ಯಾಂತರ ರೂಪಾಯಿಗಳನ್ನು ಚೆಲ್ಲಿದರೆ ಅದನ್ನು ಆಧರಿಸಿದ ಪ್ರತಿರೋಧದ ಕಥೆ ಏನು? ಹಾಗೆಯೇ ಕನ್ನಡ ಭಾಷೆ ನಾಶವಾಗುತ್ತದೆ ಎಂದು ಬೆಂಗಳೂರಿನಲ್ಲಿರುವ ಬಹುರಾಷ್ಟ್ರೀಯ ಸಾಫ್ಟ್‌ವೇರ್ ಕಂಪನಿಗಳನ್ನು ವಿರೋಧಿಸಿದರೆ, ಅವರು ಕನ್ನಡ ಭಾಷೆಯಲ್ಲೂ ಕೆಲವು ಸಾಫ್ಟ್‌ವೇರ್‌ಗಳನ್ನು ರೂಪಿಸಬಹುದು ಮತ್ತು ಪ್ರತಿ ವರ್ಷ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕೆಲವನ್ನು ಗುರುತಿಸಿ ಕೆಲವು ಲಕ್ಷಗಳ ಪ್ರಶಸ್ತಿಗಳನ್ನು ನೀಡಲು ಆರಂಭಿಸಿದರೆ ಆಗ ಕನ್ನಡವನ್ನು ಆಧರಿಸಿದ ಪ್ರತಿರೋಧದ ಕಥೆ ಏನು? ನಾನಿಲ್ಲಿ ಕೆಲವು ಊಹಾತ್ಮಕ ಉದಾಹರಣೆಗಳನ್ನು ನೀಡುತ್ತಿದ್ದೇನೆ ಅಷ್ಟೇ. 'ಸಾಂಸ್ಕೃತಿಕ' ಎನ್ನುವ ಗುರುತುಗಳನ್ನು ಆಧರಿಸಿದ ಪ್ರತಿರೋಧಗಳು ಜಾಗತೀಕರಣದ ಭಾಗವೇ ಮತ್ತು ಪೂರಕವಾದದ್ದೇ ಎಂಬ ಗುಮಾನಿಯನ್ನು ಮೂಡಿಸುವುದು ನನ್ನ ಉದ್ದೇಶ. ಏಕೆ ಸ್ಥಳೀಕರಣ ಕೂಡ ಜಾಗತೀಕರಣದ ಭಾಗವೇ ಎಂದರೆ, ಸ್ಥಳೀಯವಾದದ್ದನ್ನು ಸುಲಭವಾಗಿ ಜಾಗತಿಕವು ತನ್ನದಾಗಿಸಿಕೊಳ್ಳಬಹುದು, ಪ್ರಬಲವಾದ ಜಾಗತಿಕ ಪ್ರತಿರೋಧವಿದ್ದರೆ ಅದನ್ನು ಸುಲಭವಾಗಿ ತನ್ನದಾಗಿಸಿಕೊಳ್ಳಲು ಜಾಗತೀಕರಣಕ್ಕೆ ಸಾಧ್ಯವಾಗುವುದಿಲ್ಲ.

ಈ ಸ್ಥಳೀಕರಣ, ಸಾಂಸ್ಕೃತಿಕ ಗುರುತುಗಳ ಹೆಚ್ಚಳ ಇವುಗಳೆಲ್ಲವೂ ಆಧುನಿಕೋತ್ತರ ವಿಚಾರಧಾರೆಯ ಭಾಗವಾದ ಛಿದ್ರೀಕರಣ, ಮೆಟಾನರೇಟಿವ್‌ಗಳ (meta-narrative, ವಿರಾಟ್‌ಕಥಾನಕಗಳು, ಉದಾ: ಮಾರ್ಕ್ಸ್‌ವಾದ) ಬಗೆಗಿನ ಸಂದೇಹ ಇವುಗಳ ಭಾಗವಾಗೇ ಮೂಡುತ್ತಿರುವವು ಎಂಬುದು ನನ್ನ ವಾದ. ಇಂದು ಅನೇಕ ತಲ್ಲಣಗಳಿಗೆ ಕಾರಣವಾಗಿರುವುದು ಈ ಆಧುನಿಕೋತ್ತರ ವಿಚಾರಧಾರೆಯೇ. ಪ್ರಬಲ ಯಾಜಮಾನ್ಯಗಳಿಗೆ ಪ್ರಬಲ ಪ್ರತಿರೋಧ ನೀಡಲು ವಿರಾಟ್ ಕಥನಗಳಿಗೆ ಮಾತ್ರ ಸಾಧ್ಯ. ಸ್ಥಳೀಕೃತ ಪ್ರತಿರೋಧಗಳನ್ನು ಸುಲಭವಾಗಿ ಪ್ರಬಲ ಯಾಜಮಾನ್ಯಗಳು ತಣಿಸಿಬಿಡುತ್ತವೆ, ತುಳಿಯುವುದರ ಮೂಲಕ ಅಥವಾ ಅದನ್ನು ತೃಪ್ತಿಗೊಳಿಸಿ, ಶಮನಗೊಳಿಸುವ ಮೂಲಕ, ನಾನಿಲ್ಲಿ ವಿರಾಟ್ ಕಥಾನಕಗಳನ್ನು (ಅಂದರೆ ಮಾರ್ಕ್ಸ್‌ವಾದವನ್ನು ಅಥವಾ ಅದೇ ಮಾದರಿಯ ಇಡೀ ವಿಶ್ವವನ್ನು ವೈಚಾರಿಕತೆಯ ಮೂಲಕ ಅರಿಯಲು ಸಾಧ್ಯ) ಸಮರ್ಥಿಸುತ್ತಿದ್ದೇನೆ ಎಂದಲ್ಲ, ಅಥವಾ ಸ್ಥಳೀಯತೆಯನ್ನು ಆಧರಿಸಿದ ಗುರುತುಗಳು ಎತ್ತುತ್ತಿರುವ ರಾಜಕೀಯ ಪ್ರಶ್ನೆಯನ್ನಾಗಲಿ ಅಥವಾ ಶೋಷಣೆಯ ಪ್ರಶ್ನೆಯನ್ನಾಗಲಿ ಗೌಣವಾಗಿಸುತ್ತಿದ್ದೇನೆ ಎಂದೂ ಅಲ್ಲ. ಈ ಸ್ಥಳೀಯತೆಯನ್ನು ಆಧರಿಸಿದ ಗುರುತು ರಾಜಕಾರಣ ಮುಂದುಮಾಡುವ ಪ್ರಶ್ನೆಗಳನ್ನು ಮತ್ತು ಪ್ರಬಲ ಯಾಜಮಾನ್ಯವನ್ನು ವಿರೋಧಿಸಬಹುದಾದ ವಾದಗಳ ಸಾಧ್ಯಾಸಾಧ್ಯತೆಗಳ ಬಗ್ಗೆ ಯೋಚಿಸುತ್ತಿರುವೆ. ಅವೆರಡನ್ನು ಬೇರೆ ಬೇರೆಯಾಗಿ ನೋಡದೆ ವಿರುದ್ಧವಾದದ್ದಾಗಿ ನೋಡದೆ ಇರಲು ಸಾಧ್ಯವೆ? ಮಾರ್ಕ್ಸ್‌ವಾದ ಬಂಡವಾಳದ ಜೊತೆಗೆ ಸ್ಥಳೀಯ ಮತ್ತು ಸಾಂಸ್ಕೃತಿಕ ಎನ್ನುವ ಪ್ರಶ್ನೆಗಳನ್ನು ಜೊತೆಯಾಗಿ ನೋಡುವಂತೆ ಮಾಡಲಾಗದೆ? ಹಾಗೆಯೇ ಸ್ಥಳೀಯ ಚಳವಳಿಗಳು ಎಂದು ಕರೆದುಕೊಳ್ಳುವ ಚಳವಳಿಗಳು ಗುರುತು ಪ್ರಶ್ನೆಯನ್ನು ಮಾತ್ರ ಮುಂದು ಮಾಡದೆ, ಅದರೊಂದಿಗೆ ಇತರ ಶೋಷಿತರ ಪ್ರಶ್ನೆಗಳನ್ನು ತಮ್ಮ ಚಳವಳಿಯ ಭಾಗವಾಗಿ ಇಂಟಿಗ್ರೇಟ್ ಮಾಡಿಕೊಳ್ಳಲು ಸಾಧ್ಯವೇ? ಎಂಬ ಪ್ರಶ್ನೆಗಳಿವು.

ಇವುಗಳಿಗೆ ಉತ್ತರ ಸದ್ಯದ ಸಿದ್ಧಾಂತಗಳಲ್ಲಿ ಇಲ್ಲ. ಹಿಂದೆ ತಿಳಿಸಿದಂತೆ ಫೂಕೋನ ವಿಚಾರಗಳಾಗಲಿ ಅಥವಾ ಡೆರಿಡಾನ ವಿಚಾರಗಳಾಗಲಿ ಶೋಷಣೆಯ ವ್ಯವಸ್ಥೆಯನ್ನು ವಿಶ್ಲೇಷಿಸಲು ಬಳಸಬಹುದೇ ಹೊರತು ಅದಕ್ಕೆ ಪರ್ಯಾಯವಾಗಿ ಅವುಗಳು ಏನನ್ನೂ ಮುಂದಿಡುವುದಿಲ್ಲ. ಈ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿಲ್ಲ ಎಂದೇನಲ್ಲ. ಮಾರ್ಕ್ಸ್‌ವಾದವು ತನ್ನ ಹಿಂದಿನ ನಿಲುವುಗಳನ್ನು ಮರುಪರಿಶೀಲನೆಗೆ ಒಳಪಡಿಸುತ್ತಿದೆ. ಇದರಿಂದಾಗಿಯೇ ಮಾರ್ಕ್ಸ್‌ವಾದದಲ್ಲೇ ಮಾರ್ಕ್ಸಿಸ್ಟ್ ಫೆಮಿನಿಸ್ಟ್ ಸಂರಚನೋತ್ತರವಾದಿ ಮಾರ್ಕ್ಸ್‌ವಾದ, ವಸಾಹತೋತ್ತರವಾದಿ ಮಾರ್ಕ್ಸ್‌ವಾದ ಎಂಬ ಹೊಸ ವಾದಗಳು ಉಗಮವಾಗಿರುವವು. ಎಲ್ಲ ಛಿದ್ರ ಸ್ಥಳೀಯ ಗುರುತುಗಳನ್ನು ಆಧರಿಸಿದ ಚಳವಳಿಗಳನ್ನು ಒಂದು ವಿಶಾಲವಾದ ಪರಿಕಲ್ಪನೆಯಡಿ ತರುವ ಪ್ರಯತ್ನಗಳೂ ನಡೆಯುತ್ತಿವೆ. ದಲಿತರು, ಮಹಿಳೆಯರು ಮತ್ತು ಇತರ ಶೋಷಿತರು ಒಂದಾಗಬೇಕು ಎಂಬ ಘೋಷಣೆಗಳೇನೂ ಹೊಸದಲ್ಲ. ಆದರೆ ಅದಕ್ಕಿರುವ ಅಡ್ಡಿ ಆತಂಕಗಳನ್ನು ಕುರಿತು ಸೈದ್ಧಾಂತಿಕವಾಗಿಯಾಗಲಿ (theoretically) ಅಥವಾ ತಾತ್ವಿಕವಾಗಿ ಯಾಗಲಿ (ideologically) ನಾವು ಚರ್ಚೆಯನ್ನು ಮಾಡಿಲ್ಲ. ಮಾಡುವ ಮೊದಲೆ ದಲಿತ ಅಥವಾ ಮಹಿಳೆ ಎನ್ನುವ ಪರಿಕಲ್ಪನೆಗಳೇ ಛಿದ್ರೀಕರಣಕ್ಕೆ ಒಳಗಾಗುತ್ತಿವೆ. ದಲಿತರಲ್ಲಿನ ಆಂತರಿಕ ವೈರುಧ್ಯ ಅಥವಾ ಮಹಿಳೆಯರಲ್ಲಿನ ಆಂತರಿಕ ವೈರುಧ್ಯಗಳನ್ನು ಪರಿಗಣನೆಗೆ ತೆಗೆದುಕೊಂಡು ನಂತರ ದಲಿತರು ಮತ್ತು ಮಹಿಳೆಯರ ನಡುವಿನ ವೈರುಧ್ಯಗಳೇನು, ಅವುಗಳನ್ನು ಬಗೆಹರಿಸುವುದು ಹೇಗೆ, ಅವುಗಳನ್ನು ಬಗೆಹರಿಸಿ ಅಥವಾ ಬಗೆಹರಿಸುವುದರೊಂದಿಗೆ ಸಮಾನ ಶತ್ರುಗಳ ಜೊತೆ ಹೋರಾಡಲು ಪರಸ್ಪರ ಕೈ ಜೋಡಿಸುವುದು ಹೇಗೆ ಎಂಬ ಪ್ರಶ್ನೆಗಳನ್ನು ನಾವು ಇಂದು ಎದುರಿಸಬೇಕಾಗಿದೆ. ಎದುರಿಸಿದಾಗ ಸಿದ್ಧಾಂತಗಳು ತಲ್ಲಣಗಳನ್ನು ಉಂಟು ಮಾಡುವುದಿಲ್ಲ, ಬದಲಿಗೆ ದಾರಿದೀಪಗಳಾಗಬಹುದು. □

ನಾಟಕ

ತಂಡುಲದಾನ

○ ಎಚ್.ಎಲ್. ಕೇಶವಮೂರ್ತಿ

(ಯುವ ಮುಂದಾಳು ತಿಮ್ಮೇಗೌಡ ಮನೆಯ ಬಾಗಿಲಿನಲ್ಲಿ ಹೊರಟು ನಿಂತಿದ್ದಾಗ ಐದಾರು ಜನರ ಗುಂಪು ಬರುತ್ತದೆ.)

ತಿಮ್ಮೇಗೌಡ : ಯಾಕುರ್ಲಾ ಇನ್ನೂ ಧರಣೀಗೆ ಹೊಂಟಿಲ್ವ ?

ಗುಂಪಿನ ಒಬ್ಬ: ಎಲ್ಲ ರೆಡಿಯಾಗದೆ ಕನಣ್ಣ ಗಾಡಿ ಕೊಳ್ಳು ಎತ್ತನ ಅನ್ನೊ ಹೊತ್ಗ ಎಲ್ಲಿದ್ನೋ ಈ ಬಡಾರ್‌ನ ಹೈದ ಬಂದ್ಬುಟ್ಟ ಸುತರಾಂ ಹೊಂಡಂಗಿಲ್ಲ ಅಂತ ಕುಂತ್ಕಂಡ.

ತಿಮ್ಮೇಗೌಡ : ಯಾಕ್ಲಾ ಮಗ ?

ಬಡಾರ್‌ನ ಹೈದ : ಅಣ್ಣ ನೀನು ತಿಳ್ಡೋನು ಹೇಳು. ಬರೀ ಧರಣಿ ಕುಂತ್ರೆ ಏನು ಬಂತಣ್ಣ, ಯಾರ್‍ನಾರೂ ಸುಡಬೇಕು ಕನಣ್ಣ.

ತಿಮ್ಮೇಗೌಡ : ಇದೇನ್ಲ ಮಗ ಹಿಂಗಂತೀಯೆ ?

ಬಡಾರ್‌ನ ಹೈದ : ನಮ್ಮೂರೆಸ್ರು ಪೇಪರಲಿ, ಟಿವಿಲಿ ಮಿಂಚಬೇಕಾದ್ರೆ ಸುಡಬೇಕು ಕನಣ್ಣ. ಜಯಲಲಿತಾನ್ನ ಸುಟ್ಟರೇಯ ಹೆಸರು ಬರಾದು.

ತಿಮ್ಮೇಗೌಡ : ಅವಳನ್ನಲ್ಲ ಕನೊ ಅವಳ ಪ್ರತಿಕೃತಿಯ ಅನ್ನು ಬಡ್ಡಿಹೈದ್ನೆ,

ಬಡಾರ್‌ನ ಹೈದ : ಹು, ಅದ್ನೇಯ ಸುಡಬೇಕು ಕನಣ್ಣ.

ತಿಮ್ಮೇಗೌಡ : ಸುಟ್ಕಳ್ಳಿ ಬುಡೊ ದೊಡ್ಡೋನೆ.

ದೊಡ್ಡೋನು : ಅವಳ ಸುಟ್ಟಮ್ಯಾಕೆ ನಂ ಮುಕ್ಯಮಂತ್ರೀನೂ ಸುಡಬೇಕಾಯ್ತದೆ.

ತಿಮ್ಮೇಗೌಡ : ಅವನ್ನು ಸುಡ್ರಪ್ಪಾ ಇದೇನು ಘನಂದಾರಿ ವಿಷಯವಾ.

ದೊಡ್ಡೋನು : ನಂ ಸಂಸದನ್ನೂ ಸುಡಬೇಕಾಯ್ತದೆ.

ತಿಮ್ಮೇಗೌಡ : ಅವನ್ನೂ ಸುಟ್ಟಾಕಿ ಅತ್ಲಾಗಿ.

ಗುಂಪಿನ ಒಬ್ಬ: ಅಣ್ಣಾ ಎಂಪಿ ಸುಡೋದು ಬ್ಯಾಡ ಕನಣ್ಣ.

ತಿಮ್ಮೇಗೌಡ : ಅವುನ್ ಮಾತ್ರ ಯಾಕ್ ಬ್ಯಾಡುವ್ಲ?

ಗುಂಪಿನ ಒಬ್ಬ: ಅವನು ನಂ ಸೂಲ್ಗೆ ಕಾಂಪೌಂಡು ಹಾಕಿಸಿಲ್ವಾ...

ತಿಮ್ಮೇಗೌಡ : ಅದೇನು ಅವನ ಅಪ್ಪನ ಮನೆ ದುಡ್ಲ? ಸಂಸದರ ಅನುದಾನದಲ್ಲಿ ಮಾಡಸವ್ನೆ

ಗುಂಪಿನ ಒಬ್ಬ: ಮಂತೆ ಕಾಂಪೌಂಡಿನ ಮ್ಯಾಗೆ ಅವನ ಹೆಸರು ಅದೆ. ಹಂಗಂದ್ರೆ ಕೈಯಿಂದ ಕೊಟ್ಟವ್ನೆ ಅಂತಲ್ವ?

ತಿಮ್ಮೇಗೌಡ : ಅದ ಬದಲಾಯಿಸಾನ, ಈಗ ನಡೀರಿ ಟೇಂ ಆಯ್ತದೆ.

(ಎದುರು ಮನೆಯ ಕಾಳೇಗೌಡ ಇದನ್ನೆಲ್ಲ ಕಿಡುಕಿಯ ಮೂಲಕ ಗಮನಿಸುತ್ತಾ ಇರುವಾಗ, ಕಳ್ಳ ಹೆಜ್ಜೆ ಹಾಕುತ್ತಾ ಸೆಕ್ರಟರಿ ಪ್ರವೇಶಿಸುತ್ತಾನೆ)

ಸೆಕ್ರೆಟರಿ : ಗೌಡ್ರೇ...ಗೌಡ್ರೇ...

ಕಾಳೇಗೌಡ : ಅದ್ಯಾಕಂಗೆ ಅರಿಚೀಯೆ ಬಾ.

ಸೆಕ್ರೆಟರಿ : ನಮ್ಮಾವಾರು ತಿರುಪತಿಗೆ ಹೋಗಿದ್ರಂತೆ, ಪ್ರಸಾದ ಕಳಿಸಿದ್ದರು. ನೀವೂ ಆ ದೇವರ ಒಕ್ಕಲೇ ಅಲ್ವ? ಕೊಟ್ಟೋಗಾನ ಅಂತ ಬಂದೆ.

(ಕಾಳೇಗೌಡ ಭಯ ಭಕ್ತಿಯಿಂದ ಪ್ರಸಾದ ಸ್ವೀಕರಿಸುವನು)

ಕಾಳೇಗೌಡ : ಬಾ ಕುಂತ್ಕೊ.

ಸೆಕ್ರೆಟರಿ : ನಿಮ್ಮೆದುರ್ಗೆ ನಾನು ಯಾವತ್ತಾರ ಕುರ್ಚಿಲಿ ಕುಂತಿದ್ದೀನಾ ಗೌಡರೆ...ಬ್ಯಾಡಿ ಬ್ಯಾಡಿ, ಇಲ್ಲೇ ಕುಂತ್ಕತೀನಿ.

(ನೆಲದ ಮೇಲೆ ಕಾಳೇಗೌಡ ಕಾಲ ಬಳಿ ಕುಳಿತುಕೊಳ್ಳುವನು)

ಕಾಳೇಗೌಡ : ಎದುರು ಮನೆ ತಿಮ್ಮ ಅದೇನೋ ಇಕ್ಮತ್ತು ಮಾಡ್ತಾ ಇರಂಗದೆ.

ಸೆಕ್ರೆಟರಿ : ಕಾವೇರಿ ನೀರ ತಡೆದು ಬಿಡೋರಂಗೆ ಧರಣಿ ಮಾಡ್ತಾರಂತೆ. ಇನ್ನೊಂದು ವಿಸ್ಯ ಗೊತ್ತಾ ಗೌಡ್ರೆ...

ಕಾಳೇಗೌಡ : ಏನು ?

ಸೆಕ್ರೆಟರಿ : ಮುಕ್ಯಮಂತ್ರೀನೂ ಸಂಸದನ್ನೂ ಸುಡ್ತಾರಂತೆ, ನಿಮ್ಮ ಪಾರ್ಟಿಯೋರಲ್ಲ ಅದ್ಕೆ. ಜನ ಬ್ಯಾಡ ಬ್ಯಾಡ ಅಂದರೂ ಇವನು ಬುಡೊಲ್ಲ ಸುಡ್ಲೇಬೇಕು ಅಂತ ಹಟ ಇಡ್ದವ್ನೆ ಅಂತೀನಿ.

ಕಾಳೇಗೌಡ : ಮಿಂಡರಿಗುಟ್ಟಿದ ಬಡ್ಡಿ ಹೈದ....ಬಲೇ ಹಾರಾಡ್ತ ಅವ್ನೇ....

ಸೆಕ್ರೆಟರಿ : ನಮ್ಮದ್ಯಕ್ಷೇದೂ ಕುಮ್ಮಕ್ಕು ಇದ್ದದಂತೆ.

ಕಾಳೇಗೌಡ : ಅದೇನು ಅವ್ರು ಎಲ್ಲಾದ್ಕೂ ಎಟ್ಕಂಡು ಬತ್ತಾಳಲ್ಲ.

ಸೆಕ್ರೆಟರಿ : ನನಗೂ ರೋಸೋಗದೆ ಗೌಡ್ರೆ. ಬಲೇ ಕಣಕಲ ಹೆಂಗಸು ಅದು. ಆ ಲೆಕ್ಕಕೊಡು, ಈ ಲೆಕ್ಕ ಕೊಡು, ಅದೆಂಗಾಯ್ತು ಇದೆಂಗಾಯ್ತು ಅಂತ ಹೇತದ್ದಕ್ಕೆ ಉಚ್ಚೆ ಹುಯ್ದಿದಕ್ಕೆಲ್ಲ ಕೊಶ್ಚನ್ ಮಾಡ್ತ ಕುಂತ್ಕತಳೆ. ನಾನು ಗೌರ್ಮೆಂಟು ಸರ್ವೆಂಟು. ಇವಳು ಕೇಳಿ ಬುಟ್ಳು ಅಂತಾ ಎಲ್ಲಾನೂ ತೋರ್ಸಿ ಸರ್ಕಾರಕ್ಕೆ ದ್ರೋಹ ಬಗೆಯಕ್ಕಾಗ್ತದ? ಕೆಲವು ತೋರಿಸೋವು ಇರಕ್ತವೆ, ಕೆಲವು ತೋರಿಸಕ್ಕಾಗದೋವು ಇರ್ತವೆ.

ಕಾಳೇಗೌಡ : ಅದ್ಸರಿ ಬುಡು, ಅದ್ನೆಲ್ಲ ಕೇಳಾಕೆ ಅವುಳ್ಯಾರಂತೆ ?

ಸೆಕ್ರೆಟರಿ : ಕೆಳ್ತ ಕುಂತದಲ್ಲ ಏನ್ಮಾಡೀರಿ.

ಕಾಳೇಗೌಡ : ಅಂಗೇನಾರ ಗಾಂಚಲಿ ಮಾಡ್ತಲೇ ಇದ್ರೆ ಅವಿಸ್ವಾಸನ ತಂದು ಕಿತ್ತಾಕ್ಬುಡಾನ ಬುಡು.

ಸೆಕ್ರೆಟರಿ : ಅದೆಂಗಾಯ್ತದೆ ಗೌಡ್ರೆ, ಇದು ರಿಸರ್ವು. ಅವಳೊಬ್ಬಳೇಯ ಎಸ್ಸಿ ಹೆಂಗಸಿರೋದು.

ಕಾಳೇಗೌಡ : ಒಳ್ಳೇ ನನ್‌ಮಗನ ಕೆಲಸ ಆಯ್ತಲ್ಲಾ...ಏನು ಮಾಡಾನ ಅಂತೀಯಾ ?

ಸೆಕ್ರೆಟರಿ : ಅವಳು ಯಾವ ಜಾತಿ ಗೌಡ್ರೆ ?

ಕಾಳೇಗೌಡ : ಜಾಡಮಾಲಿ

ಸೆಕ್ರೆಟರಿ : ಅಲ್ವಾ, ಅಧ್ಯಕ್ಷೆ ಜಾಡಮಾಲಿ ಕೆಲಸ ಮಾಡಬಾರದು ಅಂತ ಕಟ್ಟು ಮಾಡಿದ್ರಾಯ್ತು, ಬರೋ ದುಡ್ಡು ನಿಂತ ಮೇಲೆ ಅದೇನ್ ಕೊಸೀತಾಳೋ ಕೊಸೀಲಿ.

ಕಾಳೇಗೌಡ : ಅಧ್ಯಕ್ಷೆಗೆ ತಿಂಗಳಿಗೆ ಮುನ್ನೂರು ಬತ್ತದಲ್ಲಪ್ಪಾ.

ಸೆಕ್ರೆಟರಿ : ಅಧ್ಯಕ್ಷಗಿರಿ ಸಾಸ್ವತಾನಾ ಗೌಡ್ರೆ? ಇವಳು ಕೆಳಕ್ಕಿಳಿದ ಮೇಲೆ ಏನ್ಮಾಡಾಳು? ಬ್ಯಾರೆಯೋರು ಜಾಡಮಾಲಿ ಕೆಲಸ ಮಾಡ್ತಿರ್ತಾರೆ.

ಕಾಳೇಗೌಡ : ನೀನೇಳೋದೂ ಸರಿಯೆ. ಮೂಗು ಹಿಡಿದರೆ ಬಾಯಿ ತಾನಾಗೆ ಬಿಡ್ತದೆ. ಪಂಚಾಯ್ತಿ ಮೀಟಿಂಗ್‌ಗೆ ಬತ್ತೀನಿ ನಡಿ.

(ಗ್ರಾಮ ಪಂಚಾಯತಿ ಸಭೆ ನಡೆಯುತ್ತಿರುತ್ತದೆ)

ಸೆಕ್ರೆಟರಿ : ಈಗ ಮುಂದಿನ ವಿಷಯ ಸಂಪನ್ಮೂಲ ಕ್ರೂಢೀಕರಣ.

ಅಧ್ಯಕ್ಷೆ : ಅದೆಂಗೆ ಮಾಡಾದು ಅಂತ ಹೇಳ್ರಪ್ಪಾ.

ತಿಮ್ಮೇಗೌಡ : ಮನೆ ಕಂದಾಯ ಹೆಚ್ಚಿಗೆ ಮಾಡಬಹುದು.

ಕಾಳೇಗೌಡ: ಸುಮ್ನಿರಪ್ಪ ನೀನು, ಅದಾಗಾಕಿಲ್ಲ ಹೋಗಾಕಿಲ್ಲ. ಈಗ ಹೆಂಗದೋ ಹಂಗೇ ನಡ್ಕೊಂಡೋಗ್ಲಿ.

ದೊಡ್ಡೋನು : ಗಾಡಿ ಮೇಲೆ ತೆರಿಗೆ ಹಾಕಬಹುದು.

ಕಾಳೇಗೌಡ : ಸರಿ ಕಣೋ ನೀನೇಳಾದು. ಈ ತಲೆ ಮಾಸಿದೋವು ಬಂದು ತೆರಿಗೆ ಹಾಕಿದ್ರು ಅಂತ ಜನೆಲ್ಲ ಉಗೀಲಿ ಅಂತಲಾ?

ದೊಡ್ಡೋನು : ಬ್ಯಾಡಿ, ನಮ್ ಪಂಚಾಯ್ತಿ ಎಲ್ಲೇಲಿ ಸ್ಕೂಟ್ರು ಮಸ್ತಾಗವೆ. ಅವರ ಮೇಲಾದ್ರೂ ಹಾಕಿ.

ಅಧ್ಯಕ್ಷೆ : ಸ್ಕೂಟ್ರು ಓಡ್ಸೋರ್ಗೆ ವರ್ಸಕ್ಕೈದು ರೂಪಾಯಿ ದುಬಾರಿ ಏನೂ ಅಲ್ಲ, ಆಕ್ಬೈದು

ಕಾಳೇಗೌಡ : ಅಮ್ಮೋ ನಿನೇನ್ ಕಂಡಿದೀಯ ಅವರ ಕಸ್ತಾವ, ಮಾವನ ದುಡ್ಡಲಿ ಪೆಟ್ರೋಲಾಕುಸ್ಕೊಂಡು ಕುಂತವೆ ಬಡ್ಡೆತ್ತವು ಸುಮ್ನಿರು.

ತಿಮ್ಮೇಗೌಡ : ಯಾವ ತೆರಿಗೇನೂ ಬ್ಯಾಡ ಅಂದ್ರೆ ಕೆಲಸ ಮಾಡಿಸೋದು ಹೆಂಗೆ ?

ಒಬ್ಬ ಸದಸ್ಯ : ನಮ್ ಪಂಚಾಯ್ತಿ ವ್ಯಾಪ್ತೀಲಿ ಜಿಲ್ಲಾ ಪಂಚಾಯ್ತಿಯೋರು ಹದಿನೈದು ಲಕ್ಷದ ಕೆಲ್ಸ ಮಾಡ್ಸಿದಾರಂತೆ ಈ ವರ್ಸ.

ತಿಮ್ಮೇಗೌಡ : ಅವರ ಪಾಲಿನ ಕೆಲ್ಸ ಅವರು ಮಾಡವ್ರೆ. ನಮ್ ಪಾಲಿನ್ದ ಮಾಡಬಾರ್ದ ?

ದೊಡ್ಡೋನು : ಹದಿನೈದು ಲಕ್ಷದ ಕೆಲ್ಸಾವ ಎಲ್ಲಿ ಮಾಡಿದ್ದಾರಂತೆ ?

ತಿಮ್ಮೇಗೌಡ : ನಾನೂ ವಿಚಾರಿಸಿದೆ. ನಮ್ ಸ್ಕೂಲಿನ ಜಾಗ ಎಷ್ಟಿದ್ದತ್ತು?

ದೊಡ್ಡೋನು : ಒಂದು ಹತ್ತು ಹನ್ನೆರಡು ಗುಂಟೆ ಇರಬಹುದು.

ತಿಮ್ಮೇಗೌಡ : ಅಲ್ಲಿ ಕತ್ತಾಳೆ ಮೆಳೆ ಇತ್ತಲ್ಲ ಅದ ತಗಸವ್ರೆ. ಅದಕ್ಕೆಷ್ಟು ತಗುಳಬಹುದು ?

ದೊಡ್ಡೋನು : ಅಮ್ಮಮ್ಮ ಅಂದ್ರೆ ಎಂಟು ಹತ್ತು ಸಾವಿರ

ತಿಮ್ಮೇಗೌಡ : ಅದ್ಕೆ ಎರಡು ಲಕ್ಷ ಬಿಲ್ ಮಾಡಿ ಕುಂತವ್ರೆ.

ಕಾಳೇಗೌಡ : ಅದೇನ್ ದೊಡ್ಡ ವಿಸ್ಯಾ ಜೇನು ಬಿಚ್ಚೋನು ಕೈನೆಕ್ತಾನೆ ಕನಾ.

ತಿಮ್ಮೇಗೌಡ : ಇದು ಬರಿ ಕೈ ನೆಕ್ಕಿದ್ದು ಅಲ್ಲ ಗೌಡರೆ, ಜೇನನ್ನೂ ಕುಡಿದು ಕೈಯನ್ನು ನೆಕ್ಕಿರೋ ಸಮಾಚಾರ.

ಕಾಳೇಗೌಡ : ಇಂತವು ಹಿಂದೂ ಆಯಿತ್ತು ಈಗಲೂ ಆಗದೆ ಮುಂದೇನೂ ಆಯ್ತದೆ ಬುಡು.

ದೊಡ್ಡೋನು : ಹಂಗಾರೆ ಕೆರೆ ಹೂಳೆತ್ತೋದ್ರಲ್ಲೂ ಹಿಂಗೇ ಆಗದೆ !

ಒಬ್ಬ ಸದಸ್ಯೆ : ನಮ್ಮೂರೋನೆ ಕಂತ್ರಾಟುದಾರ ಅಲ್ವ ?

ತಿಮ್ಮೇಗೌಡ : ನಮ್ಮೂರೋನಾಗೋವಟ್ಗೆ ಎಪ್ಪತ್ತು ಸಾವಿರದ ಕೆಲಸಕ್ಕೆ ಒಂದೂವರೆ ಲಕ್ಷ ಮಾಡಿಕುಂಡ್ರುಸವ್ನೆ. ತುಂಡುದನಕ್ಕೆ ತನ್ನ ಹೊಲವೇನು ಬ್ಯಾರೆಯೋರ ಹೊಲವೇನು ? ಮೆಯ್ಯೋದೊಂದೇ ಅದ್ಕೆ ಗೊತ್ತಾಗೋದು. ಇದರಲ್ಲಿ ನಮ್ದೂ ತಪ್ಪಿದೆ.

ಅಧ್ಯಕ್ಷೆ : ಇದೇನಪ್ಪ ಹಿಂಗಂತಿ, ನಾವೇನು ಅವುನ್ನ ಕಂಡೋರ ದುಡ್ಡು ತಿನ್ನು ಅಂತ ಹೇಳಿದ್ರಾ?

ಕಾಳೇಗೌಡ : ಹೇಳಿಲ್ಲ, ಆದ್ರೆ ಯಾವುದಕ್ಕೆಷ್ಟಾಯ್ತು ಅಂತ ಕೇಳಬೇಕಾಗಿತ್ತು. ಮನೇಲಿ ಯಾರಿಗಾದ್ರೂ ನೂರು ರೂಪಾಯಿ ಕೊಟ್ರೆ ಯಾವ್ಯಾವುದಕ್ಕೆ ಖರ್ಚು ಮಾಡಿದೆ ಅಂತ ಕೇಳಾಕಿಲ್ವ ಹಂಗೇಯ ಇದೂವೆ.

ಅಧ್ಯಕ್ಷೆ : ಮನೆ ಸಾಮಾನಾದ್ರೆ ಇದ್ಕಿಷ್ಟು ಬೀಳ್ತದೆ ಅಂತ ಎದ್ದಟ್ಟಾಗಿ ಹೇಳಬೌದು. ಸುಳ್ಳು ಹೇಳಿದ್ರೆ ಗೊತ್ತಾಯ್ತದೆ. ಇದೆಂಗೆ ಗೊತ್ತಾದತ್ತು? ಅವನೇಳಿದ್ದು ನಾವು ಕೇಳಿದ್ದು.

ತಿಮ್ಮೇಗೌಡ : ಎಸ್ಟಿಮೇಟ್ ನೋಡುದ್ರೆ ತಿಳೀತದೆ.

ಅಧ್ಯಕ್ಷೆ : ಅದೆಲ್ಲಿ ಸಿಕ್ತದೆ ? ಬೀರಲಿ ಹಾಕಿ ಬೀಗ ಜಡಿದಿರ್ತಾರೆ.

ತಿಮ್ಮೇಗೌಡ : ಕೆಲ್ಸ ಮಾಡ್ತೂ ಜಾಗದಲ್ಲಿ ಎಸ್ಟಿಮೇಟ್ ಕಾಪಿ ಇರ್ಬೇಕು.

ಕಾಳೇಗೌಡ : ಕಂತ್ರಾಟು ಮಾಡುಸ್ತೀನಿ ಅಂತಾವ ಎಸ್ಟಿಮೇಟ ನ್ಯಾತಾಡಿಸಿ ಕೊಂಡು ಇರಾಕಾಯ್ತದ? ಅದೇನ್ ಮಾತೂಂತ ಆಡೀಯೆ ಬುಡು.

ತಿಮ್ಮೇಗೌಡ : ಎಸ್ಟಿಮೇಟ್ ಕಾಪಿ ಇಟ್ಟಿರಲೇಬೇಕು, ಕೇಳಿದಾಗ ತೋರಿಸಲೇಬೇಕು.

ದೊಡ್ಡೋನು : ಇದು ಜಿಲ್ಲಾ ಪಂಚಾಯ್ತಿ ಕೆಲ್ಸ ನಿಮ್ಗೂ ಇದ್ಕೂ ಕನೆಕ್ಷನ್ ಇಲ್ಲ ಅಂದ್ರೆ ?

ಅಧ್ಯಕ್ಷೆ : ಗ್ರಾಮ ಪಂಚಾಯತಿ ಎಲ್ಲೇಲಿ ಎಲ್ಲಿ ಕೆಲಸ ನಡೆಸಿದ್ರೂ ಪಂಚಾಯ್ತಿಗೆ ತಿಳಿಸಿದರೆ ಇರ ಕಂಡಿಸನ್ ಮಾಡಬೌದು.

ತಿಮ್ಮೇಗೌಡ : ಹೌದು ಪ್ಲಾನು ಎಸ್ಟಿಮೇಟು ಎಲ್ಲಾ ಒಂದೊಂದು ಕಾಪಿ ನಮಗೆ ಕಳಿಸಬೇಕು. ಆಗ ಇಂತದ್ದ ತಡೀಬೌದು. ಇದು ಒಂದೇ ಅಲ್ಲ ಈಗ ಎಂಪಿಗ್ರಾಂಟ್ ಬರ್ತದೆ.

ಕಾಳೇಗೌಡ : ಬರ್ತದೆ. ನಮ್ಮೂರ್ಗೂ ಬಂದದಲ್ಲಾ, ಗುಡೀನೂ ಅವ್ನೇ ಅಲ್ವ ರಿಪೇರಿ ಮಾಡ್ಸಿದ್ದು.

ತಿಮ್ಮೇಗೌಡ : ಗುಡೀಗಿಂತ ಅವಶ್ಯಕವಾದ್ದು...

ಕಾಳೇಗೌಡ : ಹಂಗಾರೆ ದೇವ್ರೇ ಬ್ಯಾಡವೇನಯ್ಯ.

ತಿಮ್ಮೇಗೌಡ : ನಾನು ಅದನ್ನು ಹೇಳ್ತಿಲ್ಲ. ಅದಕ್ಕಿಂತಲೂ ಮುಖ್ಯವಾಗಿ ನಮ್ಮ ಶಾಲೆಗೆ ಶೌಚಾಲಯ ಆಗಬೇಕಿತ್ತು.

ಕಾಳೇಗೌಡ : ಶೌಚಾಲಯ ಕಟ್ಸಿದ್ರೆ ಆಯಿತ್ತದ್ದ ಅನುಕೂಲ ಹುಡ್ಗುಗಲ್ಲ ಒಮ್ಮನಿಗೆ. ಅವರ ಕಡೆಯೋರ್‍ಗೆ ಒಂದು ಕೆಲ್ಸ ಸಿಕ್ಕೋದು.!

ಅಧ್ಯಕ್ಷೆ : ಹೂ ಕನ್ರಪ್ಪ ನಾವು ಜಾಡಮಾಲಿಗೋಳೇಯ, ಅವರಿವರ ಕಸ ಬಳಿಯೋರೇಯ ಅದಕ್ಯಾಕೆ ಚುಚ್ಚಿ ಚುಚ್ಚಿ ಮಾತಾಡೀರಿ?

ಕಾಳೇಗೌಡ : ನಮ್ಮ ಪಂಚಾಯತಿಗೆ ಗನತೆ ಗೌರವ ಅದೆ. ಅಧ್ಯಕ್ಷರು ಅದಕ್ಕೆ ತಕ್ಕನಾಗಿ ನಡ್ಕೋಬೇಕು.

ಅಧ್ಯಕ್ಷೆ : ನಾನೇನು ಅಂತ ಇನಾಯಿದ ಕೆಲಸ ಮಾಡಿಲ್ಲ ಕನ್ ತೆಗಿ.

ಕಾಳೇಗೌಡ : ಅಧ್ಯಕ್ಷರು ಕಕ್ಕಸ್ ಮನೆ ತೊಳೀತಾರೆ ಅಂದ್ರೇ....

ಅಧ್ಯಕ್ಷೆ : ತೊಳೀತಿನಿ. ನಮ್ ಕಸುಬೇ ಅದು. ಅದರಲ್ಲೇನು ತಪ್ಪು ಕಂಡ್ರಿ?

ಕಾಳೇಗೌಡ : ಕಸುಬೇ ಇರಬೈದು. ಅಧ್ಯಕ್ಷರಾದ ಮ್ಯಾಕೆ ಇಂತ ಇನಾಯದ ಕೆಲಸ ಮಾಡಬಾರದು. ಅದ ಮಾಡುದ್ರೆ ನಾಯಿಯ ಸಿಮ್ಮಾಸನದ ಮ್ಯಾಲೆ ಕೂರಿಸಿದಂಗಾಗ್ತದೆ.

ಅಧ್ಯಕ್ಷೆ : ಈ ಸಿಮ್ಮಾಸನವ ನಾನು ಬೇಕು ಅಂತ ಕನವರಿಸಲಿಲ್ಲ ಕನ, ನಾನು ಬ್ಯಾಡ ಬ್ಯಾಡ ಅಂದ್ರೂ ಎಲಕ್ಸನ್‌ಗೆ ನಿಲ್ಸಿದ್ರಿ.

ತಿಮ್ಮೇಗೌಡ : ಗೌಡ್ರೆ ನೀವು ಹಿಂಗೆಲ್ಲ ಮಾತಾಡಬಾರದು. ಆಯಮ್ಮ ಸುಳ್ಳು ತಟವಟ ಕಂಡೋಳಲ್ಲ, ಅವಳ ಅನ್ನ ಅವಳು ಹುಟ್ಟಿಸ್ಕಂತಾಳೆ.

ಸದಸ್ಯರು : ಹೌದು, ಹೌದು ಗೌಡರು ಇಂತ ಮಾತನಾಡಬಾರ್‍ದು.

ತಿಮ್ಮೇಗೌಡ : ಈಗ ಆ ಸುದ್ದಿ ಬ್ಯಾಡಿ. ಗುಡಿ ರೀಪೇರಿ, ಸ್ಕೂಲ್ ಕಾಂಪೌಂಡು ಕಟ್ಸಿದ್ದು ಪಂಚಾಯ್ತಿ ಗಮನಕ್ಕೇ ಬಂದಿಲ್ಲ. ಇದಕ್ಕೆ ತಗುಲಿದ ಖರ್ಚು ಎಷ್ಟುಂತಾನೂ ಗೊತ್ತಿಲ್ಲ. ಇನ್ನು ಮುಂದಾದರೂ ಇದು ನಡೆಯಬೇಕು. ಹಂಗಂತ ಒಂದು ನಿರ್ಣಯ ಮಾಡಿ.

ಸದಸ್ಯರು : ಮಾಡಿಸಿ, ಮಾಡಿಸಿ.

ತಿಮ್ಮೇಗೌಡ : ಅಧ್ಯಕ್ಷರೆ ಪಂಚಾಯ್ತಿಗೆ ಖರೀದಿಸಿದ ಸಾಮಾನು ಅದಕ್ಕೆ ತಗುಲಿದ ಖರ್ಚು ಇದರ ವಿವರಾನ ಗೋಡೆ ಮೇಲೆ ಬರೆಸಬೇಕು ಅಂತ ತೀರ್ಮಾನ ಆಗಿತ್ತಲ್ಲ ಅದೇನು ಮಾಡಿದ್ರಿ?

ಅಧ್ಯಕ್ಷೆ : ಬರಿ ಅಂದಿದ್ನಲ್ಲ ಸೆಕೆಟ್ರಿ ಬರೀಲಿಲ್ವ?

ಸೆಕ್ರೆಟರಿ : ಬರ್ದಿದ್ದೆ....ಈ ಹಾಳು ಪೋಲಿ ಹೈಕ್ಳು ಅಳ್ಸಾಕ್ಬುಟ್ಟವೆ.

ಕಾಳೇಗೌಡ : ಆ ಆರ್‍ಕಾಸು ಮೂರ್‍ಕಾಸಿನ ಲೆಕ್ಕಾವ ಬರೀತಾ ಕುಂತ್ಕೋ...

ಅಧ್ಯಕ್ಷೆ : ಆರ್‍ಕಾಸೋ ಮೂರ್‍ಕಾಸೋ ಬರೀಲೇ ಬೇಕು.ನಾವೇನು ಮಾಡ್ತಿದೀವಿ ಅಂತ ಎಲ್ಲಾರ್ಗೂ ಗೊತ್ತಾಗ್ಬೇಕು.

ಸೆಕ್ರೆಟರಿ : ಎಲ್ಲ ದಾಖಲೇನೂ ಜನರ ಮುಂದೆ ಇಡೋದೂ ಅಂದ್ರೆ...ಕೆಲವು ಗೌಪ್ಯವಾದೋವು ಇರ್ತವೆ.....

ತಿಮ್ಮೇಗೌಡ : ರೀ ಸೆಕೆಟ್ರಿ ಇದು ಪ್ರಜಾಪ್ರಭುತ್ವರೀ. ಇಲ್ಲಿ ಜನರಿಂದ ಮುಚ್ಚಿಡುವುದು ಏನೂ ಇಲ್ಲ ಇರಬಾರದು.

ಸದಸ್ಯರು : ಹೌದು, ಹೌದು. □



ಶಬ್ದಗಳ ಮಧ್ಯದಲ್ಲೊಂದು ಮೌನ

ಶತ ಶತಮಾನಗಳ
ಬೆಳಕುಗಳು ಕರಗಿ
ಈಗ ಉಳಿದಿರುವುದು
ದಟ್ಟಕತ್ತಲೆ ಮಾತ್ರ
ಎಲ್ಲ ನೋಟಗಳು ಮಂದವಾಗಿ
ಈಗ ಕೇಳುತ್ತಿರುವುದು ಶಬ್ದಗಳು ಮಾತ್ರ.

ಹೊತ್ತಲ್ಲದ ಹೊತ್ತಲ್ಲಿ
ಕಳ್ಳಬೆಕ್ಕು ಹಾಲು ಕುಡಿಯುವ ಸದ್ದು
ಹಿಂಡು ಹಿಂಡು ಇಲಿಗಳು ದಡಬಡಾಯಿಸಿ ಓಡುವ ಸದ್ದು
ತಳುಕು ಹಾವುಗಳ ಮುರಿವ ದೇಹಗಳ ಸರಬರಾಡುವ ಸದ್ದು
ಇಕ್ಕಟ್ಟು ಬೀದಿಯ ಒತ್ತೊತ್ತು ಸಂಸಾರಗಳ ಗುಟ್ಟು ಮಾತುಗಳ ಸದ್ದು
ಊಹಿಸಿದ ವದಂತಿಗಳ ಮೋಹಿಸಿದ ಉತ್ಕಟಗಳ ಖಾಲಿ ಸದ್ದು
ಮಧ್ಯರಾತ್ರಿಯ ಕಳ್ಳ ಗೋಡೆಹಾರಿ ಓಡಿಹೋದ ಸದ್ದು.

ಅಚಾನಕವಾಗಿ ಎಚ್ಚೆತ್ತು ಬೆಚ್ಚಿಬಿದ್ದ ಕಂದಮ್ಮನ ಕಿರುಚು
ಮುಂಜಾವಿನ ತಂಗಾಳಿಗೆ ಮೈತೆರೆದು ಇಷ್ಟಿಷ್ಟೆ ಅರಳಿದ ಹೂವಿನ ಸದ್ದು
ಧ್ಯಾನಕ್ಕೆ ಮುನ್ನ ಸ್ನಾನಕ್ಕಿಳಿದ ಸನ್ಯಾಸಿಯ ಹೊಳೆಯ ಜುಳುಜುಳು ಸದ್ದು
ಎಲ್ಲ ಸದ್ದುಗಳು ಕರಗಿ ಎಲ್ಲ ಮೌನಗಳು ಘನಗೊಂಡು
ಮಾತು ಮೌನಗಳ ನಡುವಿನ ಗೆರೆ ಅಳಿಸಿಹೋದ ಸದ್ದು
ಫಕ್ಕನೆ ಮಿಂಚಿ ಮರೆಯಾದ ಜ್ಞಾನವೃಕ್ಷದ ಗಾಳಿಬೀಸಿನ ಸದ್ದು.

ಇಲ್ಲಿ- ಈ ಮರಳುಗಾಡಿನಲ್ಲಿ ಮೌನ ಕಲಕಿ ಬಾಂಬುಗಳು ಸ್ಫೋಟಿಸುವ ಸದ್ದು
ಕಾಲು ಮಡಚಿ ಕೈ ಜೋಡಿಸಿ ದುವಾಕ್ಕೆ ಕುಳಿತವರ ದೇಹಗಳು ಛಿದ್ರಛಿದ್ರವಾಗಿ ಸಿಡಿದ ಸದ್ದು
ತೈಲಬಾವಿಗಳೆಲ್ಲ ಬೆಂಕಿ ನಾಲಗೆ ಚಾಚಿ ಹೊಗೆ ದುಪ್ಪಟಿಗಳ ಹೊದ್ದು ಉಸಿರುಕಟ್ಟಿದ ಸದ್ದು
ಬಿರುಗಾಳಿ ಎದ್ದು ಮರಳುಗಾಡಿಗೆ ಮರಳುಗಾಡೇ ಎದ್ದು ಘೋರ ಚೀರಿದ ಸದ್ದು
ಕೊನೆಗಾಲದ ಪ್ರಳಯ ನೆಲ ಜಲ ಮುಗಿಲುಗಳನ್ನೆಲ್ಲ ನುಂಗಿ ನೆಕ್ಕುವ ಸದ್ದು.

ಕರ್ಬಾಲಾಕ್ಕೆ ಹೊರಟ
ತಬ್ಬಲಿ ತಾಯ



ಹೆಗಲ ಮೇಲೆ
ಅನಾಥ ಕಂದಮ್ಮ
ಮುಂದೆ ಬಿದ್ದುಕೊಂಡ
ಕೊನೆ ಇರದ ಮರಳುಗಾಡು
ಬೆದರಿಸುವ ಬಿರುಗಾಳಿ
ಛಲಬಿಡದೆ ನಡೆಯುತ್ತಿದೆ
ನಂಬಿಕೆಯ ಹೆಜ್ಜೆ.

ಓ! ಮನುಕುಲವೆ
ಉಕ್ಕಲಿ ನಿನ್ನ ಪ್ರೀತಿಯ
ಜೀವಜಲ ಇಲ್ಲೆಲ್ಲ
ಬಾಂಬುಗಳು ಬಿದ್ದ ಕಂದಕಗಳಲ್ಲೆಲ್ಲ
ಎದ್ದು ನಿಲ್ಲಲಿ ಖರ್ಜೂರದ ಗಿಡ

○ ಜಿ.ಪಿ. ಬಸವರಾಜು

"An unfilled vacancy may not cause as much harm as a wrongly filled vacancy". ಈ ದೇಶದಲ್ಲಿ 'ಮೆರಿಟ್'ಅನ್ನು ಮಾತ್ರ ಮಾನ್ಯ ಮಾಡಬೇಕು, ಮೆರಿಟ್ ಇಲ್ಲದ ಅನರ್ಹರಿಗೆ (ಮೀಸಲು ಜನಾಂಗಗಳಿಗೆ) ಸ್ಥಾನ ನೀಡುವ ಬದಲು ಆ ಸ್ಥಾನವನ್ನು ಖಾಲಿಯಾಗಿಯೇ ಉಳಿಸಿಕೊಳ್ಳುವುದು ಕಡಿಮೆ ಅಪಾಯಕಾರಿ ಎಂಬ ಅರ್ಥದಲ್ಲಿ ಈ ದೇಶದ ಸುಪ್ರಿಂಕೋರ್ಟ್‌ನ ಮುಖ್ಯ ನ್ಯಾಯ ಮೂರ್ತಿಯಾಗಿದ್ದ ಜಸ್ಟೀಸ್ ಆನಂದ್ ಆಡಿದ ಮಾತುಗಳಿವು!

ಇದೇ ರೀತಿ ಮಂಡಲ್ ಕಮೀಷನ್‌ಗೆ ಸಂಬಂಧಿಸಿದ ಮೊಕದ್ದಮೆಯಲ್ಲಿ ಈ ದೇಶದ 'ಸಂವಿಧಾನ ಪಂಡಿತ' ಎಂದು ಹೆಸರಾಗಿರುವ ನಾನಿ ಪಾಲ್ಕಿ ವಾಲ "Backward class editors" ಎಂಬ ಅಣಿಮುತ್ತನ್ನು ಎದರಿಸುತ್ತಾನೆ. ಆಂಧ್ರಪ್ರದೇಶ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಜಸ್ಟೀಸ್ ಯೋಗೇಶ್ವರ ದಯಾಲ್ ಎಂಬ 'ಬೃಹಸ್ಪತಿ' ನಾಯ್ಯಾಂಗ ಪೀಠದಲ್ಲಿಯೇ ಕುಂತು "What nonsense these reservations" ಎಂದು ಕೆಂಡ ಕಾರುತ್ತಾನೆ.

ಬುದ್ಧಿ ಆಧಾರಿತ ಮೆರಿಟನ್ನೇ 'ಮೆರಿಟ್' ಎಂದುಕೊಂಡಿರುವ ಮೇಲಿನ ಸರ್ವಜ್ಞರೆಲ್ಲಾ ಶ್ರಮ ಆಧಾರಿತ 'ಮೆರಿಟ್'ಅನ್ನು ಪ್ರಜ್ಞಾಪೂರ್ವಕವಾಗಿ ಮರೆಯುತ್ತಾರೆ.

○ ಸಿ.ಎಸ್. ದ್ವಾರಕಾನಾಥ್



ಮನುವಾದಿಗಳ ದಟ್ಟ ಛಾಯೆ ಆವರಿಸಿರುವಾಗ ಈ ಆಶಯ ಯಾವ ಮಟ್ಟದಲ್ಲಿ ಕಾರ್ಯರೂಪಕ್ಕೆ ಬರಲು ಸಾಧ್ಯ?

ಇಲ್ಲಿ ಮೆರಿಟ್ ಮತ್ತು ದಕ್ಷತೆಯ ಮಾತನಾಡುತ್ತಿರುವವರಿಗೆ ಈ ದೇಶದ ದಮನಿತರ ನೋವು, ನಿಟ್ಟುಸಿರುಗಳು ಅರ್ಥವಾಗಲು ಸಾಧ್ಯವೇ ಇಲ್ಲ. ಅಂತೆಯೇ ಸಾಮಾಜಿಕ ನ್ಯಾಯದ ಪ್ರಾಥಮಿಕ ಪಾಠಗಳನ್ನು ಅರಿಯದ ಈ ದೇಶದ ಹೈಕೋರ್ಟ್ ಮತ್ತು ಸುಪ್ರಿಂಕೋರ್ಟ್ ನ್ಯಾಯಮೂರ್ತಿಗಳು ಆರಂಭದಿಂದಲೂ ಈ ದೇಶದ ಬಹುಜನರ ವಿರುದ್ಧವಾಗೇ ತೀರ್ಪುಗಳನ್ನು ನೀಡುತ್ತಾ ಬಂದಿದ್ದಾರೆ.

೧೯೫೧ರಲ್ಲಿ ಬಂದ ಚಂಪಕಂ ದೊರೆ ರಾಜ್ ಪ್ರಕರಣದಲ್ಲಿ ಸುಪ್ರಿಂಕೋರ್ಟ್ ದಲಿತರಿಗೆ ಉನ್ನತ ಶಿಕ್ಷಣದಲ್ಲಿ ಪ್ರವೇಶ ಮೀಸಲಾತಿ ನೀಡುವುದನ್ನು ವಿರೋಧಿಸಿ ತೀರ್ಪು ನೀಡಿತು. ಇದಾದ ನಂತರ ಸತತವಾಗಿ ದಲಿತ ವಿರೋಧಿ ತೀರ್ಪುಗಳು ಬರತೊಡಗಿದವು. ೧೯೬೩ರಲ್ಲಿ ನಡೆದ ಬಾಲಾಜಿ ಪ್ರಕರಣದಲ್ಲಿ ದಲಿತರಿಗೆ ಮೀಸಲಾತಿ ಪ್ರಮಾಣ ೫೦% ಮೀರಬಾರದು ಎಂಬ ತೀರ್ಪು ಬಂತು. ಆನಂತರದಲ್ಲಿ ಉನ್ನತ ಶಿಕ್ಷಣ ಪ್ರವೇಶಕ್ಕೆ ಮೀಸಲಾತಿ ನೀಡಿದರೆ ದಕ್ಷತೆಗೆ ಧಕ್ಕೆ ಬರುತ್ತದೆಂಬ ನಿವೇದಿತಾ ಜೈನ್ ಪ್ರಕರಣದಲ್ಲಿ ತೀರ್ಪು ನೀಡಲಾಯಿತು. ಇದಾದ ನಂತರ ಪ್ರೀತಿ ಶ್ರೀವಾಸ್ತವ

ನ್ಯಾಯಾಂಗದ 'ಮೆರಿಟ್'

ಇವರ 'ಮೆರಿಟ್' ಎಂಬ ವಂಚನೆಯನ್ನು The steam of River ಎಂಬ ಪುಸ್ತಕ ಬರೆದ ವಿಲಿಯಂ ಬೆತೋವೆನ್ ಮತ್ತು ಡೆರಿಕ್ ಬೋಕ್ ಎಂಬ ಬರಹಗಾರರಲ್ಲಿ ಡೆರಿಕ್ ಬೋಕ್ "Merit, like preference and discrimination, is a word that has taken on so much baggage we may have to reinvent it or find a substitute" ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ ನಾವಿಂದು ಯೋಚಿಸಬೇಕಾಗಿದೆ.

ಹೈಕೋರ್ಟ್ ಮತ್ತು ಸುಪ್ರಿಂಕೋರ್ಟ್‌ಗಳಿಗೆ ನ್ಯಾಯ ಮೂರ್ತಿಗಳನ್ನು ಆಯ್ಕೆ ಮಾಡುವಾಗ ದಲಿತರಿಗೆ, ಹಿಂದುಳಿದವರಿಗೆ ಹಾಗೂ ಅಲ್ಪ ಸಂಖ್ಯಾತರಿಗೆ ಮೀಸಲಾತಿಯನ್ನು ಇಡಬೇಕೇ? ಅಥವಾ ಬೇಡವೆ? ಎಂಬುದು ಇಂದು ದೇಶಾದ್ಯಂತ ಚರ್ಚೆಯಾಗುತ್ತಿರುವ ವಿಷಯ. ಈ ಬಗ್ಗೆ ಈ ವರ್ಷದ ಮೊದಲಲ್ಲಿ ದೆಹಲಿಯಲ್ಲಿ ನಡೆದ ಎಸ್.ಸಿ/ಎಸ್.ಟಿ ಹಾಗೂ ಓಬಿಸಿಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ಕೆಲವು ಚಾರಿತ್ರಾರ್ಹ ತೀರ್ಮಾನಗಳನ್ನು ತೆಗೆದುಕೊಳ್ಳ ಲಾಯಿತು. ಈ ತೀರ್ಮಾನಗಳ ಪ್ರಕಾರ ಹೈಕೋರ್ಟ್ ಮತ್ತು ಸುಪ್ರಿಂಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡುವಾಗ ದಲಿತರಿಗೆ, ಹಿಂದುಳಿದವರಿಗೆ ಹಾಗೂ ಅಲ್ಪ ಸಂಖ್ಯಾತರಿಗೆ ಮೀಸಲಾತಿ ನೀಡಬೇಕು ಎಂಬ ಒತ್ತಾಯದೊಂದಿಗೆ ನ್ಯಾಯಮೂರ್ತಿಗಳನ್ನು ಹೈಕೋರ್ಟ್ ಮತ್ತು ಸುಪ್ರಿಂಕೋರ್ಟ್‌ಗಳಿಗೆ ಆಯ್ಕೆ ಮಾಡುವ ರಾಷ್ಟ್ರೀಯ ನ್ಯಾಯಾಂಗ ಆಯೋಗದ ಸದಸ್ಯರಲ್ಲಿ ದಲಿತರಿಗೆ, ಹಿಂದುಳಿದವರಿಗೆ ಹಾಗೂ ಅಲ್ಪಸಂಖ್ಯಾತರಿಗೆ ಕಡ್ಡಾಯವಾಗಿ ಪ್ರಾತಿನಿಧ್ಯ ಕೊಡಬೇಕು ಎಂಬ ಒತ್ತಾಯವಿತ್ತು. ಇದು ಕೇವಲ ಒತ್ತಾಯವಾಗೇ ಉಳಿದುಬಿಡುವ ಸಾಧ್ಯತೆಯೇ ಹೆಚ್ಚು ಯಾಕೆಂದರೆ ಈ ಒತ್ತಾಯವನ್ನು ಕಾರ್ಯರೂಪಕ್ಕೆ ತರುವ ಮಾನಸಿಕ ಸಿದ್ಧತೆ ನ್ಯಾಯಾಂಗದ ಹಿರಿಯ ತಲೆಗಳಲ್ಲಿ ಇಲ್ಲ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಎಲ್ಲೆಡೆ

ಪ್ರಕರಣದಲ್ಲಿ ಸ್ನಾತಕೋತ್ತರ ಹಂತದಲ್ಲಿ ಅಭ್ಯರ್ಥಿಗಳು ಸಿಗದಿದ್ದರೆ ಆ ಹುದ್ದೆಗಳನ್ನು ಸಾಮಾನ್ಯ ಹುದ್ದೆ ಗಳೆಂದು ಪರಿಗಣಿಸಬೇಕು ಎಂಬ ವಸಂತಕುಮಾರ್ ಪ್ರಕರಣ ಗಳಂತೆ ಅನೇಕ ತೀರ್ಪುಗಳು ದಲಿತರನ್ನು ದಮನಿಸುವತ್ತ ದಾಪುಗಾಲಿಟ್ಟವು.

ದಲಿತರಿಗೆ ಬಡ್ತಿಯಲ್ಲಿ ಮೀಸಲಾತಿ ಅರ್ಹತೆಗಳನ್ನು ಸಡಿಲಿಸುವುದು ಅರ್ಹವಲ್ಲ ಎಂಬ ಇಂದ್ರ ಸಹಾನಿ ಪ್ರಕರಣದ ತೀರ್ಪಿನಲ್ಲಿ ಹೇಳಿರುವುದು ಒಂದಷ್ಟು ಬೆಳಕಿನ ಕಿರಣ ತೋರುತ್ತಾದರೂ ಈ ತೀರ್ಪಿನಲ್ಲಿ ನೀಡಲಾದ ೫ ವರ್ಷಗಳು, ಈಗಿರುವ ಮೀಸಲಾತಿ ನೀತಿಯೇ ಮುಂದುವರೆಯುತ್ತದೆ ಎಂದು ಹೇಳಿದರೂ ಕೂಡ ಬಂದ ವಿನೋದ್ ಕುಮಾರ್ ಪ್ರಕರಣದಲ್ಲಿ ಉನ್ನತ ಹುದ್ದೆಗೆ ಬರುವ ದಲಿತ ನೌಕರರಿಂದ ಆಡಳಿತದಲ್ಲಿ ದಕ್ಷತೆ ಕಾಪಾಡಿಕೊಳ್ಳಲಾಗದು ಎಂಬ ತೀರ್ಪು ಹೊರಬಿತ್ತು!

೧೯೯೫ರಲ್ಲಿ ಹೊರಬಂದ ಸಬರೂಲಿ ಪ್ರಕರಣದಲ್ಲಿ ಸುಪ್ರಿಂಕೋರ್ಟ್ ಯವುದೋ ಶ್ರೇಣಿಯಲ್ಲಿ ಬಡ್ತಿಯಲ್ಲಿ

ಅಥವಾ ನೇಮಕಾತಿಯಲ್ಲಿ ಕನಿಷ್ಠ ಮೀಸಲಾತಿ ಪ್ರಮಾಣಕ್ಕೆ ಕೊರತೆ ಇರುವ ಪ್ರಮಾಣದಲ್ಲಿ ಮಾತ್ರ ಮೀಸಲಾತಿಯನ್ನು ಗುರ್ತಿಸಿ, ಭರ್ತಿ ಮಾಡತಕ್ಕದ್ದು ಎಂದು ಹೇಳಿತು. ಅಂದರೆ ಸರ್ಕಾರಿ ಸೇವೆಯಲ್ಲಿ ಯಾವುದೇ ಶ್ರೇಣಿಯಲ್ಲಿ ನಿಗದಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ದಲಿತರು ಪ್ರಾತಿನಿಧ್ಯ ಹೊಂದಲಾಗದು ಎಂದಂತಾಯಿತು! ಇದೇ ರೀತಿ ಹುದ್ದೆ ಒಂದೇ ಇದ್ದರೆ ಅಲ್ಲಿ ಮೀಸಲಾತಿ ಅಳವಡಿಸತಕ್ಕದ್ದಲ್ಲ ಎಂಬ ತೀರ್ಪು ಪ್ಯಾಕಲ್ಟಿ ಅಸೋಸಿಯೇಷನ್ ಪ್ರಕರಣದಲ್ಲಿ ಹೊರಬಂತು. ಇದೇ ರೀತಿ ಸೇವಾ ಹಿರಿತನಕ್ಕೆ ಸಂಬಂಧ ಪಟ್ಟಂತೆ ದಲಿತ ಅಭ್ಯರ್ಥಿಯ ಸೇವಾ ಹಿರಿತನವು ಹಿಂದಿನ ಶ್ರೇಣಿಯಲ್ಲಿ ಅವರಿಗಿಂತ ಹಿರಿಯರಾಗಿದ್ದ ಸಾಮಾನ್ಯ ಅಭ್ಯರ್ಥಿ ಬಡ್ತಿ ಪಡೆದಾಗ ಕಳೆದುಹೋಗುತ್ತದೆ ಎಂಬ ತೀರ್ಪನ್ನು ವೀರಪಾಲ್ ಸಿಂಗ್ ಹಾಗೂ ಅಜಿತ್‌ಸಿಂಗ್ ಪ್ರಕರಣದಲ್ಲಿ ಹೊರಡಿಸಲಾಯಿತು. ಇದೇ ರೀತಿಯಲ್ಲಿ ಸುಪ್ರಿಂ ಕೋರ್ಟ್ ತೆಗೆದುಕೊಂಡ ದಲಿತ ವಿರೋಧಿ ನಿಲುವು ಅದರ ತದ್ವಿರುದ್ಧದ ನಿಲುವುಗಳು, ದ್ವಂದ್ವ ನಿಲುವುಗಳೇ ಮುಂದಾಗುವುದನ್ನು ಸತತವಾಗಿ ಕರ್ಮಚಾರಿ ಪ್ರಕರಣ, ಜಗದೀಶ ಲಾಲ್ ಪ್ರಕರಣ, ವೀರಲಾಲ್ ಸಿಂಗ್! ಪ್ರಕರಣ, ಜಗನ್ನಾಥನ್ ಪ್ರಕರಣ ಅದಕ್ಕೂ ಹಿಂದೆ ಬಂದ ರಂಗಾಚಾರಿ ಪ್ರಕರಣ ಎಂಬಿತ್ಯಾದಿಯಾಗಿ ಮುಂದುವರೆಯುತ್ತವೆ.

ದಲಿತರ, ಹಿಂದುಳಿದವರ ವಿರುದ್ಧ ತೀರ್ಪುಗಳೇ ಹೀಗಿರುವಾಗ ಅದರ ತೀರ್ಪು ನೀಡುವ ಸ್ಥಾನವನ್ನು ದಲಿತರಿಗೆ ಹೇಗೆ ನೀಡಲು ಸಾಧ್ಯ? ನ್ಯಾಯಾಂಗಗಳಲ್ಲಿ ಮೀಸಲಾತಿ ನೀಡಲು 'ದಕ್ಷತೆ'ಯೇ ಪ್ರಮುಖ ಅಂಶ ಎಂಬುದನ್ನಿಲ್ಲಿ ನಮ್ಮಂತವರು ಅರ್ಥಮಾಡಿಕೊಳ್ಳಬೇಕು! ಹಾಗಾದರೆ ದೇಶದ ಹೈಕೋರ್ಟ್ ಹಾಗೂ ಸುಪ್ರಿಂಕೋರ್ಟುಗಳಲ್ಲಿ ನ್ಯಾಯಾಧೀಶರನ್ನು ನೇಮಿಸಲು ಯಾವ ರೀತಿಯ ದಕ್ಷತೆ, ಅರ್ಹತೆ, ಮೆರಿಟ್‌ಗಳನ್ನು ಪಾಲಿಸುತ್ತಾರೆ?

ಹೈಕೋರ್ಟ್ ಮತ್ತು ಸುಪ್ರಿಂಕೋರ್ಟ್‌ಗಳಿಗೆ ನ್ಯಾಯಾಧೀಶರನ್ನು ನೇಮಿಸಲು ಸಂವಿಧಾನದ ಅನುಚ್ಛೇದ ೧೨೪ ರಂತೆ ಹಾಲಿ ನ್ಯಾಯಾಧೀಶರೊಡನೆ ಚರ್ಚಿಸಿ, ಹೊಸ ನ್ಯಾಯಾಧೀಶರನ್ನು ನೇಮಿಸಲು ಅಧಿಕಾರ ರಾಷ್ಟ್ರಪತಿಯವರಿಗಿದೆ ಆದರೆ ವಾಡಿಕೆಯಲ್ಲಿ ಈ ಯಾವುದೂ ಆಗುವುದಿಲ್ಲ, ಹಾಲಿ ನ್ಯಾಯಾಧೀಶರು ಹೊಸ ನ್ಯಾಯಾಧೀಶರಾಗಲು ಅರ್ಹ'ರಾದವರ ಪಟ್ಟಿಯನ್ನು ರಾಷ್ಟ್ರಪತಿಯವರಿಗೆ ಕಳುಹಿಸುತ್ತಾರೆ. ರಾಷ್ಟ್ರಪತಿಯವರು ಈ ಪಟ್ಟಿಯನ್ನು ಅನುಮೋದಿಸಿ ಮುದ್ರೆ ಒತ್ತಿ ಕಳಿಸುತ್ತಾರೆ! ಇಲ್ಲಿ ಯಾವುದೇ ರೀತಿಯ ಪರೀಕ್ಷೆಯಿಲ್ಲ, ಸಂದರ್ಶನವಿಲ್ಲ, ಕೆಲ ನ್ಯಾಯಾಧೀಶರೇನೋ ಕೆಳಗಿನ ನ್ಯಾಯಾಲಯಗಳಿಂದ ಹೈಕೋರ್ಟಿಗೆ ಬಡ್ತಿ ಪಡೆಯುತ್ತಾರೆ. ಆದರೆ ನೇರವಾಗಿ ಹೈಕೋರ್ಟ್ ನ್ಯಾಯಮೂರ್ತಿಯವರನ್ನು ನೇಮಿಸಿಕೊಳ್ಳಲು ಪಾಲಿಸುವ ಮಾನದಂಡಗಳೇನು? ಒಬ್ಬ ವ್ಯಕ್ತಿ ವಕೀಲನಾಗುವಾಗ ಯಾವುದೇ ಪಕ್ಷಕ್ಕೆ ದುಡಿದಿದ್ದರೆ ಆ ಪಕ್ಷ ಅಧಿಕಾರಕ್ಕೆ ಬಂದಾಗ ಆ ವಕೀಲ ಸರ್ಕಾರಿ ವಕೀಲನಾಗಿ ನೇಮಕಗೊಳ್ಳುತ್ತಾನೆ. ಅದೇ ಪಕ್ಷ ಕೇಂದ್ರದಲ್ಲೂ ಅಧಿಕಾರಕ್ಕೆ ಬಂದರೆ ಆ ವಕೀಲನಿಗೆ ಸಾಕಷ್ಟು ಪ್ರಭಾವವಿದ್ದೆಡೆ ಹೈಕೋರ್ಟ್ ಜಡ್ಜ್ ಆಗುತ್ತಾನೆ!

ಪ್ರಜೆಗಳ ಹಕ್ಕುಗಳನ್ನು ರಕ್ಷಿಸಿ, ಸರ್ಕಾರದ ನಿಯಂತ್ರಣದ ಜತೆಗೆ ಪ್ರಜಾತಂತ್ರ ವ್ಯವಸ್ಥೆಯ ಆಶಯ ಮತ್ತು ಸಂವಿಧಾನಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವುದು ಭಾರತ ನ್ಯಾಯಾಂಗ ವ್ಯವಸ್ಥೆಯ ಕರ್ತವ್ಯ. ಆದರೆ ಇತ್ತೀಚೆಗೆ ನ್ಯಾಯಾಂಗ ಕೊಡುತ್ತಿರುವ ತೀರ್ಪುಗಳು, ತೆಗೆದುಕೊಳ್ಳುತ್ತಿರುವ ನಿಲುವುಗಳು ಸಾಕಷ್ಟು ಚರ್ಚಾಸ್ಪದವಾಗುತ್ತಿರುವುದರಲ್ಲಿ ಎರಡು ಮಾತಿಲ್ಲ. ಬುದ್ಧಿಮತ್ತೆ ಮತ್ತು ಮೆರಿಟ್‌ನ ಹೆಸರಿನಲ್ಲಿ ನ್ಯಾಯಾಂಗದಲ್ಲಿ ಉನ್ನತ ಸ್ಥಾನ ಪಡೆಯುತ್ತಿರುವ ಬ್ರಾಹ್ಮಣರು-ಬನಿಯಾಗಳು ಹಾಗೂ ಅಧಿಕವಾಗಿರುವ ಅದೇ ಜಾತಿಯ ಶಾಸಕಾಂಗ-ಕಾರ್ಯಾಂಗದೊಂದಿಗಿನ ಕಬೂಲಿನಿಂದಾಗಿ ಈ ದೇಶದ ಬಹುಸಂಖ್ಯಾತರ ಬದುಕನ್ನು ಬರ್ಬಾದು ಮಾಡಲಾಗುತ್ತಿದೆ.

ಇನ್ನೊಂದು ವಿಧಾನವೆಂದರೆ, ಜಾತಿ ಮೂಲಕ ಒಬ್ಬ ವ್ಯಕ್ತಿಯನ್ನು ನ್ಯಾಯಮೂರ್ತಿ ಸ್ಥಾನಕ್ಕೇರಿಸುವುದು! ಈ ಕಾರಣಕ್ಕೆ ಮುಂದೆ ಜಡ್ಜ್ ಆಗಬೇಕಾದ ವ್ಯಕ್ತಿಯನ್ನೂ ಆಯಾ ಜಾತಿಯ ವಕೀಲರು 'ಪ್ರೋಟ್' ಮಾಡತೊಡಗುತ್ತಾರೆ!

ಈಗೀಗ ಹೈಕೋರ್ಟ್ ನ್ಯಾಯಮೂರ್ತಿಗಳಾಗಬೇಕಾದವರು ಕನಿಷ್ಠ ಲಜ್ಜೆ ಕೂಡ ಇಲ್ಲದೆ ರಾಜಕಾರಣಿಗಳ, ಮಠಾಧಿಪತಿಗಳು ಲೆಟರ್‌ಗಳನ್ನಿಡಿದು ದೆಹಲಿಗೆ ತೀರ್ಥ ಯಾತ್ರೆ ಹೋಗುತ್ತಾರೆ. ದೆಹಲಿಯಲ್ಲಿರುವ ಸುಪ್ರಿಂಕೋರ್ಟ್ ನ್ಯಾಯಾಧೀಶರಿಗೆ ಅಡ್ಡಬೀಳುತ್ತಾರೆ. ತಾನು ನ್ಯಾಯಮೂರ್ತಿ ಆಗಬೇಕೆಂದು ತಿರುಪತಿ, ಮಂತ್ರಾಲಯ, ಶಬರಿ ಮಲೈಗಳಿಗೆ ಹೊತ್ತು ಅಂಡಲೆಯುತ್ತಾರೆ. ಇದೂ ಇಲ್ಲಿನ 'ಮೆರಿಟ್!' ಸಾಮಾಜಿಕ ನ್ಯಾಯದ ಪರ ಇಂತವರು ಕನಸಿನಲ್ಲೂ ಬರಲಾರರು. ಈ ಎಲ್ಲದರೊಂದಿಗೆ ಈ ದೇಶದಲ್ಲಿ ನ್ಯಾಯಮೂರ್ತಿಯಾಗಲು ಬೇರೆಲ್ಲಾ ಅರ್ಹತೆಗಳಿಗಿಂತಲೂ 'ಜಾತಿ' ಎಂಬ ಅರ್ಹತೆ ಬಲು ಮುಖ್ಯ.

ಈ ಕಾರಣದಿಂದಲೇ ಇವರು ಈ ದೇಶದ ಅತ್ಯುನ್ನತ ನ್ಯಾಯಾಲಯವೆನಿಸಿಕೊಂಡ ಸುಪ್ರಿಂಕೋರ್ಟಿನಲ್ಲಿ ೨೬ ಮಂದಿ ನ್ಯಾಯಮೂರ್ತಿಗಳಲ್ಲಿ ೮ ಮಂದಿ ಬ್ರಾಹ್ಮಣರು, ೬ ಮಂದಿ ಕಾಯಸ್ತರು, ೨ ಮಂದಿ ಬನಿಯಾಗಳು ಇದ್ದಾರೆ. ಆದರೆ ಕೇವಲ ಆರು ಮಂದಿ ಮಾತ್ರ ಒಟ್ಟಾರೆ ಅಬ್ರಾಹ್ಮಣರು, ಅವೈಶ್ಯರು ಇದ್ದಾರೆ! ಇದರಲ್ಲಿ ಒಬ್ಬ ಎಸ್.ಸಿ., ಒಬ್ಬ ಎಸ್.ಟಿ. ಮತ್ತು ಇಬ್ಬರು ಅಲ್ಪಸಂಖ್ಯಾತ ಜನಾಂಗಕ್ಕೆ ಸೇರಿದವರಾಗಿದ್ದಾರೆ.

ಈ ದೇಶದ ಅತಿ ಅಲ್ಪಸಂಖ್ಯಾತರಾದ ಬ್ರಾಹ್ಮಣ, ಬನಿಯಾ, ಕಾಯಸ್ತರು ೧೬ ಸ್ಥಾನಗಳನ್ನು ಕಬಳಿಸಿದ್ದಾರೆ. ಈ ದೇಶದ ಬಹುಸಂಖ್ಯಾತರಾದ ಬಹುಜನರು ಕೇವಲ ೧೦ಸ್ಥಾನ ಪಡೆಯುವಲ್ಲಿ ತೃಪ್ತರಾಗಬೇಕಿದೆ!

ದುರಂತವೆಂದರೆ, ಈ ದೇಶದಲ್ಲಿ ಶೇ. ೨೫ರಷ್ಟಿರುವ ದಲಿತರು ಕೇವಲ ಎರಡು ಸ್ಥಾನ ಪಡೆದಿದ್ದರೆ ಈ ದೇಶದ ಬಹು ಸಂಖ್ಯಾತರಾದ ಹಿಂದುಳಿದವರು ಒಂದು ಸ್ಥಾನವನ್ನೂ ಪಡೆಯದಿರುವುದು!

ಜಾತಿ ಒಂದು ವಾಸ್ತವವಾಗಿರುವ ಈ ದೇಶದಲ್ಲಿ ಮೇಲ್ಜಾತಿ ಮಾತ್ರ 'ಮೆರಿಟ್' ಆಗಿ ಪರಿವರ್ತನೆಗೊಂಡು ಅವಕಾಶವನ್ನು ಕಬಳಿಸತೊಡಗಿದೆ. ನಿಜವಾದ ಜಾತಿ ಆಧಾರದ ಮೇಲೆ ಮೀಸಲಾತಿ ಕೇಳಿದರೆ ಜಸ್ಟೀಸ್ ಆನಂದ್‌ತರದವರು '... ಯಾವುದೇ ಹುದ್ದೆ ಖಾಲಿ ಇದ್ದರೂ ಪರವಾಗಿಲ್ಲ, ಆದರೆ ಅನರ್ಹರು ಬರಬಾರದು...' ಎಂದು ಕೆರಳುತ್ತಾರೆ. ಇಲ್ಲಿ ನಾವು ಕೇಳಬೇಕಿರುವುದು ಜಸ್ಟೀಸ್ ಆನಂದ್ ರವರ 'ಅರ್ಹತೆ' ಅಥವಾ 'ಮೆರಿಟ್' ಆದರೂ ಏನು? ಎಂಬುದನ್ನು.

ಜಸ್ಟೀಸ್ ಆನಂದ್ ತಾವು ಹುಟ್ಟಿದ ದಿನಾಂಕದ ತಪ್ಪು ಸರ್ಟಿಫಿಕೇಟ್ ನೀಡಿ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಹೈಕೋರ್ಟ್ ನ್ಯಾಯಮೂರ್ತಿಗಳಾದವರು. ಈತ ಜಮ್ಮು ಮತ್ತು ಕಾಶ್ಮೀರದ ನ್ಯಾಯಮೂರ್ತಿಯಾಗಿದ್ದುಕೊಂಡೇ ತನಗೆ ನಿವೇಶನ ಇಲ್ಲವೆಂದು ಸುಳ್ಳು ಅಫಿಡವಿಟ್ ನೀಡಿ ನಿವೇಶನ ಪಡೆದವರು. ಸುಮಾರು ೨೦ ವರ್ಷಗಳಿಂದ ಲ್ಯಾಂಡ್ ರೆವೆನ್ಯೂ ನೀಡದೆ ಇದ್ದ ಭೂಮಿಯನ್ನು ತನ್ನ ನ್ಯಾಯಮೂರ್ತಿ ಸ್ಥಾನ ಬಳಸಿ ತನ್ನ ಹೆಂಡತಿಯ ಹೆಸರಿಗೆ ಮಾಡಿಸಿಕೊಂಡ ಬೃಹಸ್ಪತಿಯೀತ. ಅದೂ ಕೂಡ ಕೇವಲ ಆರು ತಿಂಗಳ ಅವಧಿಯಲ್ಲಿ ಇಷ್ಟೆಲ್ಲಾ 'ಅರ್ಹತೆ' ಯಾವ ದಲಿತ, ಹಿಂದುಳಿದ, ಅಲ್ಪ ಸಂಖ್ಯಾತ ವ್ಯಕ್ತಿಗಿರಲು ಸಾಧ್ಯ? ಈತನ ದಲಿತ ವಿರೋಧಿ ನಿಲುವನ್ನು ಈತನ 'ಮೆರಿಟ್' ಅನ್ನು ಪರಿಗಣಿಸಿ ಕೇಂದ್ರದ ಸಂಘಪರಿವಾರದ ಸರ್ಕಾರ ಈತನನ್ನು ಎನ್‌ಹೆಚ್‌ಆರ್‌ಸಿ (ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ)ಗೆ ನೇಮಿಸಿದ್ದಾರೆ!

ಇಂದು ಭಾರತದ ಎಲ್ಲಾ ರಾಜ್ಯಗಳಲ್ಲಿರುವ ಹೈಕೋರ್ಟ್, ಸುಪ್ರಿಂಕೋರ್ಟ್‌ಗಳಲ್ಲಿ ನೇಮಕವಾಗಿರುವ, ಕೆಲಸ ನಿರ್ವಹಿಸುತ್ತಿರುವ ನ್ಯಾಯಮೂರ್ತಿಗಳ ಬಗ್ಗೆ ವಿಚಾರಣೆ ಮಾಡಿ ಒಂದು ಶ್ವೇತ ಪತ್ರವನ್ನು ಹೊರಡಿಸಿದರೆ ಈ ನ್ಯಾಯಮೂರ್ತಿಗಳ ಆಯ್ಕೆಯಲ್ಲಿನ ನಿರ್ಣಾಯಕ ಅಂಶಗಳು, ಮಾನ್ಯತೆಗಳು, ಮೆರಿಟ್‌ಗಳು ಏನೆಂಬುದರ ಅರಿವಾಗುತ್ತದೆ. ಜಾತಿ, ಪಂಗಡ, ರಾಜಕಾರಣ ಆಮಿಷ ಈ ಎಲ್ಲಕ್ಕಿಂತಲೂ ಮೀಸಲಾತಿ ಹೇಗೆ ಕೆಟ್ಟದಾಗುತ್ತದೆ? ಇಂದು ನ್ಯಾಯಾಂಗದಲ್ಲಿರುವವರು, ಉನ್ನತ ಸ್ಥಾನದಲ್ಲಿರುವವರೇ ಆದ ಗಣ್ಯರು ಹೇಳುವಂತೆ, ಇಂದು ನ್ಯಾಯಾಲಯಗಳಲ್ಲಿ ಭ್ರಷ್ಟರು, ಮೊದ್ದಣಗಳು, ಅನರ್ಹರೇ ಸಾಕಷ್ಟು ತುಂಬಿದ್ದಾರೆ. 'ಮೆರಿಟ್' ಆಧಾರದ ಮೇಲೆ ಬಂದವರು ಶುದ್ಧ ಹಸ್ತರು, ಅರ್ಹರು ಆಗಿರುತ್ತಾರೇನೋ ಕಾದು ನೋಡಬೇಕು. ಆದರೆ ಇದನ್ನು ಅರಿಯುವ ಮೊದಲು ಮೀಸಲಾತಿ ನೀಡಿ ನೋಡಬೇಕಲ್ಲವೆ? □







ಮಾರ್ಕ್ಸ್‌ವಾದ, ಗಾಂಧೀವಾದ ಮತ್ತು ಲೋಹಿಯಾವಾದ

ಭಾಗ : ಒಂದು

ರಾಮಮನೋಹರ ಲೋಹಿಯಾ ಅವರು ತಮ್ಮ ಇಪ್ಪತ್ತೆರಡನೆಯ ವಯಸ್ಸಿಗಾಗಲೇ ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದ ಆರ್ಥಿಕತೆ ಕುರಿತು 'ಎಕನಾಮಿಕ್ಸ್ ಆಫ್ ಸಾಲ್ಟ್ ಸತ್ಯಾಗ್ರಹ' ಎಂಬ ಡಾಕ್ಟರೇಟ್ ಪ್ರಬಂಧ ಬರೆದು ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದರು. ಆ ಕಾಲದಲ್ಲಿ ಜಗತ್ತಿನ ಎಲ್ಲ ಕ್ರಿಯಾಶೀಲಗಳನ್ನೂ ಸೆಳೆದಿದ್ದ ಜರ್ಮನಿಯ ಕಾರ್ಲ್ ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದ ಲೋಹಿಯಾರನ್ನೂ ಸೆಳೆದದ್ದು ಸಹಜವಾಗಿತ್ತು. ಲೋಹಿಯಾ ಮುಂದೊಮ್ಮೆ ತಾವೇ ಸಮಾಜವಾದಿ ಆಂದೋಲನವನ್ನು ರೂಪಿಸಲೆತ್ನಿಸಿದಾಗ ಮಾರ್ಕ್ಸ್‌ವಾದವನ್ನು ಆಳವಾಗಿ ಪರಿಶೀಲಿಸಿದರು. ಅಷ್ಟು ಹೊತ್ತಿಗಾಗಲೇ ಗಾಂಧೀಜಿ ಲೋಹಿಯಾಪ್ರಜ್ಞೆಯ ಭಾಗವಾಗಿ ಹೋಗಿದ್ದರು.

'ನಾನು ಮಾರ್ಕ್ಸ್ ಪರವೂ ಅಲ್ಲ ವಿರೋಧವೂ ಅಲ್ಲ' ಎಂದೊಮ್ಮೆ ಹೇಳಿದ ಲೋಹಿಯಾ, ಗಾಂಧೀವಾದದ ಬಗೆಗೂ ಇದೇ ರೀತಿಯ ನಿಲುವನ್ನು ತಳೆಯಲೆತ್ನಿಸಿದರು. 'ಗಾಂಧೀವಾದ ಅಥವಾ ಮಾರ್ಕ್ಸ್‌ವಾದಿಯಾಗುವುದು ಎಷ್ಟು ಬಾಲಿಶವೋ, ಗಾಂಧೀವಿರೋಧಿ ಅಥವಾ ಮಾರ್ಕ್ಸ್‌ವಿರೋಧಿಯಾಗಿರುವುದು ಸಹ ಅಷ್ಟೇ ಬಾಲಿಶವಾದುದು. ಗಾಂಧಿ ಅಥವಾ ಮಾರ್ಕ್ಸ್‌ರಿಂದ ಕಲಿಯಬೇಕಾದ ಅಮೂಲ್ಯ ನಿಧಿಗಳೇ ಇವೆ. ಆದರೆ ಒಂದು ಯುಗದ ಅಥವಾ ವ್ಯಕ್ತಿಯ ಚಿಂತನೆಗಳನ್ನು ಆಧರಿಸಿದ ಚೌಕಟ್ಟು ಬಿಟ್ಟರೆ ಮಾತ್ರ ಕಲಿಯುವಿಕೆ ಸಾಧ್ಯವಾಗುತ್ತದೆ'.

ಆದರೆ ಮಾರ್ಕ್ಸ್ ಕುರಿತು ಲೋಹಿಯಾ ಸಾಧಿಸಿದ ವಸ್ತುನಿಷ್ಠ ಅಂತರವನ್ನು ಗಾಂಧೀಜಿಯವರ ಸಂದರ್ಭದಲ್ಲಿ ಸಾಧಿಸುವುದು ಕಷ್ಟವಿತ್ತು. ಯಾಕೆಂದರೆ, ಗಾಂಧೀಜಿ ಲೋಹಿಯಾ ಚಿಂತನಾಕ್ರಮದದಲ್ಲಿ ಆಳವಾಗಿ ಬೇರೂರಿಬಿಟ್ಟಿದ್ದರು.

○ ಡಾ॥ ನಟರಾಜ್ ಹುಳಿಯಾರ್

'ಅನ್ಯಾಯವನ್ನು ಕಂಡು ಹನಿಯುವ ಕಣ್ಣು ಸಿಟ್ಟಿನಿಂದ ಕೆಂಪಾಗಲೂ ಬೇಕು' ಎಂಬ ಆದರ್ಶ ನೋಟವನ್ನು ಲೋಹಿಯಾ ಕಲಿತದ್ದು ಗಾಂಧೀಜಿಯಿಂದಲೇ. ಜಗತ್ತಿನ ಇತಿಹಾಸದಲ್ಲಿ, ಗಾಂಧೀಜಿಯವರ ಕೊಡುಗೆಗಳನ್ನು ಕುರಿತು ಹಲಬಗೆಯ ವರ್ಣನೆಗಳಿವೆ. ಅದರಲ್ಲೆಲ್ಲಾ 'ಈ ಶತಮಾನದ ಎರಡು ಅಸಲಿ ಕೊಡುಗೆಗಳೆಂದರೆ ಗಾಂಧಿ ಮತ್ತು ಅಣು ಬಾಂಬು; ಈ ಶತಮಾನ ಮುಗಿಯುವುದರಲ್ಲಿ ಒಂದು ಇನ್ನೊಂದನ್ನು ಸೋಲಿಸುತ್ತದೆ' ಎಂಬ ಲೋಹಿಯಾ ವರ್ಣನೆ ಪ್ರಖ್ಯಾತವಾದದ್ದು. ಹಾಗೆಯೇ ಗಾಂಧೀಜಿಯವರನ್ನು ಕುರಿತು ಲೋಹಿಯಾ ಆಡಿರುವ ಕೃತಜ್ಞತೆಯ ಮಾತುಗಳು ಕೂಡ ನಮ್ಮ ಎದೆ ಮುಟ್ಟಿ ಬಹುಕಾಲ ಅಲ್ಲೇ ನೆಲೆಸುವಷ್ಟು ಅರ್ಥಪೂರ್ಣವಾಗಿವೆ:

> ದೇವರು ಹಾಗೂ ಹೆಣ್ಣು-ಇವೆರಡೇ ಪ್ರಾಯಶಃ ಜೀವನದ ಉದ್ದೇಶಗಳು ಎಂದು ನಾನೊಮ್ಮೆ ಹೇಳಿದೆ. ನಾನು ದೇವರನ್ನು ಭೇಟಿಯಾಗಿಲ್ಲ ಹಾಗೂ ಹೆಣ್ಣು ಎಟುಕದೇ ಉಳಿದಿದ್ದಾಳೆ. ಆದರೆ ದೇವರು ಹಾಗೂ ಹೆಣ್ಣುಗಳೆರಡರ ಹೊಳಹುಗಳುಳ್ಳ ಮನುಷ್ಯನನ್ನು ಸಂಧಿಸುವ ಅವಕಾಶ ನನಗೆ ಸಿಕ್ಕಿತು. ಆ ಮನುಷ್ಯ ಕಣ್ಮರೆಯಾದಂದಿನಿಂದ ಆತನ ನೆನಪು ಗಾಢವಾಗಿ ಉಳಿದೇ ಇದೆ. ಅದರ ಜೊತೆಗೆ ಈ ಹೊಳಹಿನ ಹುಡುಕಾಟ ಹೊಸದಾಗಿ ಆರಂಭವಾಗಿದೆ.

ಗಾಂಧಿ ವ್ಯಕ್ತಿತ್ವ, ಆಲೋಚನೆ, ಗಾಂಧೀಜಿ ರೂಪಿಸದ 'ನಾಗರಿಕ ಅವಿಧೇಯತೆ', ಅಹಿಂಸಾವಾದ, ವಿಕೇಂದ್ರೀಕರಣ, ವ್ಯಕ್ತಿಗತ ಶುದ್ಧತೆ, ಗ್ರಾಮ ಸ್ವರಾಜ್ಯಗಳ ಜೊತೆಜೊತೆಗೇ ಗಾಂಧೀಜಿಯವರ ಗುರಿ ಮತ್ತು ದಾರಿಗಳ ಶುದ್ಧತೆ ಲೋಹಿಯಾಗೆ ಅತ್ಯಂತ ಮುಖ್ಯವಾಗಿ ಕಂಡಿತ್ತು. ದೊಡ್ಡದೊಂದು ಗುಂಪು ನಮ್ಮ ಬೆನ್ನಿಗಿಲ್ಲದಿದ್ದಾಗಲೂ ಧೈರ್ಯವಾಗಿ ಪ್ರತಿಭಟಿಸಬಲ್ಲ ಶಕ್ತಿಯನ್ನು ಇಡೀ ಜಗತ್ತಿನ ಜನಕ್ಕೆ ಗಾಂಧೀಜಿ ದೊರಕಿಸಿಕೊಟ್ಟ ಬಗೆಯನ್ನು ಲೋಹಿಯಾ ಅಪಾರ ಕೃತಜ್ಞತೆಯಿಂದ ದಾಖಲಿಸುತ್ತಾರೆ.

ಗಾಂಧೀಜಿಯವರ ಸಾವಿನ ನಂತರ ಗಾಂಧೀವಾದವನ್ನು ವುದು 'ಮಠೀಯ ಗಾಂಧೀವಾದ' ಹಾಗೂ 'ಸರ್ಕಾರಿ ಗಾಂಧೀವಾದ'ವಾಗಿ ಜಡಗೊಂಡದ್ದನ್ನು ಕಂಡ ಲೋಹಿಯಾ, 'ಅಸಾಂಪ್ರದಾಯಿಕ ಗಾಂಧೀವಾದ'ದಲ್ಲಿ ಮಾತ್ರ ಗಾಂಧೀ ಮಾರ್ಗದ ಪ್ರತಿಭಟನೆಯ ಮೂಲಸತ್ವ ಇನ್ನೂ ಉಳಿದಿರುವುದನ್ನು ಗುರುತಿಸುತ್ತಾರೆ. ಈ ಮಾದರಿಯೇ ಸಮಾಜವಾದಿ ಪಕ್ಷಕ್ಕೆ ಆದರ್ಶಪ್ರಾಯವೆಂಬುದನ್ನು ಕಂಡುಕೊಂಡ ಲೋಹಿಯಾ, ಗಾಂಧೀವಾದವನ್ನು ಜಡತೆ ಹಾಗೂ ವಿಕೃತಿಗಳಿಂದ ಪಾರುಮಾಡಲೆತ್ನಿಸಿದರು. ಗಾಂಧೀಜಿಯವರ 'ನಾಗರಿಕ ಅವಿಧೇಯತೆ'ಯ ಕಲ್ಪನೆಯನ್ನು 'ಬಂದ್' ಮತ್ತು ಘೇರಾವೊ'ಗಳ ಕಲ್ಪನೆಯ ಮೂಲಕ ಮರು ರೂಪಿಸದರು. ಗಾಂಧೀಜಿಯವರ ಸಿದ್ಧಾಂತಗಳು ಕೇವಲ ಸಂಕೇತಗಳಾಗಿ ಕಳೆದುಹೋಗತೊಡಗಿದ್ದಾಗ, ಅವಕ್ಕೆ ಮರುಜೀವ ಕೊಡುವ ಅಗತ್ಯ ಹಾಗೂ ಅನಿವಾರ್ಯತೆಯನ್ನೂ ಲೋಹಿಯಾ ಕಂಡುಕೊಂಡರು. ಉದಾಹರಣೆಗೆ, ಗಾಂಧೀಜಿಯವರ 'ಚರಕಾ' ಕಲ್ಪನೆಯನ್ನಾಧರಿಸಿ ಲೋಹಿಯಾ ಪ್ರತಿಪಾದಿಸಿದ ಸಣ್ಣ ಘಟಕ ಯಂತ್ರದ ಕಲ್ಪನೆಯನ್ನು ಗಮನಿಸಬಹುದು.

ಜನಸಂಖ್ಯೆ ಕಡಿಮೆಯಿರುವ ದೇಶಗಳು ದುಡಿಯುವ ಕೈಗಳಿಲ್ಲದೆ ಭಾರೀ ಯಂತ್ರಗಳನ್ನು ತಯಾರಿಸಿಕೊಳ್ಳುತ್ತವೆ. ಆದರೆ ದುಡಿಯಬಲ್ಲ ಕೋಟ್ಯಾಂತರ ಕೈಗಳಿಗೆ ಕೆಲಸವೇ ಇಲ್ಲದ ಭಾರತದಲ್ಲಿ ಚರಕಾ ಸೂಚಿಸುವ ಸಣ್ಣ ಘಟಕ

ಯಂತ್ರದ ಕಲ್ಪನೆ ಕೇವಲ ಚರ್ಚೆಯ ವಸ್ತು ಅಲ್ಲ; ಬದಲಿಗೆ ಇದು ಭಾರತೀಯ ಗ್ರಾಮೀಣ ಆರ್ಥಿಕತೆಗೆ ಅನಿವಾರ್ಯವಾದ ಒಂದು ಮಾದರಿ. ಪ್ರತಿಯೊಂದು ಆರ್ಥಿಕತೆಯೂ ತನ್ನ ಅಗತ್ಯಕ್ಕೆ ತಕ್ಕ ಯಂತ್ರವನ್ನು ರೂಢಿಸಿಕೊಳ್ಳಬೇಕೆಂಬುದು ಗಾಂಧಿಯಿಂದ ಲೋಹಿಯಾ ಕಲಿತ ಮುಖ್ಯ ಪಾಠಗಳಲ್ಲೊಂದಾಗಿತ್ತು. ಈ ಸಣ್ಣಘಟಕ ಯಂತ್ರ ಗಾಂಧೀಜಿ ಹೇಳಿದ ಗುಡಿ ಕೈಗಾರಿಕೆಯ ಮಟ್ಟದಲ್ಲೇ ಇರಬೇಕಾಗಿಲ್ಲ. ಬದಲಿಗೆ, ಇದೊಂದು ಕಡಿಮೆ ಬಂಡವಾಳದ ಯಂತ್ರವಷ್ಟೇ. ಇದು ಹೊಸ ತಂತ್ರಜ್ಞಾನವನ್ನೂ ಬಳಸಿಕೊಳ್ಳುತ್ತದೆ. ಗ್ಯಾಸ್ ಅಥವಾ ವಿದ್ಯುತ್ತನ್ನೂ ಬಳಸುವ ಈ ಯಂತ್ರ ಭಾರತದಲ್ಲಿ ಸಮೃದ್ಧವಾಗಿರುವ ಮಾನವ ಶಕ್ತಿಯನ್ನು ಹೆಚ್ಚು ಒಳಗೊಳ್ಳುತ್ತದೆ ಹಾಗೂ ಸ್ಥಳೀಯವಾಗಿ ಸಿಗುವ ಕಚ್ಚಾವಸ್ತುಗಳನ್ನೇ ಪ್ರಧಾನವಾಗಿ ಬಳಸುತ್ತದೆ. ಅದಕ್ಕಿಂತ ಮುಖ್ಯವಾಗಿ ಈ ಸಣ್ಣ ಘಟಕ ಯಂತ್ರ ಕೈಗಾರಿಕೆಯನ್ನು ಹಳ್ಳಿಗೆ ಒಯ್ಯುತ್ತದೆ. ಹೀಗೆ ಕೈಗಾರಿಕೆ ವಿಕೇಂದ್ರೀಕರಣಗೊಳ್ಳುತ್ತದೆ.

ಆದರೆ ಬಂಡವಾಳವಾದಕ್ಕೆ ಒತ್ತುಕೊಟ್ಟ ಸಮಾಜಗಳಿಗೆ ಈ ಸಣ್ಣ ಘಟಕ ಯಂತ್ರದ ಕಲ್ಪನೆ ಹಿಡಿಸುವುದಿಲ್ಲ. ಈ ಸಮಾಜಗಳಲ್ಲಿ ವಿಜ್ಞಾನ ಮತ್ತು ಆರ್ಥಿಕತೆಗಳ ನಡುವಣ ಸಂಬಂಧವನ್ನು ನಿಯಂತ್ರಿಸುವ ಮಾರುಕಟ್ಟೆಯ ಅಂಶವೇ ಇದಕ್ಕೆ ಮುಖ್ಯ ಕಾರಣ: 'ಯಾವುದೇ ಕಾಲಾವಧಿಯಲ್ಲಿ ವಿಜ್ಞಾನ ಮತ್ತು ಬೃಹದುತ್ಪಾದನೆ ಮಾನವನ ವಿಶೇಷ ಬೇಡಿಕೆಗಳ ಕ್ಷೇತ್ರವನ್ನು ಹುಡುಕುತ್ತದೆ. ಕಾರಣ, ಈ ಬೇಡಿಕೆಗೆ ಮಾಡುವ ಸರಬರಾಜು ಅತ್ಯಧಿಕ ಲಾಭಾಂಶ ತರುತ್ತದೆ.'

ಈ ಕಾರಣದಿಂದಾಗಿ, ಹಿಂದುಳಿದ ದೇಶಗಳ ಆರ್ಥಿಕತೆಗೆ ತಕ್ಕಂಥ ವಿಜ್ಞಾನ ರೂಪುಗೊಳ್ಳದೇ ಹೋಗುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಬಂಡವಾಳಶಾಹಿಯ ನೆರಳಾಗಿ ಕೆಲಸ ಮಾಡುತ್ತಾ ಕೊನೆಗೆ ಬಂಡವಾಳಶಾಹಿಯ ಅಗತ್ಯವನ್ನು ಪೂರೈಸುವ ಸಾಧನಗಳಾಗಿಬಿಡುತ್ತವೆ. ಆದ್ದರಿಂದ ಬಂಡವಾಳಶಾಹೀ ವ್ಯವಸ್ಥೆಯ ಕೇಂದ್ರೀಕೃತ ವ್ಯವಸ್ಥೆಗೆ ಪ್ರತಿಯಾಗಿ, ಗಾಂಧೀ ಮಾದರಿಯ ವಿಕೇಂದ್ರೀಕರಣದ ಆಧಾರದ ಮೇಲೆ ರೂಪುಗೊಂಡ ಚತುಸ್ತಂಭ ರಾಷ್ಟ್ರದ ಕಲ್ಪನೆ (ಅಂದರೆ ಕೇಂದ್ರ, ರಾಜ್ಯ, ಜಿಲ್ಲೆ ಹಾಗೂ ಗ್ರಾಮಗಳ ನಡುವೆ ಅಧಿಕಾರ ವಿಕೇಂದ್ರೀಕರಣ) ಭಾರತಕ್ಕೆ ಅಗತ್ಯವೆಂದು ಲೋಹಿಯಾ ನಂಬಿದ್ದರು. ಇದು ಗಾಂಧೀ ಕಲ್ಪನೆಯ 'ಗ್ರಾಮಸ್ವರಾಜ್ಯ'ವನ್ನು ವ್ಯವಸ್ಥಿತ ರೂಪಕ್ಕೆ ತರುವ ಕ್ರಮವಾಗಿತ್ತು. ಈ ಚತುಸ್ತಂಭ ರಾಷ್ಟ್ರದ ಜೊತೆಗೇ ಸಪ್ತಕ್ರಾಂತಿಯ ಕಲ್ಪನೆಯೂ ಲೋಹಿಯಾವಾದದ ಕೇಂದ್ರದಲ್ಲಿತ್ತು. ಲೋಹಿಯಾ ರೂಪಿಸಿದ ಸಪ್ತಕ್ರಾಂತಿಯ ಕಲ್ಪನೆ ಇದು: ೧) ಸ್ತ್ರೀ-ಪುರುಷ ಸಮಾನತೆ ೨) ವರ್ಣಭೇದವನ್ನು ಅನುಸರಿಸುವ ಅಸಮಾನತೆಯ ನಾಶ ೩) ಹುಟ್ಟಿನ ಆಧಾರವನ್ನು ಅನುಸರಿಸುವ ಅಸಮಾನತೆಯ ನಿವಾರಣೆ ೪) ವಿದೇಶಿ ದಬ್ಬಾಳಿಕೆಯ ಅಂತ್ಯ ಹಾಗೂ ವಿಶ್ವಸರ್ಕಾರದ ಸ್ಥಾಪನೆ ೫) ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ-ಅಸಮಾನತೆಯ ನಾಶ ಹಾಗೂ ಸಮಾನತೆಯ ಸಾಧನೆ ೬) ಶಸ್ತ್ರಾಸ್ತ್ರಗಳ ಬಯಕೆಯ ಮೇಲಿನ ಹತೋಟಿ ಮತ್ತು ಸಾರ್ವಜನಿಕ ಕಾನೂನು ಭಂಗ ತತ್ವದ ಪ್ರತಿಷ್ಠಾಪನೆ ಮತ್ತು ೭) ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಆಗುವ ಅತಿಕ್ರಮಣದ ವಿರುದ್ಧ ಹೋರಾಟ.

ತಮ್ಮ ವಿಶಾಲ ದೃಷ್ಟಿಕೋನದ ಪ್ರಬುದ್ಧ ಚಿಂತನೆ ಮತ್ತು ಹೋರಾಟಗಳ ಮೂಲಕ ಜಗತ್ತಿನ ಗಮನ ಸೆಳೆದ ಮಹಾನ್ ಚಿಂತಕರಲ್ಲಿ ಕಾರ್ಲ್‌ಮಾರ್ಕ್ಸ್, ರಾಮಮನೋಹರ ಲೋಹಿಯಾ ಮತ್ತು ಮಹಾತ್ಮ ಗಾಂಧೀಜಿ ಪ್ರಮುಖರು. ತೀವ್ರತರದ ಬದಲಾವಣೆಗೆ ಸಿಕ್ಕಿರುವ ಜಗತ್ತಿನಲ್ಲಿ ಈ ಮೂವರೂ ದಾರ್ಶನಿಕರ ಬದುಕು ಮತ್ತು ಆದರ್ಶಗಳ ಜತೆಗೆ ಅವರ ಚಿಂತನೆಗಳು ಅಮೂಲ್ಯವೂ, ಪ್ರಸ್ತುತವೂ ಹೌದು ಎನ್ನುವುದರಲ್ಲಿ ಎರಡು ಮಾತಿಲ್ಲ. ಅನೇಕ ಬಿಕ್ಕಟ್ಟುಗಳಲ್ಲಿ ಬಂಧಿಗಳಾಗುತ್ತಿರುವ ಇಂದಿನ ಜನಸಮುದಾಯಕ್ಕೆ, ಆ ಮೂಲಕ ಎದುರಾಗಿರುವ ಸಮಸ್ಯೆಗಳಿಗೆ ಸೂಕ್ತ ಮದ್ದಾಗಬಹುದು.

ಈ ಸಪ್ತಕ್ರಾಂತಿಯ ಕಲ್ಪನೆ ಹಾಗೂ ಚತುಸ್ತಂಭ ರಾಷ್ಟ್ರದ ಕಲ್ಪನೆಗಳೆರಡನ್ನೂ ಇಡೀ ಜಗತ್ತಿನಲ್ಲಿ ಸಾಧಿಸಲು ಲೋಹಿಯಾ ಮೂರು ಅಂತಿಮ ದಾರಿಗಳನ್ನು ಸೂಚಿಸಿದರು. ಅವುಗಳೆಂದರೆ: ಸನಿಕೆ, ಮತದಾನ ಮತ್ತು ಸೆರಮನೆ, ಬದಲಾವಣೆಯ ಸಾಧನವಾಗಿ ಬುಲೆಟ್ ಬಳಸುವುದಕ್ಕೆ ಪರ್ಯಾಯವಾಗಿ ಗಾಂಧೀಜಿಯ ಸತ್ಯಾಗ್ರಹವನ್ನು ಲೋಹಿಯಾ ಪ್ರತಿಪಾದಿಸಿದರು. ಮಾರ್ಕ್ಸ್‌ವಾದಕ್ಕೂ, ತಾವು ಹೇಳುತ್ತಿರುವ ಸಮಾಜವಾದಕ್ಕೂ ಇರುವ ವ್ಯತ್ಯಾಸ ಅಂತಿಮ ಗುರಿ ಹಾಗೂ ಆ ಗುರಿಯನ್ನು ತಲುಪುವ ದಾರಿ ಇವರೆಡರಲ್ಲೂ ಇದೆ ಎಂಬುದನ್ನು ಸಂದರ್ಶನವೊಂದರಲ್ಲಿ ಲೋಹಿಯಾ ಹೇಳುತ್ತಾರೆ: 'ನಮ್ಮ ಹಾದಿ ಸತ್ಯಾಗ್ರಹ ಹಾಗೂ ನಾಗರಿಕ ಅವಿಧೇಯತೆ. ಜೊತೆಗೆ ವಯಸ್ಕ ಮತದಾನದ ಮೂಲಕ ವಿಶ್ವ ಸಂಸತ್ತನ್ನು ಸ್ಥಾಪಿಸುವುದು ನಮ್ಮ ಗುರಿ. ಈ ಗುರಿ ಮಾರ್ಕ್ಸ್‌ವಾದಕ್ಕಿಲ್ಲ'.

ಆದರೂ ಮಾರ್ಕ್ಸ್‌ವಾದಕ್ಕೂ ಗಾಂಧೀವಾದಕ್ಕೂ ಇರುವ ಒಂದು ಮುಖ್ಯ ವ್ಯತ್ಯಾಸವನ್ನು ಲೋಹಿಯಾ ಗುರುತಿಸುತ್ತಾರೆ. ಪ್ರತಿರೋಧ ಸಂಘಟನೆಯಾಗಿ ತನ್ನದೇ ಆದ ರೀತಿಯಲ್ಲಿ ಕ್ರಾಂತಿಕಾರಕವಾಗಿದ್ದ ಗಾಂಧೀವಾದವು ಸರ್ಕಾರಗಳ ನೆರಳಿನಲ್ಲಿ ಜಡವಾಗತೊಡಗುತ್ತದೆ...ಆದರೆ ಮಾರ್ಕ್ಸ್‌ವಾದ ಅಧಿಕಾರಕ್ಕಾಗಿ ಹೋರಾಟ ನಡೆಸುವಾಗಿನ ಸಂದರ್ಭಕ್ಕಿಂತ ಸರ್ಕಾರವನ್ನು ರೂಪಿಸಿಕೊಂಡಾಗ ಹೆಚ್ಚು ಕ್ರಾಂತಿಕಾರಿಯಾಗಿರುತ್ತದೆ; ಆಗಲೂ ಆಸ್ತಿ, ಧರ್ಮ ಮತ್ತು ಇತರ ಸಂಬಂಧಗಳ ಹಳೆಯ ವ್ಯವಸ್ಥೆಯನ್ನು ಬುಡಮೇಲು ಮಾಡಲೇಬೇಕಾದ ತುಡಿತ ಅದಕ್ಕಿರುತ್ತದೆ.' ಹೀಗೆ ಈ ಎರಡೂ ಸಿದ್ಧಾಂತಗಳ ವೈಶಿಷ್ಟ್ಯ ಹಾಗೂ ವೈರುಧ್ಯಗಳನ್ನು ಗುರುತಿಸಿದ ಲೋಹಿಯಾ, ಗಾಂಧೀಜಿಯವರ ಸಿದ್ಧಾಂತಗಳನ್ನೂ ಮರುಪರೀಕ್ಷೆಗೊಳಪಡಿಸಿದರು. ಗಾಂಧೀಜಿಯವರ ಅಹಿಂಸಾವಾದದ ಕಟ್ಟಾ ಅನುಯಾಯಿಯಾಗಿದ್ದ ಲೋಹಿಯಾ, ಭಾರತ-ಚೀನಾ ಯುದ್ಧದ ನಂತರ ಶಸ್ತ್ರಾಸ್ತ್ರಗಳ ಬಳಕೆಯ ಬಗೆಗೆ ತಮ್ಮ ನಿಲುವನ್ನು ಬದಲಿಸಿಕೊಂಡರು. 'ಇನ್ನೊಬ್ಬನ ಮನೆಯನ್ನು ವಶಪಡಿಸಿಕೊಳ್ಳಲು ನಾನು ಮದ್ದುಗುಂಡು ಬಳಸಲಾರೆ. ಆದರೆ ನನ್ನ ದೇಶ ಆಕ್ರಮಣಕ್ಕೊಳಗಾದಾಗ ಯಾವುದೇ ಆಯುಧವನ್ನಾದರೂ ಬಳಸಲು ನಾನು ಹಿಂಜರಿಯುವುದಿಲ್ಲ' ಎಂದು ಲೋಹಿಯಾ ಹೇಳಿದ್ದು ಆಗಲೇ.

ಗಾಂಧೀಜಿಯವರು ಕಾಲಕಾಲಕ್ಕೆ ಆಡುತ್ತಾ ಬಂದ ಮಾತುಗಳಲ್ಲಿ ವೈರುಧ್ಯವಿದ್ದದ್ದು ಲೋಹಿಯಾಗೆ ಗೊತ್ತಿತ್ತು. ಆದರೆ, ಜಾತಿಪದ್ಧತಿ ಧರ್ಮದ ಭಾಗವೆಂದು ಒಮ್ಮೆ ತಿಳಿದಿದ್ದ ಗಾಂಧೀಜಿ ಕೊನೆಗೆ ಜಾತಿಯನ್ನು ಪಾಪವೆಂದು ಕರೆದದ್ದನ್ನೂ, ಖಾಸಗಿ ಆಸ್ತಿಯನ್ನು ಒಪ್ಪಿದ್ದ ಅವರು ಮುಂದೆ ಎಲ್ಲ ಖಾಸಗಿ ಭೂಮಿಯನ್ನೂ ವಶಪಡಿಸಿಕೊಂಡು ಸಾಮಾಜಿಕ ಒಡೆತನಕ್ಕೆ ಒಪ್ಪಿಸಬೇಕೆಂದು ಹೇಳಿದ್ದನ್ನೂ ಲೋಹಿಯಾ ನಮಗೆ ನೆನಪಿಸುತ್ತಾರೆ. ತಮ್ಮೆಲ್ಲ ವೈರುಧ್ಯಗಳ ಜೊತೆಜೊತೆಗೇ ಗಾಂಧೀಜಿ ಅಂತಿಮವಾಗಿ ತಲುಪಿದ ಸಮಾಜವಾದಿ ನೋಟವನ್ನೂ ಈ ಅಂಶಗಳು ಸೂಚಿಸುತ್ತವೆ. ಆದ್ದರಿಂದಲೇ, ಗಾಂಧೀಜಿಯವರ ವೈರುಧ್ಯಗಳನ್ನೇ ದೊಡ್ಡದಾಗಿಸಿ ಚರ್ಚಿಸುತ್ತಾ ಹಿಗ್ಗುವವರಿಗೆ ಲೋಹಿಯಾ ಹೇಳುವ ಕಿವಿಮಾತು ಇದು:

> ಭಾರತೀಯರನ್ನು ಹಾಗೂ ಜಗತ್ತನ್ನು ಮಹಾಹಾತ್ಮಾಗಾಂಧಿಯವರು ಪ್ರಭಾವಿತಗೊಳಿಸಿರುವದು ತಮ್ಮ ವ್ಯವಸ್ಥಿತ ಬರವಣಿಗೆಗಳಿಂದ ಅಲ್ಲ; ಅವರ ಜೀವನ ವಿಧಾನ ಮತ್ತು ಕಾರ್ಯಗಳಿಂದ ಮಾತ್ರ. ಅವರ ಬರವಣಿಗೆಗಳೇನಿದ್ದರೂ ಅವರ ಜೀವನ ಹಾಗೂ ನಡವಳಿಕೆಯ ವಿವರಣೆ ಮಾತ್ರ... ಮಹಾತ್ಮಾಗಾಂಧಿಯವರು ಬರೆದದ್ದೂ ಅಪಾರ; ಮಾತಾಡಿದ್ದೂ ಅಪಾರ. ಆದರೆ ಅವರ ಬರವಣಿಗೆ ಹಾಗೂ ಮಾತುಕತೆಗಳು ಅವರ ಬದುಕು ಮತ್ತು ನಡವಳಿಕೆಗಳ ವಿವರಣೆ ಮಾತ್ರವಾಗಿವೆ... ಆದುದರಿಂದ ಗಾಂಧೀಜಿಯವರ ಬದುಕಿನ ಅರ್ಥ ತಿಳಿಯಲು ಅವರ ಜೀವನ ಹಾಗೂ ಕಾರ್ಯಕ್ರಮಗಳಿಗೆ ಹೋಗಬೇಕೇ ಹೊರತು, ಅವರ ಮಾತು ಹಾಗೂ ಬರವಣಿಗೆಗಳಿಗಲ್ಲ.

ಗಾಂಧೀವಾದ ನಿರಂತರವಾಗಿ ಮರುಹುಟ್ಟು ಪಡೆಯಬೇಕಾದ ಹಾಗೂ ಮರುರೂಪ ಪಡೆಯಬಲ್ಲ ಸಿದ್ಧಾಂತವೆಂಬ ಲೋಹಿಯಾರ ನಂಬಿಕೆ ನಿಜವೆಂಬುದು ಗಾಂಧೀನಂತರದ ಜಗತ್ತಿನಲ್ಲಿ ಮತ್ತೆ ಮತ್ತೆ ಸಾಬೀತಾಗಿದೆ. 'ಗಾಂಧೀಜಿ ನಮಗೆ ಬೇಕಾಗುವುದು ಟ್ಯುನೀಸಿಯಾದ ಜನ ಹೋರಾಡುವಾಗ ಅಥವಾ ವಿಕೇಂದ್ರೀಕೃತ ಆರ್ಥಿಕ ವ್ಯವಸ್ಥೆ ಹಾಗೂ ವಿಕೇಂದ್ರೀ ಕೃತ ರಾಜಕೀಯ ಪದ್ಧತಿಯ ಮಹತ್ವ ಅರಿವಾದಾಗ' ಎಂಬ ಲೋಹಿಯಾರ ಮಾತಿನ ಹಿನ್ನೆಲೆಯಲ್ಲಿ, ಜಗತ್ತಿನ ಸ್ವಾತಂತ್ರ್ಯ ಹೋರಾಟ

ಗಳನ್ನು ಹಾಗೂ ಸ್ವಾತಂತ್ರ್ಯೋತ್ತರ ಭಾರತದಲ್ಲೇ ಕಾಲಕಾಲಕ್ಕೆ ನಡೆದಿರುವ ಬಗೆಬಗೆಯ ಚಳವಳಿಗಳನ್ನು ಗಮನಿಸಬೇಕು. ಭಾರತದಲ್ಲಿ ದಲಿತ ಚಳವಳಿ, ಪರಿಸರವಾದಿ ಚಳವಳಿ, ರೈತ ಚಳವಳಿ ಹಾಗೂ ಸ್ತ್ರೀವಾದಿ ಚಳವಳಿಗಳು ಪ್ರಧಾನವಾಗಿ ಗಾಂಧೀವಾದಿ 'ನಾಗರಿಕ ಅವಿಧೇಯತೆ'ಯ ಹಾಗೂ 'ಸತ್ಯಾಗ್ರಹ'ದ ಮಾರ್ಗವನ್ನೇ ಅವಲಂಬಿಸಿವೆ. ಆದ್ದರಿಂದ, ಗಾಂಧೀಜಿ ಜಗತ್ತಿನ ಕೇಂದ್ರ ರಂಗದಲ್ಲಿ ಇಲ್ಲದಂತೆ ಕಾಣುವಾಗಲೂ ಗಾಂಧೀವಾದ ಹಿನ್ನೆಲೆಯಲ್ಲಿದ್ದೇ ಇರುತ್ತದೆ:

ಎಲ್ಲಿಯವರೆಗೆ ಈ ಆಧುನಿಕ ನಾಗರಿಕತೆ ಆದರ್ಶರಹಿತವಾದದ್ದು ಎಂಬುದನ್ನೂ, ರಷ್ಯಾ ಹಾಗೂ ಅಮೆರಿಕಾಗಳು ಪ್ರತ್ಯೇಕ ರಾಜಕೀಯ ಪದ್ಧತಿಗಳನ್ನು ಅನುಸರಿಸುತ್ತಿದ್ದರೂ, ಈ ಎರಡೂ ದೇಶಗಳ ಚಲನ ಶಕ್ತಿಯು ಒಂದೇ ಬಗೆಯದಾದ ಸವಲತ್ತುಗಳ ಉತ್ಪಾದನೆಯನ್ನು ಕೇವಲ ತಮ್ಮ ದೇಶದ ಗಡಿಗಳೊಳಗೇ ಹೆಚ್ಚಿಸಿಕೊಳ್ಳುವ ಮೃಗೀಯ ಪಿಪಾಸೆಯಿಂದ ಕೂಡಿದಂಥದ್ದು ಎಂಬುದನ್ನೂ ಅರಿತಿರುತ್ತೇವೆಯೋ, ಅಲ್ಲಿಯವರೆಗೆ ನಾವು ಗಾಂಧೀಜಿಯವರ ಒಟ್ಟಾರೆ ಚಿಂತನೆಯ ಬೆಳಕಿನಲ್ಲೇ ಇದ್ದೇವೆಂದು ತಿಳಿಯಬೇಕು.

ಭಾಗ: ಎರಡು

ಭಾರತದಲ್ಲಿ ಸಮಾಜವಾದದ ಹುಟ್ಟನ್ನು ಕುರಿತು ಚರ್ಚಿಸುತ್ತಾ 'ಗಾಂಧೀಜಿಯವರ 'ದರಿದ್ರ ನಾರಾಯಣ' ಕಲ್ಪನೆಯಿಂದಲೇ ಇಲ್ಲಿ ಸಮಾಜವಾದ ಹುಟ್ಟಿತು' ಎಂದು ಲೋಹಿಯಾ ಒಮ್ಮೆ ಉತ್ಸಾಹದಿಂದ ಹೇಳಿದ್ದುಂಟು. ಆದರೆ ಸಮಾಜವಾದಕ್ಕೆ ಭದ್ರ ತಳಹದಿ ನೀಡಬೇಕಾದರೆ, ಅದಕ್ಕೆ ತಕ್ಕ ಕಾರ್ಯಕ್ರಮ ರೂಪಿಸುವುದು ಹಾಗೂ ಗುರಿ ಸಾಧನೆಯ ಮಾರ್ಗವನ್ನು ಕಂಡುಕೊಳ್ಳುವುದು ಅತ್ಯಂತ ಮುಖ್ಯವೆಂಬುದನ್ನು ಅವರು ಮಾರ್ಕ್ಸ್‌ನಿಂದ ಕಲಿತರು. ಮಧು ದಂಡವತೆಯವರು ಗುರುತಿಸುವಂತೆ, 'ಚರಿತ್ರೆಯನ್ನು ವ್ಯಾಖ್ಯಾನಿಸುವ ಮಾರ್ಕ್ಸ್‌ನ ವೈಜ್ಞಾನಿಕ ಮಾರ್ಗವನ್ನು ಲೋಹಿಯಾ ವಿಶಾಲಾರ್ಥದಲ್ಲಿ ಒಪ್ಪಿಕೊಂಡರಾದರೂ ಅದರ ಮಿತಿಯನ್ನು ಅರಿತರು. ಮಾರ್ಕ್ಸ್ ಗ್ರಹಿಸಿದಂತೆ ಚರಿತ್ರೆಯ ಚಲನೆಯಲ್ಲಿ ಆರ್ಥಿಕ ಅಂಶಗಳ ಪಾತ್ರವನ್ನೂ ಲೋಹಿಯಾ ಮನಗಂಡರು.' ಅದರ ಜೊತೆಗೇ 'ಘಟನಾವಳಿಗಳ ತರ್ಕ' ಹಾಗೂ 'ಇಚ್ಛಾಶಕ್ತಿಗಳ ತರ್ಕ'ಗಳೂ ಮಾನವ ಚರಿತ್ರೆಯ ಚಲನೆಯನ್ನು ನಿರ್ದೇಶಿಸುತ್ತವೆಂಬುದನ್ನು ಕಂಡುಕೊಂಡರು. ಮಾರ್ಕ್ಸ್‌ನ ಮೂಲ ಆಶಯಗಳ ಬಗ್ಗೆ ಗೌರವವಿದ್ದ ಲೋಹಿಯಾ ಒಂದೆಡೆ ಮಾರ್ಕ್ಸ್‌ನನ್ನು ಹೀಗೆ ವಿವರಿಸಿಕೊಳ್ಳುತ್ತಾರೆ:

ಕಾರ್ಲ್‌ಮಾರ್ಕ್ಸ್ ತನ್ನ ತಾತ್ವಿಕ ತೀವ್ರಗಾಮಿತನಕ್ಕೆ ತಕ್ಕ ತೀವ್ರಗಾಮಿ ಕಾರ್ಯಕ್ರಮವನ್ನು ರೂಪಿಸಿದ. ಜಗತ್ತು ಹೇಗೆ ಬದಲಾಗಬೇಕು ಎಂಬುದರ ಆಧಾರದ ಮೇಲೆ ಜಗತ್ತನ್ನು ಅರ್ಥಮಾಡಿಕೊಳ್ಳಬಹುದು ಎಂದು ಆತ ವಾದಿಸಿದ... ಅದು ಕ್ರಿಯಾಪರ ತತ್ವಜ್ಞಾನವಾಗಿದ್ದು ತೀವ್ರಗಾಮಿ ಗಡಿರೇಖೆಯನ್ನು ಮುಟ್ಟಿತು, ಅಲ್ಲಿ ಬದಲಾವಣೆಯ ಗುರಿಯೇ ಜ್ಞಾನದ ಕೀಲಿಕೈ ಆಯಿತು. ಸಮಾನತೆಯ ಸಾಧನೆ ಮತ್ತು ಒಡೆತನದ ವರ್ಗದ ನಿರ್ನಾಮವು ಬದಲಾವಣೆಯ ಆಶೆಯ ಕೇಂದ್ರ ಬಿಂದುವಾಯಿತು. ಅಲ್ಲಿಯತನಕ ಇಂಥ ತತ್ವವನ್ನು ಯಾರೂ ರೂಪಿಸಿರಲಿಲ್ಲ..ಇಲ್ಲಿ ಕ್ರಿಯೆ ಒಂದು ನಿರ್ದಿಷ್ಟ ರೂಪದಲ್ಲಿತ್ತು; ಅಂದರೆ ಆಸ್ತಿ ಸಂಬಂಧಗಳಲ್ಲಿ ಬದಲಾವಣೆ ತಂದು ಸಮಾನತೆ ಸಾಧಿಸುವುದಕ್ಕೆ ಸಂಬಂಧಪಟ್ಟ ಕ್ರಿಯೆಯಾಗಿತ್ತು.

ಮಾರ್ಕ್ಸ್‌ವಾದದ ವೈಜ್ಞಾನಿಕತೆಯ ಬಗ್ಗೆ ಅಪಾರ ಮೆಚ್ಚುಗೆಯಿದ್ದ ಲೋಹಿಯಾಗೆ ವಸಾಹತೀಕರಣಕ್ಕೊಳಗಾದ ಸಮಾಜವೊಂದರಲ್ಲಿ ನಿಂತು ಮಾರ್ಕ್ಸ್‌ವಾದವನ್ನು ನೋಡಿದಾಗ, ವಸಾಹತುಶಾಹಿಗೂ ಬಂಡವಾಳಶಾಹಿಗೂ ಇರುವ ಸಂಬಂಧ ಕುರಿತಂತೆ ಮಾರ್ಕ್ಸ್‌ನ ಗ್ರಹಿಕೆಗಳಲ್ಲಿದ್ದ ಕೊರತೆ ಎದ್ದು ಕಂಡಿತು.

ಮಾರ್ಕ್ಸ್‌ವಾದಕ್ಕೂ ಗಾಂಧೀವಾದಕ್ಕೂ ಇರುವ ಒಂದು ಮುಖ್ಯ ವ್ಯತ್ಯಾಸವನ್ನು ಲೋಹಿಯಾ ಗುರುತಿಸುತ್ತಾರೆ. 'ಪ್ರತಿರೋಧ ಸಂಘಟನೆಯಾಗಿ ತನ್ನದೇ ಆದ ರೀತಿಯಲ್ಲಿ ಕ್ರಾಂತಿಕಾರಕವಾಗಿದ್ದ ಗಾಂಧೀವಾದವು ಸರ್ಕಾರಗಳ ನೆರಳಿನಲ್ಲಿ ಜಡವಾಗತೊಡಗುತ್ತದೆ...ಆದರೆ ಮಾರ್ಕ್ಸ್‌ವಾದ ಅಧಿಕಾರಕ್ಕಾಗಿ ಹೋರಾಟ ನಡೆಸುವಾಗಿನ ಸಂದರ್ಭಕ್ಕಿಂತ ಸರ್ಕಾರವನ್ನು ರೂಪಿಸಿಕೊಂಡಾಗ ಹೆಚ್ಚು ಕ್ರಾಂತಿಕಾರಿಯಾಗಿರುತ್ತದೆ; ಆಗಲೂ ಆಸ್ತಿ ಧರ್ಮ ಮತ್ತು ಇತರ ಸಂಬಂಧಗಳ ಹಳೆಯ ವ್ಯವಸ್ಥೆಯನ್ನು ಬುಡಮೇಲು ಮಾಡಲೇಬೇಕಾದ ತುಡಿತ ಅದಕ್ಕಿರುತ್ತದೆ.' ಹೀಗೆ ಈ ಎರಡೂ ಸಿದ್ಧಾಂತಗಳ ವೈಶಿಷ್ಟ್ಯ ಹಾಗೂ ವೈರುಧ್ಯಗಳನ್ನು ಗುರುತಿಸಿದ ಲೋಹಿಯಾ, ಗಾಂಧೀಜಿಯವರ ಸಿದ್ಧಾಂತಗಳನ್ನೂ ಮರುಪರೀಕ್ಷೆಗೊಳಪಡಿಸಿದರು

ಲೋಹಿಯಾ ಪ್ರಕಾರ, ವಸಾಹತು ಸನ್ನಿವೇಶವನ್ನರಿಯದೆ, ಪಶ್ಚಿಮ ಯೂರೋಪಿನ ರಾಷ್ಟ್ರಗಳಿಗೆ ಪರಿಮಿತಗೊಳಿಸಿ ಬಂಡವಾಳಶಾಹಿಯನ್ನು ನೋಡಿದ್ದು ಮಾರ್ಕ್ಸ್‌ನ ಬಹುಮುಖ್ಯ ಮಿತಿಯಾಗಿತ್ತು. ಆದ್ದರಿಂದಲೇ ಬಂಡವಾಳಶಾಹಿ ಅರ್ಥವ್ಯವಸ್ಥೆ ಹಾಗೂ ವಸಾಹತುಶಾಹಿ ಅರ್ಥವ್ಯವಸ್ಥೆಗಳ ನಡುವೆ ನಗರ-ಹಳ್ಳಿಗಳ ಮಾದರಿಯ ಶೋಷಣೆಯ ಸಂಬಂಧ ಮುಂದುವರಿದಿದ್ದನ್ನು ಮಾರ್ಕ್ಸ್ ಗ್ರಹಿಸಲಿಲ್ಲ. ಹೀಗಾಗಿ ವಸಾಹತು ದುಡಿಮೆಗಾರರು ಹಾಗೂ ಸಾಮ್ರಾಜ್ಯವಾದಿ ದೇಶದ ದುಡಿಮೆಗಾರರ ದುಡಿಮೆಯಲ್ಲಿರುವ ವ್ಯತ್ಯಾಸ ಮಾರ್ಕ್ಸ್‌ವಾದಿಗಳಿಗೆ ಗೋಚರವಾಗದೇ ಹೋಯಿತು ಎಂಬುದನ್ನು ಲೋಹಿಯಾ ಕಂಡುಕೊಂಡರು:

ಜಗತ್ತಿನ ಚರಿತ್ರೆಯನ್ನು ಅಂಗೈಯಲ್ಲಿಟ್ಟುಕೊಂಡು ಸಿದ್ಧಾಂತ ರೂಪಿಸಿದ ಶ್ರೇಷ್ಠ ಚಿಂತಕ ಮಾರ್ಕ್ಸ್‌ಗೆ ಸಾಮ್ರಾಜ್ಯಶಾಹಿ ಶೋಷಣೆಯ ಬಗ್ಗೆ ಅರಿವಿರಲಿಲ್ಲವೆಂದಲ್ಲ. 'ಮಾರ್ಕ್ಸ್ ಮತ್ತು ಲೆನಿನ್ನರ ಪ್ರಕಾರ, ಸಾಮ್ರಾಜ್ಯಶಾಹಿ ಎಂಬುದು ಬಂಡವಾಳಶಾಹಿಯಿಂದ ಉದ್ಭವಿಸುವ ದುರ್ಮಾಂಸದ ಗಡ್ಡೆಯಾಗಿತ್ತು. ಇದರ ಅರಿವಿದ್ದರೂ ಮಾರ್ಕ್ಸ್‌ವಾದಕ್ಕೆ ಬಂಡವಾಳಶಾಹಿ ವಿಕಾಸದ ಸಮಗ್ರ ವಿಕಾಸವನ್ನು ಕೊಡುವುದು ಸಾಧ್ಯವಾಗಲಿಲ್ಲ' ಎಂದು ಲೋಹಿಯಾ ಬರೆಯುತ್ತಾರೆ. 'ಆದರೆ, ಮಾರ್ಕ್ಸ್ ತನ್ನ ಸಿದ್ಧಾಂತ ರೂಪಿಸುವ ಕಾಲದಲ್ಲಿ ವಸಾಹತುವಾದದ 'ಮುಕ್ತ ವ್ಯಾಪಾರ'ದ ಬಂಡವಾಳಶಾಹಿ ಮುಖ ಸ್ಪಷ್ಟವಾಗಿ ಕಾಣಿಸಿಕೊಂಡಿರಲಿಲ್ಲ' ಎಂಬ ಚರಿತ್ರಕಾರ ಬಿಪಿನ್‌ಚಂದ್ರಪಾಲ್ ಅವರ ವಾದ ಕೂಡ ನಿಜ. ಬಂಡವಾಳಶಾಹಿ ಪದ್ಧತಿಯು ಸಾಮ್ರಾಜ್ಯ ಶಾಹಿಯ ಅಂತಿಮ ಘಟ್ಟ ಎಂಬ ಮಾರ್ಕ್ಸ್‌ವಾದಿ ಗ್ರಹಿಕೆಯನ್ನು ತಿರಸ್ಕರಿಸಿದ ಲೋಹಿಯಾ, ಬಂಡವಾಳಶಾಹಿ ಪದ್ಧತಿಯು ತಾನು ಹುಟ್ಟಿದಾಗಿನಿಂದ ರಾಷ್ಟ್ರದ ಹೊರಗಿನ (ಅಂದರೆ ಅನ್ಯ ರಾಷ್ಟ್ರಗಳ) ಚೈತನ್ಯ ಶಕ್ತಿಯನ್ನು ಹುಡುಕುವುದನ್ನು, ಆ ಹುಡುಕಾಟದಲ್ಲಿ ಅದು ಒಂದಾದ ಮೇಲೊಂದರಂತೆ ರಾಷ್ಟ್ರಗಳನ್ನು ಗಬಗಬನೆ ನುಂಗುವುದನ್ನೂ ತೋರಿಸಿಕೊಡುತ್ತಾರೆ. ಅಮೆರಿಕಾದ ಬಂಡವಾಳಶಾಹಿಯು ಬ್ರಿಟನ್ನಿನ ಸಾಮ್ರಾಜ್ಯಶಾಹಿ ಮಾದರಿಯನ್ನೇ ಅನುಸರಿಸಿ ಬೆಳೆಯುತ್ತಾ ಬಂದ್ದದನ್ನು ಕಂಡು ಲೋಹಿಯಾ, ಅಮೆರಿಕಾದ ಸಾಮ್ರಾಜ್ಯವಾದೀ ಎಲ್ಲೆ ಹಾಗೂ ಸಾಮ್ರಾಜ್ಯಶಾಹೀ ಧೋರಣೆಗಳು ದೈತ್ಯಾಕಾರಿಯಾಗಿ ವಿಸ್ತರಣೆಗೊಳ್ಳುವುದನ್ನು ೧೯೫೦ರಲ್ಲೇ ಊಹಿಸಿದ್ದರು. ಈ ಊಹೆ ಕ್ರಮೇಣ ನಿಜವಾದದ್ದು ನಮ್ಮ ಕಣ್ಣೆದುರಿಗೇ ಇದೆ. ಅದೇ ರೀತಿ, ಬಂಡವಾಳ ಶಾಹಿಯ ಉತ್ಪಾದನಾ ಸಾಮರ್ಥ್ಯ, ವಿಶ್ವವ್ಯಾಪಾರ ಹಾಗೂ ಉದ್ಯೋಗಗಳಲ್ಲಿ ಇಳಿಕೆಯಾದಾಗಲೆಲ್ಲ ಶಸ್ತ್ರಾಸ್ತ್ರಗಳ ಕೈಗಾರಿಕೋದ್ಯಮ ಹಾಗೂ ಯುದ್ಧಗಳಲ್ಲಿ ಏರಿಕೆಯಾಗುತ್ತಾ ಬರುವುದನ್ನು ಕೂಡ ಲೋಹಿಯಾ ಅಂದೇ ಗುರುತಿಸಿದ್ದರು.

ಬಂಡವಾಳಶಾಹಿಯಡಿ ಹಾಗೂ ಕಮ್ಯೂನಿಸಮ್ಮಿನಡಿ ಉತ್ಪಾದನಾ ವಿಧಾನಗಳು ಒಂದೇ ಬಗೆಯಲ್ಲಿರುವುದನ್ನೂ, ಬಂಡವಾಳಶಾಹಿಯಿಂದ ಕಮ್ಯುನಿಸಂ ಈ ವಿಧಾನಗಳನ್ನು ಸ್ವೀಕರಿಸುವುದನ್ನೂ ಲೋಹಿಯಾ ಗುರುತಿಸಿದರು. ಆದ್ದರಿಂದಲೇ ಈ ವಿಧಾನಗಳನ್ನು ಹಿಂದುಳಿದ ರಾಷ್ಟ್ರಗಳ ಜನರ ಹೊಟ್ಟೆ ತುಂಬಿಸುವುದಿಲ್ಲವೆಂಬುದನ್ನು ಗಾಂಧಿಯಂತೆ ಲೋಹಿಯಾ ಕೂಡ ಅರಿತರು. ಜೊತೆಗೆ ಆರ್ಥಿಕ ಹಾಗೂ ಕೈಗಾರೀಕರಣದ ಬೆಳವಣಿಗೆಯ ಅತ್ಯುನ್ನತ ಸ್ಥಿತಿಯಲ್ಲಿ ಕ್ರಾಂತಿಯಾಗುವುದೆಂಬ ಮಾರ್ಕ್ಸ್‌ನ ಗ್ರಹಿಕೆ ಹುಸಿಯಾದದ್ದನ್ನೂ ಲೋಹಿಯಾ ಕಂಡುಕೊಂಡರು; ಮಾರ್ಕ್ಸ್‌ನ ನಿರೀಕ್ಷೆಗೆ ವಿರುದ್ಧವಾಗಿ, ಆರ್ಥಿಕ ವಾಗಿ ಹಿಂದುಳಿದ ರಷ್ಯಾದಲ್ಲಿ ಕ್ರಾಂತಿಯಾದದ್ದನ್ನು ಹಾಗೂ ಕೈಗಾರಿಕಾ ಪ್ರಗತಿ ಸಾಧಿಸಿದ ಬ್ರಿಟನ್ ಹಾಗೂ

ಅಮೆರಿಕಾಗಳಲ್ಲಿ ಕ್ರಾಂತಿಯ ಸುಳಿವೇ ಕಾಣದಿದ್ದುದನ್ನೂ ಲೋಹಿಯಾ ಗಮನಿಸಿದರು.

ಅದರ ಜೊತೆಗೇ, ಏಷ್ಯಾದ ವಿರುದ್ಧ ಯೂರೋಪ್ ಬಳಸುವ ಆಯುಧಗಳಲ್ಲಿ ಮಾರ್ಕ್ಸ್‌ವಾದವೂ ಒಂದು ಎಂದು ಲೋಹಿಯಾ ಕೊಂಚ ಉತ್ಪ್ರೇಕ್ಷೆಯಿಂದಲೇ ವಾದಿಸಿದರು. 'ಕಳೆದ ಮುನ್ನೂರು ವರ್ಷಗಳಿಂದ ಯೂರೋಪಿನಲ್ಲಿ ಹುಟ್ಟಿದ ಸಿದ್ಧಾಂತಗಳು ಯೂರೋಪಿನ ಯಜಮಾನಿಕೆಯನ್ನು ಬಲಪಡಿಸುತ್ತಲೇ ಸಾಗಿವೆ. ಆದ್ದರಿಂದ ಆ್ಯಡಂಸ್ಮಿತ್‌ವಾದ, ಮಾರ್ಕ್ಸ್‌ವಾದ, ರೂಸೋ, ಲಾಕ್, ಹೆಗೆಲ್-ಈ ಎಲ್ಲರ ವಾದಗಳೂ ಯೂರೋಪಿನ ಗುರಿಗೇ ಪೂರಕವಾಗಿವೆ' ಎಂದು ಲೋಹಿಯಾಗೆ ಖಚಿತವಾಗಿ ಅನ್ನಿಸಿತ್ತು. ಆದರೂ 'ಮಾರ್ಕ್ಸ್‌ವಾದ ಒಟ್ಟಾರೆಯಾಗಿ ಮನುಷ್ಯನ ಬಗ್ಗೆ ಮಾತಾಡಿದೆಯೇ ಹೊರತು, ಕೇವಲ ಯೂರೋಪಿಯನ್ನನ ಬಗ್ಗೆ ಮಾತಾಡಿಲ್ಲ ಹಾಗೂ ಅದು ಮಾನವ ಕೋಟಿಗೆ ಸಮೃದ್ಧಿ, ಸಮಾನತೆ, ಶಾಂತಿ ತರುವುದರ ಬಗ್ಗೆ ಏಕಪ್ರಕಾರದ ಉದ್ದೇಶ ಹೊಂದಿದೆ' ಎಂಬ ಬಗ್ಗೆ ಲೋಹಿಯಾಗೆ ಖಾತ್ರಿಯಿತ್ತು.

ಆದರೆ ಉತ್ಪಾದನಾಶಕ್ತಿಗಳಿಗೂ ಸಮೃದ್ಧಿಗೂ ಇರುವ ಸಂಬಂಧದ ಬಗ್ಗೆ ಮಾರ್ಕ್ಸ್‌ವಾದೀ ತಿಳುವಳಿಕೆ ಏಷ್ಯಾದ ಸಂದರ್ಭದಲ್ಲಿ ಹುಸಿಯಾಯಿತು ಎಂಬ ವಾಸ್ತವ ಚಿತ್ರ ಲೋಹಿಯಾ ಅವರ ಕಣ್ಣು ಮುಂದೇ ಇತ್ತು: '..ಆದರೆ ಬಿಡುಗಡೆಗೊಂಡ ಉತ್ಪಾದನಾ ಶಕ್ತಿಗಳು ಏಷ್ಯಾದಲ್ಲಿ ವರ್ತಿಸುವ ಕ್ರಮವೇ ಬೇರೆ; ಯೂರೋಪಿನಲ್ಲಿ ವರ್ತಿಸುವ ರೀತಿಯೇ ಬೇರೆ. ಈ ತಂತ್ರಜ್ಞಾನ ಮುಂದೊಮ್ಮೆ ವರ್ಣೀಯರ ಪ್ರದೇಶಗಳಿಗೆ ಹೆಚ್ಚು ಸಮೃದ್ಧತೆಯನ್ನು ತರಬಲ್ಲದೆಂದುಕೊಂಡರೂ, ಬಿಳಿಯರಿಗೆ ಅದಕ್ಕಿಂತ ಹೆಚ್ಚಿನ ಸಮೃದ್ಧತೆಯನ್ನು ತರಬಲ್ಲದು ಹಾಗೂ ಮಾರ್ಕ್ಸ್‌ವಾದ ಈ ಸಮಸ್ಯೆ ಕುರಿತು ಎಚ್ಚರ ತೋರಲಿಲ್ಲ'.

ಮಾರ್ಕ್ಸ್‌ನ ವರ್ಗ ಸಿದ್ಧಾಂತ ಭಾರತದ ಮಟ್ಟಿಗೆ ಅಪೂರ್ಣವಾಗಿಯೇ ಉಳಿದಿದ್ದನ್ನು ಕಂಡ ಲೋಹಿಯಾಗೆ ಜಾತಿ ಪದ್ಧತಿಯನ್ನು ಅರಿಯದೆ, ಭಾರತದೊಳಗಿನ ಸಂಘರ್ಷಗಳನ್ನು ಅರಿಯುವುದು ಅಸಾಧ್ಯವೆಂಬುದು ಗೊತ್ತಿತ್ತು. ವರ್ಗಗಳನ್ನು ಅಧ್ಯಯನ ಮಾಡಿದ ಮಾರ್ಕ್ಸ್ ಎಲ್ಲರಿಗೂ ಸಮಾನ ಅವಕಾಶ ಸೃಷ್ಟಿಸುವ ಮೂಲಕ ಸಮಾನತೆಯ ಸಮಾಜ ನಿರ್ಮಾಣ ಮಾಡಬಹುದೆಂದು ವಾದಿಸಿದ.

ಆದರೆ ಜಾತಿಪದ್ಧತಿ ಸೃಷ್ಟಿಸಿದ ಖಾಯಂ ಅಸಮಾನತೆಯನ್ನು ಕಂಡಿದ್ದ ಲೋಹಿಯಾ, ದುರ್ಬಲ ಜಾತಿಗಳಿಗೆ ಆದ್ಯತಾ ಅವಕಾಶಗಳನ್ನು ನೀಡುವ ಮೂಲಕ ಸಮಾನತೆ ಸಾಧಿಸುವ ಅಗತ್ಯ ಕುರಿತು ನಿರಂತರವಾಗಿ ವಾದಿಸಿದರು, ಹೋರಾಡಿದರು ಹಾಗೂ ತಮ್ಮ ಪಕ್ಷದಲ್ಲೇ ಅದನ್ನು ಜಾರಿಗೆ ತಂದರು. ಆ ಮೂಲಕ ಮಾತ್ರ ಜಾತಿಪದ್ಧತಿ ಯನ್ನು ಕೊನೆಗಾಣಿಸಬಹುದೆಂಬುದು ಅವರ ಮುನ್ನೋಟವಾಗಿತ್ತು. ಮುಂದೆ ಹಾವನೂರು ವರದಿ ಹಾಗೂ ಮಂಡಲ್ ವರದಿಗಳ ಮೂಲಕ ಜಾರಿಗೆ ಬಂದ ಹಾವನೂರು ವರದಿ ಹಾಗೂ ಮಂಡಲ್ ವರದಿಗಳ ಮೂಲಕ ಜಾರಿಗೆ ಬಂದ ಹಿಂದುಳಿದ ವರ್ಗಗಳ ಮೀಸಲಾತಿಯ ಪ್ರಶ್ನೆಯನ್ನು ಲೋಹಿಯಾ ಆ ಕಾಲದಲ್ಲೇ ಪ್ರತಿಪಾದಿಸಿದ್ದರು. ಈ ಹಿನ್ನೆಲೆಯಲ್ಲಿ ವರ್ಗ ಮತ್ತು ಜಾತಿಗಳ ನಡುವಣ ಹೊಯ್ದಾಟವನ್ನು ಮಾನವ ಚರಿತ್ರೆಯ ಮುಖ್ಯ ಲಕ್ಷಣವನ್ನಾಗಿ ಲೋಹಿಯಾ ಗುರುತಿಸಿದರು. ಇವೆರಡರ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ತುಡಿತ ಇತಿಹಾಸದ ಮತ್ತೊಂದು ಚಾಲಕ ಶಕ್ತಿಯಾಗಿದೆಯೆಂದು ಲೋಹಿಯಾ ಬರೆದರು. ಹಾಗೆ ಹೇಳುವಾಗಲೂ 'ಚರಿತ್ರೆಯಲ್ಲಿ ಯಾವ ಉಕ್ಕಿನ ನಿಯಮಗಳೂ (Iron Laws) ಇಲ್ಲ' ಎಂಬ ಬಗ್ಗೆ ಲೋಹಿಯಾಗೆ ಅನುಮಾನವಿರಲಿಲ್ಲ. 'ಒಬ್ಬ ಇನ್ನೊಬ್ಬನನ್ನು ಕೊಲ್ಲದ ಹಾಗೂ ಒಬ್ಬ ಮತ್ತೊಬ್ಬನನ್ನು ಹೀರದ' ಸಮಾಜದ ಕನಸು ಕಂಡ ಲೋಹಿಯಾಗೆ ಮಾನವ ಸಮಾಜ ತಲುಪಲಾರದ ಹಾಗೂ ಕೇವಲ ಆದರ್ಶವಾದ ಅಮೂರ್ತ ತತ್ವಗಳ ಬಗ್ಗೆ ಆಸಕ್ತಿಯಿರಲಿಲ್ಲ. ಆದ್ದರಿಂದಲೇ ಅವರು ಅಮೂರ್ತ ತತ್ವಗಳನ್ನು ಕಾರ್ಯರೂಪಕ್ಕಿಳಿಸುವ ಬಗೆಯನ್ನು ಕುರಿತು ಚಿಂತಿಸಿದರು. ಉದಾಹರಣೆಗೆ, ಸಮಾನತೆಯ ತತ್ವವನ್ನು ಕಾರ್ಯರೂಪಕ್ಕೆ ತರುವ ಬಗೆ: ಬಡವ-ಬಲ್ಲಿದರ ನಡುವಣ ಅಂತರವನ್ನು ಮೊದಲು ೧:೧೦ರಷ್ಟಾದರೂ ಇರುವಂತೆ ಮಾಡಿ, ಕ್ರಮೇಣ ಸಮಾಜ ಸಮೃದ್ಧವಾದಂತೆಲ್ಲಾ ಅದನ್ನು ೧:೫ರಷ್ಟಕ್ಕೆ ಹಾಗೂ ೧:೩ ರಷ್ಟಕ್ಕೆ ಇಳಿಸುವುದನ್ನು ಸಾಧ್ಯವಾಗಿಸುವ ಬಗ್ಗೆ

ಜಾತಿಪದ್ಧತಿ ಸೃಷ್ಟಿಸಿದ ಖಾಯಂ ಅಸಮಾನತೆಯನ್ನು ಕಂಡಿದ್ದ ಲೋಹಿಯಾ, ದುರ್ಬಲ ಜಾತಿಗಳಿಗೆ ಆದ್ಯತಾ ಅವಕಾಶಗಳನ್ನು ನೀಡುವ ಮೂಲಕ ಸಮಾನತೆ ಸಾಧಿಸುವ ಅಗತ್ಯ ಕುರಿತು ನಿರಂತರವಾಗಿ ವಾದಿಸಿದರು, ಹೋರಾಡಿದರು ಹಾಗೂ ತಮ್ಮ ಪಕ್ಷದಲ್ಲೇ ಅದನ್ನು ಜಾರಿಗೆ ತಂದರು. ಆ ಮೂಲಕ ಮಾತ್ರ ಜಾತಿಪದ್ಧತಿಯನ್ನು ಕೊನೆಗಾಣಿಸಬಹುದೆಂಬುದು ಅವರ ಮುನ್ನೋಟವಾಗಿತ್ತು. ಮುಂದೆ ಹಾವನೂರು ವರದಿ ಹಾಗೂ ಮಂಡಲ್ ವರದಿಗಳ ಮೂಲಕ ಜಾರಿಗೆ ಬಂದ ಹಿಂದುಳಿದ ವರ್ಗಗಳ ಮೀಸಲಾತಿಯ ಪ್ರಶ್ನೆಯನ್ನು ಲೋಹಿಯಾ ಆ ಕಾಲದಲ್ಲೇ ಪ್ರತಿಪಾದಿಸಿದ್ದರು.ಈ ಹಿನ್ನೆಲೆಯಲ್ಲಿ ವರ್ಗ ಮತ್ತು ಜಾತಿಗಳ ನಡುವಣ ಹೊಯ್ದಾಟವನ್ನು ಮಾನವ ಚರಿತ್ರೆಯ ಮುಖ್ಯ ಲಕ್ಷಣವನ್ನಾಗಿ ಲೋಹಿಯಾ ಗುರುತಿಸಿದರು. ಇವೆರಡರ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ತುಡಿತ ಇತಿಹಾಸದ ಮತ್ತೊಂದು ಚಾಲಕ ಶಕ್ತಿಯಾಗಿದೆಯೆಂದು ಲೋಹಿಯಾ ಬರೆದರು.

ಲೋಹಿಯಾ ಆಳವಾಗಿ ಯೋಚಿಸಿದರು. ಹಾಗೆಯೇ ರಾಷ್ಟ್ರಗಳೊಳಗಿನ ಸಮಾನತೆಯ ಪ್ರಶ್ನೆಯಂತೆಯೇ ರಾಷ್ಟ್ರ-ರಾಷ್ಟ್ರಗಳ ನಡುವಣ ಸಮಾನತೆಯ ಪ್ರಶ್ನೆಯೂ ಮುಖ್ಯವೆಂದು ಅವರು ತಿಳಿದಿದ್ದರು.

ಮಾರ್ಕ್ಸ್‌ವಾದದ ಓರೆಕೋರೆಗಳನ್ನು ಟೀಕಿಸುತ್ತಾ, ಅದರ ಜೊತೆಗೇ ಮಾರ್ಕ್ಸ್‌ವಾದದ ಮುಖ್ಯ ಎಳೆಗಳಲ್ಲಿ ಹಿಂದುಳಿದ ನಾಡುಗಳಿಗೆ ಯಾವುದು ಅಗತ್ಯ ಎಂಬುದನ್ನು ಪರಿಶೀಲಿಸುತ್ತಾ, ಮಾನವ ಜಗತ್ತಿಗೆ ಕಾರ್ಲ್‌ಮಾರ್ಕ್ಸ್ ನೀಡಿದ ಒಂದು ದೊಡ್ಡ ಕೊಡುಗೆಯನ್ನು ಲೋಹಿಯಾ ಬಹುವಾಗಿ ಮೆಚ್ಚಿಕೊಳ್ಳುತ್ತಾರೆ:

ಮಾರ್ಕ್ಸ್‌ವಾದವನ್ನು ಚೆನ್ನಾಗಿ ಅರಿತವನು ಸ್ವಂತ ಸ್ವತ್ತಿನ ಬಗ್ಗೆ ಎಂದೂ ವ್ಯಾಮೋಹ ಕ್ಕೊಳಗಾಗಲಾರ. ಇದು ಮಾರ್ಕ್ಸ್‌ವಾದದ ಮಹಾನ್ ಸಾಧನೆ. ಮಾರ್ಕ್ಸ್‌ವಾದದಲ್ಲಿ ನಿಷ್ಣಾತನಾದವನು ಜೀವನದ ಇತರ ರಂಗಗಳಲ್ಲಿ ಮೋಸಗಾರನೂ ಕೊಲೆ ಪಾತಕಿಯೂ ಆದಾನು; ಆದರೆ ಸ್ವಂತ ಸ್ವತ್ತನ್ನು ಮಾಡಿಕೊಳ್ಳುವುದರ ಬಗ್ಗೆ ಮಾತ್ರ ವ್ಯಾಮೋಹ ಕ್ಕೊಳಗಾಗಲಾರ. ಇತರರನ್ನು ಶೋಷಿಸಿ ಉತ್ಪತ್ತಿ ಮಾಡಿದ ಸ್ವತ್ತಿನ ಬಗ್ಗೆ ಅಸಹ್ಯಪಡುವಂತೆ ಮಾಡುವುದು ತೀರಾ ಸಣ್ಣ ಸಾಧನೆಯೇನೂ ಅಲ್ಲ; ಯಾವ ಆತ್ಮಸಂಯಮದ ಅವಶ್ಯಕತೆಯೂ ಇಲ್ಲದೆ, ಸ್ವಂತದ ಆಸ್ತಿಯ ಬಗೆಗಿನ ಸ್ವಾರ್ಥವನ್ನು ತೊಡೆದು, ಈ ನಿಟ್ಟಿನಲ್ಲಿ ಮಾನವವನ್ನು ನಿಸ್ವಾರ್ಥಿಯಾಗಿ ಮಾಡುವ ಮಹಾನ್ ಗುಣವನ್ನು ನಾನು ಅತ್ಯಂತ ಕ್ರಾಂತಿಕಾರಿಕವಾದುದೆಂದು ಭಾವಿಸುತ್ತೇನೆ.

ಹೀಗೆ ಖಾಸಗಿ ಆಸ್ತಿಯ ಬಗೆಗೆ ಮಾರ್ಕ್ಸ್‌ನ ಕ್ರಾಂತಿಕಾರಕ ವಿಚಾರವನ್ನು ಆರಾಧಿಸಿದ ಲೋಹಿಯಾ ತಮ್ಮ ಜೀವಿತದಲ್ಲಿ ಯಾವ ಆಸ್ತಿಯನ್ನೂ ಹೊಂದಿರಲಿಲ್ಲವೆಂಬುದನ್ನು ಇಲ್ಲಿ ಉಲ್ಲೇಖಿಸಬೇಕು. ವಿಚಾರಗಳೊಡನೆ ಮುಖಾಮುಖಿಯೆನ್ನುವುದು ಲೋಹಿಯಾ ಅವರಿಗೆ ಕೇವಲ ಬೌದ್ಧಿಕ ಕಸರತ್ತಾಗಿರಲಿಲ್ಲ. ಗಾಂಧಿಯಾಗಲಿ, ಮಾರ್ಕ್ಸ್ ಆಗಲಿ, ಲೋಹಿಯಾರಲ್ಲಿ ಜೀವಂತವಾಗಿ ಉಳಿದಿದ್ದು ಹಾಗೂ ಜನರನ್ನು ತಲುಪಬಲ್ಲ, ಜನತೆಯ ಜೀವನವನ್ನು ಕೊಂಚವಾದರೂ ಬದಲಿಸಬಲ್ಲ ಚೈತನ್ಯವಾಗಿ ಮುಂದುವರಿದಿದ್ದು ಈ ಕಾರಣದಿಂದಾಗಿಯೇ. ಇಷ್ಟಾಗಿಯೂ ಮಾರ್ಕ್ಸ್ ಅಥವಾ ಗಾಂಧೀಜಿಯಲ್ಲಾಗಲೀ ಹಾಗೂ ಅವರಿಬ್ಬರನ್ನೂ ಆಪ್ತವಾಗಿ, ಆಳವಾಗಿ ಸಂಧಿಸಿದ ಲೋಹಿಯಾರಲ್ಲಾಗಲೀ ಎಲ್ಲ ಕಾಲದ ಪ್ರಶ್ನೆಗಳಿಗೂ ಸಿದ್ಧ ಉತ್ತರಗಳಿಲ್ಲವೆನ್ನುವುದು ನಿಜ. ಅವರು ತಮ್ಮ ಕಾಲದಲ್ಲಿ ನಿಂತು ರೂಪಿಸಿದ ಹಣತೆಗಳಿಂದ ನಮ್ಮ ಕಾಲದ ಬೆಳಕನ್ನು ನಾವೇ ಬೆಳಗಿಸಿಕೊಳ್ಳಬೇಕು, ಅಲ್ಲವೆ ? □

ಹೈ ಹೀಲ್ಡ್ ಷೂ

○ಬಾನು ಮುಷ್ತಾಕ್

ಲೋಕ ಚಿಕ್ಕದು ಅನ್ನಿ; ಅಥವ ದೊಡ್ಡದು ಅಂತೇಳ್ಳಿ...ಇಲ್ಲವೇ ಪ್ರಪಂಚ ದುಂಡಗಿದೆ ಅಂತಲೋ.,ಹ್ಹೆ.ಹ್ಹೆ. ಅಂತ ನಗೆ ಬೀರುತಾ ವಿಶ್ವವೇ ಒಂದು ಪುಟ್ಟ ಗ್ರಾಮವಾಗಿ ಬಿಟ್ಟಿದೆ... ಅಂತಲೋ...ಏನಾದರೂ ಒಂದು ಹೇಳಿ! ಹಾಗೆ ಹೇಳಿದರೂ... ಬಿಟ್ಟರೂ ಈಗ ಅಂತಹ ವ್ಯತ್ಯಾಸ ವೇನಿಲ್ಲ.

ವ್ಯತ್ಯಾಸವೇನಾದರೂ ಇದೆ ಅಂತ ಅನಿಸುತ್ತಿದ್ದುದು ಈಗ ಐದಾರು ವರ್ಷಗಳ ಹಿಂದಿನವರೆಗೂ. ಯಾಕೆಂದರೆ...ಆಗ ಸವೂದಿಯಿಂದ ಯಾರಾದರೂ ಬಂದರೆಂದರೆ... ಇಡೀ ಕುಟುಂಬದಲ್ಲಿ ಅವರಂತಹ ರಾಜ-ಮಹಾರಾಜರು.. ಅಲ್ಲಲ್ಲ!.. ಚಕ್ರವರ್ತಿಗಳು ಯಾರೂ ಇರುತ್ತಿರಲಿಲ್ಲ. ಅವರ ಮಕ್ಕಳ ತಳಕ್ಕೆ ಅಂಟಿಸುತ್ತಿದ್ದ ನ್ಯಾಪಿಯಿಂದ ಹಿಡಿದು, ಅವರು ಬಳಸುತ್ತಿದ್ದ ಟೂಥ್‌ಪೇಸ್ಟ್‌ನಿಂದ ತುಂಬಿರುತ್ತಿದ್ದ ಪ್ಲಾಸ್ಟಿಕ್ಕ್ಯ ಟ್ಯೂಬ್ಯ, ಆ ಹೆಂಗಸರು ತೊಡುತ್ತಿದ್ದ ಫ್ರಿಲ್‌ಗಳು ಮತ್ತು ನಾಜೂಕು ಲೇಸಿನ ಮೈನವಿರೇಳಿಸುವಷ್ಟು ತೆಳು ಬಣ್ಣದ ನೈಟಿಗಳು, ಉಟ್ಟರೆಂದರೆ ದೇಹದ ಪ್ರತಿ ಸುಳಿಯ ಆಕಾರವನ್ನು 'ಆಸ್ ಇಟ್ ಈಜ್' ತೋರುತ್ತಿದ್ದ ಸತ್ತ ಹಾವಿನಂತೆ ಮೈಪೂರ್ತ ಆವರಿಸಿದ್ದ ಸೀರೆ, ಪ್ರತಿ ಮಿಡಿತದೊಂದಿಗೆ ಹೊರ ಸೂಸುತ್ತಿದ್ದ ಸ್ಪ್ರೇ, ಡ್ರೆಸ್‌ವಾಚ್‌ಗಳು, ಸ್ಯಾಮ್‌ಸೊನೈಟ್ ಸೂಟ್‌ಕೇಸ್‌ಗಳು...ಆಮೇಲೆ...ಎಲ್ಲಿ ಮರೆತು ಹೋಗುವುದೋ ಎಂಬ ಆತಂಕದಿಂದ ಅವರ ಕುತ್ತಿಗೆಯಲ್ಲಿ ತೂಗುತ್ತಿದ್ದ ಅವರವರ ಹೆಸರಿನ ಲಾಕೆಟ್‌ಗಳು! ಬೆರಳ ತುಂಬ ಉಂಗುರ ಗಳು, ಮೊಣಕೈವರೆಗಿನ ಬಂಗಾರದ ಬಳೆಗಳು, ಬ್ರೇಸ್‌ಲೆಟ್‌ಗಳು. . ಅಸಲಿ ಚಿನ್ನದ್ದು ಎಂದು ಪ್ರತ್ಯೇಕ ವಾಗಿ ಹೇಳಬೇಕಾಗಿಲ್ಲವಷ್ಟೇ.ಕಿವಿಯಲ್ಲಿ ಪಿಸುಗುಟ್ಟುವಂತೆ ತೂಗಾಡುತ್ತಿದ್ದ ಆಭರಣಗಳು, ತೆಳು ಕಾಟನ್ನಿನ ಪಾರಿವಾಳದ ಬಿಳಿಬಣ್ಣದ ಅಂಡರ್ ವೇರ್‌ಗಳು... ಒಂದೇ.. ಎರಡೇ.. ಏನೇನೆಂದು ವರ್ಣಿಸುವುದು! ಆಮೇಲೆ... ಆಮೇಲೆ..ಹಗುರವಾದ... ನವಿಲಗರಿಯಂತಹ ಬಾಥ್ ರೂಮ್ ಚಪ್ಪಲಿಗಳು.. ಚಪ್ಪಲಿಗಳು..ಚಪ್ಪಲಿಗಳು.

ನಯಾಜ್ ಖಾನ್‌ನ ಕಲ್ಪನೆಯ ಕುದುರೆ ಇಲ್ಲಿಗೆ ತಲುಪಿದ ಕೂಡಲೇ ಕುಂಟಲಾರಂಭಿಸುತಿತ್ತು. ಬಡಕಲು ಮೈಯ ಜಟಕಾ ಗಾಡಿಯ ಒಣ ಕುದುರೆಯಂತೆ, ಒಂದು ಹೆಜ್ಜೆಯನ್ನು ಕೂಡಾ ಮುಂದಿಡಲು ನಿರ್ಲಜ್ಜವಾಗಿ ನಿರಾಕರಿಸುತಿತ್ತು. ನಯಾಜ್ ಖಾನ್‌ಗೆ ಬೇಕಾಗಿದ್ದುದು ಅದೇ. ಆ ಒಂದು ಜೊತೆ ಚಪ್ಪಲಿಯ ವಿಸ್ಮಯ ಭರಿತ ಅನೂಹ್ಯ ಲೋಕ ಆವನನ್ನು ಮೈಮರೆಯುವಂತೆ ಮಾಡುತಿತ್ತು.

ಇದೀಗ ಮೂರು ವರ್ಷಗಳ ಹಿಂದೆ ಅವನ ಅತ್ತಿಗೆ ನಸೀಮ ಸವೂದಿಯಿಂದ ಹಿಂದಿರುಗಿದ್ದಳು. ಅಣ್ಣ ಮೆಹಬೂಬ್ ಖಾನ್ ಅವನಿಗೆ ತಂದಿತ್ತ ರ್ಯಾಡೋ ವಾಚ್ ಅವನ ಎಡಗೈ ಮಣಿಗಟ್ಟಿನ ಮೇಲೆ ರಾರಾಜಿಸಿದ್ದೂ ಅಲ್ಲದೆ, ಅವನ ಸಹೋದ್ಯೋಗಿಗಳ ಹೊಟ್ಟೆಕಿಚ್ಚಿಗೂ ಕಾರಣವಾಗಿತ್ತು. ಡಿ.ಡಿ.ಪಿ.ಐ. ಆಫೀಸಿನಲ್ಲಿ ಎರಡನೇ ದರ್ಜೆಯ ಗುಮಾಸ್ತನಾಗಿದ್ದ ಅವನ ರ್ಯಾಡೋವಾಚ್ ಎಂದಾದರೊಂದು ದಿನ ಮಾರಾಟಕ್ಕೆ ಬಂದೇ ಬರುತ್ತದೆಂದು, ಆಫೀಸಿನಲ್ಲಿ ಬಡ್ಡಿ-ಸಾಲದ ವ್ಯವಹಾರ ನಡೆಸುತ್ತಿದ್ದ ರಾಜೀವನ ನಿರೀಕ್ಷೆ. ಅವನ ವಾಚು ರಾಜೀವನ ಕೈ ಸೇರಿದ್ದರೂ ನಯಾಜ್‌ಗೆ ಹೆಚ್ಚಿನ ಚಿಂತೆ ಏನೂ ಇರಲಿಲ್ಲ. ಆದರೆ ಅವನ ಗಮನವೆಲ್ಲಾ ಕೇಂದ್ರೀಕೃತವಾಗಿದ್ದೇ... ನಸೀಮಾಳ ಚಪ್ಪಲಿಯ ಸುತ್ತಾ.

ನಲವತ್ತರ ಆಸುಪಾಸಿನಲ್ಲಿದ್ದ ಅವಳ ಅಂದ ಇನ್ನೂ ಮಾಸಿರಲಿಲ್ಲ. ಅವಳ ಇನ್ಯಾವ ಅಂದಚೆಂದವನ್ನು ಲಕ್ಷಿಸದ ನಯಾಜ್ ಥೇಟ್ ಪುರಾಣ ಕಾಲದ ಲಕ್ಷ್ಮಣನಂತೆ ಅತ್ತಿಗೆಯ ಪಾದಗಳ ಕಡೆಯೇ ತನ್ನ ಲಕ್ಷ್ಯವನ್ನೆಲ್ಲಾ ಕೇಂದ್ರೀಕರಿಸಿದ್ದ. ಆಕೆಯ ಚಪ್ಪಲಿಗಳು ಅವನ ಚಿತ್ತವನ್ನಪಹರಿಸಿದ್ದವು. ಕಪ್ಪು ಬಣ್ಣದ ಮೃದುವಾದ ತೊಗಲಿನ ಮೇಲೆ ಕಂಡೂ ಕಾಣದಂತೆ ಫಳಕ್ಕೆಂದು ಮಿಂಚುವ ಹರಳುಗಳು ಹೂವಿನಾಕಾರದಲ್ಲಿ ಅರಳಿದ್ದವು. ಅದರ ಹಿಮ್ಮಡಿ ಮಾತ್ರ ಎತ್ತರವಾಗಿದ್ದು ಕೆಳ ಭಾಗಕ್ಕೆ ಬರುಬರುತ್ತಾ ಚೂಪಾಗಿದ್ದು ಆಕೆಯ ಕಾಲಿ ಗಾಗಿಯೇ ಆ ವಿಶಿಷ್ಟ ಚಪ್ಪಲಿ ನಿರ್ಮಾಣವಾದಂತಿತ್ತು. ಆದನ್ನು ಮೆಟ್ಟಿ ಆಕೆ ನಡೆದಾಡುತ್ತಿದ್ದರೆ, ಗಾಳಿಯಲ್ಲಿ ತೇಲು ತ್ತಿರುವಳೋ ಎಂಬಂತೆ ಅವನಿಗನ್ನಿಸುತಿತ್ತು. ಆ ಚಪ್ಪಲಿ ಮೆಟ್ಟಿದವರು ಖಂಡಿತ ವಾಗಿಯೂ ಬಿದ್ದು... ಖಂಡಿತ ವಾಗಿಯೂ ಉಂಗುಷ್ಠ ಕಿತ್ತು ಬಂದು... ಖಂಡಿತವಾಗಿಯೂ ಅವರ ಕಾಲು ಉಳುಕೇ ತೀರುವುದೆಂದು ಆವನ ಖಂಡಿತವಾದ ನಂಬಿಕೆಗಳು.... ಖಂಡಿತವಾಗಿಯೂ ಸೋಲನ್ನೊಪ್ಪಿದ್ದು... ಖಂಡಿತವಾಗಿಯೂ ಅವನನ್ನು ಆಶ್ಚರ್ಯದ ಕೂಪಕ್ಕೆ ತಳ್ಳಿದ್ದವು. ಹಾಗಾದಾಗ ಆ ಚಪ್ಪಲಿಯನ್ನು ಆಕೆ ಇಲ್ಲಿಯೇ



ಬಿಸುಟು ಹೋದಲ್ಲಿ, ಅದನ್ನು ರಿಪೇರಿ ಮಾಡಿಸಿ ಆರಿಫಾಳಿಗೆ ತೊಡಿಸಬಹುದೆಂಬ ಅವನ ಲೆಕ್ಕಾಚಾರ ಕೂಡ ತಲೆಕೆಳಗಾಗಿತ್ತು.

ಹೀಗಾಗಿ ಆ ಚಪ್ಪಲಿಗಳನ್ನು ಆಕೆ ಸವೂದಿಗೆ ಹಿಂದಿರುಗುವ ಹಿಂದಿನ ರಾತ್ರೆ ಕದ್ದು ಅಡಗಿಸಿಬಿಡಬೇಕೆಂಬ ಅತ್ಯಂತ ಕೆಟ್ಟ ಮಹತ್ತರವಾದ ಯೋಜನೆಯೊಂದು ಅವನ ತಲೆಯಲ್ಲಿ ಅಂಕುರಿಸಿದಾಗಲೇ ಅದರ ಸುಳಿವು ಸಿಕ್ಕಿದಂತೆ ನಸೀಮಾ ಹೋಗುವ ಎಂಟು ದಿನ ಮೊದಲೇ... ಮೆಂತ್ಯದ ಹಿಟ್ಟು, ರಾಗಿ ಹಿಟ್ಟು, ಮೆಣಸಿನ ಪುಡಿಯನ್ನು ಮತ್ತು ಹುರುಳಿಯನ್ನು ಪ್ಯಾಕ್ ಮಾಡಿದಂತೆ, ಆ ಚಪ್ಪಲಿಯನ್ನು ಕೂಡ ಪ್ಯಾಕ್ ಮಾಡಿ ಯಾವುದೋ ಸೂಟ್‌ಕೇಸ್‌ನಲ್ಲಿ ಅಡಗಿಸಿಟ್ಟು, ಲಿಬರ್ಟಿ ಚಪ್ಪಲಿಯನ್ನು ಧರಿಸಲಾರಂಭಿಸಿದಳು. ಅವನಿಗಂತೂ ರೆಡ್

ಹ್ಯಾಂಡೆಡ್ ಆಗಿ ಸಿಕ್ಕಿ ಬಿದ್ದಂತೆ ಮನಸ್ಸೆಲ್ಲಾ ಹುಳ್ಳಗಾಗಿ, ಆಕೆಯೊಡನೆ ಮಾತು-ಕತೆಯನ್ನೇ ನಿಲ್ಲಿಸಿ ಬಿಟ್ಟಿದ್ದ.

ಕೊನೆಗೂ ಧೈರ್ಯಮಾಡಿ, ಆಕೆ ಹೋಗುವ ಹಿಂದಿನ ರಾತ್ರಿಯಾದರೂ ಆ ಚಪ್ಪಲಿಯ ಪ್ರಸ್ತಾಪ ಮಾಡಿ ಅದನ್ನು ಆರಿಫಾಗೆ ತೊಡಲು ಕೊಡಿ ಎಂದು ಕೇಳಿ ಇಸಿದುಕೊಳ್ಳಬೇಕೆಂದು ಎಷ್ಟೇ ಧೈರ್ಯ ಮಾಡಿದರೂ.... ಆ ರಾತ್ರಿ ಸರಿ ಹೊತ್ತಿನವರೆಗೂ ಮಾತು-ಕಥೆ, ಪ್ಯಾಕಿಂಗ್ ಎಲ್ಲವೂ ನಡೆದಿದ್ದರೂ ಅವನ ಬಾಯಿಂದ ಒಂದೇ ಒಂದು ಶಬ್ದವೂ ಹೊರಡದಂತಾಗಿ.... ತೀರಾ ವಿಚಿತ್ರ ಗೊಂದಲದಲ್ಲಿ ಸಿಲುಕಿಕೊಂಡು ಅದರಿಂದ ಹೊರಬರಲು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಗಿ... ಇಡೀ ತನ್ನ ಹೋರಾಟ, ಗೊಂದಲ. ಇವೆಲ್ಲವೂ ಒಂದು ಜೊತೆ ಯಃಕಶ್ಚಿತ್ ಚಪ್ಪಲಿಗಾಗಿ.. ಅದೂ ತನ್ನ ಹೆಂಡತಿಗಾಗಿ ತೊಡಿಸುವುದಕ್ಕಾಗಿ ಎಂದೆನಿಸಿ ... ಕೊನೆ ಕೊನೆಗೆ ಅವನು ತೀರಾ ಅಸ್ವಸ್ಥನಾಗಿಬಿಟ್ಟ. ಈ ಬಳಲಿಕೆ ಅವನಿಗೆ ಎಷ್ಟು ಹೆಚ್ಚಾಯಿತೆಂದರೆ, ಎಡಬಿಡದೆ ಅವನಿಗೆ ವಾಂತಿಯಾಗಲಾರಂಭಿಸಿ, ಸಣ್ಣಗೆ ಆರಂಭವಾದ ಜ್ವರ ಅವನನ್ನು ಇಡಿಯಾಗಿ ಆವರಿಸಿ, ಎಂಟು ದಿನಗಳ ಕಾಲ ಅವನನ್ನು ಹಾಸಿಗೆಯಲ್ಲಿಯೇ ಅದುಮಿಟ್ಟಿತ್ತು.

ಇದೆಲ್ಲದರಿಂದ ಅಣ್ಣನನ್ನು ಬೀಳ್ಕೊಡಲು ಅವನು ಏರ್-ಪೋರ್ಟಿಗೆ ಹೋಗಲು ಕೂಡ ಅಸಾಧ್ಯವಾಯಿತು. ಅವನು ಜೊತೆಯಲ್ಲಿಲ್ಲದೆ ಆರಿಫಾ ಕೂಡ ಹೋಗದೆ... ಅಣ್ಣ-ಅತ್ತಿಗೆಯರಿಬ್ಬರೇ ಹೋದದ್ದು ಅವನಿಗೆ ಬೇಸರವೆನಿಸಿತ್ತು. ನಸೀಮಾ ಕೂಡ ಬಿಡದೆ, 'ಆಹ್ಹಾ... ಪಾಪ! ನೀವು ಹೀಗೆ ಅನಾಥರಂತೆ ಪ್ಲೇನ್ ಹತ್ತುವಂತಾಯಿತಲ್ಲ... ನಿಮ್ಮ ಪ್ರಿಯ... ಪ್ರಿಯ.. ತಮ್ಮನಿಗೆ ಏನು ಕೊರತೆಯಾಯಿತು...ತಮ್ಮಿಂದ? ಕಂಡಂತೆ ಕಾಣದಂತೆ ಇನ್ನಷ್ಟು ದುಡ್ಡು ಚೆಲ್ಲಿ ಬರಬೇಕಿತ್ತು...' ಎಂದು ಸರಿಯಾಗಿಯೇ ಕುಟುಕಿದ್ದಳು. ಆದರೂ ಮೆಹಬೂಬ್ ಖಾನ್... ಹೆಂಡತಿಗೆ ತಿಳಿಯದಂತೆ ಮುಂಬಯಿಯಿಂದ ಒಂದೆರಡು ಸಲ ಫೋನ್ ಮಾಡಿ ಅವನ ಆರೋಗ್ಯವನ್ನು ವಿಚಾರಿಸಿಕೊಂಡಿದ್ದ.

-ಎರಡು -

ಈ ಎಲ್ಲಾ ವಿಚಾರಗಳು ಬೇಡ ಬೇಡವೆಂದರೂ.. ಅವನ ತಲೆಯಲ್ಲಿ ಹೊಕ್ಕು...ಅವನನ್ನು ಅನ್ಯ ಮನಸ್ಕನಾಗಿಸುತ್ತಿದ್ದವು. ಮೆಹಬೂಬ್ ಖಾನ್ ಆಗ ಸವೂದಿಗೆ ಹಿಂದಿರುಗಿದ್ದು ಎರಡು ವರ್ಷಗಳ ನಂತರ ಮತ್ತೆ ತನ್ನ ಹುಟ್ಟೂರಿಗೆ ಎರಡು ತಿಂಗಳ ರಜೆಯಲ್ಲಿ ಬರುವವನಿದ್ದ. ಹಾಗೆಂದು ತಮ್ಮನಿಗೆ ಫೋನ್ ಕೂಡ ಮಾಡಿದ್ದು ಆತ ಹಿಂದಿರುಗಲು ಇನ್ನೇನು ಒಂದುವಾರ ಮಾತ್ರ ಬಾಕಿ ಇತ್ತು. ವಾಡಿಕೆಯಂತೆ ಅವನೇನೋ ಫೋನ್ ಮಾಡಿ, ಸವೂದಿಯಿಂದ ತಮ್ಮನಿಗೇನಾದರೂ ಬೇಕಾಗಿದೆಯೇ ಎಂದು ವಿಚಾರಿಸಿದ್ದ ಕೂಡಾ. ಆದರೆ ಆಗಲೂ ಕೂಡಾ ನಯಾಜ್... ತನ್ನ ಅಪೇಕ್ಷೆಯನ್ನು ಅಣ್ಣನಿಗೆ ತಿಳಿಸುವ ಸಾಹಸವನ್ನು ಮಾಡಲಿಲ್ಲ.

ಇಂದು ನಯಾಜ್‌ಗಾದರೋ ಉಸಿರಾಡುವುದಕ್ಕೂ ಪುರುಸೊತ್ತಿರಲಿಲ್ಲ. ಇಲಾಖೆಯಿಂದ, ಸ್ನೇಹಿತರಿಂದ ಎಲ್ಲಾ ಸಾಲ ಪಡೆದು ತಾನಿದ್ದ ಹಳೆಯ ಮನೆಗೆ ಹೊಸ ರೂಪ ಕೊಡುವುದರಲ್ಲಿ ನಿರತನಾಗಿದ್ದನವ. ಹಳೆಯದಾಗಿದ್ದರೇನಂತೆ ಅವನ ಅಜ್ಜ ಕಟ್ಟಿದ್ದ ಮನೆ ... ಅವನ ಅಮ್ಮ ಸೊಸೆಯಾಗಿ ಹೊಸಿಲು ಮೆಟ್ಟಿ ಹಜಾರದ ಪಶ್ಚಿಮ ಭಾಗದ ಗೋಡೆಗೆ

ನಲವತ್ತರ ಆಸುಪಾಸಿನಲ್ಲಿದ್ದ ಅವಳ ಅಂದ ಇನ್ನೂ ಮಾಸಿರಲಿಲ್ಲ. ಅವಳ ಇನ್ಯಾವ ಅಂದ ಚೆಂದವನ್ನು ಲಕ್ಷಿಸದ ನಯಾಜ್ ಥೇಟ್ ಪುರಾಣ ಕಾಲದ ಲಕ್ಷ್ಮಣನಂತೆ ಅತ್ತಿಗೆಯ ಪಾದಗಳ ಕಡೆಯೇ ತನ್ನ ಲಕ್ಷ್ಯವನ್ನೆಲ್ಲಾ ಕೇಂದ್ರೀಕರಿಸಿದ್ದ. ಆಕೆಯ ಚಪ್ಪಲಿಗಳು ಅವನ ಚಿತ್ತವನ್ನಪಹರಿಸಿದ್ದವು. ಕಪ್ಪು ಬಣ್ಣದ ಮೃದುವಾದ ತೊಗಲಿನ ಮೇಲೆ ಕಂಡೂ ಕಾಣದಂತೆ ಪಳಕ್ಕೆಂದು ಮಿಂಚುವ ಹರಳುಗಳು ಹೂವಿನಾಕಾರದಲ್ಲಿ ಅರಳಿದ್ದವು. ಅದರ ಹಿಮ್ಮಡಿ ಮಾತ್ರ ಎತ್ತರವಾಗಿದ್ದು ಕೆಳ ಭಾಗಕ್ಕೆ ಬರುಬರುತ್ತಾ ಚೂಪಾಗಿದ್ದು, ಆಕೆಯ ಕಾಲಿಗಾಗಿಯೇ ಆ ವಿಶಿಷ್ಟ ಚಪ್ಪಲಿ ನಿರ್ಮಾಣವಾದಂತಿತ್ತು. ಅದನ್ನು ಮೆಟ್ಟಿ ಆಕೆ ನಡೆದಾಡುತ್ತಿದ್ದರೆ, ಗಾಳಿಯಲ್ಲಿ ತೇಲುತ್ತಿರುವಳೋ ಎಂಬಂತೆ ಅವನಿಗನ್ನಿಸುತಿತ್ತು.

ಗಂಧದಲ್ಲಿ ಅದ್ದಿದ ಎರಡೂ ಕೈಯ ಗುರುತುಗಳನ್ನೂ ಮೂಡಿಸಿದ್ದ ಮನೆ. ಅಣ್ಣ ಹುಟ್ಟಿದ್ದು ಇಲ್ಲೇ... ತಾನು ಹುಟ್ಟಿದ್ದು ಇಲ್ಲೇ.. ಅತ್ತಿಗೆ ನಸೀಮಾ, ತನ್ನ ಆರಿಫಾ ಇಬ್ಬರೂ ಕೂಡ ಅಮ್ಮನ ಪಡಿಯಚ್ಚಿನಂತೆ ಆ ಮನೆಯ ಹಜಾರದ ಪಶ್ಚಿಮದ ಗೋಡೆಯ ಮೇಲೆ ಎರಡೂ ಹಸ್ತಗಳ ಮುದ್ರೆಯನ್ನೊತ್ತಿದ್ದು ತನ್ನ ಮುನ್ನಿ ಅಂಬೆಗಾಲಿಕ್ಕಿ ಚಿನ್ನಾಟವಾಡಿದ್ದು.. ಎಲ್ಲಾ ಇದೇ ಮನೆಯಲ್ಲಿ. ಅಪ್ಪ-ಅಮ್ಮನೇನೋ ಒಂದೇ ತಿಂಗಳ ಅಂತರದಲ್ಲಿ ಅದೃಶ್ಯ ಕರೆಗೆ ಓಗೊಟ್ಟು ನಡೆದದ್ದು...ಇಲ್ಲೇ... ಆ ದಾಳಿಂಬೆ ಗಿಡದ ಬುಡದಲ್ಲೇ...ಅವರಿಬ್ಬರ ಹೆಣ ಜನರ ಹೆಗಲೇರಿದ್ದು..! ಇಷ್ಟೆಲ್ಲಾ ನೆನಪುಗಳಿಗೆ ಅವನು ಸುಣ್ಣ-ಬಣ್ಣ ಮಾಡುತ್ತಿದ್ದ.

ಮಾಸ್ತರಿಕೆ ಮಾಡುತ್ತಿದ್ದ ಅಪ್ಪನ ಕೆಲಸ ಅವನಿಗೇ ದಕ್ಕಿದ್ದಲ್ಲದೆ, ಆ ಹಳೆ ಮನೆ ಕೂಡ ಅವನ ಬೀಡಾಗಿತ್ತು. ಮೆಹಬೂಬ್ ಖಾನ್ ಅವನ ಬಳಿ ಎಂದೂ ಪಾಲು ಬೇಡಿರಲಿಲ್ಲ. ಆದರೆ, ರಜೆಯಲ್ಲಿ ಬಂದಾಗಲೆಲ್ಲಾ ಅವನೇನೋ ತುಂಬಾ ಸರಳವಾಗಿಯೇ ಮಂದಲಿಗೆಯ ಮೇಲೇ ಬಿದ್ದುಕೊಳ್ಳುತ್ತಿದ್ದ. ಎಲ್ಲೆಂದರಲ್ಲಿ ಆರಾಮವಾಗಿ ಕೂತು, ಓಡಾಡಿ..ಮಲಗಿ.. ನೆಮ್ಮದಿಯಾಗಿರುತ್ತಿದ್ದ. ಆದರೆ... ನಸೀಮಾಳಂತೂ, ಆ ನೆಲದ ಮೇಲೆ ಕಾಲೂರುತ್ತಲೇ ಇರುತ್ತಿರಲಿಲ್ಲ. ತನ್ನ ಬಾತ್‌ರೂಮ್ ಚಪ್ಪಲಿ ಮೆಟ್ಟಿ ಇಡೀ ಮನೆಯಲ್ಲೆಲ್ಲಾ ಚಟಪಟ ಎಂದು ಸುತ್ತಾಡುತ್ತಿದ್ದಳು. ಅಡಿಗೆ ಮನೆಯಲ್ಲಿ ಒಂದು ಲೋಟ ಹಾಲನ್ನು ಹುಯ್ಯಿಕೊಳ್ಳಬೇಕಾದರೂ ನೆಲದ ಮೇಲೆಲ್ಲಾ ಹೇಸಿಗೆ ಮೆತ್ತಿದೆಯೇನೋ ಅನ್ನುವಷ್ಟು ಮುಖ ಕಿವಿಚಿ ಮಾರು ದೂರಕ್ಕೊಂದು ಹೆಜ್ಜೆಯನ್ನಿಡುತ್ತಾ ಹೊರಬರುತ್ತಿದ್ದ ದೃಶ್ಯವನ್ನು ನೋಡಿಯೇ ಅವನಿಗೆ ಕೋಪ ಬರುತಿತ್ತು. ಮನಸ್ಸೆಲ್ಲಾ ಕಹಿ ಕಹಿಯಾಗುತ್ತಿತ್ತು. ಅವಳ ಎಲ್ಲಾ ನಖರಾಗಳನ್ನು ಅನುಸರಿಸಿಕೊಂಡು ಆರೀಫ 'ಭಾಬಿ, ಭಾಬಿ' ಎಂದುಕೊಳುತ್ತಾ

ಕಥೆ

ಅವಳಿಗೆ ಮಾಡುತ್ತಿದ್ದ ರಾಜೋಪಚಾರಗಳನ್ನು ಆ ಭಾಬಿ ಎನಿಸಿಕೊಂಡ ನಸೀಮ ಒಲ್ಲದ ಮನಸ್ಸಿನಿಂದ .... ಅಂತೂ ಸ್ವೀಕರಿಸುತ್ತಿದ್ದಳು.

ಆರೀಫ ಇನ್ನಷ್ಟು ತಗ್ಗಿ ಬಗ್ಗಿ ನಡೆದಿದ್ದರೂ ಅವನಿಗೆ ಬೇಸರವೆನಿಸುತ್ತಿರಲಿಲ್ಲ. ಹೋಗುವಾಗಲೊಮ್ಮೆ ನಸೀಮ ತನ್ನ ಆ ಹೈಹೀಲ್ಡ್ ಚಪ್ಪಲಿಯನ್ನು ಅವಳ ಕಾಲಿಗೆ ತೊಡಿಸಿಬಿಟ್ಟಿದ್ದರೆ ಅವನಿಗೆ ಸಾಕಾಗಿತ್ತು. ಕಿನ್ನರಿಯಂತಹ ನಡಿಗೆಯನ್ನು ಆರೀಫಾ ಒಮ್ಮೆ ನಡೆದು ತೋರಿಸಿಬಿಟ್ಟರೆ ಅವನಿಗೆ ಸಂತೃಪ್ತಿಯಾಗುತಿತ್ತು. ಅವಳ ಚಪ್ಪಲಿ ಮೆಟ್ಟಿದ ಆ ಪಾದಗಳನ್ನು ಒಮ್ಮೆ ಮುಟ್ಟಿನೋಡಿ ಅವನು ಕೃತಾರ್ಥನಾಗುತ್ತಿದ್ದ. ಹೀಗೆ ಆ ಆಲೋಚನೆಯಲ್ಲಿಯೇ ಧನ್ಯತಾಭಾವ ತಲುಪಿದ್ದ ಅವನು ಒಮ್ಮೆಲೇ ಬೆಚ್ಚಿ ಬಿದ್ದು ವಾಸ್ತವಕ್ಕೆ ಮರಳಿದ.

ಅವನ ಕಣ್ಣೆದುರಿಗೇ ಆ ದೊಡ್ಡ ಮಾವಿನ ಮರ ಉರುಳಿ ಬಿದ್ದಿತ್ತು. ಮೊದಮೊದಲೇನೋ ಅವನು ಹೆಚ್ಚೇನೂ ಆತಂಕ ಪಟ್ಟುಕೊಳ್ಳದೆ ಒಂದೊಂದು ಕೊಂಬೆಯನ್ನೇ ಕಡಿಸುತ್ತಾ ಬಂದಿದ್ದ. ಒಂದೊಂದು ಹಣ್ಣು ಕೂಡಾ ಎರಡು ಬೊಗಸೆಗಳೂ ತುಂಬುವಂತೆ ಸುಪುಷ್ಟವಾಗಿ ಬಿಡುತ್ತಿದ್ದ ರಸಪೂರಿ ಮಾವಿನ ಹಣ್ಣಿನ ಮರವದು: ಪ್ರತಿವರ್ಷವೂ ಅವನು ತಿಂದು ತೇಗಿ ಆಫೀಸರ್‌ಗಳಿಗೆ ಬುಟ್ಟಿ ಬುಟ್ಟಿ ಹಣ್ಣನ್ನು ಕೊಟ್ಟು ಸಾಕಾಗಿ ಈಗ ನಾಲ್ಕೈದು ವರ್ಷಗಳಿಂದ ಮಾವಿನ ಹಣ್ಣಿನ ವ್ಯಾಪಾರಿಯೊಬ್ಬರಿಗೆ ಹೂ ಬಿಟ್ಟೊಡನೆಯೇ ಫಸಲನ್ನು ಮಾರಿಬಿಟ್ಟು ಬೊಗಸೆತುಂಬ ಹಣವನ್ನು ಮಾಡುತ್ತಿದ್ದ. ಆದರೆ ಆ ಮರ ಆಕ್ರಮಿಸಿದ್ದ ಜಾಗವನ್ನು ಕಂಡು ಈಗೀಗ ಅವನಿಗೆ ತುಂಬ ಕಿರಿಕಿರಿ ಎನಿಸುತ್ತಿತ್ತು. ಕಾಂಪೌಂಡ್ ಮತ್ತು ಮನೆಯ ನಡುವಿದ್ದ...ಒಂದು ಮನೆಯನ್ನು ನಿರ್ಮಾಣ ಮಾಡಬಹುದಾದಷ್ಟು ಜಾಗವನ್ನು ಯಾರ ಮುಲಾಜು ಇಲ್ಲದೆ ಅದು ಆಕ್ರಮಿಸಿಕೊಂಡಿತ್ತು.

ಈ ಸಾರಿ ಹೂಬಿಡುವ ವೇಳೆಗೆ ವ್ಯಾಪಾರಿಗಳು ಬರಬಹುದೆಂದು ಕಾದ ನಯಾಜ್ ಖಾನ್‌ಗೆ ನಿರಾಶೆಯೊಂದೇ ದೊರಕಿದ್ದು, ಅವನೇ ಖುದ್ದು ಹೋಗಿ ಮಾತನಾಡಿಸಿದ ಒಂದಿಬ್ಬರು ವ್ಯಾಪಾರಿಗಳು ಉದಾಸೀನದಿಂದ 'ಒಂದು ಮರ ಯಾರಿಗೆ ಬೇಕಯ್ಯಾ-

ಈ ವರ್ಷ ಫಸಲು ಬೇಕಾದಷ್ಟು ಬಂದಿದೆ. ನೀವೇ ತಿಂದ್ಹಾಕಿ ಇಲ್ಲವೇ ತಿಪ್ಪೆಗೆಸಿಯಿರಿ' ಎಂದುಬಿಟ್ಟಿದ್ದರು. ಆದರೆ ಅನಪೇಕ್ಷಿತವಾಗಿ ಅವನಿಗೆ ಬಂದ ಆಫರ್ ಏನೆಂದರೆ ಆ ಮರವನ್ನು ನೆಲಸಮ ಮಾಡಿ ಅಲ್ಲಿ ಒಂದು ಸೆಲ್ಲಾರ್ ಮೇಲೆ ಎರಡು ಮಳಿಗೆಗಳನ್ನು ನಿರ್ಮಿಸಿದಲ್ಲಿ ತಾನು ಬಾಡಿಗೆಗೆ ಪಡೆಯುವುದಾಗಿಯೂ ಮುಂಚಿತವಾಗಿಯೇ ಅಡ್ವಾನ್ಸ್ ಹಣ ನೀಡುವುದಾಗಿಯೂ ಬಂದ ಇಂತಹ ಅವಕಾಶ ಕಳೆದುಕೊಳ್ಳಲು ಅವನು ಸಿದ್ಧನಿರಲಿಲ್ಲ.

ಅವನ ಹೆಗಲ ಮೇಲೆ ಯಾವ ಗೂಬೆ ಕುಳಿತಿತ್ತೋ, ಮೊದಮೊದಲು ಒಂದೊಂದಾಗಿ ರೆಂಬೆಗಳನ್ನು ಕಡಿಸಿಕೊಂಡು ಬಂದವ ಒಂದು ದಿನ ಪೂರ್ತಾ ಉರುಳಿಸಿಯೇ ಬಿಟ್ಟ. ಕಿಟಕಿಯಿಂದ ನೋಡುತ್ತಿದ್ದ ಆರಿಫಾ ಕಣ್ಣೀರು ಹರಿಸಿದಳು. ಅವಳಿಗೆ ಹೆಚ್ಚೇನೂ ನೆನಪುಗಳಿರಲಿಲ್ಲ. ಕೆಲವೇ ಕೆಲವು ನೆನಪುಗಳನ್ನು ಜಾಡಿಯಲ್ಲಿಟ್ಟು ಉಪ್ಪಿನ ಕಾಯಿ ಹಾಕುವಷ್ಟು, ಮೊದಲ ಬಸಿರಿನಲ್ಲಿ ಯಾರಿಗೂ ಕೇಳದೇ ತಾನೇ ಕೋಲಿನಿಂದ ಬೀಳಿಸಿ ಕಚ್ಚಿದ ಮಾವಿನ ಕಾಯಿಯ ಮೂತಿ ಹುಳಿಹುಳಿಯಾಗಿ ಒಗರಾಗಿ ಆದೆಲ್ಲೋ ಮೂಲೆಯಲ್ಲಡಗಿದ್ದ ಪೋರಿ ಆ ಖುಷಿಯಲ್ಲಿ ಭಾಗಿಯಾಗಿ ಒಮ್ಮೆಲೇ ಅವಳಿಗೆ ತಲೆಯಿಂದ ಗುದ್ದಿದ್ದು..ಬೇಸಿಗೆಯ ಮಧ್ಯಾಹ್ನಗಳಲ್ಲಿ ಅದರ ನೆರಳಿನಲ್ಲಿ ಪವಡಿಸಿದ್ದು, ಮದುವೆಯಾದ ಹೊಸತರಲ್ಲಿ ಮಾವಿನ ಮರದಡಿಯ ಶೃಂಗಾರ ಲಾಸ್ಯಗಳು... ಅಷ್ಟೇ. ಕಾಯಿಯ ಹುಳಿ, ಹಣ್ಣಿನ ಸಿಹಿ, ಮೊಗೆದಷ್ಟು ಬತ್ತದ ನಿಧಿ, ನೆನೆದಷ್ಟೂ ಹರಡಿದ ಚಿಗುರು.

ನಯಾಜ್ ಖಾನ್ ಕಟ್ಟಿಯೇ ಕಟ್ಟಿದ... ಸೆಲ್ಲಾರ್, ಎರಡು ಅಂಗಡಿ ಮಳಿಗೆಗಳು..ಅದರೊಡನೆ ಮನೆಯ ನವೀಕರಣ ಕೂಡ ಸಾಗಿತ್ತು. ಅಣ್ಣನ ಮಲಗುವ ಕೋಣೆಗೆ ಅಟ್ಯಾಚ್ಡ್ ಬಾತ್‌ರೂಂ ಒಂದು ತಗುಲಿಕೊಂಡಿತು. ಅತ್ತಿಗೆಯ ನಾಜೂಕಾದ ಪಾದಗಳಿಗೆ ಹೊಂದುವಂತಹ ಹಂಸದ ಗರಿಯಂತಹ ಬಿಳಿಯ ಅಮೃತ ಶಿಲೆಯ ಚಪ್ಪಡಿಗಳನ್ನು ಅಡಿಗೆ ಮನೆಯುದ್ದಕ್ಕೂ ಹಾಸಿದ. ಹೀಗಾಗಿ ಹೊರ ದೇಶದಿಂದ ಬರುತ್ತಿರುವ ಅಣ್ಣನಿಗೆ ತನ್ನ ಸಕಲ ವ್ಯವಹಾರ ಜ್ಞಾನವನ್ನು ಪ್ರದರ್ಶಿಸಿ 'ಬಿಗ್ ಸರ್‌ಪ್ರೈಸ್' ನೀಡಬೇಕೆಂಬ ಅವನ ಯೋಜನೆಯ ಪ್ರಕಾರ ಅವನು ಭಕಭಕನೆ ಕೆಲಸ ಮುಗಿಸುತ್ತಿದ್ದ. ಆದರೆ, ಅವನು ಏನೇ ಹೇಳದಿದ್ದರೂ ನಸೀಮಳ ತವರು ಮನೆಯ ಕಡೆಯಿಂದ ನಸೀಮಾಗೆ ಚಿತ್ರವಿಚಿತ್ರವಾದ ಉತ್ಪ್ರೇಕ್ಷಿತವಾದ ವರದಿಗಳು ಕಂತುಕಂತಾಗಿ ಸಲ್ಲಿಸಲ್ಪಟ್ಟಿದ್ದು ಅವುಗಳ ಆಧಾರದ ಮೇಲೆ ತನ್ನ ಕಲ್ಪನಾ ಶಕ್ತಿಯ ಕುದುರೆಯ ಬೆನ್ನೇರಿ ನಸೀಮ ತನಗೆ ಬೇಕು ಬೇಕಾದಾಗ ತನ್ನ ಗಂಡನನ್ನು ಮೊನಚು ಮಾತುಗಳಿಂದ ತಿವಿದು, ಕೊಯ್ದು, ಕತ್ತರಿಸಿ, ಬೇಯಿಸಿ ಮಹದಾನಂದವನ್ನುಸವಿದಿದ್ದಳು. ಹಾಗೆ ಮಾಡುವುದರ ಮೂಲಕ ರಾಮ-ಲಕ್ಷ್ಮಣರ ನಡುವೆ ವಿರಸವನ್ನುಮೂಡಿಸುವುದರಲ್ಲಿಯೂ ಸಫಲಳಾಗಿದ್ದಳು.

ಹೀಗಾಗಿ... ಅಣ್ಣನ ಆಗಮನದ ದಿನಕ್ಕೆ ಸರಿಯಾಗಿ ಕೆಲಸ ಮುಗಿಸಬೇಕೆಂದು ನಯಾಜ್ ಖಾನ್‌ನ ತರಾತುರಿಯೊಂದೆಡೆ ನಡೆಯುತ್ತಿದ್ದಂತೆಯೇ ಮೆಹಬೂಬ್ ಖಾನ್ ತೆಪ್ಪಗೆ ಸವೂದಿಯಿಂದ ಭಾರತಕ್ಕೆ ಬಂದು ನಸೀಮಳ ತವರಿನಲ್ಲಿ ಬೀಡು ಬಿಟ್ಟ ಮೊದಲೆಲ್ಲಾ ಶಾಸ್ತ್ರಕ್ಕೆಂದು ಒಂದು ವಾರ ಹಾಗೂ ಹೀಗೂ ನಸೀಮಳ ತವರು ಮನೆಯಲ್ಲಿ ಹಾಜರಿ ಹಾಕಿ ತನ್ನ ಮನೆಗೆ ಬಂದವನೇ... ಅಲ್ಲಿಯೇ ಇಡೀ ರಜೆಯನ್ನು ಕಳೆಯುತ್ತಿದ್ದ. ಆದರೆ ಈಗ ಬಿಟ್ಟು ಕೊಡುವಳೇ ನಸೀಮಾ ಅಂತಹ ಘನ ಅವಕಾಶವನ್ನು... ಮೆಹಬೂಬ್ ಖಾನ್‌ಗೆ ಮೂಗುದಾರ ತೊಡಿಸಿ ನಸೀಮ ತನ್ನತವರು ಮನೆಯಲ್ಲಿಯೇ ಉಳಿಸಿಕೊಂಡು ಬಿಟ್ಟಳು. ಮೆಹಬೂಬ್ ಖಾನ್ ತನ್ನೆಲ್ಲ ಚಡಪಡಿಕೆಯ ನಡುವೆಯೂ ಅತ್ಯಂತ ಅಸಹನೀಯವಾದ ಹಿಂಸೆಯನ್ನು ಅನುಭವಿಸುತ್ತಲೂ, ಮೂಕವೇದನೆಗೊಳಪಟ್ಟು ಮೌನವಾಗಿಬಿಟ್ಟ. ಅವನ ನಗು, ಮಾತುಕತೆ ಎಲ್ಲವೂ ಕೃತ್ರಿಮವಾಗಿ ತನ್ನದೆಲ್ಲವೂ ಕಳೆದುಕೊಂಡಂತೆ ಖಾಲಿಯಾದಂತೆನಿಸಿ

ಅವನ ಹೆಗಲ ಮೇಲೆ ಯಾವ ಗೂಬೆ ಕುಳಿತಿತ್ತೋ, ಮೊದಮೊದಲು ಒಂದೊಂದಾಗಿ ರೆಂಬೆಗಳನ್ನು ಕಡಿಸಿಕೊಂಡು ಬಂದವ ಒಂದು ದಿನ ಪೂರ್ತಾ ಉರುಳಿಸಿಯೇ ಬಿಟ್ಟ ಕಿಟಕಿಯಿಂದ ನೋಡುತ್ತಿದ್ದ ಆರಿಫಾ ಕಣ್ಣೀರು ಹರಿಸಿದಳು. ಅವಳಿಗೆ ಹೆಚ್ಚೇನೂ ನೆನಪುಗಳಿರಲಿಲ್ಲ. ಕೆಲವೇ ಕೆಲವು ನೆನಪುಗಳನ್ನು ಜಾಡಿಯಲ್ಲಿಟ್ಟು ಉಪ್ಪಿನ ಕಾಯಿ ಹಾಕುವಷ್ಟು, ಮೊದಲ ಬಸಿರಿನಲ್ಲಿ ಯಾರಿಗೂ ಕೇಳದೇ ತಾನೇ ಕೋಲಿನಿಂದ ಬೀಳಿಸಿ ಕಚ್ಚಿದ ಮಾವಿನಕಾಯಿಯ ಮೂತಿ ಹುಳಿಹುಳಿಯಾಗಿ ಒಗರಾಗಿ ಅದೆಲ್ಲೋ ಮೂಲೆಯಲ್ಲಡಗಿದ್ದ ಪೋರಿ ಆ ಖುಷಿಯಲ್ಲಿ ಭಾಗಿಯಾಗಿ ಒಮ್ಮೆಲೇ ಅವಳಿಗೆ ತಲೆಯಿಂದ ಗುದ್ದಿದ್ದು..... ಬೇಸಿಗೆಯ ಮಧ್ಯಾಹ್ನಗಳಲ್ಲಿ ಅದರ ನೆರಳಿನಲ್ಲಿ ಪವಡಿಸಿದ್ದು, ಮದುವೆಯಾದ ಹೊಸತರಲ್ಲಿ ಮಾವಿನ ಮರದಡಿಯ ಶೃಂಗಾರ ಲಾಸ್ಯಗಳು....ಅಷ್ಟೇ ಕಾಯಿಯ ಹುಳಿ, ಹಣ್ಣಿನ ಸಿಹಿ, ಮೊಗೆದಷ್ಟು ಬತ್ತದ ನಿಧಿ, ನೆನೆದಷ್ಟೂ ಹರಡಿದ ಚಿಗುರು.

ಅವನು ಮಾನಸಿಕವಾಗಿ ಖಿನ್ನನಾದ. ಹೀಗಾಗಿ ಮುಟ್ಟಿದರೆ ಮುನಿಯಂತಾದ. ಬೆಂಕಿಗೆ ಬಿದ್ದ ಸಾಸಿವೆ ಕಾಳಿ ನಂತೆ ಸಿಡಿಯಲಾರಂಭಿಸಿದ ಆ ಮನೆಯ ಯಾವ ಮೂಲೆಯಲ್ಲಿಯೂ ಅವನಿಗೆ ಶಾಂತಿ ಸಿಗಲಿಲ್ಲ. ಅವನ ಅಸಹನೆಗಳು ಹೆಚ್ಚು ಹೆಚ್ಚಾಗುತ್ತ ಅವನು ವಿನಾಕಾರಣ ಸ್ಫೋಟಗೊಳ್ಳತೊಡಗಿದ. ಆಗ ಅವಳು ನಿರ್ಧರಿಸಿದಳು. ಇದೀಗ ಮೆಹಬೂಬ್ ಖಾನ್‌ನನ್ನು ಅವನ ಸಹೋದರನೊಡನೆ ಭೇಟಿಮಾಡಿಸಲು ಸಕಾಲ. ಸಿಡಿಯುವುದಾದರೆ ತಮ್ಮನ ಮೇಲೇ ಸಿಡಿಯಲಿ ನನಗೇನು ಅಂದುಕೊಂಡು ಗಂಡನನ್ನು ಒಪ್ಪಿಸಿ ಅವನನ್ನು ಸಿದ್ಧಗೊಳಿಸಿದಳು.

ಈ ನಡುವೆ ನಯಾಜ್ ಖಾನ್ ಅಣ್ಣನ ಪತ್ರವೂ ಇಲ್ಲದೆ, ಫೋನ್ ಕೂಡ ಇಲ್ಲದೆ ಗಾಬರಿಯಾಗಿ ತಾನೇ ಮೂರ್ನಾಲ್ಕು ಸಲ ಸೌದಿಗೆ ಫೋನ್ ಮಾಡಿ ಸಾವಿರಾರು ರೂಪಾಯಿಗಳ ಬಿಲ್ ಕಟ್ಟಿ ಅರಿತದ್ದೇನೆಂದರೆ ಅಣ್ಣ ಭಾರತಕ್ಕೆ ಮರಳಿ ಬಂದಿರುವನೆಂದು. ಹಾಗಾದರೆ ಅಣ್ಣ ಮನೆಗೇಕೆ ಬಂದಿಲ್ಲ ಎಂಬ ಯೋಚನೆಯಿಂದ ವಿವಶನಾಗಿ ಗಾಬರಿಗೊಂಡು ಅತ್ತಿಗೆಯ ತವರು ಮನೆಗೆ ಫೋನ್ ಮಾಡುವುದಕ್ಕೂ, ನಸೀಮ ಗಂಡನನ್ನು ಬಿಲ್ಲಿಗೆ ಹೆದೆಯೇರಿಸಿ ಸಿದ್ಧಳಾಗುವುದಕ್ಕೂ ಸರಿಯಾಯಿತು.

ಕೊನೆಗೂ ಮೆಹಬೂಬ್ ಖಾನ್ ತನ್ನ ಮನೆಗೆ ಬಂದ. ಅವನ ಎದೆಯೊಡೆದು ಹೋಯಿತು. ಕಣ್ಣುಗಳು ಅಳಲಿಲ್ಲ ಆದರೆ ಅವನೇ ಕಂಬನಿಯ ಸಾಗರವಾದ. ಬಾಯಿಂದ ಒಂದು ಮಾತೂ ಹೊರಡಲಿಲ್ಲ. ಆದರೆ ಅವನೇ ಕುಸಿದು ಹೋದ. ಆ ದೃಶ್ಯವನ್ನು ತಾನು ನೋಡದಿದ್ದರೆ ಒಳ್ಳೆಯದಿತ್ತು, ಭಾರತಕ್ಕೆ ತಾನು ಮರಳಲೇ ಬಾರದಿತ್ತು. ಆ ಬೆಂಗಾಡಿನಲ್ಲೇ ತಾನು ಉರಿದು ಭಸ್ಮವಾಗಿ ಬಿಡಬೇಕಿತ್ತು. ಆಗಲಾದರೂ ಆ ಮಾವಿನ ಮರ ತಲೆದೆಸೆಯಲ್ಲಿ ಬಂದು ನಿಂತು ಮೆಲುವಾಗಿ ತನ್ನ ತಳಿರು ತೋರಣಗಳಿಂದ ಗಾಳಿಯಾಡಿಸುತ್ತಿತ್ತು. ಅವನ ಮತ್ತು ತಮ್ಮನ ಉಯ್ಯಾಲೆ ಮಾವಿನ ಮರದ ರೆಂಬೆಯಿಂದ ತೂಗಾಡುತ್ತಾ ಮೇಲೆ ಕೆಳಗಾಗುತ್ತಿತ್ತು. ಮರದ ಬುಡದಲ್ಲಿ ಕುರ್ಚಿಯ ಮೇಲೆ ಕುಳಿತ ತಂದೆ ತನಗೆ ಹಾಗೂ ನಯಾಜ್‌ಗೆ ರಾಗವಾಗಿ ಹೇಳಿಕೊಡುತ್ತಿದ್ದ ಕುರ್‌ಆನ್‌ನ ಶ್ಲೋಕಗಳು ಅವನ ಕಿವಿಯಲ್ಲಿ ಗುಂಯ್ಯ್‌ಗುಡತೊಡಗಿದ್ದವು. ಅಮ್ಮನ ಸೊಂಟದ ಮೇಲೇರಿದಾಗ ಬಟ್ಟಲು ಹಿಡಿದು ಒಂದೊಂದಾಗಿ ಮೆಟ್ಟಲಿಳಿದು ಬಂದು ಮರದ ಕೆಳಗೆ ನಿಂತು ಒಂದೊಂದೇ ತುತ್ತು ಬಾಯಿಗಿಡುತ್ತಾ ಅವನನ್ನು ಮರದ ಕೊಂಬೆಯ ಮೇಲೆ ಕುಳ್ಳಿರಿಸಿ ಉಣಿಸುತ್ತಿದ್ದ ದೃಶ್ಯ ನೆನಪಿಗೆ ಬಂದು ಅವನ ಕರುಳಲ್ಲಿ ಕತ್ತರಿಯಾಡಿಸಿದಂತಾಯಿತು. ರೆಂಬೆಯಿಂದ ರೆಂಬೆಗೆ ಜಾಗರೂಕನಾಗಿ ಹೆದರಿಕೆಯಿಂದ ತತ್ತರಿಸುತ್ತ ಹತ್ತುತ್ತಿದ್ದವ, ಮಂಗನಂತೆ ನೆಗೆದು ಮರಕೋತಿ ಆಟವಾಡುತ್ತಿದ್ದುದು ಅದೇ ಮರದಲ್ಲಿ. ಅವನ ಆಲೋಚನಾ ಲಹರಿಗೆ ಕೊನೆಯೆಂಬುದೇ ಇರಲಿಲ್ಲ. ಹೋಗಲಿ, ಹೀಗೇ ಮಾಡುತ್ತೇನೆ ಎಂದು ಒಂದು ಮಾತಾದರೂ ತನಗೆ ಹೇಳುವುದು ಬೇಡವೇ? ಪುಡಿಕಾಸಿನ ಆಸೆಗೆ ಅವನು ತನ್ನನ್ನು ಒಂದು ಮಾತು ಕೂಡ ಕೇಳದೆಯೇ ಮಾಡಿದ ಈ ಅನಾಹುತವನ್ನು ಕ್ಷಮಿಸುವುದಾದರೂ ಹೇಗೆ? ಅದೂ ಅಲ್ಲದೆ ನಸೀಮ ಕೊರೆಯುತ್ತಲೇ ಇದ್ದಳಲ್ಲ 'ರೀ, ನಿಮ್ಮ ತಮ್ಮ ಬ್ಯಾಂಕಲ್ಲಿ ಬೇರೆ ಸಾಲ ತಗೊಂಡಿದ್ದಾನಂತಲ್ಲ. ಇನ್ನು ಆ ಮನೆಯೆಲ್ಲ ಅವನೊಬ್ಬನದೇ ಆದಂತಾಯಿತು. ಹೋಗ್ಲಿ ಬಿಡಿ, ಪಾಪ ನಿಮಗೂ ರಗಳೆ ತಪ್ಪಿತು. ಅವನಿಗೆ ಪತ್ರ ಬರೆದು ಕೊಡುವ ಗೋಜು ಕೂಡ ಇರದಂತಾಯಿತು. ಅಥವ ನನಗೂ ತಿಳಿಸದೇ ಎಲ್ಲ ತಮ್ಮನಿಗೆ ಬರೆದು ಕೊಟ್ಟು ಮುಗ್ಸಿದಿರೋ ಹೇಗೆ?'

ನಿಧಾನವಾಗಿ ನಯಾಜ್ ಖಾನ್‌ಗೂ ಅಣ್ಣನ ಮೌನದ ಗುಟ್ಟು ಅರಿವಾಗತೊಡಗಿತು. ಅತ್ತಿಗೆ ಮೇಲುಗೈ ಸಾಧಿಸಿರುವ

ಳೆಂದು ಅವನಿಗೆ ತಿಳಿಯಿತು. ಆದರೆ, ಈ ಕಗ್ಗಂಟಿನಿಂದ ಹೊರಬರುವುದಾದರೂ ಹೇಗೆ? ಅವನೂ ಕೂಡ ಚಡಪಡಿಸತೊಡಗಿದ. ಆ ಚಡಪಡಿಕೆಯ ನಡುವೆಯೂ ಕೂಡ ನಸೀಮ ತನ್ನ ಸೂಟ್‌ಕೇಸ್‌ಗಳೊಡನೆ ಬಂದಿಳಿದ ಕೂಡಲೇ ಅವನ ದೃಷ್ಟಿ ಅವಳ ಪಾದಗಳತ್ತ ಹರಿದು ಹಸಿದ ಆ ನೋಟಕ್ಕೆ ಸಾಂತ್ವನ ಸಿಕ್ಕಿದ್ದು ಸಿಗಲಿಲ್ಲವೋ ಹೇಳಲು ಸಾಧ್ಯವಾಗಲಿಲ್ಲ. ಏಕೆಂದರೆ ಜರ್ಧೋಸಿ ಕೆಲಸದ ಪಿಸ್ತಹಸಿರು ಬಣ್ಣದ ಸುಂದರ ಪಂಜಾಬಿ ಡ್ರೆಸ್ ತೊಟ್ಟಿದ್ದ ಅವಳು ಕಡುಹಸಿರು ಬಣ್ಣದ ಅತ್ಯಂತ ಆಕರ್ಷಕವಾದ ಸಪೂರ ತುದಿಯ ಹೈಹೀಲ್ಡ್ ಶೂ ತೊಟ್ಟಿದ್ದಳು, ಆ ಶೂ ತೊಟ್ಟಿದ್ದರಿಂದ ಅವಳ ನಡಿಗೆಯೇ ಆಕರ್ಷಕವಾಗಿಬಿಟಿತ್ತು. ಅವನ ಕಣ್ಣನ್ನ ಅಲ್ಲಿಂದ ಕೀಳುವುದೇ ಅವನಿಗೆ ಅಸಾಧ್ಯವಾಗಿ ಅತ್ಯಂತ ವಿಚಿತ್ರ ಆಕರ್ಷಣೆಗೊಳಪಟ್ಟ.

ನಯಾಜ್ ಖಾನ್ ಸಾಕಷ್ಟು ಸಾಲ ಮಾಡಿದ್ದ. ಇಲಾಖೆಯ ಸಾಲವನ್ನೂ ಪಡೆದಿದ್ದು ಹೇರಳವಾಗಿ ಕೈಸಾಲ ಕೂಡ ಮಾಡಿದ್ದ. ಅವನ ವಾಚಿನ ಮೇಲೆ ಕಣ್ಣಿಟ್ಟಿದ್ದ ರಾಜೀವ ಕೂಡ ಅವನಿಗೆ ಸಾಲ ನೀಡಿದ್ದ. ಅಷ್ಟೆಲ್ಲಾ ಸಾಲ ಪಡೆದಿದ್ದ ಅವನು ಮನೆಗೆ ಸುಣ್ಣ ಬಣ್ಣ ರಿಪೇರಿ ಮೊದಲಾದುದೆಲ್ಲವನ್ನೂ ತೂಗಿಸುತ್ತಾ ಒಂದು ಸೆಕೆಂಡ್‌ಹ್ಯಾಂಡ್ ಫ್ರಿಜ್ ಮತ್ತು ವಾಷಿಂಗ್ ಮಷೀನ್ ಕೂಡ ಖರೀದಿಸಿಬಿಟ್ಟಿದ್ದ. ಹೇಗಿದ್ದರೂ ಕೂಡ ತಾನು ಮಾಡಿರುವ ಮನೆಯ ಅಭಿವೃದ್ಧಿ ಕೆಲಸವನ್ನು ನೋಡಿ ಅಣ್ಣ ತನಗೆ ಸಹಾಯ ಮಾಡಿಯೇ ತೀರುವನೆಂಬ ನಂಬಿಕೆ ಕೂಡ ಬಲವಾಗಿತ್ತಲ್ಲ. ಆದರೆ ಮೆಹಬೂಬ್ ಖಾನ್ ಮಾತ್ರ ಅಬೇಧ್ಯನಾಗಿ ಬಿಟ್ಟಿದ್ದ. ತಮ್ಮನ ಪ್ರತಿಯೊಂದು ಚಲನ ವಲನ, ಮಾತುಕತೆ, ಚಟುವಟಿಕೆಗಳು ಎಲ್ಲವೂ ಅತ್ಯಂತ ಕೃತ್ರಿಮವಾಗಿ ಅವನಿಗೆ ಕಂಡುಬರುತ್ತಿತ್ತು.ಇದ್ದ ಒಬ್ಬ ತಮ್ಮ ಮಾಡಿದ ಈ ಕೆಲಸಗಳಿಗೆ ಅವನ ಬೆನ್ನು ತಟ್ಟಬೇಕೋ ಅಥವ ತನ್ನ ನೆನಪುಗಳ ಮೇಲೆ ಗೋರಿಯನ್ನು ಕಟ್ಟಿದ ಅವನನ್ನು ಹೀನಾಯಗೊಳಿಸಬೇಕೋ ಎಂಬ ಸಂದಿಗ್ಧದಲ್ಲಿ ಅವನು ತೊಳಲಾಡಿದ. ಆ ಮನೆ ತನ್ನದು ಅಲ್ಲವೇ ಅಲ್ಲ ಎಂದು ಅನಿಸತೊಡಗಿ ತಾನೊಬ್ಬ ಅಪರಿಚಿತ.... ಆಗುಂತಕ ಎಂದು ತನಗೆ ತಾನೇ ಭಾವಿಸಿಕೊಂಡ. ಹೀಗಾಗಿ, ಅಣ್ಣನ ಪ್ರೀತ್ಯರ್ಥ ತಮ್ಮ ಮಾಡಿದ್ದ ಯಾವ ಸವಲತ್ತೂ ಅವನನ್ನು ಮುಟ್ಟಲಿಲ್ಲ. ಇಷ್ಟೆಲ್ಲಾ ಮಾಡಿದವ ತನ್ನನ್ನು ಒಂದು ಬಾರಿ ಯಾಕೆ ಕೇಳಲಿಲ್ಲ...? ತಾನು ಅಷ್ಟೊಂದು ದೂರವಾದನೇ... ಕೇವಲವಾದನೇ ...ತಮ್ಮನಿಗೆ ಇಷ್ಟೊಂದು ದುರಾಸೆ ಎಂದಿನಿಂದ? ಯಾಕಾಗಿ? ಇದೆಲ್ಲಾ ಪ್ರಶ್ನೆಗಳಿಗೆ ಉತ್ತರ ಹುಡುಕಲು ಆ ಮಾವಿನ ಮರದತಂಪು ನೆರಳು ಕೂಡ ಇಲ್ಲವಲ್ಲಾ..

ಕಂದರ ಅಗಾಧವಾಯಿತು. ಮಾತಿಲ್ಲದ ಮೌನ ನಿರ್ಮಿಸಬಹುದಾದ ಸೀಳುಗಳನ್ನು ಯಾವ ಧ್ವನಿ ತಾನೇ ಸೃಷ್ಟಿಸೀತು? ಅವರವರಲ್ಲಿ ಅವರು ಹುಗಿದು ಹೋದರು. ನೆಮ್ಮದಿಯ ತೆಳುನಗೆ ಮಾತ್ರ ನಸೀಮಳ ತುಟಿಗಳ ಮೇಲೆ. ಅವಳು ಸದಾ ಕಾಲ ಮೆಟ್ಟಿರುತ್ತಿದ್ದುದು ಮಾತ್ರ ಹೈ ಹೀಲ್ಡ್ ಶೂ.... ಆತಂಕದ ಕರಿನೆರಳು ಆರಿಫಾಳ ಮೊಗದ ಮೇಲೆ. ಕಣ್ಣಸುತ್ತಾ ಅವರಿಸಿದ ಕರಿಯ ಮೋಡಗಳು ಇನ್ನಿಲ್ಲದಂತೆ ವಿಜೃಂಭಿಸುತ್ತಿದ್ದವು. ಸಾಲದ್ದಕ್ಕೆ ಐದು ತಿಂಗಳ ಗರ್ಭಿಣಿ ಬೇರೆ. ಆ ಗರ್ಭ ಹೆಚ್ಚೇನೂ ಉಬ್ಬಿರದಿದ್ದರೂ, ಅವಳ ಅಂತಃಸತ್ವವನ್ನೆಲ್ಲಾ ಆಂತರ್ಯದಲ್ಲೇ ಹೀರಿತ್ತು. ಕಳೆಕಳೆಯಾಗಿರಬೇಕಿದ್ದ

ಆ ಮನೆಯಲ್ಲಿ ಸೂರ್ಯ ಮಾತ್ರ ನಡುನೆತ್ತಿಯ ಮೇಲೆ ಬಂದು ಸುಡುತ್ತಿದ್ದ. ಗಾಳಿ ಅಂಜಿ ತಲೆ ಮರೆಸಿಕೊಂಡಿತ್ತು. ಮಂಥರೆ ತನ್ನ ಸೆರಗಿನಿಂದ ಬೀಸಣಿಗೆಯಾಡುತ್ತಿದ್ದಳು. ಮಾತ್ಸರ್ಯದ ಕೆಂಡ ನಿಗನಿಗಿಸುತಿತ್ತು. ಆ ನಡುವೆ... ಆ ಎಳೆ ಬಸುರಿ ಎಲ್ಲರ ನಡುವೆ ಕೊಂಡಿಯಾಗಲು ವಿಫಲ ಪ್ರಯತ್ನ ನಡೆಸಿದ್ದಳು. ಒಂದು ವಾರ ಕಳೆಯುವಷ್ಟರಲ್ಲಿ ಮೆಹಬೂಬ್ ಖಾನ್‌ಗೆ ಸಾಕು ಬೇಕಾಯಿತು. ಅತ್ಯಂತ ಸಂಕಷ್ಟದ ಗಳಿಗೆಯಲ್ಲಿ ಅವನಿಗೆ ಆ ಮಾವಿನ ಮರ ಕೈಬೀಸಿ ಕರೆದಂತಾಗುತ್ತಿತ್ತು. ಹೊರಗಿನ ಸೆಖೆಗಿಂತ ಒಳಗಿನ ಬೇಸಿಗೆಗೆ ಅವನು ಬಾಡಿಹೋಗಿದ್ದ. ಅಂತಹ ಸಂದರ್ಭದಲ್ಲಿ ಅದೊಂದು ಮಧ್ಯಾಹ್ನ ಅವನು ಹಾಗೆಯೇ ಅಡ್ಡಾಗಿದ್ದ.... ಆ ಮಾವಿನ ಮರ ಅವನ ಹತ್ತಿರ ಬಂತು. ಅದರೊಡನೆ ಸಕಲ ಸಂಬಂಧಗಳು... ಕೂಡ! ಆ ಮರ ಏನನ್ನೂ ನುಡಿಯಲಿಲ್ಲ. ಅವನ ಹಣೆಯ ಮೇಲೆ ತನ್ನ ತಣ್ಣನೆಯ ಕೈಯನ್ನಿಟಿತು. ಆ ಸ್ಪರ್ಶ ಮಾತ್ರ ದಿಂದಲೇ ಮೆಹಬೂಬ್ ಖಾನ್‌ನ ಒಳಗಡೆಯ ಜ್ವಾಲಾಮುಖಿ ತಂಪಾಗಲಾರಂಭಿಸಿತು.

ಗರ್ಭಿಣಿ ಪೇಲವವಾಗಿದ್ದಳು. ಅದರ ಮೇಲೆ ಮುನ್ನಿಯನ್ನು ಸಂಭಾಳಿಸುವುದು, ಗಣ್ಯ ಅತಿಥಿಗಳ ದೇಖು-ರೇಖು, ಗಂಡನ ಮತ್ತು ಭಾವನ ನಡುವಿನ ಶೀತಲ ಸಮರ, ಓರಗಿತ್ತಿಯ ಕಟು ಬಾಣಗಳು..ಒಂದೇ..ಎರಡೇ..ಅವಳು ಹಣ್ಣಾಗಿ ಹೋಗಿದ್ದಳು. ಮೇಲಾಗಿ ಅವಳ ಇಡೀ ದೇಹವನ್ನೇ ತರಗೆಲೆಯಂತೆ ಧೂಳೀಪಟ ಮಾಡುತ್ತಿದ್ದ ಅಸಾಧ್ಯ ಕೆಮ್ಮು. ಅವಳ ಈ ಸ್ಥಿತಿಯನ್ನು ನಯಾಜ್ ಖಾನ್ ಗಮನಿಸಿದರೂ ಪ್ರಾಮುಖ್ಯತೆ ನೀಡಲಿಲ್ಲ. ಮೆಹಬೂಬ್ ಖಾನ್ ಗಮನಿಸಿದರೂ... ತಮ್ಮನ ಮೇಲಿನ ಸಿಟ್ಟು ಹೆಂಡತಿಯ ಭಯ... ಅವೆರಡೂ ಇಲ್ಲವಾಗಿದ್ದಲ್ಲಿ ತಾನೇ ಆಕೆಯನ್ನು ಆಸ್ಪತ್ರೆಗೆ ಕೊಂಡೊಯ್ದು ಅವಳ ಊಟೋಪಚಾರ ಮತ್ತು ವಿಶ್ರಾಂತಿಯ ಬಗ್ಗೆ ಕಾಳಜಿ ವಹಿಸುತ್ತಿದ್ದ. ಆದರೆ ಅಭಿಮಾನ ಒಂದಿದೆಯಲ್ಲಾ...ಅಹಂಕಾರದ ಸರ್ಪ ಸಹಸ್ರಾರು ಮೊಟ್ಟೆಗಳನ್ನಿಟ್ಟಿತ್ತು.

ಆ ಮನೆಯಲ್ಲಿ ಸೂರ್ಯ ಮಾತ್ರ ನಡುನೆತ್ತಿಯ ಮೇಲೆ ಬಂದು ಸುಡುತ್ತಿದ್ದ. ಗಾಳಿ ಅಂಜಿ ತಲೆ ಮರೆಸಿಕೊಂಡಿತ್ತು. ಮಂಥರೆ ತನ್ನ ಸೆರಗಿನಿಂದ ಬೀಸಣಿಗೆಯಾಡುತ್ತಿದ್ದಳು. ಮಾತ್ಸರ್ಯದ ಕೆಂಡ ನಿಗನಿಗಿಸುತಿತ್ತು. ಆ ನಡುವೆ.. ಆ ಎಳೆ ಬಸುರಿ ಎಲ್ಲರ ನಡುವೆ ಕೊಂಡಿಯಾಗಲು ವಿಫಲ ಪ್ರಯತ್ನ ನಡೆಸಿದ್ದಳು. ಒಂದು ವಾರ ಕಳೆಯುವಷ್ಟರಲ್ಲಿ ಮೆಹಬೂಬ್ ಖಾನ್‌ಗೆ ಸಾಕು ಬೇಕಾಯಿತು. ಅತ್ಯಂತ ಸಂಕಷ್ಟದ ಗಳಿಗೆಯಲ್ಲಿ ಅವನಿಗೆ ಆ ಮಾವಿನ ಮರ ಕೈಬೀಸಿ ಕರೆದಂತಾಗುತ್ತಿತ್ತು. ಹೊರಗಿನ ಸೆಖೆಗಿಂತ ಒಳಗಿನ ಬೇಸಿಗೆಗೆ ಅವನು ಬಾಡಿಹೋಗಿದ್ದ. ಅಂತಹ ಸಂದರ್ಭದಲ್ಲಿ ಅದೊಂದು ಮಧ್ಯಾಹ್ನ ಅವನು ಹಾಗೆಯೇ ಅಡ್ಡಾಗಿದ್ದ... ಆ ಮಾವಿನ ಮರ ಅವನ ಹತ್ತಿರ ಬಂತು. ಅದರೊಡನೆ ಸಕಲ ಸಂಬಂಧಗಳು ಕೂಡ! ಆ ಮರ ಏನನ್ನೂ ನುಡಿಯಲಿಲ್ಲ. ಅವನ ಹಣೆಯ ಮೇಲೆ ತನ್ನ ತಣ್ಣನೆಯ ಕೈಯನ್ನಿಟಿತು. ಆ ಸ್ಪರ್ಶ ಮಾತ್ರದಿಂದಲೇ ಮೆಹಬೂಬ್ ಖಾನ್‌ನ ಒಳಗಡೆಯ ಜ್ವಾಲಾಮುಖಿ ತಂಪಾಗಲಾರಂಭಿಸಿತು... ಅಷ್ಟೇ!.. ಎಷ್ಟು ಹೊತ್ತು ಅವನು ಹಾಗೆಯೇ ಮಲಗಿದ್ದನೋ.. ಅವನೊಳಗೆ ಅದು ಯಾವ ಅವ್ಯಕ್ತ ಸ್ವರೂಪ ಗರ್ಭಸ್ಥವಾಯಿತೋ... ಅವನು ಎಚ್ಚರಾದಾಗ...ಇಳಿಹೊತ್ತು. ಸೂರ್ಯ ಕಣ್ಣು ಮುಚ್ಚಾಲೆ ಯಾಟದಲ್ಲಿ ಮಗ್ನನಾಗಿದ್ದ. .

'ಭಯ್ಯಾ.. ಭಯ್ಯಾಜಿ..' ಎಚ್ಚರವಾಗಿದ್ದರೂ ಅವನು ಕಣ್ಣುಮುಚ್ಚಿದ್ದ. ದೂರದಿಂದೆಂಬಂತೆ ಬಂದ ಆ ಕರೆಗೆ ಅವನು ಕಣ್ತೆರೆದಾಗ.. ಅವನೆದುರಿಗೆ ಆಕೆ ನಿಂತಿದ್ದಳು. ರೆಂಬೆಗಳನ್ನು ಹರಡಿದ ಭವ್ಯವಾದ ಫಲಭರಿತ ಮಾವಿನ ಮರದಂತೆ... ತೊನೆಯುತ್ತಿರುವ ಮಾವಿನ ಫಸಲಿನಂತೆ..ಅದೇ. ಮಂದಾನಿಲ ಬೀರುವ ಕಡುಹಸಿರು ಎಲೆಗಳಂತೆ... ಕಂದು ಬಣ್ಣದ ಚಿಗುರಿನಂತೆ... ಸಮೃದ್ಧ ಶ್ರೀಮಂತವಾದ ಹೂ ಗೊಂಚಲುಗಳಂತೆ... ಜೀವ ಕಟ್ಟಿದ ಎಳೆಮಾವಿನಂತೆ... ಉನ್ನತವಾದ ಹಗೆ... ಪ್ರೀತಿ ಗೌರವ ಮಿಶ್ರಿತ ಭಾವ ತುಂಬಿದ ವ್ಯತ್ಯಸ್ತವಾದ ಕಣ್ಣನೋಟ...

'ಟೀ...ತಗೋಳಿ.. ಭಯ್ಯಾ...' ಅವನು ಅಮೃತದಂತೆ ಅದನ್ನು ಸ್ವೀಕರಿಸಿದ. ಭ್ರಮಿತನಂತೆ ಅವಳನ್ನೇ ಆಪಾದ ಮಸ್ತಕ ನಿಟ್ಟಿಸಿದ. ಅವಳು ಸೊರಗಿ ಹೋಗಿದ್ದಳು. ಅವಳ ಜೀವ ದ್ರವ್ಯವೆಲ್ಲಾ ಸೋರಿಹೋಗಿತ್ತು. ಅವನು ಟೀ ಕುಡಿಯುವವರೆಗೂ ಕಾದು, ಪರಿಚಾರಿಕೆಯಂತೆ ಅವನ ಟೀ ಕಪ್ಪನ್ನು ತನ್ನ ಬೊಗಸೆ ಕೈಗಳಲ್ಲಿ ಇಸಿದು ಕೊಂಡಳು. ಅವನಿಗೇಕೋ ಕಲಕಿ ಹೋಯಿತು.

'ಆರಿಫಾ ಇದ್ಯಾಕಮ್ಮ ಹೀಗಾಗಿ ಹೋಗಿದೀಯಾ.?'

ಆ ಮನೆಗೆ ಬಂದ ಹದಿನೈದು ದಿನಗಳ ನಂತರ ಅವನಾಡಿದ ಮೊದಲ ಆಪ್ತ ಭಾವದ ಮಾತಾಗಿತ್ತದು. ಅವಳೇನೂ ನುಡಿಯಲಿಲ್ಲ. ಕಣ್ಣೆರಡೂ ತುಂಬಿದವು. ದೃಷ್ಟಿಯನ್ನು ಕೆಳಗೆ ಹರಿಸಿದಳು. ಅವನೂ ಕರಗಿಹೋದ.

ಅರೆಕ್ಷಣ ಕಳೆದನಂತರ, ಕಕ್ಕುಲತೆಯಿಂದ ಹೇಳಿದ, 'ಇನ್ನು ಹದಿನೈದು ನಿಮಿಷದಲ್ಲಿ ನೀನು ರೆಡಿಯಾಗಬೇಕು. ಒಳ್ಳೆ ಗೈನಕಾಲಜಿಸ್ಟ್ ಹತ್ತಿರ ಹೋಗೋಣ. ಆ ಅಯೋಗ್ಯನ್ನ ನಂಬಿದರೆ ಇದೇ ಗತಿಯಾಗೋದು...ಯಾವ ಜವಾಬ್ದಾರೀನೂ ನಿರ್ವಹಿಸೋ ತಾಕತ್ತಿಲ್ಲ...' ಎಂದು ಕೆಳ ದನಿಯಲ್ಲೇ ನುಡಿದು.. 'ಅಂದ ಹಾಗೆ... ನೀನು ರಾತ್ರೆ ಊಟಕ್ಕೆ ಅಂತ ಏನೂ ಪರದಾಡಬೇಡ. ಡಾಕ್ಟರನ್ನು ನೋಡಿದ ಮೇಲೆ... ಮೊಗಲ್ ದರ್ಬಾರ್ ನಲ್ಲೇ ಊಟ ಮಾಡೋಣ..'

ಮಂಚದ ಮೇಲೆ ಉರುಳಿದ್ದ ನಸೀಮಾಗೆ ತಟ್ಟನೆ ಎಚ್ಚರವಾಯಿತು. ವಿಧಿಯಿಲ್ಲ . ಇಷ್ಟು ದಿನ ಮರಳಿನ ಮೂಟೆಗಳೆದುರಿನಲ್ಲಿ ಒತ್ತಿ ಇರಿಸಲಾಗಿದ್ದ ಪ್ರವಾಹ ನುಗ್ಗಿ ಹರಿಯುತ್ತಿದೆ. ಇನ್ನು ಅದಕ್ಕೆ ಯಾವುದೇ ಕೃತ್ರಿಮ ತಡೆಯೊಡ್ಡಲು ಸಾಧ್ಯವಿಲ್ಲ. ಸಾವಕಾಶವಾಗಿ ಅವಳೂ ಎದ್ದು ತನ್ನ ಸುಂದರ ಕಸೂತಿಯ ಪಂಜಾಬಿ ಡ್ರೆಸ್ಸನ್ನೇರಿಸಿ... ಹೈ ಹೀಲ್ಡ್ ಶೂ ಮೆಟ್ಟಿ ಹಜಾರಕ್ಕೆ ಬಂದಳು.

ಆರಿಫ ತಂದಿತ್ತ ಸಂದೇಶ ಕೇಳಿದೊಡನೆಯೇ ನಯಾಜ್ ಖಾನ್ ಖುಷಿಯಿಂದ ಬಿರಿದುಹೋದ. ಅಣ್ಣ ನಾರ್ಮಲ್ ಆಗುತ್ತಿದ್ದಾನೆ... ಇಂತಹದೊಂದು ಶುಭಗಳಿಗೆಯನ್ನೇ ಅವನು ನಿರೀಕ್ಷಿಸುತ್ತಿದ್ದುದು... ಹಜಾರದ ಮೂಲೆಯಲ್ಲಿದ್ದ ಬೆತ್ತದ ಕುರ್ಚಿಯ ಮೇಲೆ ಕುಳಿತು ಅವನು ಆಲೋಚಿಸ ತೊಡಗಿದ... ಈಗ ಅಣ್ಣನಿಗೆ ಎಲ್ಲವನ್ನೂ ಹೇಳಬಹುದು. ತನ್ನ ಸಾಧನೆಯೇ... ಅಥವ ಮೂರ್ಖತನವೋ ಆತನೆದುರು ಇಟ್ಟು ನಡೆದುಹೋದ ಘಟನೆಗೆ ಅವನಿಂದ ಎರಡು ತಪರಾಕಿಗಳನ್ನಾದರೂ ಪಡೆಯಬಹುದು. ತನ್ನ ವಿವೇಕ ಎಲ್ಲಿ ಹಾರಿ ಹೋಗಿತ್ತು .? ಈ ಎಲ್ಲಾ ನಿರ್ಮಾಣ ಮಾಡುವುದಕ್ಕೆ ಮೊದಲೇ ತಾನು ಅಣ್ಣನೊಡನೆ ಒಮ್ಮೆಯಾದರೂ ಮಾತನಾಡಬೇಕಿತ್ತು... ಸಲಹೆ ಪಡೆಯಬೇಕಿತ್ತು. ಆಯಾಚಿತವಾಗಿ ಅಲ್ಲಿ ಇಲ್ಲಿ ಹರಿದಾಡುತ್ತಿದ್ದ ಅವನ ದೃಷ್ಟಿ ತಟ್ಟನೆ ನಿಂತಿತು. ನೆಲದಿಂದ ಸ್ವಲ್ಪ ಏರಿತಷ್ಟೇ... ಅಲ್ಲಿ ನಸೀಮಾಳ ಪಾದಗಳಿದ್ದವು... ಅವನ ಮನವನ್ನು ಅಪಹರಿಸಿದ್ದ ಕಪ್ಪು ಹೈಹೀಲ್ಡ್ ಶೂ ತೊಟ್ಟು .

ಇಷ್ಟು ದಿನದ ಕ್ಷೋಭೆಯಲ್ಲಿ ಮರೆತು ಹೋಗಿದ್ದ ಹೈ ಹೀಲ್ಡ್‌ಶೂ.. ಇದೀಗ... ಅಣ್ಣ ಸ್ವಲ್ಪ ತಿಳಿಯಾಗುತ್ತಿದ್ದಾನೆನಿಸಿದ ಕೂಡಲೇ ಭೂತವಾಗಿ ಪ್ರತ್ಯಕ್ಷವಾಯಿತು. ಅವಳು ನಡೆದೆಡೆಯಲ್ಲೆಲ್ಲಾ ಅವನ ಕಣ್ಣುಗಳು ಹಿಂಬಾಲಿಸತೊಡಗಿದವು. ಅವನು ತನ್ನ ಅಂಗೈಗಳನ್ನಿಟ್ಟು ಅದರ ಮೇಲೆ ಅವಳು ಪಾದ ಊರಿದರೆ ಸಾಕೆಂದು ಬಯಸತೊಡಗಿದ. ಅವನು ಬಹಳ ಕಷ್ಟಪಟ್ಟು ತನ್ನನ್ನು ನಿಯಂತ್ರಿಸಿಕೊಂಡ. 'ಹುಚ್ಚಾ. . ಹುಚ್ಚ ಏನು ಮಾಡುತ್ತಿದ್ದೀಯಾ... ನೀನು ನರಕಕ್ಕೆ ಹೋಗು. ಒಂದು ಜೊತೆ ಚಪ್ಪಲಿಯ ಹಿಂದೆ ಹೀಗೆ ಹುಚ್ಚನಾಗಿದ್ದೀಯ. ಕಳ್ಳತನ ಮಾಡಲೂ ಸಿದ್ಧನಾಗಿದ್ದೀಯಾ . . . ಭಿಕ್ಷೆ ಬೇಡಲು ಕೂಡಾ...ನೀನು ನಾಶವಾಗು' ತನ್ನನ್ನು ತಾನೇ ಬಯ್ದುಕೊಂಡ. ಆದರೂ.. ಆದರೂ.. ಹೈ ಹೀಲ್ಡ್ ಶೂ.. ವಿಶೇಷ ಮಾಂತ್ರಿಕ ಶಕ್ತಿ ಹೊಂದಿದ್ದು . ಅವನನ್ನು ತನ್ನೆಡೆಗೆ ಸೆಳೆದುಕೊಂಡಿದ್ದೂ ಅಲ್ಲದೆ ಅವನ ವಿವೇಚನೆಯನ್ನು ಹಾಳುಮಾಡಿತ್ತು. ಅವನು ತನ್ನನ್ನೂ, ತನ್ನ ಸಮಸ್ತವನ್ನೂ, ತನ್ನ ಅರಿವನ್ನೂ. ಪ್ರಜ್ಞೆಯನ್ನು, ಕಳೆದುಕೊಂಡು ಅದರ ಹಿಂದೆ ಭ್ರಮಿಷ್ಟನಾಗಿದ್ದ. ಆ ಶೂವನ್ನು ಪಡೆಯಬೇಕು; ಅದನ್ನು ಆರಿಫಗೆ ತೊಡಿಸಬೇಕು ಎಂಬ ಹಂಬಲವೇ ತೀವ್ರವಾಗಿ ಉಳಿದೆಲ್ಲವೂ ಅವನ ಮನದಿಂದ ಮರೆಯಾಯಿತು. ಅವನು ಗರ ಬಡಿದಂತೆ ಕುಳಿತೇ ಇದ್ದ.



> **ಅವನು ಕ್ರಮೇಣ ಚೇತರಿಸಿಕೊಂಡ. ಹೀಗೂ ಉಂಟೇ ಎಂಬ ಅಸಂಭವ ಘಟನೆಯ ಸಂಭವತೆ ಅವನ ಬಾಹ್ಯ ಪ್ರಜ್ಞೆಯನ್ನೇ ಕಸಿದಿತ್ತು. ಅವನು ಮೋಡಿಗೊಳಗಾದವನಂತೆ ನೇರ ಅಂಗಡಿಯೊಳಗೆ ನಡೆದ ನಿಲ್ಲಲು ಅಸಾಧ್ಯವಾಗಿ ಸ್ಟೂಲಿನ ಮೇಲೆ ಕುಸಿದು ಕುಳಿತ. ಆ ಅಂಗಡಿಯ ಸಮಸ್ತ ಬೆಳಕು ತನ್ನೊಬ್ಬನ ಮೇಲೆ ಕೇಂದ್ರಿಕೃತವಾದಂತೆ ತಾನೊಬ್ಬ ಅಸಾಮಾನ್ಯ ವ್ಯಕ್ತಿಯಂತೆ ಆತನಿಗೆ ಅನ್ನಿಸತೊಡಗಿತು. ಇನ್ನು ಯಾರಾದರೂ ಆ ಷೂಗಳತ್ತ ಕೈಚಾಚಬಹುದೇನೋ ಎಂಬ ಆತಂಕದಿಂದ ಕಂಗೆಟ್ಟು ದೊಡ್ಡ ಧ್ವನಿಯಲ್ಲಿ ಇಡೀ ಅಂಗಡಿಗೆ ಕೇಳಿಸುವಂತೆ ಅವನೆಂದ 'ಆ ಹೈ ಹೀಲ್ಡ್ ಷೂ ಕೊಡಿ '**

ಕೋಣೆಯಿಂದ ಹೊರಗೆ ಬಂದ ಮೆಹಬೂಬ್ ಖಾನ್ ತಮ್ಮನನ್ನು ಒಂದು ಕ್ಷಣ ದಿಟ್ಟಿಸಿದ. ಅವನ ಭಾವ ಭಂಗಿಯನ್ನು ನೋಡಿ ಅವನಿಗ್ಯಾಕೋ ಮನದ ಮೂಲೆಯಲ್ಲಿ ಅನುಕಂಪದ ಅಲೆ ಮೂಡಿಬಂದಿತು. ಅದನ್ನು ತೋರಗೊಡದೆ ಅವನು ಹೊರನಡೆದ.

ನರ್ಸಿಂಗ್ ಹೋಮ್‌ನಲ್ಲಿ ಆರಿಫಳ ಪರೀಕ್ಷೆ ನಡೆಯುವವರೆಗೂ ಮೆಹಬೂಬ್ ಖಾನ್ ತಾಯಿಗಿಂತಲೂ ಹೆಚ್ಚಿನ ಕಾಳಜಿಯಿಂದ ಕಾದುನಿಂತಿದ್ದ. ಉಳಿದೆಲ್ಲವೂ ನಾರ್ಮಲ್.. ಆದರೆ ಆಕೆ ಅನೀಮಿಯಾ ಮತ್ತು ಹೆಚ್ಚು ರಕ್ತದೊತ್ತಡದಿಂದ ಬಳಲುತ್ತಿರುವಳೆಂಬ ಅಂಶ ಅವನ ಆತಂಕಕ್ಕೆ ಕಾರಣವಾದರೂ ಹೆಂಡತಿಯೆದರು ತೋರಿಸಿಕೊಳ್ಳಲಿಲ್ಲ. ನಸೀಮಾಗಂತೂ... ಇದೆಲ್ಲದರ ಹಣವನ್ನು ಗಂಡನೇ ಪಾವತಿಸುವನೆಂಬುದರ ಬಗ್ಗೆ ಅನುಮಾನವೇ ಇರಲಿಲ್ಲ. ಟಾನಿಕ್ಕು, ಮಾತ್ರೆಗಳಿಗೆ ಹಣ ಪಾವತಿ ಮಾಡಿದ್ದೂ ಅಲ್ಲದೆ ಆ ಪ್ಲಾಸ್ಟಿಕ್ ಕವರನ್ನು ಸೇವಕನಂತೆ ತಾನೇ ಹೊತ್ತು ನಡೆಯುತ್ತಿದ್ದ ಗಂಡನನ್ನು ನೋಡಿ ಅವಳಂತೂ ಉರಿದೇ ಉರಿದಳು.

ನರ್ಸಿಂಗ್ ಹೋಮ್‌ನಿಂದ ಒಂದಿಷ್ಟೇ ದೂರ ಮೊಗಲ್ ದರ್ಬಾರ್... ಊಟದ ಹೊತ್ತು ಕೂಡಾ ಆಗಿರಲಿಲ್ಲ. ನಸೀಮಾ ಬೇರೆ ವಿದೇಶಕ್ಕೆ ಹಾರುವ ಮೊದಲು ಅಲ್ಲಿನ ತನ್ನ ಗೆಳತಿಯರಿಗಾಗಿ ಒಂದಿಷ್ಟು ಶಾಪಿಂಗ್ ಕೂಡ ಮಾಡಬೇಕಿತ್ತು. ವಸ್ತುಗಳು ಅಮೂಲ್ಯವಾಗಿದ್ದವು. ಮನುಷ್ಯರು ಕುಬ್ಜರಾಗಿದ್ದರು. ವಸ್ತುಗಳ ಹಿನ್ನೆಲೆಯಲ್ಲಿ ಮಾರಾಟವಾಗುತ್ತಿದ್ದುದು ಮನುಷ್ಯರ ಭಾವನೆಗಳು. ದೊಡ್ಡ ನೆರಳುಗಳ ಸಣ್ಣ ಮನುಷ್ಯರ ಎಲ್ಲಾ ಸಂಬಂಧಗಳನ್ನೂ ಈ ವಸ್ತುಗಳೇ ನಿರ್ಧರಿಸುತ್ತಿದ್ದವು. ಒಂದು ಫ್ರಿಜ್ ಒಬ್ಬ ಎಳೆಯ ವಧುವಿನ ಜೀವಗತಿಯನ್ನೇ ಬದಲಿಸುವ ಸಾಮರ್ಥ್ಯ ಹೊಂದಿತ್ತು. ಅವುಗಳ ಬಣ್ಣ ಎಳೆಯ ಕನಸುಗಳ ಹೋಳಿಯನ್ನು ಕಸಿದಿದ್ದವು. ಅವುಗಳು ಮನೆಯಲ್ಲಿ ಮಾತ್ರ ಪ್ರಮುಖ ಸ್ಥಾನವನ್ನು ಮಾತ್ರವಲ್ಲದೆ ಜೀವನದ ನಿರ್ಣಾಯಕ ಸ್ಥಾನವನ್ನು ಪಡೆದಿದ್ದವು. ಜನರು ಓಡುತ್ತಿದ್ದರು.... ತಮ್ಮ ಮೌಲ್ಯಗಳನ್ನು ತಮ್ಮ ಸಂಬಂಧಗಳನ್ನು ಗಾಳಿಗೆತೂರಿ, ದಣಿಯುತ್ತಾ ಆಯಾಸದಿಂದ ಕುಸಿಯುತ್ತಾ ಬೆವರೊರೆಸಿಕೊಳುತ್ತಾ ಓಡುತ್ತಿದ್ದರು.... ಆಹಾ! ಚಿನ್ನದ ಜಿಂಕೆ ಸುಮ್ಮನೆ ಸುಳಿಯುತ್ತಿಲ್ಲ; ಎಲ್ಲರನ್ನೂ ಹುಚ್ಚರನ್ನಾಗಿಸಿತ್ತು. ವಿವಶರನ್ನಾಗಿಸಿತ್ತು. ಯಾರ ಕೈವಶವೂ ಆಗದ ಅದರ ಬೆಡಗಿನ ಲೀಲೆ ಇಂದಿನ ನಾಗರೀಕತೆಯ ಹೆಗ್ಗುರುತು!

ನಸೀಮಾ ಮತ್ತು ಆರಿಫ ಬಟ್ಟೆಯಂಗಡಿಯಲ್ಲಿದ್ದರು. ಮೆಹಬೂಬ್ ಖಾನ್...ಸ್ಟೂಲಿನ ಮೇಲೆ ಕುಳಿತು, ಅಂಗಡಿಯ ಫರ್ನಿಶಿಂಗ್, ಫಾಲ್ಸ್ ಸೀಲಿಂಗ್ ವಿನ್ಯಾಸ, ಕೌಂಟರ್‌ಗಳ ರಚನೆ ಮೊದಲಾದವುಗಳನ್ನು ಆಳವಾಗಿ ಗಮನಿಸುತ್ತಿದ್ದ. ನಯಾಜ್ ಖಾನ್ ಒಂದೊಂದೇ ಅಂಗಡಿಗಳ ಮುಂದೆ ನಿಂತು ಶೋ ಕೇಸಿನಲ್ಲಿಟ್ಟಿದ್ದ ವಸ್ತುಗಳನ್ನು ಗಮನಿಸುತ್ತಾ ಅಲ್ಲಲ್ಲಿಯೇ ಠಳಾಯಿಸುತ್ತಿದ್ದ. ಅವನು ಹೀಗೆಯೇ ಹಲವಾರು ಅಂಗಡಿಗಳ ಹಿಂದೆ ಮುಂದೆ ಸುಳಿದು ನಸೀಮಾ ಇದ್ದ ಅಂಗಡಿಯ ಬಳಿ ಬರಬೇಕೆನ್ನುವಷ್ಟರಲ್ಲಿ ಯಾರೋ ಮೃದುವಾಗಿ ಅವನ ಬೆನ್ನು ತಟ್ಟಿದಂತಾಯಿತು. ಆ ಸ್ಪರ್ಶ.. ಅವನ ಅಂತರ್ಯದ ಅವಿರತ

ಹುಡುಕಾಟಕ್ಕೆ ಉತ್ತರವೇನೋ ಎಂಬಂತೆ ಅವನು ಒಂದು ಗಳಿಗೆ ಸ್ಥಬ್ದನಾದ. ಅವನಿನ್ನೇನು ಹೊರಳಿ ಆ ಸ್ಪರ್ಶದ ಕಾರಣೀ ಕರ್ತನನ್ನು ಕಾಣಬೇಕೆಂದು ಹೊರಳಿದಾಗ ಅವನ ಬೆನ್ನ ಹಿಂದೆ ಯಾರೂ ಇರಲಿಲ್ಲ. ಆದರೆ... ಹಾಗೆ.. ಅವನು ಹೊರಳಿದ ಕ್ಷಣದಲ್ಲೇ ಅವನೆದುರಿಗಿದ್ದ ಬೃಹದಾಕಾರದ ಶೋಕೇಸಿನಲ್ಲಿ ಪೇರಿಸಿಟ್ಟಿದ್ದ ವಿದೇಶೀ ಸರಕುಗಳ ಸರಮಾಲೆಯಲ್ಲಿ... ಅವನ ಹೃದಯದ ಬಡಿತ ತಪ್ಪಿಹೋಯಿತು. ಯಾವುದೋ ಕನಸು ಕಾಣುತ್ತಿರುವವನಂತೆ ಅವನು ಮತ್ತೆ ಮತ್ತೆ ನೋಡಿದ. ಅವನ ನಿರಂತರ ಹುಡುಕಾಟದ ಕೇಂದ್ರಬಿಂದುವಾಗಿ ಅವನನ್ನು ಹಗಲಿರುಳೂ ಕೂಡ ಕಾಡಿಸುತ್ತಿದ್ದ ಅವನ ಕನಸು ಮನಸಿನಲ್ಲಿಯೂ ಬೇರು ಬಿಟ್ಟಿದ್ದ ಆ ಚಪ್ಪಲಿಗಳು.. ಅಗೋ... ಅಲ್ಲಿ ಶೋಕೇಸಿನಲ್ಲಿ! ಅವನು ಸಮ್ಮೋಹನಕ್ಕೊಳಗಾದವನಂತೆ ಅಲ್ಲೇ ನಿಂತು ಬಿಟ್ಟ. ನಿಜವೋ...ಸುಳ್ಳೋ.. ಇದು ಸಾಧ್ಯವೇ?

ಅವನು ಕ್ರಮೇಣ ಚೇತರಿಸಿಕೊಂಡ. ಹೀಗೂ ಉಂಟೇ ಎಂಬ ಅಸಂಭವ ಘಟನೆಯ ಸಂಭವತೆ ಅವನ ಬಾಹ್ಯ ಪ್ರಜ್ಞೆಯನ್ನೇ ಕಸಿದಿತ್ತು. ಅವನು ಮೋಡಿಗೊಳಗಾದವನಂತೆ ನೇರ ಅಂಗಡಿಯೊಳಗೆ ನಡೆದ ನಿಲ್ಲಲು ಅಸಾಧ್ಯವಾಗಿ ಸ್ಟೂಲಿನ ಮೇಲೆ ಕುಸಿದು ಕುಳಿತ. ಆ ಅಂಗಡಿಯ ಸಮಸ್ತ ಬೆಳಕು ತನ್ನೊಬ್ಬನ ಮೇಲೆ ಕೇಂದ್ರೀಕೃತವಾದಂತೆ ತಾನೊಬ್ಬ ಅಸಾಮಾನ್ಯ ವ್ಯಕ್ತಿಯಂತೆ ಆತನಿಗೆ ಅನ್ನಿಸತೊಡಗಿತು. ಇನ್ನು ಯಾರಾದರೂ ಆ ಷೂಗಳತ್ತ ಕೈಚಾಚಬಹುದೇನೋ ಎಂಬ ಆತಂಕದಿಂದ ಕಂಗೆಟ್ಟು ದೊಡ್ಡ ಧ್ವನಿಯಲ್ಲಿ ಇಡೀ ಅಂಗಡಿಗೆ ಕೇಳಿಸುವಂತೆ ಅವನೆಂದ 'ಆ ಹೈ ಹೀಲ್ಡ್ ಷೂ ಕೊಡಿ'

ಅವನ ಆ ಧ್ವನಿಯನ್ನು ಕೇಳಿ ಮೆಹಬೂಬ್ ಖಾನ್ ಕೂಡ ತಿರುಗಿ ನೋಡಿದ ನಸೀಮಾ ಕೂಡ ಆಯಾಚಿತವಾಗಿ ಅವನನ್ನೇ ಗಮನಿಸುತ್ತಿದ್ದಳು. ಇದ್ಯಾವುದರ ಪರಿವೆಯೂ ಇಲ್ಲದೇ ನಯಾಜ್ ಖಾನ್ ಇನ್ನಷ್ಟು ದೃಢವಾಗಿ ಕೂಗಿ ಹೆಂಡತಿಯನ್ನು ಕರೆದ. ಭಾವನ ಎದುರು ನಯಾಜ್ ಖಾನ್‌ನ ವಿಚಿತ್ರ ಚರ್ಯೆಗಳನ್ನು ಗಮನಿಸಿದ ಆರೀಫ ಕೂಡ ಗಂಡನ ಹಿಂದೆ ಬಂದು ನಿಂತಳು. ನಯಾಜ್‌ಖಾನ್ ತೀವ್ರ ಭಾವೋದ್ವೇಗಕ್ಕೆ ಒಳಗಾಗಿದ್ದ. ಒಮ್ಮೆಲೇ ಎದ್ದು ನಿಂತ ಅವನು ಹೆಂಡತಿಯತ್ತ ತಿರುಗಿ 'ಅಲ್ಲಿಕೂತುಕೋ...ಅಲ್ಲಿಕೂತುಕೋ' ಎಂದ ಅವನು ತೋರಿಸಿದತ್ತ ನೋಡಿದ ಅರೀಫ ಗೊಂದಲಕ್ಕೊಳಗಾದಳು. ಗಾಜಿನ ದಪ್ಪ ಹಲಗೆಗಳಿಂದ ಮಾಡಿದ ಅಲಂಕೃತವಾದ ಆಸನವಾಗಿದ್ದರೂ ತಾನು ಕುಳಿತರೆ ಆ ಗಾಜಿನ ಪೀಠ ಮುರಿಯುವುದಿಲ್ಲವೇ. ಇದ್ಯಾಕೆ ಈತ ಹೀಗೆ ಆಡುತ್ತಿದ್ದಾನೆ ಎಂದೆನ್ನಿಸಿದರೂ ಅವಳೇನೂ ಹೇಳಲಿಲ್ಲ. ನಯಾಜ್ ಖಾನ್ ತುಂಬಾ ಕಾತುರದಿಂದಲೂ ಸಡಗರದಿಂದಲೂ ಅವಳ ಕೈಯನ್ನು ಹಿಡಿದೆಳೆದು ಆ ಪೀಠದ ಮೇಲೆ ಕೂರಿಸಿಯೇ ಬಿಟ್ಟ. ಆರಿಫ ಮುದುಡಿ ಹೋದಳು. ಅದು ಮುರಿಯಬಹುದೆಂಬ ಅವಳ ಭಯ ದ್ವಿಗುಣ ಗೊಂಡಿತು. ಸೇಲ್ಸ್‌ಮೆನ್‌ನ ಕೈಯಲ್ಲಿ ಹೈ ಹೀಲ್ಡ್ ಷೂಗಳು... ಎತ್ತಕಡೆಯೂ ಧ್ಯಾನ ವಿಲ್ಲದ ಗಂಡ, ಖಾಲಿ ನೋಟ ಬೀರುತ್ತಿರುವ ಮೆಹಬೂಬ್ ಖಾನ್... ತುಟಿಯ ಮೇಲಿನ ಕುಚೋದ್ಯದ ಲಾಸ್ಯವನ್ನು ಕಷ್ಟಪಟ್ಟು ತಡೆ ಹಿಡಿಯುತ್ತಿರುವ ನಸೀಮಾ !

ಅಂತೂ ಸೇಲ್ಸ್‌ಮೆನ್ ಬಾಗಿ ಅವಳ ಕಾಲುಗಳಲ್ಲಿದ್ದ ಉದ್ದುದ್ದನೆಯ ನೀಲಿ ಪಟ್ಟಿಯ ಹವಾಯ್ಯ ಚಪ್ಪಲಿಗಳನ್ನು ಕಳಚಿಟ್ಟು ಆ ಷೂಗಳನ್ನು ಅವಳಿಗೆ ತೊಡಿಸಲಾರಂಭಿಸಿದ. ಆ

ಕಾರ್ಪೆಟ್‌ನಿಂದ ಅವಳು ಅಂಗಡಿಯ ನೆಲದ ಮೇಲೆ ಕಾಲಿಡಬೇಕಿತ್ತು. ಅಂಗಡಿಯ ನೆಲ ಹಾಸಿನ ಹಾಸುಬಿಲ್ಲೆಗಳು ಪಳಪಳನೆ ಹೊಳೆಯುತ್ತಿದ್ದವು. ಕಾಲಿಟ್ಟಲ್ಲಿ ಎಲ್ಲಿ ಸರ್‍ರೆಂದು ಜಾರುವುದೋ ಎಂಬ ಹೆದರಿಕೆಯಿಂದ ಅವಳು ಮೆಲ್ಲ ಮೆಲ್ಲನೆ ನಡೆಯತೊಡಗಿದಳು. ಅಕ್ಕಪಕ್ಕದ ಕಂಬಗಳನ್ನು ಶೋಕೇಸನ್ನು ಆಸರೆಯಾಗಿ ಹಿಡಿದು ಅಂಗಡಿಯ ಮುಂಭಾಗಕ್ಕೆ ತಲುಪಿದ ಅವಳು ಅಂಗಡಿಯ ನುಣು ಪಾದ ಗ್ರಾನೈಟ್‌ನ ಮೆಟ್ಟಿಲುಗಳನ್ನು ನೋಡಿ ಒಂದು ಕ್ಷಣ ತಡೆದುನಿಂತಳು. ನಸೀಮಾಳಿಗೆ ಅವಳ ಪರಿಸ್ಥಿತಿ ಅರ್ಥವಾಯಿತು. ಮೈದುನನ ಈ ಹುಚ್ಚು ನಡವಳಿಕೆಯ ಬಗ್ಗೆ ಅವಳಿಗೆ ಕೋಪವೂ ಬಂದಿತು. ಇಷ್ಟೆಲ್ಲವನ್ನು ಅವನು ತನ್ನ ಮೇಲಿನ ಸ್ಪರ್ಧೆಗೋಸ್ಕರ ವಾಗಿಯೇ ಮಾಡುತ್ತಿದ್ದಾನೆ ಎಂಬುದು ಕೂಡ ಅವಳಿಗೆ ಖಾತರಿಯಾಗತೊಡಗಿತು. ಆದರೂ ಅವಳು ಕನಿಕರದಿಂದ ಆರೀಫಾಳ ಕೈ ಹಿಡಿದು 'ಮೆಲ್ಲಗೆ ಇಳಿ' ಎಂದು ಮೆಟ್ಟಿಲುಗಳನ್ನು ಇಳಿಯುವವರೆಗೂ ಕೈಹಿಡಿದೇ ಇದ್ದಳು.

ಷೂಗಳ ಹಳದಿ ಲೋಹದ ಬಕ್ಕಲ್ ಬೆಳಕಿಗೆ ಬಂಗಾರದಂತೆ ಹೊಳೆಯುತಿತ್ತು. ಆದರೆ ಅವಳ ಪಾದ ಆ ಷೂನಲ್ಲಿ ಕೂರಲು ಅಸಾಧ್ಯವಾಗಿತ್ತು. ನೀಳವೇಣಿಯರಿಗಾಗಿ ತಯಾರಾಗಿದ್ದ ಆ ಷೂನಲ್ಲಿ ಆರೀಫಾಳ ಅಗಲವಾಗಿದ್ದ ಪಾದ ತೂರಲು ಅಸಾಧ್ಯವಾಗಿತ್ತು. ನಯಾಜ್ ಖಾನ್‌ಗೆ ನಿರಾಶೆಯೇನೂ ಆಗಲಿಲ್ಲ. ಅವನು ಕೂಡಾ ಕೆಳಗಡೆ ಕುಳಿತವನೇ ಸೇಲ್ಸ್‌ಮೆನ್‌ನೊಂದಿಗೆ ಸಹಕರಿಸುತ್ತಾ ಹೆಂಡತಿಯ ಪಾದಗಳ ಬೆರಳನ್ನು ಆದಷ್ಟು ಇಕ್ಕಟ್ಟಾಗಿ ಹೊಂದಿಸುತ್ತಾ ಕಷ್ಟಪಟ್ಟು ಆ ಷೂನೊಳಗೆ ತೂರಿಸಿದ. ಹಾಗೂ ಹಿಮ್ಮಡಿಯ ಹಿಂದಿನಿಂದ ತೆಳುವಾದ ನಾಜೂಕಾದ ಪಟ್ಟಿ ಯನ್ನು ತಂದು ತಕ್ಕಲ್‌ಗೆ ಕೂಡಿಸಿಯೇ ಬಿಟ್ಟ ಅವನನ್ನು ಅನುಸರಿಸಿ ಸೇಲ್ಸ್‌ಮೆನ್ ಕೂಡ ಇನ್ನೊಂದು ಪಾದಕ್ಕೆ ಷೂ ಬಿಗಿದಿದ್ದ. ಷೂನಿಂದ ಹೊರಗೆ ಆಕೆಯ ಹಿಮ್ಮಡಿಯು ಸಾಕಷ್ಟು ಹೊರಚಾಚಿತ್ತು. ಆಕೆಯ ಹಿಮ್ಮಡಿಗಳು ಅಲ್ಲಲ್ಲಿ ಒಡೆದು ಚರ್ಮದ ಕಪ್ಪನೆಯ ಗೆರೆಗಳು ಎದ್ದು ಕಾಣುತ್ತಿದ್ದವು. ಮನೆಯ ಕೆಲಸದಲ್ಲಿ ತೊಡಗಿದ್ದ ಅವಳು ಪಾದಗಳತ್ತ ಯಾವುದೇ ಗಮನವನ್ನೇ ಕೊಟ್ಟಿರಲಿಲ್ಲ ಎನ್ನುವುದು ಎದ್ದು ಕಾಣುತ್ತಿತ್ತು. ಮತ್ತು ಆಕೆ ಯಾವ ಬಿಂಕವೂ ಇಲ್ಲದೇ ಮುಲಾಜಿಲ್ಲದೇ ಗಂಡನ ಹವಾಯ್ಯ ಚಪ್ಪಲಿಗಳನ್ನು ಮೆಟ್ಟಿ ಬಂದು ಬಿರುಬೀಸಾಗಿ ಆರಾಮವಾಗಿ ನಡೆಯುತ್ತಿದ್ದಳು. ಈಗ ಅದರ ಸಪೂರ ಪಾಯಿಂಟೆಡ್ ಹೀಲ್ಸ್ ನೋಡಿದೊಡನೆಯೇ ಆರೀಫಾಗೆ ಹೆದರಿಕೆಯಾಗತೊಡಗಿತು.

ಸೇಲ್ಸ್‌ಮೆನ್ ಕೂಡ ಆಕೆಗೆ ಯಾವ ರೀತಿಯಲ್ಲೂ ಹೊಂದಾಣಿಕೆಯಾಗದ ಷೂಗಳನ್ನು ನೋಡುತ್ತಾ ಅನುಮಾನದಿಂದ ಹೇಳಿದ 'ಸ್ವಲ್ಪ ನಡೆದು ನೋಡಿ ಮೇಡಮ್' ಅವಳು ತುಂಬಾ ಜಾಗರೂಕತೆಯಿಂದ ಎದ್ದಳು. ಹೇಗೋ ನಿಲ್ಲಲು ಸಾಧ್ಯವಾಯಿತು ಅಷ್ಟೇ ಇನ್ನು ಮುಂದಡಿ ಇಡಬೇಕು ಒಂದೊಂದೇ ಹೆಜ್ಜೆಯನ್ನು ಇಡಲೇಬೇಕಿತ್ತು. ಏಕೆಂದರೆ ಆಗಲೇ ನಯಾಜ್ ಖಾನ್ ಕೌಂಟರಿನತ್ತ ಓಡಿ ಚಕಚಕನೆ ನೋಟುಗಳನ್ನು ಎಣಿಸಿ ಬಿಲ್ ಹರಿಸಿದ್ದ. ನಸೀಮಾಳ ತಮಾಷೆಗೆ ಮೇರೆಯೇ ಇರಲಿಲ್ಲ. ಅವಳು ಕೈಗಳೆರಡನ್ನು ಎದೆಯ ಮೇಲೆ ಕಟ್ಟಿದ್ದು ಆರೀಫಾಳಿಗೆ ಸಾಕಷ್ಟು ಉತ್ತೇಜನ ವನ್ನು ನೀಡಿ 'ಹಾ...ಈಗ ನಡೆಯಮ್ಮ ಎಲ್ಲಿ ... ಒಂದೊಂದೇ ಹೆಜ್ಜೆ ಇಡು.. ನೋಡೋಣ' ಎಂದು ಹುರಿದುಂಬಿಸುತ್ತಿದ್ದಳು. ಮೇರೆ ಮೀರಿ ಉಕ್ಕುತ್ತಿದ್ದ ನಗುವಿನ ಪ್ರವಾಹವನ್ನು ಒತ್ತಿ ಹಿಡಿಯುವ ಆವಳ ಪ್ರಯತ್ನ ವಿಫಲವಾಗಿ ತುಟಿಗಳಿಂದ ಮಾತ್ರವಲ್ಲದೆ ಅವಳ ಇಡೀ ಮೋರೆಯಿಂದ ನಗುವಿನ ಬುಗ್ಗೆಗಳು ಏಳುತ್ತಿದ್ದವು.

ಅರ್ಧ ಹೆದರಿಕೆಯಿಂದ ಅರ್ಧ ಲಜ್ಜೆಯಿಂದ ತಡವರಿಸಿದ ಆರೀಫಾ ಇನ್ನೇನೂ ದಾರಿಯಿಲ್ಲ ಎಂದು ಖಚಿತವಾದ ನಂತರ ಗಂಡನ ಇಂತಹ ವಿಪರೀತ ನಡವಳಿಕೆಗೆ ಮನಸ್ಸಿನಲ್ಲಿಯೇ ರೋಷಗೊಂಡರೂ ಆ ಸುಂದರವಾದ ಕಾರ್ಪೆಟ್‌ನ ಮೇಲೆ ಒಂದೊಂದೇ ಹೆಜ್ಜೆಗಳನ್ನಿಡುತ್ತಾ ಅಭ್ಯಾಸ ಮಾಡತೊಡಗಿದಳು. ಅವಳಿಗೆ ಆ ಕ್ಷಣದಲ್ಲಿ ಯಾವುದೆ ಆಯ್ಕೆ ಇರಲಿಲ್ಲ. ಆದರೆ ಆ ಷೂನಲ್ಲಿ ನಡೆಯುವುದು ಅಸಾಧ್ಯವೆಂದು ಅವಳಿಗೆ ಮನವರಿಕೆಯಾಗ ತೊಡಗಿತು. ನಾಲ್ಕಾರು ಹೆಜ್ಜೆಗಳನ್ನಿಟ್ಟು ಮರಳಿ ಬಂದ ಅವಳು ಸೇಲ್ಸ್‌ಮೆನ್‌ನ್ನು ಕಂಡು 'ನೋಡಿ ಈ ಷೂ ಪ್ಯಾಕ್ ಮಾಡಿ' ಎಂದು ಹೇಳುತ್ತಾ ತನ್ನ ಹವಾಯಿ ಚಪ್ಪಲಿಗಾಗಿ ಸುತ್ತಲೂ ಕಣ್ಣಾಡಿಸಿದಳು. ಎಲ್ಲಿವೆ ಅವು? ಈಗಾಗಲೇ ನಯಾಜ್ ಖಾನ್ ಅವುಗಳನ್ನು ಡಬ್ಬದಲ್ಲಿ ಪ್ಯಾಕ್ ಮಾಡಿಸಿ ಅಂಗಡಿಯಿಂದ ಹೊರಗಡೆ ಓಡಿ ಹೋಗಿ ನಿಂತಿದ್ದ. ಆರೀಫಾಗೆ ಕಣ್ಣಂಚಿನಲ್ಲಿ ನೀರು ಕೂಡತೊಡಗಿತು.

ಈಗ ಕಾರ್ಪೆಟ್‌ನಿಂದ ಅವಳು ಅಂಗಡಿಯ ನೆಲದ ಮೇಲೆ ಕಾಲಿಡಬೇಕಿತ್ತು. ಅಂಗಡಿಯ ನೆಲ ಹಾಸಿನ ಹಾಸುಬಿಲ್ಲೆಗಳು ಪಳಪಳನೆ ಹೊಳೆಯುತ್ತಿದ್ದವು. ಕಾಲಿಟ್ಟಲ್ಲಿ ಎಲ್ಲಿ ಸರ್‍ರೆಂದು ಜಾರುವುದೋ ಎಂಬ ಹೆದರಿಕೆಯಿಂದ ಅವಳು ಮೆಲ್ಲಮೆಲ್ಲನೆ ನಡೆಯತೊಡಗಿದಳು. ಅಕ್ಕಪಕ್ಕದ ಕಂಬಗಳನ್ನು ಶೋಕೇಸನ್ನು ಆಸರೆಯಾಗಿ ಹಿಡಿದು ಅಂಗಡಿಯ ಮುಂಭಾಗಕ್ಕೆ ತಲುಪಿದ ಅವಳು ಅಂಗಡಿಯ ನುಣುಪಾದ ಗ್ರಾನೈಟ್‌ನ ಮೆಟ್ಟಿಲುಗಳನ್ನು ನೋಡಿ ಒಂದು ಕ್ಷಣ ತಡೆದುನಿಂತಳು. ನಸೀಮಾಳಿಗೆ ಅವಳ ಪರಿಸ್ಥಿತಿ ಅರ್ಥವಾಯಿತು. ಮೈದುನನ ಈ ಹುಚ್ಚು

ನಡವಳಿಕೆಯ ಬಗ್ಗೆ ಅವಳಿಗೆ ಕೋಪವೂ ಬಂದಿತು. ಇಷ್ಟೆಲ್ಲವನ್ನು ಅವನು ತನ್ನ ಮೇಲಿನ ಸ್ಪರ್ಧೆಗೋಸ್ಕರ ವಾಗಿಯೇ ಮಾಡುತ್ತಿದ್ದಾನೆ ಎಂಬುದು ಕೂಡ ಅವಳಿಗೆ ಖಾತರಿಯಾಗತೊಡಗಿತು. ಆದರೂ ಅವಳು ಕನಿಕರದಿಂದ ಆರೀಫಾಳ ಕೈ ಹಿಡಿದು 'ಮೆಲ್ಲಗೆ ಇಳಿ' ಎಂದು ಮೆಟ್ಟಿಲುಗಳನ್ನು ಇಳಿಯುವವರೆಗೂ ಕೈಹಿಡಿದೇ ಇದ್ದಳು.

ರಸ್ತೆಗಿಳಿದ ಮೇಲೆ ಅವಳಾದರೂ ಹೇಗೆ ಕೈ ಹಿಡಿದು 'ಪೈ ಮಾ ಪೈ' ಎಂದು ಅಂಬೆಗಾಲಿಕ್ಕುವ ಮಗುವಿನಂತೆ ನಡೆಸಿಯಾಳು? ಕ್ರಮೇಣ ಅವಳು ಆರೀಫಾಳ ಕೈ ಬಿಟ್ಟಳು. ನಯಾಜ್‌ಖಾನ್ ಯಾರ ಕೈಗೂ ಸಿಗದಂತೆ ಮುಂದೆ ಮುಂದೆ ಓಡುತ್ತಿದ್ದ ತಮ್ಮ ಆ ರೀತಿಯಲ್ಲಿ ಆರೀಫಾಳಿಗೆ ತಕ್ಕುದ್ದಲ್ಲದ ಷೂವನ್ನು ಕೊಂಡದ್ದು ಮೆಹಬೂಬ್ ಖಾನ್‌ಗೆ ವಿಚಿತ್ರವೆನಿಸಿದರೂ ಉಳಿದಂತೆ ಆತನಿಗೆ ಯಾವುದೇ ವಿಷಯಗಳೂ ಬಾಧಿಸಲಿಲ್ಲ. ನಸೀಮಾಳಂತೂ ಸಮಯ ಸಿಕ್ಕಾಗ ಗಂಡನನ್ನು ಕುಕ್ಕಲು ಈ ವಿಷಯವನ್ನು ತನ್ನ ಮೆದುಳಿನ ಸಂಗ್ರಹದಲ್ಲಿ ಜೋಪಾನವಾಗಿಟ್ಟು ತನ್ನ ಇತರೆ ವಿಷಯದಲ್ಲಿ ಮಗ್ನಳಾದಳು.

ಆರೀಫಾ... ಪಾಪ ಆ ಷೂಗಳನ್ನು ಮೆಟ್ಟಿ ಯಾವಾಗ ಜಾರಿ ಬೀಳುವೆನೋ ಎಂಬ ಭಯದಲ್ಲಿ ಅತ್ಯಂತ ವಿಚಿತ್ರವಾಗಿ ಕುಂಟುತ್ತಾ ನಡೆಯತೊಡಗಿದಳು. ಹೊಸ ಷೂಗಳು ಪಾದಗಳ ಬೆರಳುಗಳನ್ನು ಬಿಗಿಯತೊಡಗಿದ್ದವು. ಷೂನಿಂದ ಹೊರಚಾಚಿದ್ದ ಹಿಮ್ಮಡಿಗಳು ಬೇರೆ ನೋಯುತ್ತಿದ್ದವು. ಇವೆಲ್ಲಕ್ಕಿಂತ ಹೆಚ್ಚಾಗಿ ಚೂಪಾದ ಸಪೂರವಾದ ಮೂರು ಇಂಚು ಎತ್ತರದ ಹೈ ಹೀಲ್ಡ್ ಷೂ...ತಾನು ಬಿದ್ದರೂ ಪರವಾಗಿರಲಿಲ್ಲ ಒಂದೋ ಎರಡು ಮೂಳೆಗಳು ಮುರಿಯಬಹುದಷ್ಟೇ ಆದರೆ ತನ್ನ ಹೊಟ್ಟೆಯಲ್ಲಿರುವ ಮಗು--------?

ಅವಳ ನಡಿಗೆ ನಿಧಾನವಾಗತೊಡಗಿತು. ನಯಾಜ್, ಮೆಹಬೂಬ್, ನಸೀಮಾ ಎಲ್ಲರೂ ಮರೆಯಾಗತೊಡಗಿದರು. ಒಂದೊಂದು ಹೆಜ್ಜೆಯನ್ನೆತ್ತಿ ಇಡುವುದು ಕೂಡ ಅವಳಿಗೆ ಅಸಾಧ್ಯವಾದ ಕಷ್ಟದ ಕೆಲಸ ಎನಿಸತೊಡಗಿತು. ಅಷ್ಟೇ ಅಲ್ಲದೆ ಅಂತಹ ಷೂತೊಟ್ಟು ತುಂಡು ಲಂಗವೋ ಬಿಕಿನಿಯನೋ ಧರಿಸಿ ಉದ್ದನೆಯ ನಗ್ನ ತೊಡೆಗಳನ್ನು ಪ್ರದರ್ಶಿಸುವ ಅನೇಕ ಹೆಂಗಳೆಯರನ್ನು ಟಿ.ವಿ.ಯಲ್ಲಿ ನೋಡಿದ್ದ ಅವಳು, ಅವರ ನರ್ತಿಸುತ್ತಿದ್ದ ಕಾಲುಗಳನ್ನು ನೆನಪಿಸಿಕೊಂಡು ಸ್ವಲ್ಪ ಧೈರ್ಯವನ್ನು ತಂದುಕೊಂಡು ಧೃಡವಾದ ಹೆಜ್ಜೆಯನ್ನೂರ ಬೇಕೆಂದು ಪ್ರಯತ್ನಿಸಿದಳು. ಅವರುಗಳ ನೆನಪಿನಿಂದ ಆಕೆಗೆ ಧೈರ್ಯ ಮೂಡುವುದಕ್ಕೆ ಬದಲಾಗಿ ತಾನೇ ನಗ್ನಳಾದೆ ಎಂದೆನಿಸತೊಡಗಿ ಹೆಜ್ಜೆ ತಪ್ಪತೊಡಗಿತು.

ಈ ಎಲ್ಲಾ ಆತಂಕಗಳ ನಡುವೆ ಆಹ್ವಾನಿಸಿಕೊಂಡಂತೆ ಬಂದ ಕೆಮ್ಮು ಕೂಡ ಸುಧೀರ್ಘವಾಗಿ ಅವಳ ಇಡೀ ದೇಹ ಮತ್ತು ಮನಸ್ಸಿನ ಮೇಲೆ ಆಕ್ರಮಣವೆನ್ನಸಗಿ ಅವಳನ್ನು ನಡುಗಿಸತೊಡಗಿತು. ಕೆಮ್ಮಿನ ಆಕ್ರಮಣದ ನಂತರ ಅವಳು ತನ್ನ ಕೆಂಪೇರಿದ್ದ ಮುಖವನ್ನು ಮತ್ತು ಧಾರಾಕಾರ ಬೆವರನ್ನು ಒರೆಸಿ ಕೊಳ್ಳುತ್ತಾ ಒಂದೆರಕ್ಷಣ ತಡೆದು ನಿಂತಳು. ಪಾದಗಳು ಇಷ್ಟೊಂದು ಯಾತನೆಯನ್ನು ನೀಡಬಹುದೆಂಬ ಅಂಶ ಅವಳಿಗೆ ಮೊದಲ ಬಾರಿಗೆ ಅರಿವಿಗೆ ಬಂದಿತು. ತನ್ನ ಬಗ್ಗೆ ಯಾವ ಕಾಳಜಿಯೂ ಇಲ್ಲದೇ ತನಗೆ ಬೇಡವಾದ ತನ್ನ ಗರ್ಭಕ್ಕೆ ಎರವಾಗಬಹುದಾದ ಅನಿಷ್ಟ ಷೂಗಳನ್ನು ತನಗೆ ತಗುಲಿ ಹಾಕಿ ಒಮ್ಮೆಯೂ ಮರಳಿ ನೋಡದೆ ಬಿಡುಬೀಸಾಗಿ ನಡೆದು ಹೋದ ಗಂಡನ ಚರ್ಯೆ ಅವಳಿಗಂತೂ ಅರ್ಥವಾಗಲಿಲ್ಲ. ಬದಲಿಗೆ ಈ ಬೇಡದ ಷೂಗಳನ್ನು ಕಳಚಿ ತೆಗೆಯಬೇಕೇ ಎಂಬುದನ್ನು ತೂಗುತ್ತಾ ತನ್ನೆಲ್ಲಾ ಆಕ್ರೋಶಗಳನ್ನು ಹೆದರಿಕೆಗಳನ್ನು ಹೇರುವಿಕೆಗಳನ್ನು

ಆ ಷೂಗಳನ್ನು ಮೆಟ್ಟಿ ಯಾವಾಗ ಜಾರಿ ಬೀಳುವೆನೋ ಎಂಬ ಭಯದಲ್ಲಿ ಅತ್ಯಂತ ವಿಚಿತ್ರವಾಗಿ ಕುಂಟುತ್ತಾ ನಡೆಯತೊಡಗಿದಳು. ಹೊಸ ಷೂಗಳು ಪಾದಗಳ ಬೆರಳುಗಳನ್ನು ಬಿಗಿಯತೊಡಗಿದ್ದವು. ಷೂನಿಂದ ಹೊರಚಾಚಿದ್ದ ಹಿಮ್ಮಡಿಗಳು ಬೇರೆ ನೋಯುತ್ತಿದ್ದವು. ಇವೆಲ್ಲಕ್ಕಿಂತ ಹೆಚ್ಚಾಗಿ ಚೂಪಾದ ಸಪೂರವಾದ ಮೂರು ಇಂಚು ಎತ್ತರದ ಹೈ ಹೀಲ್ಡ್ ಷೂ . .. .ತಾನು ಬಿದ್ದರೂ ಪರವಾಗಿರಲಿಲ್ಲ, ಒಂದೋ ಎರಡು ಮೂಳೆಗಳು ಮುರಿಯಬಹುದಷ್ಟೇ ಆದರೆ ತನ್ನ ಹೊಟ್ಟೆಯಲ್ಲಿರುವ ಮಗು--------?

ಪ್ರತಿಭಟಿಸುವ ತೀರ್ಮಾನವನ್ನು ಒಂದೆರ ಕ್ಷಣದಲ್ಲಿಯೇ ಅವಳು ನಿರ್ಧರಿಸಿದಳು. ಹೀಗಾಗಿ ಅವಳು ನೇರವಾಗಿ ನಿಂತು ತನ್ನೆಲ್ಲಾ ಭಾರವನ್ನು ಬಿಟ್ಟು ಪಾದಗಳ ಬೆರಳುಗಳನ್ನು ಆ ಇಕ್ಕಟ್ಟಿನ ಸ್ಥಳದಲ್ಲಿಯೇ ಅಲುಗಾಡಿಸಲು ಪ್ರಯತ್ನಪಟ್ಟಳು. ಅದು ಇನ್ನು ಹೆಚ್ಚಿನ ನೋವನ್ನು ನೀಡಿದ್ದರಿಂದ ಹಿಮ್ಮಡಿಯನ್ನು ಕೆಳಕ್ಕೆ ಬಡಿಯುತ್ತಾ ಉದ್ದವಾದ ಪೆನ್ಸಿಲ್ ಹೀಲ್‌ನ ಮೇಲೆ ತನ್ನ ದೇಹದ ಎಲ್ಲಾ ಭಾರವನ್ನು ಬಿಟ್ಟು ಬಾಗಿಸಲು ಪ್ರಯತ್ನಪಟ್ಟಳು. ಉಂ...ಹುಂ... ಆ ದೆವ್ವದಂತಹ ಹೀಲ್ಸ್ ಸ್ವಲ್ಪವೂ ಅಲುಗಾಡಲಿಲ್ಲವೆಂಬುದು ಅವಳ ಅರಿವಿಗೆ ಬಂದಿತು. ಅವಳು ತನ್ನ ನಿರ್ಧಾರದಿಂದ ಹೆಚ್ಚು ಬಲಿಷ್ಠಳಾಗಿದ್ದಳು. ಧೃಡಚಿತ್ತ ಅವಳಿಗೆ ಅಪೂರ್ವ ಶಕ್ತಿಯನ್ನು ತಂದು ಕೊಟ್ಟಿತು. ನೇರವಾಗಿ ಒಮ್ಮೆ ನಿಂತು ತನ್ನ ಎರಡು ಪಾದಗಳ ಮೇಲೆ ಭಾರವನ್ನು ಬಿಟ್ಟು ಮನಸ್ಸಿನಲ್ಲಿಯೇ ಅವಳು ಲೆಫ್ಟ್‌ರೈಟ್ ಲೆಫ್ಟ್ ಎಂದು ಹೇಳಿ ಕೊಳುತ್ತಾ ನಿಜವಾದ ಮಾರ್ಚ್ ಫಾಸ್ಟನ್ನೇ ಅರಂಬಿಸಿಬಿಟ್ಟಳು.

ಯಾರು ನೋಡಿದರೆ ತನಗೇನು ಎಂಬುದು ಅವಳ ನಿರ್ಲಿಪ್ತ ನಡಿಗೆಯೇ ಹೇಳುತ್ತಿತ್ತು. ಹಾಗೆ ಹೋಗುವಾಗ ಒಂದಿಷ್ಟು ಅನ್ಯ ಮನಸ್ಕಳಾದಂತೆ ಎಡಗಾಲು ಆ ವೇಗದ ನಡಿಗೆಗೆ ಜಾರಿ ತಿರುಚಿಕೊಂಡಿತು. ಅದೇಗ್ಗೋ ಅವಳ ಎದುರಿನಲ್ಲಿಯೇ ಹೋಗುತ್ತಿದ್ದ ದೈತ್ಯಾಕಾರದ ಒಬ್ಬ ಪುರುಷನ ಷರಟು ಅವಳ ಕೈಗೆ ಸಿಕ್ಕಿದ್ದರಿಂದ ಅವನ ಆಧಾರದಿಂದ ಅವಳು ಬೀಳಲಿಲ್ಲ ಅಷ್ಟೇ. ಟಕ್ ಮಾಡಿದ್ದ ಅವನ ಷರಟಿನ ಮುಂಭಾಗವೆಲ್ಲ ಹಿಂದುಗಡೆ ಎಳೆದಂತಾಗಿ ಅವನ ಷರಟಿನ ಗುಂಡಿ ಗಂಟಲಿನ ಬಳಿ ಎಳೆದಂತಾಗಿ ಕಾಲರ್ ಸಂಪೂರ್ಣವಾಗಿ ಹಿಂದೆಳೆದುಕೊಂಡಿತ್ತು. ಅವ ಅಸಾಧ್ಯ ಕೋಪದಿಂದ ಹಿಂದುರುಗಿ ನೋಡಿದ. ಆರಿಫಾಳ ಅವತಾರವನ್ನು ನೋಡಿಯೇ ಅವನ ಕೋಪವೆಲ್ಲ ಕರಗಿಹೋಯಿತು. ಷರ್ಟನ್ನು ಬಿಟ್ಟರೂ ಕೂಡ ನಿಲ್ಲಲಾಗದೇ ಪರಿತಾಪ ಪಡುತ್ತಿದ್ದ ಅವಳನ್ನು ನಿಲ್ಲಿಸಿ ಮೃದುವಾಗಿ ಅವನು ಕೇಳಿದ. 'ನೀನು ಹಾಕಿರುವ ಷೂ ನಿನಗೆ ಹೊಂದುವುದಿಲ್ಲ ಅಲ್ಲವೇ?' ಬದುಕಿನ ಯಾವ ಕ್ಷಣಗಳಲ್ಲಿಯೂ ಹೀಗೆ... ಒಬ್ಬ ಅಪರಿಚಿತ ಪುರುಷನಿಗೆ ಮುಖಾಮುಖಿ ಆಗದ ಅವಳು ಒಂದು ಕ್ಷಣ ತಡವರಿಸಿದಳು ನಂತರ ಅಂದಳು... 'ಹೌದು ಇವು ನನ್ನ ಅಳತೆಗೆ ಸರಿಯಾಗದ ನನಗೆ ಸೌಕರ್ಯ ಒದಗಿಸದ ಹಿಂಸೆ ನೀಡುವ ಷೂಗಳು'

'ನೀನು ಅದನ್ನು ಯಾಕೆ ತೆಗೆದು ಕೈಯಲ್ಲಾದರೂ ಇಟ್ಟುಕೊಳ್ಳಬಾರದು?' ಅವಳು ಆ ವಿಚಿತ್ರ ಸನ್ನಿವೇಶದಲ್ಲೂ ಒಂದು ಕಿರುನಗೆ ಬೀರುತ್ತಾ ಹೇಳಿದಳು. 'ಇದು ಪಿಶಾಚಿ ಷೂ, ಕಳಚಿಟ್ಟರೂ ಮತ್ತೆ ಮತ್ತೆ ಮೆಟ್ಟಬೇಕಾದ ಪ್ರಸಂಗ ಬರುತ್ತೆ. ಎಂದು ಬಲಗಾಲನ್ನೆತ್ತಿ ಜೋರಾಗಿ ಕುಕ್ಕಿದಳು. ಆ ಚಪ್ಪಲಿಯ ಹೀಲ್ ಮುರಿಯುವುದಿರಲಿ...ಮಿಸುಕಲೂ ಇಲ್ಲ. ಆದರೆ ಅವಳಿಗ್ಯಾಕೋ ಕಣ್ಣು ಮಬ್ಬಾದಂತೆನಿಸಿ... ಆಸರೆಗೆ ಏನಾದರೂ ಸಿಗುವುದೇನೋ ಎಂದು ಕೈಯಾಡಿಸಿದಳು.

ಅವಳು ಹೀಗೆಯೆ... ಅಸ್ಪಷ್ಟವಾಗಿ ತಡಕಾಡುತ್ತಿರುವಾಗಲೇ, ನಿಧಾನವಾಗಿ ಅರಿತೋ... ಅರಿಯದೆಯೋ ಕತ್ತಲು ಕವಿಯುತ್ತಿರುವಂತಹ ಅನುಭವವಾಯಿತು. ಕರೆಂಟ್ ಹೋಯಿತೇ?. ಹಾಗಿದ್ದಲ್ಲಿ ಒಮ್ಮೆಲೇ ಫಕ್ಕೆಂದು ಆರಿ ಹೋಗಬೇಕಿತ್ತಲ್ಲಾ... ಇದೆಂತಹ ಕತ್ತಲೆ...ಚರ್ಮವನ್ನು ತಣ್ಣಗೆ ಸ್ಪರ್ಶಿಸುತ್ತಾ ರೋಮ ರಂಧ್ರಗಳೊಳಗೆ ಆಳವಾಗಿ ಹರಡುತ್ತಾ, ಅವಳನ್ನು ಅಚೇತನಗೊಳಿಸುತ್ತಾ... ಕ್ಷಣ ಕ್ಷಣಕ್ಕೂ ಅವಳ ಇಡೀ ದೇಹದಗುಂಟಾ ವ್ಯಾಪಿಸುತ್ತಾ, ಮನದ ಕಣಕಣವನ್ನು ಕಬಳಿಸುತ್ತಾ...ಆತ್ಮದ ಹೆಬ್ಬಾಗಿಲ ಸಂದಿಯಿಂದ ತೆವಳುತ್ತಾ ಅವಳ ಪ್ರಜ್ಞೆಯನ್ನು ಹಿಮಗಟ್ಟಿಸುತ್ತಾ... ಕೊನೆಗಳಿಗೆಯ ಕಿಂಚಿತ್ಯ ಪ್ರತಿರೋಧವನ್ನೊಡಿದ ಅವಳ ಸ್ಥೈರ್ಯವನ್ನು ಕಬಳಿಸುತ್ತಾ ಆ ಕತ್ತಲೆ ಅವಳನ್ನು ವ್ಯಾಪಿಸಿ ಆಳಕ್ಕಿಳಿಯತೊಡಗಿತು.

ಆ ವಿಲಕ್ಷಣ ಪ್ರಸಂಗದ ಪ್ರತಿಗಳಿಗೆಯನ್ನೂ ಕೂಡ ಆಕೆ ಅನುಭವಿಸುತ್ತಿದ್ದಂತೆಯೇ ಆಕೆಯ ಸಂಪೂರ್ಣ ಅಸ್ತಿತ್ವದಲ್ಲಿ ಕತ್ತಲೆಯು ಆಳವಾಗಿ ಬೇರುಗಳನ್ನು ಊರುತ್ತಿರುವುದು ಕಂಡು ಬಂದಿತು. ಆ ಬೇರುಗಳು ಇನ್ನೇನು ಅವಳ ಮೆದುಳಿನಿಂದ ಇಳಿದು ಮುಖಭಾಗಕ್ಕೆ ಹರಡಿ, ಕತ್ತಿನ ಬಳಿ ಬಂದು, ಅವಳ ಎದೆ, ಹೃದಯ ಪುಪ್ಪುಸಗಳನ್ನು ಸೀಳಿ ಇನ್ನೂ...ಇನ್ನೂ... ಎಂದು ಪರಿಭಾವಿಸುವಷ್ಟರಲ್ಲಿಯೇ ಅವಳ ಉಬ್ಬಿದ ಹೊಟ್ಟೆಯ ಬಳಿ ಬಂದು ನಿಂತು ಹೋಯಿತು. ಮೊನಚಾದ ಬೇರುಗಳು ಆಗ ಮೊಂಡಾಗಿ... ಸೀಳುವ ಶಕ್ತಿ ಕುಂದಿದ್ದು...

ಕತ್ತಲೆಯ ಪ್ರತಾಪ ಉಡುಗಿದ್ದು... ಆಕೆಗೆ ಕಂಡುಬಂದಿತು. ಎಲ್ಲೆಲ್ಲೂ ವ್ಯಾಪಿಸುತ್ತಿದ್ದ ಆ ಬಾಧಿಸುವ ಕತ್ತಲೆಗೂ ಪರಿಮಿತಿಗಳಿವೆ....

ಅಚಾನಕವಾಗಿ ಅವಳು ತನ್ನ ಉಬ್ಬಿದ ಹೊಟ್ಟೆಯನ್ನೇ ಗಮನಿಸಿದಳು... ಕಗ್ಗತ್ತಲೆಯ ಮಂಜಿನಲ್ಲಿ ಹೂತು ಹೋದ ತನಗೂ ಒಂದು ಆಶಾಕಿರಣವಿದೆ ಎಂದು ಅನಿಸಿದ್ದು, ಪದರಗಳೊಳಗಡೆ ಮಿಸುಕಿದ ಜೀವ ಬಸಿರ ಒಂದೊಂದು ಭಾಗದಲ್ಲಿ ಕದ ತಟ್ಟತೊಡಗಿದಾಗ...

ಅವಳ ಪಂಚೇಂದ್ರಿಯಗಳೂ ಕೂಡಾ ಆಳವಾದ ಕಗ್ಗತ್ತಲಿನಲ್ಲಿ ಹೂತು ಹೋಗಿ ಇಂದ್ರಿಯಾನುಭವದ ಎಲ್ಲಾ ಸಂವೇದನೆಗಳಿಂದಲೂ ತಾನು ದೂರವಾದೆ ಎಂದೆನಿಸುವಾಗ, ಸಿಕ್ಕ ಅದ್ಭುತ ಸಂಪರ್ಕ... ಜೀವಂತ ಜೀವನಾಡಿಯ ಸಮರಸದ ಸ್ಪಂದನ.

'ಅಮ್ಮಾ ...'

'ಹೇಳು...ನನ್ನ ಕಂದಾ...' ಅವಳು ಒಮ್ಮೆಲೇ ಪಡಿ ನುಡಿದಳು. ಆದರೆ, ಆ ಧ್ವನಿ ಆ ಆರ್ತತಯ ಕಾರುಣ್ಯಭರಿತ ಕೂಗು ಎಲ್ಲಿಂದ ಬರುತ್ತಿದೆ, ಎಂದು ಅರಿವಾಗುತ್ತಿದ್ದಂತೆಯೇ ಅವಳ ಇಡೀ ದೇಹ ಒಮ್ಮೆಲೇ ಸಡಿಲವಾಯಿತು. ಕಣ್ಣು ರೆಪ್ಪೆಗಳು ಅಪ್ರಯತ್ನವಾಗಿ ಕೂಡತೊಡಗಿದವು. ತನ್ನ ಸಮಸ್ತ ಬಾಹ್ಯ ಪ್ರಜ್ಞೆಗಳೂ ಕೂಡಾ ಸ್ಥಗಿತ ಗೊಂಡಂತಾಗಿ, ತನ್ನದಲ್ಲದ ಯಾವುದೋ ಅವಸ್ಥೆಯಲ್ಲಿ ಆಕೆ ಅದ್ಭುತವಾಗಿ ಆ ಕೂಸಿನೊಡನೆ ತಾದ್ಯಾತ್ಮತೆಯನ್ನು ಹೊಂದಲಾರಂಭಿಸಿದ್ದಳು. ಒಂದು ಗಳಿಗೆ ನೀರವತೆ... ಮತ್ತೆ ಬಸಿರಿನ ಯಾವುದೋ ಮೂಲೆಯಲ್ಲಿ ಮುದುಡಿ ಉಂಡೆಗಟ್ಟಿ ಅದು ಕೂಗಿಕರೆಯಿತು.

'ಅಮ್ಮಾ ....'

'ಹೇಳು ... ಹೇಳು... ಮಾತನಾಡು ನನ್ನ ಕಂದಾ..' ಉಂಡೆಗಟ್ಟಿದ ಭಾಗವನ್ನು ಮೆಲುವಾಗಿ ಅವಳು ನೇವರಿಸಿದ್ದಳು.

ಆ ಸ್ಪರ್ಶದ ನವಿರಿಗೆ ಅದು ಕೊಂಚ ಹಗುರವಾಯಿತು. ಮೆಲ್ಲನೆ ಪಿಸು ನುಡಿಯಿತು...

'ಏನಾಗಿದೆಯಮ್ಮಾ ನಿನಗೆ ...ನನ್ನ ಮೇಲೆ ವಿಪರೀತ ಭಾರ ಬಿದ್ದಿದೆ...'

'ಹೇಗೆ ... ಹೇಗೆ... ಎಂಥಾ ಭಾರ ನನ್ನ ಕೂಸೇ... ನನ್ನ ಹೃದಯವೇ...'

'ಗೊತ್ತಿಲ್ಲಮ್ಮಾ... ನನ್ನ ಮೇಲೆ ನಿನ್ನ ಹೊಟ್ಟೆಯ ಭಾರವೆಲ್ಲಾ ಹೇರಿಕೊಂಡಿದೆ. ನನಗೆ ಮಿಸುಕಾಡಲು ಸಾಧ್ಯವಿಲ್ಲಮ್ಮಾ..'

'ಅಯ್ಯೋ... ನನ್ನ ಬಂಗಾರ...ಏನಾಗಿದೆ ನಿನಗೆ.. ನನಗೇನೂ ಗೊತ್ತಾಗುತ್ತಿಲ್ಲವೇ. .'

'ನಿನ್ನ ಕರುಳಿನ ಭಾರವೆಲ್ಲಾ ನನ್ನ ತಲೆಯ ಮೇಲೆ ಎರಗಿದೆಯಮ್ಮಾ... ಈಗಂತೂ... ನೋಡು... ನೋಡು... ನನಗೆ... ಎಲ್ಲಿಯೂ ಜಾಗವಿಲ್ಲದಂತೆ ಆಗಿದೆ...'

ಅವಳ ಅರೆಮುಚ್ಚಿದ ಕಣ್ಣುಗಳಿಂದ ಧಾರಾಕಾರ 'ವಾಗಿ ಕಣ್ಣೀರು ಹರಿಯ ಲಾರಂಭಿಸಿತು.

'ನನ್ನ ಪ್ರಾಣವೇ... ಏನಾಗ್ತಿದೆ ನಿನಗೆ... ಅಯ್ಯೋ! ನಾನೇನು ಮಾಡಲಿ...?'

ಅವಳ ಕಾಲುಗಳು ಕಂಪಿಸತೊಡಗಿದವು. ಬೀಳಬಾರದೆಂದು ಧೃಡ ನಿರ್ಧಾರದಿಂದ ಅವಳು ನೆಟ್ಟಗೆ ನಿಲ್ಲಲು ಪ್ರಯತ್ನಿಸಿದಷ್ಟೂ ಮುಂಡಿಯ ಶಕ್ತಿ ಕುಂದಿದಂತೆನಿಸಿ, ಬಿದ್ದರೆ ತನ್ನ ಕೂಸಿಗೆ ಅಪಾಯ ಎಂಬ ಎಚ್ಚರಿಕೆ ಮೂಡುವಷ್ಟರಲ್ಲೇ, ಅದು ಮತ್ತೊಮ್ಮೆ ಮೆಲುವಾಗಿ ಮಿಸುಗಿ, 'ನಿನ್ನ ಪಾದಗಳಿಗೆ ಏನಾಯಿತಮ್ಮಾ. . ' ಎಂದು ಮಾತನ್ನು ತುಂಡರಿಸಿತು.

ಎಲ್ಲವೂ ಅವಳಿಗೆ ಫಳಕ್ಕನೆ ನಿಚ್ಚಳವಾಯಿತು. ಇನ್ನೂ ಹುಟ್ಟದೆ



ಅವಳು ತನ್ನೆರಡೂ ಕೈಗಳನ್ನು ತನ್ನ ಬಸಿರ ಮೇಲಿಟ್ಟು, ತನ್ನ ಚಲನವಲನವನ್ನು ನಿಲ್ಲಿಸುತ್ತಿದ್ದ ತನ್ನ ಕೂಸಿನ ಮೇಲೆ ತನ್ನ ಸಮಗ್ರ ಇಚ್ಛಾಶಕ್ತಿಯನ್ನು ಕೂಡ ಕೇಂದ್ರೀಕರಿಸಿ, ತನ್ನ ಹುಟ್ಟಲಿರುವ ಮಗುವಿನ ಮುಗ್ಧ ಸೌಮ್ಯ ರೂಪವನ್ನು ತನ್ನ ಮನದ ಅಂಗಳದ ತುಂಬಾ ತುಂಬಿಕೊಂಡು, ತನ್ನೆಲ್ಲಾ ಶಕ್ತಿಯೊಂದಿಗೆ ಆ ಹೈ ಹೀಲ್ಡ್ ಶೂಗಳ ಮೇಲೆ ಭಾರವನ್ನು ಹೇರ ತೊಡಗಿದಳು.

ಇರುವ ತನ್ನ ಕೂಸಿನ ಮೇಲೆ ಅನವಶ್ಯಕ ಭಾರ ಹೇರುತ್ತಿರುವ ತಾನು... ತನ್ನ ಹೈ ಹೀಲ್ಡ್ ಶೂನೊಂದಿಗೆ.. ಅವಳ ಹೃದಯ ದ್ರವಿಸಿಹೋಯಿತು.

ಕತ್ತಲಲ್ಲೇ ತಡಕಾಡಿ ತನ್ನ ಪಾದಗಳಿಗೆ ಬಿಗಿದಿದ್ದ ಆ ಶೂಗಳನ್ನು ಕಿತ್ತಿಸೆಯಲು ಬಕಲ್‌ಗಳನ್ನು ಎಳೆ ದಾಡಿದಳು. ಅವು ಅಲುಗಾಡಲಿಲ್ಲ... ಅಷ್ಟೇ ಅಲ್ಲ... ಆಕೆ ಬಲ ಪ್ರಯೋಗ ಮಾಡಿದಷ್ಟೂ ಬಲವಾಗಿ ಆಕೆಯ ಕಾಲಿಗೇ ಅಂಟಿಕೊಳ್ಳತೊಡಗಿತು. ಮತ್ತು ನೋಡನೋಡುತ್ತಾ ಆಕೆಯ ಪಾದಗಳ ಇನ್ನೊಂದು ಸಹಜ ಚರ್ಮದ ಪದರದಂತೆ ಕಾಣತೊಡಗಿತು.

ಬಸಿರಿನ ಮೇಲೆ ಭಾರ ಹೆಚ್ಚಿದಂತೆ... ಕೂಸಿಗೆ ಯಾವುದೇ ಜಾಗವಿಲ್ಲದಂತಾಗಿ, ಅದು ಸಾವು, ಬದುಕಿನ ಹೋರಾಟದಲ್ಲಿ ನಿರತವಾದಂತೆ ಆಕೆಗೆ ಅನಿಸತೊಡಗಿತು.

ತಾನು ತಾಯಿಯಲ್ಲ... ಮಹಾಮಾರಿ... ರಕ್ಕಸಿ... ಹೀಗೆ ಏನೇನೋ ಆತ್ಮಗ್ಲಾನಿಯ, ಅತ್ಯಂತ ತೃಪ್ತ ಕ್ಷಣಗಳಲ್ಲಿ ಕೂಡ ವಿವೇಕದ ಎಳೆಯೊಂದು ಜಾಗೃತವಾಯಿತು.

'ಇನ್ನೂ ಹೊತ್ತಿದೆ... 'ಕೂಸನ್ನು ಉಳಿಸಲು ಅವಳು ಕೊನೆಯ ಪ್ರಯತ್ನ ಮಾಡಲೇಬೇಕಿತ್ತು. ಗಂಡನಿಗಾಗಿ ಸುತ್ತಲೂ ಕಣ್ಣಾಡಿಸಿದಳು. ಅವನೆಲ್ಲೂ ಕಾಣಲೇ ಇಲ್ಲಾ... ಅವಳ ಪಾದಗಳಿಗೆ ಆ ಶೂಗಳನ್ನು ತೊಡಿಸಿದ್ದ ಆತ ನಾಪತ್ತೆಯಾಗಿದ್ದ.

ಅವಳು ಅತ್ಯಂತ ವಿಷಾದದಿಂದ ಆಕಾಶದತ್ತ ದಿಟ್ಟಿಸಿದಳು. ಕತ್ತಲಿನಲ್ಲಿ ಏನೂ ಕಾಣಲಿಲ್ಲ. ಕೊನೆಯದಾಗಿ ಎಂಬಂತೆ ಅಸ್ಪಷ್ಟವಾಗಿ ಕ್ಷೀಣಧ್ವನಿಯೊಂದು ತೇಲಿ ಬಂದಿತು..

'ಅಮ್ಮಾ .....'

ಅವಳ ಆಂತರ್ಯದ ಪ್ರೀತಿಯ ಒರತೆಯನ್ನು ಬಡಿದೆಬ್ಬಿಸಿದ ಆ ಕೂಗು ಅವಳಲ್ಲಿ ವಿಚಿತ್ರ ಆವೇಶ, ಅವಳಿಗೇ ಅರಿವಿರದ ಅಪಾರ ಶಕ್ತಿ ಮತ್ತು ಅಸೀಮ ಛಲವನ್ನು ತುಂಬಿದವು.

ಅವಳು ತನ್ನೆರಡೂ ಕೈಗಳನ್ನು ತನ್ನ ಬಸಿರ ಮೇಲಿಟ್ಟು, ತನ್ನ ಚಲನವಲನವನ್ನು ನಿಲ್ಲಿಸುತ್ತಿದ್ದ ತನ್ನ ಕೂಸಿನ ಮೇಲೆ ತನ್ನ ಸಮಗ್ರ ಇಚ್ಛಾಶಕ್ತಿಯನ್ನು ಕೂಡ ಕೇಂದ್ರೀಕರಿಸಿ, ತನ್ನ ಹುಟ್ಟಲಿರುವ ಮಗುವಿನ ಮುಗ್ಧ ಸೌಮ್ಯ ರೂಪವನ್ನು ತನ್ನ ಮನದ ಅಂಗಳದ ತುಂಬಾ ತುಂಬಿಕೊಂಡು, ತನ್ನೆಲ್ಲಾ ಶಕ್ತಿಯೊಂದಿಗೆ ಆ ಹೈ ಹೀಲ್ಡ್ ಶೂಗಳ ಮೇಲೆ ಭಾರವನ್ನು ಹೇರ ತೊಡಗಿದಳು.

ಹಾಗೆ ಹೇರುತ್ತಾ... ಹೇರುತ್ತಾ... ಅವಳು ಬೆವರಿನಿಂದ ತೊಪ್ಪೆಯಾಗಿ, ಇನ್ನೇನು ಅವಳ ಗರ್ಭವೇ ಆ ಭಾರಕ್ಕೆ ಆಹುತಿಯಾಗುವುದೇನೋ ಎಂಬ ಆ ದಿವ್ಯ ಕ್ಷಣಗಳಲ್ಲಿ ಆ ಹೈ ಹೀಲ್ಡ್ ಶೂಗಳು ಯಾವುದೋ ಮಹಾ ಶಕ್ತಿಶಾಲಿ ಆಸ್ಫೋಟಕ್ಕೆ ಒಳಗಾದಂತೆ ಸಿಡಿದು ಸಾವಿರಾರು ಚೂರುಗಳಾಗಿ ಉಲ್ಕಾಪಾತದಂತೆ ಬೆಳಗಿ ಭಸ್ಮವಾಗಿ ಎಲ್ಲೋ ಬಿದ್ದು...ಎಲ್ಲೋ ನಾಮಾವಶೇಷವಾದವು.

ಈಗ...ಅವಳು ಸ್ಥಿರವಾದ ನೆಲದ ಮೇಲೆ, ಗಟ್ಟಿಯಾಗಿ ನಿಂತಿದ್ದಳು... ಭೂಮಿಯಂತೆ! □

ಬಹುಸಂಸ್ಕೃತಿಯ ಮೇಲೆ ಏಕ ಸಂಸ್ಕೃತಿಯ ದಬ್ಬಾಳಿಕೆ

○ ಪ್ರೊ. ಹಿ.ಶಿ. ರಾಮಚಂದ್ರೇಗೌಡ

ಏಕಸಂಸ್ಕೃತಿಯ ಅಸ್ತಿತ್ವವೆಂದರೆ ಸರ್ವಾಧಿಕಾರದ ಅಸ್ತಿತ್ವ. ಇದು ನೋಟಕ್ಕೆ ಹೇಗಿರುತ್ತದೆ ಎಂದರೆ: ಹಳ್ಳಿಯೊಂದರಲ್ಲಿ ಏನೊ ಕಾರಣಕ್ಕೆ ಗಲಾಟೆಯಾದಾಗ ಊರ ಮುಂದೆ ಹೊರಗಿನಿಂದ ಬಂದ ಪೊಲೀಸರ ದಂಡು ಕವಾಯತು ನಡೆಸಿದಂತೆ. ಆಗ ನೀವು ಸ್ವಂತ ಉಸಿರು, ಸ್ವಂತ ಮಾತು ಮತ್ತು ಸ್ವಂತ ನಡವಳಿಕೆಯನ್ನು ಹೊಂದಿರುವುದಿಲ್ಲ, ಊರ ಒಳಗೆ ಒಂದು ಮಾತಾಡುತ್ತೀರಿ, ಊರ ಮಂದೆ ಬೇರೆಯೆ ಮಾತಾಡುತ್ತೀರಿ. ಸ್ವಂತ ಕೆಲಸಗಳಾದ ಊಟ ಮಾಡುವುದು, ಪ್ರೀತಿಸುವುದು ಮತ್ತು ಹೇಲುವುದನ್ನು ಕೂಡ ನೆಮ್ಮದಿಯಿಂದ ಮಾಡುವುದಿಲ್ಲ, ಯಾಕೆಂದರೆ ನಿಮ್ಮ ಮನಸ್ಸಿನಲ್ಲಿ ನೀವು ಇರುವುದಿಲ್ಲ; ಹೊರಗಿನ ಪ್ರಭು ಇರುತ್ತಾನೆ. ಈ ಪ್ರಭುವೇ ಏಕ ಸಂಸ್ಕೃತಿ, ಏಕಾಡಳಿತ, ಏಕ ಭಾಷೆ, ಏಕ ಪಕ್ಷ, ಏಕ ಕೇಂದ್ರ ಮತ್ತು ಏಕ ವ್ಯಕ್ತಿ ಎಂಬ ಯಜಮಾನ.

ಗೌಡಿಕೆ ಸಮಾಜದ ಒಂದು ಹಳ್ಳಿಯನ್ನು ಜ್ಞಾಪಿಸಿಕೊಳ್ಳಿ. ಯಜಮಾನ ಮತ್ತು ಅವನ ಆಳು ಹೊಲ/ಗದ್ದೆ ಕಡೆ ಹೊರಟಿದ್ದಾರೆ. ಊರಿಗೆ ಕೆಲವು ಕಾಲದಿಂದ ಮಳೆ ಬಂದಿಲ್ಲ. ದಾರಿಯಲ್ಲಿ ಯಜಮಾನ ಮತ್ತೊಬ್ಬ ಯಜಮಾನನನ್ನು ಸಂಧಿಸುತ್ತಾನೆ. ಅದೂ ಇದೂ ಮಾತಾಡಿ 'ಏನೊ, ಇವತ್ತು ನಾಳೆ ಮಳೆ ಆಗಂಗ್ ಅದೆ ಆಕಾಶ ನೋಡಿದ್ರೆ ಅನ್ನುತ್ತಾನೆ. ಆಗ, ಪಕ್ಕದಲ್ಲೆ ಇದ್ದ ಆಳು 'ಗೌಡ್ರೆ, ಸೂರ್ಯ ಮಂಡಲ ಕಟ್ಟಿದೆ, ನೆಲದಲ್ಲಿ ಮಳೆ ಇರ್ವೆ ಎದ್ದಿವೆ. ಮೋಡಕ್ಕೆ ಗರ್ಭ ಕಟ್ದಂಗೆ ಅದೆ...ಎನ್ನುತ್ತಾ ಇರುತ್ತಾನೆ. ಆಗ ಗೌಡ 'ಲೇ ಸುಮ್ನೆ ಇರ್ಲ ತಿಗ ಮುಚ್ಕಂಡು, ಬಾಳ ಗೊತ್ತಿರ ನಂಗೆ ಹೇಳ್ತನೆ...' ಎಂದು ಆಳು ಮಗನ ಅನುಭವವನ್ನು ಹತ್ತಿಕ್ಕುತ್ತಾನೆ. ವಾಸ್ತವದಲ್ಲಿ ಆಳು ಮಗ ಸದಾ ಹೊರಗೆ ಪರಿಸರವನ್ನು ದಿನನಿತ್ಯ ಕಂಡು, ಅನುಭವಿಸಿ ಅರ್ಥ ಮಾಡಿಕೊಂಡಿರುತ್ತಾನೆ. ಕೋಣೆಯಲ್ಲಿ ಇದ್ದ ಗೌಡನಿಗೆ ಅವರಿವರು ಹೇಳಿದ್ದು ಮಾತ್ರ ಗೊತ್ತಿರುತ್ತದೆ. ಆದರೆ ಗೌಡ ಯಜಮಾನ, ಕೆಳಗಿರುವವರು ಆಳು. ಆತ ಆಳು ಆಗಲು, ಬಡತನ, ಜಾತಿ ಇತ್ಯಾದಿಗಳು ಕಾರಣವಾಗಿರುತ್ತವೆ. ತಿಳುವಳಿಕೆ ಆಳಿಗೆ ದೊಡ್ಡದೇ ಇರುತ್ತದೆ. ಆದರೆ ಅವನಲ್ಲಿ ಪವರ್ ಇರುವುದಿಲ್ಲ ಎನ್ನುವ ಕಾರಣಕ್ಕೆ ಅವನ ನಿಜವಾದ ಜ್ಞಾನ ತಿರಸ್ಕರಿಸಲ್ಪಡುತ್ತದೆ. ಗೌಡನ ನಕಲಿ ಜ್ಞಾನ ಪುರಸ್ಕೃತವಾಗುತ್ತದೆ. 'ಏಕ'ದ ಒಪ್ಪಿಗೆ, ಜ್ಞಾನ, ಸಮರ್ಥನೆ ಮತ್ತು ಆರಾಧನೆ ಯಾವಾಗಲೂ ಇಂಥ ಅಪಾಯಗಳನ್ನು ತಂದಿಡುತ್ತದೆ.

ಈ ಏಕತ್ವವಾದಿಗಳು ಬಹುರೂಪಗಳನ್ನು ಬೇಡವಾದವು ಎನ್ನುತ್ತಾರೆ. ಬಹುಜನ, ಬಹುಪಂಥ, ಬಹುಧರ್ಮ ಎಂಬುವು ಅರಾಜಕತ್ವವನ್ನು ಉಂಟುಮಾಡುತ್ತವೆ ಎಂದು ಹೇಳುತ್ತಾರೆ. ಬಹುತ್ವ ಎಂಬುದು ಪ್ರಕೃತಿ ನಿಯಮ, ಏಕತ್ವ ಎಂಬುದು ಅಧಿಕಾರದ ನಿಯಮ. ಬಹುತ್ವದಲ್ಲಿ ಬಹು ಬಗೆಯ ಭೌಗೋಳಿಕ ವೈವಿಧ್ಯ, ಭಾಷೆಯ ವೈವಿಧ್ಯ, ಜನಾಂಗಿಕ ವೈವಿಧ್ಯ, ರುಚಿಯ ವೈವಿಧ್ಯ, ಸಾಹಿತ್ಯದ ವೈವಿಧ್ಯ, ಸಂಬಂಧದ ವೈವಿಧ್ಯ, ಸಂಗೀತದ ವೈವಿಧ್ಯ ಮತ್ತು ಸಂಸ್ಕೃತಿಯ ವೈವಿಧ್ಯವನ್ನು ಒಳಹೊಂದಿರುತ್ತದೆ. ಈ ವೈವಿಧ್ಯ ಎನ್ನುವುದು ಪ್ರತಿಭೆಯ ಸೃಷ್ಟಿ ಬಹುವೈವಿಧ್ಯಗಳಿವೆ ಎಂದರೆ ಬಹುಸೃಷ್ಟಿಗಳಿವೆ ಎಂದು ಅರ್ಥ. ಇಲ್ಲಿ ಲಕ್ಕ, ತಿಮ್ಮ ಅಮಾಸ, ಬೋರ, ಮಾರ...ಇವರೆಲ್ಲರ ಪ್ರತಿಭೆಗೂ ಮತ್ತು ಸೃಷ್ಟಿಗೂ ಅವಕಾಶ ಮತ್ತು ಮಾನ್ಯತೆ ಇರುತ್ತದೆ. ಭಾರತದಲ್ಲಿ ಇಂಥ ಸಾವಿರಾರು ಪ್ರತಿಭೆಗಳಿವೆ ಮತ್ತು ಸೃಷ್ಟಿಗಳಿವೆ. ಏಕ ಭಾರತವನ್ನೂ, ಏಕ ಸಂಸ್ಕೃತಿಯನ್ನೂ ಕೊನೆಯ ಮತ್ತು ಶ್ರೇಷ್ಠ ಸೃಷ್ಟಿ ಎಂದು ಒಪ್ಪಿಕೊಂಡರೆ ರಾಮ ಮತ್ತು ರಾಘವೇಂದ್ರರ ಸಂಸ್ಕೃತಿಯೆ ನಮಗೆಲ್ಲ ಗತಿ ಮತ್ತು ಮೋಕ್ಷ

ಈ ರಾಮ ಸಂಸ್ಕೃತಿ, ಬಹುರೂಪ ಪಡೆದು ರಾಮಗೌಡ, ರಾಮಚಂದ್ರಗೌಡ, ರಾಮನಾಯಕ, ರಾಮಅಗಸ, ರಾಮ ದಂಡೋರ, ರಾಮಕೆಲಸಿಗ...ಎಲ್ಲ ಜನ-ವರ್ಗಗಳಲ್ಲೂ ಹರಡಿಕೊಂಡಿರುವುದರಿಂದಲೆ ರಾಮನಿಗೆ ಗೌರವ ಮತ್ತು ಮರ್ಯಾದೆ ಇತ್ತು. ರಾಮ ಎಂದರೆ ಅಯೋಧ್ಯೆ ರಾಮ ಮಾತ್ರ, ಅವನ ಅನುಯಾಯಿಗಳೆಂದರೆ ನಾವು ಮಾತ್ರ ಎಂದು ಹೇಳಿಕೊಳ್ಳುತ್ತಿರುವವರಿಂದ ಹಲವರಲ್ಲಿ, ಹಲವು ಬಗೆಯಲ್ಲಿ ಇದ್ದ 'ಬಹುರೂಪಿರಾಮ' ಈಗ ಕಳೆದುಹೋಗಿದ್ದಾನೆ.

ಬಹುರೂಪವೆ ಬದುಕು, ಏಕ ರೂಪವೆಂಬುದು ಶಾಸನ. ಇದು ಹಳ್ಳಿಗೆ ಮೆಡಗಾರಿಕೆ ಮಾಡುವ ಗೌಡನಂತೆ, ನಗರಕ್ಕೆ ಗೂಂಡಾಗಿರಿ ಮಾಡುವ ದಾದಾನಂತೆ, ದೇಶಕ್ಕೆ ಶಾಸ್ತ್ರ ಹೇಳುವ ಪುರೋಹಿತನಂತೆ, ಜಗತ್ತಿಗೆ ಅಮೆರಿಕದ ಗೌಡ ಬುಷ್‌ನಂತೆ. ಇವರನ್ನು ಒಪ್ಪಿಕೊಂಡರೆ ನಾವು ಮೇಲೆ ಮತ್ತು ಕೆಳಗೆ ಮುಚ್ಚಿಕೊಂಡು ತೆಪ್ಪಗಿರಬೇಕಾಗುತ್ತದೆ.

ಒಂದು ರಾಜ್ಯ ಅಥವಾ ದೇಶ ಎಂದರೆ ಅದು ಹಲವು ಜನವರ್ಗಗಳ ಮತ್ತು ಹಲವು ಸಂಸ್ಕೃತಿಗಳ ಒಂದು ಆಡಳಿತಾತ್ಮಕ ಅಥವಾ ಭಾಷಿಕ ಘಟಕ. ಕರ್ನಾಟಕವನ್ನು ಕನ್ನಡ ಭಾಷೆ ಮತ್ತು ಅದರ ಸಂಸ್ಕೃತಿಯ ಮೂಲಕ ಒಂದು ರಾಜ್ಯ ಘಟಕ ಎಂದು ಇತಿಹಾಸ ಗುರುತಿಸಿದೆ. ಇದರೊಳಗೆ ಇತರ ಭಾಷೆಯನ್ನು ಆಡುವ ಜನರೂ ಇದ್ದಾರೆ. ಅವರದೆಂಬ ಸಂಸ್ಕೃತಿಯೂ ಇದೆ. ಆ ಸಂಸ್ಕೃತಿ ಅವರ ಜೀವನ ದ್ರವ್ಯವಾಗಿರುತ್ತದೆ. ಆ ಸಂಸ್ಕೃತಿ ಇಲ್ಲದಿದ್ದರೆ ಅವರು ಚದುರಿ ಹೋಗುತ್ತಾರೆ. ಸಂಸ್ಕೃತಿ ಇಲ್ಲದ ಜನಾಂಗವೊಂದು ಇದ್ದರೆ ಅದು ಆತ್ಮವಿಲ್ಲದ ದೇಹವಿದ್ದಂತೆ. ಪ್ರತಿಯೊಂದು ಸಂಸ್ಕೃತಿಯೂ ತನ್ನ ಜೀವನ ವಿಧಾನವನ್ನು ತನ್ನ ಸಂಸ್ಕೃತಿ ತತ್ವದಂತೆ ನಿರ್ವಹಿಸುತ್ತದೆ.

ಅಂದರೆ ಅವನ ಆರ್ಥಿಕ ಅಭಿವೃದ್ಧಿ ಕೂಡ ಅವನ ಸಂಸ್ಕೃತಿ ನಿಯಮಗಳನ್ನು ಅವಲಂಬಿಸಿರುತ್ತದೆ. ಅಮೆರಿಕಕ್ಕೆ ಹೋದ ವೈದಿಕ ತನ್ನ ಕಂಪ್ಯೂಟರ್ ನಿರ್ವಹಣೆಯೊಂದಿಗೆ ಪುರೋಹಿತನ ಕೆಲಸ ವನ್ನು ಮಾಡುತ್ತಾನೆ. ಮಂಡ್ಯದ ಜಾಡಮಾಲಿ ಪೋರ್ನಿಯಾದಲ್ಲಿ ತನ್ನ ಮಗಳ ಮದುವೆ ಮಾಡಿದರೆ ತಪ್ಪದೆ 'ಕರ್ನೆರೆ' ಬಾಡಿನ ಊಟ ಏರ್ಪಡಿಸುತ್ತಾನೆ. ಅಮೆರಿಕದಿಂದ ಭಾರತದ ವೈದಿಕನ ಮನೆಗೆ ಹೊಸ ಕಂಪ್ಯೂಟರ್ ತಂದರೆ ಅದಕ್ಕೆ ಅರಿಶಿಣ ಕುಂಕುಮ ಹಚ್ಚಿ ಹಸಿ ದಾರ ಸುತ್ತಿ ಪೂಜೆ ಮಾಡಿಯೆ ಒಳಕ್ಕೆ ತೆಗೆದುಕೊಳ್ಳುತ್ತಾನೆ. ಶೈವ ವಿಭೂತಿ ಪೂಜೆ ಮಾಡಿ ಒಳ ತೆಗೆದುಕೊಳ್ಳುತ್ತಾನೆ. ಸಂಸ್ಕೃತಿಯ ವೈವಿಧ್ಯತೆ ತಿಳಿಸಲು ಈ ಉದಾಹರಣೆ ನೀಡಿದೆ. ಸಂಸ್ಕೃತಿಯೊಂದರೊಳಗೆ ಇದಕ್ಕಿಂತ ಉತ್ತಮವಾದ ಶೋಧಗಳಿವೆ. ಬಹುಸಂಸ್ಕೃತಿಯ ಅಸ್ತಿತ್ವ ಉಳಿಯಬೇಕೆಂದು ಮಾತನಾಡುವಾಗ ಆಯಾ ಸಂಸ್ಕೃತಿಯ ಒಳಗೆ ಸಮಾಜದ ಒಳಿತಿಗಾಗಿ ಮತ್ತು ಅಭಿವೃದ್ಧಿಗಾಗಿ ಇರುವ ಅಂಶಗಳ ಬಗ್ಗೆ ಒತ್ತಿ ಹೇಳುತ್ತೇವೆ. ಶೋಷಣೆಯ ತತ್ವಗಳಿದ್ದರೆ ಅವನ್ನು ಸಾರಾಸಗಟು ನಿರಾಕರಿಸಿಬೇಕಾಗುತ್ತದೆ.

ಚಿತ್ರ: ಹೊಸತು

ಭಾರತದಲ್ಲಿ ಎದ್ದುಕಾಣುವ ಎರಡು ಏಕ ಸಂಸ್ಕೃತಿಗಳಿವೆ. ಒಂದು, ರಾಜ್ಯ ಸಂಸ್ಕೃತಿ ಮತ್ತೊಂದು ದೇಶ ಸಂಸ್ಕೃತಿ. ಕರ್ನಾಟಕ ಸಂಸ್ಕೃತಿ ಎಂಬುದು ರಾಜ್ಯ ಸಂಸ್ಕೃತಿ. ಇದರೊಳಗೆ ಅನೇಕ ಜಾತಿ, ವೃತ್ತಿ ಮತ್ತು ಅಲೆಮಾರಿ ಸಂಸ್ಕೃತಿಗಳಿವೆ. ಯಾವ ರಾಜ್ಯ ಶಕ್ತಿಗೆ ಹತ್ತಿರ ಇವೆಯೂ ಅವು ಮತಮಾನ್ಯಗಳನ್ನು ಸ್ಥಾಪಿಸಿಕೊಂಡು ಸುಭದ್ರವಾಗಿವೆ. ಯಾವ ರಾಜ್ಯ ಶಕ್ತಿಯಿಂದ ದೂರ ಇವೆಯೊ ಅವು ಅಭಿವೃದ್ಧಿಯಿಂದ ವಂಚಿತವಾಗಿವೆ. ಕರ್ನಾಟಕದಲ್ಲಿ ಬ್ರಾಹ್ಮಣ, ವೀರಶೈವ, ಒಕ್ಕಲಿಗ, ಕುರುಬ ಮತ್ತು ದಲಿತ ವರ್ಗಕ್ಕೆ ರಾಜಕೀಯ ನಾಯಕತ್ವ ಇದೆ. ಆ ಜನ ವರ್ಗಕ್ಕೆ ತೊಂದರೆಯಾದರೆ ರಾಜ್ಯ ಕೇಂದ್ರದಲ್ಲಿ ಇರುವ ಆ ವರ್ಗದ ನಾಯಕರು ಧ್ವನಿಮಾಡುತ್ತಾರೆ. ಇದನ್ನೆ ಶಕ್ತಿ ಸಂಚಯನ ಎನ್ನುತ್ತೇವೆ. ನಮ್ಮ ಭಾರತದ ಸಂದರ್ಭದಲ್ಲಿ ಈಗ ಎರಡು ಶಕ್ತಿ ಕೇಂದ್ರಗಳಿವೆ. ಒಂದು ಜಾತಿ ಶಕ್ತಿ ಕೇಂದ್ರ ಮತ್ತೊಂದು ರಾಜಕೀಯ ಶಕ್ತಿ ಕೇಂದ್ರ. ಜಾತಿ ಮತ್ತು ರಾಜಕೀಯ ಶಕ್ತಿ ಇರುವವರ ಎರಡೂ ತೋಳುಗಳು ಪುಂಡಾಗಿರುತ್ತವೆ. ರಾಜಕೀಯ ಶಕ್ತಿ ಮಾತ್ರ ಇರುವವರು ಒಂದು ತೋಳಿನವರು. ಈ ಎರಡೂ ಇಲ್ಲದ ಪಾಪದ ಮಂದಿ ಅನೇಕರಿದ್ದಾರೆ.

ಜಾತಿಶಕ್ತಿ ದತ್ತವಾಗಿ ಬಂದಿರುತ್ತದೆ. ರಾಜ್ಯಶಕ್ತಿ ಓಟಿನ ಶಕ್ತಿಯಿಂದ ಬರುತ್ತದೆ. ಪ್ರಜಾಪ್ರಭುತ್ವದಲ್ಲಿ ಹೆಚ್ಚಿನ ಓಟು ಅರ್ಥಾತ್ ಬಹುಮತ ನಿರ್ಣಾಯಕ ಶಕ್ತಿಯಾಗಿದೆ. ಇದನ್ನು ರಾಜಕೀಯ ಬಹುಮತ ಎನ್ನುತ್ತಾರೆ. ಆದರೆ ಇದು ಜಾತಿಯ ಬಹುಮತವಾಗಿಯೂ ಇರಬಹುದು. ಸ್ವಾತಂತ್ರ್ಯಪೂರ್ವ ಕರ್ನಾಟಕದ ರಾಜಕೀಯ ಶಕ್ತಿ ಗ್ರಹಿಕೆಯನ್ನು ನೋಡಿದರೆ ಬಹುತೇಕ ಜಾತಿ ಶಕ್ತಿಯೇ ರಾಜಕೀಯ ಶಕ್ತಿ ಅಥವಾ ಪ್ರಜಾಪ್ರಭುತ್ವ ಶಕ್ತಿಯಾಗಿ ಮಾರ್ಪಟ್ಟಿರುವುದನ್ನು ಕಾಣಬಹುದು. ಆ ಕಾರಣಕ್ಕಾಗಿಯೆ ಕರ್ನಾಟಕದಲ್ಲಿ ನೇರವಾಗಿ ಮುಖ್ಯಮಂತ್ರಿಯಾದ ಕೆಳವರ್ಗದ ನಾಯಕತ್ವ ಸೃಷ್ಟಿಯಾಗಿಲ್ಲ.

ಬಹುಜನ ಮತ್ತು ಬಹುಸಂಸ್ಕೃತಿಗೆ ಮಾನ್ಯತೆ ಇದ್ದ ಪಕ್ಷದಲ್ಲಿ ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆ ಬೇರೆಯ ಸ್ವರೂಪದ್ದಾಗಿರುತ್ತಿತ್ತು. ಕರ್ನಾಟಕದ ಸಹಕಾರಿ ಕ್ಷೇತ್ರದ ಬಂಡವಾಳ ಕರ್ನಾಟಕ ರಾಜ್ಯದ ವಾರ್ಷಿಕ ಆದಾಯಕ್ಕಿಂತ ಹೆಚ್ಚಿದೆ. ಆದರೆ ಈ ಹಣ ಕೆಲವೆ ಕೆಲವು ವರ್ಗಗಳ ಮಧ್ಯೆ ವಿತರಣೆಯಾಗುತ್ತಿದ್ದು ಆ ವರ್ಗಗಳ ಉದ್ಯಮಶೀಲತೆಗೆ ನೆರವಾಗಿದೆ. ಬೇರೆ ಬೇರೆ ಜನರು ಆ ಬಂಡವಾಳವನ್ನು ಪಡೆಯದೆ ಇರುವುದರಿಂದ ಅವರ ಅಭಿವೃದ್ಧಿ ಅಷ್ಟರಮಟ್ಟಿಗೆ ಹಿಂದೆ ಬಿದ್ದಿದೆ. ರಾಜ್ಯದ ಬಂಡವಾಳ ಹೀಗೆ ಸೀಮಿತ ವರ್ಗದಲ್ಲಿ ವೃದ್ಧಿಯಾಗುತ್ತಿರುವುದು ತಳ, ಕೆಳ ಮತ್ತು ಅಂಚಿನಲ್ಲಿರುವ ಜನವರ್ಗಗಳು ತಮ್ಮ ಪೂರ್ವಕಾಲದ ಗವಿ ಮತ್ತು ಗುಡಿಸಲುಗಳಿಂದ ಹೊರಬರಲು ಸಾಧ್ಯವಾಗಿಲ್ಲ. ವೃತ್ತಿ ಗುಂಪುಗಳಾದ ಕಮ್ಮಾರ, ಚಮ್ಮಾರ, ಬಡಗಿ, ಅಗಸ, ಬೆಸ್ತ ಕೊರಮ, ಕೊರಚ...ಇಂಥ ನೂರಾರು ಜನವರ್ಗಗಳು ಅಭಿವೃದ್ಧಿ ಪಥದಲ್ಲಿ ಇಲ್ಲ. ಹತ್ತಾರು ಅಲೆಮಾರಿ ಗುಂಪುಗಳಾದ ಬುಡಬುಡಿಕೆ, ದೊಂಬಿ ದಾಸ, ಸುಡುಗಾಡು ಸಿದ್ಧ, ಹಕ್ಕಿ-ಪಿಕ್ಕಿ, ಕುರ್ರುಮಾಮ,ಊರ ಹೊರಗೆ ಅಥವಾ ನಗರದ ಕೊಳಚೆ ಪ್ರದೇಶದಲ್ಲಿ ಕಳೆದು ಹೋಗುತ್ತಿದ್ದಾರೆ. ಇದಕ್ಕೆ ರಾಜ್ಯದ ಏಕೀಕೃತಿ ಮತ್ತು ಏಕ ಮಾದರಿಯ ಅಭಿವೃದ್ಧಿ ಚಿಂತನೆಯೆ ಕಾರಣವಾಗಿದೆ.

ಭಾರತ ಹಲವು ಧರ್ಮ-ಜಾತಿ-ಭಾಷೆ ಮತ್ತು ಸಂಸ್ಕೃತಿಗಳನ್ನು ಹೊಂದಿರುವ ಬೃಹತ್ ರಾಷ್ಟ್ರ. ಪ್ರತಿಯೊಂದೂ ತಮ್ಮದೇ ಆದ ಪ್ರತ್ಯೇಕ ನಂಬಿಕೆ ಮತ್ತು ಆಚರಣೆಗಳ ಮೂಲಕ ಸಾಮಾಜಿಕ ಸಿಂಧುತ್ವವನ್ನು ಪಡೆಯುತ್ತಾ ಹೋಗುತ್ತಿರುವುದನ್ನು ಕಾಣಬಹುದು. ಆದರೆ ಇತ್ತೀಚೆಗೆ ಭಾರತದಲ್ಲಿ ಹಿಂದೂ ಧರ್ಮವೇ ಶ್ರೇಷ್ಠ, ಆ ಧರ್ಮದ ನೆಲೆಯಲ್ಲಿ ಬರುವ ನಂಬಿಕೆ-ಆಚರಣೆಗಳೇ ಶ್ರೇಷ್ಠವೆಂಬ ತಾರತಮ್ಯತೆಗಳನ್ನು ಸಾರುತ್ತಾ ಇತರೆ ಧರ್ಮ ಮತ್ತು ಆಚರಣೆಗಳ ಮೇಲೆ ಹರಿಹಾಯುತ್ತಿರುವ ಹಾರವರ ವಿರುದ್ಧ ಬಹುಮುಖೀ ಸಂಸ್ಕೃತಿಯ ಜನ ಸಮೂಹ ಒಟ್ಟಾಗಿ ಸೆಟೆದು ನಿಲ್ಲುವುದರೊಂದಿಗೆ, ತಮ್ಮ ಜನಪರ ಸಂಸ್ಕೃತಿಯ ವೈಭವವನ್ನು ರಕ್ಷಿಸಬೇಕಾಗುತ್ತದೆ.

ಭಾರತವೆಂಬ ದೇಶ ಮತ್ತೊಂದು ಏಕೀಕೃತ ಸಂಸ್ಕೃತಿಯ ಅಪಾಯಕ್ಕೆ ಒಳಗಾಗಿದೆ. ಇದನ್ನು ವೈದಿಕ ಸಂಸ್ಕೃತಿ ಎಂಥಲೂ, ಆಡಳಿತಾತ್ಮಕವಾಗಿ ಅಖಿಲ ಭಾರತ ಸಂಸ್ಕೃತಿ ಎಂಥಲೂ ಕರೆಯುತ್ತಾರೆ. ಭಾರತ ಕೇಂದ್ರವಾದ ದಿಲ್ಲಿಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಎಂಬ ಒಂದು ಮಂತ್ರಿ ಖಾತೆ ಇದೆ. ಇದರಲ್ಲಿ ಅನೇಕ ಕೋಟಿಗಳು ಭಾರತದ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಖರ್ಚಾಗುತ್ತಿದೆ. ಇದರ ಬಹುಪಾಲು ಮೇಲು ವರ್ಗಗಳನ್ನು ಸುಲಭದಲ್ಲಿ ಸಾಕಲು ಮೀಸಲಾಗಿದೆ. ಒಮ್ಮೆ ಅದರ ಲೆಕ್ಕ ಪತ್ರವನ್ನು ನೋಡಿ. ಭಾರತದ ಈ ಏಕಕೇಂದ್ರಿತ ಸಂಸ್ಕೃತಿ ಯಾವಾಗಲೂ ಮೇಲು ಜಾತಿ ಮತ್ತು ವರ್ಗ ಪರವಾದ ಸಂಸ್ಕೃತಿಯನ್ನು ಒಳ-ಹೊರಗೆ ಪ್ರಚೋದಿಸುತ್ತಾ ಬಂದಿದೆ. ಈಗ ರಾಮನ ಬೆನ್ನು ಹತ್ತಿ ಹೊರಟಿರುವ ಸಂಸ್ಕೃತಿ ರಾಜಕೀಯ ಭಾರತದ ಮೇಲು ಜಾತಿಯ ಶಕ್ತಿ ಸಂವರ್ಧನೆಯ ಯೋಜನೆಯಾಗಿದೆ.

ಅಭಿವೃದ್ಧಿ ಪರಿಕಲ್ಪನೆಯಲ್ಲಿ ತಳಗಿನಿಂದ ಮೇಲು ವರ್ಗಗಳ ಕಡೆಗೆ ಹೋಗುವುದು ವಾಸ್ತವವಾಗಿದೆ. ಹೇಳಿಕೆಯಲ್ಲಿ ಕೊನೆಯ ಮನುಷ್ಯನಿಗೆ ನಮ್ಮ ಅಭಿವೃದ್ಧಿ ತಲುಪಬೇಕು ಎನ್ನುತ್ತಾರೆ. ಹಾಗೆ ಕೊನೆಯ ಮನುಷ್ಯನ ಕಡೆಯಿಂದ ಅಭಿವೃದ್ಧಿ ಸಾಧ್ಯವಾಗಿದ್ದರೆ ಬಹುರೂಪದಲ್ಲಿ ಇರುವ ನಮ್ಮ ಬಹುಸಂಸ್ಕೃತಿಯ ಜನ ಇಷ್ಟುಹೊತ್ತಿಗೆ ಮುಖ್ಯದಾರಿಗೆ ಬರುವುದು ಸಾಧ್ಯವಿತ್ತು. ಕೃಷಿಯ ಉಪ ಉತ್ಪತ್ತಿಯನ್ನು ಅವಲಂಬಿಸಿ ಜೀವನ ಮಾಡುತ್ತಿದ್ದ ಬಹುಸಂಸ್ಕೃತಿಯ ಬಹುಜನರು ಹಳ್ಳಿಯ ಹೊರಕೇರಿಗಳಿಂದ ಈಗ ನಗರದ ಹೊರಕೇರಿಗಳಾದ ಗುಡಿಸಲು ವಾಸಕ್ಕೆ ಬಂದಿದ್ದಾರೆ. ಕೃಷಿ ಯಜಮಾನರಿಗಾಗಿ ವಿವಿಧ ರೀತಿಯ ಸೇವೆ ಮಾಡುತ್ತಿದ್ದ ಇವರು ಈಗ ನಗರದ ಪ್ರಭುಗಳ ಕೊಳಚೆ ನಿರ್ಮೂಲನೆಯಲ್ಲಿ ತೊಡಗಿದ್ದಾರೆ.

ಬಹುವಿವಿಧ ಸಂಸ್ಕೃತಿಗಳೆಂದರೆ ಕೇವಲ ಬಹುವಿವಿಧ ನಡವಳಿಕೆಗಳ ಕ್ಷೇತ್ರ ಎಂದು ಅರ್ಥ

(೮೭ನೇ ಪುಟಕ್ಕೆ)

ಮನುಷ್ಯ ಸಂಬಂಧದ ಸಂಸ್ಕೃತಿ ಬೇಕು

ಪ್ರೊ|| ಸಿ.ಜಿ. ಕೃಷ್ಣಸ್ವಾಮಿ

ದಾಳಿ ಮತ್ತು ದಬ್ಬಾಳಿಕೆ ಎನ್ನುವುದು ನಾಗರೀಕತೆಯ ಲಕ್ಷಣ ಎಂದೇ ನಾನು ಭಾವಿಸುತ್ತೇನೆ. ಮನುಷ್ಯ, ಸಂಸ್ಕೃತಿ ಮತ್ತು ನಾಗರೀಕತೆಯನ್ನು ಕಲಿತರೆ, ವಿಶ್ವಮಾನವನಾಗುತ್ತಾನೆನ್ನುವ ಕನಸೊಂದಿತ್ತು ಅನೇಕ ಸಮಾಜ ವಿಜ್ಞಾನಿಗಳಿಗೆ. ಆದರೆ ಮನುಷ್ಯ, ಸಂಸ್ಕೃತಿ ಮತ್ತು ನಾಗರೀಕತೆಯ ಕಡೆ ಹೆಜ್ಜೆ ಹಾಕುತ್ತಾ ಹಾಕುತ್ತಾ ತಾನೇ ಮುಖ್ಯ, ತಾನಿಲ್ಲದ ಸಂಸ್ಕೃತಿ ಮತ್ತು ನಾಗರಿಕತೆಗೆ ಅರ್ಥವಿಲ್ಲ ಎಂದು ಭಾವಿಸಿ, ಧರ್ಮವನ್ನು ಆಧರಿಸಿ, ಮನುಷ್ಯ ಮನುಷ್ಯನ ರಕ್ತದಲ್ಲಿ ಓಕುಳಿಯಾಡುತ್ತಿರುವುದು ನಾವೆಲ್ಲ ಕಂಡಿರುವ ಸತ್ಯ.

ಅನಾಗರಿಕ ಸಮಾಜದಲ್ಲೂ ಕೂಡ ಇಂತಹ ರಕ್ತದೋಕುಳಿಯಾಟವನ್ನು ಸಮರ್ಥಿಸಲು ಸಿದ್ಧರಿರಲಿಲ್ಲ ಅಂದು. ಆದರೆ ಇಂದು ನಾಗರಿಕ ಸಮಾಜದಲ್ಲಿ ದಾಳಿ ಮತ್ತು ದಬ್ಬಾಳಿಕೆಯನ್ನು ಸಮರ್ಥಿಸಲು ಅವರದೇ ಆದ ಮತೀಯವಾದ ಹಾಗೂ ಅವರದೇ ಉದ್ಘೋಷಿತ ಗ್ರಂಥಗಳ ನೆರವು ಪಡೆದು, ಧರ್ಮ ಸಹಿಷ್ಣುತೆಯನ್ನು ಸಾರಬೇಕಾದ ಕಡೆ ಅಧರ್ಮವನ್ನು ಸಾರುತ್ತಿರುವುದು ನಾವೆಲ್ಲಾ ನೋಡುತ್ತಿದ್ದೇವೆ.

ಒಂದು ಕಾಲಕ್ಕೆ ಬಹುಸಂಸ್ಕೃತಿ ಈ ದೇಶದ ಮುಖ್ಯ ವಾಹಿನಿಯಾಗಿತ್ತು. ಉದಾ. ತಮಿಳುನಾಡನ್ನು ಸೇರುವ ಕಾವೇರಿಯಲ್ಲಿ ಯಾವ್ಯಾವ ನದಿಗಳ ನೀರು ಸೇರಿದೆ ಎಂಬುದನ್ನು ತಮಿಳುನಾಡಿನ ಪುಂಪುಹಾಲಿನಲ್ಲಿ ನಿಂತು ಹೇಳಲು ಹೇಗೆ ಸಾಧ್ಯ. ಇದೊಂದು ವಿಚಿತ್ರವಾದ ನಾಗರಿಕತೆಗಳಲ್ಲೂ ಮುಖ್ಯವಾಹಿನಿಯ ಸಂಸ್ಕೃತಿಯೊಂದು ಇದ್ದೇ ಇರುತ್ತದೆ. ಹಾಗೆಂದ ತಕ್ಷಣ ಮುಖ್ಯವಾಹಿನಿಯೊಂದೇ ಆ ದೇಶದ ಸಂಸ್ಕೃತಿಯೆಂದು ಹೇಳಲು ಸಾಧ್ಯವೇ ಇಲ್ಲ. ಇದೊಂದು ವಿಚಿತ್ರ ಬೀಜ ಮತ್ತು ಗಿಡದ ತಾತ್ವಿಕ ಚಿಂತನೆಯಂತೆ ನಮಗೊಂದು ದಾರಿ ತೋರಿಸಬಹುದು. ತಲಕಾವೇರಿಯಿಂದ ಹೊರಟರೆ ಮಾತ್ರ ನಾವೆಣಿಸಬಹುದು. ಮುಖ್ಯ ವಾಹಿನಿಯಾದ ಕಾವೇರಿಗೆ ಎಷ್ಟು ನದಿಗಳು ಸೇರಿವೆಯೆಂದು. ಹೀಗಾಗಿ ಖಚಿತ ಹುಡುಕಾಟ ಮಾತ್ರವೇ ಬಹುಸಂಸ್ಕೃತಿಯನ್ನು ಮುಖ್ಯವಾಹಿನಿ ಸಂಸ್ಕೃತಿಯಲ್ಲಿ ಗುರುತಿಸಲು ಸಾಧ್ಯ.

ಸಂಸ್ಕೃತಿ ಮತ್ತು ನಾಗರಿಕತೆಯನ್ನು ಅಭ್ಯಾಸ ಮಾಡುವ ಸಮಾಜ ವಿಜ್ಞಾನಿಯೊಬ್ಬನ ಖಚಿತ ಮಾತಿನಲ್ಲಿ ಹೇಳುವುದಾದರೆ, ಸಂಸ್ಕೃತಿ ಮತ್ತು ನಾಗರಿಕತೆಗಳು ಮನುಷ್ಯನ ಸುಗಮ ಹಾದಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇಂತಹ ಪಾತ್ರ ಯಾವಾಗ ಸಾಧ್ಯವೆಂದರೆ ಮನುಷ್ಯ ತನ್ನ ಹುಟ್ಟಿನಿಂದ, ತನ್ನದೇ ಆದ ಪರಿಸರದಿಂದ ರೂಢಿಸಿಕೊಳ್ಳುವ ಜಲ ಸಂಸ್ಕೃತಿ, ಹಸಿರು ಸಂಸ್ಕೃತಿ, ಸೂರ್ಯ-ಚಂದ್ರ ಸಂಸ್ಕೃತಿ ಇವೆಲ್ಲವೂ ತನ್ನ ಬದುಕಿಗೆ ಆಸರೆಯಾಗಿರುವ ಪರಿಸರದ ಶ್ರೇಷ್ಠತೆಗಳು. ಹೀಗಾಗಿ ಮನುಷ್ಯ ಕಣ್ಣು ಬಿಟ್ಟಾಗಲೇ ಗಾಳಿ, ಬೆಂಕಿ, ನೀರನ್ನು ಆರಾಧಿಸಲು ಶುರುಮಾಡುತ್ತಾನೆ.

ಈ ಆರಾಧನೆಯೊಟ್ಟಿಗೆ ಕ್ರಮೇಣ ಕ್ರಮೇಣ ತಾನೇ ಸೃಷ್ಟಿಸಿಕೊಂಡ, ತನ್ನ ಕಲ್ಪನಾ ಐಡಿಯಲ್ ವ್ಯಕ್ತಿತ್ವಗಳನ್ನು ತಾನು ಕಂಡ ಪರಿಸರದ ಹೆಸರಿನೊಟ್ಟಿಗೆ ನೊಂದಾಯಿಸುತ್ತಾನೆ. ಹೀಗಾಗಿ ನಮ್ಮ ಗಂಗಮ್ಮ-ಗೌರಮ್ಮ, ಆಂಜನೇಯ

> **ಎಲ್ಲಿ ಆರಾಧನೆ ಮತ್ತು ನಂಬಿಕೆಗಳು ಮನುಷ್ಯನೊಂದಿಗೆ ಸಂಬಂಧವಿರಿಸಿ ಕೊಳ್ಳುತ್ತವೆಯೋ, ಅಲ್ಲಿ ಬಹುಸಂಸ್ಕೃತಿ ತಾಂಡವವಾಡುತ್ತದೆ. ಅದರೆ ಬಹುಸಂಸ್ಕೃತಿಯಲ್ಲಿರುವ ಆಚರಣೆಯನ್ನು ಸಹಿಸಲಾಗದ ಕೆಲವೇ ಜನ ಈ ನೆಲ ಎಂದೂ ಕಾಣದಿದ್ದ ಸತ್ಯನಾರಾಯಣ, ಅಯ್ಯಪ್ಪ, ರಾಘವೇಂದ್ರಗಳನ್ನು ಸೃಷ್ಟಿಸಿ, ಬಹುಜನರು, ಬಹುಸಂಸ್ಕೃತಿಯಲ್ಲಿ ನಂಬಿಕೆ ಇಟ್ಟಿರುವ ಆಚರಣೆಗಳಿಗೆ ಮಸಿ ಹಚ್ಚುತ್ತಿರುವುದು ವಿಪರ್ಯಾಸ.**

ಸಂಸ್ಕೃತಿಗಳು, ಎಲ್ಲ ಹಳ್ಳಿಗಳ ಕಡೆ ತಮ್ಮ ಬೇರನ್ನು ಬಿಟ್ಟಿವೆ. ಈ ಎಲ್ಲ ಸಂಸ್ಕೃತಿಯೊಟ್ಟಿಗೆ ಮನುಷ್ಯ ಕೆಟ್ಟದ್ದನ್ನು ಸುಡುವ ಸಂಸ್ಕೃತಿಯನ್ನೂ ರೂಢಿಸಿಕೊಂಡಿದ್ದಾನೆ. ಈ ಆರಾಧಿಸುವ ಮತ್ತು ಸುಡುವ ಸಂಸ್ಕೃತಿ ಮನುಷ್ಯನ ಹುಟ್ಟಿನಿಂದ ಅವನ ನಾಗರಿಕತೆಯಲ್ಲಿ ಪ್ರತಿಫಲಿಸುತ್ತದೆ.

ಇಂತಹ ಪ್ರತಿಫಲನದಲ್ಲಿ ಮನುಷ್ಯ ಕಂಡುಕೊಳ್ಳಬೇಕಾದ ಸತ್ಯವೆಂದರೆ ತನ್ನ ಆಕಾರ ಮತ್ತು ವಿಕಾರಗಳನ್ನು. ಆದರೆ ಸಹಜವಾಗಿ ಮನುಷ್ಯ ಆಕಾರವನ್ನು ಕಂಡುಕೊಂಡಾಗ ತನ್ನ ಇತಿಮಿತಿಯಿಂದ ಗುರುತಿಸಿಕೊಳ್ಳದೆ ಮಿತಿಯಿಲ್ಲದ ಜಗದ ಕಡೆ ಹೆಜ್ಜೆ ಹಾಕುತ್ತಾನೆ ಮತ್ತು ಅಹಂನಿಂದ ಬೀಗುತ್ತಾನೆ. ತಾನಿಲ್ಲದ ಲೋಕ ಲೋಕವೇ ಅಲ್ಲವೆಂದು ಸಾರಿಹೇಳಲು ಹೊರಡುತ್ತಾನೆ. ಇಂತಹ ಆಕಾರಗಳು ಕ್ಷಣಮಾತ್ರಕ್ಕೆ ವಿಕಾರಗಳಾಗಿ, ತಾವೇ ಶ್ರೇಷ್ಠ ತಾವೇ ಜೇಷ್ಠ ಎಂಬ ಸಂಸ್ಕೃತಿಯನ್ನು ಎತ್ತಿಹಿಡಿಯಲು ಹೋಗಿ ತಮ್ಮ ಬರ್ಬರತೆಯನ್ನು ಸಾರುತ್ತವೆ. ಇಂತಹ ನಾಗರಿಕತೆ ಮತ್ತು ಬರ್ಬರತೆ ಸದಾ ಮನುಷ್ಯನನ್ನು ಕಾಡುತ್ತಿರುವುದು ಇತಿಹಾಸದ ಸತ್ಯ. ಇಂತಹ ಸತ್ಯಗಳನ್ನು ಅರಿಯಬೇಕಾದರೆ ಮನುಷ್ಯನೊಬ್ಬ ತಾನು ಅಳವಡಿಸಿಕೊಳ್ಳಬೇಕಾದ ಕ್ರಮಗಳು ಅನೇಕ.

ಅವುಗಳಲ್ಲಿ ತಾನು, ತನ್ನ ಹುಟ್ಟು ತನ್ನ ಪರಿಸರ, ತನ್ನನ್ನು ಅವಾಕ್ಕಾಗಿಸಿದ ದೇವರುಗಳು, ಪರುಷೆ, ಜಾತ್ರೆ, ತೇರು, ಮುಳ್ಳುಪೊದೆಯನು ಹತ್ತುವ ಸ್ಪರ್ಧೆ, ಗಾಡಿ ಓಟ ಇವೆಲ್ಲವೂ ನಿರಂತರವಾಗಿ ವ್ಯಕ್ತಿಯೊಬ್ಬನನ್ನು ಕಾಡಿಸುತ್ತವೆ. ಆದರೆ ಇಂತಹ ಹಿನ್ನೆಲೆಯಿಂದ ಬಂದ ವ್ಯಕ್ತಿಯೊಬ್ಬ ತನ್ನ ಎಲ್ಲಾ ಹಿಂದಿನ ಸಂಗತಿಗಳನ್ನು ಮರೆತು, ತಾನೊಬ್ಬ ನಾಗರಿಕ, ಮಂತ್ರಾಲಯದ ರಾಘವೇಂದ್ರ ತನ್ನ ಹಿರೀಕ ಎಂದು ನಿಲ್ಲುವುದು ನಾನಾಗಲೇ ಹೇಳಿದ ರೀತಿ ವಿಕಾರದ ಕಲ್ಪನೆಗಳೇ ಸರಿ. ನೋಡಿ, ನಮ್ಮ ಈ ಬೆಂಗಳೂರನ್ನು, ಒಂದೆಡೆ ಬನಶಂಕರಿ ದೇವಸ್ಥಾನ, ಇನ್ನೊಂದೆಡೆ ಬಸವನಗುಡಿ, ನಗರದ ಮಧ್ಯದೆಡೆ ಅಣ್ಣಮ್ಮನ ದೇವಸ್ಥಾನ, ಇನ್ನೊಂದೆಡೆ ಧರ್ಮರಾಯನ ದೇವಸ್ಥಾನ, ಮತ್ತೊಂದೆಡೆ ಗಾಳಿ ಆಂಜನೇಯ ದೇವಸ್ಥಾನ ಹೀಗೆ ಪ್ರತಿಯೊಬ್ಬ ನಾಗರಿಕನೂ ತನ್ನದೇ ಆದ ದೇವರು-ಸಂಸ್ಕೃತಿಗಳಿಗೆ ತನ್ನನ್ನೇ ತಾನು ಅರ್ಪಿಸಿಕೊಳ್ಳುತ್ತಾನೆ.

ಬಸವನಗುಡಿ ಜಾತ್ರೆಯೆಂದರೆ ಕಡ್ಲೆಕಾಯಿ ಪರುಷೆ, ಬೆಳೆದ ರೈತ ಸಂತೋಷದಿಂದ ಬೀಗುತ್ತಾನೆ. ಇನ್ನು ಅಣ್ಣಮ್ಮನ ಜಾತ್ರೆಯೆಂದರೆ ತಮಟೆಗಳು ಸದ್ದು ಮೂಡಿಸುತ್ತವೆ. ಬೆಂಗಳೂರು ಕರಗವೆಂದರೆ ಊರು, ಬೀದಿ ಎಲ್ಲಾ ಎಚ್ಚರದಿಂದ ನಿಂತು ತಮ್ಮದೇ ಉಡುಸಲಮ್ಮ, ಪ್ಲೇಗಮ್ಮ ಊರಮ್ಮನನ್ನು ಸಿಂಗರಿಸಿ ಕರಗದೇವತೆಯನ್ನು ಆಹ್ವಾನಿಸುತ್ತಾರೆ. ಎಲ್ಲಾ ಜನರು ತಾವು ನಂಬಿದ ದೇವರುಗಳನ್ನು ನಂಬಿ ಅವುಗಳನ್ನು ಹೊತ್ತಿ ಕುಣಿಯುತ್ತಾರೆ. ಇಲ್ಲಿ ಆಚರಣೆಗಳು, ನಂಬಿಕೆಗಳು ಮನುಷ್ಯನನ್ನು ಗಾಢವಾಗಿ ಕಾಡುತ್ತವೆ.

ಎಲ್ಲಿ ಆರಾಧನೆ ಮತ್ತು ನಂಬಿಕೆಗಳು ಮನುಷ್ಯ ನೊಂದಿಗೆ ಸಂಬಂಧವಿರಿಸಿಕೊಳ್ಳುತ್ತವೆಯೋ, ಅಲ್ಲಿ ಬಹುಸಂಸ್ಕೃತಿ ತಾಂಡವವಾಡುತ್ತದೆ. ಆದರೆ ಬಹುಸಂಸ್ಕೃತಿಯಲ್ಲಿರುವ ಆಚರಣೆಯನ್ನು ಸಹಿಸಲಾಗದ ಕೆಲವೇ ಜನ ಈ ನೆಲ ಎಂದೂ ಕಾಣದಿದ್ದ ಕೃಷ್ಣ ಸತ್ಯನಾರಾಯಣ, ಅಯ್ಯಪ್ಪ ರಾಘವೇಂದ್ರಗಳನ್ನು ಸೃಷ್ಟಿಸಿ, ಬಹುಜನರು, ಬಹುಸಂಸ್ಕೃತಿಯಲ್ಲಿ ನಂಬಿಕೆ ಇಟ್ಟಿರುವ ಆಚರಣೆಗಳಿಗೆ ಕಪ್ಪು ಮಸಿ ಹಚ್ಚಿ ಅದೊಂದು ಬರ್ಬರ ಕೃತ್ಯ ಇತ್ಯಾದಿ ಹೇಳಿ, ಬಹುಸಂಖ್ಯಾತರು ಮತ್ತು ಬಹುಸಂಸ್ಕೃತಿಯ ವಕ್ತಾರರೂ ಕೂಡ ಹಿಮ್ಮೆಟ್ಟಿ ತಮ್ಮ ಆಚರಣೆಗಳು, ತಮ್ಮ ನಂಬಿಕೆಗಳು ಸರಿಯಿಲ್ಲವೇನೋ ಎಂದು ತಮ್ಮನ್ನು ತಾವೇ ಏಕಸಂಸ್ಕೃತಿಯತ್ತ ವಾಲಿಸಿಕೊಳ್ಳುತ್ತಿರುವುದು ಎಂತಹ ವಿಪರ್ಯಾಸ. ಇದನ್ನು ನನ್ನಂತವನು ಅನ್ಯ ಸಂಸ್ಕೃತಿಯೆಂದು ಭಾವಿಸುವುದಿಲ್ಲ. ಇದೊಂದು, ಬಹುಸಂಖ್ಯಾತರು ತಮ್ಮಲ್ಲಿ ತಾವು ರೂಢಿಸಿಕೊಳ್ಳುತ್ತಿರುವ ಒಂದು ಇಂಪೀರಿಯಾರಿಟಿ ಕಾಂಪ್ಲೆಕ್ಸ್ ಎಂದು ಭಾವಿಸುತ್ತೇನೆ. ನನಗೆ ತಿಳಿದಿರುವಂತೆ, ಎಷ್ಟೋ ವಿದ್ಯಾವಂತರು, ಕಂಸಾಳೆ, ತಮಟೆ, ತಾಳ, ಚೌಡಿಕೆಗಳನ್ನು ನುಡಿಸಲು ಶಾಲಾ ಕಾಲೇಜುಗಳಲ್ಲಿ ಹಿಂಜರಿಯುತ್ತಾರೆ. ಆದರೆ ತಮ್ಮ ಕಣ್ಣನ್ನು ಅರಳಿಸಿ, ಗಿಟಾರನ್ನು ಹಿಡಿಯಲು ಮುಂದಾಗುತ್ತಾರೆ ಇದು ಯಾರ ದಾಳಿ? ಯಾವ ದಬ್ಬಾಳಿಕೆ? ಹೀಗಾಗಿ ಬಹುಸಂಸ್ಕೃತಿಯನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಯೊಬ್ಬ ಆಚರಣೆ ಮತ್ತು ನಂಬಿಕೆಗಳನ್ನು ತನ್ನ ಈ ದಿನದ ತಿಳುವಳಿಕೆಯಲ್ಲಿ ಅಭ್ಯಾಸ ಮಾಡುವ ಕ್ರಮ ಸರಿಯೇ ಎಂಬುವ ಪ್ರಶ್ನೆ ನನ್ನದು. □

ಬಹುಸಂಸ್ಕೃತಿಯ ಮೇಲೆ ಏಕ ಸಂಸ್ಕೃತಿಯ ದಬ್ಬಾಳಿಕೆ

(೮೫ನೇ ಪುಟದಿಂದ)

ವಲ್ಲ. ಬಹುಸಂಸ್ಕೃತಿಗಳ ನೆಲೆ ಇರುವುದೇ ಅವು ಬದುಕುವ ವಿಧಾನಗಳಲ್ಲಿ. ಈ ಪ್ರತಿಯೊಂದು ಸಂಸ್ಕೃತಿಯೂ ಒಂದೊಂದು ಉದ್ಯೋಗವನ್ನು ಮಾಡುತ್ತಿದ್ದವು ಎಂದರೆ ಅವು ಹಲವು ಬಗೆಯ ಉದ್ಯೋಗದ ಸ್ಥಾನಗಳಾಗಿದ್ದವು ಎಂದು ಅರ್ಥ. ಆಧುನೀಕರಣ ಸೃಷ್ಟಿ ಮಾಡಿದ ಏಕಸ್ವರೂಪದ ಉದ್ಯೋಗಗಳಿಂದಾಗಿ ಇವರೆಲ್ಲ ಉದ್ಯೋಗ ಕಳೆದು ಕೊಂಡಿದ್ದಾರೆ. ಏಕಮಾದರಿಯ ಕೈಗಾರಿಕಾ ಸಂಸ್ಕೃತಿ ಎಂದೂ ಬಹುವಿಧದ ಉದ್ಯೋಗಗಳನ್ನು ಸೃಷ್ಟಿ ಮಾಡಲು ಸಾಧ್ಯವಿಲ್ಲ. ಅದು ಹೊರಗಿನಿಂದ ಉದ್ಯೋಗಗಳನ್ನು ಸೃಷ್ಟಿಸುತ್ತದೆಯೇ ಹೊರತು ಒಳಗಿನಿಂದ ಅಲ್ಲ. ಅದು ಉದ್ಯೋಗಗಳನ್ನು ಒಂದೊಂದು ಪಾರಂಪರಿಕ ವೃತ್ತಿ ಸಮುದಾಯದಿಂದ ಕೆಲವ ರನ್ನು ಆಯ್ಕೆಮಾಡಿಕೊಳ್ಳುತ್ತದೆ. ಸಹಜವಾಗಿಯೇ ಉಳಿದ ವರು ನಿರುದ್ಯೋಗಿಗಳಾಗುತ್ತಾರೆ. ಕೈಗಾರಿಕಾ ಸಂಸ್ಕೃತಿ ಆಧಾರಿತವಾಗಿರುವುದರಿಂದ ಯಂತ್ರಕ್ಕೆ ಆಹಾರ ಒದಗಿಸ ಬಲ್ಲಷ್ಟು ಜನ ಅದಕ್ಕೆ ಸಾಕು. ಆದರೆ ಬಹು ಸಂಸ್ಕೃತಿಗಳು ಜನಾಧಾರಿತವಾದುವಾದ್ದರಿಂದ ಜನರಿಗೆ ಉದ್ಯೋಗ, ವಸತಿ ಮತ್ತು ಇತರ ಸೌಲಭ್ಯಗಳು ಬೇಕು. ಇದು ಅವು ತಮ್ಮೊಳಗಿಂದ ಪುನರ್‌ನಿರ್ಮಾಣಗೊಳ್ಳುವುದರಿಂದ ಮಾತ್ರ ಸಾಧ್ಯವಾಗು ತ್ತದೆ. ಆದರೆ ಅವು ಪುನರ್ ನಿರ್ಮಾಣಗೊಳ್ಳಲು ಬೇಕಾದ ಸವಲತ್ತುಗಳು ಯಾವ ಕಡೆಯಿಂದಲೂ ಬರುತ್ತಿಲ್ಲ. ದುಡಿ ಯುವ ಶಕ್ತಿಯಿದ್ದರೂ ಅವುಗಳಿಗೆ ಕೆಲಸವಿಲ್ಲ. ಹಾಗಾಗಿ ಅವರ ಹೊಟ್ಟೆಯು ದಿನಾ ಬರಿದಾಗಿರುತ್ತದೆ.

'ಪತಿ'ಗಳಿಂದ ಪತ್ನಿಯರಿಗೆ ಬಿಡುಗಡೆಯೆ ಇಲ್ಲದ ವಾತಾ ವರಣ ಸೃಷ್ಟಿಯಾಗುತ್ತಿದೆ. ಸ್ಥಳೀಯ ಪತಿಗಳಿಂದ ಬಿಡುಗಡೆ ಗೊಂಡೆವು ಎಂಬ ಸಂತಸದಲ್ಲಿದ್ದ ಬಹುಸಂಸ್ಕೃತಿಗಳಿಗೆ ಈಗ ಜಾಗತಿಕ ಪತಿ ಎಂಬ ಮತ್ತೊಬ್ಬ ಮಿಂಡ ವಕ್ಕರಿಸಿಕೊಂಡಿ ದ್ದಾನೆ. ಅವನೊಬ್ಬ ವ್ಯಾಪಾರದ ಉದ್ಯಮಿ. ಆತ ಬಗೆಬಗೆಯ ವಸ್ತುಗಳನ್ನು ಮಾರುಕಟ್ಟೆಗೆ ತಂದು ಕೊಳ್ಳಲು ಆಕರ್ಷಣೆ ಮತ್ತು ಆಮಿಷ ಒಡ್ಡುತ್ತಿದ್ದಾನೆ.

ಈ ವಸ್ತುಗಳು ದಿನನಿತ್ಯದ ಹಸಿವನ್ನು ನೀಗಿಸುವ ಸ್ವರೂಪದ ವಸ್ತುಗಳಲ್ಲ. ಏನಿದ್ದರೂ ಪ್ರಾಥಮಿಕ ಅವಶ್ಯಕತೆಯಿಂದ ಆನಂತರದ ಅಪೇಕ್ಷೆಗಳನ್ನು ಪೂರೈಸಬಹುದಾದ ಸ್ವಭಾವದ ವಸ್ತುಗಳಿವು. ಇವುಗಳನ್ನು ಹೆಚ್ಚುವರಿ ಉತ್ಪಾದನೆ ಮತ್ತು ಉಳಿತಾಯದಿಂದ ಮಾತ್ರ ಕೊಳ್ಳಲು ಸಾಧ್ಯ. ಸರ್ಕಾರಿ ನೌಕರರು, ರಾಜ ಕಾರಣಿಗಳು, ಮಧ್ಯಮ ಮತ್ತು ಮೇಲು ಮಧ್ಯಮ ವರ್ಗದ ಸಂಪಾದನೆಯುಳ್ಳವರು ಕೊಳ್ಳಬಹುದು. ಕೆಳ-ತಳ ವರ್ಗದ ಜನರು ಈ ಜನರು ಬಳಸಿದ ಮೇಲೆ ಎರಡನೆಯ ಅಥವಾ ಮೂರನೆಯ ಬಳಕೆ ಗಾಗಿ ಅವರಿಂದ ಕೊಳ್ಳಬಹುದು.

ಕೃಷಿಯೂ ಅನುತ್ಪಾದಕ ಕ್ಷೇತ್ರದ ಕಡೆಗೆ ಸರಿ ಯುತ್ತಿರುವುದರಿಂದ ಹಳ್ಳಿಯ ಗೌಡ ತನ್ನ ಯಜ ಮಾನಿಕೆಯನ್ನು ಜಾಗತಿಕ ಉದ್ಯಮಪತಿಗೆ ಬಿಟ್ಟು ಕೊಡಬೇಕಾಗುತ್ತದೆ. ಸ್ಥಳೀಯ ಉದ್ಯಮ ಪತಿ ಕೂಡ ಜಾಗತಿಕ ಉದ್ಯಮಪತಿಯ ಏಜೆಂಟನಾಗಿ ಕೆಲಸ ಮಾಡಬೇಕಾಗುತ್ತದೆ. ರಾಜಕಾರಣಿ ಈಗಾ ಗಲೇ ಈ ಕೆಲಸ ಮಾಡುತ್ತಿರುವುದರಿಂದ ಅವನಿಗೆ ಸಮಸ್ಯೆ ಇಲ್ಲ. ಸಮಸ್ಯೆ ಇರುವುದು ನೈಪುಣ್ಯ ಇಲ್ಲದ (Unskilled) ಎಂಬ ಸ್ಥಳೀಯ ಮತ್ತು ಜಾಗತಿಕ ಪತಿಗಳಿಂದ ತಿರಸ್ಕರಿಸಲ್ಪಟ್ಟಿರುವ ಕೆಳ-ತಳ ಬಹು ಸಂಸ್ಕೃತಿಯ ಜನರಿಗೆ. ಇರೋಣವೆಂದರೆ ಈಗ ತ್ರಿಶಂಕು ಸ್ವರ್ಗವೂ ಇಲ್ಲ! □



ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ
ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ
ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಚಂದಾ ವಿವರ

ಬಿಡಿ ಪ್ರತಿ ರೂ. 20/-	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
★ ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರಿಗೆ	ರೂ. 100/-	ರೂ. 300/-	ರೂ. 500/-
★ ನೌಕರರು ಮತ್ತು ಇತರೆ ವೃತ್ತಿ ಪರರಿಗೆ	ರೂ. 200/-	ರೂ. 500/-	ರೂ. 800/-
★ ಸಂಘ-ಸಂಸ್ಥೆಗಳು, ಅಧಿಕಾರಿಗಳು ಹಾಗೂ ಉದ್ಯಮಿಗಳಿಗೆ	ರೂ. 240/-	ರೂ. 600/-	ರೂ. 1000/-
★ ವಿಶೇಷ ಹಿತೈಷಿ ಚಂದಾದಾರರಿಗೆ	ರೂ. 500/-	ರೂ. 1500/-	ರೂ. 2500/-

ಇಂದೇ ಚಂದಾದಾರರಾಗಿ
ಸಂವಾದ
ಶೋಷಣೆ ಮುಕ್ತ ಸಮಾಜಕ್ಕಾಗಿ

ನೋಡನೋಡುತ್ತಿದ್ದಂತೆಯೇ ಕನ್ನಡ ದಲಿತ ಸಾಹಿತ್ಯ ಮೂರನೆಯ ತಲೆಯೊಂದನ್ನು ತಲುಪಿದೆ. ಈ ಹೊಸಕಾಲದ ದಲಿತ ಲೇಖಕರು ಚಳವಳಿಗಳನ್ನು, ಸಾಹಿತ್ಯ ಸೃಷ್ಟಿಯನ್ನು, ಸಾಹಿತ್ಯದ ಉದ್ದೇಶವನ್ನು ನೋಡುವ ರೀತಿ ಎಷ್ಟು ಭಿನ್ನ? ಅವರು ಹಿಡಿದಿರುವ ದಾರಿಗಳ ಸ್ವರೂಪವೇನು? ದಲಿತ ಸಾಹಿತ್ಯದ ಹೊಸ ಒಗರನ್ನು ಈ ಲೇಖಕರು ಸೂಚಿಸುತ್ತಿದ್ದಾರೆಯೇ?-ಎಂಬೆಲ್ಲದರ ಹಿನ್ನೆಲೆಯಲ್ಲಿ 'ಸಂವಾದ' ಹೊಸತಲೆಮಾರಿನ ನಾಲ್ವರು ದಲಿತ ಲೇಖಕರಿಗೆ ಕೆಲವು ಪ್ರಶ್ನೆಗಳನ್ನು ಹಾಕಿತು. ಮೂವರು ಮಾತ್ರ ನಮ್ಮ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಈ ಹೊಸ ತಲೆಮಾರಿನ ತಲ್ಲಣಗಳು ಇಲ್ಲಿವೆ...

ಸಂವಾದ ಕೇಳಿದ ಪ್ರಶ್ನೆಗಳು :

೧ ನಾಡಿನ ಎಲ್ಲಾ ಪ್ರಗತಿಪರ ಚಳವಳಿಗಳು ತಮ್ಮ ಅಂತಃಸತ್ವವನ್ನು ಕಳೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಹೊಸ ತಲೆಮಾರಿನ ಬರಹಗಾರರಾಗಿ ನೀವು ಹೇಗೆ ಸ್ಪಂದಿಸುತ್ತೀರಿ?

೨ ೭೦-೮೦ರ ದಶಕದಲ್ಲಿ ದಲಿತ-ಲೇಖಕ-ಕಲಾವಿದರು ಸಾಹಿತ್ಯ ರಚನೆಯೊಂದಿಗೆ, ದಲಿತ ಚಳವಯನ್ನೂ ಕಟ್ಟಿ ಬೆಳೆಸಿದರು. ಆದರೆ ಹೊಸ ತಲೆಮಾರಿನ ದಲಿತ ಲೇಖಕರು ಚಳುವಳಿಯೊಂದಿಗೆ ತೀವ್ರವಾಗಿ ತೊಡಗಿಸಿಕೊಳ್ಳುತ್ತಿಲ್ಲ ಯಾಕೆ?

೩ ದಲಿತ ಸಾಹಿತಿಗಳು ಒಂದು ಕಾಲದಲ್ಲಿ ವ್ಯವಸ್ಥೆಯ (ಸರ್ಕಾರ-ಸಮಾಜ) ವಿರುದ್ಧ ಹೋರಾಡುತ್ತಿದ್ದರು ಸರ್ಕಾರಿ ಕೃಪಾಪೋಷಿತ ಸಾಹಿತ್ಯ ಪರಿಷತ್ತು-ಅಕಾಡೆಮಿ-ಸಂಸ್ಕೃತಿ ಇಲಾಖೆ ಮುಂತಾದವುಗಳನ್ನು ಸಂಪೂರ್ಣ ತಿರಸ್ಕರಿಸಿದ್ದರು. ಆದರೆ ಈಗ ಪರಿಸ್ಥಿತಿ ಇದಕ್ಕೆ ವ್ಯತಿರಿಕ್ತವಾಗಿದೆ. ನಿಮ್ಮ ಅಭಿಪ್ರಾಯವೇನು?

೪ ಈಚಿನ ದಲಿತ ಸಾಹಿತಿಗಳು ಜಾತಿವಾದಿಗಳಾಗುತ್ತಿದ್ದಾರೆ. ಎಡಗೈ-ಬಲಗೈ ಎಂದು ಗುರುತಿಸಿಕೊಳ್ಳುತ್ತಿದ್ದಾರೆ. ಹೀಗಿರುವಾಗ ನಿಮ್ಮ ಬರಹಗಳಲ್ಲಿ ಜಾತೀಯತೆ ವಿರುದ್ಧ ದನಿ ಎತ್ತುವುದು ವಿರೋಧಾಭಾಸವೆನಿಸುವುದಿಲ್ಲವೆ?

೫ ಮೂಲಭೂತವಾದವು ಸರ್ವವ್ಯಾಪಿಯಾಗುತ್ತಿರುವ ಇಂದಿನ ಸಾಮಾಜಿಕ ಸಂದರ್ಭದಲ್ಲಿ ಜನಸಮುದಾಯವನ್ನು ಈ ಅನಾಹುತದಿಂದ ಹೇಗೆ ಪಾರು ಮಾಡಬಹುದು? ಇದರಲ್ಲಿ ಹೊಸ ತಲೆಮಾರಿನ ದಲಿತ ಲೇಖಕರ ಪಾತ್ರವೇನು?

ಮಿಣುಕು ದೀಪದ ಪಾಡು

○ ವಡ್ಡಗೆರೆ ನಾಗರಾಜಯ್ಯ

ಚರ್ಚೆ

೧) ೧೯೭೦ರಲ್ಲಿ ಆರಂಭವಾದ ದಲಿತ ಚಳವಳಿ, ೮೦ರ ದಶಕದಲ್ಲಿ ಆರಂಭವಾದ ರೈತ ಚಳವಳಿ, ೧೯೭೯ರಲ್ಲಿ ಹುಟ್ಟಿಕೊಂಡ ಬಂಡಾಯ ಸಾಹಿತ್ಯ ಚಳವಳಿ, ಲೋಹಿಯಾ ಸಮಾಜವಾದಿ ಚಳವಳಿ ಮುಂತಾದ ಎಲ್ಲಾ ಪ್ರಗತಿಪರ ಚಳವಳಿಗಳು ಇಂದು ತಮ್ಮ ಶಕ್ತಿ-ವೇಗ ಎರಡನ್ನೂ ಕುಗ್ಗಿಸಿಕೊಂಡಿವೆ. ಆಗಿನ ಜನಪರ ಚಳವಳಿಗಳು, ಜನರ ನಡುವೆ ಹುಟ್ಟಿ ಜನರ ಬಳಿಗೆ ಹೋದವು. ಚಳವಳಿಗಳನ್ನು ಮಾನವೀಯ ದೃಷ್ಟಿಯಿಂದ ನೋಡುವ ಕ್ರಮವನ್ನು ಅಂದಿನ ಲೇಖಕರು, ಕಲಾವಿದರು, ಪತ್ರಿಕೆಗಳು ಮತ್ತು ಹೋರಾಟಗಾರರು ರೂಪಿಸಿದ್ದರು. ಹೋರಾಟಗಾರರಿರಲಿ, ಲೇಖಕರಿರಲಿ ಸಮಾಜಕ್ಕೆ ಬದ್ಧವಾಗಿದ್ದುದರಿಂದ ಸಮಾಜದ ಚಲನೆಗೆ ತೊಡರುಗಾಲು ಕೊಡುತ್ತಿದ್ದ ಅಂಶಗಳನ್ನು ಸಮಾಜದ ಮುಂದೆಯೇ ಚರ್ಚೆಗೊಳಪಡಿಸಲಾಗುತ್ತಿತ್ತು. ಸಮ ಸಮಾಜದ ನಿರ್ಮಾಣದ ಹೋರಾಟಕ್ಕೆ ತೀರಾ ಡೆಮಾಕ್ರಾಟಿಕ್ ವಿಧಾನಗಳನ್ನು ಅನುಸರಿಲಾಗುತ್ತಿತ್ತು. ಆದರೆ ಸಮಗ್ರ ಸಾಂಸ್ಕೃತಿಕ ಪ್ರಜ್ಞೆಯೊಂದು ರೂಪುಗೊಳ್ಳುತ್ತಿದ್ದ ನಿರ್ಣಾಯಕ ಘಳಿಗೆಯಲ್ಲಿ ಒಂದು ಪ್ರಬಲ ಚಳವಳಿಯಾಗಿ ಅಸ್ತಿತ್ವ ಕಂಡುಕೊಂಡಿದ್ದ ದಲಿತ ಚಳವಳಿಯೇ ಮೊದಲುಗೊಂಡು ಇತರ ಎಲ್ಲಾ ಜನಪರ ಚಳವಳಿಗಳು ಕ್ಷೀಣಿಸತೊಡಗಿದವು.

'ಶತಮಾನಗಳ ನಂತರ ದಲಿತರ ಜೋಪಡಿಯಲ್ಲಿ ಒಂದು ಮಿಣುಕು ದೀಪ ಉರಿಯುತ್ತಿದೆ. ಹೊರಗೆ ಭಾರೀ ಬಿರುಗಾಳಿ ಬೀಸುತ್ತಿದೆ. ಗಾಳಿಗೆ ಸಿಕ್ಕ ದೀಪ ಆರದಂತೆ ರಕ್ಷಿಸುವ ಸಾಮಾಜಿಕ ಜವಾಬ್ದಾರಿ ಪ್ರಜ್ಞಾವಂತ ದಲಿತರ ಮೇಲಿದೆ'.

ತುಮಕೂರಿನ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಕಣ್ಣೀರುಗರೆಯುತ್ತಾ ಮೇಲಿನ ನಿವೇದನಾತ್ಮಕ ಮಾತುಗಳನ್ನಾಡಿದವರು ದಲಿತ ಚಳವಳಿಯ ನೇತಾರ ಪ್ರೊ|| ಬಿ.ಕೃಷ್ಣಪ್ಪನವರು. ಬಿರುಗಾಳಿಗೆ ಒಡ್ಡಿಕೊಂಡ ಮಿಣುಕು ದೀಪದ ಪಾಡು ಈಗಿನ ಎಲ್ಲಾ ಜನಪರ ಚಳವಳಿಗಳಿಗೆ ಒದಗಿದೆ. ಆಗಿನ ಪ್ರಖರ ಚಳವಳಿಗಳು ಹೀಗೆ ಮಂದಗೊಳ್ಳಲು ಆಳುವ ವರ್ಗಗಳ ಪಿತೂರಿ ಹಾಗೂ ಇತರ ಕೋಮುವಾದಿಗಳ ಜನವಿರೋಧಿ ಚಳವಳಿಗಳ ಒಳಸಂಚುಗಳು ಬಹುಪಾಲು ಕಾರಣವಾಗಿವೆ. ಚಳವಳಿಗಳನ್ನು ನಡೆಸಬೇಕಾದ ನೇತಾರರೇ ತಮ್ಮ ವೈಯಕ್ತಿಕ ಲಾಭಗಳಿಗಾಗಿ, ಆಸೆ ಆಮಿಷಗಳಿಗಾಗಿ ತಮ್ಮ ನಾಯಕತ್ವವನ್ನು ಮಾರಿಕೊಂಡರೆಂದು ಅನೇಕ ಮಂದಿ ವಾದಿಸುವುದುಂಟು. ಆದರೆ ಈ ವಾದ ಮೆಳ್ಳೆಗಣ್ಣಿನ ಪಾರ್ಶ್ವ ನೋಟವುಳ್ಳದ್ದು ಮತ್ತು ವ್ಯಕ್ತಿಕೇಂದ್ರಿತ ನಿಲುವಿನದು. ಯಾಕೆಂದರೆ ಎಲ್ಲಾ ಚಳವಳಿಗಳ ನೇತಾರರು ಏಕಕಾಲದಲ್ಲಿ ಭ್ರಷ್ಟರಾಗಲು ಸಾಧ್ಯವಿಲ್ಲ, ಚಳವಳಿಯಲ್ಲಿ ತೊಡಗಿದ ಎಲ್ಲಾ ನಾಯಕರೂ ಒಮ್ಮೆಲೆ ಅಶುದ್ಧರಾಗಲು ಸಾಧ್ಯವಿಲ್ಲ. ಆಮಿಷಗಳಿಗೆ ಬಲಿಯಾದ ಕೆಲವೇ ಮಂದಿಗಾಗಿ ಚಳವಳಿಯೊಂದನ್ನು ಬಲಿಗೊಡಲು ಯಾರೂ ತಯಾರಿರುವುದಿಲ್ಲ ತಾನೆ? ಉಳಿದ ನಾಯಕರಾದರೂ ಚಳವಳಿಗಳನ್ನು ಮುನ್ನಡೆಸಬಹುದಾಗಿತ್ತಲ್ಲ? ಈಗಿನ ಪರಿಸ್ಥಿತಿ ನೋಡಿದರೆ ಎಲ್ಲಾ ಚಳವಳಿಗಳೂ ಎಣ್ಣೆಯಿರದ ದೀಪದ ಸೊಡರಿನಂತೆ ಸೊರಗಿ ಹೋಗಿವೆ. ಎಲ್ಲಾ ನಾಯಕರಿಗೂ ತಬ್ಬಲಿತನ ಕಾಡುತ್ತಿದೆ. ಇದು ಹೇಗೆ ಸಾಧ್ಯವಾಯಿತು? ದೀಪಕ್ಕೆ ಎಣ್ಣೆ ಹಾಕಿ ಪ್ರಖರ ಬೆಳಕನ್ನು ಕಾಣಬೇಕು ಹೇಗೆ?

೨) ಹೊಸ ತಲೆಮಾರಿನ ದಲಿತ ಲೇಖಕರು ಚಳವಳಿಯೊಂದಿಗೆ ತೀವ್ರವಾಗಿ ತೊಡಗಿಸಿಕೊಳ್ಳುತ್ತಿಲ್ಲ ಯಾಕೆ? ಎಂದು ಪ್ರಶ್ನಿಸಿರುವಿರಿ. ಇದು ಹಳೆ ತಲೆಮಾರಿನ ಲೇಖಕರಿಗೇ ಕೇಳಬೇಕಾದ ಪ್ರಶ್ನೆ. ಹಾಗೆ ನೋಡಿದರೆ ಇವೊತ್ತು ಚಳವಳಿಗಳನ್ನು ತಕ್ಕಮಟ್ಟಿಗಾದರೂ ರೂಪಿಸುತ್ತಿರುವರೇ ಹೊಸ ತಲೆಮಾರಿನವರೆಂಬುದಕ್ಕೆ ಎಲ್ಲಿಯೇ ನಡೆಯುತ್ತಿರುವ ರ‍್ಯಾಲಿ, ವಿಚಾರ ಸಂಕಿರಣ, ಧರಣಿ ಸತ್ಯಾಗ್ರಹ, ಚರ್ಚೆ-ಸಂವಾದಗಳನ್ನು ಗಮನಿಸಿದರೆ ಸಾಕು ಅಲ್ಲೆಲ್ಲಾ ಉತ್ಸಾಹದಿಂದ ಪಾಲ್ಗೊಳ್ಳುತ್ತಿರುವುದು ಬಹುಪಾಲು ಹೊಸ ತಲೆಮಾರಿನವರೆಂಬುದು ಗೊತ್ತಾಗುತ್ತದೆ. ಮಂದಗತಿಯಲ್ಲಿ ನಡೆಯುತ್ತಿರುವ ಚಳವಳಿಗಳಿಗೆ ಮತ್ತಷ್ಟು ವೇಗ ತಂದು ಕೊಡಲು, ಶಕ್ತಿ ತುಂಬಲು ಹಳೆ ತಲೆಮಾರಿನ ಲೇಖಕರಿಗೆ ತಮ್ಮದೇ ಆದ ಸಂಘಟನಾ ಸಾಮರ್ಥ್ಯ, ಪ್ರಭಾವ, ಒಳ ಸೂಕ್ಷ್ಮಗಳ ತಿಳುವಳಿಕೆಗಳಿರುವುದರಿಂದ ಅವರು ತಮ್ಮ ಹೊಣೆಗಾರಿಕೆಯನ್ನರಿತು, ಅವರಿಗಿರುವ ಜವಾಬ್ದಾರಿಗಳ ಚಾರಿತ್ರಿಕ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಂಡು ಹೊಸ ತಲೆಮಾರಿನವರೊಂದಿಗೆ ಕೈ ಜೋಡಿಸಬೇಕೆಂಬುದೇ ನಮ್ಮ ಅಪೇಕ್ಷೆ. ಇದು ಸಾಧ್ಯವಾದಾಗ ಮಾತ್ರ ಹೊಸ ತಲೆಮಾರಿನ ಲೇಖಕರು ಮತ್ತಷ್ಟು ತೀವ್ರವಾಗಿ ತೊಡಗಿಸಿಕೊಳ್ಳಬಹುದು.

ಇನ್ನು ಇವತ್ತಿನ ಚಳವಳಿಗಳು ವ್ಯಕ್ತಿಗತವಾಗುತ್ತಿವೆ. ವ್ಯವಸ್ಥೆಯ ವಿರುದ್ಧ ಪ್ರತಿರೋಧದ ರೂಪದ ಚಳವಳಿಗಳು ನಡೆಯುತ್ತಲೇ ಇವೆ. ಆದರೆ ಇವು ಒಂಟಿ ಧ್ವನಿಯಂತೆ ಕೇಳಿಸತೊಡಗಿವೆ. ವ್ಯಕ್ತಿಗತ ಚಿಂತನೆಗಳನ್ನು ಸಾಮುದಾಯಿಕ ಪ್ರಜ್ಞೆಯ ಹಂತಕ್ಕೇರಿಸಲಾಗದೇ ಹೋಗಿರುವುದು ಚಳವಳಿಗಳ ಜಡತೆಗೆ ಮುಖ್ಯ ಕಾರಣವೆನ್ನಿಸುತ್ತಿದೆ. ಇಷ್ಟಲ್ಲದೆ ಸಾಂವಿಧಾನಿಕ ಹಕ್ಕುಬಾಧ್ಯತೆ

ಗಳಿಗಾಗಿ ಹಿಡಿಯುವ ಹೋರಾಟದ ದಾರಿ ಈಗೀಗ ಶಸ್ತ್ರಾಸ್ತ್ರಗಳ ಪ್ರಯೋಗದ ಕಡೆ ಒಲವು ತೋರುತ್ತಿದೆ. ಇದಕ್ಕೆ ಉದಾಹರಣೆಯಾಗಿ ಕುದುರೆ ಮುಖಕ್ಕೆ ನಕ್ಸಲ್ ಚಳವಳಿ ಕಾಲಿಟ್ಟಿರುವುದನ್ನು ನೋಡಬಹುದು. ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ನಂಬಿಕೆಯಿರಿಸಿಕೊಂಡಿದ್ದ ಹಾಗೂ ಶಸ್ತ್ರಸಜ್ಜಿತ ಹಿಂಸಾತ್ಮಕ ಮಾರ್ಗಗಳನ್ನು ಯಾವೊತ್ತಿಗೂ ಉತ್ತೇಜಿಸದ ಮಾನವೀಯ ದಲಿತ ಚಳವಳಿ ಸೋತದ್ದರ ಫಲ ಇದು. ಇಂತಹ ಸನ್ನಿವೇಶಗಳಿಂದ ಪಾರಾಗುವ ಬಗೆಯನ್ನು ಯೋಚಿಸಿದಾಗ ನನಗೆ ಕಾಣಿಸಿದ್ದು ಎಲ್ಲಾ ಶುದ್ಧ ಜನಪರ ಚಳವಳಿಗಳ ಪುನರ್‌ನಿರ್ಮಾಣ ಮಾರ್ಗ !

ಪುನರ್‌ನಿರ್ಮಾಣ ಕಾರ್ಯಕ್ಕೆ ಈಗಾಗಲೇ ಸಂಘಟನೆಯ ಕಟ್ಟಡ ಕಟ್ಟಿ ಒಳಸುಳಿಗಳಲ್ಲಿ ಪಳಗಿರುವ ಹಳೆ ತಲೆಮಾರಿನ ಕುಶಲಕರ್ಮಿಗಳನ್ನೇ ಮತ್ತೊಮ್ಮೆ ಬಳಸಿಕೊಳ್ಳುವುದು ಸೂಕ್ತ. ದಲಿತ ಚಳವಳಿಯಲ್ಲಂತೂ ನುರಿತ 'ಗಾರಸಿದ್ಧಾಮಂದಿರು' ಇದ್ದಾರೆ! ಹೊಸ ತಲೆಮಾರಿನ ಲೇಖಕರಿಗೆ ಕೊಂಡಿಯಾಗ ಬೇಕಾದ ಬಹುತೇಕ 'ಗಾರಸಿದ್ಧಾಮಂದಿರು' ಅನಾರೋಗ್ಯ ಪೀಡಿತರಾಗಿ ಶಕ್ತಿಹೀನರಾಗಿದ್ದಾರೆಂಬುದೇನೋ ನಿಜ. ಆದರೆ ಇಂತಹ ರೋಗ ಪೀಡಿತರಿಗೆ, 'ಆರೋಗ್ಯವರ್ಧನ' ಚಿಕಿತ್ಸೆ ನೀಡಿ ಅವರನ್ನೇ ಮತ್ತೊಮ್ಮೆ ಚೈತನ್ಯಶಾಲಿಗಳನ್ನಾಗಿಸಿ ಅವರ ಮನಸ್ಸುಗಳಿಗೆ ಹೊಸ ಭಾವ ಕೋಶಗಳನ್ನು ತುಂಬಿ ನಾಳಗಳಲ್ಲಿ ಹೊಸರಕ್ತ ಚಲಿಸುವಂತೆ ಮಾಡಿದರೆ ಪುನಶ್ಚೇತನಗೊಂಡು ಹುರುಪಿನಿಂದ ಹೊಸಬರೊಂದಿಗೆ ಚಳವಳಿ ರೂಪಿಸುವ ಕೆಲಸಕ್ಕಿಳಿಯಬಲ್ಲರೆಂಬ ಭರವಸೆ ಮತ್ತು ಆಸೆಗಳಿಂದ ಈ ದಿಕ್ಕಿನಲ್ಲೊಮ್ಮೆ ಯೋಚಿಸೋಣ.

೩) ಇದು ತುಂಬಾ ಸಂಕೀರ್ಣ ಪ್ರಶ್ನೆ. ಸರಕಾರದ ಅಥವಾ ವ್ಯವಸ್ಥೆಯ ಆಮಿಷಗಳನ್ನೆಲ್ಲಾ ತಿರಸ್ಕರಿಸಿ ತಮ್ಮ ಜೀವನವನ್ನು ವ್ಯವಸ್ಥೆಯ ವಿರುದ್ಧ ಹೋರಾಡಲು ಮುಡುಪಿಟ್ಟ ಲೇಖಕರ ಆಗಿನ ಸಂದರ್ಭವೆಲ್ಲಿ? ಸಾಹಿತ್ಯ ರಚನೆ ಮಾಡಿದ್ದಾರೆಂಬ ಆಪಾದನೆ ಹೊತ್ತುಕೊಂಡು ತಾವು ಬರೆದದ್ದನ್ನೇ ಬಂಡವಾಳ ಮಾಡಿಕೊಂಡು ವಾಮಮಾರ್ಗ ಹಿಡಿದು ಸರಕಾರದ ಸವಲತ್ತುಗಳಿಗಾಗಿ ಲಾಬಿ ನಡೆಸುವ ಲೇಖಕರ ಈಗಿನ ಪರಿಸ್ಥಿತಿಯೆಲ್ಲಿ? ಜನಪರ ಕಾಳಜಿಗಳಿಗೋಸ್ಕರ ಮನೆ-ಮಕ್ಕಳು-ಉದ್ಯೋಗಗಳ ಕಡೆ ನೋಡದೆ ಹೋರಾಟವನ್ನೇ ಬದುಕಾಗಿಸಿಕೊಂಡಿದ್ದ ಆ ಹೊತ್ತಿನ ಹಲವಾರು ಲೇಖಕರು ಮತ್ತು ಹೋರಾಟಗಾರರೊಂದಿಗೆ ಒಡನಾಡಿದ ನನಗೆ, 'ಸಾರ್ವಜನಿಕ ಸೇವಾನಿರತ ಲಾಭಕೋರ ಮುಷ್ಕರಗಾಮಿಗಳಾಗುತ್ತಿರುವ' ಹುಸಿ ಹೋರಾಟಗಾರರನ್ನೂ ಸಹ ಪ್ರಶ್ನಿಸದ ಮಟ್ಟಕ್ಕೆ ಇವತ್ತಿನ ಲೇಖಕರಿದ್ದಾರೆಂಬುದನ್ನು ನೋಡಿದರೆ ಸಂಕಟವಾಗುತ್ತದೆ. ಸರ್ಕಾರಿ ಕೃಪಾಪೋಷಿತ ಸಾಹಿತ್ಯ ಪರಿಷತ್ತು, ಅಕಾಡೆಮಿ ಮುಂತಾದ ಕಡೆ ಸ್ಥಾನ ಗಿಟ್ಟಿಸುವ ಮಾತಿರಲಿ ಆಗಿನ ದಲಿತ ಬಂಡಾಯ ಸಾಹಿತಿಗಳು ಸಾರ್ವಜನಿಕ ಸಮಾರಂಭಗಳಲ್ಲಿ ಹಾರ-ತುರಾಯಿ, ಶಾಲು-ಸನ್ಮಾನಗಳನ್ನು ತಿರಸ್ಕರಿಸುವುದೂ ತಮಗಿದ್ದ Ideology ಯ ಒಂದು ಭಾಗವಾಗಿತ್ತು. ಆದರೆ ಅದೇ ಹಳೆ ತಲೆಮಾರಿನ ಕೆಂಡದಂಥ ಲೇಖಕರೇ ಇಂದು ಸಲ್ಲದ ಆಮಿಷಗಳ ಈಡೇರಿಕೆಗೆ ದೊಗ್ಗಾಲುಮಂಡಿಯೂರಿ ಕುಳಿತಿರುವುದು ಅಸಹ್ಯವೆನಿಸುತ್ತದೆ. ವ್ಯವಸ್ಥೆಯು ನಿರ್ಮಿಸಿರುವ ಪರಿಷತ್ತು- ಅಕಾಡೆಮಿ-ನಿಗಮ-ಮಂಡಲಿ

> **ಇವತ್ತಿನ ಚಳವಳಿಗಳು ವ್ಯಕ್ತಿಗತವಾಗುತ್ತಿವೆ. ವ್ಯವಸ್ಥೆಯ ವಿರುದ್ಧ ಪ್ರತಿರೋಧದ ರೂಪದ ಚಳವಳಿಗಳು ನಡೆಯುತ್ತಲೇ ಇವೆ. ಆದರೆ ಇವು ಒಂಟಿ ಧ್ವನಿಯಂತೆ ಕೇಳಿಸತೊಡಗಿವೆ. ವ್ಯಕ್ತಿಗತ ಚಿಂತನೆಗಳನ್ನು ಸಾಮುದಾಯಿಕ ಪ್ರಜ್ಞೆಯ ಹಂತಕ್ಕೇರಿಸಲಾಗದೇ ಹೋಗಿರುವುದು ಚಳವಳಿಗಳ ಜಡತೆಗೆ ಮುಖ್ಯ ಕಾರಣವೆನ್ನಿಸುತ್ತಿದೆ. ಇಷ್ಟಲ್ಲದೆ ಸಾಂವಿಧಾನಿಕ ಹಕ್ಕುಬಾಧ್ಯತೆಗಳಿಗಾಗಿ ಹಿಡಿಯುವ ಹೋರಾಟದ ದಾರಿ ಈಗೀಗ ಶಸ್ತ್ರಾಸ್ತ್ರಗಳ ಪ್ರಯೋಗದ ಕಡೆ ಒಲವು ತೋರುತ್ತಿದೆ. ಇದಕ್ಕೆ ಉದಾಹರಣೆಯಾಗಿ ಕುದುರೆ ಮುಖಕ್ಕೆ ನಕ್ಸಲ್ ಚಳವಳಿ ಕಾಲಿಟ್ಟಿರುವುದನ್ನು ನೋಡಬಹುದು. ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ನಂಬಿಕೆಯಿರಿಸಿ ಕೊಂಡಿದ್ದ ಹಾಗೂ ಶಸ್ತ್ರಸಜ್ಜಿತ ಹಿಂಸಾತ್ಮಕ ಮಾರ್ಗಗಳನ್ನು ಯಾವೊತ್ತಿಗೂ ಉತ್ತೇಜಿಸದ ಮಾನವೀಯ ದಲಿತ ಚಳವಳಿ ಸೋತದ್ದರ ಫಲ ಇದು. ಇಂತಹ ಸನ್ನಿವೇಶಗಳಿಂದ ಪಾರಾಗುವ ಬಗೆಯನ್ನು ಯೋಚಿಸಿದಾಗ ನನಗೆ ಕಾಣಿಸಿದ್ದು ಎಲ್ಲಾ ಶುದ್ಧ ಜನಪರ ಚಳವಳಿಗಳ ಪುನರ್‌ನಿರ್ಮಾಣ ಮಾರ್ಗ !**

ಮುಂತಾದ ಚಕ್ರವ್ಯೂಹಕ್ಕೆ ಏಕಲವ್ಯ ಪ್ರತಿಭೆಯುಳ್ಳ ಲೇಖಕರು ಪ್ರವೇಶಿಸಿದರೆ ಚಕ್ರವ್ಯೂಹ ನಿರ್ಮಿಸಿದ ದ್ರೋಣರು ಬೆರಳ ಕಾಣಿಕೆ ಪಡೆಯಲು ಅಲ್ಲಿರುತ್ತಾರೆ. ಮಾತ್ರವಲ್ಲದೆ ವ್ಯವಸ್ಥೆಯನ್ನು ಪ್ರಶ್ನಿಸಲು, ಬದಲಾಯಿಸಲು ಹೊರಟು, ವ್ಯವಸ್ಥೆಯೇ ಕೊಡಮಾಡುವ ಪದವಿಗಳನ್ನು ಸ್ವೀಕರಿಸಿದರೆ ಯಥಾಸ್ಥಿತಿ ವ್ಯವಸ್ಥೆಯನ್ನೇ ಸರಿಯೆಂದು ದೃಢೀಕರಿಸಿದಂತಾಗುತ್ತದೆ; ಇದು ನೇತಾತ್ಮಕವಾಗಿ ಲೇಖಕನ ಅಸ್ತಿತ್ವದ ಬೇರುಗಳನ್ನೂ ಸಡಿಲಿಸುತ್ತದೆ.

ನನ್ನ ವೈಯಕ್ತಿಕ ನಿಶ್ಚಯಾತ್ಮಕ ಅಭಿಪ್ರಾಯವೇನೆಂದರೆ ಅಕಾಡೆಮಿಗಳಂತಹ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಸಂಸ್ಥೆಗಳು ಸ್ವಾಯತ್ತ ಘಟಕಗಳಾಗಿರುವುದರಿಂದ, ಇಲ್ಲಿಗೆ ನೇಮಕಗೊಂಡ ವ್ಯಕ್ತಿಗಳು ಸಾಂಸ್ಕೃತಿಕ/ಸಾಹಿತ್ಯಕ ಕ್ಷೇತ್ರವನ್ನು ಮಾತ್ರ ಪ್ರತಿನಿಧಿಸುವುದರಿಂದ ಅಂತಹ ಸ್ಥಾನಗಳು ಅರ್ಹತೆಯನ್ನು ಗುರುತಿಸಿ ಲೇಖಕನನ್ನೇ ಹುಡುಕಿಕೊಂಡು ಬರುವಂತಾಗಬೇಕು. ಲೇಖಕನಾದವನು ಈ ಪದವಿಗಳನ್ನು ಗಿಟ್ಟಿಸಲು ಸಂಚು ಹೂಡಬಾರದು. ಹಾಗೊಂದು ವೇಳೆ ಸರಕಾರವು ಇಂತಹ ಸ್ವಾಯತ್ತ ಸಾಂಸ್ಕೃತಿಕ ಸಂಸ್ಥೆಗಳ ಮೇಲೆ ಕುದುರೆ ಸವಾರಿ ಮಾಡಹೊರಟರೆ ಲೇಖಕನಾದವನು ಅಂತಹ ಸ್ಥಾನಗಳನ್ನು ಬಹಿಷ್ಕರಿಸಿ ಹೊರಬರುವ ಕೆಚ್ಚನ್ನೂ ತೋರಬೇಕು.

೪) ಎಡಗೈ-ಬಲಗೈ ಮಾತಿರಲಿ, ನಮ್ಮ ಸಾಂಪ್ರದಾಯಿಕ ಜಾತಿ ವ್ಯವಸ್ಥೆಯ ಗ್ರಾಮೀಣ ಭಾರತದಲ್ಲಿ ಬಹುಮಟ್ಟಿಗೆ ಎಲ್ಲಾ ಜಾತಿಗಳು ತಮ್ಮೊಳಗೇ ಸೃಷ್ಟಿಸಿಕೊಂಡ ಶ್ರೇಷ್ಠ ಮತ್ತು ಕನಿಷ್ಠ ವೆಂಬ ಒಳಪ್ರಭೇದಗಳ ವ್ಯಾಧಿಯಿಂದ ನರಳುತ್ತಿವೆ. ಜಾತಿ ಮತಗಳ ಹೆಸರಿನಲ್ಲಿ ಕವಿಯನ್ನು ಗುರುತಿಸುವುದಾಗಲೀ ಕವಿಯಾದವನು ಜಾತಿವಾದಿಯಾಗುವುದಾಗಲೀ ಎರಡೂ ಅಪಾಯಕಾರಿ. ಸಾಹಿತ್ಯ ನಿರ್ಮಿತಿಯ ವಿಷಯದಲ್ಲಿ ಜಾತಿ ನೆಲೆಯಿಂದ ಬಂದ ಸಾಮಾಜಿಕ ಸಾಂಸ್ಕೃತಿಕ ಅನುಭವಗಳನ್ನು ಜಾತೀಯತೆಯನ್ನು ಪ್ರಶ್ನಿಸುವಂತೆ ನಿಭಾಯಿಸುವುದರಲ್ಲಿಯೇ ಲೇಖಕನ ಸಾಮರ್ಥ್ಯ ವಿರುತ್ತದೆ. ಜಾತಿಯ ಮೂಲ ಪರಿಕರಗಳಿಂದಲೇ ಜಾತೀಯತೆಯನ್ನು, ಜಾತಿಯ ಯಜಮಾನ್ಯವನ್ನು ಪ್ರಶ್ನಿಸುವ ದ್ವಂದ್ವವನ್ನು ಹೀಗೆ ಬಿಡಿಸಬಹುದು: ಒಳಪ್ರಭೇದಗಳಿಂದ ಜಾತಿ ಸಂಘಟನೆಗಳು ಬಲಗೊಳ್ಳುತ್ತಿದ್ದರೂ ಆಂತರ್ಯದಲ್ಲಿ ಎಲ್ಲಾ ದಲಿತ ಜಾತಿಗಳು ಒಂದು ಸಾಂಸ್ಕೃತಿಕ ಏಕತೆಯನ್ನು ಉಳಿಸಿಕೊಂಡಿರುವುದೇ ದಲಿತ ಸಂಸ್ಕೃತಿಗಿರುವ ಜೀವಂತಿಕೆಯ ಲಕ್ಷಣ. ಯಾವುದೇ ಸೃಜನಶೀಲ ದಲಿತ ಲೇಖಕ ಒಟ್ಟು ದಲಿತ ಜನಾಂಗದ ಸಮಷ್ಟಿ ಪ್ರಜ್ಞೆಯ ಧ್ವನಿಯಾಗಿ ಬರೆಯುತ್ತಾನೆಯೇ ಹೊರತು ಜಾತಿ ವಿಭಜನೆಯನ್ನು ಪ್ರೇರೇಪಿಸುವುದಿಲ್ಲ. ಹಾಗಾಗಿಯೇ ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಬಂದ ದಲಿತ ಸಾಹಿತ್ಯ ಮತ್ತು ಆತ್ಮಕಥೆಗಳನ್ನು ಹೊರತುಪಡಿಸಿದರೆ ಇಲ್ಲೀತನಕ ಇತರ ಯಾವ ಸಾಹಿತ್ಯದಿಂದಲೂ ಜೀವ 'ವಿರೋಧಿ ಸಾಮಾಜಿಕ ಮೌಲ್ಯಗಳನ್ನು ಅಲ್ಲೋಲ ಕಲ್ಲೋಲಗೊಳಿಸಲಾಗಿಲ್ಲ. ಹಾಗೊಂದು ವೇಳೆ ದಲಿತ ಲೇಖಕನಾದವನು ಒಟ್ಟಾರೆ ತಲೆಮಾರಿನ ಸಂವೇದನೆಗೆ ದನಿಯಾಗಲಾರದೆ ಗೊಡ್ಡು ಜಾತಿವಾದಿಯಾಗಿ ಪರಿವರ್ತಿತನಾದನೆಂದರೆ ಆತನ ಆತ್ಮಹತ್ಯೆಗೆ ಆತನೇ ಮುಂದಾದಂತೆ. ಆದುದರಿಂದ ತನ್ನ ಜಾತಿಯ ಪರಿಕರಗಳನ್ನು ಬಳಸಿಕೊಂಡು ಕೃತಿ ರಚನೆ ಮಾಡಿದರೂ ಸಹ ದಲಿತ ಜನಾಂಗಕ್ಕೊಂದು ವಿಶಾಲ ಸಾಂಸ್ಕೃತಿಕ ನೆಲೆಗಟ್ಟನ್ನು ರೂಪಿಸುವುದೇ ಆ ಕೃತಿಯ ಮುಖ್ಯ ಆಶಯವಾಗಬೇಕು. ಇದೇ ತಿಳುವಳಿಕೆಯಿಂದ ಬರೆಯತೊಡಗಿರುವ ನನಗೆ ನನ್ನ ಕೃತಿಗಳಲ್ಲಿ ಜಾತೀಯತೆಯ ವಿರುದ್ಧ ಧ್ವನಿ ಎತ್ತುವುದು ವಿರೋಧಾಭಾಸವೆನ್ನಿಸುತ್ತಿಲ್ಲ. ೧೨ನೇ ಶತಮಾನದಲ್ಲಿ ಬಸವಣ್ಣನವರು ಎಲ್ಲಾ ಕೆಳಜಾತಿಗಳನ್ನು ಒಂದು ವೇದಿಕೆಗೆ ತರಲೆತ್ನಿಸಿದರು. ಆದರೆ ಈಗ ಜಾತಿಗೊಂದು ಗುರುಮಠ ಸ್ಥಾಪಿಸಿ ದಲಿತರನ್ನು ಇನ್ನಷ್ಟು ಛಿದ್ರಗೊಳಿಸಲಾಗುತ್ತಿದೆ. ಈಗ ಬಸವಣ್ಣ ಮತ್ತೊಮ್ಮೆ ನಮಗೆ ಮಾದರಿಯಾಗಬೇಕು. ಮಹಾನ್ ಪ್ರತಿಭೆಗಳಾದ ಶಂಭೂಕ, ಏಕಲವ್ಯ, ಕರ್ಣ, ರಾವಣ, ಬಲಿ, ಮಹಿಷಾಸುರ ಮುಂತಾದ ನಾಯಕರೇ ಮನುವಾದಿ

(೯೨ನೇ ಪುಟಕ್ಕೆ)

ಎಡ-ಬಲ : ದಲಿತರ ಸಂಬಂಧ ನಾಶದ ಅಸ್ತ್ರ

ಚರ್ಚೆ

ಎಸ್.ಕೆ. ಹನುಮಂತಯ್ಯ

೧) ಸಮಾಜದ ಬದಲಾವಣೆಯ ಪ್ರಭಾವ ಮತ್ತು ಪ್ರಾಣವನ್ನು ಹೊಂದಿದ್ದ ಪ್ರಗತಿಪರ ಚಳವಳಿಗಳು ವಸ್ತು ಕೇಂದ್ರಿತವಾಗಿದ್ದವು. ಜಾತಿ ಯಜಮಾನಿಕೆಯ ಪ್ರತಿಗಾಮಿ ರಾಜಕಾರಣ ಅಂಥ ಚಳವಳಿಗಳನ್ನು ವ್ಯಕ್ತಿ ಕೇಂದ್ರಿತಗೊಳಿಸಿದೆ. ತನ್ನ ಬಲಾತ್ಕಾರದ ಮೂಲಕ ಚಳವಳಿಗಳ ದನಿಯನ್ನು ಭ್ರಷ್ಟಗೊಳಿಸಿದೆ. ನಿಷ್ಕ್ರಿಯ ಗೊಳಿಸಿದೆ. ಇಂಥ ರಾಜಕಾರಣವನ್ನು ಗ್ರಹಿಸುವ ಹಾಗೂ ಅದರಿಂದ ತಪ್ಪಿಸಿಕೊಂಡು ಹೋರಾಡುವ ಜೀವಂತಿಕೆಯ ಭಾಷೆಯನ್ನು ಶೋಧಿಸಬೇಕಾಗಿದೆ. ಹೀಗಾದಾಗ ಮಾತ್ರ ಚಳವಳಿಗಳಿಗೆ ಅಂತಃಸತ್ವ ಒದಗಲು ಸಾಧ್ಯ. ಅಂಥ ಯತ್ನ ನಮ್ಮ ಕನಸಾಗಿದೆ.

೨) ಸಮಕಾಲೀನ ಜಾತಿ ಸಮಾಜ ತನ್ನ ರಕ್ಷಣೆಗಾಗಿ ಅಪಾಯಕಾರಿ ಮೌನವೊಂದನ್ನು ಸೃಷ್ಟಿಸಿಕೊಂಡಿದೆ. ನಮ್ಮ ಕೂಗು ನಮಗೇ ಕೇಳುವ, ನಮ್ಮ ಏಟು ನಮಗೇ ಬೀಳುವ ತಂತ್ರವನ್ನು ಅದು ರೂಪಿಸಿದೆ. ನಮ್ಮ ನಡುವೆ ಇರುವ ಸಿದ್ಧ ಚಳವಳಿಗಳ ಭಾಷೆ ಮತ್ತು ಮಾದರಿಗಳಿಗೆ ಇಂಥ ಸಾಮಾಜಿಕ ಕ್ರೌರ್ಯವನ್ನು ಭೇದಿಸುವ ಕಲೆಗಾರಿಕೆ ಇಲ್ಲ. ನಾವು ಯಾವ ವ್ಯವಸ್ಥೆ ಯನ್ನು ವಿರೋಧಿಸುತ್ತೇವೋ ಕ್ರಮೇಣ ಅದೇ ವ್ಯವಸ್ಥೆಯ ಯಜಮಾನರಾಗಿಬಿಡುವ ಮಾಯೆ ಯಿಂದ ದೂರಾಗಬಲ್ಲ ಹಾಗೂ ಸಾರ್ವತ್ರಿಕ ಪ್ರೀತಿ ಯನ್ನು ತನ್ನ ಬೆಂಬಲವನ್ನಾಗಿಸಿಕೊಳ್ಳಬಲ್ಲ ಆತ್ಮವೂ ಸಿದ್ಧ ಚಳವಳಿ ಗಳಿಗಿಲ್ಲ. ನಮ್ಮಂಥ ಹೊಸತಲೆಮಾರಿನ ವರಲ್ಲಿ ಪ್ರಭಾವ ಬೀರುವ ಅಥವಾ ನಮ್ಮೊಳಗಿಳಿದು ಚಳವಳಿಯಾಗುವ ಚೈತನ್ಯವಿಲ್ಲದ ಸಿದ್ಧ ಚಳವಳಿಗಳ ಜೊತೆ ತೀವ್ರವಾಗಿ ತೊಡಗಲಾಗುತ್ತಿಲ್ಲ. ಆದರೆ ಜೀವಂತ ಚಳವಳಿಗಳ ಜೊತೆ ತಕ್ಷಣ ತೊಡಗುವ ಉತ್ಸಾಹವಂತೂ ನಮಗಿದೆ.

೩) ದಲಿತ ಸಾಹಿತಿಗಳೂ ಕೂಡ 'ಸಾಹಿತ್ಯ'ದ ಚೌಕ ಟ್ಟಿಗೆ ಬರುವುದಾದರೆ ಅನ್ಯಜಾತಿಯ ಸಾಹಿತಿಗಳಿಗಿ ರುವ ಅಪೇಕ್ಷೆ ಇವರಿಗೂ ಬರುವುದು ಸಹಜ. ಆದರೆ ಸೂಕ್ಷ್ಮ ದಲಿತ ಸಾಹಿತಿಗಳು ಇದಕ್ಕೆ ಹೊರ ತಾಗಿಯೂ ಬದುಕುತ್ತಿದ್ದಾರೆ. ಸರ್ಕಾರ, ಸಮಾಜದ ಮೈತ್ರಿ ಮಾಡಿಕೊಂಡು ಜೀವಿಸುವವರನ್ನು ಕೇಂದ್ರ ವಾಗಿಟ್ಟುಕೊಂಡು ದಲಿತ ಸಾಹಿತ್ಯ, ಸಾಹಿತಿ ಹಾಗೂ ಚಳವಳಿಗಳನ್ನು ಗುರುತಿಸಲಾಗದು. ಸರ್ಕಾರ ಮತ್ತು ಸಮಾಜದ ಅಂತರಂಗದಲ್ಲೂ ಇರುವ ಪರಿವರ್ತ ನೆಯ ಬಾಗಿಲುಗಳನ್ನು ಹುಡುಕುವುದೂ ಕೂಡ ಮುಖ್ಯವೇ. ಬರೀ ದಲಿತರು ಮಾತ್ರವೇ ಈ ಸಮಾಜ ಬದಲಾವಣೆಯ ಹಾಗೂ ಸರ್ಕಾರ-ಸಮಾಜದ ವಿರುದ್ಧದ ಗುತ್ತಿಗೆದಾರರಾಗಿರಲು ಇನ್ನೆಷ್ಟು ದಿನ ಸಾಧ್ಯ? ಅಂಥ ಸಾಧ್ಯತೆಯ ಪರಿಸರ ನಮ್ಮೆದುರಿ ಗಿದೆಯೇ? ಎನ್ನಿಸಿ ದುಃಖವಾಗುತ್ತದೆ.

೪) ಭಾರತದ ಜಾತಿಪದ್ಧತಿಯ ಬಲಾತ್ಕಾರವೇ ಹಾಗೆ. ಅದು ತನ್ನ ವಿರೋಧಿ ನೆಲೆಗಳನ್ನು ಹತ್ಯೆ ಮಾಡುತ್ತಲೇ ಬದುಕಿದೆ. ಜಾತಿ ಪದ್ಧತಿಯ ವಿರುದ್ಧ ಇರುವ ಏಕೈಕ ಸಾಮೂಹಿಕ ಸಂಬಂಧ ಶಕ್ತಿ ಎಂದರೆ, ದಲಿತ ಶಕ್ತಿ. ಇದು ಜಾತಿ ವ್ಯವಸ್ಥೆಯ ಬೇರುಗಳನ್ನು ಸುಡಲು ತೊಡಗಿದೆ. ಈ ಕ್ರಿಯೆಗೆ 'ಮೀಸಲಾತಿ' ಮಹಾನ್ ಬೆಂಬಲವಾಗಿದೆ. ಇದರಿಂದ ಘಾಸಿಗೊಂಡಿರುವ ಜಾತಿ ಪದ್ಧತಿ ತನ್ನ ಕೂಸಾಗಿರುವ ಪ್ರತಿಗಾಮಿ ರಾಜಕಾರಣ ದಿಂದ 'ಮೀಸಲಾತಿ'ಗಿರುವ ಜಾತಿಭಗ್ನ ನೆಲೆಯನ್ನು ವಿರೂಪ ಗೊಳಿಸುತ್ತಿದೆ. ಹಾಗಾಗಿ ಅದು ಎಲ್ಲರ ಹಕ್ಕು ಎನ್ನುವಂಥ ಆರ್ಥಿಕ ಆಯಾಮ ನೀಡಿದೆ. ಅದೇ ರೀತಿ ದಲಿತರ ನಡುವೆ ಇರುವ ಸೌಲಭ್ಯಗಳ ತಾರತಮ್ಯವನ್ನು ಸರಳವಾಗಿ ಸರಿಪಡಿಸು ವ ಸಾಧ್ಯತೆಯಿದ್ದರೂ, ಪುರಾತನವಾದ ಎಡ-ಬಲ ಎಂಬುದ ನ್ನು ದಲಿತರ ಸಾಮೂಹಿಕ ಸಂಬಂಧ ನಾಶದ ಅಸ್ತ್ರವನ್ನಾಗಿಸಿದೆ. ಆ ಮೂಲಕ ತನ್ನ ವಿರೋಧಿಯಾದ ದಲಿತಶಕ್ತಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುತ್ತಿದೆ. ಇಂಥ ಜಾತಿ ತಂತ್ರವನ್ನು ತಿಳಿದಿರುವ ಹಾಗೂ ಆತ್ಮಹತ್ಯೆಗೆ ಶರಣಾಗದ ನನಗೆ ಜಾತಿ ಪದ್ಧತಿ ವಿರುದ್ಧ ದನಿಯೆತ್ತುವುದು ಅನಿವಾರ್ಯವಾಗಿದೆ, ಸಹಜವಾಗಿದೆ.

ಭಾರತದ ಜಾತಿಪದ್ಧತಿಯ ಬಲಾತ್ಕಾರವೇ ಹಾಗೆ. ಅದು ತನ್ನ ವಿರೋಧಿ ನೆಲೆಗಳನ್ನು ಹತ್ಯೆ ಮಾಡುತ್ತಲೇ ಬದುಕಿದೆ. ಜಾತಿ ಪದ್ಧತಿಯ ವಿರುದ್ಧ ಇರುವ ಏಕೈಕ ಸಾಮೂಹಿಕ ಸಂಬಂಧ ಶಕ್ತಿ ಎಂದರೆ, ದಲಿತ ಶಕ್ತಿ. ಇದು ಜಾತಿ ವ್ಯವಸ್ಥೆಯ ಬೇರುಗಳನ್ನು ಸುಡಲು ತೊಡಗಿದೆ. ಈ ಕ್ರಿಯೆಗೆ 'ಮೀಸಲಾತಿ' ಮಹಾನ್ ಬೆಂಬಲವಾಗಿದೆ. ಇದರಿಂದ ಘಾಸಿಗೊಂಡಿರುವ ಜಾತಿ ಪದ್ಧತಿ ತನ್ನ ಕೂಸಾಗಿರುವ ಪ್ರತಿಗಾಮಿ ರಾಜಕಾರಣದಿಂದ 'ಮೀಸಲಾತಿ'ಗಿರುವ ಜಾತಿಭಗ್ನ ನೆಲೆಯನ್ನು ವಿರೂಪಗೊಳಿಸುತ್ತಿದೆ. ಹಾಗಾಗಿ ಅದು ಎಲ್ಲರ ಹಕ್ಕು ಎನ್ನುವಂಥ ಆರ್ಥಿಕ ಆಯಾಮ ನೀಡಿದೆ. ಅದೇ ರೀತಿ ದಲಿತರ ನಡುವೆ ಇರುವ ಸೌಲಭ್ಯಗಳ ತಾರತಮ್ಯವನ್ನು ಸರಳವಾಗಿ ಸರಿಪಡಿಸುವ ಸಾಧ್ಯತೆಯಿದ್ದರೂ, ಪುರಾತನವಾದ ಎಡ-ಬಲ ಎಂಬುದನ್ನು ದಲಿತರ ಸಾಮೂಹಿಕ ಸಂಬಂಧ ನಾಶದ ಅಸ್ತ್ರವನ್ನಾಗಿಸಿದೆ. ಆ ಮೂಲಕ ತನ್ನ ವಿರೋಧಿಯಾದ ದಲಿತಶಕ್ತಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುತ್ತಿದೆ. ಇಂಥ ಜಾತಿ ತಂತ್ರವನ್ನು ತಿಳಿದಿರುವ ಹಾಗೂ ಆತ್ಮಹತ್ಯೆಗೆ ಶರಣಾಗದ ನನಗೆ ಜಾತಿಪದ್ಧತಿ ವಿರುದ್ಧ ದನಿಯೆತ್ತುವುದು ಅನಿವಾರ್ಯವಾಗಿದೆ, ಸಹಜವಾಗಿದೆ.

೫) ಜನಸಾಮಾನ್ಯರ ಆರ್ಥಿಕ ಮೂಲಗಳು ಬತ್ತಿ ಹೋದಂತೆಲ್ಲಾ ಮೂಲಭೂತವಾದ ಗಾಢವಾಗತೊಡಗಿದೆ. ಜಾಗತೀಕರಣದಂಥ ಮಾರುಕಟ್ಟೆ ಪ್ರಭುತ್ವಗಳೇ ಪ್ರತಿ ಸರ್ಕಾರಗಳಾಗಿ ಜನರನ್ನು ಸನಾತನತೆಗೆ ತಳ್ಳುತ್ತಿವೆ. ನಿಷ್ಕ್ರಿಯತೆ ಹೊಂದಿದ ಯಾವುದೇ ಸಮಾಜ ಮೂಲಭೂತ ವಾದವನ್ನು ಹೇರತೊಡಗುತ್ತದೆ. ಅಂಥ ಅಪಾಯ ನಮ್ಮೆದುರಿಗಿದೆ. ಇಂಥ ಸಮಾಜವನ್ನು ಪಾರುಮಾಡಲು ಮೂಲಭೂತವಾದಿ ವಿರೋಧದ ಸರ್ಕಾರವನ್ನು ರೂಪಿಸುವ ಹಾಗೂ ಜನಕೇಂದ್ರಿ ತ ನೆಲೆಗಳಲ್ಲಿ ಜಾಗೃತಿಯೊಂದನ್ನು ಮೂಡಿಸುವ ಸೃಜನಶೀಲ ಚಳವಳಿ ಚುರುಕಾಗಬೇಕು. ಸಮಾಜದ ಆಯಕಟ್ಟಿನ ನೆಲೆ ಗಳನ್ನು ವಿಚಾರವಂತರು ಹಿಡಿಯಬೇಕು. ಆ ಮೂಲಕ ಜನರ ಕಣ್ತೆರೆಸುವ ಕೆಲಸ ಆಗಬೇಕು. ವೈಚಾರಿಕ ಹಾಗೂ ಬೌದ್ಧಿಕ ಗಾಂಭೀರ್ಯ ಅಳಿದು ಕ್ರಿಯಾಶೀಲವಾಗಬೇಕು. ನಾಡಿನ ಮೂಲೆ ಮೂಲೆಯಲ್ಲಿರುವ ಮಾನವೀಯ ಪ್ರಜ್ಞೆಗಳು ಪರಸ್ಪರ ಒಂದಾಗಿ ಜನರಿಗೆ ಮೂಲಭೂತವಾದದ ಅಪಾಯದ ಬಗ್ಗೆ ತಿಳುವಳಿಕೆ ನೀಡುವ ಕಲಾತ್ಮಕ ಕೆಲಸಕ್ಕೆ ಮುಂದಾಗಬೇಕು. ಹೊಸ ತಲೆಮಾರಿನ ನಾವು ನಮ್ಮ ನಮ್ಮ ಕ್ಷೇತ್ರದಲ್ಲಿ ಮೂಲಭೂ ತ ವಾದವನ್ನು ದಮನಗೊಳಿಸುವ ಭಾಷೆಯನ್ನು, ಮಾರ್ಗವನ್ನು ಕಂಡುಕೊಂಡು ಶ್ರಮಿಸುವುದು ತುರ್ತಾಗಿ ಆಗಬೇಕಾಗಿದೆ. ಇನ್ನೂ ಮುಂದೆ ಹೋಗಿ ಚಿಂತಿಸಿದರೆ, ಮೂಲಭೂತವಾದಿ ಮುಖಂಡರು ಹಾಗೂ ವಿಚಾರವಾದಿಗಳು ಆದಷ್ಟು ಬೇಗ ಸಂವಾದಿಸುವ ಮೂಲಕ ಜನರನ್ನು ಹಿಂಸೆಯಿಂದ ಪಾರುಮಾ ಡುವ ಅವಶ್ಯಕತೆಯಿದೆ. □

ಜಾತಿವಾದಕ್ಕೆ ಜಾತಿವಾದವೇ ಪರಿಹಾರ

ಚರ್ಚೆ

○ ಮೋಹನ ನಾಗಮ್ಮನವರ

ಇಂಡಿಯಾದ ಇವತ್ತಿನ ಜಾತಿ ಸ್ಥಿತಿಗೆ, ಈ ಜಾತಿ ಸ್ಥಿತಿ ತಂದುಕೊಡುವ ಲಾಭ ಬಲ್ಲವರು ತಂತ್ರಗಾರಿಕೆಯಿಂದ ರೂಪಿಸಿಕೊಂಡ ಶ್ರೇಷ್ಠ ಕುಲನೀತಿಯೇ ಕಾರಣವಾಗಿದೆ. ಅಪಮಾನಿತ ಜನಸಮುದಾಯಗಳಿಂದ ಬಂದವರು ಮರಳಿ ತಮ್ಮ ಜಾತಿಯ ಬೇರುಗಳಿಗೇ ಮರಳುವುದು ಐತಿಹಾಸಿಕ ಅನಿವಾರ್ಯತೆಯಾಗಿದೆ.

೧) ವರ್ತಮಾನದಲ್ಲಿ ಪ್ರಗತಿಪರ ಚಳವಳಿಗಳು ಅಂತಃಸತ್ವ ಕಳೆದುಕೊಂಡಿರುವ ಮಾತು ನಿಜ. ಆದರೆ ಆ ಚಳವಳಿ ನಾಶ ವಾಗಿಲ್ಲ. ಆ ಚಳವಳಿಗಳ ಫಲಿತವಾಗಿರುವ ನಾನೂ, ನನ್ನ ವಾರಿಗೆಯವರೂ ಎಲ್ಲೋ ಒಂದೆಡೆ ಆ ಚಳವಳಿಗಳ ಉದ್ದೇಶ ಗಳನ್ನೇ ಗುರಿಯಾಗಿಸಿಕೊಂಡು ಕೆಲಸ ಮಾಡುತ್ತಿದ್ದೇವೆ. ಆ ಚಳವಳಿಗಳ ತೀವ್ರತೆ ಈ ಪುಡಿಗುಂಪುಗಳಿಗೆ ಇದ್ದಿರಲಿಕ್ಕಿಲ್ಲ. ಪ್ರಗತಿಪರ ಚಳವಳಿಗಳು ಪ್ರಬಲಗೊಳ್ಳುವ ಪೂರ್ವದಲ್ಲಿಯೂ ಇಂಥದೇ ಸ್ಥಿತಿಯಿತ್ತು. ಪರಸ್ಪರ ಕವಿದ ಅಪನಂಬುಗೆ ಮತ್ತು ವ್ಯಕ್ತಿವಾದವೇ ಇಂದಿನ ಕತ್ತಲೆ ಕಳೆದು ಮತ್ತೊಂದು ದಿನ ಈ ಹಾದಿಯ ನಡೆಗೆ ಹೆಚ್ಚಿನ ಬಲಬಂದೀತು. ಆ ದಿನಕ್ಕಾಗಿ ಕಾಯುವುದು, ಮತ್ತದಕ್ಕಾಗಿ ಪೂರಕ ವಾತಾವರಣ ನಿರ್ಮಿಸು ವುದು ಈ ಕ್ಷಣದ ಅಗತ್ಯ.

೨) ೭೦-೮೦ರ ದಶಕದ ದಲಿತರು, ದಲಿತ ಲೇಖಕ, ಕಲಾ ವಿದರು ಉರಿವ ಬೆಂಕಿಯ ಒಡಲಿನಿಂದ ಬಂದವರಾಗಿದ್ದರು. ಆ ಕಾಲದ ಸಾಮಾಜಿಕ ಸನ್ನಿವೇಶ ಮತ್ತವರ ಅಪಮಾನಗಳು ಅಂದಿನ ಪೀಳಿಗೆಯವರನ್ನು ಪ್ರಬಲ ಚಳವಳಿ ಕಟ್ಟುವುದಕ್ಕೆ ಪ್ರೇರೇಪಿಸಿದ್ದವು. ಈ ಹಿರಿಯರ ನಂತರ ಬಂದ ಕಿರಿಯರು ಕಣ್ಣು ಬಿಡುವ ಹೊತ್ತಿಗೆ ಕೊಂಚಮಟ್ಟಿಗೆ ಸಮಾಧಾನಕರ ವಾತಾವರಣ ನಿರ್ಮಾಣಗೊಂಡಿತ್ತು. ರಾಜ್ಯದಲ್ಲಾಗ ಬಿರು ಗಾಳಿಯಂತೆ ಹರಡಿಕೊಂಡ ದಲಿತ ಚಳವಳಿಯಿಂದಾಗಿ ಪಲ್ಲ ಟಗೊಂಡ ಸ್ಥಿತಿಯ ಫಲಾನುಭವಿಗಳು ಹೊಸ ತಲೆಮಾರಿನವ ರಾಗಿದ್ದರು.

ನೌಕರಿಗಳು, ಸರಕಾರಿ ಯೋಜನೆಗಳು, ಸರಕಾರದ ಉನ್ನತ ಮಟ್ಟದ ಸದಸ್ಯತ್ವ, ಅಕಾಡೆಮಿಗಳು ಹಾಗೂ ಸತ್ತೆಯ ಇನ್ನು ಳಿದ ಪ್ರಲೋಭನೆಗಳಿಂದಾಗಿ ಬಹುತೇಕ ಸೃಜನಶೀಲರು ತಳೆದ ಮೃದು ಧೋರಣೆ ಮತ್ತು ಹೊಂದಾಣಿಕೆಗಳು ತೀವ್ರತೆ ಯನ್ನು ಕಡಿಮೆ ಮಾಡಿದವು. ಹಾಗೆ ನೋಡಿದರೆ ಸತ್ತೆಯ ಭಾಗೀದಾರಿಕೆಯ ಲಭ್ಯತೆ, ೭೦-೮೦ರ ದಶಕದ ಪ್ರಯತ್ನ ಗಳಿಗೆ ಸಂದ ಫಲ. ಖಾಯಂ ಚಳವಳಿಯಲ್ಲಿಯೇ ತೊಡಗಿ ಕೊಳ್ಳಬೇಕೆಂದೇನಿಲ್ಲ, ಆದರೆ ಆಯಾ ಕಾಲಕ್ಕೆ ಒತ್ತಡದ ಗುಂಪೆಂಬಂತೆ ವರ್ತಿಸಬೇಕಾದ ನಿರಂತರತೆ ಉಳಿಯಲಿಲ್ಲ.

೩) ಈ ಪ್ರಶ್ನೆಯ ಉತ್ತರ ಎರಡನೆಯ ಉತ್ತರದಲ್ಲಿದೆ. ಸಮಗ್ರ ವಾಗಿ ಸರಕಾರವನ್ನೇ ತಿರಸ್ಕರಿಸಬೇಕಾದ ಸನ್ನಿವೇಶದಲ್ಲಿ ಹಾಗೆ ಮಾಡಬೇಕು, ಸರಕಾರವೆನ್ನುವುದು ನಮ್ಮದೇ ಆಗಿರುವಾಗ ವೈಚಾರಿಕತೆಯುಳ್ಳವರು ಹೊರನಿಂತ ಮರುಕ್ಷಣ ಗೋಸುಂಬೆ ಗಳು, ವಂಧಿಮಾಗಧರು ಆ ಸ್ಥಾನಗಳನ್ನು ಆಕ್ರಮಿಸಿಕೊಳ್ಳು ತ್ತಾರೆ. ಅವರೇ ಆ ವ್ಯವಸ್ಥೆಯಲ್ಲಿ ನಮಗೆ ಪ್ರತಿಕೂಲವಾದ ಮೌಲ್ಯಗಳನ್ನು ಬಲಪಡಿಸತೊಡಗುತ್ತ ನಮ್ಮವರಿಗೆ ಮಾರಕ ವಾಗಿ ಪರಿಣಮಿಸುತ್ತಾರೆ.

ಹೊರಗಿರುವವರು ಮಾಡಬಲ್ಲ ಕೆಲಸವನ್ನೇ ಸರಕಾರದಲ್ಲಿದ್ದ ವರೂ ಮಾಡಬಹುದು. ಅದು ಸರಕಾರದಲ್ಲಿರುವ ನಮ್ಮವರ ಆತ್ಮಸಾಕ್ಷಿಗೆ ಸಂಬಂಧಿಸಿದ ವಿಷಯ. ಈ ಕಾಲಘಟ್ಟದಲ್ಲಿ ಕೇವಲ ಅಕಾಡೆಮಿ ಪರಿಷತ್ತುಗಳನ್ನಷ್ಟೇ ಅಲ್ಲ, ಸರಕಾರವನ್ನೇ ನಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಇದೆ. ಆದರೆ ಸರಕಾರ ಮತ್ತದರ ಆಮಿಷಗಳು ನಮ್ಮವರ 'ಹರಿಶ್ಚಂದ್ರಘಾಟ್' ಆಗಬಾರದು. ಸರಕಾರದಲ್ಲಿ ಸೇರಿ ಕೊಂಡವನಲ್ಲಿ 'ಬಂಡಾಯ ಪ್ರಜ್ಞೆ' ಇರಬಾರದೆಂದೇನಿಲ್ಲ. ಇದು ಬದ್ಧತೆಯ ಪ್ರಶ್ನೆ. ಸರಕಾರದ ಅಕಾಡೆಮಿ, ಸಂಸ್ಕೃತಿ ಇಲಾಖೆಗಳನ್ನು ತಿರಸ್ಕರಿಸಿಯೇ ನಿಲ್ಲುತ್ತೇವೆನ್ನುವುದು ಕಡ್ಡಾಯವೂ ಆಗಬಾರದು.

೪) ಜಾತಿವಾದಕ್ಕೆ ಪರಿಹಾರ ಜಾತಿವಾದವೇ ಆಗಿದೆ. ಯಾರನ್ನೋ ಕೀಳೆಂದು ಹೀಯಾಳಿಸುವ ಹೀಯಾಳಿಕೆ ಮತ್ತು ಹೀಯಾಳಿಸಿಕೊಂಡವನ ನರಳುವಿಕೆಯಲ್ಲಿಯೇ ಜಾತಿವಾದ ಸಾಧಿಸುವ ಫಲಿತಾಂಶವಿದೆ. ಅವಹೇಳನಕ್ಕೊಳಗಾದ ಸಮೂಹವೇ ಆತ್ಮಬಲ ಕ್ರೋಢೀಕರಿಸಿಕೊಂಡು ಅಪಮಾನಿಸಿ ದವರೆಡೆಗೆ ತಿರಸ್ಕಾರದ ನೋಟ ಬಿಸಾಕುವಲ್ಲಿ ಪರಿಹಾರವೂ ಅಡಗಿದೆ.

ಅಪಮಾನಿತ ಸಮೂಹ ಈ ಹಾದಿಯಲ್ಲಿ ನಡೆಯುವಾಗ ಅದಕ್ಕೆ ಜಾತಿ ಪ್ರಜ್ಞೆಯೂ ಮತ್ತು ಆ ಜಾತಿಗೆ ಶ್ರೇಷ್ಠತೆ ತಂದು ಕೊಡುವ ಎಚ್ಚರವೂ ಬೇಕಾಗುತ್ತದೆ. ಇಂಡಿಯಾದ ಇವತ್ತಿನ ಜಾತಿ ಸ್ಥಿತಿಗೆ, ಈ ಜಾತಿ ಸ್ಥಿತಿ ತಂದುಕೊಡುವ ಲಾಭ ಬಲ್ಲವರು ತಂತ್ರಗಾರಿಕೆಯಿಂದ ರೂಪಿಸಿಕೊಂಡ ಶ್ರೇಷ್ಠ ಕುಲನೀತಿಯೇ ಕಾರಣವಾಗಿದೆ. ಅಪಮಾನಿತ ಜನಸಮುದಾಯಗಳಿಂದ ಬಂದವರು ಮರಳಿ ತಮ್ಮ ಜಾತಿಯ ಬೇರುಗಳಿಗೇ ಮರಳು ವುದು ಐತಿಹಾಸಿಕ ಅನಿವಾರ್ಯತೆಯಾಗಿದೆ. 'ದಲಿತ ಸಮೂಹ' ಪ್ರಜ್ಞೆಯೂ ಇರಬೇಕಾಗುತ್ತದೆ. ಒಂದೇ ಬಾಣಲೆಯಲ್ಲಿ ಬೆಂದ ರಸಪಾಕ ಆರಿದಂತೆ ಹರಳುಗಟ್ಟುವ ಸ್ಥಿತಿಯಿದು.

ಎಡಗೈ, ಬಲಗೈಯೆಂದು ಗುರುತಿಸಿಕೊಳ್ಳುವುದು, ವರ್ಗೀಕರಣ ಕೋರುವುದು ಅರ್ಧ ಶತಮಾನದ ನಂತರವೂ ಸಮರ್ಪಕ ಸೌಲಭ್ಯ ಕಾಣದ ಇನ್ನೂ ಎಷ್ಟೋ ಒಳಜಾತಿಗಳು ತಮ್ಮ ಪ್ರಾಮುಖ್ಯತೆಗಾಗಿ ಒತ್ತಾಯಿಸುವುದು ದಲಿತ ಸಮುದಾಯದ ಜೀವಂ ತಿಕೆಯ ಲಕ್ಷಣ. ಪರಿವರ್ತನೆಯ ಹಾದಿಯಲ್ಲಿ ಇದು ಸಹಜವೇ ಆಗಿದೆ. ಈ ಹಲಬಗೆಯ ಸಂಚಲನೆಯಿಂ ದಲೇ ಕೊನೆಗೊಂದು ದಿನ ರಚನಾತ್ಮಕ ಫಲಿತಾಂಶ ಕಂಡುಕೊಳ್ಳಲು ಸಾಧ್ಯ. ಈ ಎಲ್ಲ ಸಂಘರ್ಷಗಳೂ ವಿಘಟನೆಯತ್ತ ಸಾಗದೇ ಒಂದೇ ವಾಹಿನಿಯಾಗಿ ಮಾರ್ಪಡಬೇಕಿದೆ.

ಯಾವ ಬಗೆಯ ಜಾತೀಯತೆಯ ವಿರುದ್ಧ ದನಿಯೆತ್ತುವುದು ವಿರೋಧಾಭಾಸ? ಸಾಹಿತ್ಯ ದಲ್ಲಿಯೂ ಬೇರೆ, ಬೇರೆ ತೆರನಾದ ಜಾತೀಯತೆ ಗಳಿವೆ. ನಾವು ಎಚ್ಚರಗೊಳ್ಳುವ ಪೂರ್ವದಲ್ಲಿ ಸೃಷ್ಟಿ ಗೊಂಡ ಸಾಹಿತ್ಯ ನೋಡಿದರೆ ಬಹುತೇಕರೆಲ್ಲ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕ ವಾಗಿಯೋ ತಾವು ಬಂದ ವಲಯದ ಮೌಲ್ಯಗಳನ್ನೇ ಪುನರುತ್ಥಾನಗೊಳಿಸುವಲ್ಲಿ, ಅವುಗಳನ್ನು ಶಾಶ್ವತವಾ ಗಿಸುವಲ್ಲಿ ಪ್ರದರ್ಶಿಸಿದ ಜಾತೀಯತೆಯಂತೂ ನಮ್ಮದಲ್ಲ, ನಮ್ಮದೆನ್ನುವುದನ್ನೆಲ್ಲ ಕಾಲದ ಕಪಾಟಿಗೆ ತಳ್ಳಿ ಕೀಲಿ ಜಡಿದ ಅವರನ್ನೆಲ್ಲ ಖಂಡಿಸುತ್ತಲೇ, ಬಂಧಿಯಾದ ದನಿಗಳಿಗೆ ಬಿಡುಗಡೆ ನೀಡುವ ಸಹಜ ನ್ಯಾಯದ ಕ್ರಿಯೆಯನ್ನು ಜಾತೀಯತೆ ಎಂದು ಕರೆದರೆ ನಮಗೇನೂ ಆಗಬೇಕಾದ್ದಿಲ್ಲ.

೫) ಹೊಸ ದಲಿತ ಲೇಖಕರು ಸಮಸ್ಯೆಯ ಎಲ್ಲ ಮಗ್ಗಲುಗಳನ್ನು ಅರ್ಥೈಸಿಕೊಳ್ಳಬೇಕಾಗಿದೆ. ಇದು ವರೆಗೆ ದಲಿತತ್ವದ ಒಳಪದರಿನಲ್ಲಿಯೇ ಇರುವ ಅಸ ಮಾನತೆಯ ಕಟ್ಟಕಡೆಯ ತಾಣದವರೆಗೆ ಪಯಣಿಸಿ ದ್ದಾಗಿದೆ. ಈಗಿನ ಬದಲಾದ ಸನ್ನಿವೇಶ, ಜಾಗತೀ ಕರಣ, ಖಾಸಗೀಕರಣಗಳೆದುರಾಗಿ 'ದಲಿತ' ಆಶಯಗಳನ್ನು ಬಲಪಡಿಸುವ ಹೃದಯವೈಶಾಲ್ಯ ದೊಂದಿಗೆ ಮೊದಲಿಗಿಂತಲೂ ಹೆಚ್ಚಿನ ಛಲದಿಂದ ಒಗ್ಗೂಡುವುದು ಇಂದಿನ ತುರ್ತು ಅಗತ್ಯ.

ಮೂಲಭೂತವಾದಕ್ಕೆ ಪರಿಹಾರವೆಂದರೆ ಹಿಂದೂ ಮೂಲಭೂತವಾದದ ಸಂಕೋಲೆಗಳೊ ಳಗೆ ಸಿಗದೇ ಪ್ರತ್ಯೇಕವಾಗಿ ನಿಂತುಕೊಂಡೇ ಅದರ ಬಲ ಮುರಿದು ಮಣಿಸುವುದು. ಹಿಂದಿನವರಿಗಿಂತ ಹೊಸ ದಲಿತ ಲೇಖಕರ ಹೆಗಲ ಮೇಲಿನ ಹೊಣೆ ಗಾರಿಕೆ ಹೆಚ್ಚಾಗಿರುವುದನ್ನು ಅರಿತು, ಜಾಗೃತಿ ಮೂಡಿ ಸಬೇಕಾಗಿರುವಲ್ಲಿ ಹೊಸಬರು ಮಹತ್ವದ ಭೂಮಿಕೆ ನಿಭಾಯಿಸಬೇಕಾಗಿದೆ. □

ಚರ್ಚೆ

ಉಚ್ಚೆ ಬಳಿದ ದಲಿತರಿಗೆ, ಶುಚಿಯಾಗಿರಲೆಂದು ಊರಿನ ಎಲ್ಲರ ಪಾದಗಳಿಗೆ ಚಪ್ಪಲಿ ಮಾಡಿಕೊಟ್ಟು ತಾವು ಮಾತ್ರ ಬರಿಗಾಲಿನಲ್ಲಿದ್ದ ದಲಿತರಿಗೆ ಹಿಂದೂ ಮೂಲಭೂತವಾದಿಗಳು ಕೊಟ್ಟ ಕಾಣಿಕೆಗಳಿವು.

ಮಿಣುಕು ದೀಪದ ಪಾಡು

(೮೯ನೇ ಪುಟದಿಂದ)
ಗಳು ತೋಡಿರುವ ಜಾತೀಯತೆಯ ಉಸುಬಿನ ಹೊಂಡದಲ್ಲಿ ಮುಳುಗಿ ಹೋಗಿರುವಾಗ ದಲಿತರು ಜಾತಿವಾದಿಗಳಾಗುವುದರಲ್ಲಿ ಯಾವ ಅರ್ಥವೂ ಕಾಣುತ್ತಿಲ್ಲ.

೫) ಭಾರತೀಯ ಚರಿತ್ರೆಯಲ್ಲಿ ಮೂಲಭೂತವಾದ ಮತ್ತು ಕೋಮುಸಂಘರ್ಷ ನಿರಂತರ ಪ್ರಕ್ರಿಯೆ. ರಾಮ V/s ಶಂಭೂಕ, ವಾಮನ V/s ಬಲಿಚಕ್ರವರ್ತಿ, ಅರ್ಜುನ V/s ಏಕಲವ್ಯ ಮುಂತಾದವೆಲ್ಲಾ ಏನನ್ನು ತಾನೆ ಹೇಳುತ್ತವೆ? ಮೂಲಭೂತವಾದ ಮತ್ತು ರಾಜಕಾರಣ ಪರಸ್ಪರ ಸಂಲಗ್ನಗೊಂಡುಬಿಟ್ಟಿವೆ. ಮೂಲಭೂತವಾದಿಗಳು ಜನರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳಲು 'ಮತೀಯ ಹಾದಿ' ತುಳಿಯುತ್ತಾರೆ. ದೇವರು, ಧರ್ಮ, ಶಾಲೆ, ಉಡುಪು ಎಲ್ಲಕ್ಕೂ ಧರ್ಮದ ಬಣ್ಣ ಬಳಿಯಲಾಗುತ್ತಿದೆ. ದಮನಿತರ ಪ್ರತಿಭಟನೆಗಳ ದಿಕ್ಕು ತಪ್ಪಿಸಿ ದೇವರು, ಧರ್ಮಗಳ ಹೆಸರಿನಲ್ಲಿ ಕೋಮುವಾದವನ್ನು ಹುಟ್ಟಿ ಹಾಕಿರುವ ಮೂಲಭೂತವಾದಿಗಳಿಗೆ ಪುರೋಹಿತಶಾಹಿ ಸಂಸ್ಕೃತಿಯನ್ನು ದೇಶದ ಮೇಲೆ ಹೇರುವುದೇ ದೇಶಭಕ್ತಿಯ ಪವಿತ್ರ ಕರ್ಮಾಚರಣೆಯಂತೆ ಕಾಣಿಸುತ್ತಿದೆ. ಸಿಡಿ ಮದ್ದುಗಳ ಮೂಟೆಯ ಮೇಲೆ ಕುಳಿತ ಆತಂಕ ನಮಗಿದೆ. ಯಾವ ಕಡೆಯಿಂದ ಯಾರಿಂದ ಕಿಡಿ ಬೀಳುತ್ತದೆಯೋ ಹೇಳಲಾಗುವುದಿಲ್ಲ; ಸುತ್ತಲೂ ಧರ್ಮದ ಅಮಲೇರಿಸಿಕೊಂಡು ಪ್ರೇತನೃತ್ಯ ಮಾಡುತ್ತಿದ್ದಾರೆ.

ಇವೊತ್ತಿನ ಇಂಡಿಯಾದ ಸಂದರ್ಭದಲ್ಲಿ ದಲಿತ ಲೇಖಕನಾದ ನನಗೆ ಮುಸ್ಲಿಂ, ಕ್ರೈಸ್ತ ಮುಂತಾದ ಯಾವುದೇ ಮೂಲಭೂತವಾದಿಗಳು ತಂದೊಡ್ಡಬಹುದಾದ ಅಪಾಯಗಳಿಗಿಂತಲೂ ಹಿಂದೂ ಮೂಲಭೂತವಾದಿಗಳಿಂದ ಒದಗುವ ಗಂಡಾಂತರಗಳ ಬಗ್ಗೆ ಹೆಚ್ಚು ಆತಂಕ ವಿದೆ. ನಾವೆಲ್ಲ ಹಿಂದೂಗಳು ಎಂದು ಹೇಳುತ್ತಲೇ ದಲಿತರಿಗೆ ಉಚ್ಚೆ ಕುಡಿಸಿದ್ದು, ಹೇಲು ತಿನ್ನಿಸಿದ್ದು, ಸಜೀವವಾಗಿ ಸುಟ್ಟಿದ್ದು, ದಲಿತ ಹೆಣ್ಣು ಮಕ್ಕಳನ್ನು ಬೆತ್ತಲುಗೊಳಿಸಿದ್ದು, ಮಾನಭಂಗ ಮಾಡಿದ್ದು, ಸಾಮಾಜಿಕ ಬಹಿಷ್ಕಾರ ಹಾಕಿದ್ದು ಹಾಗೂ ಇವೆಲ್ಲವನ್ನೂ ಒಂದು ಧಾರ್ಮಿಕ ವ್ರತಾಚಾರಣೆಯಂತೆ ಪಾಲಿಸಿಕೊಂಡು ಬರುತ್ತಿರುವುದು ಮೂಲ ಭೂತವಾದಿ ಹಿಂದೂಗಳೇ ಹೊರತು ಮುಸ್ಲಿಮರಲ್ಲ, ಕ್ರಿಶ್ಚಿಯನ್ನರಲ್ಲ. ಊರಿನೆಲ್ಲರ ಹೇಲು

> ಇವೊತ್ತಿನ ಇಂಡಿಯಾದ ಸಂದರ್ಭದಲ್ಲಿ ದಲಿತ ಲೇಖಕನಾದ ನನಗೆ ಮುಸ್ಲಿಂ, ಕ್ರೈಸ್ತ ಮುಂತಾದ ಯಾವುದೇ ಮೂಲಭೂತವಾದಿಗಳು ತಂದೊಡ್ಡ ಬಹುದಾದ ಅಪಾಯಗಳಿಗಿಂತಲೂ ಹಿಂದೂ ಮೂಲಭೂತವಾದಿಗಳಿಂದ ಒದಗುವ ಗಂಡಾಂತರಗಳ ಬಗ್ಗೆ ಹೆಚ್ಚು ಆತಂಕ ವಿದೆ. ನಾವೆಲ್ಲ ಹಿಂದೂಗಳು ಎಂದು ಹೇಳುತ್ತಲೇ ದಲಿತರಿಗೆ ಉಚ್ಚೆ ಕುಡಿಸಿದ್ದು, ಹೇಲು ತಿನ್ನಿಸಿದ್ದು, ಸಜೀವವಾಗಿ ಸುಟ್ಟಿದ್ದು, ದಲಿತ ಹೆಣ್ಣು ಮಕ್ಕಳನ್ನು ಬೆತ್ತಲುಗೊಳಿಸಿದ್ದು, ಹಿಂದೂಗಳೇ ಹೊರತು ಬೇರೆಯವರಲ್ಲ.

ಇಂತಹ ಮೂಲಭೂತವಾದಿಗಳ ಅನಾಹುತಗಳಿಂದ ಜನಸಮುದಾಯವನ್ನು ಪಾರುಮಾಡುವಲ್ಲಿ ದಲಿತ ಲೇಖಕರು ಪ್ರಗತಿಪರ ನಿಲುವುಗಳುಳ್ಳ ತರುಣರ ತಂಡವನ್ನು ಪ್ರತಿ ತಾಲೂಕುಗಳ ಮಟ್ಟದಲ್ಲಿ ಸಂಘಟಿಸಿ, ನಿಯತವಾಗಿ ಸಂವಾದ ಹಾಗೂ ವಿಚಾರಗೋಷ್ಠಿಗಳಿಗೆ ಆಹ್ವಾನಿಸಿ ಕೋಮುವಾದದ ವಿರುದ್ಧ ಸಾಂಸ್ಕೃತಿಕ ಜನಾಂದೋಲನ ರೂಪಿಸಬೇಕು. ಇತಿಹಾಸವನ್ನು ತಿರುಚಿ ಹೇಳುತ್ತಿರುವ ಮಂದಿಗೆ ನಮ್ಮ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಕವಿಗಳು, ದಾರ್ಶನಿಕರಾದ ವ್ಯಾಸ, ವಾಲ್ಮೀಕಿ, ಕಾಳಿದಾಸ, ಶಿವ, ಅರುಂಧತಿ, ಕೈವಾರ ನಾರಾಯಣಪ್ಪ ಮಾತಂಗಿ, ಮೈಲಾರ ಲಿಂಗ, ಮಂಟೇಸ್ವಾಮಿ, ಮಲೆ ಮಾದೇಶ್ವರ, ಬಸವಣ್ಣ ಮುಂತಾದವರನ್ನು ವೈದಿಕರ ಸಂಕೋಲೆಗಳಿಂದ ವಿಮೋಚನೆಗೊಳಿಸುವ ಹಾಗೂ ಶಿಷ್ಟ ದೇವತೆಗಳು, ವೈದಿಕರ ಚಿಂತನೆ, ಸಾಹಿತ್ಯ, ತರ್ಕ, ಮೀಮಾಂಸೆ, ದರ್ಶನ, ಸಂಸ್ಕೃತಿ ಮುಂತಾದ ಎಲ್ಲಾ ವಲಯಗಳನ್ನು ಕೆದಕಿ ಬೆದಕಿ ಅವುಗಳಲ್ಲಿರುವ ಕಿರಾತಗುಣವನ್ನು ಬೆತ್ತಲು ಮಾಡಿ ಮೂಲಭೂತವಾದಿಗಳ ಬಾಯಿ ಮುಚ್ಚಿಸುವ ಕೆಲಸ ಮಾಡಬೇಕು. ಅಂತಿಮವಾಗಿ ಈ ದೇಶದ ಸಂವಿಧಾನಕ್ಕೆ ಸರಿಹೊಂದುವ ಎಲ್ಲಾ ಥರದ ಜಾತ್ಯಾತೀತ ಹಾಗೂ ವೈಜ್ಞಾನಿಕ ಚಿಂತನೆಗಳುಳ್ಳ ಬೌದ್ಧ ಧರ್ಮಕ್ಕೆ ಮತಾಂತರ ಹೊಂದುವ ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ಹಿಂದೂ ಸಾಮ್ರಾಜ್ಯಶಾಹಿಗಳನ್ನು ಅಪರಾಧಿಗಳನ್ನಾಗಿ ನಿಲ್ಲಿಸಿ ಛೀಮಾರಿ ಹಾಕುವ ಕಡೆ ಸಮಸ್ತ ಸಮುದಾಯವನ್ನು ಮುನ್ನಡೆಸುವ ಕೆಲಸಕ್ಕೆ ತೊಡಗಿಕೊಳ್ಳಬೇಕು. ದಲಿತ ಲೇಖಕರಿಂದ ಇದು ಸಾಧ್ಯವಾಗಿಬಿಟ್ಟರೆ ಎಷ್ಟೊಂದು ಚಂದವೆನಿಸುತ್ತದೆ. ಅಂಬೇಡ್ಕರ್‌ರವರು ಮಾಡಿ ತೋರಿದ್ದೂ ಇದನ್ನೇ. ಅಂಬೇಡ್ಕರ್ ಮತ್ತೊಮ್ಮೆ ನಮಗೆ ಬೆಳಕಾಗಿ ಬರಲಿ. □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗ ಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನ ಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಕಾವ್ಯ

ವಿಚಾರದ ರಥ

○ ಎಸ್. ಮಂಜುನಾಥ್

ಬೆಳ್ಳಿಗೂದಲ ಕಪ್ಪುದೇವಿ ಅವ್ವ
ಒರಟು ನೂಲಿನ ಸೀರೆಯುಟ್ಟವಳು
ಪೂಜೆ ಮಾಡುತ್ತಿರಲು ಅಂಗಳದ ತುಳಸಿಗೆ
ದಟ್ಟಿಯುಟ್ಟು ಮಗ ಓಡಿಬಂದ
ಬಚ್ಚಲಿಂದ ನೇರ ಹಾಗೇ
ನೀರು ಚೊಟ್ಟುತ್ತ ನಿಂತ
ಅವಳೆದುರು ತಟ್ಟೆಯಲಿ ಹೂವು ಕುಂಕುಮ ದೀಪ
ಮೊಗದಲ್ಲಿ ಬೆಳಗಿರುವ ನೆಮ್ಮದಿ ಅನುಕಂಪ
ಕಡ್ಡಿಗಳ ಹಚ್ಚಿ ಹರಡಿದ್ದಾಳೆ
ಅಂಗಳದ ತುಂಬ ನರುಗಂಪ

ತಲೆಗೆ ಹುಳ ಕಚ್ಚಿ ಓಡಿಬಂದಿದ್ದ ಮಗ
ಈ ಅವ್ವ ಮುಗ್ಧೆ ಅದೂ ಒಂದು ದೇವರೆಂದು
ಪೂಜೆಗೈದುಬಿಟ್ಟರೆ ಇಟ್ಟಿಗೆಯ ರಥಕ್ಕೆ?
ಒಂದು ಮಂದಿರ ಒಡೆದು ಇನ್ನೊಂದ ಕಟ್ಟುವ
ಗುರಿಯುಳ್ಳ ಹಿಂಸೆಯ ಪಥಕ್ಕೆ?
ನೆರೆಯಾತ ಕಿಲಾಡಿ ನಗುನಗುತ್ತಲೆ ಇವನ
ಅವ್ವನನ್ನೂ ಬೇರೆ ದಾಳಿಗೆಳೆವ ತಂತ್ರ
ಅದ ತಡೆಯಲೆಂದೇ ಬೇಗ ಬಂದವನಿಗೆ

ಧೂಪ ದೀಪದ ನಡುವೆ ಹೊಳೆವಳವ್ವ:
ಇವನಿಗೆಂದೂ ನೋವ ನೀಡದವಳು
ಅಪ್ಪ ತೀರಿದ ಬಳಿಕ ತಾನೇ ಮಣ್ಣಲಿ ಗೆಯ್ದು
ಮಗನನ್ನು ಸಾಕಿದವಳು
ಹಬ್ಬಹರಿದಿನ ದೇವ ದಿಂಡಿರುಗಳಿರಲಿ
ಹಿರಿಯರಿಗೆ ಎಡೆಯಿಟ್ಟು ದಿವಸದಲ್ಲೂ
ಅಡ್ಡಬೀಳೆಂದು ಅಗ್ರಹಿಸದವಳು
ಇವನ ಪಾಡಿಗೆ ಇವನ ಬಿಟ್ಟವಳು

ಈಗಲೋ ತಾನಿದ್ದೇನೆ ಇಲ್ಲಿ
ಬೆಳೆದು ನಿಂತ ಮೂರು ಕಾಸಿನ ಮನುಷ್ಯ
ಬಲು ವಿಚಾರವಂತ ನಾಕು ಜನರ ನಾಯಕ
ಹೇಳಲಿದ್ದೇನೆ ಅವ್ವನಿಗೆ- 'ಪೂಜೆ ಮಾಡದಿರು ರಥಕ್ಕೆ!'
ಲಜ್ಜೆಯಲಿ ಮೈಮೆಲ್ಲ ನಡುಗಿ
ಜೀವ ಹಿಡಿಯಾಗಿ ನೀರಿಳಿದು ಹೋಗಿ
ಬಂದವನು ಬಂದಂತೆಯೇ ಒಳಗೆ ಹೋದ
ಎದ್ದಿದ್ದ ಕೊಂಬು ಉದುರಿ

ಅಂತೆಯೇ ಬಂದ ರಥ ಮುಂದೆ ಹೋಗಿತ್ತು
ಅವ್ವ ನೋಡಿರಲಿಲ್ಲ ಅತ್ತ ತಿರುಗಿ



ಆಸೆ

ಕಥೆ

ಜಂಬೂ ದ್ವೀಪದಲ್ಲಿ ಪ್ರಚಲಿತದಲ್ಲಿರುವ ಒಂದು ಕಥೆ ಇದು.

ಭೂಮಿಯ ಸಪ್ತ ಮಹಾದ್ವೀಪಗಳಲ್ಲಿ ಜಂಬೂ ದ್ವೀಪವೂ ಒಂದು. ಇದು ಉತ್ತರದ ದೊಡ್ಡ ಪರ್ವತದ ದಕ್ಷಿಣ ಭಾಗಕ್ಕಿದೆ. ಇದರ ಸುತ್ತಲೂ ಸಮುದ್ರಗಳು ಆವರಿಸಿಕೊಂಡಿವೆ.

ಸೃಷ್ಟಿಯ ಆದಿಯಲ್ಲಿ ಒಬ್ಬ ದೊರೆಯ ಮಗ ಇದನ್ನು ಆಳುತ್ತಿದ್ದ. ಆತನು ತನ್ನ ಆಳ್ವಿಕೆಯಲ್ಲಿ ಈ ಅಖಂಡ ಜಂಬೂದ್ವೀಪವನ್ನು ಹಲವಾರು ಖಂಡಗಳನ್ನಾಗಿ ವಿಭಜಿಸಿ ಅವುಗಳ ಆಡಳಿತವನ್ನೆಲ್ಲಾ ಹದಿಮೂರು ಜನ ಸಾಮಂತ ರಾಜರಿಗೆ ಹಂಚಿಕೊಟ್ಟು ತಾನು ನಿಶ್ಚಿಂತೆಯಿಂದ ರಾಜ್ಯಭಾರ ಮಾಡುತ್ತಿದ್ದ.

ಈ ಜಂಬೂದ್ವೀಪದಲ್ಲಿ ಒಂದು ಬೃಹತ್ತಾದ ಜಂಬೂವೃಕ್ಷ ಇತ್ತು. ಈ ಮರದ ಹಣ್ಣುಗಳನ್ನು ತಿಂದವರಿಗೆ ಮುಪ್ಪು, ಸಾವು ಬರುತ್ತಿರಲಿಲ್ಲವಂತೆ.

ಆದರೆ ಈ ದೊರೆ ಅಧಿಕಾರಕ್ಕೆ ಬರುವ ಹೊತ್ತಿಗೆ ಯಾರೋ ದರೋಡೆಕಾರರು ಈ ನೇರಲೆ ಮರವನ್ನು ಕಡಿದು ಅದರ ಸಂತತಿಯನ್ನು ನಾಶಮಾಡಿದ್ದರಿಂದ ದೊರೆಗೆ ಈ ಮರದ ಹಣ್ಣನ್ನು ತಿನ್ನುವ ಅವಕಾಶ ಸಿಗಲಿಲ್ಲ.

ಆದ್ದರಿಂದ ದೊರೆಗೆ ಮುಪ್ಪನ್ನು, ಸಾವನ್ನು ಗೆಲ್ಲಲು ಸಾಧ್ಯವಾಗಲಿಲ್ಲ.

ಬಾಲ್ಯ, ಯೌವ್ವನ ಇವೆಲ್ಲವನ್ನೂ ಸಂತೃಪ್ತಿಯಾಗಿ ಕಳೆದಿದ್ದನು.

ಯೌವ್ವನದಲ್ಲಿ ಬ್ರಹ್ಮಚರ್ಯೆ ವ್ರತವನ್ನು ಚಾಚು ತಪ್ಪದೆ ಅನುಸರಿಸಿದ್ದನು. ಆದರೆ ಆಗ ಮಾಡಿದ ಅಂಗ ಸಾಧನೆಗಳನ್ನೆಲ್ಲಾ ಈಗ ಮಾಡಲು ಆಗುತ್ತಿಲ್ಲ. ಅದಕ್ಕಾಗಿ ಆತ ವಿಷಾದದಿಂದ ಕಿರುಚುತ್ತಾನೆ.

ಶರೀರ ವೃದ್ಧಾಪ್ಯದತ್ತ ದಾಪುಗಾಲು ಇಟ್ಟಿದೆ. ನಿಂತರೆ ಕೂರಲು ಆಗುತ್ತಿಲ್ಲ; ಕೂತರೆ ನಿಲ್ಲಲು ಆಗುತ್ತಿಲ್ಲ; ಮಲಗಿದರೆ ಏಳಲು ಆಗುತ್ತಿಲ್ಲ; ಎದ್ದರೆ ಮಲಗಲು ಆಗುತ್ತಿಲ್ಲ; ಶರೀರ ಹುಟ್ಟುಸಾವುಗಳ ನಡುವೆ ಗುದ್ದಾಡುತ್ತಿತ್ತು. ಆದರೆ ಬದುಕುವ ಆಸೆ ಮಾತ್ರ ತುಂಬಾ ಇತ್ತು.

ಹೀಗಿದ್ದಾಗ ದೊರೆಗೆ ಒಂದು ರಾತ್ರಿ ಅಗಾಧವಾದ ನಿದ್ದೆ ಬಂತು. ಗಾಢನಿದ್ದೆ. ನಿದ್ದೆಯಲ್ಲಿ ಒಂದು ಕನಸು ಬಿತ್ತು. ಆ ಕನಸು ಸಾಮಾನ್ಯ ಕನಸಲ್ಲ.

ದೊರೆಗೆ ಯೌವನದಲ್ಲಿ ಬೀಳುತ್ತಿದ್ದ ಕನಸುಗಳಿಗಿಂತ ಅದು ಭಿನ್ನವಾಗಿತ್ತು.

ದೊರೆಯ ದೇಹ ಆಕಾಶದ ಉದ್ದಕ್ಕೂ ಬೆಳೆದು ಭೂಮಂಡವನ್ನೆಲ್ಲಾ ಹಕ್ಕಿಯಂತೆ ಹಾರಾಡಿ ಧುತ್ತೆಂದು ನೆಲಕ್ಕೆ ಬಿದ್ದಂತೆ ಕನಸು.

ದೊರೆಗೆ ತಕ್ಷಣ ಭಯವಾಗಿ ಎಚ್ಚರವಾಗಿ ಕಣ್ಣು ಬಿಟ್ಟಾಗ ಬೆಳಗಾಗಿತ್ತು.

ಭಯ, ಭೀತಿ ದೊರೆಯನ್ನು ಆಗ ಆವರಿಸಿತ್ತು. ವಿಚಿತ್ರವಾದ ಕನಸು ಬಿದ್ದಿದ್ದರಿಂದ ದೊರೆ ಆತಂಕಗೊಳಗಾಗಿದ್ದ.



ಬೆಳಿಗ್ಗೆ ದೊರೆ ಎದ್ದೇಳಲು ಯತ್ನಿಸಿದ, ಏಳಲಾಗಲಿಲ್ಲ, ತಕ್ಷಣ ಕಾಲಾಳುಗಳನ್ನು ಕೂಗಿದ.

ಕಾಲಾಳುಗಳು ಓಡಿಬಂದರು.

ದೊರೆಗೆ ನಿಲ್ಲಲು ತ್ರಾಣವಿಲ್ಲ. ಆದರೆ ಕೊನೆಗೂ ದೊರೆ ಎದ್ದುನಿಂತ.

ತಮ್ಮ ದೊರೆಯ ಕಾಲುಗಳನ್ನು ಹಿಡಿದು ಮುಂದಕ್ಕೆ ಒಂದೊಂದು ಹೆಜ್ಜೆ ಇಡಲು ಯತ್ನಿಸಿದರು.

ಒಟ್ಟಾರೆ ಅವರ ಶ್ರಮ ಕೊನೆಗೂ ಕೈಗೂಡಿತ್ತು.

ದೊರೆ ಒಂದೊಂದೇ ಹೆಜ್ಜೆಯನ್ನು ಆನೆ ಥರ ಮುಂದಕ್ಕೆ ಇಡಲಾರಂಭಿಸಿದ,

ಕೊನೆಗೆ ಕಾಲಾಳುಗಳು ಹೋಗಿ ಸಿಂಹಾಸನದ ಮೇಲೆ ಆತನನ್ನು ಕೂರಿಸಿದರು.

ಕೂತವನೇ ದೊರೆ ಮಂತ್ರಿಗಳ ಹೆಸರು ಹಿಡಿದು ಕೂಗಿದ.

ಮಂತ್ರಿಗಳು ಓಡಿಬಂದು ನಿಂತರು.

ರಾತ್ರಿ ತನಗೆ ಬಿದ್ದ ಕನಸಿನಲ್ಲಿ ತಾನು ಆಕಾಶದಲ್ಲಿ ಹಾರಾಡುವಾಗ ಆಯತಪ್ಪಿ ದೊಪ್ಪೆಂದು ನೆಲಕ್ಕೆ ಬಿದ್ದಾಗಿನಿಂದ ತನ್ನ ದೇಹ ಎದ್ದು ನಿಲ್ಲಲೂ ಆಗದೆ, ಕೂರಲೂ ಆಗದೆ ಒದ್ದಾಡುತ್ತಿರುವ ಸ್ಥಿತಿಯನ್ನು ಮಂತ್ರಿಗೆ ವಿವರಿಸಿದ.

ಅದಕ್ಕೆ ಮಂತ್ರಿ ಮಾಟ ಮಂತ್ರ ತಾಯಿತ ಮಾಡಬೇಕೆಂದ; ಯಜ್ಞ, ದಾನ, ಧರ್ಮ ಮಾಡಬೇಕೆಂದ.

ಆದರೆ ದೊರೆ ಅದಕ್ಕೆ ತಕ್ಷಣ ಒಪ್ಪಲಿಲ್ಲ.

ದೊರೆ ತನ್ನ ಯೌವನದ ಕಾಲದಲ್ಲಿ ವಿಚಾರಶೀಲನಾಗಿದ್ದ. ಆದರೆ ವೃದ್ಧಾಪ್ಯದಲ್ಲಿ ಗೊಂದಲದ, ಆತಂಕದ, ಭಯದಲ್ಲಿದ್ದ.

ದೊರೆ ವಿಚಿತ್ರವಾದ ಸನ್ನಿವೇಶದಲ್ಲಿ ಸಿಕ್ಕಿ ಹಾಕಿಕೊಂಡು ಮಾನಸಿಕ ಯಾತನೆಯನ್ನು ಅನುಭವಿಸುತ್ತಿದ್ದ.

○ ಡಾ॥ ಕರೀಗೌಡ ಬೀಚನಹಳ್ಳಿ

ಭೌತಿಕ ಯಾತನೆಗಿಂತ ಮಾನಸಿಕ ಯಾತನೆ ತುಂಬಾ ಗಾಢವಾದ ನೋವನ್ನು ತರುತ್ತದೆ ಎಂಬುದು ದೊರೆಗೆ ವೇದ್ಯವಾಯಿತು.

ದೊರೆ ತನ್ನ ದೇಹದ ನೋವಿನಿಂದ ತುಂಬಾ ಬಳಲಿದ್ದ. ಆ ನೋವು ಅವನಿಗೆ ಈ ಜೀವನ ಸಾಕಪ್ಪ ಅನ್ನಿಸಿತ್ತು. ತನ್ನ ದೇಹವನ್ನು ರಿಪೇರಿ ಮಾಡಿ ಮೊದಲಿನ ಸ್ಥಿತಿಗೆ ತರಬಲ್ಲ ಪಂಡಿತರು ತನ್ನ ರಾಜ್ಯದಲ್ಲಿ ಯಾರಾದರೂ ಇದ್ದಾರೆಯೆ? ಎಂದು ಆಲೋಚಿಸಿದ.

ಮಾಟ,ಮಂತ್ರವೂ ಆಯಿತು. ಯಜ್ಞ ದಾನಧರ್ಮವೂ ಆಯಿತು. ಆದರೆ ಅವುಗಳಿಂದ ಏನೂ ಆಗಲಿಲ್ಲ.

ಯಾರೋ ದಕ್ಷಿಣದಲ್ಲಿ ವೈದ್ಯರು ಇದ್ದಾರೆಂದು ದೂರೆಗೆ ಸುದ್ದಿ ಕೊಟ್ಟರು.

ದೊರೆ ಮಂತ್ರಿಗೆ ಹೇಳಿ ದಕ್ಷಿಣದಿಂದ ಆಯುರ್ವೇದ ಪಂಡಿತರನ್ನು ಕರೆಸಿದ. ಆ ಪಂಡಿತರು ಬಂದು ದೊರೆಗೆ ಔಷಧಿ ಆರಂಭಿಸಿದರು. ಆ ಪಂಡಿತರ ಔಷಧಿ ದೊರೆಯ ದೇಹಕ್ಕೆ ಮಾತ್ರವಲ್ಲ ಅದು ಅವನ ಚರ್ಮಕ್ಕೂ ನಾಟಲಿಲ್ಲ.

ಆ ಅಳಲೆಕಾಯಿ ಪಂಡಿತರಿಂದ ತನ್ನ ಕಾಯಿಲೆಗೆ ಕಿಂಚಿತ್ತೂ ಪ್ರಯೋಜನವಾಗಲಿಲ್ಲವೆಂದು ದೊರೆ ಬೈದ.

ಈ ನಡುವೆ ಯಾರೋ ಒಬ್ಬ ದೊರೆಗೆ ಪಶ್ಚಿಮ ದೇಶಗಳಿಂದ ವೈದ್ಯರನ್ನು ಕರೆಸಿ ಟ್ರೀಟ್‌ಮೆಂಟ್ ತೆಗೆದುಕೊಳ್ಳಲು ಸೂಚಿಸಿದ.

ದೊರೆಯಾಜ್ಞೆಯನ್ನು ಸ್ವತಃ ಮಂತ್ರಿಯೇ ಶಿರಸಾವಹಿಸಿ ತಲೆಮೇಲೆ ಹೊತ್ತು ಪಶ್ಚಿಮ ದೇಶದತ್ತ ಹೊರಟ.

ಮಂತ್ರಿ ತಾನೇ ಹೋದರೆ ಆ ದೇಶಗಳನ್ನು ಸುತ್ತಾಡಿ ನೋಡಿದಂತಾಗುತ್ತದೆಂದು ಲೆಕ್ಕಹಾಕಿ ಹೋಗಿದ್ದ. ದೊರೆಯ ಬೊಕ್ಕಸಕ್ಕೆ ಅದರಿಂದ ಸಾಕಷ್ಟು ಖರ್ಚೂ ಬಂತು.

ಆದರೆ ಪಶ್ಚಿಮ ದೇಶದ ಡಾಕ್ಟರುಗಳು ಬರಲಿಲ್ಲ. ಮಂತ್ರಿ ಹೋದ ದಾರಿಗೆ ಸುಂಕವಿಲ್ಲದೆ ಬರಿಕೈಲಿ ಬಂದುದು ಕಂಡು ದೊರೆ ಸಿಟ್ಟಾದ.

ಅಲ್ಲಿದ್ದ ವೈದ್ಯರೆಲ್ಲಾ ತಮ್ಮ ತಾತ ಮುತ್ತಾತ ಮುದಿತಾತರ ಕಾಲದಲ್ಲೇ ಪೂರ್ವ ದೇಶಗಳಿಂದ ಅಲ್ಲಿಗೆ ಹೋದವರಂತೆ! ಹಾಗಾಗಿ ಅವರು ತಮ್ಮ ಪೂರ್ವಜರು ಬಂದ ದಾರಿಗಳನ್ನು ತಾವು ಈಗ ಮರೆತುಬಿಟ್ಟಿರುವುದಾಗಿ ಹೇಳಿದರು. ತಮ್ಮ ಪೂರ್ವದೇಶಗಳ ಬಗ್ಗೆ, ತಮ್ಮ ಬಂಧುಬಾಂಧವರ ಬಗ್ಗೆ ಈಗ ತಮಗೆ ಏನೂ ನೆನಪುಗಳು ಉಳಿದಿಲ್ಲ ಎಂದು ಹೇಳಿ ಕಳಿಸಿದ್ದರು. ಆದರೆ ದೊರೆಯೇ ತಾವು ಇರುವಲ್ಲಿಗೆ ಬಂದರೆ ರೋಗ ಗುಣಪಡಿಸುವುದಾಗಿ ಮಂತ್ರಿಗೆ ಹೇಳಿ ಕಳಿಸಿದ್ದರು.

ಮಂತ್ರಿ ಎಲ್ಲವನ್ನೂ ದೊರೆಗೆ ವಿವರಿಸಿದ.

ಹಾಗಾದರೆ ಅಲ್ಲಿಗೆ ಹೋಗುವ ಎಲ್ಲಾ ವ್ಯವಸ್ಥೆ ಮಾಡಿ ಎಂದು ದೊರೆ ಮಂತ್ರಿಗೆ ಹೇಳಿದ.

ದೊರೆಗೆ ನೋವು ದಿನೇ ದಿನೇ ದ್ವಿಗುಣವಾಗುತ್ತಿತ್ತು. ಅದರಿಂದ ದೊರೆ ಸಹನೆ ಕಳುದುಕೊಂಡು ಎಲ್ಲರ ಬಗ್ಗೆಯೂ ಅಸಹನೆಯಿಂದ ವರ್ತಿಸುವುದಕ್ಕೆ ಶುರುಮಾಡಿದ್ದ.

ಮಂತ್ರಿ ತಮ್ಮ ಪರಿವಾರ ಸಮೇತ ದೊರೆಯನ್ನು ಪಶ್ಚಿಮ ದೇಶಕ್ಕೆ ಹೊರಡಲು ವ್ಯವಸ್ತೆ ಮಾಡಿದ.

ವಿಮಾನ ಹೊರಟಿತು.

ಪಶ್ಚಿಮ ದೇಶದ ದೊಡ್ಡ ನಗರವೊಂದರಲ್ಲಿ ದೊಡ್ಡ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಲಾಯಿತು.

ದೊರೆಗೆ ಒಂದು ರಾತ್ರಿ ಆಗಾಧವಾದ ನಿದ್ದೆ ಬಂತು. ಗಾಢನಿದ್ದೆ. ನಿದ್ದೆಯಲ್ಲಿ ಒಂದು ಕನಸು ಬಿತ್ತು. ಆ ಕನಸು ಸಾಮಾನ್ಯ ಕನಸಲ್ಲ. ದೊರೆಗೆ ಯೌವನದಲ್ಲಿ ಬೀಳುತ್ತಿದ್ದ ಕನಸುಗಳಿಗಿಂತ ಅದು ಭಿನ್ನವಾಗಿತ್ತು. ದೊರೆಯ ದೇಹ ಆಕಾಶದ ಉದ್ದಕ್ಕೂ ಬೆಳೆದು ಭೂಮಂಡವನ್ನೆಲ್ಲಾ ಹಕ್ಕಿಯಂತೆ ಹಾರಾಡಿ ಧುತ್ತೆಂದು ನೆಲಕ್ಕೆ ಬಿದ್ದಂತೆ ಕನಸು. ದೊರೆಗೆ ತಕ್ಷಣ ಭಯವಾಗಿ ಎಚ್ಚರವಾಗಿ ಕಣ್ಣು ಬಿಟ್ಟಾಗ ಬೆಳಗಾಗಿತ್ತು. ಭಯ, ಭೀತಿ ದೊರೆಯನ್ನು ಆಗ ಆವರಿಸಿತ್ತು. ವಿಚಿತ್ರವಾದ ಕನಸು ಬಿದ್ದಿದ್ದರಿಂದ ದೊರೆ ಆತಂಕಗೊಳಗಾಗಿದ್ದ. ಬೆಳಿಗ್ಗೆ ದೊರೆ ಎದ್ದೇಳಲು ಯತ್ನಿಸಿದ, ಏಳಲಾಗಲಿಲ್ಲ.

ಗಗನ ಸಖಿಯರಿಂದ ಹುತ್ಪೂರ್ವಕವಾಗಿ ಬೀಳ್ಕೊಂಡು ಬಂದ ದೊರೆಗೆ ಆಸ್ಪತ್ರೆಯಲ್ಲಿ ದಾದಿಯರಿಂದ ಹಾರ್ದಿಕ ಸ್ವಾಗತ ದೊರಕಿತು.

ವೈದ್ಯರಿಂದ ದೊರೆಯ ಕಾಯಿಲೆಯ ತಪಾಸಣೆ ಶುರುವಾಯ್ತು. ಶಸ್ತ್ರಚಿಕಿತ್ಸೆಗೆ ನಿರ್ಧಾರವಾಯ್ತು.

ಪೂರ್ವದೇಶದಿಂದ ಹೋದ ಪಶ್ಚಿಮದೇಶದ ಆ ವೈದ್ಯರು ತಮ್ಮ ಕೈಬೆರಳುಗಳ ಚಳಕದಿಂದ ಶಸ್ತ್ರಚಿಕಿತ್ಸೆಯಲ್ಲಿ ನಿಷ್ಣಾತರಾಗಿದ್ದರು. ದೊರೆಗೆ ಶಸ್ತ್ರಚಿಕಿತ್ಸೆ ಮಾಡಿದರು.

ತಾವು ಇದ್ದಲ್ಲಿಗೆ ಬಂದ ತಮ್ಮ ಪೂರ್ವದೇಶದ ದೊರೆಯನ್ನು ಕಂಡು ವೈದ್ಯರೆಲ್ಲಾ ಆನಂದಪಟ್ಟರು. ದೊರೆಗೆ ತಮ್ಮ ಪೂರ್ವಜರಿಂದ ಅಪೂರ್ವವಾದ ಆರೈಕೆ, ಶುಶ್ರೂಷೆ, ಸೇವೆ ದೊರಕಿತು.

ಬಗೆಬಗೆಯ ಊಟೋಪಚಾರಗಳು, ಭಕ್ಷ್ಯ ಬೋಜನಗಳು, ಗೋಮಾಂಸ ಭಕ್ಷಣೆ, ಕುಣಿತಗಳು, ಕೇಕೆಗಳು ಎಲ್ಲವೂ ದೊರೆಗೆ ನಿರಾಂತಕವಾಗಿ ದೊರಕಿದವು.

ದೊರೆಗೆ ಕಾವ್ಯ, ಸಂಗೀತ, ನೃತ್ಯ ಮುಂತಾದ ಕಲೆಗಳಲ್ಲಿ ತೀವ್ರವಾದ ಶ್ರದ್ಧೆ, ಪ್ರೀತಿ ಇದ್ದರಿಂದ ಅವೆಲ್ಲವನ್ನೂ ಅಲ್ಲಿ ವ್ಯವಸ್ಥೆ ಮಾಡಲಾಯಿತು. ದೊರೆ ಎಲ್ಲವನ್ನು ನೂರಕ್ಕೆನೂರು ಅನುಭವಿಸಿ ಆನಂದಪಟ್ಟ.

ಒಂದು ವಾರಕ್ಕೇ ದೊರೆ ಎದ್ದು ಓಡಾಡುವಂತಾಯಿತು. ದೊರೆಗೆ ನೋವು ನಿವಾರಣೆಯಾಗಿ ನೆಮ್ಮದಿ, ಶಾಂತಿ ಮರುಕಳಿಸಿತು.

ಕಣ್ಣು ಮುಚ್ಚಿದರೂ ಧ್ಯಾನ, ಕಣ್ಣು ಬಿಟ್ಟರೂ ಧ್ಯಾನ-ಎಂಬಂತೆ ದೊರೆ ಆನೆಥರ ಪಿಳಿಪಿಳಿನೆ ಕಣ್ಣು ಬಿಟ್ಟುಕೊಂಡು ತಮ್ಮ ದೇಹದ ಯಾವುದೋ ಅಮೂರ್ತಲೋಕದಲ್ಲಿ ತೇಲಾಡುತ್ತಿದ್ದ.

-ಎರಡು-

ಆದರೆ ದೊರೆ ಒಂದುದಿನ ಆಸ್ಪತ್ರೆಯಲ್ಲಿ ಬೆಳಿಗ್ಗೆ ಎದ್ದಾಗ ಒಂದು ದೊಡ್ಡ ಆನೆಯಾಗಿ ರೂಪಾಂತರಗೊಂಡಿದ್ದ.

ಈ ಆನೆಯ ನೋಡಿ ಆಸ್ಪತ್ರೆ ಜನ, ರೋಗಿಗಳೆಲ್ಲಾ ಎದ್ದು ಗಾಬರಿಯಿಂದ ಆಚೆಗೆ ಓಡುತ್ತಿದ್ದರು.

ಆಸ್ಪತ್ರೆಯೊಳಗೆ ಯಾವುದೋ ಊರಾನೆಯೋ ಕಾಡಾನೆಯೋ ನುಗ್ಗಿ ಬಿಟ್ಟಿದೆ ಎಂದು ಕ್ಷಣದಲ್ಲಿ ಎಲ್ಲೆಲ್ಲೂ ಸುದ್ದಿಯಾಯಿತು. ಆನೆಯನ್ನು ಟಿ.ವಿ., ಇಂಟರ್‌ನೆಟ್, ಇಮೇಲ್‌ನಲ್ಲೆಲ್ಲಾ ತೋರಿಸಲಾಯಿತು. ಜನ ನಿಂತು, ಕೂತು ನೋಡುವುದಕ್ಕೆ, ಮಾತನಾಡುವುದಕ್ಕೆ ಶುರುಮಾಡಿದರು.

ವೈದ್ಯರು ಓಡಿಬಂದರು. ಇನ್ನು ಮೇಲೆ ಅದಕ್ಕೆ ವೆಟರಿನರಿ ಡಾಕ್ಟರ್ ಟ್ರೀಟ್ ಮಾಡಬೇಕು ಅಂದರು ಕೆಲವರು. ಮತ್ತೆ ಕೆಲವರು ಅದಕ್ಕೆ ಹುಚ್ಚು ಹಿಡಿದಿದೆ, ಅದನ್ನು ಗುಂಡಿಕ್ಕಿ ಕೊಲ್ಲಬೇಕು ಅಂದರು.

ಕೊನೆಗೆ ಎಲ್ಲಾ ವೈದ್ಯರು ಅದರ ಮೆದುಳನ್ನು ಪರಿಶೀಲಿಸಿದರು. ಮೆದುಳಿನಲ್ಲಿ ಕೆಲವು ನ್ಯೂನತೆಗಳು ಕಂಡುಬಂದವು.

ಅದನ್ನು ಸರಿಪಡಿಸಿ, ಇದು ಆನೆಯಲ್ಲ, ಆನೆ ರೂಪದ ದೊರೆಯೇ ಎಂದು ತಮ್ಮ ವೈದ್ಯಕೀಯ ಸಂಶೋಧನೆಗಳಿಂದ ಸಾಬೀತು ಮಾಡಿದರು.

ದೊರೆಯೇ ಮನುಷ್ಯನ ರೂಪದಿಂದ ಪ್ರಾಣಿ ರೂಪಕ್ಕೆ ಪರಿವರ್ತನೆಯಾಗಿಬಿಟ್ಟಿದೆ. ದೊರೆಯಲ್ಲಿ ಮೊದಲು ಎಲ್ಲೋ ಮೃಗೀಯ ಹಾರ್ಮೋನ್‌ಗಳಿದ್ದವು ಅನ್ನಿಸುತ್ತೆ. ಅವು ಈಗ ಈ ವಯಸ್ಸಿನಲ್ಲಿ ದೊರೆಯನ್ನು ಪ್ರಾಣಿಯನ್ನಾಗಿ ಪರಿವರ್ತಿಸಿವೆ. ಆದರೆ ಈ ಆನೆಗೆ ನಮ್ಮಲ್ಲಿ ಏನೂ ಟ್ರೀಟ್‌ಮೆಂಟ್ ಇಲ್ಲ. ಆದರೆ ಆನೆ ಆರೋಗ್ಯವಾಗಿದೆ. ತುಂಬಾ ಮುದ್ದಾಗಿದೆ. ಇದನ್ನು ಜೋಪಾನವಾಗಿ ನಿಮ್ಮ ದೇಶಕ್ಕೆ ಕರೆದೊಯ್ಯಿರಿ. ಇನ್ನು ಮೇಲೆ ನಿಮ್ಮ ದೇಶದಲ್ಲಿ ಈ ಆನೆಯೇ ನಿಮ್ಮ ದೊರೆ. ಆನೆ, ದೊರೆ ಎಲ್ಲಾ ದೈವ ಸಮಾನ ಎಂದು ನಿಮ್ಮ ಜನಕ್ಕೆ ಹೇಳಿ ನಂಬ್ತಾರೆ. ಈ ಎಲ್ಲಾ ವಿವರಗಳನ್ನು ವೈದ್ಯರು ಕೇಸ್‌ಶೀಟ್‌ನಲ್ಲಿ ಬರೆದು ಅದನ್ನು ಮಂತ್ರಿ ಕೈಗೆ ಕೊಟ್ಟರು.

ಮಂತ್ರಿ, ಆನೆ ಅರ್ಥಾತ್ ತಮ್ಮ ದೊರೆಯನ್ನು ನಡೆಸಿ ಕೊಂಡು ಆಸ್ಪತ್ರೆಯಿಂದ ಹೊರಬಿದ್ದ.

ಅಲ್ಲಿಂದ ಆನೆ ನೇರವಾಗಿ ಇದ್ದಕ್ಕಿದ್ದಂತೆ ಒಂದು ಬೃಹತ್ ಮಾರುಕಟ್ಟೆಯೊಳಕ್ಕೆ ನುಗ್ಗಿಬಿಟ್ಟಿತು. ಅಲ್ಲಿ ಸಿಕ್ಕಸಿಕ್ಕ ಪದಾರ್ಥಗಳನ್ನೆಲ್ಲಾ ಮೇಯತೊಡಗಿತು. ಕಾಳಸಂತೆಕೋರರು, ಕದೀಮರು, ಕಾಕರು, ದಲ್ಲಾಳಿಗಳು, ಮಂಡಿವ್ಯಾಪಾರಿಗಳು, ಪಿಕ್‌ಪಾಕೆಟ್‌ಕಳ್ಳರು, ಖದೀಮರು ಎಲ್ಲರೂ ಹೆದರಿ ಮಾರುಕಟ್ಟೆಯ ಅಧಿಕಾರಿಯ ಕಛೇರಿಯೊಳಗೆ ನುಗ್ಗಿದರು.

ಮಾರುಕಟ್ಟೆಯ ಅಧಿಕಾರಿಗೆ ಅವರೆಲ್ಲಾ ನುಗ್ಗಿ ಬಂದದ್ದು ಕಂಡು ಜಂಘಾಬಲವೇ ಹುದುಗಿ ಹೋಯ್ತು. ಕೊನೆಗೆ ಆತ ಅವರೆಲ್ಲರ ಅಹವಾಲನ್ನು ಸ್ವೀಕರಿಸಿ ನಿಟ್ಟುಸಿರುಬಿಟ್ಟ

ಹೊರಗೆ ಬಂದು ನೋಡಿದ. ಆನೆ ಮಾರುಕಟ್ಟೆಯನ್ನೆಲ್ಲಾ ಧ್ವಂಸ ಮಾಡಿ ತನ್ನ ಕಛೇರಿ ಕಡೆಗೆ ಬರುತ್ತಿದ್ದ. ಅವನಿಗೆ ಅದರ ಆಗಮನ ಕಂಡು ಗಾಬರಿಯಾಯ್ತು.

ಕಛೇರಿ ಸುತ್ತ ಮುತ್ತ ನೆರದಿದ್ದ ಜನವೆಲ್ಲಾ ಓಟ ಕಿತ್ತರು. ಅಧಿಕಾರಿ ಕಛೇರಿಯ ಬಾಗಿಲಲ್ಲೇ ನಿಂತ. ಆನೆ ಒಳಗೆ ಬರಲಿಲ್ಲ, ಬಾಗಿಲಲ್ಲೇ ಸೊಂಡಿಲನ್ನು ಮೇಲೆ ಕೆಳಕ್ಕೆ ಎತ್ತಿ ಅಧಿಕಾರಿಯ ತಲೆಮೇಲೆ ಇಟ್ಟಿತು.

ಅಧಿಕಾರಿಗೆ ಅದರ ಸ್ವಭಾವ ಅರ್ಥವಾಯಿತು. ಯಾಕೆಂದರೆ ಆತ ಹಿಂದೆ ಕಾಕನಕೋಟೆ ಕಾಡಿನಲ್ಲಿದ್ದ. ಆತ ತನ್ನ ಮಾರುಕಟ್ಟೆ ಕಚೇರಿ ಒಳಗೆ ಹೋಗಿ ಬರೆದ ಒಂದು ಬೋರ್ಡನ್ನು ತಂದು ಆನೆಯ ಹೊಟ್ಟೆಯ ಬಲಭಾಗದಲ್ಲಿ ಮೊಳೆ ಒಡೆದು ಅದಕ್ಕೆ ನೇತು ಹಾಕಿ ನಿರಾತಂಕವಾಗಿ ಉಸಿರಾಡಿದ.

ಆಮೇಲೆ ಆನೆ ಅಲ್ಲಿಂದ ತುಂಬಾ ಗಾಂಭೀರ್ಯದಿಂದ ಮುಂದಕ್ಕೆ ಹೆಜ್ಜೆ ಹಾಕಿತು. ಆದರೆ ಅದು ನಡೆಯುತ್ತಾ ಮೋರಿಯಲ್ಲಿ ಬಿದ್ದು ಮೊಂಡಿ ಮುರಿದುಕೊಂಡಿತು.

ಮಂತ್ರಿ ಪಶುವೈದ್ಯರಿಗೆ ತೋರಿಸಿದ. ಪಶುವೈದ್ಯರು ಒಂದು ವಾರ ಅದರ ಮೊಂಡಿ ಚಿಕಿತ್ಸೆ ಮಾಡಿ ಅದನ್ನು ರಿಪೇರಿ ಮಾಡಿದರು. ಅದು ಗುಣಮುಖವಾಗಿ ಎದ್ದು ಮುಂದಕ್ಕೆ ಪಯಣಿಸಿತು.

ಆನೆ ಹೋದ ಕಡೆಯೆಲ್ಲಾ ಮಂತ್ರಿ ಅದರ ಹಿಂದೆ ಹೋಗುವುದು ಅವನ ಕರ್ಮವಾಗಿ ಪರಿಣಮಿಸಿತ್ತು. ಆನೆ ಪಶ್ಚಿಮ ದೇಶಗಳಲ್ಲೆಲ್ಲಾ ಸುತ್ತಾಡಿ ಸಿಕ್ಕಿಸಿಕ್ಕಿದ್ದನ್ನೆಲ್ಲಾ ತಿಂದು, ಮಂಕರಿಗಟ್ಟಲೆ ಲದ್ದಿ ಹಾಕುತ್ತಾ ಕೊನೆಗೆ ಒಂದು ಪುರಾತನ ಗುಹೆಯ ಬಳಿ ಬಂದು ನಿಂತುಬಿಟ್ಟಿತು. ಮಂತ್ರಿಗೆ ಪೀಕಲಾಟ ಶುರುವಾಯಿತು.

ಅಲ್ಲಿ ಯಾರೋ ಒಬ್ಬ ಋಷಿಥರ ಇದ್ದ ಗೋಸಾಯಿ ಗುಹೆಯಿಂದ ಹೊರಬಂದು ಬಾಗಿಲಲ್ಲಿ ನಿಂತಿದ್ದ ಆನೆಯನ್ನು ದೃಷ್ಟಿಸಿದ. ಆನೆಯ ಸ್ವರೂಪ ಅವನ ಅಂತಃಶಕ್ತಿಗೆ ಅರ್ಥವಾಯಿತು. ವೇದಾಂತ, ವಿಜ್ಞಾನ, ವಿಶ್ವಾಸ ಎಲ್ಲವನ್ನು ಅಂತರ್ಗತ ಮಾಡಿಕೊಂಡಿದ್ದ ಆ ಗೋಸಾಯಿಗೆ ಆನೆಯ ಅಂತರಂಗ ಕೂಡಲೇ ಅರ್ಥವಾಯಿತು.

ಆನೆ ಆ ಗೋಸಾಯಿ ಅರ್ಥಾತ್ ಜಡೆಮುನಿಯ ನೀಳ ಗಡ್ಡವನ್ನು ನೀವಿ ಮುದ್ದಿಸಿತು. ಆಗ ಆ ಗೋಸಾಯಿ ಗುಹೆಯೊಳಗೆ ಹೋಗಿ ತನ್ನಲ್ಲಿದ್ದ ಬೋರ್ಡ್‌ನ್ನು ತಂದು ಆನೆಯ ಎಡಭಾಗದ ಹೊಟ್ಟೆಯ ಮೇಲೆ ಮೊಳೆ ಹೊಡೆದು ಅದಕ್ಕೆ ನೇತಾಕಿದ.

ಆ ಬೋರ್ಡ್ ಮೇಲೆ ಡೆಮಾಕ್ರಸಿ ಎಂದು ಬರೆದಿತ್ತು. ಆಮೇಲೆ ಆನೆ ಅಲ್ಲಿಂದ ನೇರವಾಗಿ ಏರ್‌ಪೋರ್ಟ್‌ಗೆ ತೆರಳಿತು. ಆದರೆ ಅದನ್ನು ವಿಮಾನ ಹತ್ತಿಸಲು ಮಂತ್ರಿಕೈಲಿ ಆಗಲಿಲ್ಲ. ಅದರ ಗಾತ್ರಕ್ಕೆ ಬಾಗಿಲೇ ಕಿತ್ತುಕೊಂಡು ಬಂದಿತು.

ಕೊನೆಗೆ ಮಂತ್ರಿ ಆನೆಯನ್ನು ತಮ್ಮದೇಶಕ್ಕೆ ನಡೆಸಿಕೊಂಡೇ ಹೊರಟ.

ಮಂತ್ರಿ ಮೂರುರಾತ್ರಿ ಮೂರು ಹಗಲು ಎಲ್ಲೂ ನಿಲ್ಲದೆ ಆನೆಯನ್ನು ನಡೆಸಿ ದಣಿದ.

ತಮ್ಮ ದೇಶದ ಗಡಿರೇಖೆ ಹತ್ತಿರವಾಗುತ್ತಿದ್ದಂತೆ ಆ ಆನೆಗೆ ಹತ್ತಾರು ಆನೆಗಳ ಬಲ ಬರುವುದಕ್ಕೆ

ದೊರೆ ಒಂದುದಿನ ಆಸ್ಪತ್ರೆಯಲ್ಲಿ ಬೆಳಿಗ್ಗೆ ಎದ್ದಾಗ ಒಂದು ದೊಡ್ಡ ಆನೆಯಾಗಿ ರೂಪಾಂತರಗೊಂಡಿದ್ದ. ಈ ಆನೆಯ ನೋಡಿ ಆಸ್ಪತ್ರೆ ಜನ, ರೋಗಿಗಳೆಲ್ಲಾ ಎದ್ದು ಗಾಬರಿಯಿಂದ ಆಚೆಗೆ ಓಡುತ್ತಿದ್ದರು. ಆಸ್ಪತ್ರೆಯೊಳಗೆ ಯಾವುದೋ ಊರಾನೆಯೋ ಕಾಡಾನೆಯೋ ನುಗ್ಗಿ ಬಿಟ್ಟಿದೆ ಎಂದು ಕ್ಷಣದಲ್ಲಿ ಎಲ್ಲೆಲ್ಲೂ ಸುದ್ದಿಯಾಯಿತು. ಆನೆಯನ್ನು ಟಿ.ವಿ., ಇಂಟರ್‌ನೆಟ್, ಇಮೇಲ್‌ನಲ್ಲೆಲ್ಲಾ ತೋರಿಸಲಾಯಿತು. ಜನ ನಿಂತು, ಕೂತು ನೋಡುವುದಕ್ಕೆ, ಮಾತನಾಡುವುದಕ್ಕೆ ಶುರುಮಾಡಿದರು.

ಶುರುವಾಯಿತು. ಸೊಂಡಿಲನ್ನು ನೆಲಮುಗಿಲು ಮುಟ್ಟಿಸಿ ಘೀಳಿಟ್ಟಿತು. ಮಂತ್ರಿ ಅದಕ್ಕೆ ಮದವೇರಿದೆ ಎಂದು ಭಾವಿಸಿದ. ಅದಕ್ಕೆ ಈಗ ಸಂಗಾತಿ ಬೇಕಾಗಿರಬೇಕು ಎಂದುಕೊಂಡ. ಆನೆ ಕುಣಿದು ಕುಪ್ಪಳಿಸಿತು. ಮಂತ್ರಿ ಅದರ ಕುಣಿತ, ಆರ್ಭಟಕ್ಕೆ ಕ್ಷಣ ಗಡಗಡನೆ ನಡುಗಿ ಹೋದ.

ಆನೆ ಗಡಿಯ ಎಲ್ಲೆಯನ್ನು ದಾಟಿ ತನ್ನ ದೇಶವನ್ನು ಸಂಭ್ರಮದಿಂದ ಪ್ರವೇಶಿಸಿತು. ಅಲ್ಲಿಂದ ನೇರವಾಗಿ ಹೋಗಿ ಒಂದು ಪುರಾತನ ದೇವಾಲಯದ ಬಳಿ ನಿಂತುಬಿಟ್ಟಿತು. ಹಣೆತುಂಬಾ ಕುಂಕುಮವಿಟ್ಟ ಹೆಗಲಮೇಲೆ ಕೆಂಪುಬಟ್ಟೆಯ ಶಲ್ಯ ಹಾಕಿಕೊಂಡ, ಕೊಳಕು ಕಚ್ಚೆ ಹಾಕಿದ, ಮುಳ್ಳುಹಂದಿ ರೋಮದ ಬೆತ್ತಲೆ ಎದೆ ಹೊಟ್ಟೆಯನ್ನು ಬಿಟ್ಟುಕೊಂಡ ಜನಿವಾರದಯ್ಯನ್ನೊಬ್ಬ ದೇವಸ್ಥಾನದಿಂದ ಹೊರಗೆ ಬಂದು ಬಾಗಿಲಲ್ಲಿ ನಿಂತ. ಆತ ಆನೆಕಂಡು ಕಂಗಾಲಾಗಿ ಹೋದ.

ಆನೆಯನ್ನು ಕಂಡು ಅವನಿಗೆ ಭೀತಿ ಶುರುವಾಯಿತು. ಅವನಿಗೆ ಕಚ್ಚೆಯಲ್ಲಿ ಒಂದ ಶುರುವಾಯಿತು. ಬೆರಗಾಗಿ ಅದರ ಹೊಟ್ಟೆಯ ಮೇಲೆ ಇದ್ದ ಎರಡೂ ಬೋರ್ಡ್‌ಗಳನ್ನು ಕಷ್ಟಪಟ್ಟು ಓದಿದ. ಕೊನೆಗೆ ಅದಕ್ಕೆ ಅಡ್ಡಬಿದ್ದು ಕಾಲಿಗೆ ನಮಸ್ಕಾರ ಮಾಡಿದ. ಅದರ ಹಾವಭಾವ ಅವನಿಗೆ ಅರ್ಥವಾಯಿತು. ಅದರ ಜೊತೆ ಆತ ತನ್ನ ಭಾಷೆಯಲ್ಲಿ ಏನೋ ಮಾತನಾಡಿದ. ಆನೆ ಅವನ ಕಿವಿಯಲ್ಲಿ ಉತ್ತಿಷ್ಠೋ ಉತ್ತಿಷ್ಠ ಎಂದು ಸಂಸ್ಕೃತದಲ್ಲಿ ಉವಾಚಿಸಿತು. ಆತ ದೇವಸ್ಥಾನದ ಒಳಗೆ ಹೋಗಿ ಒಂದು ಮುಖವಾಡವನ್ನು ತಂದು ಆನೆಯ ಮುಖಕ್ಕೆ ನೇತು ಹಾಕಿದ. ಅದರ ಮೇಲೆ ಅರೇಬಿಕ್, ಪರ್ಷಿಯನ್, ರಷ್ಯನ್, ಇಂಗ್ಲೀಷ್, ಸಂಸ್ಕೃತ, ಪಾಳಿ, ಚೈನಾ, ಜಪಾನ್, ಹಿಂದಿ, ಜರ್ಮನ್ ಮುಂತಾದ ಹತ್ತಾರು ಭಾಷೆಗಳಲ್ಲಿ ಧರ್ಮ ಎಂದು ಬರೆಯಲಾಗಿತ್ತು. ಆ ಮುಖವಾಡ ಹಾಕುತ್ತಿದ್ದಂತೆಯೇ ಆನೆ ಆನಂದದಿಂದ ಕುಣಿದು ಕುಪ್ಪಳಿಸಿ ಒಂದು ಪಂಜರದಷ್ಟು ಲದ್ದಿ ಹಾಕಿತು. ಅದನ್ನು ಪೂಜಾರಿ ತನ್ನಲ್ಲಿಗೆ ಬರುವ ಭಕ್ತಾದಿಗಳಿಗೆ ಪ್ರಸಾದದ ಉಂಡೆಯಾಗಿ ಕೊಡಲು ಅದು ಬೇಕಾಗುತ್ತದೆ ಎಂದು ಗುಡಿಸಿ ಜೋಪಾನವಾಗಿ ಕಾಯ್ದಿರಿಸಲು ಶಿಷ್ಯರಿಗೆ ತಿಳಿಸಿದ.

ಅಲ್ಲಿಂದ ಆನೆ ಹೆಜ್ಜೆ ಕಿತ್ತಿಟ್ಟು ಒಂದು ಪಟ್ಟಣದ ಕಡೆಗೆ ಧಾವಿಸಿತು. ಆ ಪಟ್ಟಣದಲ್ಲಿದ್ದ ಒಂದು ಮಸೀದಿಯ ಬಳಿ ಬಂದು ಆನೆ ನಿಂತಿತು. ಆಗ ಬೆಳಗಿನ ಜಾವ ಆರುಗಂಟೆ.

ಮಸೀದಿಯಿಂದ ಅಲ್ಲಾ ಹೋ ಅಕ್ಬರ್ ಎಂದು ಮೈಕ್ ಕಿರುಚುತ್ತಿತ್ತು. ಅದನ್ನು ಆಲಿಸುತ್ತ ಬೆಳಗಿನ ತನ್ನ ಸುಖನಿದ್ದೆಗೆ ಭಂಗಬಂದಂತೆ ಕಾಲು ಕೆರೆಯುತ್ತಾ ನಿಂತುಬಿಟ್ಟಿತು.

ಮಸೀದಿಯಿಂದ ಒಬ್ಬ ಮೀಸೆ ಇಲ್ಲದ, ತಲೆಮೇಲೆ ಟೋಪಿ ಧರಿಸಿ, ನೀಳ ಗಡ್ಡದಾರಿ ಹೊರಬಂದ. ಬಾಗಿಲಲ್ಲಿ ನಿಂತ ಆನೆಯ ಮುಖವಾಡ ನೋಡಿ ಅದರ ಹೊಟ್ಟೆಯಲ್ಲಿದ್ದ ಬೋರ್ಡ್‌ಗಳನ್ನು ಓದಿದ.

ಆನೆಯು ಅರ್ಧಉರ್ದು, ಅರ್ಧ ಹಿಂದಿ, ಅರ್ಧ ಪಾರ್ಸಿಯನ್ನು ಬೆರೆಸಿದ ಮಿಶ್ರಭಾಷೆಯಲ್ಲಿ ಆತನ ಕಿವಿಯಲ್ಲಿ ಏನೋ ಉಸುರಿತು. ಆತನಿಗೆ ಅದರ ಮಿಶ್ರಭಾಷೆ ಅರ್ಥವಾಯಿತು.

ಆತ ಮಸೀದಿಯೊಳಗೆ ಹೋಗಿ ಒಂದು ಮುಖವಾಡ ತಂದ. ಅದರ ಮೇಲೆ ಸೆಕ್ಯೂಲರಿಸಂ ಎಂದು ಬರೆದಿತ್ತು. ಆನೆಯ ಬಾಲಕ್ಕೆ ಅದನ್ನು ಆತ ನೇತಾಕಿ ಮಂತ್ರಿಗೆ–

ಅರೆ ನಮ್ಮದುಕು ಇದು ತಿಕವಾಡ. ಅದು ಲದ್ದಿ ಹಾಕ್ದಾಗ ಈ ತಿಕವಾಡ ಬೀಳ್ದಂಗೆ ನೋಡ್ಕೊಳ್ಳೋದು ನಿಮ್ಮದುಕು ಹೊಣೆ ಎಂದ.

ಅದು ತಿಕವಾಡ ಅಲ್ಲಯ್ಯ, ಅದು ಮುಖವಾಡ–ಎಂದು ಮಂತ್ರಿ ಅವನ ಮಾತನ್ನು ತಿದ್ದಲು ನೋಡಿದ. ಆಗ ಸಾಬಿ ಅರೆ ಅದು ತಿಕವಾಡವೂ ಮುಖವಾಡವೂ ಅರೆ ನಮ್ಗೆ ಸರಿಯಾಗಿ ತಿಳಿಯಲ್ಲ ಸಾಮಿ–ಎಂದ.

ಮಂತ್ರಿಗೆ ಅವನ ಅದ್ವಾನದ ಕನ್ನಡ ಬಳಕೆ ಕಂಡು ತಲೆ ಸಿಡಿಯುತ್ತಿತ್ತು.

ಆನೆಗೆ ಆ ಸಾಬಿಯ ತಿಕವಾಡ ಹಾಕುತ್ತಿದ್ದಂತೆಯೇ ಅದು ಜಪಾನಿನ ಕುಸ್ತಿ ಪಟು ಥರ ಕುಂಡಿಯನ್ನು ಗಲಗಲ ಕುಣಿಸಿ ಲದ್ದಿ ಹಾಕಿತು. ಮಂತ್ರಿಗೆ ಅದರ ಸೇವೆಯಿಂದ ರೋಸಿಹೋಗಿತ್ತು. ಸಹನೆ ಕಳೆದುಕೊಂಡು ಅದರ ಚಪ್ಪೆ ಮೇಲೆ ಒಮ್ಮೆ ಬಡಿದ. ಅದು ಆಗ ತುಂಬಾ ರಾಂಗಾಯ್ತು. ಮರಗಿಡಗಳನ್ನು ಉರುಳಿಸಿತು. ಕಾರುಲಾರಿಗಳು ಅದರ ಕಾಲ್ತುಳಿತಕ್ಕೆ ನುಜ್ಜುಗುಜ್ಜಾದವು. ನೂರಾರು ಜನ ಬಲಿಯಾದರು; ಜನ ಕಂಗಾಲಾಗಿ ಓಡತೊಡಗಿದರು.

ಆಮೇಲೆ ಆನೆಗೆ ತನ್ನ ಮಂತ್ರಿಯ ಬಗ್ಗೆ ಏನು ಅನ್ನಿಸಿತೋ ಏನೋ ಒಮ್ಮೆ ತನ್ನ ಸೊಂಡಿಲಿನಿಂದ ಬಾಚಿ ನೆಲಕ್ಕೆ ಒಮ್ಮೆ ಒಗೆದು ತನ್ನ ಕಾಲುಗಳಿಂದ ಒಸಕಿ ಹಾಕಿ ಮುಂದಕ್ಕೆ ಹೊರಟಿತು. ಮಂತ್ರಿಯ ಸಾವು ಮಸೀದಿಯದೋ ಆನೆಯದೋ ಎಂದು ಪತ್ರಕರ್ತರಲ್ಲಿ ಗುಮಾನಿ ಶುರುವಾಯಿತು.

ಅದು ಈಗ ಮಾವುತನಿಲ್ಲದ, ಮಂತ್ರಿಯಿಲ್ಲದ ಮದವೇರಿದ ಗಜವಾಗಿತ್ತು. ಅದನ್ನು ಹಿಡಿದು ಬಗ್ಗಿಸುವವರು ದೇಶದಲ್ಲಿ ಎಲ್ಲಿದ್ದಾರೋ? ಎಂಬ ಮಾತು ಎಲ್ಲಕಡೆ ಕೇಳಿ ಬರುತ್ತಿತ್ತು.

-ಮೂರು-

ಮದವೇರಿದ ಆನೆ ಅಶ್ವಮೇಧಯಾಗದ ಕುದುರೆ ಥರ ದೇಶದ ಉದ್ದಗಲಕ್ಕೂ ಯದ್ವಾತದ್ವಾ ಲದ್ದಿ ಹಾಕುತ್ತ ತನ್ನ ಕಿವಿಗಳಿಂದ ಗಾಳಿಯನ್ನು ಬೀಸಿಕೊಳ್ಳುತ್ತ ಹೊರಟು ಬಿಟ್ಟಿದ್ದನ್ನು ಕಂಡು ಸೇನಾಧಿಪತಿ ಅದನ್ನು ಹಿಡಿದು ಕಂಟ್ರೋಲ್ ಮಾಡಿದವರಿಗೆ ದೇಶದಲ್ಲಿ ಅರ್ಧರಾಜ್ಯವನ್ನು ಕೊಡುವುದಾಗಿ ಶಾಸನ ಹೊರಡಿಸಿದ.

ನಮ್ಮ ದೊರೆ ಈಗ ಆನೆಯಾಗಿ ಬದಲಾಗಿ ಬಿಟ್ಟಿದೆ. ಈ ಆನೆ ನಮ್ಮ ಮಂತ್ರಿಯನ್ನೇ ಬಲಿತೆಗೆದುಕೊಂಡಿದೆ ಎಂದು ಸುದ್ದಿ ಇದೆ. ಇದರ ಬಗ್ಗೆ ತನಿಖೆ ಆಗುತ್ತಿದೆ. ಆದರೆ ಈಗ ಅನಿವಾರ್ಯವಾಗಿ ಸೇನಾಧಿಪತಿ ದೇಶವನ್ನು ಆಳಬೇಕಾದ ಪರಿಸ್ಥಿತಿ ಬಂದಿದೆ. ಮಿಲ್ಟ್ರಿರೂಲ್ ಹತ್ತಿರವಾಗುತ್ತಿದೆ. ಅಷ್ಟರಲ್ಲಿ ಈ ಆನೆಯನ್ನು ಹಿಡಿದು ಪಳಗಿಸಿದರೆ ಸರಿ. ಇಲ್ಲದಿದ್ದರೆ ಅದರಿಂದ ಇಡೀ ದೇಶಕ್ಕೇ ಅಪಾಯವಿದೆ. ಈ ಆನೆ ಈಗ ಇಡೀ ದೇಶದ ತುಂಬೆಲ್ಲಾ ಸಂಚರಿಸುತ್ತಿದೆ. ಒಮ್ಮೆ ಸಮುದ್ರದಲ್ಲಿ ಈಜಾಡುತ್ತಿದ್ದರೆ, ಒಮ್ಮೆ ನದಿ ದಂಡೆಯಲ್ಲಿ ಮಲಗಿರುತ್ತದೆ. ಒಮ್ಮೆ ಬೆಟ್ಟದ ಮೇಲೆ ಮಲಗಿ ವಿಶ್ರಾಂತಿ ಪಡೆಯುತ್ತಿದ್ದರೆ, ಒಮ್ಮೆ ಸಮುದ್ರದ ಬೀಚ್‌ನಲ್ಲಿ ತಂಗಾಳಿ ಸೇವನೆ ಮಾಡುತ್ತ ತಿರುಗಾಡುತ್ತಿರುತ್ತದೆ. ಇದರ ಚಹರೆ ಹೀಗಿದೆ; ಅದರ ಮೈಮೇಲೆ ಇಂತಿಂಥ ಬೋರ್ಡ್‌ಗಳಿವೆ. ಅದರ ಎತ್ತರ ದಪ್ಪ ನಡಿಗೆ ಹೀಗಿದೆ; ತಲೆಯ ಮೇಲೆ ಗುರುತು ಇದೆ; ಮೊಂಡಿಯಲ್ಲಿ ಗಾಯದ ಕಲೆಗಳಿವೆ; ಸೇನಾಧಿಪತಿ ದೇಶದ ಜನತೆಗೆ ಹೀಗೆ ಅದರ ಚಹರೆಯನ್ನು ಜಾಹೀರು ಪಡಿಸಿದ.

ದೇಶದ ಜನತೆಗೆ ಈ ಆನೆ ಯಾವಾಗ ಬರುತ್ತೆ? ಎಲ್ಲಿಗೆ ಬರುತ್ತೆ? ಎಷ್ಟೊತ್ತಿಗೆ ಬರುತ್ತೆ? ಎಂಬ ಭೀತಿ ಶುರುವಾಯಿತು. ಅದು ಜನಗಳ ನಿದ್ದೆಯಲೆಲ್ಲಾ ಬರುವುದಕ್ಕೆ ಶುರುವಾಯಿತು. ಮಕ್ಕಳು ಮರಿಗಳೆಲ್ಲಾ ರಾತ್ರಿ ನಿದ್ದೆಯಲ್ಲಿ ಬೆದರಿ ಬೆಚ್ಚಿ ಕೂಗಿಕೊಳ್ಳುವುದಕ್ಕೆ ಶುರುಮಾಡಿದವು. ಹಳ್ಳಿಯಲ್ಲಿ ಹೆಂಗಸರು ಮುಸ್ಸಂಜೆಯಾಗುವುದೇ ತಡ ಊರಿನ ಹೊರಗೆ ಒಂದ, ಎರಡ ಮಾಡುವುದಕ್ಕೂ ಹೋಗುವುದಕ್ಕೆ ಹೆದರಿ ಕೂತರು. ಗಂಡಸರು ಸಂಜೆಗೆ ಮುಂಚೆ ಬೇಗ ಬೇಗ ಗಡಂಗುಗಳಿಂದ ಒಂದೆರಡು ಡರಾಮು ಶರಾಪು ಏರಿಸಿ ಮನೆಗೆ ಸೇರಿಕೊಳ್ಳಲು ಶುರುಮಾಡಿದರು.

ಬುದ್ಧಿಜೀವಿಗಳು, ರಾಜಕಾರಣಿಗಳು, ಸಾಹಿತಿಗಳು, ರೈತರು, ಕಲಾವಿದರು ಎಲ್ಲಾ ಒಂದೆಡೆ ಸೇರಿ ಅದನ್ನು ಹಿಡಿದು ಕಟ್ಟುವುದು ಹೇಗೆ? ಅದರ ಜೊತೆ ಮಾತನಾಡುವುದು ಹೇಗೆ? ಅದರ ಜೊತೆ ಹೋರಾಡಿ ಅದರ ಸೊಕ್ಕನ್ನು, ಗರ್ವವನ್ನು ಅಡಗಿಸುವುದು ಹೇಗೆ? ಎಂದೆಲ್ಲಾ ಯೋಚಿಸತೊಡಗಿದರು. ದೇಶದ ತುಂಬಾ ಅನೇಕ ಪ್ರತಿಭಟನೆಯ ಸಂಘಟನೆಗಳು ರಾತ್ರೋರಾತ್ರಿ ಹುಟ್ಟಿಕೊಂಡವು. ಅವು ತಮ್ಮ ಹೋರಾಟಕ್ಕೆ ಎಲ್ಲೆಲ್ಲಿಂದಲೋ ಹಣಕ್ಕೆ ಕೈ ಬಾಯಿ ತೆರೆದು

ಆನೆ ಗಡಿಯ ಎಲ್ಲೆಯನ್ನು ದಾಟಿ ತನ್ನ ದೇಶವನ್ನು ಸಂಭ್ರಮದಿಂದ ಪ್ರವೇಶಿಸಿತು. ಅಲ್ಲಿಂದ ನೇರವಾಗಿ ಹೋಗಿ ಒಂದು ಪುರಾತನ ದೇವಾಲಯದ ಬಳಿ ನಿಂತುಬಿಟ್ಟಿತು. ಹಣೆತುಂಬಾ ಕುಂಕಮವಿಟ್ಟ, ಹೆಗಲಮೇಲೆ ಕೆಂಪುಬಟ್ಟೆಯ ಶಲ್ಯ ಹಾಕಿಕೊಂಡ, ಕೊಳಕು ಕಚ್ಚೆ ಹಾಕಿದ, ಮುಳ್ಳುಹಂದಿ ರೋಮದ ಬೆತ್ತಲೆ ಎದೆ ಹೊಟ್ಟೆಯನ್ನು ಬಿಟ್ಟುಕೊಂಡ ಜನಿವಾರದಯ್ಯನೊಬ್ಬ ದೇವಸ್ಥಾನದಿಂದ ಹೊರಗೆ ಬಂದು ಬಾಗಿಲಲ್ಲಿ ನಿಂತ. ಆತ ಆನೆಕಂಡು ಕಂಗಾಲಾಗಿ ಹೋದ.

ಓಡಾಡತೊಡಗಿದವು. ನಿಂತಲ್ಲಿ ಕೂತಲ್ಲಿ ಜನ ಅದರ ಬಗ್ಗೆ ಚರ್ಚಿಸತೊಡಗಿದರು.

ಮದವೇರಿದ ಆನೆಯ ಆಗಮನವನ್ನು ದೇಶದ ಜನತೆ ಕುತೂಹಲ, ಭಯದಿಂದ ನೋಡಲು ಕಾತರದಿಂದ ಕಾಯುತ್ತಿತ್ತು.

ಆನೆಯು ಅಂಗ ವಂಗ ಕಳಿಂಗ ಸೌರಾಷ್ಟ್ರ ಆಂಧ್ರ ಮಲಯ ಕಾಂಬೋಜ ಮಗದ ಗಾಂಧಾರ ಉತ್ಕಲ ಕೇರಳ ಮುಂತಾದ ಚಪ್ಪನ್ನಾರು ದೇಶಗಳನ್ನೆಲ್ಲಾ ಸುತ್ತಾಡಿ ಕೊನೆಗೆ ಕರ್ನಾಟ ದೇಶಕ್ಕೆ ಆಗಮಿಸಿತು.

ಸೇನಾಧಿಪತಿ ಅದನ್ನು ದೇಶದಲ್ಲಿ ಯಾರೂ ಬಗ್ಗಿಸಲು ಸಾಧ್ಯವಾಗದಿದ್ದರೆ ಕೊನೆಗೆ ಮಿಲ್ಟ್ರಿಗೆ ಹೇಳಿ ಗುಂಡಿಕ್ಕಿ ಕೊಲ್ಲಿಸುವುದೇ ಸೂಕ್ತ ಎಂದು ತನ್ನ ಪರಿವಾರದ ಜೊತೆ ಸಮಾಲೋಚನೆ ಮಾಡುತ್ತಿದ್ದ.

ಕರ್ನಾಟ ದೇಶಕ್ಕೆ ಪ್ರವೇಶಿಸಿದ ಈ ಮದವೇರಿದ ಆನೆಯನ್ನು ಮೊದಲು ರಾಜಕಾರಣಿಗಳು, ಬಂಡವಾಳಶಾಹಿಗಳು, ವಿಜ್ಞಾನಿಗಳು ಸ್ವಾಗತಿಸಿದರು. ಅವರ ಸ್ವಾಗತಕ್ಕೆ ಆನೆ ಅವರ ನಡುಮನೆಯವರೆಗೂ ಪ್ರವೇಶಿಸಿ ಮಲಗಿ ನಿದ್ದೆ ಮಾಡಿ ಲದ್ದಿ ಹಾಕಿ ಬರುವುದಕ್ಕೆ ಶುರುಮಾಡಿತು. ಈ ಜನ ಆನೆಯನ್ನು ತಮ್ಮ ಕೋಣೆಯೊಳಕ್ಕೆ ಬಿಟ್ಟುಕೊಂಡು ಹೊಗಳಿ ಅಟ್ಟಕ್ಕೇರಿಸಿ ಅದಕ್ಕೆ ಸನ್ಮಾನ ಮೆರವಣಿಗೆ ಮಾಡುವುದಕ್ಕೆ ಶುರುಮಾಡಿದರು.

ಅದರಿಂದ ಆನೆ ಮತ್ತಷ್ಟು ಮದವೇರಿ ಕಣ್ಣು ಬಿಡಲಾರದ ಸ್ಥಿತಿಗೆ ಬಂದು ಮುಟ್ಟಿಬಿಟ್ಟಿತು.

ಇದನ್ನು ಕಂಡು ಸಾಹಿತಿಗಳು, ಕಲಾವಿದರು, ರಾಜಕಾರಣಿಗಳ, ದಲ್ಲಾಳಿಗಳ, ಬಂಡವಾಳಶಾಹಿಗಳ, ತಲೆಹಿಡುಕರ, ಕಾಳಸಂತೆಕೋರರ ವಿರುದ್ಧ ದಂಗೆ ಎದ್ದರು. ಪತ್ರಿಕೆಗಳಲ್ಲಿ ಬರೆದು ಅವರ ಸ್ವಾಗತ ಕಾರ್ಯಕ್ರಮವನ್ನು ಖಂಡಿಸಿದರು. ಆಮೇಲೆ ಆನೆ ಈ ಸಾಹಿತಿಗಳ, ಕಲಾವಿದರ, ಬುದ್ಧಿಜೀವಿಗಳ ಕಡೆಗೆ ರೋಷದಿಂದ ತಿರುಗಿತು. ಅವರನ್ನು ಅದು ಮಾತು ಕತೆಗೆ ಆಹ್ವಾನಿಸಿತು. ತನ್ನೊಡನೆ ಸಂವಾದಕ್ಕೆ ಕರೆಕೊಟ್ಟಿತು. ಆದರೆ ಅವರು ಅದರ ಜೊತೆ ಸಂವಾದಕ್ಕೆ ಇಳಿಯಲು ಇಷ್ಟಪಡಲಿಲ್ಲ. ಮುಖವಾಡ, ತಿಕವಾಡ ಹಾಕಿಕೊಂಡು ಸೋಗು ಹಾಕುತ್ತಿರುವ ಆ ಆನೆಯ ಜೊತೆ ನಮ್ಮದು ಎಂಥ ಸಂವಾದ? ಎಂಥ ಮಾತುಕತೆ? ಎಂದು ಅವರೆಲ್ಲಾ ಅದರ ಆಹ್ವಾನವನ್ನು ತಿರಸ್ಕರಿಸಿದರು.

ಅದರಿಂದ ಆನೆಗೆ ಮತ್ತಷ್ಟು ಸಿಟ್ಟು ಬಂದು ಅದು ಕೆರಳಿತು. ಅದು ನಗರದಲ್ಲೆಲ್ಲಾ ಓಡಾಡುತ್ತಾ ಜನಗಳಿಗೆ ಕಿರುಕುಳ ಕೊಡತೊಡಗಿತು. ಅದರಿಂದ ನಗರದ ಜನ ಭಯ ಭೀತಿಗೆ ಒಳಗಾಗಿ ನಗರದ ಬೀದಿಯಲ್ಲಿ ಓಡಾಡುವುದನ್ನೇ ಬಿಟ್ಟರು. ಸಾಹಿತಿಗಳು ಮತ್ತು ಕಲಾವಿದರು ಮೊದಲೇ ಪುಕ್ಕಲರು. ಬುದ್ಧಿ ಜೀವಿಗಳು ಇನ್ನೂ ಪುಕ್ಕಲರು. ಆನೆಗೇ ಅವರ ಸಹವಾಸ ಇನ್ನು ಸಾಕು ಅನ್ನಿಸಿತು.

ಹೀಗೇ ಆನೆ ಸ್ವಲ್ಪದಿನ ನಗರದ ಉದ್ಯಾನವನ, ಸ್ಮಶಾನ, ಮೈದಾನ ಎಲ್ಲಂದರಲ್ಲಿ ಸ್ವೇಚ್ಛೆಯಾಗಿ, ಸ್ವಚ್ಛಂದವಾಗಿ ವಿಹರಿಸುತ್ತಿತ್ತು.

ಸೇನಾಧಿಪತಿಗೆ ಅದರ ವರ್ತನೆ ಕಂಡು ಅದನ್ನು ಹೆದರಿಸಲಾರದ ಜನಗಳ ಕಂಡು ದಿನೇ ದಿನೇ ರೋಸಿ ಹೋಯ್ತು.

ಆದರೆ ಆನೆ ಒಂದು ದಿನ ಇದ್ದಕ್ಕಿದ್ದಂತೆ ಕರ್ನಾಟ ದೇಶದ ಯಾವುದೋ ಒಂದು ಹಳ್ಳಿಯ ರೈತನ ಹೊಲದತ್ತ ಹೊರಟು ಬಿಟ್ಟಿತು. ಟಿವಿಯಲ್ಲೋ, ರೇಡಿಯೋದಲ್ಲೋ ಅದರ ಸುದ್ದಿ ಆ ರೈತನ ಕಣ್ಣಿಗೆ, ಕಿವಿಗೆ ಬಿದ್ದಿತ್ತು. ತನ್ನ ಅವಲಂಬಿಸಿದ ಮನೆಯವರೆಲ್ಲಾ ವರ್ಷದಲ್ಲಿ ಆರು ತಿಂಗಳ ದುಡಿಮೆ ಹುಡುಕಿಕೊಂಡು ದೇಶಾಂತರ ಹೋಗಿದ್ದವರು ಮಳೆಗಾಲ ಸಮೀಪಿಸಿದ್ದರಿಂದ ಮಾಮೂಲಿನಂತೆ ಇನ್ನೇನು ಬರಲಿದ್ದರು.

ಮುಂಗಾರು ಮಳೆ ಬಿದ್ದು ಉಳಲು ಹೊಲ ಹದವಾಗಿತ್ತು. ಉಳಲು ಎತ್ತುಗಳಿಲ್ಲದೆ ಆ ರೈತ ನೆಲಕ್ಕೆ ಕೈಚೆಲ್ಲಿ ಕೂತಿದ್ದ. ಬಿತ್ತನೆ ಮಾಡಿದರೆ ಉತ್ತಮ ಬೆಳೆ ಬರುವಂತಹ ಕಪ್ಪು ಮಣ್ಣಿನ ಭೂಮಿ.

ರೈತ ಹೋದವರ್ಷ ಕುಲಾಂತರಿ ಹತ್ತಿಯನ್ನು ತನ್ನ ಹೊಲಕ್ಕೆ ಬಿತ್ತನೆ ಮಾಡಿದ್ದ. ಹತ್ತಿಯ ಗಿಡಗಳು ತುಂಬಾ ಸೊಂಪಾಗಿ ಬೆಳೆದಿದ್ದವು. ಆದರೆ ಹಗಲಿನಲ್ಲಿಯೇ ಎಲ್ಲಿಂದಲೋ ಬಂದ ಪರಿಸರವಾದಿಗಳ

ತಂಡ ಅದನ್ನು ಬೇರು ಸಹಿತ ಕಿತ್ತು ಬಿಸಾಡಿ ಹೋಗಿದ್ದರು. ಆ ಘಟನೆಯು ರೈತನ ನೆನಪಿನಿಂದ ಇನ್ನೂ ಮಾಸಿರಲಿಲ್ಲ. ಇದರಿಂದ ರೈತ ತುಂಬಾ ದುಗುಡದಲ್ಲಿದ್ದ. ಆಗ ಆತ ಮತ್ತೆ ಕುಲಾಂತರಿ ಬೆಳೆಗಳನ್ನು ಬೆಳೆಯಲು ಛಲತೊಟ್ಟಿದ್ದ.

ಥರಾವರಿ ಬಣ್ಣಗಳ ಕುಲಾಂತರಿ ಹತ್ತಿಯ ತಳಿಯು ಅವನಲ್ಲಿ ಆಕರ್ಷಣೆ ಹುಟ್ಟಿಸಿತ್ತು. ಅದಕ್ಕೆ ಯಾವುದೇ ರಾಸಾಯನಿಕ ಗೊಬ್ಬರವಾಗಲಿ, ಸಾಂಪ್ರದಾಯಿಕ ಬೆಳೆಗಳಿಗೆ ಬೇಕಾದ ಔಷಧಿಗಳಾಗಲಿ ಬೇಕಿಲ್ಲ ಎಂದು ಕೃಷಿ ವಿಜ್ಞಾನಿಗಳು ಅವನಿಗೆ ಹೇಳಿದ್ದರು. ಬಣ್ಣಗಳ ಹತ್ತಿಗೆ ಯಾವುದೇ ರೋಗ ಬಂದರೂ ಅದಕ್ಕೆ ತಡೆದುಕೊಳ್ಳುವ ನಿರೋಧಕ ಶಕ್ತಿಯನ್ನು ಅದರ ಬೀಜದಲ್ಲಿಯೇ ನಿವಾರಿಸಿದ್ದಾರೆಂಬುದನ್ನು ಆ ವಿಜ್ಞಾನಿಗಳಿಂದ ಕೇಳಿ ತಿಳಿದಿದ್ದ. ಮನುಕುಲದ ಉದ್ಧಾರಕ್ಕೆ ಈ ಹತ್ತಿ ಒಂದು ವರ ಕೇಳಿದ್ದ. ಅದನ್ನು ಆತ ಬೆಳೆದು ಕಣ್ಣಾರೆ ನೋಡುವುದರಲ್ಲಿ ಕನಸು ಕಾಣುತ್ತಿದ್ದ.

ಆದರೆ ಅದೇ ವೇಳೆಗೆ ಸರಿಯಾಗಿ ನಗರದಿಂದ ಹಳ್ಳಿಗೆ ಬಂದ ಆ ಆನೆ ನೇರವಾಗಿ ರೈತನ ಕುಲಾಂತರಿ ಹತ್ತಿ ಕಿತ್ತಾಕಿದ್ದ ಹೊಲದಲ್ಲಿ ಬಂದು ಮಲಗಿಬಿಟ್ಟಿತ್ತು. ರೈತ ಸದ್ದಿ ತಿಳಿದು ಗಾಬರಿ ಯಿಂದ ಹೊಲದ ಹತ್ತಿರ ಓಡೋಡಿ ಬಂದ.

ತನ್ನ ಹೊಲದಲ್ಲಿ ಎಲ್ಲಿಂದಲೋ ಬಂದು ಮಲಗಿದ್ದ ಆನೆ ಏಳುವಂತೆ ಕಾಣಲಿಲ್ಲ. ದೇಶದಲ್ಲೆಲ್ಲಾ ಸುತ್ತಾಡಿ ತುಂಬಾ ದಣಿದಿದ್ದ ಮುದಿ ಆನೆ ಅದು. ಯಾವುದೋ ಸಾಮ್ರಾಜ್ಯದ ಮುದಿಚಕ್ರವರ್ತಿಯಂತೆ ಅದು ನಿರಾಂತಕವಾಗಿ ಮಲಗಿತ್ತು.

ರೈತ ಅದರ ಮೈಮೇಲಿದ್ದ ಬೋರ್ಡು, ಮುಖವಾಡಗಳನ್ನೆಲ್ಲಾ ಕಿತ್ತಾಕಿದ. ಅದರ ಮೈನೆಲ್ಲಾ ಸವರಿ ಮುದ್ದಿಸಿದ. ಆನೆ ಎದ್ದು ನಿಂತಿತು. ನೋಡಿದರೆ ಗಂಡಾನೆ! ಅದರ ಬೆನ್ನ ಮೇಲೆ ಹತ್ತಿ ಕೂತ. ಅದು ಅಲ್ಲಾಡಲಿಲ್ಲ. ಕೂಡಲೇ ಅವನು ಕನಸುಕಂಡ. ತನ್ನ ಕನಸಿನಲ್ಲಿ ತನ್ನ ಹೊಲದಲ್ಲಿ ಥರಾವರಿ ಬಣ್ಣದ ಹತ್ತಿಯನ್ನು ಬೆಳೆದಂತೆ. ಆ ಸುಂದರ ಬಣ್ಣಬಣ್ಣದ ಹತ್ತಿಯನ್ನು ನೋಡಲು ಜನ ಸಾಲುಸಾಲು ಬಂದಂತೆ.....

....ಊರಿಗೆ ಬಂದ ಆನೆಯನ್ನು ನೋಡಲು ಜನ ಬರತೊಡಗಿದರು. ರೈತ ತನ್ನ ಮನೆಯಲ್ಲಿದ್ದ ಕಬ್ಬಿಣದ ನೇಗಿಲನ್ನು ಆನೆಗೆ ಕಟ್ಟಿ ಹೊಲ ಉಳ ತೊಡಗಿದ. ಹೊಲದಲ್ಲಿ ಉತ್ತ ಕಪ್ಪು ಮಣ್ಣಿನ ಹೆಂಟೆ ದೊಡ್ಡ ದೊಡ್ಡ ಬಂಡೆಥರ ಕಾಣತೊಡಗಿತು. ಅವನು ಹೇಳಿದಂತೆಲ್ಲಾ ಆನೆ ಕೇಳತೊಡಗಿತು. ಕೊನೆಗೂ ಆನೆಯನ್ನು ಪಳಗಿಸಿದ ಆ ರೈತನ ಹುಡುಕಿ ಕೊಂಡು ಕರೆತರಲು ಸೇನಾಧಿಪತಿ ನಿಟ್ಟುಸಿರುಬಿಟ್ಟು ಸೈನಿಕರನ್ನು ಕಳಿಸಿದ.

ಸೇನಾಧಿಪತಿ ರೈತನಿಗೆ ಅರ್ಧರಾಜ್ಯ ಬಿಟ್ಟು ಕೊಡುವುದು ಬಾಕಿ ಉಳಿದಿತ್ತು. □

ಕಾವ್ಯ

ಗುರುವಿನೆಡೆಗೆ

'ಗುರುವಿನ ಗುಲಾಮನಾಗುವ ತನಕ
ದೊರೆಯದಣ್ಣ ಮುಕುತಿ'

ಗುರುವಲ್ಲದ ಗುರು ಬಂದು
ಭಿಕ್ಷೆ ನೀಡಲು ಬಂದ
ಕೊಳೆತು ಜೋಲುವ ಕರುಳು
ಹುಳಿ ಬಂದ ಹೆಂಡ
ಮೊಗೆ ಮೊಗೆದು ನೀಡ ಬಂದ
ನಡೆ ಕಪ್ಪಡಿಗೆ ಜಾತ್ರೆಗೆ ಎಂದ.



ಅಲ್ಲಮನ ಕೂಸು ನಾನು
ಮೊಲೆ ಮುಡಿ ಹಂಗು ಬಿಟ್ಟವಳು
ರುಂಡವಿಲ್ಲದ ಆ ಗುರು
ನೆಳಲು ಬೆಳಕಿನ ಆ ವಿಸ್ತಾರದೆಡೆಗೆ
ತೋರು ಬೆರಳು ತೋರಿದ.

ಅಗಣಿತ ತಾರಾ ನಕ್ಷತ್ರಗಳ
ಗೇಲಿ ಮಾಡುತ್ತಲೇ
ಮರೆತು ಹೋದ ಮಾಂಸ ಮಮಕಾರಗಳ
ಒಳಗೆ ಹಿಮಗಟ್ಟಿದ ಮಾತುಗಳ ಹೊರಗೆಳೆದ.

ಎಲ್ಲೋ ಗುಹೆ ಪರ್ವತಗಳಲ್ಲಿ
ದಿಕ್ಕುಗಾಣೆ ಚಡಪಡಿಸಿ ಅಲೆವ
ಒಂಟಿ ಯಾತ್ರಿಕನೇ
ಬೇರು ಬಿಡುವ ಮುನ್ನವೇ
ಹಾವಾಗುವ ಕನಸಿನಲಿ ಕುದಿದವನೇ
ತೋರು ನನಗೆ ತರ್ಕ ಮೀರಿದ
ಆ ವಾಸನಾ ಜಗತ್ತು
ಗುರುವಿನ ಗುಲಾಮನಾಗುವ ತನಕ
ದೊರೆಯದಣ್ಣ ಮುಕುತಿ ಎಂಬ ಮಾತ
ಮರೆಸಿ ಕೊಂಡೊಯ್ಯು ನನ್ನ ಆ ಬೆಳಕಿನ ಜಗಕ್ಕೆ.

○ ಡಾ॥ ಎಚ್.ಎಲ್. ಪುಷ್ಪ

ಮಣ್ಣಿನ ಗೆಜ್ಜೆಯ ಕಟ್ಟಿಕೊಂಡ ಮೌಖಿಕ ಮಹಾದೇವ

ನಾನು ಗೊತ್ತಲ್ಲ
ಮಣ್ಣಿನ ಗೆಜ್ಜೆ ಕಟ್ಟಿಕೊಂಡು
ನೆಲ ಗುದ್ದಿ ನೀರು ತೆಗೆದವನು

ನಾನು ಗೊತ್ತಲ್ಲ
ನಿಮ್ಮ ಹಿತ್ತಲ ಬಾಗಿಲಲ್ಲಿ
ಮೆಟ್ಟಿಲು ಕೆಳಗೆ ನಿಂತು ಉಗುರು
ಕೂದಲು ಕಲಸಿದ ಕೂಳು ತಿಂದ ಕೊರಗ ನಾನು

ನಾನು ಗೊತ್ತಲ್ಲ
ಮೀಸಲಾತಿಯ ಕೂಸು
ಮಾದಾರ ಚೆನ್ನರ ಮಹಾದೇವ ನಾನು

ಎಷ್ಟು ಸುಂದರವಾಗಿ ಕಾಣುತ್ತೀರಿ
ನನ್ನ ಕಣ್ಣಿಗೆ ನೀವೆಲ್ಲಾ
ಅಷ್ಟು ಒಳ್ಳೆಯವನಲ್ಲ ನಿಮ್ಮ ಹಾಗೆ

ನನಗೂ ಒಂದು ಧರ್ಮವಿದೆಯಂತೆ
ಅದರ ಉದರದಲ್ಲಿ ಮೆದುಳಲ್ಲಿ ತೊಳೆಯದ
ಅಸ್ಪೃಶ್ಯತೆಯ ಅಮೇಧ್ಯದ ಪುಣ್ಯವಿದೆಯಂತೆ

ಆ ಪುಣ್ಯವೆಲ್ಲಾ ಸೇರಿ
ಪುಣ್ಯಕೋಟಿಯೆಂಬ ಹಸುವಾಗಿ
ನಿನ್ನ ತಿನ್ನುವುದಿಲ್ಲವೆಂದು ಹಾರಿ ಪ್ರಾಣ ಬಿಡುವ
ಹುಲಿಯಂತೆ ನಾನು

ನಾನು ಗೊತ್ತಲ್ಲ
ಹುಟ್ಟಿದ್ದು ಹೊಲಗೇರಿಯಲ್ಲಿ
ದೊಡ್ಡ ಹೊಲಗೇರಿಯ ಮೆದುಳಿಲ್ಲ ನಿಮ್ಮ ಹಾಗೆ

ನಿಮ್ಮ ಕಣ್ಣು ಬಣ್ಣಗಳಲ್ಲಿ ನೂರಾರು ದೇವತೆಗಳು
ಹಸಿ ನಗೆಗೆ ಹುಸಿ ನಗೆಗೆ
ಕೈ ಮುಗಿಯಬೇಕೆನ್ನಿಸುತ್ತದೆ

ನಾನು ಗೊತ್ತಲ್ಲ
ದೇಶಭಕ್ತನೂ ಅಲ್ಲ ದೈವಭಕ್ತನೂ ಅಲ್ಲ
ಕಸ ಗುಡಿಸುವವನಿಗೆ ಧರ್ಮವೇ ದೇವರೇ
ಬೆಳಗಾಗಲೆಂದು ಕಾಯುವವನಿಗೆ

ಮಂತ್ರ ಗ್ರಂಥಗಳು ಪೇಟ-ಪೀಠಗಳೆಲ್ಲ
ಮಹಾಜ್ಞಾನಿಗಳ ಕೂಟಕ್ಕೆ
ಅಪ್ಪ ಮಾದಾರ ಚೆನ್ನರು ಹೊಲಿದ ಜೋಡಿಗೆ
ಸಮವೇ ಇದೆಲ್ಲ



ಮಹಾಯಜ್ಞ ನಡೆದಿದೆ
ಗೋಮಾಂಸ ಭಕ್ಷಕರ ನರನಾಲಿಗೆ ಕತ್ತರಿಸಿ
ಹೋಮ ಹವನಕ್ಕರ್ಪಿಸಿ
ಶ್ರೇಷ್ಠ ಕುಲಜರೆಲ್ಲಾ ಸೇವಿಸುವ
ಮಹಾಮೇಳ ನಡೆಯಲಿದೆ

ನೀರನ್ನು ಮುಟ್ಟಿಸಗೊಡದವನ ಎದೆಯ ಮೇಲೆ
ಮಹಾಚರ್ಚೆ ನಡೆದಿದೆ
ಹೊಲೆಮಾದಿಗರ ಮೆದುಳ ತೆಗೆದು
ಗಂಗಾನದಿಯಲ್ಲಿ ತೊಳೆದು
ಮತಾಂತರ ನಿಷೇಧಕ್ಕೆ ವೈದಿಕ
ಮುದ್ರೆ ಬೀಳಲಿದೆ

ನಾನು ಗೊತ್ತಲ್ಲ
ಮಣ್ಣಿನ ಗೆಜ್ಜೆ ಕಟ್ಟಿಕೊಂಡು
ಕೆಂಡ ಹಾಯ್ದವನು

ನೀವು ಹಾಗೆಲ್ಲಾ
ನನ್ನ ನೆನಪಿನ ಚರಿತ್ರೆಯ ಅಳಿಸಲಾಗುವುದಿಲ್ಲ
ಏಕೆಂದರೆ
ನನ್ನ ಕಾಲುಗಳಿಗೆ ಬೇರುಗಳಿವೆ
ಮೆದುಳಿಗೆ ಬೆಳದಿಂಗಳ ಸಂಬಂಧವಿದೆ

ಗಂಟೆ ಬಾರಿಸಿಕೊಳ್ಳುತ್ತಿದೆ
ಮುಚ್ಚಿಕೊಳ್ಳಿ ಸರ್ವಾಂಗ ಕಿಟಕಿ ಬಾಗಿಲುಗಳನ್ನ
ಮೌಖಿಕರ ಹೊಲೆಮಾದೇಶ್ವರ ಬರುತ್ತಿದ್ದಾನೆ
ಮಣ್ಣಿನ ಗೆಜ್ಜೆ ಕಟ್ಟಿಕೊಂಡು
ಮಾದಾರ ಚೆನ್ನರ ಪಾದುಕೆಗಳನ್ನು
ಹೊತ್ತುಕೊಂಡು
ಮೆಟ್ಟುವವರಿದ್ದರೆ ಹೊರಗೆ ಬನ್ನಿ

ಮೆಟ್ಟುವವರು ಮುಟ್ಟುವವರು
ಮುಟ್ಟಿಸಿಕೊಳ್ಳದವರು
ನೆಲದ ಹಾಗೆ ತೆರೆದ ಕಣ್ಣುಗಳಲ್ಲಿ
ಶತಮಾನಗಳಿಂದ ಕಾದವರು

ನಾನು ಗೊತ್ತಲ್ಲ....

❍ ಸುಬ್ಬು ಹೊಲೆಯಾರ್

ಜಗತ್ತಿನ ಕ್ಷಿಪ್ರ ಬೆಳವಣಿಗೆಗಳು ಮತ್ತು ವಿಜ್ಞಾನದ ಸ್ವರೂಪ

○ ಡಾ॥ ಶರತ್ ಅನಂತಮೂರ್ತಿ

ನಮ್ಮ ಶತಮಾನದಲ್ಲಿ ಕಾಲವೂ ಕುಗ್ಗಿದೆ; ದೂರವೂ ಕುಗ್ಗಿದೆ. ಹಿಂದೆ ಎರಡೋ ಮೂರೋ ಮಹತ್ತರ ಘಟನೆಗಳು ಸಂಭವಿಸಲು ನೂರಾರು ವರ್ಷಗಳು ಕಳೆದುಹೋಗುತ್ತಿದ್ದವು. ಆದರೆ ಈಗ ಕಾಲದ ವೇಗ ಹೆಚ್ಚಿದೆ. ಅಲ್ಪ ಅವಧಿಯಲ್ಲೇ ಹಲವು ಪಲ್ಲಟಗಳು ಉಂಟಾಗುತ್ತಿವೆ.

ಈ ದೃಷ್ಟಿಯಿಂದ, ೨೦ನೆಯ ಶತಮಾನದ ಆದಿಯಲ್ಲಿ ಬೆಳೆದ ಸಾಪೇಕ್ಷತೆಯ ತತ್ವ (Theory of relativity) ನಮ್ಮ ಅರಿವನ್ನು ತಾತ್ವಿಕವಾಗಿ ಚುರುಕುಗೊಳಿಸಲು ಸಹಾಯಕವಾಗಿದೆ. ಸರಳವಾಗಿ ಹೇಳುವುದಾದರೆ, ಐನ್‌ಸ್ಟೈನ್‌ನ ಪ್ರಕಾರ ಕಾಲ ಮತ್ತು ಅವಕಾಶ ಒಂದಕ್ಕೊಂದು ಸಂಬಂಧವಿರದ ಸ್ವತಂತ್ರ ತತ್ವಗಳಲ್ಲ. ಯಾವುದನ್ನೂ ನಾವು ಪ್ರತ್ಯೇಕವಾಗಿ ನೋಡಿ ಗ್ರಹಿಸುವುದು ಸಾಧ್ಯವಿಲ್ಲ. ಈ ದೃಷ್ಟಿಯಿಂದಲೇ ಕಾಲವೆಂಬ ಇನ್ನೊಂದು ಆಯಾಮ ನಾವು ಗ್ರಹಿಸುವ ಎಲ್ಲಾ ಸತ್ಯಗಳಿಗೂ ಇದೆ ಎಂಬುದೇ ಸಾಪೇಕ್ಷ ಸಿದ್ಧಾಂತದ ಗ್ರಹಿಕೆ.

ಆದ್ದರಿಂದ ಎಲ್ಲಾ ಘಟನೆಗಳೂ ಒಂದು ನಿರ್ದಿಷ್ಟ ಸ್ಥಳದಲ್ಲಿ ಮಾತ್ರ ಜರಗುವುದಲ್ಲ, ಅಥವಾ ನಿದಿರ್ಷ್ಟ ಕಾಲದಲ್ಲಿ ಮಾತ್ರ ಜರುಗುವುದಲ್ಲ, ಆದರೆ, ಕಾಲ ಮತ್ತು ಸ್ಥಳಾವಕಾಶ ಎರಡೂ ಕೂಡಿದ ಸತ್ಯಗಳಾಗಿ ಜರುಗುತ್ತವೆ. ಈ ದೃಷ್ಟಿಯಿಂದಲೇ ನಾವು ನಮ್ಮ ಕಲ್ಪನೆಯ ಕಾಲ, ನಮ್ಮ ಕಲ್ಪನೆಯ ಅವಕಾಶ ಎರಡೂ ಮುದುಡಿವೆ, ಎನ್ನಬಹುದು. ಹಿಂದಿದ್ದ ಕಾಲದ ಅಪಾರತೆ, ವಿಶಾಲತೆ ಮತ್ತು ಅವಕಾಶದ ಅಪಾರತೆ, ವಿಶಾಲತೆ ಈಗ ಬೇರೆ ಬಗೆಯ ಗ್ರಹಿಕೆಗೆ ಎಡೆಮಾಡಿಕೊಟ್ಟಿವೆ.



ಹೀಗೆ ಮನುಷ್ಯನ ವೈಚಾರಿಕತೆಯಲ್ಲಿ ಆದ ಬದಲಾವಣೆಯ ಜತೆಜತೆಯಲ್ಲೇ ಇನ್ನೊಂದು ಬದಲಾವಣೆಯೂ ಆಯಿತು. ವಿಜ್ಞಾನ ಜ್ಞಾನದ ಶಾಖೆ ಮಾತ್ರವಲ್ಲದೇ, ನಮ್ಮ ರಾಜಕೀಯ, ಸಾಮಾಜಿಕವಾದ ಐಹಿಕ ಜೀವನವನ್ನೇ ಪಲ್ಲಟಗೊಳಿಸುವ ತಂತ್ರಜ್ಞಾನವಾಗಿ ಮಾರ್ಪಟ್ಟಿತು. ಭೌತಶಾಸ್ತ್ರದ ಸಾಪೇಕ್ಷ ಸಿದ್ಧಾಂತ ಕೇವಲ ತಾತ್ವಿಕವಾಗಿ ಉಳಿಯಲಿಲ್ಲ; ಅದು ಹಿರೋಷಿಮಾ ನಾಗಸಾಕಿಯಲ್ಲಿ ಅಮಾನವೀಯವಾಗಿ ಪ್ರಯೋಗಿಸಲ್ಪಟ್ಟ ಆಟಂಬಾಂಬೂ ಆಯಿತು. $E=MC^2$ ಎನ್ನುವ ಐನ್‌ಸ್ಟೈನಿನ ಸಿದ್ಧಾಂತ ತಾತ್ವಿಕ ಪರಿಕಲ್ಪನೆಯಾಗಿ ಮಾತ್ರ ಉಳಿಯದೇ, ಯಾರನ್ನೋ ಗೆಲ್ಲಿಸುವ ಯಾರನ್ನೋ ಸೋಲಿಸುವ ಅಸ್ತ್ರವಾಗಿಯೂ ಪರಿಣಮಿಸಿತು. ವಿಜ್ಞಾನ ಯಾವುದು

ಐನ್‌ಸ್ಟೈನ್‌ನ ಪ್ರಕಾರ ಕಾಲ ಮತ್ತು ಅವಕಾಶ ಒಂದಕ್ಕೊಂದು ಸಂಬಂಧವಿರದ ಸ್ವತಂತ್ರ ತತ್ವಗಳಲ್ಲ. ಯಾವುದನ್ನೂ ನಾವು ಪ್ರತ್ಯೇಕವಾಗಿ ನೋಡಿ ಗ್ರಹಿಸುವುದು ಸಾಧ್ಯವಿಲ್ಲ. ಈ ದೃಷ್ಟಿಯಿಂದಲೇ ಕಾಲವೆಂಬ ಇನ್ನೊಂದು ಆಯಾಮ ನಾವು ಗ್ರಹಿಸುವ ಎಲ್ಲಾ ಸತ್ಯಗಳಿಗೂ ಇದೆ ಎಂಬುದೇ ಸಾಪೇಕ್ಷ ಸಿದ್ಧಾಂತದ ಗ್ರಹಿಕೆ. ಆದ್ದರಿಂದ ಎಲ್ಲಾ ಘಟನೆಗಳೂ ಒಂದು ನಿರ್ದಿಷ್ಟ ಸ್ಥಳದಲ್ಲಿ ಮಾತ್ರ ಜರಗುವುದಲ್ಲ, ಅಥವಾ ನಿದಿರ್ಷ್ಟ ಕಾಲದಲ್ಲಿ ಮಾತ್ರ ಜರುಗುವುದಲ್ಲ. ಆದರೆ, ಕಾಲ ಮತ್ತು ಸ್ಥಳಾವಕಾಶ ಎರಡೂ ಕೂಡಿದ ಸತ್ಯಗಳಾಗಿ ಜರುಗುತ್ತವೆ. ಈ ದೃಷ್ಟಿಯಿಂದಲೇ ನಾವು ನಮ್ಮ ಕಲ್ಪನೆಯ ಕಾಲ, ನಮ್ಮ ಕಲ್ಪನೆಯ ಅವಕಾಶ ಎರಡೂ ಮುದುಡಿವೆ, ಎನ್ನಮಹುದು. ಹಿಂದಿದ್ದ ಕಾಲದ ಅಪಾರತೆ, ವಿಶಾಲತೆ ಮತ್ತು ಅವಕಾಶದ ಅಪಾರತೆ, ವಿಶಾಲತೆ ಈಗ ಬೇರೆ ಬಗೆಯ ಗ್ರಹಿಕೆಗೆ ಎಡೆಮಾಡಿಕೊಟ್ಟಿವೆ.

ನಿಜ ಎನ್ನುವ ತಾತ್ವಿಕ ಪ್ರಶ್ನೆಯನ್ನು ಮಾತ್ರ ಕೇಳದೆ, ಯಾವುದರಿಂದ ಎಷ್ಟು ಪ್ರಯೋಜನ ಎನ್ನುವ ತಾಂತ್ರಿಕ ಅನ್ವೇಷಣೆಯೂ ಆಯಿತು. ಪ್ರಕೃತಿಯ ಸತ್ಯದ ಹುಡುಕಾಟ ತಾತ್ವಿಕವಾಗಿ ಮಾತ್ರ ಉಳಿಯದೇ ಸದ್ಯದ ಪ್ರಯೋಜನದ ಹುಡುಕಾಟವಾಯಿತು. ಅಂದರೆ ಉಪಕರಣಗಳಿಂದ ದೃಢಪಡುವ ಸತ್ಯಾನ್ವೇಷಣೆ ವಿಜ್ಞಾನದ ಅತ್ಯಂತ ಪ್ರಮುಖ ಸ್ವರೂಪವಾಯಿತು. ತಿಳಿಯುವುದೆಂದರೆ, ಅಳೆಯುವುದು, ಮತ್ತು ಅಳತೆಗೆ ದಕ್ಕಿದ್ದನ್ನು ಗ್ರಹಿಸುವುದು. ಹೆಚ್ಚಿನ ಗ್ರಹಿಕೆಗೆ ಇನ್ನಷ್ಟು ಸೂಕ್ಷ್ಮವಾಗಿ ಅಳೆಯುತ್ತಾ ಹೋಗುವುದೇ ಕ್ರಮವಾಯಿತು. ವಿಜ್ಞಾನಿಗಳ ಯೋಚನಾಕ್ರಮದಲ್ಲೂ ತಾಂತ್ರಿಕವಾದ ಉಪಯೋಗಕ್ಕೆ ಅನುಗುಣವಾಗುವ ಅಂಶಗಳಿಗೆ ಹೆಚ್ಚು ಪ್ರಾಧಾನ್ಯತೆ ಸಿಗಲು ಶುರುವಾಯಿತು. ವಿಚಾರದಲ್ಲಿ ಕಂಡದನ್ನು ನೈಜವಾದ ಆಚರಣೆಯಲ್ಲಿ ಫಲಿಸಿಕೊಳ್ಳುವ ಹಂಬಲ ವಿಜ್ಞಾನದಲ್ಲಿ ತುಂಬಾ ಬಲಿಷ್ಠವಾಗಿ ಬೆಳೆದದ್ದು ನಮ್ಮ ಕಾಲದಲ್ಲೇ.

ಸಂವಹನದಲ್ಲಿ ಆಗಿರುವ ಕ್ರಾಂತಿಯನ್ನು ಈಗ ನೋಡೋಣ. ಎಲೆಕ್ಟ್ರಾನಿಕ್ ತಾಂತ್ರಿಕತೆಯಲ್ಲಿ ಮತ್ತು ವೈರ್‌ಲೆಸ್ ತಾಂತ್ರಿಕತೆಯಲ್ಲಿ ನಮ್ಮ ಯುಗ, ಕಾಲವೂ, ದೇಶವೂ ಇನ್ನಷ್ಟು ಕುಗ್ಗಿ, ಗ್ರಹಿಕೆಗೆ ಸಧ್ಯವೆನ್ನಿಸುವಂತೆ ಆದವು. ಈಗ ಯಾವುದೂ ಹಿಂದಿನಷ್ಟು ದೂರವಲ್ಲ, ಅಪ್ರಾಪ್ಯವಲ್ಲ. ಆಧುನಿಕ ಭೌತಶಾಸ್ತ್ರ ನಮ್ಮ ಕಾಲದೇಶಗಳ ಅರಿವನ್ನು ಪಲ್ಲಟಗೊಳಿಸಿದಂತೆ, ಜೀವಶಾಸ್ತ್ರದಲ್ಲೂ ಬಹಳ ದೊಡ್ಡ ಕ್ರಾಂತಿ ಆಗುತ್ತಿರುವುದು ನಮ್ಮ ಕಾಲದಲ್ಲೇ. 'ಜೀವಿ' ಎಂದರೆ ಏನು? ಎಂಬ ಬಗ್ಗೆ ಆಗಿರುವ ನಮ್ಮ ತಿಳುವಿನ ಪಲ್ಲಟವನ್ನು ಗಮನಿಸೋಣ. ಈ ಪ್ರಪಂಚದಲ್ಲಿ ಜೀವಿಗಳು ಹಲವಾರು. ಇವು ವೈವಿಧ್ಯಮಯವಾದವು ಎಂಬ ತಿಳುವಳಿಕೆ, DNA ಬಗ್ಗೆ ಹುಟ್ಟಿದ ತಿಳುವಳಿಕೆಯಿಂಧ ಬಹಳ ಗಾಢವಾದ ಬದಲಾವಣೆಗೆ ಒಳಗಾಗಿದೆ. ಪ್ರಪಂಚದಲ್ಲಿ ಇರುವ ಎಲ್ಲಾ ವಸ್ತುಗಳು ಎಲೆಕ್ಟ್ರಾನ್, ಪ್ರೋಟಾನು ಮತ್ತು ನ್ಯೂಟ್ರಾನುಗಳ ಸಂಯೋಜನೆಯಿಂದ ಉಂಟಾದವು ಎಂಬ ತಿಳುವಳಿಕೆಯಂತೆಯೇ, ಎಲ್ಲಾ ಜೀವಿಗಳ ಮೂಲಭೂತ ಸ್ವರೂಪಕ್ಕೆ DNAಯೇ ಕಾರಣವಾಗಿರುತ್ತದೆ ಎಂಬ ಸೂತ್ರರೂಪವಾದ ಹೊಸ ಗ್ರಹಿಕೆಯ ಪರಿಣಾಮವಾಗಿ, ಪ್ರತಿ ಜೀವಿಯ ವಿಶಿಷ್ಟತೆಯಿಂದ ಜೀವಿಯನ್ನು ಅರಿಯುವ ಕ್ರಮ ಬದಲಾಯಿತು. ಕಣ್ಣಿಗೆ ಕಾಣುವ ಜೀವಿಯನ್ನು ಕಟ್ಟಿಟ್ಟ ಇಟ್ಟಿಗೆಯ ಕಡೆಗೆ ಗಮನ ಈಗ ಹರಿದಿದೆ. DNAಯಲ್ಲಿರುವ ಸೂತ್ರದಿಂದ ಉತ್ಪತ್ತಿಯಾಗುವ ಪ್ರೋಟೀನುಗಳೇ ಜೀವವನ್ನು ಕಟ್ಟುವ ಸಾಧನವಾದ ಇಟ್ಟಿಗೆಗಳು. DNA ಆಕಾರದ ಸ್ಪಷ್ಟ ಜ್ಞಾನ ಮೂಡಿದ ನಂತರವೇ ಜೀವಾಣುವಿನ ಸ್ವರೂಪದ ಸ್ಪಷ್ಟ ಜ್ಞಾನ ಹುಟ್ಟಿಕೊಂಡಿತು. ಪ್ರೋಟೀನುಗಳನ್ನು ತಯಾರಿಸುವ ಅನುಕ್ರಮದ ಮ್ಯಾಪನ್ನು ಜೀವವಿಜ್ಞಾನಿಗಳು ಇಂದು ಬಿಡಿಸಿಟ್ಟಿದ್ದಾರೆ (Genome sequencing). ಜೀವದ ವೈವಿಧ್ಯದ ಸಂಕೀರ್ಣತೆಗೆ ಬದಲಾಗಿ ನಮ್ಮ ಅರಿವು ಸರಳವಾದಂತೆ ತೋರುತ್ತಲೇ ಗಾಢವೂ ಆಯಿತು. ಇದರ ಪರಿಣಾಮವಾಗಿ ಜೀವಾಣುವಿನ ಜ್ಞಾನ ಅದನ್ನು ನಮಗೆ ಬೇಕಾದಂತೆ ಬದಲಿಸಬಹುದಾದ ಉಪಾಯಗಳನ್ನೂ ಹುಟ್ಟುಹಾಕಿತು. ಅಣುವಿನ ಜ್ಞಾನ ಅಣುಬಾಂಬಿಗೆ ಕಾರಣವಾಗುವಂತೆಯೇ ಜೀವಾಣುವಿನ ಹೊಸ ಜ್ಞಾನ ಇನ್ನೊಂದು ಬಗೆಯ ಜೀವಕ್ಕೆ ಸಂಬಂಧಪಟ್ಟಂತೆಯೇ ಜೀವದ ಸ್ವರೂಪವನ್ನೇ ಬದಲಿಸಬಲ್ಲ ತಾಂತ್ರಿಕತೆಗೆ ಎಡೆಮಾಡಿಕೊಟ್ಟಿದೆ. ಇದು ಪಾಶ್ಚಾತ್ಯ ವೈಜ್ಞಾನಿಕ ಪ್ರಪಂಚದಲ್ಲಿ ನೈತಿಕ ಪ್ರಶ್ನೆಗಳ ಬಿರುಗಾಳಿಯನ್ನೇ ಎಬ್ಬಿಸಿದೆ. ಏಕೆಂದರೆ ದೈವ ಸೃಷ್ಟಿಯೆಂದೂ, ನಿಗೂಢವೆಂದೂ ತಿಳಿದಿದ್ದ ಜೀವದ ಸ್ವರೂಪವನ್ನೇ ಮನುಷ್ಯ ಬದಲಿಸಬಲ್ಲವನಾಗಿ ಬೆರಗಿನಲ್ಲಿ ನಿಂತಿದ್ದಾನೆ.

ಈ ರೀತಿಯ ಜೀವ ತಂತ್ರಜ್ಞಾನದ ಫಲವಾದ ರಾಜಕೀಯ, ಸಾಮಾಜಿಕ ಪರಿಣಾಮಗಳನ್ನು ಗಮನಿಸೋಣ. ಜೀವ ಸ್ವರೂಪವನ್ನು ಬದಲಿಸುವ ತಾಂತ್ರಿಕತೆಯ ಸಾಧ್ಯತೆಯಲ್ಲಿ ಅಡಗಿರುವ ಮುಖ್ಯವಾದ ಅಂಶವೆಂದರೆ, ಎಲ್ಲಾ ಜೀವ ಸ್ವರೂಪಗಳ ಮೂಲ ತಳಿಗಳನ್ನು ಹುಡುಕಿ ಅವುಗಳ ಜೀನ್‌ಗಳನ್ನು ಸಂಗ್ರಹಿಸುವುದು. ಈ ಸಂಗ್ರಹ ಕಾರ್ಯದ ಪೇಟಂಟನ್ನು (ಸ್ವಾಮ್ಯ) ಪಡೆದವರಿಗೆ, ಈ ಜೀನ್‌ಗಳ ಸೂತ್ರದಿಂದ ಹೊರಡುವ ಬೇರೆ ಎಲ್ಲಾ ಜೀವ ತಳಿಗಳ ಮೇಲಿನ ಹಕ್ಕು ಸ್ವಾಮ್ಯ ಪಡೆದವರದ್ದಾಗಿರುತ್ತೆ. ಈ ತಳಿಗಳ ಮೇಲಿನ ಸಂಶೋಧನಾ ಕಾರ್ಯಗಳೂ ಸ್ವಾಮ್ಯ ಪಡೆದವರ ಹಕ್ಕುದಾರಿಕೆಯಲ್ಲಿರುತ್ತೆ. ಭಾರತ ಹಾಗೂ ಇತರ ಬೇರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಆಹಾರಕ್ಕೆ ಸಂಬಂಧಿಸಿದ ಜೀವ ತಳಿಗಳ ಸ್ವಾಮ್ಯಗಳನ್ನು ಹಲವು ಸಂದರ್ಭಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಪಡೆದಿರುತ್ತಾರೆ. ಕೆಲವು ರೀತಿಯ ತಳಿಗಳನ್ನು ಹೇಗೆ ಬದಲಾಯಿಸುತ್ತಾರೆಂದರೆ ಅವುಗಳಿಂದ ಮತ್ತೆ ಬೀಜಸೃಷ್ಟಿಯು ಅಸಾಧ್ಯವಾಗಿರುತ್ತೆ. ಅಂದರೆ, ಈ ದೇಶಗಳಲ್ಲಿನ ಒಬ್ಬ ಬಡರೈತನಿಗೆ, ಈ ತಳಿಗಳ ಮರುಪ್ರಸಾರ ಅಸಾಧ್ಯವಾಗುತ್ತದೆ. ಒಬ್ಬ ರೈತನ ಮೂಲಭೂತ ಹಕ್ಕನ್ನೇ ಇದು ಕಸಿದುಕೊಂಡಂತಾಗುತ್ತದೆ ಎಂದು ವಂದನಾ ಶಿವ, ನಂದಿ, ಈ ಚಿಂತಕರು, ಈ ರೀತಿಯ ಸ್ವಾಮ್ಯದಿಂದ ದೊರೆವ ಹಕ್ಕುಗಳ ವಿರುದ್ಧ ವಾದಿಸಿದ್ದಾರೆ.

ಪ್ರಾರಂಭದಲ್ಲಿ ವಿಜ್ಞಾನದಿಂದ ಕೈಗಾರಿಕಾ ಕ್ರಾಂತಿ ಸಾಧ್ಯವಾಯಿತು. ಕೈಗಾರಿಕಾ ಕ್ರಾಂತಿಯಿಂದ ಬಹುತ್ವನ್ನ ಸಾಧ್ಯವಾಯಿತು. ಬಹುತ್ವನ್ನದಿಂದ ಜನಜೀವನದಲ್ಲಿ ಸುಧಾರಣೆಗಳಾದವು. ಕೊಂಚಮಟ್ಟಿಗೆ ಪ್ರಜಾತಾಂತ್ರಿಕವಾದ ಸಮಾನತೆಯ ನಿರೀಕ್ಷೆಗೆ ಶಕ್ತಿಮೂಡಿತು. ಆದರೆ, ಈ ದಿನಗಳಲ್ಲಿ ಇವೆಲ್ಲವೂ ಬುಡಮೇಲಾಗುವ ಸಾಧ್ಯತೆಯಿದೆ.

ಜೀವತಳಿಗಳ ಸ್ವಾಮ್ಯ ಕೆಲವರ ಕೈಯಲ್ಲಿ ಮಾತ್ರ ಇರುವುದರಿಂದ ಅಸಂಖ್ಯಾತ ಜನಸಮುದಾಯ ಇವರ ಋಣದಲ್ಲಿ ಬದುಕಬೇಕಾಗುತ್ತದೆ. ಎಲ್ಲಾ ಉಳ್ಳವರು, ಏನೂ ಇರದವರು ಎಂಬ ಎರಡು ಬಗೆಯ ಜನರೇ ಸೃಷ್ಟಿಯಾಗಿಬಿಡುತ್ತಾರೆ. ಮಾನವ ಸಮುದಾಯದಲ್ಲಿ ಜ್ಞಾನದ ಸ್ಫೋಟದಿಂದ ಹುಟ್ಟಿದ ಭರವಸೆಗಳು ಈಗ ಆತಂಕಗಳಾಗಿ ಪರಿವರ್ತನೆಗೊಂಡಿವೆ.

ಪಾಶ್ಚಿಮಾತ್ಯ ರಾಷ್ಟ್ರಗಳು ವಿಜ್ಞಾನದ ಆಧುನಿಕೋತ್ತರ ಯುಗದಲ್ಲಿದ್ದರೆ, ಭಾರತದಂತಹ ರಾಷ್ಟ್ರಗಳು ಅಲ್ಲಿ ಕಳೆದು ಹೋದ ಆಧುನಿಕ ಯುಗದಲ್ಲಿ, ಅಲ್ಲಿ ಕಳೆದು ಹೋದ ಕನಸುಗಳನ್ನೇ ಕಾಣುತ್ತ ಮುಗ್ಗರಿಸುತ್ತ ಓಡುತ್ತಿವೆ. ಜನಸಾಮಾನ್ಯರು ಈ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಹೋದಲ್ಲಿ ವಿಜ್ಞಾನ ಭರವಸೆಗಳನ್ನು ಹುಟ್ಟಿಸುವ ಬದಲು ಆತಂಕಗಳನ್ನೇ ಹೆಚ್ಚಿಸುತ್ತಾ ಹೋಗುವ ಅಪಾಯವಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ
೨ ಪ್ರತಿಗಳನ್ನು
ಕಳುಹಿಸಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧
☎ ೩೨೮ ೭೯೪೩
೩೨೮ ೧೬೬೭

ಸೌಜನ್ಯ : ಇಂಡಿಯಾ ಟುಡೆ

○ ಪ್ರೊ॥ ಬಿ.ಎ. ಶ್ರೀಧರ

ಅಲಕ್ಷಿತ ಸಮುದಾಯ ಮತ್ತು ಮಾಧ್ಯಮಗಳು

ಅಲ್ಪಸಂಖ್ಯಾತರು, ದಲಿತರು ಮತ್ತು ಸಮಾಜದ ಮುಖ್ಯ ವಾಹಿನಿಯಿಂದ ಹೊರಗುಳಿದವರ ಬಗ್ಗೆ ಮಾಧ್ಯಮಗಳು ಗಮನಹರಿಸುವುದು ಕಡಿಮೆ. ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ೧೧೭ನೆಯ ಜನ್ಮ ದಿನಾಚರಣೆಯಂದು ಸ್ಫೂರ್ತಿಧಾಮದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ 'ಸಮಾಜ ಮಾಧ್ಯಮಗಳು ಮತ್ತು ದಲಿತರು' ಎನ್ನುವ ವಿಷಯದ ಬಗ್ಗೆ ನಾನು ಪ್ರಬಂಧವನ್ನು ಮಂಡಿಸಿದ್ದೆ. ಈ ಲೇಖನವನ್ನು ಸಿದ್ಧಪಡಿಸುವಾಗ ಕುತೂಹಲಕ್ಕೆ ಮತ್ತೆ ಪ್ರಬಂಧವನ್ನು ತಿರುವಿ ಹಾಕಿದೆ. ನಾನು ಐದು ವರ್ಷಗಳ ಹಿಂದೆ ಬರೆದುದಕ್ಕಿಂತ ಮಾಧ್ಯಮದ ಧೋರಣೆಯಲ್ಲಿ ಏನೂ ಬದಲಾವಣೆಯಾಗಿಲ್ಲ. ಸಮಾಜದ ಅಲಕ್ಷಿತ ಸಮುದಾಯದ ಬಗ್ಗೆ ಮಾಧ್ಯಮಗಳಲ್ಲಿ ಗುರುತಿಸಬಹುದಾದ ಒಂದೇ ಬದಲಾವಣೆಯೆಂದರೆ ಮತ್ತಷ್ಟು ಹೆಚ್ಚಿರುವ ಅಸಡ್ಡೆ ಮತ್ತು ಬೇಜವಾಬ್ದಾರಿತನ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಪರಿಣಾಮದಿಂದಾಗಿ ಮಾಧ್ಯಮಗಳು ತಮ್ಮಲ್ಲಿದ್ದ ಅಲ್ಪಸ್ವಲ್ಪ ಸೂಕ್ಷ್ಮ ಸಂವೇದನಾಶೀಲತೆಯನ್ನು ಕಳೆದುಕೊಂಡಿವೆ. ಸುದ್ದಿಯನ್ನು ಸರಕಿನಂತೆ ಮಾರಾಟ ಮಾಡುವುದೇ ನಮ್ಮ ಆದ್ಯ ಗುರಿ ಎಂದು ಹೇಳಿಕೊಳ್ಳುವ ಪತ್ರಿಕೋದ್ಯಮಿಗಳಿರುವ ಕಾಲದಲ್ಲಿ ನಾವಿದ್ದೇವೆ.

ಕಳೆದ ಮೂವತ್ತೈದು ವರ್ಷಗಳಿಂದ ಮಾಧ್ಯಮಗಳ ವಿದ್ಯಾರ್ಥಿಯಾಗಿ ಅವು ಕಾರ್ಯ ನಿರ್ವಹಿಸುವ ಶೈಲಿಯನ್ನು ಕುತೂಹಲ ಮತ್ತು ಕಾಳಜಿಯಿಂದ ಗಮನಿಸಿರುವ ನನಗೆ ಇನ್ನು ಮುಂದೆ ಪರಿಸ್ಥಿತಿ ಬದಲಾಗುತ್ತದೆ ಮತ್ತು ಮಾಧ್ಯಮಗಳು ಸಾಮಾಜಿಕ ಕಾಳಜಿಯಿಂದ ವರ್ತಿಸುತ್ತವೆ ಎನ್ನುವ ನಂಬಿಕೆ ಹೋಗಿಬಿಟ್ಟಿದೆ. ಮಾಧ್ಯಮಗಳು ಸಾಮಾಜಿಕ ಜವಾಬ್ದಾರಿಯಿಂದ ವರ್ತಿಸಬೇಕು, ಧ್ವನಿಯನ್ನು ಕಳೆದುಕೊಂಡ ವರ್ಗಗಳ ವಕ್ತಾರರಂತೆ ಅವು ಕಾರ್ಯ ನಿರ್ವಹಿಸುತ್ತವೆ ಎನ್ನುವ ನಮ್ಮ ಅನಿಸಿಕೆ ಪಠ್ಯಪುಸ್ತಕಗಳಲ್ಲಿ ನಾವು ಓದುವ ಒಣ ತತ್ವಗಳಂತೆ ಪ್ಲೇಟೋವಿನ ಆದರ್ಶ ರಾಜ್ಯದ ಕಲ್ಪನೆಯಂತೆ ಸಾಧಿಸಲಾಗದ ಮಹಾನ್ Utopia ಎನ್ನುವ ಭಾವನೆ ಬಲವಾಗಲಾರಂಭಿಸಿದೆ. ಹಣ ದೋಚುವ ಕಾರ್ಖಾನೆಗಳಂತೆ ಬೆಳೆಯುತ್ತಿರುವ 'ಮಾಧ್ಯಮಗಳ ಸಾಮ್ರಾಜ್ಯಗಳನ್ನು' ಮತ್ತು ಅವುಗಳು ಹೊಂದಿರುವ ಉದ್ದೇಶಗಳನ್ನು ನೋಡಿದಾಗ ಅವುಗಳಿಂದ ನಾವು ಏನನ್ನಾದರೂ ನಿರೀಕ್ಷಿಸುವುದು ಮೂರ್ಖತನವೆನಿಸುತ್ತದೆ.

ಮಾಧ್ಯಮಗಳ ವಿಶ್ಲೇಷಣೆಯಲ್ಲಿ ಮುಖ್ಯವಾದ ಒಂದು ಕ್ರಮವೆಂದರೆ, ಮಾಧ್ಯಮಗಳು ಮತ್ತು

ಕಳೆದ ಮೂವತ್ತೈದು ವರ್ಷಗಳಿಂದ ಮಾಧ್ಯಮಗಳ ವಿದ್ಯಾರ್ಥಿಯಾಗಿ ಅವು ಕಾರ್ಯ ನಿರ್ವಹಿಸುವ ಶೈಲಿಯನ್ನು ಕುತೂಹಲ ಮತ್ತು ಕಾಳಜಿಯಿಂದ ಗಮನಿಸಿರುವ ನನಗೆ ಇನ್ನು ಮುಂದೆ ಪರಿಸ್ಥಿತಿ ಬದಲಾಗುತ್ತದೆ ಮತ್ತು ಮಾಧ್ಯಮಗಳು ಸಾಮಾಜಿಕ ಕಾಳಜಿಯಿಂದ ವರ್ತಿಸುತ್ತವೆ ಎನ್ನುವ ನಂಬಿಕೆ ಹೋಗಿಬಿಟ್ಟಿದೆ. ಮಾಧ್ಯಮಗಳು ಸಾಮಾಜಿಕ ಜವಾಬ್ದಾರಿಯಿಂದ ವರ್ತಿಸಬೇಕು, ಧ್ವನಿಯನ್ನು ಕಳೆದುಕೊಂಡ ವರ್ಗಗಳ ವಕ್ತಾರರಂತೆ ಅವು ಕಾರ್ಯ ನಿರ್ವಹಿಸುತ್ತವೆ ಎನ್ನುವ ನಮ್ಮ ಅನಿಸಿಕೆ ಪಠ್ಯಪುಸ್ತಕಗಳಲ್ಲಿ ನಾವು ಓದುವ ಒಣ ತತ್ವಗಳಂತೆ ಪ್ಲೇಟೋವಿನ ಆದರ್ಶ ರಾಜ್ಯದ ಕಲ್ಪನೆಯಂತೆ ಸಾಧಿಸಲಾಗದ ಮಹಾನ್ Utopia ಎನ್ನುವ ಭಾವನೆ ಬಲವಾಗ ಲಾರಂಭಿಸಿದೆ. ಹಣ ದೋಚುವ ಕಾರ್ಖಾನೆಗಳಂತೆ ಬೆಳೆಯುತ್ತಿರುವ 'ಮಾಧ್ಯಮಗಳ ಸಾಮ್ರಾಜ್ಯಗಳನ್ನು' ಮತ್ತು ಅವುಗಳು ಹೊಂದಿರುವ ಉದ್ದೇಶಗಳನ್ನು ನೋಡಿದಾಗ ಅವುಗಳಿಂದ ನಾವು ಏನನ್ನಾದರೂ ನಿರೀಕ್ಷಿಸುವುದು ಮೂರ್ಖತನವೆನಿಸುತ್ತದೆ.

ವ್ಯವಸ್ಥೆ ಒಪ್ಪಿಕೊಂಡ ಸಿದ್ಧಾಂತಕ್ಕೆ ಇರುವ ಸಂಬಂಧವನ್ನು ಪರಾಮರ್ಶಿಸುವುದು ಮಾರ್ಕ್ಸ್ ಸಿದ್ಧಾಂತದ ಪ್ರಕಾರ, ಸಮಾಜದ ಪ್ರಬಲ ಗುಂಪು ತನ್ನ ಸಿದ್ಧಾಂತಕ್ಕೆ ಅನುಗುಣವಾಗಿ ಅದರ ಸಾಮಾಜಿಕ ಮತ್ತು ಆರ್ಥಿಕ ಶಕ್ತಿಯನ್ನು ಸೃಷ್ಟಿಸುತ್ತದೆ. ಪ್ರಾಪಂಚಿಕ ಮತ್ತು ಬೌದ್ಧಿಕ ಸಂಗತಿಗಳ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸುವುದರ ಮೂಲಕ ಈ ಶಕ್ತಿಯ ಸೃಷ್ಟಿಯ ಪ್ರಕ್ರಿಯೆ ಸಾಧ್ಯವಾಗುತ್ತದೆ. ಆ ಪ್ರಬಲ ವರ್ಗ ಸಮಾಜದ ಮೇಲೆ ತನ್ನ ಹಿಡಿತವನ್ನು ಸಾಧಿಸಲು ಹೇಗೆ ಪ್ರಬಲ ಅಭಿಪ್ರಾಯಗಳನ್ನು ಹುಟ್ಟುಹಾಕುತ್ತವೆ ಎನ್ನುವುದನ್ನು ನಾವು ಇತಿಹಾಸದಲ್ಲಿ ಕಂಡಿದ್ದೇವೆ. ಮಾಧ್ಯಮ ಗಳು ಪ್ರಬಲ ವರ್ಗದ ನೀತಿಯನ್ನು ಬೆಂಬಲಿಸುವ ಮತ್ತು ಆ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಬೆಳೆಸುವ ಸಾಧನಗಳಾಗಿ ಕಾರ್ಯ ನಿರ್ವಹಿಸುತ್ತವೆ.

'ತಳಹದಿ ಮತ್ತು ಮೇಲು ರಚನೆ' ಮಾದರಿಯಲ್ಲಿ ಇದು ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ. ಮಾರ್ಕ್ಸ್ ಸಿದ್ಧಾಂತದ ಪ್ರಕಾರ ಸಮಾಜದ ಅಸ್ತಿಭಾರ ಆರ್ಥಿಕ ತಳಹದಿಯ ಮೇಲೆ ನಿಂತಿರುತ್ತದೆ.

ಮೇಲು ರಚನೆಯಲ್ಲಿ ಒಂದು ಸಮಾಜವನ್ನು ಪರಿಪೂರ್ಣ ಮಾಡುವ ರಾಜಕೀಯ, ಮತ್ತು ಸಾಂಸ್ಕೃತಿಕ ಸೈದ್ಧಾಂತಿಕ ಸಂಸ್ಥೆಗಳಿರುತ್ತವೆ. ಉದಾಹರಣೆಗೆ ಕುಟುಂಬ, ಧರ್ಮ, ರಾಜ್ಯ, ಶಿಕ್ಷಣ ಮತ್ತು ಮಾಧ್ಯಮಗಳು. ಈ ಸಾಂಪ್ರದಾಯಿಕ ಮಾರ್ಕ್ಸ್ ಆಲೋಚನೆಯಂತೆ ಆರ್ಥಿಕ ತಳಹದಿ ಎಷ್ಟು ಪ್ರಾಮುಖ್ಯ ಉಳ್ಳದ್ದು ಮತ್ತು ಪ್ರಬಲವಾದದ್ದೆಂದರೆ ಅದು ಸಮಾಜದ ಮೇಲು ರಚನೆಯನ್ನು ಸೇರಿದಂತೆ ಉಳಿದೆಲ್ಲಾ ಸಂಗತಿಗಳನ್ನೂ ನಿರ್ಧರಿಸುವಷ್ಟು ಸಾಮರ್ಥ್ಯ ಉಳ್ಳದ್ದಾಗಿರುತ್ತದೆ. ಇದನ್ನು ಮಾಧ್ಯಮಗಳಿಗೆ ಅನ್ವಯಿಸಿದಾಗ ಮಾಧ್ಯಮ ಸಂಸ್ಥೆಗಳ ರಚನೆ ಮತ್ತು ಅವು ಪ್ರಕಟಿಸುವ ಹಾಗೂ ಪ್ರಸಾರ ಮಾಡುವ ವಿಷಯಗಳು ಆರ್ಥಿಕ ತಳಪಾಯದಿಂದ

ಪ್ರೇರೇಪಿತವಾಗಿರುತ್ತವೆ. ಮಾರ್ಕ್ಸ್‌ಸಿದ್ಧಾಂತವನ್ನು. ಬಂಡವಾಳಕ್ಕೆ ಹೆಚ್ಚು ಒತ್ತು ನೀಡುವ ಸಿದ್ಧಾಂತವೆಂದು ಟೀಕಿಸಿದರೂ ನಮ್ಮ ಮಾಧ್ಯಮಗಳ ಕಾರ್ಯ ವಿಧಾನ ಮತ್ತು ಪತ್ರಿಕೆಗಳ ಪುಟಗಳಲ್ಲಿ, ಟೆಲಿವಿಷನ್ ಹಾಗೂ ಸಿನಿಮಾ ಪರದೆಗಳ ಮೇಲೆ ಪ್ರತಿಬಿಂಬಿತವಾಗುತ್ತಿರುವುದು ತಳಹದಿಯ ಆರ್ಥಿಕ ಸಿದ್ಧಾಂತದ ತತ್ವಗಳೇ.

ಬಂಡವಾಳಶಾಹಿಯೇ ಮುಖ್ಯ ಆರ್ಥಿಕ ಸಿದ್ಧಾಂತವಾದ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಪೂರ್ವ ಯುರೋಪಿನ ರಾಷ್ಟ್ರಗಳ ಮಾಧ್ಯಮಗಳು ಕಾರ್ಯನಿರ್ವಹಿಸುತ್ತಿರುವುದು ಈ ಚೌಕಟ್ಟಿನಲ್ಲಿಯೇ. ಜಾಗತೀಕರಣದ ಹೆಸರಿನಲ್ಲಿ ನಾವು ಅಪ್ಪಿಕೊಳ್ಳಲು ಮುಂದಾಗುತ್ತಿರುವ ಸಿದ್ಧಾಂತವೂ ಬಂಡವಾಳಶಾಹಿ ಮಾದರಿಯೇ ಆದುದರಿಂದ ನಮ್ಮ ಮಾಧ್ಯಮಗಳ ಸಂಸ್ಥೆಗಳ ರಚನೆ ಮತ್ತು ಅವು ಸುದ್ದಿ, ಮನರಂಜನೆಯ ಹೆಸರಿನಲ್ಲಿ ಉತ್ಪಾದಿಸುವ 'ಸರಕು' ಕೂಡ ಆ ಮೂಲಭೂತ ಸಿದ್ಧಾಂತವನ್ನು ಪ್ರತಿನಿಧಿಸುತ್ತದೆ.

ಸೈದ್ಧಾಂತಿಕವಾಗಿ ಮಾಧ್ಯಮಗಳು ತೆಗೆದುಕೊಂಡಿರುವ ನಿಲುವಿನ ಬಗ್ಗೆ ನಮಗೆ ತಿಳಿದೂ ಅವು ಅಲಕ್ಷಿತ ಸಮುದಾಯಗಳ ಬಗ್ಗೆ ಕಾಳಜಿ ವಹಿಸಬೇಕೆನ್ನುವುದು ಮಾಧ್ಯಮಗಳಿಂದ ನಾವು ಅಗತ್ಯವಾಗಿ ಬಹಳ ನಿರೀಕ್ಷಿಸುತ್ತಿದ್ದೇವೆ ಎನ್ನಿಸುತ್ತದೆ.

ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಮಾಧ್ಯಮಗಳ ಬೇಜವಾಬ್ದಾರಿಯ ಧೋರಣೆಯ ಬಗ್ಗೆ ಸಾಕಷ್ಟು ಟೀಕೆಗಳಿವೆ. ಚರ್ಚೆಗಳು ನಡೆದಿವೆ. ನಡೆಯುತ್ತಲೂ ಇವೆ. ಅಲ್ಲಿನ ಮಾಧ್ಯಮಗಳು ಸಮಾಜ ಮತ್ತು ರಾಜ್ಯದಿಂದ ನಿರ್ಲಕ್ಷ್ಯಕ್ಕೆ ಒಳಗಾದವರ ಬಗ್ಗೆ ತೋರುವ ಅಸಡ್ಡೆ ಮತ್ತು ಮಹಿಳೆಯರು, ಅಮೆರಿಕಾದ ಮೂಲ ನಿವಾಸಿಗಳು ಹಾಗೂ ಆಫ್ರೋ ಅಮೆರಿಕನ್ ವರ್ಗಗಳ ಬಗ್ಗೆ ಮಾಧ್ಯಮಗಳು ಅದರಲ್ಲಿಯೂ ಮುಖ್ಯವಾಗಿ ಹಾಲಿವುಡ್ ಚಲನಚಿತ್ರಗಳು, ಟೆಲಿವಿಷನ್ ಧಾರಾವಾಹಿಗಳು ಚಿತ್ರಿಸುವ ಹಾಸ್ಯಾಸ್ಪದ ಮತ್ತು ನಕಾರತ್ಮಾಕ ಪ್ರತಿಮೆಗಳ ಬಗ್ಗೆ ಅಪಾರ ವಿರೋಧವಿದೆ.

ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ೧೯೪೭ರಷ್ಟು ಹಿಂದೆಯೇ ಅಲ್ಲಿನ ಮಾಧ್ಯಮಗಳ ಸಾಮಾಜಿಕ ವರ್ತನೆಯ ಬಗ್ಗೆ ಅಧ್ಯಯನ ನಡೆಸಲು ನೇಮಕವಾಗಿದ್ದ ಹಚ್ಚಿನ್ಸ್ ಸಮಿತಿ, 'ಸಾಮಾಜಿಕ ಜವಾಬ್ದಾರಿಯುಳ್ಳ ಮಾಧ್ಯಮ ಸಮಾಜದ ಉಪ-ಸಂಸ್ಕೃತಿ ಮತ್ತು ಪಂಗಡಗಳಿಗೆ ಸೇರಿದವರ ಬಗ್ಗೆಯೂ ಸಾಕಷ್ಟು ಪ್ರಮಾಣದಲ್ಲಿ ಪ್ರಾತಿನಿಧ್ಯ ನೀಡಬೇಕು' ಎಂದು ಶಿಫಾರಸ್ಸು ಮಾಡಿತ್ತು ಮತ್ತು ಅಂತಹ ವರ್ಗಗಳಿಗೆ ಸೇರಿದ ಜನರ ಮೌಲ್ಯಗಳು ಮತ್ತು ಬದುಕನ್ನು ಉಪೇಕ್ಷಿಸುವುದು ಹಾಗೂ ಏಕ ಪ್ರಕಾರತೆಯಿಂದ ಚಿತ್ರಿಸುವುದನ್ನು ನಿಲ್ಲಿಸಬೇಕು ಮತ್ತು ಅಂತಹ ವರ್ಗಗಳ ಗುಣ, ಅವಗುಣಗಳನ್ನು ಸಮಾನ ದೃಷ್ಟಿಯಿಂದ ನೋಡಬೇಕೆಂದೂ ಹೇಳಿತ್ತು. ಆದರೆ, ಅಲ್ಲಿನ ಮಾಧ್ಯಮಗಳು ಇಂದಿಗೂ ಹೆಚ್ಚಿನ್ಸ್ ಸಮಿತಿಯ ಶಿಫಾರಸ್ಸಿನ ಬಗ್ಗೆ ಗಮನ ಕೊಟ್ಟಿಲ್ಲ. ಅದು ಸೈದ್ಧಾಂತಿಕವಾಗಿ ಸಾಧ್ಯವೂ ಇಲ್ಲ. ಅಮೆರಿಕಾದ ಮಾಧ್ಯಮಗಳು ಇಂದು ಯಾವ ಹಂತ ತಲುಪಿವೆ ಎಂದರೆ ಅವು ಸರ್ಕಾರಿ ಗೆಜೆಟ್‌ಗಳಂತೆ ವರ್ತಿಸುತ್ತವೆ. ನಿರ್ಭಯವಾಗಿ ಬರೆದು ಸರ್ಕಾರದ ವಿರೋಧ ಕಟ್ಟಿಕೊಳ್ಳುವ ಧೈರ್ಯ ಅವುಗಳ ಒಡೆಯರಿಗಿಲ್ಲ. ಅಮೆರಿಕಾದ ಮಾಧ್ಯಮಗಳ ಕಟುಟೀಕಾಕಾರರಾದ ನಾಂ ಚಾಮಸ್ಕಿ, ಎಡ್ವರ್ಡ್ ಎಸ್. ಹರ್ಮನ್ ಮತ್ತು ಚಿಂಗಡಿಕಿಯನ್‌ರ

ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಮಾಧ್ಯಮಗಳ ಬೇಜವಾಬ್ದಾರಿಯ ಧೋರಣೆಯ ಬಗ್ಗೆ ಸಾಕಷ್ಟು ಟೀಕೆಗಳಿವೆ. ಚರ್ಚೆಗಳು ನಡೆದಿವೆ. ನಡೆಯುತ್ತಲೂ ಇವೆ. ಅಲ್ಲಿನ ಮಾಧ್ಯಮಗಳು ಸಮಾಜ ಮತ್ತು ರಾಜ್ಯದಿಂದ ನಿರ್ಲಕ್ಷ್ಯಕ್ಕೆ ಒಳಗಾದವರ ಬಗ್ಗೆ ತೋರುವ ಅಸಡ್ಡೆ ಮತ್ತು ಮಹಿಳೆಯರು, ಅಮೆರಿಕಾದ ಮೂಲ ನಿವಾಸಿಗಳು ಹಾಗೂ ಆಫ್ರೋ ಅಮೆರಿಕನ್ ವರ್ಗಗಳ ಬಗ್ಗೆ ಮಾಧ್ಯಮಗಳು ಅದರಲ್ಲಿಯೂ ಮುಖ್ಯವಾಗಿ ಹಾಲಿವುಡ್ ಚಲನಚಿತ್ರಗಳು, ಟೆಲಿವಿಷನ್ ಧಾರಾವಾಹಿಗಳು ಚಿತ್ರಿಸುವ ಹಾಸ್ಯಾಸ್ಪದ ಮತ್ತು ನಕಾರತ್ಮಾಕ ಪ್ರತಿಮೆಗಳ ಬಗ್ಗೆ ಅಪಾರ ವಿರೋಧವಿದೆ.

ಲೇಖನಗಳನ್ನು ಅಲ್ಲಿನ ಮಾಧ್ಯಮಗಳು ಸ್ವಾಗತಿಸುವುದೂ ಇಲ್ಲ. ಅಲ್ಲಿನ ಸರ್ಕಾರದ ನೀತಿಯನ್ನು ಟೀಕಿಸುವ ಪಾಲ್ ಕ್ರುಗ್‌ಮನ್‌ರಂತವರ ಲೇಖನಗಳ ಪ್ರಕಟಣೆಯ ಸಂಖ್ಯೆ ತುಂಬಾ ಕಡಿಮೆ.

ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕಿಂತಲೂ ಹೆಚ್ಚು ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಯುಳ್ಳ ಭಾರತದಲ್ಲಿ ಮಾಧ್ಯಮಗಳು ಆ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಮೊದಲನೆಯ ಮತ್ತು ಎರಡನೆಯ ಪತ್ರಿಕಾ ಆಯೋಗಗಳ ವರದಿಯಲ್ಲಿ ಮಾಧ್ಯಮಗಳ ಸಾಮಾಜಿಕ ಜವಾಬ್ದಾರಿ, ವಿವಿಧ ಕೋಮುಗಳ ಬಗ್ಗೆ ಭ್ರಾತೃತ್ವ ಬೆಳೆಸುವ ಹೊಣೆಗಾರಿಕೆ ಮತ್ತು ಕೋಮು ಸೌಹಾರ್ದ ಮೂಡಿಸುವ ಮನೋಧರ್ಮದ ಬಗ್ಗೆ ಸಾಕಷ್ಟು ನೀತಿ ಮತ್ತು ಶಿಫಾರಸ್ಸುಗಳನ್ನು ನೋಡಬಹುದು. ೧೯೫೨ರಲ್ಲಿ ಸುಪ್ರಿಂಕೋರ್ಟ್‌ನ ನ್ಯಾಯಾಧೀಶ ರಾಜ್ಯಧ್ಯಕ್ಷ ಅವರ ನೇತೃತ್ವದಲ್ಲಿ ರಚಿತವಾದ ಮೊದಲನೆಯ ಆಯೋಗ ೧೯೫೪ ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಅದು ಕೋಮು ಕಲಹಗಳ ಬಗ್ಗೆ ವರದಿ ಮಾಡುವಾಗ ಪತ್ರಿಕೆಗಳು ತೋರುತ್ತಿರುವ ಅಲಕ್ಷತೆ ಮತ್ತು ಬೇಜವಾಬ್ದಾರಿಯ ಬಗ್ಗೆ ಕಟುವಾಗಿ ಟೀಕಿಸಿದೆಯಲ್ಲದೆ ಪತ್ರಿಕೆಗಳು ಮತೀಯ ಭಾವನೆಗಳನ್ನು ಕೆರಳಿಸುವುದು ಒಳ್ಳೆಯ ವ್ಯಾಪಾರ ಎಂದು ತಿಳಿದಂತಿವೆ ಎನ್ನುವ ಮಾತನ್ನು ಪ್ರಸ್ತಾಪಿಸಿದೆ. ಜವಾಬ್ದಾರಿ ಪತ್ರಿಕೋದ್ಯಮಕ್ಕಿಂತ ಹಣ ಗಳಿಕೆಯ ಚಿಂತೆಯೇ ಭಾರತೀಯ ಪತ್ರಿಕೆಗಳಿಗೆ ಮುಖ್ಯವಾಗಿತ್ತು ಎನ್ನುವುದನ್ನು ಆಯೋಗದ ವರದಿ ಸ್ಪಷ್ಟಪಡಿಸುತ್ತದೆ. ನನ್ನ ಪ್ರಬಂಧ ಮಾಧ್ಯಮಗಳ ವ್ಯಾಪಾರೀ ದೃಷ್ಟಿಯ ದುರಂತಗಳ ಬಗ್ಗೆ ಹೆಚ್ಚು ಒತ್ತು ಕೊಟ್ಟಿರುವುದರಿಂದ ಮೊದಲನೆಯ ಆಯೋಗದ ಮಾತುಗಳನ್ನು ಉದ್ಧರಿಸಿದ್ದೇನೆ.

"A great deal of the seurrilous writing that is noticeable in the press in often directed against communities or groups. Events preceding and following the position of the country have left so many people with a sense of grievance against one community or the other that the newspaper have found it a lucrative business to expliot thses feelings. Such communal writings are not confined to the anti-Hindu or the anti-Muslim press. These has been unfortunately quite a great deal of attacks on different sections within the various communities. We have not been able to find many instances where the sober and responsible press have come forward to condemn such writings intended to virify communities".

ನಮ್ಮ ಪತ್ರಿಕೆಗಳಲ್ಲಿ ಸಮಾಜದಿಂದ ಅಲಕ್ಷಿತ ಜನ ಮತ್ತು ಗುಂಪುಗಳು ಸುದ್ದಿಯಾಗುವುದು, ಆ ಸುದ್ದಿಯಲ್ಲಿ ರೋಚಕತೆ ಯಿದ್ದಾಗ ಮಾತ್ರ. ಆ ವರ್ಗಕ್ಕೆ ಸೇರಿದ ಜನರ ಕೊಲೆ, ಗುಂಪು ಘರ್ಷಣೆ, ಮತೀಯ ಕಲಹ ಮತ್ತು ಮಾನಾಪಹರಣಗಳು ಖಂಡಿತಕ್ಕೂ ಸುದ್ದಿಯಾಗುತ್ತವೆ. ಹಾಗೆ ಸುದ್ದಿ ಮಾಡುವುದೇ ತಾವು ಅಲಕ್ಷಿತ ಸಮುದಾಯದ ಬಗ್ಗೆ ತೋರುತ್ತಿರುವ ಮಹಾನ್ ಜವಾಬ್ದಾರಿ ಎಂದು ಮಾಧ್ಯಮಗಳು ಮತ್ತು ಮಾಧ್ಯಮಗಳಲ್ಲಿ ಕೆಲಸ ಮಾಡುವವರು ತಿಳಿದಿದ್ದಾರೆ. ಅನೇಕ ಸಂಕಿರಣ, ಸಂವಾದಗಳಲ್ಲಿ ಇದೇ ಅವರ ರಕ್ಷಣೆಯ ವಾದವಾಗಿರುತ್ತದೆ. ದಲಿತರ ನಿತ್ಯ ಶೋಷಣೆ, ಅಲ್ಪ ಸಂಖ್ಯಾತರ ದೀನಸ್ಥಿತಿಯ ಬಗ್ಗೆ ಅವು ಎಂದೂ crusade ನ

ಮಾದರಿಯಲ್ಲಿ ಬರೆಯುವುದಿಲ್ಲ, ಅವರ ನೋವು-ನಲಿವುಗಳ ಬಗ್ಗೆ ಕ್ಷ-ಕಿರಣ ಬೀರುವುದಿಲ್ಲ. ನಮ್ಮ ಇತ್ತೀಚಿನ ಪತ್ರಿಕೋದ್ಯಮದಲ್ಲಿ ಸುದ್ದಿಯನ್ನು ಎರಡು ಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯದು, sunshine stories ಎರಡನೆಯದು robbing stories. sunshineನಲ್ಲಿ ದ್ರಾವಿಡ್ ವಿವಾಹ, ಬೆಂಗಳೂರು ಹಬ್ಬ, ಡಯಾನಳ ಬಸಿರು, ಇತ್ಯಾದಿ ಇತ್ಯಾದಿ ಕಥೆಗಳಿರುತ್ತವೆ. ಬಡತನ, ಶೋಷಣೆ, ದುರಂತ, ಆತ್ಮಹತ್ಯೆ robbing ಕಥೆಗಳು. ಪತ್ರಿಕೆಗಳು ಹೆಚ್ಚು ಹೆಚ್ಚಾಗಿ sunshine storiesಗಳನ್ನು ಇಷ್ಟಪಡುತ್ತವೆ. robbing storiesಗಳನ್ನು ಯಾರು ಓದುತ್ತಾರೆ ಎನ್ನುವುದು ಅವರ ಲೆಕ್ಕಾಚಾರ.

ಎನ್‌ಡಿಟಿವಿ, ಸ್ಟಾರ್‌ನೆಟ್‌ವರ್ಕ್‌ನ ಭಾಗವಾಗಿದ್ದಾಗ ಸುದ್ದಿಯ ಕೊನೆಗೆ 'India matters' ಎನ್ನುವ ಅಭಿವೃದ್ಧಿ, ಶೋಷಣೆ, ಬಡತನಕ್ಕೆ ಸಂಬಂಧಿಸಿದ ಸಂಗತಿಗಳ ಬಗ್ಗೆ ವರದಿಯ ಪ್ರಸಾರವಿರುತ್ತಿತ್ತು. ಕೆಲವು ದಿನಗಳ ನಂತರ ಅದರ ಪ್ರಸಾರ ನಿಂತು ಹೋಯಿತು. ನಾನು ಆ ಬಗ್ಗೆ ಎನ್‌ಡಿಟಿವಿಯಲ್ಲಿರುವ ನನ್ನ ಮಿತ್ರರನ್ನು ಕೇಳಿದಾಗ ಅವರಿಂದ ಬಂದ ಉತ್ತರ 'ಆ ಸುದ್ದಿ ಪ್ರಸಾರಕ್ಕೆ ಪ್ರಾಯೋಜಕರು ಸಿಗಲಿಲ್ಲ' ಆದ್ದರಿಂದ ಅದನ್ನು ನಿಲ್ಲಿಸುವುದು ಅನಿವಾರ್ಯವಾಯಿತು.

ಪತ್ರಿಕೆಗಳ ಮಟ್ಟಿಗೆ ಸಂಪಾದಕರ ಹುದ್ದೆ ಪವಿತ್ರವಾದದ್ದು ಮತ್ತು ಘನತೆಯಿಂದ ಕೂಡಿದ್ದು. ನಮ್ಮಲ್ಲೀಗ ಬಹಳ ಪತ್ರಿಕೆಗಳಲ್ಲಿ ಸಂಪಾದಕರುಗಳೇ ಇಲ್ಲ, ಎಲ್ಲ ಕಾರ್ಯ ನಿರ್ವಾಹಕ ಸಂಪಾದಕರುಗಳೇ. ಎಂ.ಬಿ.ಎ. ಮಾಡಿರುವವರ ಮತ್ತು ಮಾರುಕಟ್ಟೆ ತಜ್ಞರ ಮಾತುಗಳಿಗಿರುವ ಗೌರವ ಪತ್ರಕರ್ತರಿಗಿಲ್ಲ.

ಇತ್ತೀಚಿನ ದಿನಗಳಲ್ಲಿ ನಮ್ಮ ಸುದ್ದಿ ಮಾಧ್ಯಮಗಳಿಗೆ ಯಾವ ಬಗೆಯ ವ್ಯಕ್ತಿಗಳು ಮತ್ತು ಘಟನೆಗಳು ಮುಖ್ಯವಾಗುತ್ತವೆ ಎನ್ನುವ ಬಗ್ಗೆ 'ಸೆಮಿನಾರ್' ನಿಯತಕಾಲಿಕದ ೨೦೦೩ರ ವಾರ್ಷಿಕ ಸಂಚಿಕೆಯಲ್ಲಿ 'Nero's Guests'ಪಿ. ಸಾಯಿನಾಥ್‌ರ ಎನ್ನುವ ಲೇಖನ ನಮ್ಮ ಕಣ್ಣು ತೆರೆಸುವಂತಿದೆ;

೨೦೦೩ರ ಅಕ್ಟೋಬರ್ ತಿಂಗಳಲ್ಲಿ ದೇಶದಲ್ಲಿ ಅನೇಕ ಮುಖ್ಯ ಘಟನೆಗಳು ನಡೆದವು; ಕಾಶ್ಮೀರದ ಚುನಾವಣೆ, ಕರ್ನಾಟಕ-ಆಂಧ್ರಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು, ಖಾಸಗೀ ಕಂಪನಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ತೆಗೆದುಕೊಳ್ಳುವ ಸಂಬಳದ ಬಗ್ಗೆ ಬಿರುಸಿನ ಚರ್ಚೆ, ಹರ್ಯಾಣದಲ್ಲಿ ಹಸುಗಳನ್ನು ಕೊಂದರೆಂದು ಐದು ಮಂದಿ ದಲಿತರ ಹತ್ಯೆ, ಇತ್ಯಾದಿ. ಆದರೆ, ನಮ್ಮ ಮಾಧ್ಯಮಗಳ ಹೆಚ್ಚು ವೇಳೆ, ಹೆಚ್ಚು ಸ್ಥಳವನ್ನಾಕ್ರಮಿಸಿದ ಸುದ್ದಿಯೆಂದರೆ ಅದೇ ತಿಂಗಳು ನಡೆದ ಅಮಿತಾಬ್ ಬಚ್ಚನ್‌ರ ಹುಟ್ಟಿದ ಹಬ್ಬದ ಸಂಭ್ರಮದ ಸುದ್ದಿ. 'ಟೈಂಸ್ ಆಫ್ ಇಂಡಿಯಾ' ೮ ಪುಟಗಳ ವರ್ಣರಂಜಿತ ವಿಶೇಷ ಪುರವಣಿಯನ್ನು ಪ್ರಕಟಿಸಿ ಬಚ್ಚನ್‌ರ ವೈಭವಪೂರ್ಣ ಹುಟ್ಟುಹಬ್ಬದ ವಿವರಗಳನ್ನು 'ದಿ ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ಮಾತ್ರ ಜಯಪ್ರಕಾಶ್ ನಾರಾಯಣ್‌ರ ೧೦೦ನೆಯ ಹುಟ್ಟುಹಬ್ಬದ ಸಂದರ್ಭಕ್ಕೆಂದು ಅದೇ ದಿನ ಅಕ್ಟೋಬರ್ ೧೧ರಂದು ಒಂದು ವಿಶೇಷ ಪುರವಣಿಯನ್ನು ಪ್ರಕಟಿಸಿತು ಎನ್ನುವುದನ್ನು ಬಿಟ್ಟರೆ ಉಳಿದಂತೆ ಗಾಂಧೀಜಿಯವರ ಜನ್ಮದಿನವನ್ನೂ ಪತ್ರಿಕೆಗಳಾಗಲಿ ಅಥವಾ ಟೆಲಿವಿಷನ್ ಚಾನೆಲ್‌ಗಳಾಗಲಿ ಗಂಭೀರವಾಗಿ ಪರಿಗಣಿಸಲಿಲ್ಲ ಎಂದು ಸಾಯಿನಾಥ್ ಬರೆಯುತ್ತಾರೆ.

ಗ್ರಾಮೀಣ ಭಾರತದ ಬಗ್ಗೆ ಶ್ರೇಷ್ಠ ವರದಿಗಳನ್ನು ಮಾಡಿರುವ ಮತ್ತು ದೇಶದಲ್ಲಿ ದಲಿತರ ಸ್ಥಿತಿ-ಗತಿಯ ಬಗ್ಗೆ 'ದಿ ಹಿಂದೂ' ಪತ್ರಿಕೆಯಲ್ಲಿ ಮನಮಿಡಿಯುವಂತಹ ವಾಸ್ತವ ಚಿತ್ರ ನೀಡಿದ ಪಿ. ಸಾಯಿನಾಥ್, ಮೇಲಿನ ವಿಶ್ಲೇಷಣೆಗಿಂತಲೂ ಇನ್ನೂ ಹೆಚ್ಚು ಕರುಣಾಜನಕವಾದ ಘಟನೆಯೊಂದನ್ನು ವಿವರಿಸುತ್ತಾ ತಮ್ಮ ಪ್ರಬಂಧವನ್ನು ಮುಂದುವರೆಸುತ್ತಾರೆ.

೨೦೦೩ರ ಅಕ್ಟೋಬರ್ ತಿಂಗಳಲ್ಲಿ ದೇಶದಲ್ಲಿ ಅನೇಕ ಮುಖ್ಯ ಘಟನೆಗಳು ನಡೆದವು; ಕಾಶ್ಮೀರದ ಚುನಾವಣೆ, ಕರ್ನಾಟಕ-ಆಂಧ್ರಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು, ಖಾಸಗೀ ಕಂಪನಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ತೆಗೆದುಕೊಳ್ಳುವ ಸಂಬಳದ ಬಗ್ಗೆ ಬಿರುಸಿನ ಚರ್ಚೆ, ಹರ್ಯಾಣದಲ್ಲಿ ಹಸುಗಳನ್ನು ಕೊಂದರೆಂದು ಐದು ಮಂದಿ ದಲಿತರ ಹತ್ಯೆ, ಇತ್ಯಾದಿ. ಆದರೆ, ನಮ್ಮ ಮಾಧ್ಯಮಗಳ ಹೆಚ್ಚು ವೇಳೆ, ಹೆಚ್ಚು ಸ್ಥಳವನ್ನಾಕ್ರಮಿಸಿದ ಸುದ್ದಿಯೆಂದರೆ ಅದೇ ತಿಂಗಳು ನಡೆದ ಅಮಿತಾಬ್ ಬಚ್ಚನ್‌ರ ಹುಟ್ಟಿದ ಹಬ್ಬದ ಸಂಭ್ರಮದ ಸುದ್ದಿ.

ಅಕ್ಟೋಬರ್ ತಿಂಗಳಿನಲ್ಲಿಯೇ ದೈವಾಧೀನರಾದ ಭಾರತದ ಖ್ಯಾತ ಕೈಗಾರಿಕೋದ್ಯಮಿ ಧೀರೂಭಾಯಿ ಅಂಬಾನಿ ಆರೋಗ್ಯ ತಪ್ಪುತ್ತಿದ್ದಂತೆಯೇ ಅವರು ದಾಖಲಾದ ಮುಂಬಯಿಯ ಬ್ರೀಚ್‌ಕ್ಯಾಂಡಿ ಆಸ್ಪತ್ರೆಯ ಮುಂದೆ ಟೆಲಿವಿಷನ್ ಕ್ಯಾಮೆರಾ ಹಿಡಿದ ವಿವಿಧ ಚಾನೆಲ್‌ಗಳ ವರದಿಗಾರರು ಮತ್ತು ಪತ್ರಿಕೆಗಳ ವಾಣಿಜ್ಯ ವರದಿಗಾರರು ದೊಡ್ಡ ಗುಂಪೇ ಅಲ್ಲಿ ಝಂಡಾ ಹೊಡೆಯಿತು. ಅಂಬಾನಿಯವರ ಆರೋಗ್ಯದ ಬಗ್ಗೆ ನಿಮಿಷ ನಿಮಿಷಕ್ಕೆ ಸುದ್ದಿ ರವಾನಿಸಲಾರಂಭಿಸಿದರು. ಅವರು ನಿಧನರಾದ ನಂತರ ಕರ್ನಾಟಕದಿಂದ ವಿಶೇಷ ವಿಮಾನದಲ್ಲಿ ತಂದ ೪೫೦ ಕಿಲೋಗ್ರಾಂ ಗಂಧದ ಕಟ್ಟಿಗೆಯಲ್ಲಿ ಅವರ ದೇಹವನ್ನು ಸುಡಲಾಯಿತು. ಅಂಬಾನಿಯವರ ನಿಧನದ ಸುದ್ದಿಯನ್ನು ೨೧ನೆಯ ಶತಮಾನದ ಮಹಾನ್ ಘಟನೆ ಎನ್ನುವಂತೆ ಮಾಧ್ಯಮಗಳು ಪ್ರಚಾರ ಮಾಡಿದವು.

ಆದರೆ, ಕೆಲವು ತಿಂಗಳ ಹಿಂದೆ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಗ್ರಾಮವೊಂದರಲ್ಲಿ ಬಂಡಿಯಪ್ಪ ಎನ್ನುವ ದಲಿತರೊಬ್ಬರು ನಿಧನರಾದರು. ಆ ಭಾಗದಲ್ಲಿ ಸತ್ತವರನ್ನು ಸುಡುವುದಕ್ಕಿಂತ ಹೂಳುವುದು ಸಂಪ್ರದಾಯ. ಆದರೆ, ಬಡಪಾಯಿ ಬಂಡಿಯಪ್ಪ ಎರಡೂ ಬಗೆಯ ಸಂಸ್ಕಾರವನ್ನು ಕಾಣುವಂತಾದದ್ದು ದುರಾದೃಷ್ಟಕರ. ಆ ಹಳ್ಳಿಯ ಜನ ದಲಿತನೊಬ್ಬನನ್ನು ತಮ್ಮ ಗ್ರಾಮದ ಬಳಿ ಹೂಳಲು ಬಿಡಲಿಲ್ಲ. ಅರ್ಧ ಹೂತಿದ್ದ ಶವವನ್ನು ಬಲತ್ಕಾರವಾಗಿ ಹೊರತೆಗೆಯುವಂತೆ ಮಾಡಿದರು. ವಿಧಿಯಿಲ್ಲದೆ ಅವರ ಹೆಂಡತಿ ಸುಶೀಲ ಭಾಯಿ ಗಂಡನ ಶವವನ್ನು ಅಗ್ನಿ ಸಂಸ್ಕಾರ ಮಾಡಲು ನಿರ್ಧರಿಸಿದಳು. ಆದರೆ, ಅದಕ್ಕೆ ಬೇಕಾದಷ್ಟು ಕಟ್ಟಿಗೆ ಮತ್ತು ಎಣ್ಣೆಯನ್ನು ಹೊಂದಿಸುವುದು ಸಾಧ್ಯವಾಗದೆ ಇದ್ದದ್ದರಲ್ಲಿಯೇ ಶವ ಸಂಸ್ಕಾರ ಮುಗಿಸುವುದು ಆಕೆಗೆ ಅನಿವಾರ್ಯವಾಯಿತು. ಹಾಗಾಗಿ ಬಂಡಿಯಪ್ಪನ ಅರ್ಧ ಬೆಂದ ದೇಹ ಒಂದು ದಿನಕ್ಕಿಂತ ಹೆಚ್ಚು ಕಾಲ ಹಳ್ಳಿಯ ಬಳಿ ಬಿದ್ದಿತ್ತು. 'ಪಾಲಿಯೆಸ್ಟರ್ ದೊರೆಯ ಶವಸಂಸ್ಕಾರದ ದಿನ ನಾನು ಸುಶೀಲಭಾಯಿಯನ್ನು ನೆನಪಿಸಿಕೊಂಡೆ', ಎಂದು ಸಾಯಿನಾಥ್ ಬರೆಯುತ್ತಾರೆ. ಬಂಡಿಯಪ್ಪನ ಶವಸಂಸ್ಕಾರದ ಕಥೆ ನಮ್ಮ ಮಾಧ್ಯಮಗಳಲ್ಲಿ ಪ್ರಮುಖವಾಗಿ ಪ್ರಕಟವಾಗಲಿಲ್ಲ!

ರೋಂನ ಮತಿಗೆಟ್ಟ ಚಕ್ರವರ್ತಿ ನೀರೋ ರಾತ್ರಿಯ ತನ್ನ ವೈಭವದ ಔತಣಕೂಟಗಳಿಗೆ ಬೆಳಕಿಗಾಗಿ ಕಂಬಗಳಿಗೆ ಯುದ್ಧಖೈದಿಗಳನ್ನು ಕಟ್ಟಿ ಮೋಂಬತ್ತಿಯಂತೆ ಉರಿಸುತ್ತಿದ್ದನಂತೆ. ಔತಣ ಕೂಟಗಳಿಗೆ ಬಂದ ನೀರೋವಿನ ಅತಿಥಿಗಳಿಗೆ ಕೂಡ ಬೆಳಕಷ್ಟೇ ಬೇಕಿದ್ದು ಸಾಯುವವರ ಬಗ್ಗೆ ಅಸಡ್ಡೆಯಿಂದಿರುತ್ತಿದ್ದರಂತೆ. ಇದು ನಿಜವೋ ಸುಳ್ಳೋ. ಆದರೆ, ನಮ್ಮ ಮಾಧ್ಯಮಗಳು ಕೂಡ ನೀರೋವಿನ ಅತಿಥಿಗಳಂತೆ ತಮ್ಮ ಸಂವೇದನಾಶೀಲತೆಯನ್ನು ಕಳೆದುಕೊಂಡಿವೆ ಎನ್ನುವುದು ಸತ್ಯ. ಇದು ಸಾಯಿನಾಥ್‌ರ ಪ್ರಬಂಧದ ಸಾರಾಂಶ.

ಮಾಧ್ಯಮಗಳ ಜಡಗಟ್ಟಿದ ಸೂಕ್ಷ್ಮತೆಯ ಬಗ್ಗೆ ಇನ್ನೂ ಅನೇಕ ಉದಾಹರಣೆಗಳನ್ನು ಹೇಳುತ್ತಾ ಹೋಗಬಹುದು. ಆದರೆ, ಸ್ಥಳದ ಅಭಾವವಿರುವುದರಿಂದ ಮಾಧ್ಯಮಗಳ ಕೊರತೆಯ ಈ ಸವಾಲನ್ನು ಎದುರಿಸುವ ಬಗ್ಗೆ ಮತ್ತು ಪರ್ಯಾಯ ವ್ಯವಸ್ಥೆಯ ಬಗ್ಗೆ ಗಮನ ಹರಿಸುವುದು ಮುಖ್ಯ ಎನಿಸುತ್ತದೆ.

ಮುಖ್ಯವಾಹಿನಿ (mainstream) ಮಾಧ್ಯಮಗಳು ಸಮಾಜದ ಅಲಕ್ಷಿತರ ಬಗ್ಗೆ ತೋರುತ್ತಿರುವ ಧೋರಣೆ ಮುಂದುವರಿಯುವುದರಿಂದ ನಾವು ಅವುಗಳನ್ನು ಟೀಕಿಸುವ ಬದಲು ಪರ್ಯಾಯ ಮಾರ್ಗಗಳನ್ನು ಹುಡುಕಿಕೊಳ್ಳುವತ್ತ ಚಿಂತಿಸಬೇಕಾಗಿದೆ.

ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಬನ್ನ ಕಂಟಕೊ ಎನ್ನುವ ೩೧ ವರ್ಷ ವಯಸ್ಸಿನ ಆಫ್ರೋ ಅಮೆರಿಕನ್ ಹುಟ್ಟುಕುರುಡ. ಕರಿಯರಿಗಾಗಿ ನಿರ್ಮಿಸಿದ ಸಾರ್ವಜನಿಕ ಗೃಹಗಳೊಂದರ ವಾಸಿ ಮತ್ತು ನಿರುದ್ಯೋಗಿ. ಇಲಿನಾಯ್ ರಾಜ್ಯದ ಸ್ಪ್ರಿಂಗ್‌ಫೀಲ್ಡ್‌ನ ವಾಸಿಯಾದ ಆತ ಅಮೆರಿಕಾದ ಮುಖ್ಯ ಮಾಧ್ಯಮಗಳಲ್ಲಿ ಕರಿಯರ ಬಗ್ಗೆ ಬರುತ್ತಿದ್ದ ಸುದ್ದಿ ಪ್ರಮಾಣ ಮತ್ತು ಅಪ್ರಾಮುಖ್ಯತೆಯಿಂದ ಬೇಸತ್ತು ಹೋಗಿದ್ದ. ಅವುಗಳಿಗೆ ಪರ್ಯಾಯವಾಗಿ ಅವನು ೧೯೮೬ರಲ್ಲಿ 'ಬ್ಲಾಕ್ ಲಿಬರೇಷನ್ ರೇಡಿಯೊ' ಆರಂಭಿಸಿದ. ಅಮೆರಿಕಾದ ಶಾಸನಗಳ ವಿರುದ್ಧ ಅವನು ಆರಂಭಿಸಿದ ಒಂದು ಕಿಲೋ ವ್ಯಾಟ್

ಟ್ರಾನ್ಸ್‌ಮೀಟರಿನ ರೇಡಿಯೊ ಕೇಂದ್ರ ಅಮೆರಿಕಾದ ಉಳಿದ ಆಫ್ರೋ ಅಮೆರಿಕನ್‌ರಿಗೆ ಅಗಾಧ ಸ್ಫೂರ್ತಿ ನೀಡಿತು. ಆತ ಅವರಿಗೊಂದು ಪರ್ಯಾಯ ವ್ಯವಸ್ಥೆಯನ್ನು ಹುಡುಕಿ ಕೊಟ್ಟಿದ್ದ. ಅವನನ್ನು ಮಾದರಿಯಾಗಿಟ್ಟುಕೊಂಡು ಅಮೆರಿಕಾದಾದ್ಯಂತ 'ಸ್ವತಂತ್ರ ರೇಡಿಯೊ' ಆಂದೋಲನವೇ ಆರಂಭವಾಯಿತು. ನೂರಾರು 'ಮೈಕ್ರೋ-ರೇಡಿಯೊ'ಗಳು ತಮ್ಮ ಪ್ರಸಾರವನ್ನಾರಂಭಿಸಿದವು.

ಇಂತಹ ಪ್ರಯೋಗಗಳು ನಮ್ಮಲ್ಲಿಯೂ ಆರಂಭವಾಗಬೇಕು. 'ಸ್ಪಂದನ'ದಂತಹ ಪತ್ರಿಕೆಗಳು, ಸಣ್ಣ ಶಕ್ತಿಯ ರೇಡಿಯೊ ಕೇಂದ್ರಗಳು ನೂರು, ಸಾವಿರ ಸಂಖ್ಯೆಯಲ್ಲಿ ತಮ್ಮ ಧ್ವನಿಯನ್ನು ಮೊಳಗಿಸಬೇಕು. ೧೯೯೫ರ ಸುಪ್ರಿಂಕೋರ್ಟ್‌ನ ಐತಿಹಾಸಿಕ ತೀರ್ಪು ಮತ್ತು ಉದಾರೀಕರಣದ ಒತ್ತಾಯದಿಂದ ಕೇಂದ್ರ ಸರ್ಕಾರ ವಿದ್ಯುನ್ಮಾನ ಮಾಧ್ಯಮಗಳಲ್ಲಿ ತಂದಿರುವ ಬದಲಾವಣೆಗಳಿಂದ ಈಗ ಯಾರು ಬೇಕಾದರೂ ರೇಡಿಯೊ, ಟೆಲಿವಿಷನ್ ಕೇಂದ್ರಗಳನ್ನು ಹೊಂದುವುದು ಸಾಧ್ಯ. ಅದಕ್ಕಾಗುವ ವೆಚ್ಚ ಇತ್ಯಾದಿಗಳ ಪ್ರಶ್ನೆಯ ಬಗ್ಗೆ ನಾನು ಇಲ್ಲಿ ಚರ್ಚಿಸುತ್ತಿಲ್ಲ. ಆ ಬಗ್ಗೆ ಗೊಂದಲವಿದೆ. ಆದರೆ, ಮನಸ್ಸು ಮಾಡಿದರೆ ಬನ್ನ ಕಂಟಕೊವಿನ 'ಬ್ಲಾಕ್ ಲಿಬರೇಷನ್ ರೇಡಿಯೊ' ನಮ್ಮಲ್ಲಿಯೂ ಸಾಧ್ಯ ಎನ್ನುವುದು ನನ್ನ ಖಚಿತ ಅಭಿಪ್ರಾಯ. ಈ ನಿಟ್ಟಿನಲ್ಲಿ ಸಣ್ಣ ಪ್ರಮಾಣದ ಪ್ರಯೋಗಗಳು ನಮ್ಮಲ್ಲಿ ಆರಂಭವಾಗಿದೆ. ಆದರೆ, ಅವು ಇನ್ನೂ ಆಂದೋಳನವಾಗಿಲ್ಲ.

ಇತ್ತೀಚಿನ ದಿನಗಳಲ್ಲಿ ಮುಖ್ಯ ಮಾಧ್ಯಮಗಳು ಮತ್ತು ಅಲಕ್ಷಿತ ವರ್ಗಗಳ ಬಗ್ಗೆ ಅವುಗಳ ಧೋರಣೆಯ ಪ್ರಶ್ನೆ ಎದುರಾದಾಗಲೆಲ್ಲಾ ನಾನು ಪರ್ಯಾಯ ಮಾಧ್ಯಮ ಪರಂಪರೆಯನ್ನು ಗಟ್ಟಿಮಾಡುವ ಬಗ್ಗೆ ವಾದಿಸಿದ್ದೇನೆ. Black press, Freedom, Radioಗಳು ಸಾಧ್ಯವಾಗುವುದಾದರೆ, ಮಹಾರಾಷ್ಟ್ರದಲ್ಲಿ ದಲಿತ ಸಾಹಿತ್ಯ ಕನ್ನಡದಲ್ಲಿ ಬಂಡಾಯ ಸಾಹಿತ್ಯ ಪರಂಪರೆಯಿರಬಹುದಾದರೆ ಅಲಕ್ಷಿತರ ಹಿತಾಸಕ್ತಿಗಳನ್ನು ರಕ್ಷಿಸುವಂತಹ ಮಾಧ್ಯಮ ಪರಂಪರೆಯೊಂದು ನಮ್ಮಲ್ಲಿ ಇನ್ನೂ ಏಕೆ ಹುಟ್ಟಿಕೊಂಡಿಲ್ಲ ಎನ್ನುವುದು ನನ್ನನ್ನು ಕಾಡುತ್ತಿರುವ ಪ್ರಶ್ನೆ ಕೂಡ.

ತಾಂತ್ರಿಕತೆಯ ಬೆಳವಣಿಗೆಯ ಈ ದಿನಗಳಲ್ಲಿ ಹೊಸ ಮಾಧ್ಯಮಗಳನ್ನು ಭಿನ್ನಮತೀಯ ಭಾವನೆ, ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಅಭಿವ್ಯಕ್ತಿಗೊಳಿಸಲು ಬಳಸಿಕೊಳ್ಳುವ ಸಾಧ್ಯತೆಗಳ ಬಗ್ಗೆಯೂ ನಾವು ಚಿಂತಿಸಬೇಕಾಗಿದೆ. ಮುಖ್ಯ ವಾಹಿನಿ ಮುಚ್ಚಿಹಾಕವ ಕಾಶ್ಮೀರದ ಜನರ ಬವಣೆ, ಪ್ಯಾಲೀಸ್ತೇನರ ಹೋರಾಟದ ಸತ್ಯದ ಮುಖಗಳನ್ನು ಹೊರ ಜಗತ್ತಿಗೆ ತಿಳಿಸಲು ಸಾವಿರಾರು ವೆಬ್‌ಸೈಟ್‌ಗಳಿರಬಹುದಾದರೆ ಭಾರತೀಯ ಅಲ್ಪಸಂಖ್ಯಾತರು ಶೋಷಿತ ವರ್ಗದ ಸುಖ ದುಃಖಗಳನ್ನು ಹಂಚಿಕೊಳ್ಳಲು ನಾವು ನೂರಾರು ವಿಭಿನ್ನ ಅಭಿರುಚಿಯ ವೆಬ್‌ಸೈಟ್‌ಗಳನ್ನು ಹೊಂದುವುದೂ ಸಾಧ್ಯವಿದೆ. ಆ ಬಗ್ಗೆ ಗಂಭೀರ ಚಿಂತನೆ ಮತ್ತು ಕಾರ್ಯ ತಡವಾಗಿಯೂ ಆರಂಭವಾಗಬೇಕಾಗಿದೆ. □

ಸಣ್ಣ ಉಳಿತಾಯ ಯೋಜನೆಗಳ ಪಕ್ಷಿನೋಟ

(ಬಡ್ಡಿ ದರ ೧-೩-೨೦೦೩ ರಿಂದ ಜಾರಿಯಲ್ಲಿದ್ದಂತೆ)

ಕಿಸಾನ್ ವಿಕಾಸ ಪತ್ರ ೮ ವರ್ಷ ೭ ತಿಂಗಳುಗಳಲ್ಲಿ ದ್ವಿಗುಣವಾಗುತ್ತದೆ. ೨½ ವರ್ಷಗಳ ನಂತರ ಬಡ್ಡಿ ಸಹಿತ ಅವಧಿಪೂರ್ತ ಮರುಪಾವತಿಗೆ ಅವಕಾಶ.	ರೂ. ೧೦೦, ೫೦೦, ೧೦೦೦, ೫೦೦೦, ೧೦,೦೦೦ ಮತ್ತು ೫೦,೦೦೦ ಮೌಲ್ಯಗಳಲ್ಲಿ ಅಂಚೆ ಕಛೇರಿಗಳಲ್ಲಿ ಲಭ್ಯ. ಹೂಡಿಕೆಗೆ ಗರಿಷ್ಠ ಮಿತಿ ಇಲ್ಲ. ನಾಮ ನಿರ್ದೇಶನ ಸೌಲಭ್ಯವಿದೆ. ವ್ಯಕ್ತಿಗಳು, ಟ್ರಸ್ಟ್‌ಗಳು ಪತ್ರಗಳನ್ನು ಖರೀದಿಸಬಹುದು.
೬ ವರ್ಷದ ರಾಷ್ಟ್ರೀಯ ಉಳಿತಾಯ ಪತ್ರ ೮ನೇ ಮಾಲಿಕೆ ಬಡ್ಡಿಯನ್ನು ೬ ತಿಂಗಳಿಗೊಮ್ಮೆ ಲೆಕ್ಕ ಹಾಕಿ ಅವಧಿಯ ನಂತರ ನೀಡಲಾಗುವುದು.	**ಇತರ ಸೌಲಭ್ಯಗಳು:** ಅವಧಿ ೬ ವರ್ಷ. ಠೇವಣಿಗೆ ವರಮಾನ' ತೆರಿಗೆಯ ಅಧಿನಿಯಮ ೮೮ರ ಅನ್ವಯ ರಿಯಾಯತಿ ಹಾಗೂ ಬರುವ ಬಡ್ಡಿಗೆ ಅಧಿನಿಯಮ ೮೦ ಎಲ್‌ರ ಅನ್ವಯ ವಿನಾಯತಿ. ರೂ. ೧೦೦, ೫೦೦, ೧೦೦೦, ೫೦೦೦ ಮತ್ತು ೧೦,೦೦೦ ಮೌಲ್ಯಗಳಲ್ಲಿ ದೊರೆಯುವುದು. ರೂ. ೧೦೦ರ ಠೇವಣಿ ೬ ವರ್ಷಗಳಲ್ಲಿ ರೂ. ೧೬೦.೧೦ ಆಗುತ್ತದೆ. ಹೂಡಿಕೆಗೆ ಗರಿಷ್ಠ ಮಿತಿ ಇಲ್ಲ.
ಅಂಚೆ ಕಛೇರಿಯ ಮಾಸಿಕ ವರಮಾನ ಯೋಜನೆ **ವಾರ್ಷಿಕ ಬಡ್ಡಿದರ:** ಶೇಕಡಾ ೮ ಬಡ್ಡಿಯನ್ನು ಪ್ರತಿ ತಿಂಗಳು ನೀಡಲಾಗುವುದು ರೂ. ೧,೦೦,೦೦ ಠೇವಣಿ ಮೇಲೆ ಪ್ರತಿ ತಿಂಗಳು ರೂ. ೬೬೭/- ಲಭ್ಯ. ಅವಧಿ ನಂತರ ಶೇಕಡಾ ೧೦ ಬೋನಸ್ ಸೇರಿಸಿ ಠೇವಣಿ ಮರಳಿಸಲಾಗುವುದು.	**ಇತರ ಸೌಲಭ್ಯಗಳು :** ಅವಧಿ ೬ ವರ್ಷ. ೧ ವರ್ಷದ ನಂತರ ಶೇಕಡಾ ೫ರ ಕಡಿತದೊಂದಿಗೆ ಅವಧಿಪೂರ್ಣ ಮರುಪಾವತಿಗೆ ಅವಕಾಶ. ೩ ವರ್ಷಗಳ ನಂತರ ಅವಧಿಪೂರ್ಣ ಮರುಪಾವತಿಗೆ ಕಡಿತವಿಲ್ಲ. ಗಳಿಸಿದ ಬಡ್ಡಿ ಮತ್ತು ಬೋನಸ್ ಮೇಲೆ ವರಮಾನ ತೆರಿಗೆ ಅಧಿನಿಯಮ ೮೦ ಎಲ್ ಪ್ರಕಾರ ವಿನಾಯತಿ. ಕನಿಷ್ಠ ರೂ. ೧೦೦೦ ಗರಿಷ್ಠ ಮಿತಿ ಒಬ್ಬ ವಯಸ್ಕರಿಗೆ ರೂ. ೩,೦೦,೦೦೦ ಹಾಗೂ ಇಬ್ಬರು/ಮೂವರು ವಯಸ್ಕರ ಹೆಸರಿನಲ್ಲಿರುವ ಜಂಟಿ ಖಾತೆಯ ಗರಿಷ್ಠ ಮಿತಿ ರೂ. ೬,೦೦,೦೦೦.
೧೫ ವರ್ಷದ ಸಾರ್ವಜನಿಕ ಭವಿಷ್ಯ ನಿಧಿ **ವಾರ್ಷಿಕ ಬಡ್ಡಿದರ :** ಶೇಕಡಾ ೮ ಚಕ್ರಬಡ್ಡಿ. ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ಮಿತಿ ರೂ. ೫೦೦/- ಹಾಗೂ ರೂ. ೭೦,೦೦೦.	**ಇತರ ಸೌಲಭ್ಯಗಳು :** ಅವಧಿ ೧೫ ವರ್ಷ. ಠೇವಣಿಗೆ ಆದಾಯ ತೆರಿಗೆ ಕಾಯಿದೆ ಅಧಿನಿಯಮ ೮೮ರಂತೆ ರಿಯಾಯತಿ. ಸಂಪತ್ತು ತೆರಿಗೆಯಿಂದ ಪೂರ್ಣ ರಿಯಾಯಿತಿ. ಗಳಿಸಿದ ಬಡ್ಡಿಗೆ ಅಧಿನಿಯಮ ೧೦ರ ಅನ್ವಯ ಸಂಪೂರ್ಣ ತೆರಿಗೆ ವಿನಾಯತಿ. ಖಾತೆಗಳನ್ನು ಪ್ರಾರಂಭಿಸಿದ ೩ನೇ ಆರ್ಥಿಕ ವರ್ಷದಿಂದ ಸಾಲ ಪಡೆಯುವ ಸೌಲಭ್ಯ ವಿದೆ. ೭ನೇ ಆರ್ಥಿಕ ವರ್ಷದಿಂದ ಪ್ರತಿ ವರ್ಷ ವಿತ್‌ಡ್ರಾಯಲ್ ಮಾಡಬಹುದು. ಕೋರ್ಟ್ ಜಪ್ತಿಯಿಂದ ಮುಕ್ತಿ.
ನಿವೃತ್ತರಾಗಲಿರುವ ಸರ್ಕಾರಿ ಮತ್ತು ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ನೌಕರರ ಠೇವಣಿ ಯೋಜನೆ **ವಾರ್ಷಿಕ ಬಡ್ಡಿದರ:** ಶೇ. ೭ರಷ್ಟು ಬಡ್ಡಿ. ೩೦ ಜೂನ್ ಮತ್ತು ೩೧ ಡಿಸೆಂಬರ್‌ನಲ್ಲಿ ಪಾವತಿ. ಕನಿಷ್ಠ ಠೇವಣಿ ರೂ. ೧೦೦೦. ಗರಿಷ್ಠ ಠೇವಣಿ ನಿವೃತ್ತಿ ಸಮಯದಲ್ಲಿ ದೊರೆತ ಮೊಬಲಿಗೆಗೆ ಮೀರಕೂಡದು.	**ಇತರ ಸೌಲಭ್ಯಗಳು:** ಅವಧಿ ೩ ವರ್ಷ. ನಿವೃತ್ತಿ ಸಮಯದಲ್ಲಿ ಲಭಿಸಿದ ಹಣ ಪಡೆದ ಮೂರು ತಿಂಗಳೊಳಗೆ ಖಾತೆಯನ್ನು ತೆರೆಯಬೇಕು. ಗಳಿಸಿದ ಬಡ್ಡಿಗೆ ಸಂಪೂರ್ಣ ತೆರಿಗೆ ವಿನಾಯತಿ. ಖಾತೆಗಳನ್ನು ಆಯ್ದ ಬ್ಯಾಂಕುಗಳಲ್ಲಿ ತೆರೆಯಬಹುದು.

ಧನ ರಕ್ಷಿಪನ ರಕ್ಷಿಪುದು ಧನ

ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ನಿರ್ದೇಶನಾಲಯ
ಪೋಡಿಯಂ ಬ್ಲಾಕ್, ಮೊದಲನೆಯ ಅಂತಸ್ತು, ವಿಶ್ವೇಶ್ವರಯ್ಯ ಕೇಂದ್ರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ: 286 2287, 2867109, 2868470, 2862785

ವಿರಾಟ

ಕಥೆ

ಕುಂ. ವೀರಭದ್ರಪ್ಪ



ಗುಡಿ ಹಿಂದಲ ಮೂಳೆ ಓಬಯ್ಯನ ಮನಸೊಳಗ ಹೆಂಗೆಂಗೋ ಆಗತೊಡಗಿತು. ಮೂಡಬಾರದ ಚಿತ್ರ ವಿಚಿತ್ರಾಗಳು ಮೂಡತೊಡಗಿದವು. ಕಾಣಬಾರದ ತರಾವರಿ ಮಂದಿ ಕಾಣತೊಡಗಿದರು. ಮನವೆಂಬ ಯಿಸ್ತಾರವಾದ ಜಗುಲಿಯ ಮ್ಯಾಲೆ ಗುಂಪುಗುಂಪಾಗಿ ಕೂತು ಮಾತಾಡಲಾರಂಭಿಸಿದರು. ತನ್ನ ದೇಹವೆಂಭೋ ದೇಹವು ಗಿರಿಗುಡ್ಡ ಗಹ್ವರಗಳಲ್ಲಿ ತಾನೇ ತಾನಾಗಿ ಸುಳಿದಾಡುತ್ತಿರುವಂತೆ; ಹೆಜ್ಜೆ ಹೆಜ್ಜೆಗೊಂದೊಂದರಂತೆ ಯದುರಾದ ಗಂಟೆ ಜಾಗಟೆಗಳನ್ನು ಭಾರಿಸುತ್ತಿರುವಂತೆ; ಶಂಖಃ ಕಹಳೆ ವೂದುತ್ತಿರುವಂತೆ; ಕತ್ತಿ ಕಠಾರಿ ತಿರುವುತ್ತಿರುವಂತೆ; ಕಾಲ ಬೆರಳುಗಳಿಂದ ಹೆಬ್ಬಂಡೆಗಳನ್ನು ವುರುಳಿಸುತ್ತಿರುವಂತೆ; ಮುಷ್ಠಿಯಿಂದ ನಿಡುಗಲ್ಲುಗಳನ್ನು ಕುಟ್ಟಿ ಪುಡು ಪುಡಿ ಮಾಡುತ್ತಿರುವಂತೆ ಭಾಸವಾಗತೊಡಗಿತು. ತಾನು ಬಿಡುತ್ತಿರುವ ವಂದೊಂದು ವುಸುರು ಬಿರುಗಾಳಿ, ಸುಂಟರಗಾಳಿಗಳಾಗಿ ಸಂಚರಿಸುತ್ತಿರುವಂತೆ; ತಾನು ಯಿಡುತ್ತಿರುವ ವಂದೊಂದು ಹೆಜ್ಜೆಗೆ ಭೂಮ್ತಾಯಿ ಗಡಗಡ ನಡುಗುತ್ತಿರುವಂತೆ; ಕಾಗೆ; ಗುಬ್ಬಿ; ಹದ್ದು; ರಣಹದ್ದುಗಳೇ ಮೊದಲಾದ ಪಕ್ಷಿಗಳು ಆಕಾಶದ ತುಂಬ ಅಂಡಾವರನವಾಗಿರುವಂತೆ; ಹುಲಿ ಸಿಂಹ ಕರಡಿ ಕಿರುಬಗಳೇ ಮೊದಲಾದ ಪ್ರಾಣಿಗಳು ದಿಕ್ಕಾಪಾಲಾಗಿ ವೋಡುತ್ತಿರುವಂತೆ ಭಾಸವಾಗತೊಡಗಿತು.

ತನ್ನ ಕಣ್ಣುಗಳು ತನ್ನ ಸ್ವಾಧೀನದಲ್ಲಿಲ್ಲವಲ್ಲ; ತನ್ನ ಕಿವಿಗಳು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತನ್ನ ಬಾಯಿ ತನ್ನ ಸ್ವಾಧೀನದಲ್ಲಿಲ್ಲವಲ್ಲ, ತನ್ನ ಮೂಗು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತನ್ನ ಕಯ್ಯಿ ಕಾಲುಗಳು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತನ್ನ ಸರೀರಯಂಬುದು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತನ್ನ ಮನಸ್ಸು ಯಂಬುದು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತಾನು ಸವಾರಿ ಮಾಡುತ್ತಿರುವ ಯೇಳು ಮುಖದ ಪ್ರಾಣಿಯು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತಾನು ಲೀಲಾಯಿನೋದ ಮಾಡುತ್ತಿರುವ ಲೋಕವು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತಾನು ನೋಡುತ್ತಿರುವ ನೋಟವು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತಾನು ಆಡುತ್ತಿರುವ ಮಾತುಗಳು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತಾನು ನಡೆಯುತ್ತಿರುವ ರೀತಿಗೆ ದಿಕ್ಕುದೆಸೆಗಳಿಲ್ಲವಲ್ಲ, ತಾನು ಬದುಕುತ್ತಿರುವ ಬದುಕುಯಂಬುದು ಗುರುತು ಸಿಗದಂಗಾಯ್ತಲ್ಲ, ಯಂದು ಮುಂತಾಗಿ ಹಲುಬಿಕಂತ ಓಬಯ್ಯನು ತನ್ನ ಸರೀರದಿಂದ ತಾನು ಹೊರಗಡೀಕೆ ಬಂದು ಮಿಕಿಮಿಕಿ ನೋಡಿಕೊಳ್ಳುತ್ತಾನೆ.

ಅದು ತನ್ನ ಸರೀರವಲ್ಲ

ತನ್ನ ಸರೀರದ ಕಯ್ಯಿಕಾಲುಗಳು ತಾನೇ ತಾನಾಗಿ ಬೆಳೆಯುತ್ತಿರುವುದ ಕಂಡು, ಕಿವಿಗಳು ಮಾರು ಮಾರಗಲವಾಗುತ್ತಿರುವುದ ಕಂಡು; ತನ್ನ ಕಣ್ಣುಗಳೊಳಗೆ ಸಾವುರ, ಸಾವುರ ದೀವಟಿಗಳ ದಿಬ್ಬಣ ಹೊಂಟಿರುವುದ ಕಂಡು; ತನ್ನ ಹುಬ್ಬುಗಳು ಬೇಲಿ ಪೊದೆಗಳಾಗುತ್ತಿರುವುದ ಕಂಡು, ತನ್ನ ಬಾಯೆಂಬುದು ಬೃಹತ್ ಕೂಪವಾಗುತ್ತಿರುವುದ ಕಂಡು, ತುಟಿ ಸಂದುಗಳಲ್ಲೊಂದೊಂದು ಮಾರು ಮಾರುದ್ದ ಕ್ವಾರೆ ಹಲ್ಲುಗಳು ಮೂಡುತ್ತಿರುವುದ ಕಂಡು ತನ್ನೆದೆ ಭಾಗದಲ್ಲಿ ಗುಡ್ಡಗಾತುರದ ಮೊಲೆಗಳು ಮೂಡುತ್ತಿರುವುದ ಕಂಡು, ತನ್ನ ಕುಂಡಿಗಳೊಂದೊಂದು ಬಿಕ್ಕಿ ಮರಡಿ ದಿಬ್ಬವಾಗುತ್ತಿರುವುದ ಕಂಡು, ತನ್ನ ಹಣೆಭಾಗ ಯೋಜನದುದ್ದಗಲವಾಗುತ್ತಿರುವುದ ಕಂಡು, ಅದರ ನಟ್ಟನಡೂಕೆಯೇಳು ಮೊರಗಲದ ಕುಂಕುಮ

ಬೊಟ್ಬೊಂದು ರಾರಾಜಿಸುತ್ತಿರುವುದ ಕಂಡು, ತನ್ನ ಕೊರಳೊಳಗ ತರಾವರಿ ರುಂಡಗಳು ಪೋಣಿಸಿದ ಹಾರಗಳು.

ನೋಡುತ ನೋಡುತ ಬೆಕ್ಕಸ ಬೆರಗಾದ ಓಬಯ್ಯನು ತನ್ನ ಆ ಯಿರಾಟ್ ಯದ್ದರೆ ಕುಂಡರಲಿಕ್ಕಾಗದೆ ಜೀವಾತುಮ ಯಂಬುದು ಯಿಲಯಿಲನೆ ವದ್ದಾಡತಯ್ತೆ; ಯಿದರೊಳಗೆ ಮಾವುಸಗಿರ್ಧ ಮಣಯಿದ್ದರೆ ಮಸ್ತಾದೀತು, ರಕುತ ಪಾವೊವರೆ ಯಿದ್ದರೆ ಮಸ್ತಾದೀತು, ಯಿಂದ್ರಿಯಗಳು ಸುಮಾರಯ್ಯಾವೆ; ಕಾಯಕಷ್ಟವ ಮಾಡೀ ಮಾಡೀ ಛಪ್ಪನ್ನಾರು ಕೀಲುಗಳು ಸವಕಂಡು ಹೋಗ್ಯಾವೆ, ಯಿಂಥ ಸರೀರದೊಳಗೆಯೇನು ಅಯಿಭೋಗ ಆಯ್ತಂತ ಬಂದೀ ಯವ್ವಾ..ಹೆಂಗ ವಸ್ತಿಯಿರತೀಯವ್ವಾ; ಯಾವ ಸುಖ ಪಡುತೀಯವ್ವಾ; ಯಿನ್ನ ಮಟ ಮಟ ಮಯ್ಯಿಗೆ ಸರೀರದೊಳಗೆ ನೀನೆಂಗ ಯೇರತೀಯವ್ವಾ...ನೀನೆಂಗ ಯಿಳಿತೀಯವ್ವಾ..ಯಿ ಪಾಪಿಷ್ಠ ಗೇಡಿ ಸರೀರವು ನಿಂಗೆ ತಕ್ಕುದ್ದಲ್ಲ, ನನ್ನ ಯಿ ಸರೀರದೊಳಗೆ ನಿಂಗೆ ವುಂಬಲಿ ಕೇನಯ್ತೆ; ನಿಂಗೆ ಕುಡಿಯಲಿಕ್ಕೇನಯ್ತೆ; ನಿಂಗೆ ವುಸುರಾಡಲಿಕ್ಕೇನಯ್ತೆ; ಕುಂತರೆ ನೆಲ ಕುಸಿಯೋ ಹಂಗಯ್ತೆ; ಯದ್ರೆ ನಿನ ಕಿರೀಟ ನನ್ನೆದೆ ಪಕ್ಕೆಲುವಿಗೆ ಅಟೆಯತಯ್ತೆ. ಯಿಂದಕೆ ಹೊಳ್ಳಂಗಿಲ್ಲ; ಮುಂದಕೆ ಬಾಗೋ ಹಂಗಿಲ್ಲ ಆಸರಿಕೆ ಬ್ಯಾಸರಿಕೆ ಮಯ್ನ ಲಟಲಟಾಂತ ಮುರಿಯೋ ಹಂಗಿಲ್ಲ; ಯಿದರೊಳಗೆ ಕ್ಯೋಳಾಕ್ಯೋನಿಲ್ಲ; ನೋಡಲಿಕ್ಯೋನೂ ಯಿಲ್ಲ; ಆಡಲಕ್ಯೋನಿಲ್ಲ; ಮಾಡಲಕ್ಯೋನಿಲ್ಲ.. ಮಯ್ನ ಚೆಲ್ಲಾಡಲಕ್ಯೋನೂ ಯಿಲ್ಲೆವ್ವಾ..ವಂದು ಗಿಡಾಯಿಲ್ಲ..ವಂದು ಮರಯಿಲ್ಲ..ಯಲ್ಲಾ ಬಟ್ಟಂಬಯಲವ್ವಾ.. ಹಾಡಲಕರಗಿಣಿ ಯಿಲ್ಲ, ಕುಣಿಯಲಕೊಂದೂ ನವುಲಿಲ್ಲವ್ವಾ.. ಹರಿಯಲಕ ಹಳ್ಳಯಿಲ್ಲವ್ವಾ..ಧುಮಲಿಕಲಿ ಝುರಿಯಿಲ್ಲವ್ವಾ.. ಯೇರಲಕ ಗಿರಿಗುಡ್ಡಗಳಿಲ್ಲವ್ವಾ.. ಅಡಗಲಿಕ ಗವಿ ಗಂವರಗಳಿಲ್ಲವ್ವಾ..ಯಿಂಥ ಸರೀರ ನಿಂಗೆ ವಸ್ತಿಮಾಡಲಕ ತಕ್ಕುದ್ದಲ್ಲ. ನನ್ನಯಾ ಸೂತಕದ ಸರೀರದೊಳಗೆ ವಸ್ತಿ ಮಾಡಿ ನೀ ಮಯ್ಲಿಗೆ ಆಗಬ್ಯಾಡವ್ವಾ..ವಪ್ಪತ್ತುಂಡು ಬಾಯಿಗೆ ಬೀಗ ಚುಚಕೊಂಡು ನಡಕೋತ ನಡೆಕೋತ ಬಂದು ನಿಂಗೆ ಮಂಡೆ ಕೊಟ್ಟೇನವ್ವಾ..ಮುಗಿ ಅಂದರ ಕಯ್ನ ಮುಗುದೇ ನವ್ವಾ..ಬೀಳು ಹಂದರ ಕಾಲಿಗೆ ಬಿದ್ದೇನವ್ವಾ.. ಕೊಡು ಯಂದರ ನೆತ್ತರ ಧಾರೆ ಯರದೇನವ್ವಾ..ಹಸಿವು ತೀರಿಸೆಂದರೆ ಮಯ್ನ ಅಡ್ಡಡ್ಡ ಕುಯ್ದು ತುಂಡುತುಂಡು ಮಾಡಿ ಯಡೆ ಯಿಕ್ಕೇನವ್ವಾ; ಯ್ಯೋನೂ ಅರಿಯದ ಮೂಳ ನಾನು. ಯದಿಯಾಗಿದ್ದ ಗಿದ್ದುನ ಮಾತನ್ನೆಲ್ಲ ಬಗಬಗದ ಯ್ಯೋಳೀನಿ. ದಯಮಾಡಿ ನನ್ನ ಸರೀರದೊಳಗೆ ಪಾದ ಯಿಡಬ್ಯಾಡತಾಯಿ, ನೀ ವಸ್ತಿ ಮಾಡಲಕ ಸರೀರ 'ಗೊಳ್ಯೋನು ಬರಯ್ಯಾವತಾಯಿ! ವೂರು ತುಂಬ, ಪರಪಂಚದ ತುಂಬ ಮಸ್ತು ಅಯ್ದಾವೆ..ನನ ಸರೀರದೊಳೀಕ ಮಾತ್ರ ಪಾದ ಯಿಡಬ್ಯಾಡವ್ವಾ.. ಯಂದು ಮುಂತಾಗಿ ಹೇಳಿದ ವಂದೊಂದು ಮಾತನ್ನು ಮೆಟ್ಟಿಲು ಮಾಡಿಕೊಂಡು ಸಾಂಭವಿ ವಂದೊಂದು ಹೆಜ್ಜೆ ಯಿಡುತಾ ಯಿಡುತಾ ವಳಪ್ರವೇಶ ಮಾಡಿಬಿಟ್ಟರು.

ಅದನು ನೋಡಿ ಯಲಾಯಿವಳಾಂತ ಓಬಯ್ಯ ಬಾಯಿ ಮ್ಯಾಲ ಬೊಟ್ಟಿಟ್ಟುಕೊಂಡನು. ತಾನಾಡಿದ ತಾಯಿ ಕಿವಿ ಮ್ಯಾಲ ಹಾಕ್ಕೊಂಡಂಗಿಲ್ಲ ಯಂದು ಭಾವಿಸಿದನು, ಸಾಂಭವಿಯಾಗಿದ್ದರೆ ತಾನಾಗಿದ್ದಾಳು! ಯಿನ್ನೊಬ್ಬರ ಸರೀರದೊಳಗೆ ತೂರಿಕೊಳ್ಳುವ ಹಕ್ಕನ್ಯಾಕೆಗೆ ಕೊಟ್ಟವರ್ಯಾರು; ಸರೀರದ ಯಾಜಮಾನನಾದ ತನ್ನನ್ನೊಂದು ಮಾತು ಕೇಳೋದು ಬ್ಯಾಡವೇನು! ಆಕೆಯನ್ನು ಸರೀರದ ಬಾಗಿಲ ಬುಡದಲ್ಲಿ ತಡೆಯಲು ತಾನು ಮಿಕ್ಕು ಪ್ರಯತ್ನವ ಮಾಡಿದನಾದರೂ ಸಾಧ್ಯವಾಗಲಿಲ್ಲ. ಆಕೆಯನ್ನು ಕಯ್ಯಿ ಹಿಡಿದು ಯಳಕಂಡು ಬರಲಿಕ್ಕೆ ತಾನಾದರೂ ಯಷ್ಟರವನು! ಕಯ್ಯಿವಳೀಗೆ ಕಯ್ನ ಹಾಕಿ ಹಿಚುಕಿಕೊಂಡನು, ಹಣೆಹಣೆಯನ್ನು ಗುದ್ದಿಕೊಂಡನು,

---

'ನೀನು ಬಾ ಅಂದರ ಬರಲಕ ನಿನ್ನಿಷ್ಟಲ್ಲ..ನೀ ಹೋಗಂದರೆ ಹೋಗಲಕ ನಿನ್ನಿಷ್ಟಲ್ಲ ಕಣ್ಮಗಾ..ಹತ್ತು ಸಾವುರ ಹೊನ್ನು ಕೊಟ್ಟರೂ ವಲಿಯದ ತಾಯಿ ನಿನ್ನ ಸರೀರದೊಳಗೆ ವಸ್ತಿ ಮಾಡಲು ಬಿಗಸಿ ಬಂದವಳೆ..ಯಿದು ನಿನ್ನ ಪುಣ್ಯಭಾಗ್ಯ ಅಂದುಕೋ..ನೀನು ನಿನ್ನ ಸರೀರವನ್ನು ನಿಕ್ರುಷ್ಟ ಮಾಡಿ ಮಾತಾಡಲು ಬ್ಯಾಡ..' ಯಂದಾಡಲು ತುಸು ಕರಗಿದನು.

ಯಿದು ನ್ಯಾಯವಲ್ಲ ತಾಯಿ..ನ್ಯಾಯವಲ್ಲ ಯಂದು ಹಲುಬಿಕೊಂಡನು. ಹೆಂಡತಿ ಜಗಲೂರಿ ಬಂದು ಯಲ್ಲಯ್ತೆ ನಿನ ಸರೀರವು ಯಂದು ಕೇಳಿದರೆ ಯೇನಂತ ವುತ್ತರಿಸುವುದು! ದಿಕ್ಕುದಿಕ್ಕಿಗೊಂದರಂತೆ ವೋಡಿ ಹೋಗಿರುವ ಮಕ್ಕಳು ಬಂದು ಯಲ್ಲಯ್ತಪ್ಪಾ ನಿನ ಸರೀರವು ಯಂದು ಕೇಳಿದರೆ ಯೇನಂತ ವುತ್ತರಿಸುವುದು! ಆದದ್ದಾಯಿತು. ಮಾಮೂಲು ಮನುಶ್ಯೋರಾಗಿದ್ದಲ್ಲಿ ಕೊಳ್ಳಪಟ್ಟಿ ಹಿಡಕಂಡು ಹೊರಯಳಕಂಡು ಬಂದು 'ಬುದ್ಧಿಗೇಡಿ..ನಾಡ ಬುದ್ಧಿಗೇಡಿ' ಯಂದು ಛೀಮಾರಿ ಹಾಕಬಹುದಿತ್ತು, ಆದರೆ ತನ್ನ ಸರೀರದೊಳೀಕೆ ತೂರಿಕೊಂಡಿರೋದು ಸಾಂಭವಿ...ಕನುಕರ ಬರುವಂತೆ ಮಾತಾಡಿ ಆಕೆಯನ್ನು ಹೊರಹೋಡಿಸಬೇಕೆಂದು ನಿಶ್ಚಯಿಸಿದ ಅವನು ಆ ದಿಸೆಯಲ್ಲಿ ಪರಿಪರಿಯಿಂದ ಪ್ರಯತ್ನಿಸಿದನಾದರೂ ಸಾಧ್ಯವಾಗಲಿಲ್ಲ..ಅವನಾಡಿದ ಮಾತುಗಳು ಆಕೆಯ ಕಿವಿ ಮುಟ್ಟುವುದರೊಳಗೆ ಅಂತರ್ಧಾನವಾಗುತ್ತಿದ್ದವು..ಅಮಿಷವೊಡ್ಡುವುದೆ ಸರಿಯಂದು ಭಾವಿಸಿದ ಅವನು ವಂದಲ್ಲಾ ಒಡ್ಡಿದ್ದು..ಯರಡಲ್ಲಾ ವಡ್ಡಿದ್ದು.. ಯಿಸು ವರುಸ ತಾನು ಜೋಪಾನ ಜತನ ಮಾಡಿರುವ ತನ್ನ ಸರೀರವೇ ತನ್ನ ಯಿರುದ್ಧ ತಿರುಗಿ ಬಿದ್ದಿರುವುದೆಂದ ಮೇಲೆ, ತನ್ನನ್ನು ಯಿಸು ವರುಷ ಸೋಪಾನ ಜತನ ಮಾಡಿರುವ ಸರೀರವೇ ತನ್ನನ್ನು ನಿಕ್ರುಷ್ಟಕಾಣುತ್ತಿರುವುದೆಂದ ಮೇಲೆ ತಾನು ಸಾವುರ ಕಯ್ಯಿಗಳ ಸಾಂಭವಿಯನ್ನು ಅಂದು ಯೇನು ಪ್ರಯೋಜನ ಯಂದು ಮುಂತಾಗಿ ಯೋಚಿಸುತ್ತಾ ಯೋಚಿಸುತ್ತಾ ಗುಬ್ಬಿಯಂತೆ ಮುದುಡಿ ಹೋದನು.

ತನ್ನ ಸರೀರದಿಂದ ಹೊಸಹೊಂಡುತಾಯಾಂತ ಮಮ್ಮಲನ ಮರುಗುತ ಕೇಳಿಕೊಂಡರೂ ತಾಯಿಗೆ ಕನುಕರ ಹುಟ್ಟಲಿಲ್ಲ. ಹೆಂಗೆ ಹೊಂಡಲಪ್ಪಾ..ಆಸುಯೋಜನ ದೂರದಿಂದ ನಿನ್ನ ಸರೀರವನ್ನು ಬಗುಸಿ ಬಂದೀನಿ ಕಣ ಕಂದಾ..ನಾನು ಹೊರ ಹೊಂಡತೀನಂದರ ನಿನ್ನ ಸರೀರ ಬುಟ್ಟು ಕೊಡ್ತಿಲ್ಲಲ್ಲಾ.. ಯೇನು ಮಾಡಲಿ ಯಂದು ತನ್ನ ಅಸಹಾಯಕತೆಯನ್ನು ಪ್ರಕಟಿಸಿದೇಟಿಗೆ ಓಬಯ್ಯನು–

ಕಿವಿಯಿಂದ ದಯಮಾಡುತೀನಂದರೆ ಕಿವೀನ ಕುಯ್ದು ಅಗಲ ಮಾಡೇನು, ಬಾಯಿಯಿಂದ ಹೊರ ಹೊಂಡತೀ ನಂದರೆ ಕುಯ್ದು ಬಾಯ್ನ ಅಗನ ಮಾಡೇನು; ಕಣ್ಣುಗಳಿಂದ ದಯ ಮಾಡುತೀ ನಂದರೆ ಕಣ್ಣುಗಳನು ಕುಯ್ದು ಅಗಲ ಮಾಡೇನು; ದಯಮಾಡು ತಾಯಿ ದಯಮಾಡು..ನಂಗೆ ದಗದ ವದಕನ ಮಸ್ತಯ್ತೆಯವ್ವಾ..

ಯಂದನಕಂತ ಮಯ್ಯೆಂಬವ ಮಯ್ಯನ್ನು ತಟಗು ಮಾಡಿಕೊಂಡನು. ತನ್ನೆಲ್ಡು ಕಯ್ಯಿಗಳನ್ನೇ ಸಾಯಿರದಾ ವಂದು ಕಯ್ಯಿಗಳೆಂದು ಭಾವಿಸಿ ಮುಗುದನು. ಅಡ್ಡಬಿದ್ದುದಾಗಿ ಭಾವಿಸಿ ನೆಲಕ್ಕೊರಗಿದನು.

ಯಾರೋ ಪಕಪಕನೆ ನಗುತ್ತಿರುವಂತೆ ಭಾಸ ಮಾಡಲು ಪಿಳಿಪಿಳಿ ಕಣ್ಣುಬಿಟ್ಟು ನೋಡುತ್ತಾನೆ ತನ್ನ ಸರೀರವು ಮತಮತ್ತೆ ತನ್ನನ್ನು ನೋಡಿ ಲೀಲಾಯಿ ನೋದ ಮಾಡುತ್ತಿರುವುದು, ಯಾಕೆ ಹಿಂಗ ನಗಾಡತಯ್ತಂತ ತಿಬ್ಬಳಿಸಿ ಅವನು ನೋಡಿದನು. ವಂದು ಮಗ್ಗುಲಿಂದ ನೋಡಿದರದು ಕಾಡು ಕೋಣದಂತೆಯೂ; ಯಿನ್ನೊಂದು ಮಗ್ಗುಲಿಂದ ನೋಡಿದರೆ ಸಕಲ ಪ್ರಾಣಿ ಪಕ್ಷಿಗಳಿಂದ ಮಾಡಲ್ಪಟ್ಟಿರುವಂತೆಯೂ; ಮತ್ತೊಂದು ಮಗ್ಗುಲಿಂದ ನೋಡಿದರದು ಅಮರಾವತಿ ಪಟ್ಟಣ ದಂತೆಯೂ; ಮಗುದೊಂದು ಮಗ್ಗುಲಿಂದ ನೋಡಿದರದು ಮೊಸರ'ನ್ನದ ಬುತ್ತಿಯಂತೆಯೂ ಅದು ಗೋಚರಮಾಡಿತು. ತಾನು ಯಿಟೊಂದು ಚಲುವಾದ ಸರೀರದಲ್ಲಿ ವಸ್ತಿ ಮಾಡಿದ್ದೆನೆಂದು ಅರ್ಥವಾದದ್ದು ಆವಾಗಲೇ.ಯೇಸು ದಿನ ಮಾನದಿಂದ ತಯಾರಿಕೆ ನಡೆಸಿತ್ತೋ ಅವ್ವನ ವಸ್ತಿಗಾಗಿ. ಯಲಾ ಸರೀರವೇ..ನೀನೇಟೊಂದು ಮೋಸಗಾರ..ನೀನು ನಿನ್ನ ಮೂಲಕನಾದ ನನಗೇ ಕಯ್ನ ಕೊಟ್ಟೀಯಲ್ಲಾ..ಯಂದವನು ಅಂದು ಕೊಳ್ಳುತ್ತಿರುವ ಕಾಲಕ್ಕೆ ಅದು ನಗಾಡಿಕೆಯನ್ನು ನಿಲ್ಲಿಸಿ–

ನೀನು ನಿನ್ನ ಸರೀರವಾದ ನನ್ನ ಬಗ್ಗೆಯಾಕೆ ಯಿಟೊಂದು ಮಮಕಾರ ಯಿಟು ಕೊಂಡಿದ್ದೀಯ ಪಾಪ..ನಾನು ಮಣ್ಣಿಂದ ಬಂದೀನಿ, ಮುಂದೊಂದು ದಿನ ಮಣ್ಣಾಗಿ ಬಿಡುತೀನಿ..ಯಾ ನನ್ನ ಬಗ್ಗೆ ನೀನು ಮೋಹ ಯಿಟುಕೊಳ್ಳೋದು ಸರ್ಯಲ್ಲ. ನಾನೆಂಬುದೊಂದು ಬಿಡದಿ ಮನಿಯು. ನೀನಿರಲಕ ಅನುವು ಮಾಡಿಕೊಟ್ಟಿದ್ದು ಪುಣ್ಯೇವು ಯಂದು ಭಾವನೆ ಮಾಡಿಕೋ. ಬಂದಿರೋರಿಗೆ ಬ್ಯಾಡನ್ನಲ್ಲಿಕ್ಕಾಯ್ತೇನಪ್ಪಾ.. ನಾನೊಳಗಿ ರಂದರ ನೀನೊಳಗಿರಬೇಕು. ನಾನು ಹೊರಗಿ ರಂದರ ನೀನು ಅಂಗಳದಾಗೆ ತೆಪ್ಪಗೆ ಬಾಯ್ನ ಮುಚ್ಚಂಡಿರ ಬೇಕು..ತಿಳೀತಾ' ಯಂದು ಹೇಳಿ ಬಾಯಿ ಮುಚ್ಚಿಸಿತು.

ಅವನು ಕಣ್ಣಲ್ಲಿ ನೀರು ತಂದುಕೊಂಡಿದ್ದು ಕಂಡದಕ್ಕೆ ಮರುಕ ಹುಟ್ಟಿ–

'ನೀನು ಬಾ ಅಂದರ ಬರಲಕ ನಿನ್ನಿಷ್ಟಲ್ಲ..ನೀ ಹೋಗಂದರೆ ಹೋಗಲಕ ನಿನ್ನಿಷ್ಟಲ್ಲ ಕಣ್ಮಗಾ..ಹತ್ತು ಸಾವುರ ಹೊನ್ನು ಕೊಟ್ಟರೂ ವಲಿಯದ ತಾಯಿ ನಿನ್ನ

ಸರೀರದೊಳಗೆ ವಸ್ತಿ ಮಾಡಲು ಬಿಗಸಿ ಬಂದವಳೆ.. ಯಿದು ನಿನ್ನ ಪುಣ್ಯಭಾಗ್ಯ ಅಂದುಕೋ..ನೀನು ನಿನ್ನ ಸರೀರವನ್ನು ನಿಕ್ರುಷ್ಟಮಾಡಿ ಮಾತಾಡಲು ಬ್ಯಾಡ..' ಯಂದಾಡಲು ತುಸು ಕರಗಿದನು.

'ಅಯ್ಯೋ ನನ್ನ ಸರೀರವೇ..ನಿನ್ನೊಳಗೆ ಸೇರಕಂಡಿರುವ ತಾಯಿ ಯೇನು ಪಡಿತಾಳೆ ಯೇನು ಬುಡುತಾಳೆ..ನೋಡಲಿಕ್ಕೆ ನೀನು ಬಡಕಲೆದ್ದು ಹೋಗಿದ್ದೀ' ಯಂದು ಅವನು ದಯನಾಸ ಬಿದ್ದು ಕೇಳಲು ಅದು

'ನಿನ್ನ ಸರೀರವಾದ ನನ್ನೊಳಗೆ ಯೇನ್ನಾಕಿಲ್ಲ..ಯಲ್ಲ ಆಯ್ತು..ನಿನ್ನ ಸರೀರದೊಳಗಿಂದ ಆಕೆ ಬೇಕಾದ್ದು ಪಡೀತಾಳೆ. ಬೇಕಾದ್ದು ಆಳುತಾಳೆ..' ಯಂದನ್ನಲೀತನು 'ಯೇನು ಮಾಡುತಾಳೆ ಸಾಂಭವಿ ನಿನ್ನ ಸರೀರದೊಳಗಿದ್ದುಕೊಂಡು' ಯಂದು ಕೇಳಲು ಅದು–

'ಮಾತು ತಪ್ಪಿದೋರ ಮೂಗು ಕುಯ್ಯುತಾಳೆ..ನಡತೆ ತಪ್ಪಿದೋರ ನಾಲಗೆ ಸೀಳುತ್ತಾಳೆ...ಹಸುಗಂದಮ್ಮಗಳನ್ನು ಮೊಂಡುಗಯ್ಯಲ್ಲೆತ್ತಿ ಹೊಡೆಯೋ ಸಂಗಡಗಿತ್ತಿಯೋರ ಭಂಡಗಿತ್ತಿಯವರನ್ನು ಭಂಡಡೆವಿಗೆ ಗದುಮುತ್ತಾಳೆ.. ವುಂಬುವ ಅನ್ನದಲ್ಲಿ ಮೊದ್ದುಯಿಕ್ಕುವ ಭಿನ್ನಾಣಗಿತ್ತಿಯವರನ್ನು ಬಣ್ಣ ಕಳುಚುತ್ತಾಳೆ..ತುಂಬಿದ ಬಾವಿಗೆ ತೊಂಬಲ ವುಗಿಯುವ ಅಡ್ನಾಡಿಯವರನ್ನು ಅಟ್ಟಂಬಟ್ಟಾರ ಣ್ಣೀವಿಗೆ ಕಳುಹುತ್ತಾಳೆ.. ಯಿ ಪ್ರಕಾರವಾಗಿ ಅವ್ವ ತನ್ನ ಮಯ್ನೆ ತೋರಲಿಕ್ಕೆ; ಗ್ರಾಮದೊಳಗೆ ಸುಖಶಾಂತಿ ನೆಲಹಲಿಕ್ಕೆ.. ಬರಡೆಮ್ಮೆ ಆಕಳುಗಳ ಕೆಚ್ಚಲು ತುಂಬಲಿಕ್ಕೆ ತೊಂಬಲ ಜಗಿದುಗುಳಿ ನ್ಯೆಲ ಹಸನು ಮಾಡಲಿಕ್ಕೆ, ಜನಕೋಟಿಯ ಕಥೆಕಥೆ ಕಬ್ಬುಗಳಲ್ಲಿ ಸರ ತುಂಬಲಿಕ್ಕೆ ಪಾಪ ಕಳೆಯಲಿಕ್ಕೆ, ಪುಣ್ಯ ತುಂಬಲಿಕ್ಕೆ ಆ ಜಗದಂಬೆಯು ನಿನ್ನ ಸರೀರದೊಳೀಕೆ ದಯ ಮಾಡಿಸಿದ್ದಾಳೆಂಬುದನ್ನು ಮರೆಯ ಬ್ಯಾಡಪ್ಪಾ' ಯಂದು ಮುಂತಾಗಿ ಪ್ರವಚನ ಮಾಡಲು–

ಓಬಯ್ಯನು ಬಾಯಿಕಟ್ಟಿತು, ಕಣ್ಣು ವಜ್ಜಲಾಯಿತು, ಕಲ್ಲು ಮನಸು ಕರಗಿ ವುದಕವಾಗಿ ಹರಿಯಿತು. ಕಜ್ಜಿಪುಳ್ಳೆ ಕಂದಮ್ಮನಂತೆ ಬಿಕ್ಕಿಬಿಕ್ಕಿ ಅತ್ತನು. ವುಡುಗೊರೆಗಳ ರಾಶಿ ನಡುವೆ ಕಂಗಾಲಾದ ಹುಡುಗನಂತಾದನು. ಪುಣ್ಯ ಕೋಟಿಯ ಯಳೆಗರುವಿನಂತಾದನು.

'ಯಲ್ಲಿರುವಳು ನನ್ನ ತಾಯಿ; ಯದರಲ್ಲಿರುವಳು ನನ್ನ ತಾಯಿ; ಯಾವ ರೂಪದಲ್ಲಿರುವಳು ನನ್ನ ತಾಯಿ' ಯಂದು ಗದ್ಗದಿತನಾದನು.

ವಂಚೂರು ಹಿಂದಕ ಜರುಗಿ ನೋಡಿದನು. ವಂಚೂರು ಮುಂದಕ ಜರುಗಿ ನೋಡಿದನು.

'ಮುಖಯಂಬುವ ಮುಖವನ್ನಾರ ತೋರೆವ್ವಾ.. ನಾನಾ ನಮೂನಿ ವುವ್ವ ಮುಡುಸಿ ಸಿಂಗಾರ ಮಾಡೇನು' ಯಂದನು ಗದ್ಗದಿತನಾಗಿ–

ಪಕಪಕ ನಗಾಡಿದಂಗಾತು, ನಗುವಿನ ಕಾಣದ ಬೆನ್ನಲ್ಲೇ–

ತನ್ನ ಸರೀರದ ಕಯ್ಯಿಕಾಲುಗಳು ತಾನೇ ತಾನಾಗಿ ಬೆಳೆಯುತ್ತಿರುವುದ ಕಂಡು, ಕಿವಿಗಳು ಮಾರು ಮಾರಗಲವಾಗುತ್ತಿರುವುದ ಕಂಡು; ತನ್ನ ಕಣ್ಣುಗಳೊಳಗೆ ಸಾವುರ, ಸಾವುರ ದೀವಟಿಗಳ ದಿಬ್ಬಣ ಹೊಂಟಿರುವುದ ಕಂಡು; ತನ್ನ ಹುಬ್ಬುಗಳು ಬೇಲಿ ಪೊದೆಗಳಾಗುತ್ತಿರುವುದ ಕಂಡು, ತನ್ನ ಬಾಯೆಂಬುದು ಬ್ರಹತ್ ಕೂಪವಾಗುತ್ತಿರುವುದ ಕಂಡು, ತುಟಿ ಸಂದುಗಳಲ್ಲೊಂದೊಂದು ಮಾರು ಮಾರುದ್ಧ ಕ್ವಾರೆ ಹಲ್ಲುಗಳು ಮೂಡುತ್ತಿರುವುದ ಕಂಡು ತನ್ನೆದೆ ಭಾಗದಲ್ಲಿ ಗುಡ್ಡಗಾತುರದ ಮೊಲೆಗಳು ಮೂಡುತ್ತಿರುವುದ ಕಂಡು, ತನ್ನ ಕುಂಡಿಗಳೊಂದೊಂದು ಬಿಕ್ಕಿ ಮರಡಿ ದಿಬ್ಬವಾಗುತ್ತಿರುವುದ ಕಂಡು, ತನ್ನ ಹಣೆಭಾಗ ಯೋಜನದುದ್ದಗಲವಾಗುತ್ತಿರುವುದ ಕಂಡು, ಅದರ ನಟ್ಟ ನಡೂಕೆಯೇಳು ಮೊರಗಲದ ಕುಂಕುಮ ಬೊಟ್ಟೊಂದು ರಾರಾಜಿಸುತ್ತಿರುವುದ ಕಂಡು, ತನ್ನ ಕೊರಳೊಳಗ ತರಾವರಿ ರುಂಡಗಳು ಪೋಣಿಸಿದ ಹಾರಗಳು.

'ನಿನ್ನ ಮುಖವೇ ನನ್ನ ಮುಖಮಾರಿ ಕಣಪ್ಪಾ.. ನಗೆಯೆಂಬುವ ವುವ್ವ ಮುಡುಸಿ ಸಿಂಗಾರ ಮಾಡು' ಯಂದಿತು.

ನಿನ್ನ ಘನವಾದ ಪಾದವನ್ನಾರ ತೋರು ತಾಯಿ..ಪಾದ ಪೂಜೆ ಮಾಡೇನು' ಯಂದಿವ ಅನ್ನಲು–

'ನಿನ್ನಪಾದವೇ ಅವ್ವನ ಪಾದಯಂಬುದನ್ನ ಮರೆಯಬ್ಯಾಡ' ಯಂದಿತು ಆ ಸರೀರವಾಣಿಯು.

'ನಿನ್ನ ಅಂಬ್ರುತ ಕಲಸದಂಥ ಮೊಲೆಗಳನ್ನಾರ ತೋರು ತಾಯಿ ನಿನ್ನ ಯದೆ ಹಾಲು ಕುಡುದು ಹಸಿವು ಬಾಯಾರಿಕೆ ಹಿಂಗಿಸಿಕೊಂಡೇನು!' ಯಿಂದಿವ ಕೇಳಲು–

'ಮನೆಯ ಆಡಕಲು ಗಡಿಗೆ; ಗಿಡಮರ ಹುಲ್ಲುಕಡ್ಡಿಗಳೆಂಬಂಥೆ ಸಚರಾಚಕಗಳೆಲ್ಲದರಲ್ಲಿ ಅವ್ವನ ಮೊಲೆಗಳಡಗಿವೆ ಕಣಪ್ಪಾ' ಯಂದಿತು.

'ನಿನ್ನ ತೊಡೆಗಳನ್ನಾರ ತೋರು ತಾಯಿ, ಮ್ಯಾಲ ತಲಿ ಯಿಟ್ಟು ಮಲಗಿ ದಣಿವು ತೀರಿಸಿಕೊಂಡೇನು!' ಯಂದಿವ ಕೇಳಲು.

'ಹುಚ್ಚಪ್ಪಾ ನೀನು ಕುಂತಿರುವ ನ್ಯೆಲವೇ ಅವ್ವನ ತೊಡಿಯಂದು ತಿಳಕ ಕಣಪ್ಪಾ' ಯಂದಿತು.

ಯಿ ಪ್ರಾಕರವಾಗಿ ಗುಡಿ ಹಿಂದಲ ಮೂಳೆ ಓಬಯ್ಯನ ದೇಹವೆಂಬೋ ದೇಹದ ಲಕ್ಷಲಕ್ಷ ಕೋಟಿ ಕೋಟಿ ಬಿಲಗಳಿಂದ ಸಂದೇಹಗಳೆಂಬೋ ಘಟ ಸರುಪಗಳು ವಂದೊಂದಾಗಿ ಹರಿದು ಹೊರ ಹೋಗಿ ಬಟಾ ಬಯಲೊಳಗೆ ಅಂತರ್ಧಾನವಾದವು.

ತನ್ನ ದೇಹವೆಂಭೋ ದೇಹವನ್ನು ನೋಡಿಕೊಳ್ಳುತ್ತಾನೆ. ಅಲ್ಲಲ್ಲ ಹನ್ನೆಲ್ಡು ಕಂಭಗಳ ವಪ್ಪವಾದ ಚಪ್ಪರವು.

ಮುತ್ತಿನ ತೋರಣಗಳಿಂದಲಂಕಾರ ಮಾಡಿರೋ ಹನ್ನೆಲ್ಡನ್ನೆಲ್ಡಲೇ ನೂರಾ ನಲವತ್ನಾಲ್ಕು ಕಮಾನುಗಳು.

ವಳ ಹೋಲಿಕೆ ಚಂದ್ರಾಮ ವಂದುಪಾಲು
ಹೊರ ಹೋಲಿಕೆ ಸೂರ್‍ಯಾಮ ವಂದುಪಾಲು
ನೆಲದ ಮ್ಯಾಲ ಯಪ್ಪತ್ತೇಳು ಮಂಡಲಗಳು,
ವಂದೊಂದು ಮಂಡಲದೊಳಗೆ ಹುಟ್ಟುನಿರುವಾಣಗಳು

ನೋಡುನೋಡುತ್ತಿದ್ದಂತೆ ಅವನ ಕಣ್ಣುಗಳಿಂದ ತೊಟತೊಟ ನೀರು ಹನಿದು ಸಾಯಿರದೆಂಟು ಮಡುವಾದವು, ವಂದೊಂದು ಮಡುವಲ್ಲಿ ಹಂಸ ಪಕ್ಷಿಗಳು ತಾನೇತಾನಾಗಿ ರಾರಾಜಿಸತೊಡಗಿದವು.

ಅವ್ವಗೆ ಯಡೆಗೊಂಡು ತನ್ನ ಸರೀರವೆಂಬುದು ಪಾವನವಾಯಿತೆಂದು ಓಬಯ್ಯ ಹಿರಿಹಿರಿ ಹಿಗ್ಗಿ ಯಿರೇಕಾಯಿಯಾದನು, ಕಯಿಲಾಸದ ಕರುಣೆ ಯಿಳಿದುಬಂದು ತನ್ನ ಸರೀರ ತುಂಬಿತೆಂದು ಬಿರಿಬಿರಿ ಬೆಲೆದು ಕಲ್ಲು ಪಡುವಲಕಾಯಿಯಾದನು. ಅವ್ವನ ಕ್ವಾರಾಣ್ಯದ ಜೋಳಿಗೆ ತನ್ನ ಸರೀರವಾಯಿತೆಂದು ಬುರುಬುರನೆ ವೂದಿ ಬೂದುಗುಂಬಳ ಕಾಯಿಯಾದನು, ತನ್ನ ಸರೀರಯೆಂಬುವ ವನಾಂತರದೊಳಗೆ ಅವ್ವ ಸಾಯಿರತೊಟ್ಟಿಲ ಕಟ್ಟಿ ಜೋಗುಳ ಹಾಡುತ್ತಾಳೆಯಂಬ ಕಾರಣಕ್ಕೆ ತಾನು ದವಸ ತುಂಬಿದ ಅಗೇವಿನಂತಾದನು.

'ಅವ್ವಾ ಬೊದುಕು ಕೊಟ್ಟೆ ಭಾಗ್ಯೇವ ಕೊಟ್ಟೆ..ನನ್ನ ಸರೀರಕ್ಕೊಂದು ಅರ್ತವಕೊಟ್ಟೆ..ನನ್ನ ಸರೀರಯಂಬುವ ಕೊಪ್ಪರಿಗೆಯನ್ನು ಪುಣ್ಯಪರಸಾದಗಳಿಂದ ತುಂಬಿಬಿಟ್ಟೆ. ಮಾಯೆಗಾರ್ತಿ ಅಂದರೆ ನೀನೆ ಕಣ್ತಾಯಿ, ಅನುಗಾಲ ನೀನು ನನ್ನ ಸರೀರದೊಳಗಿದ್ದು ಬೇಕಾದ್ದು ಅನುಭೋಸು. ನೀನು ನನ್ನೊಳಗಿದ್ದೀ ಅಂಬುದರೆ ನಾನು ನಿನ್ನೊಳಗಿದ್ದೆ ಅಂಬುದಕೆ ಸತ್ತೇವು ಮಾಡಿ ತೋರಿಸಬೇಕವ್ವಾ.' ಯಂದು ಓಬಯ್ಯನು ತಿರಕಂಡು ತಿನ್ನೋ ಬೊಕ್ಕತಲೆ ಜಂಗಮಯ್ಯನಂತೆ ಬೇಡಿಕೊಳ್ಳಲು–

'ಯಾಕಾಗಬಾರದು ಕಂದಾ..ನೀನು ಸಾಯಿರ ಗಾವುದ ದೂರದ ಮಾತುಗಳನ್ನು ಕೇಳುತ್ತೀ, ಸಾಯಿರ ಗಾವುದ ದೂರ ದ್ರುಶ್ಯಗಳನ್ನು ನೋಡುತ್ತೀ, ನೀನು ಕೇಳಿದ್ದು ನಿಜವಾಗತಯ್ತೆ..ನೀನು ನೋಡಿದ್ದು ನಿಜವಾಗತಯ್ತಪ್ಪಾ.. ನೀನು ಬೇರೊಬ್ಬರ ಮನಸ್ಸನ್ನು ಸುಲಭವಾಗಿ ಪ್ರವೇಶ ಮಾಡುತ್ತಿ.. ನೀನು ಬಿಸುರುಗಳನ್ನು ಪ್ರವೇಶ ಮಾಡಿ ಪಿಂಡಗಳೊಂದಿಗೆ ಮಾತಾಡುತ್ತೀ ಕಂದಾ. ವಂದೇ ವಂದು ಮಾತಿನಲ್ಲಿ ಹೇಳಬೇಕೆಂದರೆ ಅವ್ವ ನಿನ್ನ ಮೂಲಕ ಕೇಳುತ್ತಾಳೆ; ಮಾತಾಡುತ್ತಾಳೆ; ಮಾಡುತ್ತಾಳೆ. ಆಕೆಯೇ ನೀನು ನೀನೇ ಆಕೆಯು ಯಂದು ತಿಳಿವಂಥವನಾಗು ಮಗನೇ' ಯಂದು ಮಾರ್ನುಡಿದು ಮಾಯವಾದಂತಾಗಲು ಜಲ ಜಲ ಬೆವೆತನು.

ಆಯಿತೆವ್ವಾ..ಆಯಿತು ತಾಯಿ..ನಿನ್ನ ಪ್ರವೇಸದಿಂದ ನನ್ನ ಸರೀರಯೆಂಬುದು ಮಂತ್ರದ ಚೀಲವಾಯಿತೆಂದಂಗಾತು.. ಯೇಸು ದೂರದಿಂದ ಆಗಮಿಸಿರುವಿಯೇನು ನೀನು ನನ್ನ ಸರೀರಯಂಬುವ ಝೋಪುಡಿಯಲ್ಲಿ ನೆಲಗೊಳ್ಳಲು ..ದಣಕಂಡಿರುವಿಯೇನೊ? ಶ್ಯಾನೆ ಹೊತ್ತಾಗಯ್ತೆ..ನಿಂಗೆ ನಾನು ನನ್ನ ಸರೀರವನ್ನು ಬಿಟ್ಟುಕೊಟ್ಟಿದ್ದಿನವ್ವಾ..ನಿನ್ನ ಪ್ರವೇಸದಿಂದ ನನ್ನ ಸರೀರ ಪಾವನವಾಯ್ತು ಯಿದರೊಳಗೆ ನೀನು ಸಾಸ್ವತವಾಗಿ

ನೆಲಗೊಂಡರೂ ನನ್ನ ತಕರಾರಿಲ್ಲ ತಾಯಿ. ನನ್ನ ಸರೀರವನ್ನು ಅಡ್ಡಡ್ಡ ಅರಗಿಸಿಕೊಳ್ಳವ್ವಾ ವುದ್ದುದ್ದ ಬತ್ತಿಕೊಳ್ಳವ್ವಾ.. ಬೇಕಾದ್ದು ಬೆಳಕೊಳ್ಳೆ..ಬೇಕಾದ್ದು ಅನುಭೋಸವ್ವಾ ಅನುಭೋಸು' ಯಂದು ಮುಂತಾಗಿ ನುಡಿದು ಸಿರಸಾಷ್ಟಾಂಗ ಪ್ರಮಾಣ ಸಲ್ಲಿಸಲು ಮನೆಯಂಗಳ ದಲ್ಲಿ ನೆಲಮುಗುಲಿಗೇಕಾಗಿ ನಿಂತಿದ್ದ ಅವ್ವನ ಮರವು ಅಷ್ಟ ದಿಕ್ಕುಗಳಿಗೂ ಹೊಯ್ದಾಡಿ ವುಘೇ ವುಘೇ ಅಂದಿತು.

ವಂಬತ್ತನೇ ಗಳಿಗೆ ಕಳೆದು ಹತ್ತನೆಯ ಗಳಿಗೆ ಕಾಲಿರಿಸುವ ಹೊತ್ತಾಗಿತ್ತು. ಕಲ್ಲು ಕರಗಿ ಬೆಮರಾಗಿ ಹರಿಯೋ ಹೊತ್ತಾಗಿತ್ತು, ಹಕ್ಕಿಪಕ್ಕಿಗಳು ತಮ ತಮ್ಮ ಗಂಟಲೊಳಗಿನ ತಂಬೂರಿಗಳನ್ನು ಸರಿಪಡಿಸಿಕೊಳ್ಳುವ ಹೊತ್ತಾಗಿತ್ತು, ಮನೆ ಮಠ ಗುಡ್ಲು ಝೋಪಡಿಯೊಳಗಿನ ಚಿಮಣಿಗಳ ಯಣ್ಣೆ ತೀರಿ; ಬತ್ತಿ ಬಾಡುವ ಹೊತ್ತಾಗಿತ್ತು, ತೊಡೆಯಿಂದ ತೊಡೆ ಬೇರಾಗುವ ಹೊತ್ತಾಗಿತ್ತು, ಗಂಟಲೊಳಗೆ ಮರಗಟ್ಟಿರುವ ಕಫ ವುಂಡೆ ವುಂಡೆಯಾಗಿ ಲಿಂಗಾಕಾರ ಪಡೆಯುವ ಹೊತ್ತಾಗಿತ್ತು, ಮವುನದಿಂದ ಮಾತು ವಡಮೂಡುವ ಹೊತ್ತಾಗಿತ್ತು, ಮಯ್ಯಿ ಮುರುದು ಲಟಲಟ ಸಬುಧ ಮಾಡುವ ಹೊತ್ತಾಗಿತ್ತು, ಬಾಯಿ ತೆರೆದು ಆಕಳಿಕೆಯಂಬುವ ಪ್ರಣವನಾದ ಮೂಡುವ ಹೊತ್ತಾಗಿತ್ತು, ಮುಂಜಾವ ಮೂಟೆಯೊಡೆದು ಬೆಳಕು ಲೋಳೆಲೋಳೆಯಾಗಿ ಸಮಸ್ತ ಜಗತ್ತನ್ನಾವರಿಸುವ ಹೊತ್ತಾಗಿತ್ತು, ಹೊದ್ದ ಕಪ್ಪುಗಂಬಳಿ ಸರಿಸಿ ಮೂಡಲಾದ ಮುಖವು ಕಣ್ಣು ಬಿಚ್ಚುವ ಹೊತ್ತಾಗಿತ್ತು, ಕಣ್ಣಟವಾಳಿಗೆಯಿಂದ ಮಣ ಮಣ ಕಣಸುಗಳು ಗಂಟು ಮೂಟೆ ಕಟ್ಟಿಕೊಂಡು ಗುಳೇ ಹೊಂಡುವ ಹೊತ್ತಾಗಿತ್ತು, ನಾಲಗೆಯಿಲ್ಲದ ಗಂಟೆ ನಾದ ಮಾಡುವ ಹೊತ್ತಾಗಿತ್ತು, ಆರೆಲೆ ಮಾವಿನವಳು ತಾಳಿ ಯಲ್ಲಾಡುವ ಹೊತ್ತಾಗಿತ್ತು, ಯಟೆಲೆ ಮಾವಿನವಳು ದಂಟ ಲ್ಲಾಡುವ ಹೊತ್ತಾಗಿತ್ತು, ಹತ್ತೆಲೆ ಮಾವಿನವಳು ಕೆತ್ತಿದುಂಗುರ ವನ್ನು ಬೆರಳಿಗೆ ಮುಡಿಯುವ ಹೊತ್ತಾಗಿತ್ತು, ಅಲಕಿಸುವಂಥ ಹೊತ್ತಾಗಿತ್ತು, ಗಿಲುಕಿಸುವಂಥ ಹೊತ್ತಾಗಿತ್ತು, ಗೆಲಿಸುವಂಥ ಹೊತ್ತಾಗಿತ್ತು

ಅಂಥ ವಯನಾದ ಹೊತ್ತಿನಲ್ಲಿ

ಅನಾದಿ ಕಾಲದಿಂದ ಕೊಂಬೆರೆಂಬೆಯೊಳಗೆ, ಯಲೆಯಲೆ ಗಳೊಳಗೆ, ವುವ್ವು-ವುವ್ವಿನೊಳಗೆ; ಹಣ್ಣೊಳಗೆ, ಕಾಯೊಳಗೆ ನೆಲಗೊಂಡಿರುವಂಥೆ ಸಾಂಭವಿಯು, ಸಾಯಿರ ಸಾಯಿರ ತೊಟ್ಟಿಲೊಳಗೆ ಕೂಸು ಕಂದಮ್ಮಗಳ ಯಿಟ್ಟು ಜೋಗುಳ ಪಾಡುವಂಥ ಸಾಂಭವಿಯು, ಲಕ್ಷೋಪಲಕ್ಷ ಪಕ್ಷಿಗಳ ಕಣ್ಣಿಗಳ ಮೂಲಿಗ ಯಿರೇಳು ಲೋಕಗಳನ್ನು ಪರಾಂಬರಿಕೆ ಮಾಡು ವಂಥ ಸಾಂಭವಿಯು ವುಘೇ ವುಘೇ ಅಂದ ಬೇಯಿನಮರದ ಕೋಟ್ಯಾನು ಕೋಟಿ ಯಲೆಯೊಳಗೆ ಕಣ್ಣನ್ನರಳಿಸಿದಳು, ಕೊಂಬೆ ರೆಂಬೆಗಳೊಳಗಿಂದ ಶತಸಹಸ್ರ ಕಯ್ಯಿಗಳನ್ನು ಚಾಚಿ ದಳು, ಹತ್ತಾಳು ತೆಕ್ಕೆಗೆ ಸಿಕ್ಕದಂಥ ಬೊಡ್ಡೆಯಂಬ ಸೊಂಟಕ್ಕೆ ಅರಿಷಿಣ, ಕುಂಕುಮ, ಕೊಂಬುಗಳ ವಡ್ಯಾಣ ಬಿಗಿದಳು, ನೆಲ ಯೆಂಬುವ ಕರುಣೆಯೊಳಗೆ ಬೇರುಗಳೆಂಬುವ ನರನಾಡಿ ಗಳು, ಕರುಳಬಳ್ಳಿ ವೂರು ತುಂಬ ಹಬ್ಬಿಕೊಂಡಿತ್ತೋ ಅದರ ಮೂಲಕ ಗುಡಿ ಹಿಂದಲ ಮೂಳೆ ಓಬಯ್ಯನ ಸರೀರಯಂಬುವ ಸಾಯಿರದಂಕಣದ ಮನೆಯೊಳಗೆ, ಗುಡುಮನೆಯೊಳಗೆ, ಜಗದಂಬೆಯಾದ ತಾನು ತನ್ನ ಸಕಲ ಪರಿವಾರ ಸಮೇತ, ದಂಡು ದವಲತ್ತು ಸಮೇತ ವಸ್ತಿ ಮಾಡಿದೆನೆಂಬುವ ಗೋದಿ ಹುಗ್ಗಿ ಕಾಯಿ ಹಾಲಿನಂಥ ಸುದ್ಧಿಯನ್ನು.

ನಿಂತವರ ಅಂಗಾಲ ಮೂಲಕ, ಮಲಕ್ಕಂಡಿದ್ದವರ ಬೆನ್ನ ಹುರಿ ಮೂಲಕ ಕೂಕಂಡಿದ್ದವರ ಕುಂಡಿ ಮೂಲಕ, ಬಕಬಾರಲು ಬಿದ್ದುಕೊಂಡಿದ್ದವರ ಗದ್ದಬಾಯಿ ಮೂಲಕ, ಕಯ್ಯಿ ವೂರುಕೊಂಡಿದ್ದವರ ಅಂಗಯ್ಯಿ ಮೂಲಕ, ಬಿತ್ತರ ಮಾಡಿದಳು. ಬೆವರು ರೋಮಾಂಚನ ವುಕ್ಕಿದ ಸರೀರಗಳು ವಂದೇ ಯರಡೇ..ಯಂಥದೋ ವಂದು ಅಗೋಚರ ಆನಂದ, ಯಂಥದೋ ವಂದು ಅನಿರ್ವಚನೀಯ ಭಾವನೆ..ಮಂದಿ ಯಂಬುವ ಮಂದಿ ವಬ್ಬರ ಮುಖ ವಬ್ಬರು ನೋಡಿಕೊಂಡಿತು. ಮಯಿ ಯಂಭೋ ಮಯ್ಯಿ ಜುಮ್ಮಂದ ಗಾಯ್ತಂತಂತು, ಸಂದುಸಂದೇಲಿ ವುಳವುಪ್ಪಡಿ ಹರದಾಡಿದಂಗಾಯ್ತಂತಂತು, ನೆಲಕ್ಕೆ ಕಿವಿ ಹಚ್ಚಿ ಆಲಿಸಿತು,

---

**ನಿಂತವರ ಅಂಗಾಲ ಮೂಲಕ,
ಮಲಕ್ಕಂಡಿದ್ದವರ ಬೆನ್ನ ಹುರಿ ಮೂಲಕ
ಕೂಕಂಡಿದ್ದವರ ಕುಂಡಿ ಮೂಲಕ,
ಬಕಬಾರಲು ಬಿದ್ದುಕೊಂಡಿದ್ದವರ ಗದ್ದಬಾಯಿ
ಮೂಲಕ, ಕಯ್ಯಿ ವೂರುಕೊಂಡಿದ್ದವರ
ಅಂಗಯ್ಯಿ ಮೂಲಕ, ಬಿತ್ತರ ಮಾಡಿದಳು.
ಬೆವರು ರೋಮಾಂಚನ ವುಕ್ಕಿದ ಸರೀರಗಳು
ವಂದೇ ಯರಡೇ..ಯಂಥದೋ ವಂದು
ಅಗೋಚರ ಆನಂದ, ಯಂಥದೋ ವಂದು
ಅನಿರ್ವಚನೀಯ ಭಾವನೆ..ಮಂದಿ ಯಂಬುವ
ಮಂದಿ ವಬ್ಬರ ಮುಖ ವಬ್ಬರು
ನೋಡಿಕೊಂಡಿತು. ಮಯಿ ಯಂಭೋ ಮಯ್ಯಿ
ಜುಮ್ಮಂದ ಗಾಯ್ತಂತಂತು, ಸಂದುಸಂದೇಲಿ
ವುಳವುಪ್ಪಡಿ ಹರದಾಡಿದಂಗಾಯ್ತ.**

ನೆಲದೊಳಗೊಂದೇ ಅಲ್ಲದೆ ಬಟಾಬಯಲೊಳಗೆ ಮಂಗಳ ವಾದ್ಯಗಳು ಮೊಳಗುತ್ತಿರುವಂಥ ಸಬುಧವು, ಗಾಳಿ ಯಳೆ ಯಳೆಯೊಳಗೆ ಬಾಣಂತನದ ವಾಸನೆಯು, ವುರಿವುರಿವ ವಲೆ ಗಳೊಳಗೆ ಸಿರಿಗಂಧ, ಹೊನ್ನೆ; ಜಮ್ಮಿ ಕಾಷ್ಠ ದಹಿಸುತ್ತಿರುವಂಥ ವಾಜನೆಯು.

ಮೂಗರು ಮಾತಾಡುತೀವಂತ ಅಂದುಕೊಂಡರು, ಕಿವುಡ ಕೆಪ್ಪರು ತಾವು ಕೇಳುತ್ತೀವಂತ ಅಂದುಕೊಂಡರು, ಯಿಗ ಸಾಯುತ್ತೇವೆ, ಆಗ ಸಾಯುತ್ತೇವೇವಂತ ಬದುಕಿನ ಅಂತಿಮ ಚಣಗಳನ್ನೆಣಿಕೆ ಮಾಡುತ್ತಿದ್ದ ಮುದೇವು ಸಟಕಂತ ಯದ್ದು ಕೂಕಂಡವು, ತಮಗೂ ಹರೇವು ಬಂತೆಂದಡ್ಡಾಡಿದವು, ಬಸುರುಳ್ಳ ಗರತಿಯರು ಹಡಕೊಂಡರು, ಭೂಮಿಗುದುರಿದ ಕಜ್ಜಿ-ಪುಳ್ಳೆ ಕಂದಮ್ಮಗಳು ಅಳುವ ಬದಲಿಗೆ ಕೇಕೆ ಹಾಕಿ ಮುಗುಲು ತುಂಬಿದವು, ಪಶು ಪಕ್ಷಿ ಕ್ರಿಮಿ ಕೀಟವೇ ಮೊದಲಾದ ಯಿರುವೆ ಯಂಬತ್ನಾಕ್ಕೋಟಿ ಜೀವಗಳ ಮೇಲೂ ಅವ್ವನ ಆಗಮನದ ವಾರ್ತೆ ಪರಿಣಾಮ ಬೀರದೆಯಿರಲಿಲ್ಲ, ಕಾಗೆ ಕೋಗಿಲೆಗಳ ನಡುವಿನ; ಕೆಂಭೂತ ನವಲಿನ ನಡುವಿನ, ಯಿರುವೆ ಗೊದ್ದಿಗಗಳ ನಡುವಿನ ತಾರತಮ್ಯ ಅಳಿಯಿತು, ಬೆಕ್ಕುಗಳು ಧ್ಯಾನ ಪರವಶಗೊಂಡವು, ಅಂಗುಲಂಗುಲ ಅಂಬೆ ಗಾಲಿಟ್ಟು ದೂರವಳೆಯುವ ಕಂಬಳಿ ಹುಳುಗಳು ಬಣ್ಣಬಣ್ಣದ ಚಿಟ್ಟೆಪತಂಗಗಳಾಗಿ ಹಾರಿ ಬಯಲಿಗೆ ಕಸೂತಿ ಹಾಕಿದವು.

ನೆಲದೊಳಗೆ ಯಾರೋ ಅಡ್ಡಾಡುತವರೆ; ವುವ್ವು ಗಳೊಳಗೆ ಯಾರೋ ಸೋಬುನ ಪ್ರೆಸ್ತ ಮಾಡಿ ಕೊಳ್ಳುತ್ತ ವರೆ; ಯಲೆ ಯಲೆಗಳ ಮೇಲೆ ಯಾರೋ ಕೂಕಂಡು ಪಟ್ಟಂಗ ಹೊಡೆಯುತ್ತವರೆ; ಯಾರೋ ಕಿವಿಗಳೊಳಗೆ ಹೊಕ್ಕೊಂಡು ಕೇಳಿಸಿಕೊಳ್ಳುತ್ತವರೆ, ಯಾರೋ ನಾಲಗೆ ಮೇಲೆ ನಿಂತುಕೊಂಡು ಮಾತಾಡುತ್ತವರೆ; ಯಾರೋ ಕಣ್ಣುಗಳೊಳಗೆ ತೂರಿ ಕೊಂಡು ನೋಡತ್ತವರೆ; ಯಾರೋ ಕಯ್ಯಿಗಳೊ ಳಗೆ; ಕಾಲು ಗಳೊಳಗೆ; ಹೊಟ್ಟೆಗಳೊಳಗೆ; ದೇಹದ ನರನಾಡಿಗಳೊಳಗೆ ಯಾರೋ; ಮತ್ತಾರೋ.

ಗ್ರಾಮದೊಳಗೆ ಯಿಷ್ಟೆಲ್ಲ ಸಂಭವಿಸಲಿಕ್ಕೆ, ತೊಂಬಲನಮಲಿ ದಷ್ಟು; ಚಿಲುವೆಯಿಂದೆರಡು ದಮ್ಮು ಯಳೆದಷ್ಟು, ಕಣ್ಣಿದ್ದೊಂದು ಹನಿವುದುರಿ ದಷ್ಟು; ಚಿತ್ರ ಯಿಚಿತ್ತರ ಭಾವನೆಗಳು ಜಮಾ ಆಗಲಿಕ್ಕೆ ವುತಾಗರಲಿಕ್ಕೆ ಸಮಯ ಹಿಡಿಯಿತು.

ಅಂಬಾ ಭವಾನಿ ಯಿಂಬುಗೊಂಡಿದ್ದ ಸರೀರ ಕ್ಕೊಡೆಯ ನಾದ ಓಬಯ್ಯ ದಿಗ್ಗನೆಚ್ಚರಗೊಂಡು ಬೆವರಿಂದ ತೊಯ್ದು ತೆಪ್ಪಟೆ ಯಾಗಿದ್ದ ಕವುದಿ ಮೇಲೆ ಯದ್ದು ಕೂಕಂಡು ಪಿಳಿ ಪಿಳಿ ಕಣ್ಣು ಬಿಟ್ಟು ನೋಡಲು ಯದುರಿಗೆ ಅಮರಾವತಿ ಪಟ್ಟಣ ಯಿಳಿದಿರುವಂತೆ ಕಂಡಿತು. ಕನ್ನಡಿ ಹಳ್ಳೊಳಗೆ ಯಿಳುಕಿ ತನ್ನ ಪಯಿತ್ರ ಸರೀರ ದರುಸನ ಮಾಡಿಕೊಳ್ಳಬೇಕೆಂದರೆ ವಂದಾ ದರೂ ಕನ್ನಡಿಹಳ್ಳು ಆಜು ಬಾಜುಕಿಲ್ಲ, ಮನೆ ಯೊಳಗೆಲ್ಲೂ ಯಿಲ್ಲ..ಕನ್ನಡಿ ಹಳ್ಳು ತಂದಿಟ್ಟು ಕೊಳ್ಳುವಂಥ ಶ್ರೀಮಂತಿಕೆ ತನ್ನದಾಗಿರಲಿಲ್ಲ, ಕನ್ನಡಿ ಹಳ್ಳುಗಳಿರುವುದು ಥೆಳಗೇರೀಲಿ ಯಲ್ಲಾರ ಕಣ್ಣು ಗಳಲ್ಲಿ ಮಾತ್ರ. ಗಂಡನ ಕಣ್ಣುಗಳಲ್ಲಿ ಹೆತ್ತವರು, ಹೆತ್ತ ವರ ಕಣ್ಣುಗಳಲ್ಲಿ ಮಕ್ಕಳು..ವಬ್ಬರಾದರು ತಮತಮ್ಮ ನೆಳ್ಳುಗಳಿಗೆ ಆಸೆ ಪಟ್ಟವರಲ್ಲ..ತಮಗೆ ತಾವು ಮರುಳು ಗೊಂಡವರೂ ಅಲ್ಲ.

ಹೆಂಗಪ್ಪಾ ತನ್ನ ಸರೀರವನ್ನು ತಾನು ನೋಡಿ ಕೊಳ್ಳುವುದು ಯಂದೊಂದು ಚಣ ಓಬಯ್ಯ ಯಿಲಯಿಲನೆ ವದ್ದಾಡಿದನು. 'ನನ್ನ ಕರಮಂಟ ಸರೀರವನ್ನೇ ಅರಮನೆ, ಗುರುಮನೆ, ತವರುಮನೆ ಮಾಡಿಕೊಂಡು ವಸ್ತಿ ಮಾಡಿರುವಂಥಾ ತಾಯಿ ಸಾಂಭವೀ..ನನ್ನ ಸರೀರ ನಂಗೆ ಕಾಂಬುವಂತೆ ಮಾಡು, ನನ್ನ ನೆಳ್ಳುನಂಗೆ ಕಾಂಬುವಂತೆ ಮಾಡು' ಯಂದು ಮುಂತಾಗಿ ತನಗೆ ತಾನೆ ಹಲುಬ್ಯಾಡಿದನು. ತನ್ನ ಸರೀರವೇ ತನಗೆ ಮೋಸಮಾಡಿರ ಬೌದೇ; ತಾನು ಕಂಡುಂಡದ್ದು ದಿವಿನಾದ ಕಣಸಿದ್ದಿರಬೌದೆ

ತಾನು ಕೇಳಿದ್ದು ಅಸರೀರವಾಣಿಯ ಮಾತುಗಳಾಗಿದ್ದಬೌದೆ!

ಅವನು ಹಾಗೆ ಯೋಚಿಸುತ್ತಿರುವಾಗೊ ಬಿಸಿಲು ಬೆಳದಿಂಗಳ ಲಿಂಗವುಟ್ಟಿತು. ದೂರದಲ್ಲೆಲ್ಲೋ ಅವುಚಿಟ್ಟು ಕೊಂಡಿದ್ದ ಬಿರುಗಾಳಿ ಅವನ ಬಾಧೆ ಅರ್ತವ ಮಾಡಿಕೊಂಡು ತನ್ನ ವುದರದಿಂದ ವಂದು ಹಿಡಿ ತಂಗಾಳಿಯನ್ನು ಹೊರತೆಗೆದು 'ಥಳಗೇರಿಗೆ ಹೋಗಿ' ಅಗೋ ಅಲ್ಲಿ ಜಗನುಮಾತೆಯನ್ನು ದೇಹದೊಳಗಿಟ್ಟು ಪಾಲನೆ ಪೋಷಣೆ ಮಾಡುತ್ತಿರುವ ಓಬಯ್ಯಗೆ ಸೇವೆ ಸಲ್ಲಿಸಿ ಬಾ' ಯಂದು ಆಗ್ನಾಪಿಸಲು ಅದು ಹಂಗೇ ಮಾಡಿತು. ನಸು ಬೆಳಕಿನ ಚಾದರ ಸರಿಸಿ ಚುಕ್ಕಿಗಳು ಬಣ್ಣಬಣ್ಣದ ಚಿಟ್ಟೆಗಳಾಗಿ ಬಂದು ಥಳಗೇರಿ ತುಂಬೆಲ್ಲ ಹಾರಾಡಿದವು.

ಆದನ್ನೆಲ್ಲ ಗಮನಿಸಿ ಮಾಡಿದ ಅರಿವಿಗೆ ನಿಲುಕದ ಅಲವುಕಿಕ ಅನುಭವದ ನಿಧಿಗೆ ಒಡೆಯನಾದ ಓಬಯ್ಯನ ಸರೀರದ ಶತ ಸಹಸ್ರ ಶ್ವೇದರಂಧ್ರಗಳಿಂದ ಅವ್ವ ಮತಾಕ್ತೆಯ ಸಂಗಡ ಗಿತ್ತಿಯರು ನಿದುರೆ ಹೋಗಿ ಗೊರಕೆ ಹೊಡೆಯುತ್ತಿರುವಂಥಾ ಸಬುಧವು ಅಲೆಅಲೆಯಾಗಿ ಅವನ ಕಿವಿ ತುಂಬಿತು. ಅವ್ವನ ಕರುಣೆಯ ಕಡಲಿಗೆ, ತ್ರಿಕಾಲ ಸತ್ಯೇವುಗಳಿಗೆ; ಬೇರುಗಳಿಗೆ; ಬೇಡಗಳಿಗೆ ವಡೆಯನಾಗಿರುವ ತಾನು ತನ್ನ ಪಯಿತ್ರ ಸರೀರವನ್ನು ಸಬುಧ, ವಾಸನೆ; ಮುಟ್ಟು-ಮಯ್ಲಿಗೆಗಳಿಂದ ದೂರಯಿರಿಸ ಬೇಕೆಂದು ನಿರ್ಧರಿಸಿದನು. ತಾನಿನ್ನು ಮುಂದೆ ಮಾಡಲಿರುವ ಹೊರಕಡೀಕೆ, ವಂದಾ, ಮಜ್ಜಣ; ಆಡಲಿರುವ ಮಾತು; ವುಸುರಾಡಲಿರುವ ಗಾಳಿ, ನಿಂತಿರುವ ನೆಲ, ಮಾಡುವ, ಮಾಡದೇ ಯಿರುವ ಯಾರೂ ಬ್ಬರು ನೋಡಿ ಕೊಂಡಿಲ್ಲ. ತಮ್ಮನ್ನು ತಾವು ನೋಡಿಕೊಳ್ಳುವ ಹರಕತ್ತು ಯಾರೊಬ್ಬರಿಗೂ ಬಿದ್ದಿಲ್ಲ ನೋಡಿಕೊಂಡರೆಂಥ ಕೇಡು ಸಂಭವಿಸುವುದೋ ಯಂಬ ಅಳುಕು ಯಾರೊಬ್ಬರಿಗೂ ಯಿಲ್ಲದಿರಲಿಲ್ಲ. ಮದುವಿ ಮುಂಜಿ ಮಾಡಿ ಕೊಂಡೋರು, ಸೋಬಿನ ಪ್ರಸ್ತ ಮಾಡಿ ಕೊಂಡೋರು ನಿಂತ ನಿಂತ ನೀರೊಳಗೆ; ಹರಿವ ಜಲದೊಳಗೆ ತಿಕ್ಕಿ ಜಳಜಳ ತೊಳೆದ ಸಿಲವಾರ ಪಾತ್ರೆ ಪಡಗಗಳೊಳಗ ಯಿಣುಕಿ ಹಾಕಿ ತಮ ತಮ ಹರಕು ಬರಕು ನೆಳ್ಳುಗಳನ್ನು ನೋಡಿಕೊಂಡು ತೃಪ್ತಿ ಪಟ್ಟುಕೊಂಡಿರುವುದುಂಟು. ಯಿಂಥ ಅಯೋಮಯ ಕಾಲದೊಳಗೆ ನಾಳೆಯಂಬುದೆಲ್ಲಯ್ತೋ ಯಂದು ಬದುಕುತ್ತಿದ್ದ ಓಬಯ್ಯ ದಂಪತಿಗಳು ತಮ್ಮ ನೆಳ್ಳಿಗೆ ತಾವು ಆಸೆ ಪಟ್ಟವರಲ್ಲ; ತಮಗೆ ತಾವು ಮರುಳಾದವರಲ್ಲ.

ಅವ್ವ ತನ್ನ ಮಯ್ಯಿವಳಗೆ ಯಿಂಬುಗೊಂಡಿರುವಳೋ ಯಿಲ್ಲವೋ ಯಂಬುದನ್ನು ಪರಿಕಿಸಲು; ಯಿಂಬುಕೊಂಡಿದ್ದಲ್ಲಿ ತನ್ನ ಮಯ್ಯಿಗೆ ಹೊಳೆವ ಬಣ್ಣ ಪ್ರಾಪ್ತ ವಾಗಿರುವುದೋ ಯಂಬುದನ್ನು ಪರಿಕಿಸಲೋಸುಗ ತನ್ನ ನೆರಳನ್ನು ತಾನು ನೋಡಿಕೊಳ್ಳ ಬೇಕೆಂದು ತಕರಲಾಡಲಾರಂಭಿಸಿದನು. ಮಣ್ಣಿನ ಗೋಡೆಯೊಳಗೆ; ನಿಲುವು ನಿಂತಿದ್ದ ಕಂಭಗಳೊಳಗೆ ಸೆಗಣಿ ರಾಡಿ ಬಳಿದಿದ್ದ ನೆಲದೊಳಗೆ; ಬಾನ ಮೆತ್ತಿದ್ದ ಪಾತ್ರೆ ಪಗಡಗಳೊಳಗೆ ಯಿಣುಕಿಣುಕಿ ನೋಡಿಕೊಂಡನಾದರು ತನ್ನ ನೆಳ್ಳು ತನಗೆ ಗೋಚರಮಾಡಲಿಲ್ಲ. ಮುಸುರೆ ತುಳುಕಾಡುತ್ತಿದ್ದ ಬಾನಿನೊಳಗೆ; ಕಪ್ಪೆ ಯಿಜುತ್ತಿದ್ದ ತಸ್ತಿನೊಳಗೆ ಯಿಣುಕಿಣುಕಿ ನೋಡಿ ಕೊಂಡನಾದರು ತನ್ನ ನೆಳ್ಳು ತನಗೆ ಕಾಣಿಸಲಿಲ್ಲ.

ನನ್ನ ಕರಮಂಟ ಸರೀರವನ್ನೇ ಅರಮನೆ, ಗುರುಮನೆ ಮಾಡಿಕಂಡು ವಸ್ತಿ ಮಾಡಿರೋ ತಾಯಿ ಸಾಂಬವಿ, ನನ್ನ ಸರೀರವನ್ನು ನನ್ನಿಂದ ಯಾಕ ಬಚ್ಚಿಟ್ಟಿದ್ದೀಯವ್ವಾ..ನನ್ನ ನೆಳ್ಳು ನಂಗೆ ಕಾಂಬುವಂತೆ ಮಾಡು ಯಂದು ತನ್ನಷ್ಟಕ್ಕೆ ತಾನೆ ಕೇಳಿಕೊಂಡನು ಓಬಯ್ಯನೆಂಬುವ ಮಳ್ಳನು. ಅವನಾ ಸರೀರ ಯಂಬುವ ಮುರುಕು ತಡಿಕೆಯೊಳಗೆ ಪ್ರಯಾಣಾಯಾಸ ಪರಿಹಾರಾರ್ಥವಾಗಿ ಯಿಸ್ರಮಿಸಿಕೊಂಡಿದ್ದ ತಾಯಿಗೆ ಅವನ ಪ್ರಾರ್ತನೆಗೆ ವಂದು ಹಿಡಿ ಸೊಪ್ಪು ಹಾಕುವಷ್ಟು ವ್ಯವಧಾನ ಯಿರಲಿಲ್ಲ. ತನ್ನ ಸರೀರದ ಕಡೆ ಕಿವಿ ಅಡವಿಟ್ಟಿದ್ದ; ತನ್ನ ಸರೀರದ ಕಡೆ ಕಣ್ಣಡವಿಟ್ಟು ಗಳಿಗೆಗಟ್ಟಲೆ ಕಾದೇ ಕಾದನು. ವಂದು 'ಹ್ಞಾಂ' ಬರಲಿಲ್ಲ.. ವಂದು 'ಹ್ಞೂಂ' ಬರಲಿಲ್ಲ. ತನ್ನ ಸರೀರವೇ ತನಗೆ ಮೋಸ ಮಾಡಿರಬಹುದು, ತಾನು ಕಂಡಿದ್ದು ದಿವಿನಾದ ಕಣಸುಯಿದ್ದರ ಬಹುದು. ತಾನು ಕೇಳಿದ್ದ ಮಾತುಗಳು ಅಸರೀರ ವಾಣಿ ಯಾಡಿದ ಮಾತುಗಳಿದ್ದಿರಬಹುದೆಂದು ಭಾವಿಸುತ್ತ ವಂಚಾ ವತ್ತು ಕುಂಡ್ರುವುದು; ಯದ್ದೇಳುವುದು, ಅಲ್ಲಿಂದ ಯಿಲ್ಲಿಗೆ; ಯಿಲ್ಲಿಂದ ಅಲ್ಲಿಗೆ ದಟ್ಬಂಡಿ ದಾರಂಡಿ ಅಡ್ಡಾಡುವುದು ಮಾಡಿದನು. ಮನಸ್ಸಿಗೆ ಸುಖ ಸಾಂತಿ ಲಭಿಸಲಿಲ್ಲ. ಹಂಗೆ ನಡಕೋತ ನಡಕೋತ ಹೊಸ್ತಿಲ ಮಟಬಂದು ಬಾಗಿಲ ತೋಳುಗಳಿಗೆ ಕಯ್ಯಿ ಹಚ್ಚಿ ಹೊರಗಿಣುಕಿದನು. ಅವನ ನೋಟದಿಂದ ಪುಳಕಗೊಂಡ ಬೇವಿನಮರ ಹಿಂದಕ ಮುಂದಕ ಅಳ್ಳಾಡಿತು. ವುಧೋ ವುಧೋಯಂಬಂತೆ ಯಲೆಗಳನ್ನುವುದುರಿಸಿತು. ಅವನ ನೋಟದಿಂದ ಪುಳಕಗೊಂಡ ಬಿಸಿಲು ವಂಚಣ ಮಂಕು ಕವಿದಂತಾಗಿ ಬೆಳದಿಂಗಳೆಂಬಂತೆ ಗೋಚರಿಸಿತು. ದೂರದಲ್ಲೆಲ್ಲೋ ಹೆದರಿ ಬಚ್ಚಿಟ್ಟುಕೊಂಡಿದ್ದ ಬಿರುಗಾಳಿಗೂ ಅವನ ನೋಟದ ವಂದೆಸಲು ತಾಕದೆ ಯಿರಲಿಲ್ಲ. □

ಅವ್ವ ತನ್ನ ಮಯ್ಯಿವಳಗೆ ಯಿಂಬುಗೊಂಡಿರುವಳೋ ಯಿಲ್ಲವೋ ಯಂಬುದನ್ನು ಪರಿಕಿಸಲು; ಯಿಂಬುಕೊಂಡಿದ್ದಲ್ಲಿ ತನ್ನ ಮಯ್ಯಿಗೆ ಹೊಳೆವ ಬಣ್ಣ ಪ್ರಾಪ್ತ ವಾಗಿರುವುದೋ ಯಂಬುದನ್ನು ಪರಿಕಿಸಲೋಸುಗ ತನ್ನ ನೆರಳನ್ನು ತಾನು ನೋಡಿಕೊಳ್ಳಬೇಕೆಂದು ತಕರಲಾಡಲಾರಂಭಿಸಿದನು. ಮಣ್ಣಿನ ಗೋಡೆ ಯೊಳಗೆ; ನಿಲುವು ನಿಂತಿದ್ದ ಕಂಭಗಳೊಳಗೆ ಸೆಗಣಿ ರಾಡಿ ಬಳಿದಿದ್ದ ನೆಲದೊಳಗೆ; ಬಾನ ಮೆತ್ತಿದ್ದ ಪಾತ್ರೆ ಪಗಡಗಳೊಳಗೆ ಯಿಣುಕಿಣುಕಿ ನೋಡಿಕೊಂಡನಾದರು ತನ್ನ ನೆಳ್ಳು ತನಗೆ ಗೋಚರಮಾಡಲಿಲ್ಲ. ಮುಸುರೆ ತುಳುಕಾಡುತ್ತಿದ್ದ ಬಾನಿ ನೊಳಗೆ; ಕಪ್ಪೆ ಯಿಜುತ್ತಿದ್ದ ತಸ್ತಿನೊಳಗೆ ಯಿಣುಕಿಣುಕಿ ನೋಡಿಕೊಂಡನಾದರು ತನ್ನ ನೆಳ್ಳು ತನಗೆ ಕಾಣಿಸಲಿಲ್ಲ.

ಕಾವ್ಯ

ಆಹಾ! ಇದೆಂಥಾ ವ್ಯವಸ್ಥೆ

○ ಎಸ್. ಮಾಲತಿ

ಸತ್ಯ-ದುಡಿಮೆ
ಅಪ್ಪ ಹೇಳಿದ ಪಾಠ
ಶಿಸ್ತು-ವಿನಯ
ಅಮ್ಮ ಹೇಳಿದ ಪಾಠ
ಅಭ್ಯಾಸ-ಏಕಾಗ್ರತೆ
ಗುರುಗಳ ಮಂತ್ರ
ಹೇಳಿದ್ದನ್ನೆಲ್ಲ ಕೇಳಿ
ಒಳಗೇ ಧ್ಯಾನಿಸಿ
ಕಡೆದ ಶಿಲೆಯಂತೆ
ರೂಪಗೊಂಡ ಮನಸ್ಸು

ಮದುವೆ ಮಾರ್ಕೆಟ್ಟಿನಲ್ಲಿ
ಎಲ್ಲವೂ ಬಿಕರಿಗಿಟ್ಟ ಮಾಲಿನಂತೆ
ಕೊಳ್ಳುವರು ತೂಗಿ ತೂಗಿ
ಅದು ಬೇರೆಯೇ ಕಥೆ!

ಅತ್ತೆ ಹೇಳುವರು
ಮನೆಯ ತೂಗಿಸಲು
ಸುಳ್ಳುಗಳ ಕಲಿ
ಮಾವನ ಮಾತು-
ಅನುಮಾನವಿದ್ದರೆ
ಒಳ್ಳೆಯದು ಭವಿಷ್ಯಕೆ
ಗಂಡನದು ಮಾತಿಲ್ಲ
ಎಲ್ಲ ಹಾವಭಾವ
ಮುಸುಕಿನೊಳಗೇ ಗುದ್ದು
ಬಿರುಗಣ್ಣ ನೋಟ
ಚುಚ್ಚುವ ಕಟಕಿಯಾಟ
ಹುಬ್ಬುಗಂಟು ಹಲ್ಲುಕಡಿತ
ಸಂಭೋಗದಲೆ ಚುಚ್ಚಿ ಚುಚ್ಚಿ
ನೋವ ನುಂಗಿಸುವ ಪರಿ!
ವಿಜಯದಟ್ಟಹಾಸ!

ಉಕ್ಕುವುಬ್ಬರದ ತಿಳಿನೀರಿನಂಥ
ಭಾವನೆಗಳಿಗೆಲ್ಲ
ಕರಿಮಣಿಯ ಬಿಗಿದ ಗಂಟು
ಸ್ವಚ್ಛ ನೀರಿನಲಿ ಹಾಲಾಹಲ!

ಕಣ್ಣನೋಟಗಳಲ್ಲೇ
ಮುಳ್ಳು ಬೇಲಿಯ ಕಟ್ಟಿ
ಹೂನಗೆಯ ಬೇಡುವರು
ಕನಸು ಕಂಡ ಕಣ್ಣಿನಲಿ
ಮೂಡುವುದು ಗಲಿಬಿಲಿ
ಸುತ್ತಣ ಗಾಳಿಯಲ್ಲೇ
ಉಕ್ಕುತ್ತಿದ್ದ ನಗೆಯನ್ನ
ತಡೆವಂಥ ಬೆದರಿಕೆ
ಅಳುವ ಕಾರಣ ಗೊತ್ತಿಲ್ಲದೇ

ಕಚ್ಚಿದ ತುಟಿಯಲ್ಲಿ
ಹೆಪ್ಪುಗಟ್ಟಿದ ರಕ್ತ

ಆಹಾ! ಇದೆಂಥ ವ್ಯವಸ್ಥೆ
ರೈಲುಹಳಿಯ ಸಮಾನಾಂತರ
ಕಂಬಿಗಳಂತೆ
ದೇಹ ಮನಸ್ಸುಗಳು
ವಿಮುಖವಾಗುವ ದುರವಸ್ಥೆ!

ದಲಿತ ಮೂಲಭೂತವಾದ: ಒಂದು ಚಿಂತನೆ

ಶೋಷಿತ ಗರ್ಭದಿಂದ ನವಶೋಷಣೆಯ ಜೀವಾಂಕುರ

○ ನಾರಾಯಣ ತಿರುಮಲಾಪುರ

ಮೂಲಭೂತವಾದ ಇಡೀ ಜಗತ್ತನ್ನು ನಡುಗಿಸುತ್ತಿದೆ. ಭಾರತದಲ್ಲಂತೂ ಶತಮಾನಗಳಿಂದ ಹಿಂದೂ ನಾಜಿಗಳು ಬಹುಸಂಖ್ಯಾತ ಜನವರ್ಗವನ್ನು ಅಮಾನವೀಯವಾಗಿ ನಡೆಸಿಕೊಂಡು ಮೂಲಭೂತವಾದಿಗಳಲ್ಲಿ ಅಗ್ರಗಣ್ಯರಾಗಿದ್ದಾರೆ. ಇಂಥ ಶೋಷಣೆ ವಿರುದ್ಧ ಹೋರಾಟ ಮಾಡಿ, ಶೋಷಿತ ವರ್ಗಗಳಿಗೆ ಹೊಸ ಬದುಕಿನ ಬೆಳಕನ್ನು ನೀಡಿದ ಅಂಬೇಡ್ಕರ್ ಅವರ ವಿಚಾರಗಳನ್ನು ತಿರುಚಿ ದಲಿತ ಮೂಲಭೂತವಾದಕ್ಕೆ ಪ್ರಚೋದನೆ ನೀಡುವ ಪ್ರವೃತ್ತಿ ಹೆಚ್ಚುತ್ತಿದೆ. ದಲಿತರೊಳಗೆ ಮೊಳಕೆಯೊಡೆಯುತ್ತಿರುವ ಮೂಲಭೂತವಾದದ ವಿಶ್ಲೇಷಣೆ ಇಲ್ಲಿದೆ.

ಈ ದೇಶದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಅತಿ ಹೆಚ್ಚು ಶೋಷಣೆಗೆ ಒಳಗಾಗಿ ನೋವುಂಡವರು, ಗುಲಾಮರಾದವರು ಮತ್ತು ಎಲ್ಲಾ ರೀತಿಯಲ್ಲೂ ವಂಚಿತರಾದವರು ಅಸ್ಪೃಶ್ಯರು ಮತ್ತು ದಲಿತರು. ಈ ಸಾಮಾಜಿಕ ವ್ಯವಸ್ಥೆಯ ಕಟ್ಟಕಡೆಯ ವರ್ಗ ಇವರು. ಸಮಾಜವೆಂಬ ಐದು ಮಹಡಿಗಳ ಕಟ್ಟಡದ ನೆಲಪಾಯ ಇವರು. ಇಡೀ ವ್ಯವಸ್ಥೆಯ ಹೆಣಭಾರ ಅವರ ಎದೆಯ ಮೇಲೆ ಅದುಮಿದೆ. ಸಾವಿರಾರು ವರ್ಷಗಳಿಂದ ಅವರ ಬದುಕು, ಭವಿಷ್ಯವನ್ನು ದೋಚಿದ್ದು ಈ ಕ್ರೂರ ಅಮಾನವೀಯ ವ್ಯವಸ್ಥೆ. ಪಶು, ಪಕ್ಷಿ, ಕ್ರಿಮಿ-ಕೀಟಗಳಿಗಿಂತಲೂ ಕೀಳಾಗಿ ಕಂಡಿತು ಈ ಅಸಮಾನ ವೈದಿಕಶಾಹಿ ಸಾಮಾಜಿಕ ವ್ಯವಸ್ಥೆ. ಇದು ಎಲ್ಲರಿಗೂ ತಿಳಿದ ಇತಿಹಾಸ ಸತ್ಯ.



ಊರಿನ ಹೊರಗಿದ್ದವರು ಇಂದು ಒಳಕ್ಕೆ ಬಂದಿದ್ದಾರೆ. ಬರಲು ಇನ್ನೂ ಪ್ರಯತ್ನಿಸುತ್ತಲೇ ಇದ್ದಾರೆ. ಪ್ರತಿಯೊಬ್ಬರ ಜನ್ಮಸಿದ್ಧ ಹಕ್ಕಾದ ಸಮಾನತೆ ಮತ್ತು ಶೋಷಣೆ ಮುಕ್ತ ಸಮಾಜಕ್ಕಾಗಿ ಹೋರಾಡುವ ಪ್ರಜ್ಞೆ ಪಡೆಯುತ್ತಿದ್ದಾರೆ. ಈ ಎಲ್ಲಾ ಕ್ರಾಂತಿಕಾರಕ ಬದಲಾವಣೆಗಳು ಈ ಶ್ರೇಣೀಕೃತ ಭಾರತದಲ್ಲಿ ಏಕಾಏಕಿ ಇದ್ದಕ್ಕಿದ್ದಂತೆ ಸೃಷ್ಟಿಯಾದವುಗಳಲ್ಲ. ಈ ಬದಲಾವಣೆಯ, ಸಾಧನೆಯ ಹಿಂದೆ ನೂರಾರು ವರ್ಷಗಳ ಹಲವಾರು ಮಹನೀಯರ ಮಾನವೀಯ ತುಡಿತದ ಹೋರಾಟಗಳ ಫಲವಿದೆ. ವ್ಯವಸ್ಥೆಯ ಬದಲಾವಣೆಗಾಗಿ ಹಲವು ಚಳುವಳಿಗಳು ಶ್ರಮಿಸಿದ ಕಷ್ಟದ ಕಥೆ ಇದೆ. ಡಾ.ಬಿ.ಆರ್.ಅಂಬೇಡ್ಕರರು ಅಂತಹವರಲ್ಲಿ ಒಬ್ಬರು. ಮೂಲತಃ ಅಸ್ಪೃಶ್ಯತೆಯ ಶೋಷಣೆಯ ಕುಲುಮೆಯಲ್ಲಿ ಬೆಂದು, ಅನುಭವಗಳ ಹೊಡೆತದಿಂದ ಆಕಾರ ಪಡೆದ ಅವರು, ವಿಶ್ವದ ಶ್ರೇಷ್ಠ ಚಿಂತಕರಲ್ಲೆ ಒಬ್ಬರಾಗಿ, ಉತ್ತಮ ವಾಗ್ಮಿ, ಬರಹಗಾರರಾಗಿ ಮತ್ತು ಒಬ್ಬ ಪರಿಪೂರ್ಣ ವಿದ್ವಾಂಸರಾಗಿ ನಿರ್ಮಾಣಗೊಂಡರು. ಎಲ್ಲಕ್ಕಿಂತ ಹೆಚ್ಚಾಗಿ ಅಸ್ಪೃಶ್ಯರ ಶೋಷಣೆಯ ವಿರುದ್ಧದ ಮತ್ತು ಅವರ ಉಳಿವಿಗಾಗಿ ಚಳುವಳಿಯನ್ನು ಕಟ್ಟಿ ಬೆಳೆಸಿದ್ದು, ಅದಕ್ಕೆ ಸಮರ್ಥ ನೇತೃತ್ವ ಮತ್ತು ಮಾರ್ಗದರ್ಶನ ನೀಡಿದ್ದು ಅವರ ಶ್ರೇಷ್ಠ ಸಾಧನೆ. ಆದುದರಿಂದಲೇ ಅವರು 'ದಲಿತರ ದೈವ'ವಾಗಿಬಿಟ್ಟರು.

ಡಾ|| ಅಂಬೇಡ್ಕರ್ ಈ ದೇಶಕ್ಕೆ ಪರಿಚಿತರಾದಂದಿನಿಂದ ಸಾಯುವ ಕೊನೆ ಕ್ಷಣದವರೆಗೂ ಈ ದೇಶದ ಮುಂದೆ, ವ್ಯವಸ್ಥೆಯ ಮುಂದೆ ಇಟ್ಟ ಬೇಡಿಕೆ ಮತ್ತು ಮಾಡಿದ ಒತ್ತಾಯ ಇದಿಷ್ಟೇ: ಸರ್ವ ಸಮಾನ, ಶೋಷಣೆರಹಿತ ಸುಂದರ ಮಾನವೀಯ ಸಮಾಜವನ್ನು ನಮಗೆ ಕೊಡಿ. ನಮ್ಮನ್ನು ನಿಮ್ಮಂತೆ ಬದುಕಲು ಬಿಡಿ. ಈ ದೇಶದಲ್ಲಿ ನಾಯಿ-ನರಿಗಳು, ಕೋತಿಗಳು, ಹಂದಿಗಳು, ಪಶು-ಪಕ್ಷಿಗಳು, ಗಿಡ-ಮರಗಳು, ಕಲ್ಲುಗಳು ಮತ್ತು ಚಿತ್ರಪಟಗಳು ಪೂಜಿಸಿಕೊಳ್ಳುತ್ತವೆ. ಆದರೆ ಇಲ್ಲೇ ತಮ್ಮೊಡನೆ ಹುಟ್ಟಿ ಬದುಕಿ, ಸೇವೆ ಮಾಡಿ ಇತರರಂತೆ ಎಲ್ಲಾ ದೈಹಿಕ ಮತ್ತು ಮಾನಸಿಕ ಅರ್ಹತೆ ಪಡೆದಿರುವ ನಿಮ್ಮ ಸಹಮಾನವರನ್ನು ಕೇವಲ ಕೀಳುಜಾತಿಯ ಗರ್ಭದಿಂದ ಹುಟ್ಟಿದ ಒಂದೇ ಒಂದು ಮಾನವ ನಿರ್ಮಿತ ವಂಚನೆಯ ಕಾರಣಕ್ಕೆ ಅವರನ್ನು ಈ ಮೇಲೆ ತಿಳಿಸಿದ ಎಲ್ಲಕ್ಕಿಂತಲೂ ಕೀಳಾಗಿ, ಅಮಾನವೀಯವಾಗಿ ಕಾಣುವುದು ಮತ್ತು ಉಪಚರಿಸುವುದು ಇದು ಅನ್ಯಾಯವಲ್ಲವೇ? ಶೋಷಣೆಯಲ್ಲವೇ? ದಬ್ಬಾಳಿಕೆಯ ದೌರ್ಜನ್ಯವಲ್ಲವೇ? ಇದಕ್ಕೆ ಪರಿಹಾರವೇನು? ಎಂಬುದು ಅವರ ಪ್ರಶ್ನೆಯಾಗಿತ್ತು. ಈ ಎಲ್ಲಾ ಪ್ರಶ್ನೆಗೂ ಅವರೇ ಉತ್ತರವನ್ನೂ ಕೂಡಾ ಹೇಳಿ ಜಾಗೃತಿಯ ಚಳುವಳಿ ಕಟ್ಟಿದ ಪರಿಣಾಮ ಇಂದು ಅಸ್ಪೃಶ್ಯರು, ಶೂದ್ರರು, ಎಲ್ಲಾ ಜಾತಿ, ಧರ್ಮದ 'ಶೋಷಿತ ಸಮುದಾಯ' ಆಧುನಿಕ ಭಾರತದಲ್ಲೆ ಉಸಿರಾಡುವಂತೆ ಆಗಿದ್ದು ನಿತ್ಯ ಸತ್ಯ.

ಸಾವಿರಾರು ವರ್ಷಗಳ ಶೋಷಣೆಯ ಮೊತ್ತದ ಬಡ್ಡಿಗೂ ಸಮವಾಗದ ಒಂದಷ್ಟು ಸೌಲಭ್ಯ ಮತ್ತು ಅವಕಾಶಗಳನ್ನು ಈ ವರ್ಗ ಪಡೆದಿದ್ದು ಸತ್ಯ. ಕಟ್ಟಿದ ಧ್ವನಿ, ಬಿಗಿದ ಕೊರಳು ಕೂಗಿದ್ದು ವಾಸ್ತವ. ಎದೆ ಮೆಟ್ಟಿದ ಕಾಲುಗಳನ್ನು ಅಲುಗಾಡಿಸಿ ಎಚ್ಚರಿಸಿದ್ದು ಎಚ್ಚರಿಸುತ್ತಿರುವುದು ಇಂದಿಗೂ ಅದು ಒಂದು ನವಸ್ಫೂರ್ತಿಯ ಹೋರಾಟದ ಇತಿಹಾಸ. ಹೌದು, ಎಲ್ಲಾ ಮಾನವೀಯ ಹೃದಯಗಳೂ ಸಂತೋಷಪಡಬೇಕಾದ ವಿಚಾರ. ಹೋರಾಟದ ಸಾಗರಕ್ಕೆ ಹರಿದು ಬರುತ್ತಿರುವ ಈ ಕಿರು ತೊರೆಗಳಿಗೆ, ನದಿಗಳಿಗೆ ನಾವು ಕೈಬೀಸಿ ಸ್ವಾಗತಿಸಬೇಕು. ಏಕೆಂದರೆ ಅಲ್ಲಿ ಪ್ರಗತಿ ಇದೆ. ಅಲ್ಲೆ ಶೋಷಣೆಗೆ ಪ್ರತೀಘಟನೆ ಇದೆ. ಸಮಾನತೆಯ ಗುರಿ ಇದೆ. ಅಲ್ಲೆ ಸುಂದರ ಮಾನವೀಯ ಸಮಾಜದ ಕನಸಿದೆ. ಸರ್ವರ ಒಳಿತಿನ ಧ್ಯೇಯವಿದೆ. ಅದಕ್ಕಾಗಿ ನಾವು ಅವರ ಜೊತೆ ಸೇರಬೇಕು ಮತ್ತು ದನಿಗೂಡಬೇಕು. ಆದರೆ...?

ಇಂದು ನಮ್ಮ ಮುಂದೆ ಮತ್ತೊಂದು ಹೊಸದಾದ ಘೋರ ಸಮಸ್ಯೆ ಎದುರಾಗುತ್ತಿದೆ. ಆಘಾತಕಾರಿ ಮತ್ತು ಅಮಾನವೀಯ ದಬ್ಬಾಳಿಕೆಯ 'ಕೆಟ್ಟ ಭೂತ' ಸೃಷ್ಟಿಯಾಗುತ್ತಿದೆ. ಶೋಷಿತರಿಂದ ಶೋಷಿತರನ್ನೇ ಕೊಲ್ಲುವ ವಿಷದ ಸೋಂಕು ಏಡ್ಸ್ ಕಾಯಿಲೆಗಿಂತಲೂ ವೇಗವಾಗಿ ಹರಡುತ್ತಿದೆ. ಸಮಸಮಾಜದ ಸ್ವಾಸ್ಥ್ಯ ಕೆಡಿಸುತ್ತಿದೆ. ಈ ಎಲ್ಲಾ ಸುಂದರ ಸಮಾಜದ ಆಶಯಗಳು, ಆ ವರ್ಗದಲ್ಲೆ ಮೊಟಕಾಗುತ್ತಿದೆ, ಮಬ್ಬಾಗುತ್ತಿದೆ. ಅಲ್ಲೆ ಮತ್ತಾವುದೋ ಒಂದು ಹೊಸ ಜಾಡ್ಯ, ಮನುಷ್ಯ ವಿರೋಧಿ ಸಾಮಾಜಿಕ ರೋಗ ಬಹುವಾಗಿ ವ್ಯಾಪಕವಾಗಿ ಆ ಶೋಷಿತ ಸಮುದಾಯದಲ್ಲೆ ಸ್ಥಾನ ಪಡೆಯುತ್ತಿದೆ. ಯಾವ ಶೋಷಣೆಯ ಅಸ್ತ್ರಗಳಿಂದ ವ್ಯವಸ್ಥೆಯ ಒಳಗೆ ದಲಿತರು ನಲುಗಿಹೋಗಿದ್ದರೋ ಅಂತಹುದೇ ಮತ್ತೊಂದು ಕ್ರೂರವಾದ ಸಮಾನತೆಯ ವಿರೋಧಿ ಮೆದುಳು ಮತ್ತು ಮನಸ್ಸು ಇಂದು ದಲಿತ ಮತ್ತು ಅಸ್ಪೃಶ್ಯ ಜನಾಂಗದಲ್ಲಿ ಬೆಳೆಯುತಿದೆ. ಈ ವಿಷಬೀಜ ಮೊಳಕೆಯೊಡೆದು ಹುಲುಸಾಗಿ ಬೆಳೆಯುತಿದೆ. ಅದೇ 'ದಲಿತ ಮೂಲಭೂತವಾದ' ಅಥವಾ 'ದಲಿತ ಫಂಡಮೆಂಟಲಿಸಮ್'. ಈ ಅಂಟುಜಾಡ್ಯದ ಬಿತ್ತನೆ

ಈಗಾಗಲೇ ಮರ, ಹೆಮ್ಮರ. ಅದರ ನೆರಳಿನಲ್ಲೆ ದಲಿತ ಮತ್ತು ಅಸ್ಪೃಶ್ಯ ಜನಾಂಗಗಳ ಕೆಲವೇ ಪ್ರಬಲ ಜಾತಿ ಜನಾಂಗದ ಜನತೆ ಸೆರೆಯಾಗುತ್ತಿದ್ದಾರೆ. ಕೆಲವು ದಲಿತ ಮೂಲಭೂತ ವಾದಿ ಸಂಘಟನೆಗಳು, ವಿಚಾರವ್ಯಾ(ವಾ)ದಿಗಳು ಮತ್ತು ಕೆಲವು ಜಾತಿ ಮೂಲಭೂತವಾದಿ ಬರಹಗಾರರು ಈ ನವ ಶೋಷಣೆಯ ಸಿದ್ಧಾಂತದ ಪ್ರತಿಪಾದಕರಾಗಿದ್ದಾರೆ.

ನಾವು 'ದಲಿತರು' ಎನ್ನುವ ಕೆಲವು ಸಂಘಟನೆಗಳು, ನಾಯಕರು ದಲಿತ ಮತ್ತು ಅಸ್ಪೃಶ್ಯ ಜಾತಿ ಜನಾಂಗ ಗಳೆಲ್ಲವನ್ನೂ ಸಮಾನ ದೃಷ್ಟಿಯಿಂದ ಕಾಣಲಾರರು. ಕೆಲವೇ ಕೆಲವು ಪ್ರಬಲ ಜನಾಂಗವನ್ನು ವೈಭವೀಕರಿಸಿ ನಾವು ದಲಿತರು, ಅಸ್ಪೃಶ್ಯರು ಎಂದು ನೇತೃತ್ವ ಹಿಡಿದು ಮತ್ತು ಸೌಲಭ್ಯಗಳನ್ನು ಪಡೆದು ಮಿಕ್ಕುಳಿದ ದಲಿತ ಜನಾಂಗಗಳ ಸ್ವಾಭಿಮಾನ ಮತ್ತು ಸಮಾನತೆಗೆ ಧಕ್ಕೆ ತಂದಿದ್ದಾರೆ. ಅಲ್ಲದೆ ತಳಮಟ್ಟದಲ್ಲಿ ಇನ್ನೂ ಶೋಷಣೆಯಲ್ಲಿನಲುಗಿ, ಗುಲಾಮಗಿರಿಯಲ್ಲೆ ಬದುಕುತ್ತಿರುವ ದಲಿತರಿಗೆ ಸೌಲಭ್ಯ, ಅವಕಾಶಗಳನ್ನು ನೀಡದೇ ಮೇಲ್ವರ್ಗದ ದಲಿತರೇ ಅವರ ಅವಕಾಶಗಳನ್ನು ನುಂಗಿ ನೀರು ಕುಡಿದು 'ನವಬ್ರಾಹ್ಮಣಶಾಹಿ'ಗಳಾಗುತ್ತಿರುವುದು ಆತಂಕಕಾರೀ ಬೆಳವ ಣಿಗೆ. ಇದು ಶೋಷಣೆಯ ಒಳಗೆ ಮತ್ತೊಂದು ಶೋಷಣೆಯ ವಿಧಾನ. ಅಸ್ಪೃಶ್ಯತೆಯ ಒಳಗೆ ಮತ್ತೊಂದು ಕ್ರೂರ ಅಸ್ಪೃಶ್ಯತೆ. ಇದು ಅವರಿಗೆ 'ಜಾತೀಯತೆ'ಯೂ ಅಲ್ಲ ಅಥವಾ ಅಸ್ಪೃಶ್ಯತೆ ಯೂ ಅಲ್ಲ, ಅಸಮಾನತೆ, ಶೋಷಣೆ, ದಬ್ಬಾಳಿಕೆಗಳಂತೂ ಖಂಡಿತಾ ಅಲ್ಲ. ಏಕೆಂದರೆ ಅವರು ದಲಿತ ಜನಾಂಗಗಳನ್ನು ಗುತ್ತಿಗೆ ಪಡೆದುಕೊಂಡಿರುವ ವಾರಸುದಾರರು.

ದಲಿತ ಮತ್ತು ಅಸ್ಪೃಶ್ಯ ಜನಾಂಗದೊಳಗಿನ ಜಾತೀಯತೆ ಮತ್ತು ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಯಾವ ಸಂವಿಧಾನ ಅಥವಾ ಕಾನೂನು ಶಿಕ್ಷೆ ನೀಡುತ್ತದೆ? ಶಿಕ್ಷೆ, ಕಾನೂನು ಮತ್ತು ಜಾತಿ ನಾಶ, ಅಸ್ಪೃಶ್ಯತೆ ನಿಷೇಧ ಈ ಎಲ್ಲವೂ ಕೂಡಾ ದಲಿತೇತರರಿಗೆ, ಸವರ್ಣೀಯರಿಗೆ, ಬ್ರಾಹ್ಮಣರಿಗೆ ಮಾತ್ರ ಅನ್ವಯ. ಇದು ದಲಿತ ಮೂಲಭೂತವಾದದ ಮತ್ತೊಂದು ಮುಖದ ಮಾತು. ದಲಿತರ ಉದ್ಧಾರದ ಬಗ್ಗೆ, ಅವರ ಶೋಷಣೆಯ ಬಗ್ಗೆ ಮತ್ತು ಅವರ ಸಮಾನತೆಯ ಬಗ್ಗೆ ಯಾರಾದರೂ ಸವರ್ಣೀಯರು ಅಥವಾ ಬ್ರಾಹ್ಮಣ ಜಾತಿಗೆ ಹುಟ್ಟಿದ ಸಮದೃಷ್ಟಿಯ ಜನ ಅಥವಾ ಪ್ರಗತಿಪರ ಸಂಘಟನೆ ಗಳು ಮಾತನಾಡಿದರೆ ಮತ್ತು ಹೋರಾಟ ಮಾಡಿದರೆ ಅದು ಲೆಕ್ಕಕ್ಕಿಲ್ಲ. ಏಕೆಂದರೆ ಅವರು ದಲಿತ ಜನಾಂಗದ ಗರ್ಭದಲ್ಲಿ ಹುಟ್ಟಿಲ್ಲ ಎಂಬ ಒಂದೇ ಒಂದು ಕಾರಣಕ್ಕೆ. ಇದು ಈ ಮೂಲಭೂತವಾದಿಗಳ ಕುತರ್ಕ. ಆದರೂ ಅಂತಹ ಜನ ಅಥವಾ ಸಂಘಟನೆ ಕಣ್ಣಿಗೆ ಕಾಣದಷ್ಟು ವಿರಳ ಎಂಬುದು ಕಟುಸತ್ಯ.

ದೇಶದ ಹಿಂದುಳಿದ ವರ್ಗ, ಅಸ್ಪೃಶ್ಯ ಜನಾಂಗ ಮತ್ತು ಸಮಾಜದ ಮಹನೀಯರ ಸುಧಾರಣೆಯ ಫಲವಾಗಿ ಭಾರತದ ಸಂವಿಧಾನ ನೀಡುತ್ತಿರುವ ಹಕ್ಕು ಮತ್ತು ಸೌಲಭ್ಯ ಗಳನ್ನು ಬಳಸಿಕೊಂಡು ಬೆಳೆಯುತ್ತಿರುವ ಜನಾಂಗಗಳಲ್ಲಿ ಅದ ರಲ್ಲೂ ದಲಿತ ಜನಾಂಗದ ಪ್ರಬಲ ಜಾತಿಗಳಲ್ಲೆ ಇಂದು ದಲಿತ ಮೂಲಭೂತವಾದ ಬೇರೂರುತ್ತಿದೆ. ಪ್ರಸ್ತುತ ಭಾರತವನ್ನು ವಿಚ್ಛಿದ್ರಕಾರಿ, ಅಪಾಯಕಾರಿ ಮತ್ತು ಸಮಾನತೆ ವಿರೋಧಿ ದಿಕ್ಕಿಗೆ ಕೊಂಡೊಯ್ಯುತ್ತಿರುವ 'ಹಿಂದೂ ಮೂಲಭೂತ ವಾದ' ಮತ್ತು 'ಮುಸ್ಲಿಂ ಮೂಲ ಭೂತವಾದ' ಇವುಗಳಂತೆ ದಲಿತ ಮೂಲಭೂತವಾದ ಸಾಗುತ್ತಿರುವುದು ಭಾರತೀಯ ಸಮಾಜಕ್ಕೆ, ದಲಿತರ ವಿಮೋಚನೆಗೆ ಗಂಡಾಂತಕಾರಿ. ಇದರ ಉದ್ದೇಶಗಳಲ್ಲಿ ಮತ್ತು ಅದು ಮಾಡುತ್ತಿರುವ ಶೋಷಣೆ ಯಾವ ಮೂಲಭೂತವಾದಕ್ಕೂ ಕಡಿಮೆ ಇಲ್ಲ.

ಈ ದೇಶದಲ್ಲಿ ವೈದಿಕಶಾಹಿ ಅಡಿಗಲ್ಲಿನ ಅಪ್ಪಟ ಹಿಂದುತ್ವ ದೇಶದ ಸ್ಥಾಪನೆಗಾಗಿ ಇತರ ಧರ್ಮ, ಜನಾಂಗ ಮತ್ತು ಸಂಸ್ಕೃತಿಗಳ ಅಸ್ತಿತ್ವಕ್ಕೆ ಬೆಂಕಿ ಇಟ್ಟು ಅವರ ಸಾವಿನ ಸಮಾಧಿಯ ಮೇಲಾದರೂ ಸರಿ ತಮ್ಮ ಕೇಸರಿ ಧರ್ಮಧ್ವಜ ಪ್ರತಿಷ್ಠಾಪಿಸಬೇಕೆನ್ನುವ ರಾಮಭಕ್ತ ಭಜರಂಗಿಗಳು, ಧರ್ಮ-ದೇವರ ಹೆಸರಿನಲ್ಲಿ ದೇಶದ ಕ್ರಾಂತಿ, ಸಾಮರಸ್ಯ ಮತ್ತು ಪ್ರಗತಿಯನ್ನು ಹಾಳು ಮಾಡುತ್ತಿದ್ದಾರೆ. ಅದೇ ರೀತಿ ಇಸ್ಲಾಂನ ಹಸಿರು ಧ್ವಜ ವನ್ನು ಇತರ ಧರ್ಮೀಯರ ರಕ್ತದ ಮಡುವಿನ ನಡುವೆ ನೆಟ್ಟೇ ತೀರಬೇಕೆಂದು ಜೀವದಹಂಗನ್ನೇ ತೊರೆದು ನಿಂತಿರುವ ಮತಾಂಧ ಮೂಲಭೂತವಾದಿ ಮುಸ್ಲಿಂ ಜೆಹಾದಿಗಳು, ಸಾವಿರಾರು ಅಮಾಯಕರನ್ನು ಕೊಲ್ಲುತ್ತಲೇ ಇದ್ದಾರೆ.

ಈ ಕ್ರೂರ ರಕ್ಕಸರ ನಡುವೆ ಶೋಷಿತ ಗರ್ಭದಿಂದಲೇ ನವ ಶೋಷಣೆಯ ಜೀವಾಂಕುರವಾಗಿ ಹೊರಹೊಮ್ಮಲು ಇಣುಕಿ ನೋಡುತ್ತಿರುವ,ಮತ್ತೊಂದು ಜನಾಂಗೀಯ ವಾದವಾಗಿ ಬೆಳೆ ಯುತ್ತಿರುವ ದಲಿತ ಮೂಲಭೂತವಾದ ಆ ಮಟ್ಟದ ಶಕ್ತಿಗಾಗಿ ಶ್ರಮಿಸುತ್ತಿದೆ. ಅದಕ್ಕಾಗಿ ಅಖಾಡವನ್ನು ಸಜ್ಜುಗೊಳಿಸುತ್ತಿದೆ. ದಲಿತ ಮೂಲಭೂತವಾದ ಸಮಾಜದ ಮುಖ್ಯವಾಹಿನಿ ಯಿಂದ ದಲಿತರನ್ನು ಪ್ರತ್ಯೇಕಿಸಿ ಅವರ ವಿಮೋಚನೆ ಮತ್ತು ಸಮಾನತೆಯಿಂದ ದೂರ ಕರೆದೊಯ್ಯುವ ನಿಟ್ಟಿನಲ್ಲಿ ಸಾಗು ತ್ತಿದೆ. ಬಹುಸಂಖ್ಯಾತ ಶೂದ್ರ, ಅತಿಶೂದ್ರ ಮತ್ತು ಅಸ್ಪೃಶ್ಯ ಜಾತಿಗಳ ನಡುವೆ ಸಾಮರಸ್ಯಕ್ಕೆ ಬದಲು ಬೆಂಕಿ ಹಚ್ಚಲು ಹೊಂಚು ಹಾಕುತ್ತಿದೆ. ಈಗಾಗಲೇ ದಬ್ಬಾಳಿಕೆ, ದೌರ್ಜನ್ಯಗಳ ಸರಮಾಲೆಯ ಸರದಾರನಾಗಲು ಕನಸು ಕಾಣುತ್ತಿದೆ.

ನಾವು ಶತಮಾನಗಳಿಂದ ಶೋಷಣೆಗೆ ಒಳಗಾದ ವರು, ಆದ್ದರಿಂದ ಈಗ ಶೋಷಣೆ ಮಾಡಲು ನಮಗೂ ಒಂದು ಅವಕಾಶ ಕೊಡಿ ಎಂದು ಕೇಳು ತ್ತಿದೆ. ಆ ಪ್ರತೀಕಾರಕ್ಕಾಗಿ ಈಗ ಸೇಡಿನ ರಾಜಕೀಯ, ಸೇಡಿನ ಚಿಂತನೆ, ಸೇಡಿನ ಸಮಾಜ, ಸಂಸ್ಕೃತಿ ಮತ್ತು ಹೋರಾಟಗಳಿಗಾಗಿ ಶ್ರಮಿಸುತ್ತಿದೆ. ಮೊದ ಮೊದಲು ಬ್ರಾಹ್ಮಣ ಜನಾಂಗದ ಎಲ್ಲರೂ ಅವರ ಶತ್ರುಗಳಾಗಿದ್ದರು. ಆದರೆ ಇತ್ತೀಚೆಗೆ ಶೂದ್ರರು, ಅತಿಶೂದ್ರರು ಮತ್ತು ದಲಿತ ಜನಾಂಗದ ಕೆಲವು ಪ್ರತಿಸ್ಪರ್ಧಿ ಜಾತಿಗಳು ಅವರ ಶತ್ರುಗಳಾಗಿ ಬಿಟ್ಟಿದ್ದಾರೆ. ಅವರ ಗುರಿ ಪ್ರಬಲ ದಲಿತ ಜನಾಂಗದ ಅಥವಾ ಪ್ರಬಲ ಅಸ್ಪೃಶ್ಯ ಜನಾಂಗದ ಸರ್ವಾಧಿ ಕಾರಿ ಮತ್ತು ಸಾರ್ವಭೌಮ ಸಮಾಜದ ನಿರ್ಮಾಣ. ಆದರೆ ಸರ್ವರೂ ಸಮನಾದ, ಶೋಷಣೆರಹಿತ ಮಾನವೀಯ ಸಾಮರಸ್ಯದ ಸಮಾಜವಲ್ಲ. ಅವರ ಈ ಕೆಟ್ಟ ಕನಸು ಕನಸೇ ಹೊರತು ನನಸಾಗಲು ಸಾಧ್ಯವೇ? ಏಕೆಂದರೆ ಶೋಷಣೆಯ ಅಡಿಪಾಯ ಎಷ್ಟು ಕಾಲ ತಾನೇ ಗಟ್ಟಿಯಾಗಿ ನಿಲ್ಲಬಲ್ಲುದು? ಈ ಬೌದ್ಧಿಕ ದಾರಿದ್ರ್ಯಕ್ಕೆ ದೇವರು, ಆದರ್ಶ ಡಾ.ಅಂಬೇಡ್ಕರ್ ಒಬ್ಬರೇ. (ನಿಜವಾದ ಅಂಬೇಡ್ಕರ್ ವಾದವನ್ನು ಅರಿತವರು ದಲಿತ ಮೂಲಭೂತವಾದಿಗಳಾಗಲು ಸಾಧ್ಯವೇ ಇಲ್ಲ)

ಬೇರೆ ಯಾವ ಆದರ್ಶಗಳೂ, ಸಿದ್ಧಾಂತಗಳೂ ಮತ್ತು ಮಹನೀಯರೂ ಲೆಕ್ಕಕ್ಕಿಲ್ಲ. ಅವರೆಲ್ಲಾ ಅವರಿಗಿಂತ ತುಂಬಾ ಕೀಳು. ಎಲ್ಲೆಲ್ಲೂ ಭೀಮಗೀತೆ, ಭೀಮವಂದನೆ, ಭೀಮ ಸ್ವಾಗತ, ಭೀಮ ನಮಸ್ಕಾರ, ಭೀಮ ವೇದಿಕೆ, ಭೀಮ ನಾಡು, ಭೀಮ ರಕ್ತ, ಭೀಮ ವೃತ್ತ, ಭೀಮ ಬೀದಿ, ಭೀಮ.... ಎಲ್ಲವೂ ಭೀಮಮಯ. ಹೇಗಿದೆ ನೋಡಿ ವ್ಯಕ್ತಿಪೂಜೆ ಮತ್ತು

ಮೂರ್ತಿ ಪೂಜೆ ವಿರೋಧಿಸಿದ ಅಂಬೇಡ್ಕರ್‌ಗೆ ಈಗ ಎಲ್ಲ ದೇವರುಗಳಂತೆ ಪೂಜೆ

ವ್ಯಕ್ತಿ ವೈಭವೀಕರಣವನ್ನು ಧಿಕ್ಕರಿಸಿ ವಿರೋಧಿಸಿದ ಭೀಮ ಅಂಬೇಡ್ಕರ್‌ರವರಿಗೆ ಬಂದ ದುರ್ಗತಿ. ಇದು ಈ ವ್ಯವಸ್ಥೆಯ ದುರಂತ ಮತ್ತು ದಲಿತರ ಅಂಧಕಾರ. 'ಬಹುಜನ' ಎಂಬ ಪದವನ್ನು ಗುತ್ತಿಗೆ ಪಡೆದಂತೆ ಬಳಸುವ ಈ ದಲಿತ ಮೂಲಭೂತವಾದಿಗಳು ಬಹುಜನ ನಾಯಕರುಗಳನ್ನು, ಸಿದ್ಧಾಂತವನ್ನು ಮತ್ತು ಬಹುಜನ ಭಾವನೆಗಳನ್ನು ಕೀಳಾಗಿ ಕಂಡು ಅಗೌರವ ತೋರುತ್ತಿರುವುದು ಅವರ ಗೋಸುಂಬೆತನದ ಒಳಸಿದ್ಧಾಂತಕ್ಕೆ ಸಾಕ್ಷಿ ಮತ್ತು ನಗ್ನ ಸತ್ಯ. ಅವರ ದೃಷ್ಟಿಯಲ್ಲಿ ಬಸವ, ಗಾಂಧಿ, ಮಾರ್ಕ್ಸ್, ವೀರ ಭಗತ್, ಲಿಂಕನ್, ತಾಯಿ ತೆರೇಸಾ.... ಅವರೆಲ್ಲಾ ಸವರ್ಣೀಯರು; ಮೇಲ್ಜಾತಿಯ ಜನ.

ಅಂಬೇಡ್ಕರ್ ಕಾರ್ಯಕ್ರಮ ಮತ್ತು ದಲಿತ ಸಮುದಾಯದ ಕೆಲವು ಬಹುಸಂಖ್ಯಾತ ಜಾತಿಯ ಸಮಸ್ಯೆ ಮತ್ತು ಹೋರಾಟಗಳಿಗಷ್ಟೇ ಪ್ರತಿಯೊಬ್ಬ ದಲಿತರೂ ಹೋಗಲೇ ಬೇಕು. ಅದಷ್ಟೇ ಅವರ ಕಾರ್ಯಸೂಚಿ ಮತ್ತು ಸಂವಿಧಾನ. ಅಂಬೇಡ್ಕರ್‌ವಾದದ ಸರಿ; ತಪ್ಪುಗಳ ವಿಮರ್ಶೆ, ಸೋಲು ಗೆಲುವುಗಳ ಚರ್ಚೆ, ಪ್ರಸ್ತುತ ಅಪ್ರಸುತ್ತೆಯ ತರ್ಕ ಮತ್ತು ಅದರ ಇತಿ-ಮಿತಿಗಳ ಅವಲೋಕನ ಸಂಪೂರ್ಣ ನಿಷಿದ್ಧ. ಅದು ಮಹಾಪಾಪ ಮತ್ತು ತಪ್ಪು. ಏಕೆಂದರೆ, ಅದು 'ದಲಿತ ಧರ್ಮಶಾಸ್ತ್ರ' (ಮನು ಧರ್ಮ ಶಾಸ್ತ್ರದಂತೆ) ಅಂಬೇಡ್ಕರ್‌ರವರನ್ನು ಬಿಟ್ಟು ಬೇರೆ ಯಾವುದೇ ಮಹಾತ್ಮರನ್ನು ಮತ್ತು ಮಾನವೀಯರನ್ನು ಉಚ್ಚರಿಸಿದರೆ, ಹೊಗಳಿದರೆ ಅದು ತಪ್ಪು. ಅವರ ಬಗ್ಗೆ ದಲಿತರ ಮುಂದೆ ಅವರು ದಲಿತರಿಗಾಗಿ ಮತ್ತು ಸಮ ಸಮಾಜಕ್ಕಾಗಿ ಮಾಡಿದ ನಿಸ್ವಾರ್ಥ ಪ್ರಯತ್ನ ಮತ್ತು ಸಾಧನೆಗಳನ್ನು ಸ್ಮರಿಸಿದರೆ ಅಥವಾ ಅಂಬೇಡ್ಕರರಿಗೆ ಹೋಲಿಸಿ ಮಾಡಿದಲ್ಲಿ ಅದು ತಪ್ಪಾಗಿ ಬಿಡುತ್ತದೆ.

ದಲಿತರ್‍ಯಾರಾದರೂ ದಲಿತೇತರ ಮತ್ತು ಪ್ರಗತಿಪರ ಜನ ಮತ್ತು ಸಂಘಟನೆಗಳ ಜೊತೆ ಗುರ್ತಿಸಿಕೊಂಡರೆ ಅವರು ನಿಜವಾದ ಅಪ್ಪಟ ದಲಿತರೇ ಅಲ್ಲ, ಅವರೆಲ್ಲಾ ಅಂಬೇಡ್ಕರ್ ವಿರೋಧಿಗಳು, ದಲಿತ ವಿರೋಧಿಗಳು ಮತ್ತು ಶತ್ರುಗಳು. ಏಕೆಂದರೆ ಅಂಬೇಡ್ಕರ್ ಬಗ್ಗೆ ವಿಮರ್ಶಿಸುವುದು, ಚರ್ಚಿಸುವುದು, ಅವಲೋಕಿಸುವುದು ಅಂದರೆ ಏನು ಅರ್ಥ! ಇವರ್‍ಯಾರು ಮಹಾ? ಅಂಬೇಡ್ಕರ್ ಎಂದರೆ ಅಸ್ಪೃಶ್ಯರು, ಅಸ್ಪೃಶ್ಯರು ಎಂದರೆ ಅಂಬೇಡ್ಕರ್ ಅಷ್ಟೇ. ಇದು ಅವರ ದಿಟ್ಟ ನಿಲವು. ಅವರೇನು ಹೇಳಿದ್ದಾರೆ ಅದಷ್ಟೇ ಸತ್ಯ. ಅದನ್ನು ಒಪ್ಪಲೇಬೇಕು. ಇದು ದಲಿತ ಮೂಲಭೂತವಾದಿಗಳ 'ತತ್ವ'. ಇದೇ ತಾನೇ ಮೂಲಭೂತವಾದದ ಮೂಲಭೂತ ಲಕ್ಷಣ. ಸಮಾಜದ ಸಮಸ್ತರ ಭಾವನೆಗಳಿಗೆ ಬೆಲೆ ಕೊಡದೆ ಇತರರರನ್ನು ಕೀಳಾಗಿ ಅಸಮಾನತೆಯಿಂದ ನೋಡುವುದು, ಇತರ ಸಮುದಾಯದ ಭಾವನೆ-ಆದರ್ಶಗಳ ಸಮನಾಗಿ ನೋಡದೆ ಅವರ ಸಮಾನತೆಗೆ ಧಕ್ಕೆ ತಂದು, ಅವರ ಬದುಕು ಹಾಗೂ

ಯಾವ ಆದರ್ಶಗಳೂ, ಸಿದ್ಧಾಂತಗಳೂ ಮತ್ತು ಮಹನೀಯರೂ ಲೆಕ್ಕಕ್ಕಿಲ್ಲ, ಅವರೆಲ್ಲಾ ಅವರಿಗಿಂತ ತುಂಬಾ ಕೀಳು. ಎಲ್ಲೆಲ್ಲೂ ಭೀಮಗೀತೆ, ಭೀಮವಂದನೆ, ಭೀಮ ಸ್ವಾಗತ, ಭೀಮ ನಮಸ್ಕಾರ, ಭೀಮ ವೇದಿಕೆ, ಭೀಮ ನಾಡು, ಭೀಮ ರಕ್ತ ಭೀಮ ವೃತ್ತ ಭೀಮ ಬೀದಿ, ಭೀಮ.... ಎಲ್ಲವೂ ಭೀಮಮಯ. ಹೇಗಿದೆ ನೋಡಿ ವ್ಯಕ್ತಿಪೂಜೆ ಮತ್ತು ವ್ಯಕ್ತಿ ವೈಭವೀಕರಣವನ್ನು ಧಿಕ್ಕರಿಸಿ ವಿರೋಧಿಸಿದ ಭೀಮ ಅಂಬೇಡ್ಕರ್‌ರವರಿಗೆ ಬಂದ ದುರ್ಗತಿ. ಇದು ಈ ವ್ಯವಸ್ಥೆಯ ದುರಂತ ಮತ್ತು ದಲಿತರ ಅಂಧಕಾರ.

ಅಸ್ತಿತ್ವಕ್ಕೆ ಅಭದ್ರತೆ ಮತ್ತು ಭಯ ಸೃಷ್ಟಿ ಮಾಡಿ ಹೇಳಿದಂತೆ ಕೇಳಲು ಒತ್ತಾಯಿಸುವ ಈ ದಬ್ಬಾಳಿಕೆಯ ಪ್ಯಾಸಿಸ್ಟ್ ದಲಿತ ನೀತಿ ಎಷ್ಟು ಕಾಲ ತಾನೇ ಮಿಂಚಬಲ್ಲುದು? ಕೃತಕ ಬಲವಂತದ ಹೊಂದಾಣಿಕೆ ಮಾಡಿ 'ಗೆದ್ದವರು ನಾವು' ಎಂದು ಇವರು ಬೀಗುತ್ತಾರೆ. ಸ್ವಾಭಿಮಾನ, ಸಮಾನತೆ ಮತ್ತು ಸರ್ವ ಸಾಮರಸ್ಯಕ್ಕೆ ಬೆಂಕಿ ಇಡುವ ಈ ಸಿದ್ಧಾಂತ ಶೋಷಿತ ಸಮುದಾಯದ ಶೋಷಣೆಯೇ ಆಗಿದೆ.

ಶೋಷಿತ ಗರ್ಭದಿಂದಲೇ ನವಬೀಜಾಂಕುರ ಪಡೆದು ಬರುತ್ತಿರುವ ಮತ್ತೊಂದು ಶೋಷಣೆಯ ಅಸ್ತ್ರ ಇಂದು ದಲಿತಕೇರಿಗಳಲೂ, ವಿದ್ಯಾರ್ಥಿನಿಲಯಗಳಲ್ಲಿ ಅಂಬೇಡ್ಕರರ ಬಿಟ್ಟು ಬೇರೆ ಮಹನೀಯರ ಬಗ್ಗೆ ಮಾತಾನಾಡುವುದು ತಪ್ಪಾಗುತ್ತಿದೆ. ಸಮಾನತೆಗಾಗಿ ದುಡಿದ ಮತ್ತು ಅಸ್ಪೃಶ್ಯರಿಗಾಗಿ ಹೋರಾಡಿದ ದಲಿತೇತರ ಶೂದ್ರ, ಅತಿಶೂದ್ರ ಅಥವಾ ಅತೀ ವಿರಳವಾಗಿ ದೊರೆಯುವ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಪ್ರಗತಿಪರರ ಬಗ್ಗೆ ಮಾತನಾಡಲು ಹೊರಟರೆ, ಅದು ದಲಿತ ವಿರೋಧಿ ನೀತಿ. ಅವರೆಲ್ಲಾ ದಲಿತರನ್ನು ಹಾದಿ ತಪ್ಪಿಸುವವರು. ಇದು ದಲಿತ ಮೂಲಭೂತವಾದಿಗಳ ಎದೆಯಾಳದ ಅಭಿಪ್ರಾಯ. ಅಸ್ಪೃಶ್ಯತೆ ಬದುಕುವುದಾದರೆ ಹಿಂದೂ ಧರ್ಮ ಸಾಯುವುದನ್ನು ನಾನು ಬಯಸುತ್ತೇನೆ ಎಂದು ಸಾರಿದ ಮಹಾತ್ಮ ಗಾಂಧೀಜಿ ಸೂಟು ಬೂಟಿನ ಅಂಬೇಡ್ಕರರೊಡನೆ ಹೋಗುತ್ತಿದ್ದ ಜನ ಸಾಗರವನ್ನು ತನ್ನಡೆಗೆ ಸೆಳೆಯಲು ಅರೆನಗ್ನರಾಗಿ ಬದುಕಿದರಂತೆ. ಅವರೇ ದಲಿತರ ನಿಜವಾದ ಶತ್ರುವಂತೆ.

ಈ ಹಿಂದೂಧರ್ಮದ ಕೊಳೆ, ಕಲ್ಮಶಗಳ ತೊಳೆಯಲು ಸುಧಾರಣೆಯ ಪೊರಕೆ ಹಿಡಿದು ಹೋರಾಡಿ ಅಂತ್ಯಜರ ಉದ್ಧಾರಕ್ಕಾಗಿ 'ದರಿದ್ರ ನಾರಾಯಣೋಭವ' ಎಂದು ಸಾರಿದ ಧೀಮಂತ ದೇಶಭಕ್ತ ಸ್ವಾಮಿ ವಿವೇಕಾನಂದ ಒಬ್ಬ ಹಿಂದೂ ಕಪಟ ಸನಾತನೀ ಸನ್ಯಾಸಿಯಂತೆ. ಇನ್ನು ಹನ್ನೆರಡನೇ ಶತಮಾನದಲ್ಲೇ ದಲಿತರ ಉದ್ಧಾರಕ್ಕಾಗಿ ಕ್ರಾಂತಿಕಾರಿ ಮಾರ್ಗವನ್ನೆ ತುಳಿದ ಬಸವಣ್ಣ ಕೇವಲ ಬುದ್ಧನನ್ನು ನಕಲು ಮಾಡಿದನಂತೆ. ಅದರಲ್ಲಿ ಅವನದೇನೂ ಅತಿಶಯವಿಲ್ಲವಂತೆ.

ಆಧುನಿಕ ಜಗತ್ತಿಗೆ ವೈಜ್ಞಾನಿಕವಾಗಿ ಸಮಾಜವಾದವನ್ನು ಪರಿಚಯಿಸಿ, ಸರ್ವ ಸಮಾನತೆಯ ಸಮತಾವಾದಿ ಕ್ರಾಂತಿ ಕೊಂಡಕ್ಕೆ ಕೆಂಡವಿಟ್ಟು ಅಸಮಾನತೆ ಮತ್ತು ಶೋಷಣೆಗೆ ಭೂತವಾಗಿ, ಜಗತ್ತಿನ ಶ್ರಮಿಕ ಜನಕ್ಕೆ ದೈವವಾಗಿ ಬಂದ ಕಾರ್ಲ್‌ಮಾರ್ಕ್ಸ್ ವಿದೇಶದವನಂತೆ. ಅವನಿಗೆ ಜಾತಿಯೇ ಗೊತ್ತಿಲ್ಲವಂತೆ. (ಹತ್ತೊಂಭತ್ತನೇ ಶತಮಾನದಲ್ಲಿ ಭಾರತೀಯ ಸಮಾಜದ ಸಂರಚನೆ, ಜಾತೀಯತೆ, ಭೂಮಾಲೀಕರು ಮತ್ತು ರಾಜಕಾರಣ ಈ ಎಲ್ಲವನ್ನೂ ತಿಳಿದಿದ್ದಷ್ಟೇ ಅಲ್ಲ, ಆ ಬಗ್ಗೆ ವೈಜ್ಞಾನಿಕ ವಿಶ್ಲೇಷಣೆ ಮಾಡಿ ಸಂಶೋಧನಾತ್ಮಕ ಲೇಖನ ಬರೆದಿದ್ದಾರೆ ಕಾರ್ಲ್‌ಮಾರ್ಕ್ಸ್.)

ಭಾರತೀಯ ಸ್ವಾತಂತ್ರ್ಯ ಸಮರದಲ್ಲಿ ಸಮ ಸಮಾಜದ ಸ್ವತಂತ್ರ ಭಾರತದ ಧ್ಯೇಯವನ್ನು ಮುಂದಿಟ್ಟು ಕ್ರಾಂತಿಕಾರಿ ಹೋರಾಟದಲ್ಲಿ ಧುಮುಕಿ ಬ್ರಿಟಿಷರ ಮತ್ತು ಬಂಡವಾಳಶಾಹಿ ಭಾರತೀಯರ ಕುತಂತ್ರದಿಂದ ಹಾಗೂ ಗಾಂಧಿ ಮತ್ತು ಕಾಂಗ್ರೆಸ್‌ನ ತಾತ್ಸಾರಕ್ಕೆ ತುತ್ತಾಗಿ ತನ್ನ ಹದಿಹರೆಯದ ೨೩ನೇ ವಯಸ್ಸಿಗೆ ಗಲ್ಲಿಗೇರಿ ಹುತಾತ್ಮನಾದ ಕ್ರಾಂತಿವೀರ ಭಗತ್‌ಸಿಂಗ್ ಒಬ್ಬ ಬಂದೂಕು ಸಂಸ್ಕೃತಿಯ ಹುಚ್ಚು ಹುಡುಗನಂತೆ. ಹುಟ್ಟಿನಿಂದ ಬ್ರಾಹ್ಮಣರಾದರೂ ಅಸ್ಪೃಶ್ಯ ಅಂಬೇಡ್ಕರರರನ್ನು ಪ್ರೇಮಿಸಿ ವಿವಾಹವಾದ ವೈದ್ಯೆ ಮತ್ತು ಎರಡನೇ ಪತ್ನಿ ಡಾ. ಶಾರದ ಅಂಬೇಡ್ಕರ್ ಬ್ರಾಹ್ಮಣರ ಹೇಳಿಕೆಯಂತೆ ಅಂಬೇಡ್ಕರರಿಗೆ ವಿಷದ ಚುಚ್ಚು ಮದ್ದು ನೀಡಿ ಕೊದುಬಿಟ್ಟರಂತೆ. ಏಕೆಂದರೆ ಆಕೆ ಬ್ರಾಹ್ಮಿಣಿಯಂತೆ. ಹೇಗಿದೆ ನೋಡಿ: ಬ್ರಾಹ್ಮಣ ಹುಟ್ಟಿನ ಮೇಲಿನ ಮತ್ಸರ ಮತ್ತು ಸೇಡಿನ ಈ ಅಡುಗೂಲಜ್ಜಿ ಕಥೆ.

ಈ ಎಲ್ಲಾ ಬಿಸಿ ಬಿಸಿ ಮಾತುಗಳು ನಾನು ಹೇಳುತ್ತಿರುವುವಲ್ಲ, ಅಪ್ಪಟ ದಲಿತ ಮೂಲಭೂತವಾದಿಗಳು ಬಹಿರಂಗ ಸಭೆ, ಗುಪ್ತ ಸಭೆ, ವಿಚಾರ ಸಭೆ ಮತ್ತು ಅಂಬೇಡ್ಕರ್ ಕಾರ್ಯಕ್ರಮ, ಸಮಾರಂಭಗಳಲ್ಲಿ, ದಲಿತ ಕೇರಿಗಳಲ್ಲಿ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಕಕ್ಕುವ ವಿಷ. ಈ ವಿಷ ಪ್ರಾಶನಕ್ಕೆ ಬಲಿಯಾಗಿ ಅದನ್ನೇ ಸತ್ಯವೆಂದು ನಂಬುವ ಮುಗ್ಧ ಅಮಾಯಕ ದಲಿತ ಜನಾಂಗ, ವಿದ್ಯಾರ್ಥಿ, ಯುವಜನರು ಮತ್ಯಾವ ಮಟ್ಟದ ವಿಷಜಂತುಗಳಾಗಬಹುದು? ಅವರ ಮೆದುಳು ಮತ್ಯಾವ ರೀತಿ ಚಿಂತಿಸಬಹುದು? ಅವರು ಮತ್ಯಾವ ರೀತಿಯ ಸಮಾಜ, ಸಮುದಾಯವನ್ನು ನಿರ್ಮಿಸಬಲ್ಲರು? ಇದನ್ನು ನಾವು ಗಂಭೀರವಾಗಿ ಯೋಚಿಸಬೇಕು.

ಈ ರೀತಿಯ ಭಾಷಣ ಮತ್ತು ಸಭೆಗಳಿಂದ ಪ್ರಚೋದಿತವಾಗಿ ಇಂದು ದಲಿತ ಮೂಲಭೂತವಾದಿ ಮನಸ್ಸುಗಳು, ಸಂಘಟನೆಗಳು ಮತ್ತು ಪಕ್ಷಗಳು ಬೆಳೆದು ದಲಿತ ಕೇರಿಗಳನ್ನು, ದಲಿತ ವಿದ್ಯಾರ್ಥಿನಿಲಯಗಳನ್ನು ತಮ್ಮ ಕೇಂದ್ರ ಸ್ಥಾನವನ್ನಾಗಿಸಿಕೊಂಡು ಸ್ವಾರ್ಥದ ರಾಜಕೀಯ ಮತ್ತು ಸಂಘಟನೆಗಳಿಗಾಗಿ ಬಳಸಿಕೊಳ್ಳುತ್ತಿರುವುದು ಅಪಾಯಕಾರಿ ಸಂಗತಿಯಾಗಿದೆ.

ಈಗ ಕಾಣುತ್ತಿರುವ ದಲಿತ ವೈಭವೀಕರಣ ಇತರ ಶೂದ್ರ, ಅತಿಶೂದ್ರ, ಮೇಲ್ಜಾತಿಯ ಮತ್ತು ಅಸ್ಪೃಶ್ಯ ದಲಿತ ಸಮುದಾಯದ ಅನೇಕ ಜಾತಿ, ಜನಾಂಗದ ಜನರಲ್ಲಿ ಅಂಬೇಡ್ಕರರ ಬಗ್ಗೆ ದ್ವೇಷ ಮತ್ತು ಅಸೂಯೆ ಸೃಷ್ಟಿಸಿ ಅಂಬೇಡ್ಕರರನ್ನು ಇತರ ಎಲ್ಲಾ ಜಾತಿಯ ಶೋಷಿತ ಜನರಿಂದ ದೂರ ಮಾಡಿದೆ. ಈ ವೈಭವೀಕರಣ, ವ್ಯಕ್ತಿ ಪೂಜೆಯ ಪರಿಣಾಮವಾಗೇ ಇಂದು ದಲಿತ ಅಸ್ಪೃಶ್ಯ ಜನಾಂಗಗಳ ಅನೈಕ್ಯತೆಗೆ ಕಾರಣವಾಗಿದೆ. ಹಲವಾರು ಜಾತಿಗಳಿಗೆ, ಹಲವಾರು ನಾಯಕರ ಹಣೆಪಟ್ಟಿ

ಕಟ್ಟಿಕೊಂಡಿದ್ದಾರೆ. ದಲಿತ ಸಂಘಟನೆಗಳ ಮತ್ತು ನಾಯಕತ್ವದ ಸ್ಪರ್ಧೆ ಮತ್ತು ಪ್ರತ್ಯೇಕತೆ ವಿಸ್ತರಿಸುತ್ತಿದೆ. ಈ ಎಲ್ಲದರ ಪರಿಣಾಮದಿಂದಲೇ ಇಂದು ಜಾತಿ ಸಂಘರ್ಷ ಮತ್ತು ಪ್ರತಿಮೆಗಳಿಗೆ ಅಪಮಾನ ಎಲ್ಲಾ ಕಡೆ ಹೆಚ್ಚಾಗುತ್ತಿದೆ. ಈ ರೀತಿಯ ತಿಳಿಗೇಡಿ ದುಷ್ಕೃತ್ಯಗಳಿಂದ ಊರು ಊರುಗಳೇ ಹೊತ್ತಿ ಉರಿಯುತ್ತಿವೆ. ಅಮಾಯಕ ಶೋಷಿತರು ಬಲಿಯಾಗುತ್ತಲೇ ಇದ್ದಾರೆ. ಈ ಸತ್ಯವನ್ನು ಎಲ್ಲರೂ ಮನಗಾಣಬೇಕಾಗಿದೆ. ಈ ದಲಿತ ಮೂಲಭೂತವಾದ ಶೋಷಿತ ವರ್ಗದ ಮೂಲದಿಂದ ಬರುತ್ತಿದೆ ಎಂಬ ಒಂದೇ ಒಂದು ಕಾರಣಕ್ಕೆ ಈವರೆಗೆ ಅನೇಕ ಪ್ರಗತಿಪರರು, ಪ್ರಜ್ಞಾವಂತರು ಮತ್ತು ಸಮಸಮಾಜದ ಹೋರಾಟಗಾರರು ಈ ಬಗ್ಗೆ ಗಂಭೀರವಾಗಿ ಪರಿಗಣಿಸಿಲ್ಲ ಎಂದು ಕಾಣುತ್ತದೆ. ಅಥವಾ ಆ ವರ್ಗದ ಬಗೆಗಿನ ಅನುಕಂಪ, ಅವರನ್ನು ಕುರುಡು ಮಾಡಿರಬಹುದು ಎನಿಸುತ್ತದೆ. ಗಮನಿಸಿದ್ದರೂ ಕೂಡಾ ಅದು ಮೂಲಭೂತವಾದದ ರೂಪ ಕ್ರೂರತೆ ಮತ್ತು ಭದ್ರತೆ ಪಡೆಯಲು ಸಾಧ್ಯವೇ ಎಂದು ಕಡೆಗಣಿಸಿದಂತೆ ಕಾಣುತ್ತದೆ.

ಇಂದು ದಲಿತೇತರರು ದಲಿತ ಜನಾಂಗೀಯವಾದದ ವಿರುದ್ಧ ಮಾತನಾಡುವುದು ಸುಲಭದ ಮಾತಲ್ಲ. ಅವರು ದಲಿತ ಕುಟುಂಬದಲ್ಲೆ ವಿವಾಹವಾಗುವಷ್ಟು ಅವರನ್ನು ಸರ್ವ ಸಮಾನವಾಗಿ ಕಾಣುವಷ್ಟು ಮುನ್ನೆಡೆದಿದ್ದರೂ ಕೂಡಾ ಅವರು ದಲಿತೇತರ ಗರ್ಭದಲ್ಲಿ ಜನಿಸಿದವರು ಎಂಬ ಒಂದೇ ಒಂದು ಕಾರಣಕ್ಕೆ ಅವರು ಹೇಳುವುದೆಲ್ಲಾ ನಾಟಕವಾಗಿಬಿಡುತ್ತದೆ. ಅಂತಹವರು ದಲಿತ ಸಮುದಾಯಕ್ಕೆ ದೂರದವರಾಗಿ ಬಿಡುತ್ತಾರೆ. ಏಕೆಂದರೆ 'ದಲಿತೋದ್ಧಾರದ ಪ್ರಾಜೆಕ್ಟ್' ಈ ದೇಶದಲ್ಲಿ 'ದಲಿತ ಗರ್ಭಗಳು' ಮಾತ್ರ ಕೊಳ್ಳುವ ಅಜನ್ಮಸಿದ್ಧ ಗುತ್ತಿಗೆ. ಅದಕ್ಕೆ ಬೇರೆ ಯಾರೂ ಕೈಹಾಕುವಂತಿಲ್ಲ. ಆದರೂ ಸತ್ಯ ಜಗತ್ತಿನ ಎಲ್ಲಾ ಸಂದರ್ಭ, ಸನ್ನಿವೇಶಕ್ಕೂ ಮತ್ತು ಕಾಲಮಾನಕ್ಕೂ ಕೂಡಾ ಒಂದೇ ಆಗಿರುತ್ತದೆ. ಈ ಸಂದರ್ಭದಲ್ಲಿ ನನಗೆ ಮಾನವೀಯ ಕವಿಯೋರ್ವರ ಅರ್ಥಗರ್ಭಿತ ಕಾವ್ಯದ ಸಾಲು ನೆನಪಿಗೆ ಬರುತ್ತದೆ, ಅದೆಂದರೆ:

ಇರಿಯುವ ಕತ್ತಿಯದು ಬಿಳಿಯರದಾದರದು ನೋವೇ?
ಕರಿಯರದಾದರದು ಹೂವೇ?

ಈ ಸಮಾಜವನ್ನು ಮತ್ತು ದೇಶವನ್ನು ಅಸಮಾನತೆ, ಶೋಷಣೆ ಮತ್ತು ಮೂಲಭೂತವಾದದೆಡೆಗೆ ಕೊಂಡೊಯ್ಯುವ, ಪ್ರೇರೇಪಿಸುವ ಯಾವುದೇ ಸಂಘಟನೆ ಅಥವಾ ಸಿದ್ಧಾಂತ ಐಕ್ಯ ಸಮಾಜಕ್ಕೆ, ಪ್ರಗತಿಪರ ಹೋರಾಟಕ್ಕೆ ಗಂಡಾಂತರದ ಸವಾಲಾಗಿ ಪರಿಣಮಿಸುತ್ತದೆ. ಅದು ಸರ್ವ ಜನರ, ಶೋಷಿತರ ಮತ್ತು ಶ್ರಮಿಕ ಜನರ ನಿಜವಾದ ಸಮಸ್ಯೆ, ಸವಾಲುಗಳ ಗುರುತಿಸುವಲ್ಲಿ ಹಾದಿ ತಪ್ಪಿಸುತ್ತದೆ. ಸಾಗಬೇಕಾದ ದಾರಿ ಮತ್ತು ಗುರುತಿಸಬೇಕಾದ ಶತ್ರುಗಳನ್ನು ಮರೆಮಾಚುತ್ತದೆ. ಅದು ಸತ್ಯ ಮತ್ತು ಸ್ವತಂತ್ರ ಆಲೋಚನೆಗಳ ಕಿಟಕಿ ಬಾಗಿಲುಗಳನ್ನು ಮುಚ್ಚಿಬಿಡುತ್ತದೆ. ಈ ಕಾರಣದಿಂದಲೇ ಈ ಮೂಲಭೂತವಾದಿಗಳು ಜಾತಿ ವಿನಾಶದ ಗುರಿಕಾರ, ಸಮಾನ ಸಮಾಜದ ಕನಸುಗಾರ ಮಾನವತಾವಾದಿ ಅಂಬೇಡ್ಕರರ ಸಿದ್ಧಾಂತವನ್ನು ಪೂರ್ವಗ್ರಹ ಪೀಡಿತರಾಗಿ ಅರ್ಥೈಸುತ್ತಿದ್ದಾರೆ. ಅದು ಒಂದು ಜಾತಿವಾದ ಎಂಬಂತೆ ವಿವರಿಸುತ್ತಿದ್ದಾರೆ. ಅವರ ಹೆಸರು ಮತ್ತು ಸಿದ್ಧಾಂತಕ್ಕೆ ಅಪಚಾರವೆಸಗಿ ನಡುಬೀದಿಯಲ್ಲೆ ಅಂಬೇಡ್ಕರರನ್ನು ನಗ್ನಗೊಳಿಸುತ್ತಿದ್ದಾರೆ. ಎಲ್ಲಾ ಜಾತಿ, ಧರ್ಮದ ಶೋಷಿತರ ಐಕ್ಯತೆಗೆ, ಪ್ರಗತಿಯ ಸಮಸಮಾಜಕ್ಕೆ ಬೆಂಕಿ ಇಡುತ್ತಿದ್ದಾರೆ.

ಜಾತೀಯತೆ, ವ್ಯಕ್ತಿಪೂಜೆ ಹಾಗೂ ಎಲ್ಲ ಬಗೆಯ ಮೂಲಭೂತವಾದದ ವಿರುದ್ಧ ಸಿಡಿದೆದ್ದ ಅಂಬೇಡ್ಕರ್

ಇರಿಯುವ ಕತ್ತಿಯದು ಬಿಳಿಯರದಾದರದು ನೋವೇ? ಕರಿಯರದಾದರದು ಹೂವೇ?

ಅಂಬೇಡ್ಕರರನ್ನು ಒಂದು ಜಾತಿ, ಸಮುದಾಯ ಅಥವಾ ಒಂದು ಧರ್ಮಕ್ಕೆ ಸೀಮಿತಗೊಳಿಸಿ ಆಕಾಶದ ಎತ್ತರದ ಆ ವ್ಯಕ್ತಿತ್ವವನ್ನು ಕುಬ್ಜಗೊಳಿಸಿದ್ದಾರೆ. ಅವರನ್ನು ದೇವರು ಎಂದು ಗುಡಿ ಕಟ್ಟಿ ಬಂಧಿಸಿ, ಅವರ ಹೆಸರಿನಲ್ಲೆ ಹಬ್ಬ, ಜಾತ್ರೆ, ಉತ್ಸವ, ಸಮಾರಂಭಗಳ ಮಾಡಿ ಆ ಹೆಸರಿನಲ್ಲಿ ಅವರ ವೈಯಕ್ತಿಕ ಪ್ರತಿಷ್ಠೆ ದಂಧೆಯ ಸರಕಾಗಿ ಮಾಡಿಕೊಂಡಿದ್ದಾರೆ. ಅಂಬೇಡ್ಕರರನ್ನು ಅಸ್ಪೃಶ್ಯ, ದಲಿತ ಜಾತಿವಾದಿ ಎಂಬಂತೆ ಪ್ರಚಾರ ಮಾಡುತ್ತಿದ್ದಾರೆ. ಅಲ್ಲದೇ ನಿಜವಾದ ಅಂಬೇಡ್ಕರರ ಸಿದ್ಧಾಂತದ್ರೋಹಿಗಳು ಇವರೇ ಆಗಿದ್ದಾರೆ.

ಈ ರಾಷ್ಟ್ರಕ್ಕೆ ಸ್ವತಂತ್ರ ಬಂದು ೫೬ ವರ್ಷಗಳು ಕಳೆದರೂ, ೨೧ನೇ ಶತಮಾನಕ್ಕೆ ಕಾಲಿಟ್ಟರೂ ಇಂದಿಗೂ ಕೂಡಾ ದಲಿತ ಸಮುದಾಯ ಕೇವಲ ಶೇ.೧೮ ಅಥವಾ ೨೦ ಮೀಸಲಾತಿಗಾಗಿ ಹೋರಾಡುತ್ತಿದ್ದಾರೆಯೇ ವಿನಃ ಸರ್ವಸಮಾನ ಶೋಷಣೆರಹಿತ ಸಮಾಜಕ್ಕಾಗಿ ಎಂದಲ್ಲ, ಸರ್ವಸಮಾನ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಮಾನವೀಯ ಬದುಕನ್ನು ಕೊಡಿ ಎಂದು ಕೇಳುವ ಜನ್ಮಸಿದ್ಧ ಹಕ್ಕಿನ ಕೆಚ್ಚೆದೆ ಬಾರದಿರುವುದು ದಲಿತರ ಮತ್ತು ದೇಶದ ನಕಾರಾತ್ಮಕ ಬದುಕಿಗೆ ಹಿಡಿದ ಕೈಗನ್ನಡಿ.

ನಮಗೆ ಕೇವಲ ಮೀಸಲಾತಿ ಬೇಕಿಲ್ಲ, ನಮ್ಮನ್ನು ಎಲ್ಲರಂತೆ ಮನುಷ್ಯರಾಗಿ ಮತ್ತು ಸಮನಾಗಿ ಕಾಣಿ, ಎಲ್ಲಾ ಜಾತಿ, ಜನಾಂಗದೊಡನೆ ಸಮನಾದ ವೈವಾಹಿಕ ಸಂಬಂಧ ಮಾಡಿ, ನಮ್ಮ ನಿಮ್ಮ ಎಲ್ಲರ ಆಸ್ತಿಯನ್ನು ಸಂಪತ್ತನ್ನು ಮತ್ತು ಶ್ರಮವನ್ನು ಸಮನಾಗಿ ಹಂಚಿಕೊಳ್ಳುವ ಬನ್ನಿ, ಸಮಾನ ಮಾನವ ಸಂಬಂಧಗಳ ಹಾಗೂ ವ್ಯವಹಾರಗಳ ಎಲ್ಲರೂ ನಡೆಸಿ ಎಂದು ಅದಕ್ಕಾಗಿ ಹೋರಾಟ ಕಟ್ಟುವ ಕನಿಷ್ಟ ಅರಿವು ಇವರಿಗೆ ಇಲ್ಲ, ಅದು ಅವರಿಗೆ ಬೇಕಾಗಿಯೂ ಇಲ್ಲ, ಏಕೆಂದರೆ ಜಾತಿಯ ಜಾಲವಿಲ್ಲದೆ ಅವರ ಅಸ್ತಿತ್ವ ಮತ್ತು ಬೆಳವಣಿಗೆ ಸಾಧ್ಯವಿಲ್ಲ. ಇದು ಕೇವಲ ದಲಿತ ಸಮುದಯಕ್ಕೆ ಮಾತ್ರ ಅನ್ವಯಿಸುವುದಿಲ್ಲ, ಜೊತೆಗೆ ಎಲ್ಲಾ ಜಾತಿ ಜನಾಂಗಕ್ಕೂ ಅನ್ವಯಿಸುವ ಮಾತು.

ಇಂದು ಜಾತಿವಾರು ಮೀಸಲಾತಿ, ಜಾತಿವಾರು ಸೌಲಭ್ಯ ಅವಕಾಶ. ನಾಳೆ ಜಾತಿವಾರು ರಾಜ್ಯ, ಜಾತಿವಾರು ಅಧಿಕಾರ, ನಾಳಿದ್ದು ಜಾತಿವಾರು ದೇಶ.... ಈ ದೇಶದಲ್ಲೆ ೩,೬೫೦ಕ್ಕೂ ಹೆಚ್ಚಾದ ಜಾತಿಗಳಿವೆ. ಆಗ ಭಾರತ ದೇಶ ಸಾವಿರಾರು ಜಾತಿ ದೇಶಗಳಾಗಿ ಹರಿದು ಹಂಚಿಹೋಗುತ್ತದೆ. ಆಗಲಿ, ಹಾಳಾಗಿ ಹೋಗಲಿ, ಆಗಲಾದರೂ ಈ ಜಾತಿ ಗುಮ್ಮ ಕಾಡದೆ ಬಿಟ್ಟೀತೇ? ಅಸ್ಪೃಶ್ಯತೆ, ಜಾತಿ ಜನಾಂಗಗಳಲ್ಲಿನ ಮೇಲು ಕೀಳು ನಾಶವಾದೀತೇ? ಬ್ರಾಹ್ಮಣ ತನ್ನ ಶ್ರೇಷ್ಠತೆಯನ್ನು ಬಿಟ್ಟುಕೊಡುವನೇ? ಜಾತೀಯತೆ ಮತ್ತು ಅಸ್ಪೃಶ್ಯತೆ ಈ ಭೂಮಂಡಲವನ್ನು ಬಿಟ್ಟು ಮಾಯವಾಗುವುದೇ? ಅಸ್ಪೃಶ್ಯರನ್ನು ಮತ್ತು ಅವರಿಗಿಂತ ಕೆಳಜಾತಿಯ ಜನರನ್ನು ಮೇಲ್ಜಾತಿಯ ಜನ ಮನೆ ಒಳಕ್ಕೆ ಬಿಡುವರೇ? ಅವರ ಮಕ್ಕಳನ್ನು ಇವರೊಡನೆ ವಿವಾಹ ಮಾಡುವರೇ? ಬಹುಷಃ ಆಗ ಮೇಲ್ಜಾತಿಯ ದೇಶದವರು ಕೆಳಜಾತಿಯ ದೇಶದ ಗಡಿಗಳನ್ನು ಮುಟ್ಟಲು ಮುಜುಗರ ಪಡುವರೇನೋ!

ಈ ತಂತ್ರ ಹೇಗಿದೆ ಎಂದರೆ ಗಾಂಧೀಜಿಯ ಸತ್ಯಾಗ್ರಹ ತಂತ್ರದಲ್ಲಿ ಒಂದು ವಿಧಾನ ಹೇಳುವಂತೆ- ತನ್ನ ಪೀಡಕನಿಂದ ದೂರವಾಗಿ ಹೆದರಿ ಓಡಿಹೋಗಿ ಎಲ್ಲಾದರೂ ವಾಸಿಸುವುದು, ಆದರೆ ಹೆದರಿ ಹೋಗುವ ಕಡೆಯಲ್ಲೆಲ್ಲಾ ಪೀಡಕರಿಲ್ಲ ಅಥವಾ ಪೀಡಕರು ಅಲ್ಲಿಗೂ ಬರುವುದಿಲ್ಲ ಎಂಬುದಕ್ಕೆ ಖಾತರಿ ಏನು? ಇದು ನಿಜವಾದ ಪರಿಹಾರ ಮಾರ್ಗವೇ? ಬೇರಿನ ಮೂಲದಿಂದಲೇ ಬಂದ ರೋಗಕ್ಕೆ ಬೇರಿನ ಮೂಲಕ್ಕೆ ಔಷಧಿ ನೀಡಬೇಕೇ ಹೊರತು ಆ ರೋಗಪೀಡಿತ ಮರದ ರೆಂಬೆ-ಕೊಂಬೆ ಮತ್ತು ಎಲೆಗಳಿಗೆ ಔಷಧಿ ಸಿಂಪಡಿಸಿದರೆ ಅದು ಖಂಡಿತಾ ಉಪಯೋಗವಾಗದು. ಹಾಗಾಗಿ ಜಾತಿವಿನಾಶ ಮತ್ತು ಅಸಮಾನತೆಯ ನಾಶ ಸರ್ವಸಮಾನ ಸಮಾಜ ನಿರ್ಮಾಣ ಮತ್ತು ಬದಲಾವಣೆ ಮಂತ್ರದ ಮಾವಿನಕಾಯಿ ಅಲ್ಲ, ಅದು ಅದೇ ಸಮಾಜದ ಸರ್ವಜಾತಿ ಜನಾಂಗಗಳಲ್ಲಿ ನಡೆಯುವ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ

ಪ್ರಜ್ಞಾಪೂರ್ವಕ ಸಂಪೂರ್ಣ ಕ್ರಾಂತಿಯಿಂದ ಮಾತ್ರ ಸಾಧ್ಯ.

ದಲಿತ ಮೂಲಭೂತವಾದದ ಈ ಬೆಳವಣಿಗೆಯ ಬೆಂಕಿಗೆ ತುಪ್ಪ ಸುರಿಯುತ್ತಿರುವ ಕೆಲವು ದಲಿತ ಸಂಘಟನೆಗಳು, ಹಲವು ದಲಿತ ಬರಹಗಾರರು, ಕೆಲವು ಅಂಬೇಡ್ಕರ್ ವಿಚಾರವ್ಯಾ(ವಾ)ದಿಗಳು ಮತ್ತು ಸಿದ್ಧಾಂತಗಳು ಈ ಬೆಳವಣಿಗೆಗೆ ಶಕ್ತಿ ಮೀರಿ ಸಹಾಯ ಮಾಡುತ್ತಿವೆ. ಕರ್ನಾಟಕದಲ್ಲಿ ಗುರುತಿಸುವುದಾದರೆ ಬಿಎಸ್‌ಪಿ ಎಂಬ ರಾಜಕೀಯ ಪಕ್ಷ ಅದರ ಸಹ ಸಂಘಟನೆಗಳು ಮತ್ತು ಇತರ ಕೆಲವು ದಲಿತ ವಿದ್ಯಾರ್ಥಿ ಯುವಜನ ಸಂಘಟನೆಗಳು ಈ ದಲಿತ ಮೂಲಭೂತವಾದದ ಬೆಳವಣಿಗೆಗೆ ಹಗಲಿರುಳೆನ್ನದೇ ಭಾರೀ ಶ್ರಮಪಡುತ್ತಿವೆ. ಇವುಗಳ ಜೊತೆಗೆ ಇತರೇ ಕೆಲವು ದಲಿತ ಸಂಘಟನೆಗಳು ತಮ್ಮ ಕಾರ್ಯ ಆರಂಭಿಸಿದರೂ ಕೂಡಾ ಅವುಗಳ ಹಾದಿ ಮತ್ತು ಕಾರ್ಯಚಟುವಟಿಕೆ ತೀವ್ರತರವಾಗಿಲ್ಲ. ಆದರೂ ಕೂಡಾ ಕೆಲವು ದಲಿತ ಸಂಘಟನೆಗಳು ಪ್ರಗತಿಪರವಾದ ಮತ್ತು ನಿಜವಾದ ದಲಿತ ವಿಮೋಚನೆಯ ಹಾದಿಯಲ್ಲಿ ಸಾಗುತ್ತಿವೆ ಎಂಬುದು ಸಂತಸದ ವಿಷಯ. ಈ ದಲಿತ ಮೂಲಭೂತವಾದ ಇಡೀ ದಲಿತ ಸಮುದಾಯದ ಆಶಯವಾದ ಸರ್ವಸಮಾನ ಶೋಷಣೆ ರಹಿತ ಮಾನವೀಯ ಸಮಾಜ ನಿರ್ಮಾಣಕ್ಕೆ ಗಂಡಾಂತರವಾಗಿ ಬೆಳೆಯುತ್ತಿದೆ. ಇವರುಗಳು ಹೇಳುವುದೆಲ್ಲಾ 'ಬಹುಜನ ಸಮಾಜ'. ಆದರೆ ವಾಸ್ತವವಾಗಿ ಇವರು ತುಂಬಾ ಕಷ್ಟಪಡುತ್ತಿರುವುದು ಪಕ್ಕಾ ಜಾತಿ ಸಮಾಜಕ್ಕಾಗಿ.

ಈ ಮೂಲಭೂತವಾದಿಗಳಿಗೆ ಮತ್ತು ಸಂಘಟನೆಗಳಿಗೆ ಸಮಷ್ಟಿ ಸಮಾಜ, ಸರ್ವಜನರ ಒಳಿತು ಮತ್ತು ಸಾಮರಸ್ಯ ಎಲ್ಲಾ ಜಾತಿ, ಧರ್ಮದ ದುಡಿಯುವ ಜನರ ಐಕ್ಯತೆ ಮತ್ತು ಮಾನವ ಸಂಬಂಧಗಳ ನವಸಮಾಜ ಹಾಗೂ ಶೋಷಣೆ ಮತ್ತು ಸಮಸ್ಯೆಯ ಮೂಲ ಪರಿಹಾರ ಯಾವುದೂ ಬೇಕಿಲ್ಲ. ಅವರಿಗೆ ಬೇಕಿರುವುದು ತತ್‌ಕ್ಷಣದ ಸ್ವಾರ್ಥ.

ಈ ಸಂಕುಚಿತ ಬೆಳವಣಿಗೆಯ ಬಗ್ಗೆ ದಲಿತ ಸಮುದಾಯದ ಎಲ್ಲಾ ಪ್ರಜ್ಞಾವಂತ ನಾಗರಿಕರು, ಸಂಘಟನೆಗಳು ಮತ್ತು ವಿದ್ಯಾರ್ಥಿ ಯುವಜನರು ಗಂಭೀರವಾಗಿ ಯೋಚಿಸಬೇಕಾಗಿದೆ. ಇಲ್ಲದಿದ್ದಲ್ಲಿ ಈ ದಲಿತ ಮೂಲಭೂತವಾದ ಸಮಸಮಾಜದ ಹೋರಾಟ, ಸಿದ್ಧಾಂತ ಮತ್ತು ಪ್ರಗತಿಪರ ಆಶಯಗಳಿಗೆ ಇಂದಲ್ಲ ನಾಳೆ ಮುಖಾಮುಖಿ ಸವಾಲು ಮತ್ತು ಸಮಸ್ಯೆಯಾಗಿ ಸಂಘರ್ಷಕ್ಕೆ ಬರಲಿದೆ. ಅಸ್ಪೃಶ್ಯತೆ ಒಳಗೆ ಅಸ್ಪೃಶ್ಯತೆಯನ್ನು ಯಾರಿಗೂ ಕಡಿಮೆ ಇಲ್ಲದಂತೆ ಹಾಗೂ ಜಾತೀಯತೆಯನ್ನು ಬಿಟ್ಟುಕೊಡದೇ ಪಟ್ಟು ಹಿಡಿದಿರುವ ಈ ಜನರು ಜಾತಿ ರಹಿತ, ಸರ್ವಸಮಾನ ಸಮಾಜವನ್ನು ಹೇಗೆ ತಾನೇ ಸ್ಥಾಪಿಸಬಲ್ಲರು? ಇದು ಎಲ್ಲರೂ ಯೋಚಿಸಬೇಕಾದ ವಿಚಾರ.

ಈ ಸೂಕ್ಷ್ಮ ವಿಚಾರದ ಬಗ್ಗೆ ನಾನು ಮನುಷ್ಯನಾಗಷ್ಟೇ ಯೋಚಿಸಿದ್ದೇನೆ ಮತ್ತು ಅಭಿಪ್ರಾಯ ತಿಳಿಸಿದ್ದೇನೆ. ಇದು ಯಾವುದೇ ವರ್ಗ ಅಥವಾ ಜಾತಿಯ ಹೊಗಳಿಕೆಗೂ ಅಲ್ಲ ಅಥವಾ ತೆಗಳಿಕೆಗೂ ಅಲ್ಲ. ಇಲ್ಲವೇ ನಾನು ಒಬ್ಬ 'ವಿಚಾರವಾದಿ' ಎಂಬ ಹಣೆಪಟ್ಟಿಗಾಗಿಯೂ ಅಲ್ಲ. ಈ ಸಮಾಜದಲ್ಲಿ ಸದಾ ಕಾಣುತ್ತಿರುವ, ಸ್ವತಃ ಒಬ್ಬ ದಲಿತ ಜನಾಂಗದ ಹುಟ್ಟಿನಿಂದ ಗಳಿಸುತ್ತಿರುವ ಸ್ವಅನುಭವದ ಸತ್ಯ ಈ ಲೇಖನದಲ್ಲಿ ದಾಖಲಾಗಿದೆ. ಈ ವಿಶ್ಲೇಷಣೆಯನ್ನು ಯೋಚಿಸುವುದು ಅಥವಾ ಬಿಡುವುದು ದಲಿತರಿಗೆ ಬಿಟ್ಟ ವಿಚಾರ. ಆದರೆ ಒಂದು ಸಾರ್ವಜನಿಕ ಸತ್ಯವನ್ನು ಎಲ್ಲರೂ ತಿಳಿದಿರಬೇಕು. ಅದೇಂದರೆ, ಶೋಷಣೆಯ ವ್ಯವಸ್ಥೆಯ ಗರ್ಭದಿಂದಲೇ ಆ ಶೋಷಣೆಯ ವಿರುದ್ಧದ ಬೀಜ ಜೀವಾಂಕುರವಾಗುತ್ತದೆ. ಇದನ್ನೆ ಹಿಂದಿನ ಸೋವಿಯತ್ ರಷ್ಯಾದ ಸಮಾತಾವಾದಿ ಲೆನಿನ್ ಹೇಳಿದ್ದು. ಈ ಮಾತಿಗೆ ಈ ವಿಶ್ವದ ಇತಿಹಾಸವೇ ನಮಗೆ ಸಾಕ್ಷಿ.

ಶೋಷಣೆಯ ಕಪಿಮುಷ್ಠಿ ಬಂಧನ, ದಬ್ಬಾಳಿಕೆ, ದೌರ್ಜನ್ಯ, ಇನ್ನೊಬ್ಬರ ಬದುಕು-ಭಾವನೆ ಮತ್ತು ಮೆದುಳಿನ ಮೇಲೆ ಬೀಳುವ ಶೋಷಣೆಯ ಸವಾರಿ ಪಕ್ವವಾದ ಕಾಲ ಬಂದಾಗ, ಶೋಷಿತರ ರೋಷ ತಾಳ್ಮೆಗೆಟ್ಟಾಗ ಅದೇ ಕಪ್ಪುಕ್ಕಿನ ವಜ್ರಕಾಯಗಳು, ಲಾಠಿ ಬಂದೂಕುಗಳು, ಏಳುಸುತ್ತಿನ ಕೋಟೆ ಮತ್ತು ಚಕ್ರವ್ಯೂಹಗಳು ಇವಾವುವೂ ಕೂಡಾ ಶೋಷಕರನ್ನು ರಕ್ಷಿಸಲಾರವು. ಈ ಮಾತು ದಲಿತ ಮೂಲಭೂತವಾದಿಗಳಿಗೂ ಕೂಡಾ ಅನ್ವಯಿಸುತ್ತದೆ. □





ಜೀವನದ ಎಲ್ಲ ಕ್ಷೇತ್ರಗಳ ಆಗು ಹೋಗುಗಳನ್ನು ಗಂಭೀರ ವಿಶ್ಲೇಷಣೆಗೆ ಒಳಪಡಿಸುವ ತಿಂಗಳ ಪತ್ರಿಕೆ

ತಿಂಗಳ ಪತ್ರಿಕೆ **ಹೊಸತು** ನೆನ್ನೆಯ ನಾಳೆ ನಮ್ಮದು ನವಕರ್ನಾಟಕ ಪ್ರಕಾಶನ

ಪ್ರಧಾನ ಸಂಪಾದಕ : ಡಾ|| ಜಿ. ರಾಮಕೃಷ್ಣ

ಇದೊಂದು ಸಮಗ್ರ, ಸಮೃದ್ಧ ಮಾಸಪತ್ರಿಕೆ

ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ವಿಜ್ಞಾನ, ಆರೋಗ್ಯ, ಕೃಷಿ ಹಾಗೂ ಸಾಮಾಜಿಕ, ರಾಜಕೀಯ ಇನ್ನಿತರ ವಿಷಯಗಳ ಕುರಿತು ವೈಚಾರಿಕ ಲೇಖನಗಳು, ಇವಲ್ಲದೆ ತಿಂಗಳ ಕಥೆ, ನಗೆಬರಹ, ಹನಿಗವನಗಳು, ಸಂದರ್ಶನ, ಚರ್ಚೆ, ಅರ್ಥಲೋಕ, ಪುಸ್ತಕ ವಿಮರ್ಶೆ, ಆಕಾಶ ವೀಕ್ಷಣೆ ಇತ್ಯಾದಿ

ಪ್ರತಿ ತಿಂಗಳ ಮೊದಲ ವಾರದಲ್ಲೇ ಮಾರುಕಟ್ಟೆಯಲ್ಲಿ ಲಭ್ಯ.
ನಿಮ್ಮ ಸಮೀಪದ ಏಜೆಂಟರಲ್ಲಿ ವಿಚಾರಿಸಿ ಇಲ್ಲವೇ ನವಕರ್ನಾಟಕ ಶಾಖೆಯನ್ನು ಸಂಪರ್ಕಿಸಿ

<u>*ಚಂದಾ ವಿವರ*</u>

ವಾರ್ಷಿಕ ಚಂದಾ ರೂ. 100 :: ಮೂರು ವರ್ಷದ ಚಂದಾ ರೂ. 250

ಮೂರು ವರ್ಷದ ಚಂದಾ ನೀಡಿದವರಿಗೆ ನವಕರ್ನಾಟಕ ಪ್ರಕಾಶನದ ಎಲ್ಲ ಪುಸ್ತಕಗಳ ಮೇಲೆ 20% ರಿಯಾಯಿತಿ

ನಿಮ್ಮ ಚಂದಾ ಹಣವನ್ನು 'ಹೊಸತು' ಹೆಸರಿನಲ್ಲಿ ಎಂ. ಓ. ಅಥವಾ ಡಿ.ಡಿ. ಮಾಡಿ ಈ ಕೆಳಗಿನ ಹೆಸರಲ್ಲಿ ಕಳುಹಿಸಿ.

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್

15, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಕುಮಾರ ಪಾರ್ಕ್ ಪೂರ್ವ, ಅಂ. ಪೆ. ಸಂಖ್ಯೆ : 5159
ಬೆಂಗಳೂರು - 560 001 ದೂರವಾಣಿ/ಫ್ಯಾಕ್ಸ್ : 2203580/81/82
e-mail : nkp@bgl.vsnl.net.in website : www.navakarnatakabooks.com







ಹಾರ್ದಿಕ ಶುಭಾಶಯಗಳೊಂದಿಗೆ,

ಇಳಾ ಪ್ರಿಂಟರ್ಸ್

ಡಿ.ಟಿ.ಪಿ., ಆಫ್‌ಸೆಟ್ ಪ್ರಿಂಟರ್ಸ್ ಮತ್ತು ಬೈಂಡರ್ಸ್

ನಂ. 36, 40 ಅಡಿ ರಸ್ತೆ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ರಾಘವನಗರ, ಬೆಂಗಳೂರು - 560 026
✆ : 6757159

ಬದಲಾಗಿರುವ ದಾರಿ

ಕಥೆ

ಮಹಾಬಲಮೂರ್ತಿ ಕೊಡ್ಲೆಕೆರೆ

ಈಗ ಅವನಿಗೆ ಅಲ್ಲಿ ಎಲ್ಲವೂ ಬದಲಾದ ದಾರಿಗಳಂತೆ ಕಂಡವು. ಒಂದು ಕ್ಷಣ ಹೆದರಿದ. ನಿನ್ನೆ ರಾತ್ರಿ ತುಂಬಿಕೊಂಡಿದ್ದ ಮಾತುಗಳೆಲ್ಲ ಥಟ್ಟನೆ ಈಗ ತನ್ನಷ್ಟಕ್ಕೆ ತಾನೆ ಒಂದೂ ಇಲ್ಲದಂತೆ, ಎಲ್ಲವೂ ಮಾಯೆ ಎಂಬಂತೆ ಖಾಲಿಯಾಗಿವೆ ಎಂಬುದನ್ನು ಅವನಿಂದ ನಂಬಲು ಸಾಧ್ಯವಾಗಲಿಲ್ಲ. ಎಲ್ಲೋ ಹೊರಗೆ ಹಕ್ಕಿ ಗಳ ಸದ್ದು, ಇನ್ನೆಂಥದೋ ಕೀಟಗಳ ವಿಚಿತ್ರ ಶಬ್ದಗಳು ಅಲ್ಲಿ ತುಂಬಿರಲಿಲ್ಲ ಎಂದಲ್ಲ. ಆದರೆ ಮನುಷ್ಯರ ಸದ್ದು ಇದ್ದಿರಲಿಲ್ಲ. ಅವರೆಲ್ಲ ಎಲ್ಲಿಗೆ ಹೋಗಿರಬಹುದು? ನಿನ್ನೆ ರಾತ್ರಿ ಅಂಥ ಒಂದೂ ಮಾತನ್ನು ಅವರು ಹೇಳಿರಲಿಲ್ಲ. ಅವರು ಹೇಳಿದ್ದು ಇಷ್ಟೆ 'ನೋಡು, ನೀನು ಯಾರೋ ಏನೊ? ನೀನು ಆಕಸ್ಮಾತ್ತಾಗಿ ಇಲ್ಲಿಗೆ ಬಂದೆ ಎಂದು ಅನ್ನುತ್ತಿರುವೆ. ಆದರೆ ನೀನು ಬರಬೇಕಾಗಿರುವ ಸ್ಥಳ ಇದಲ್ಲ. ಬಂದಿದ್ದಾಯಿತು, ನಾಳೆಯೇ ನೀನು ಹೊರಟು ಬಿಡಬೇಕು. ಹೋಗುವ ದಾರಿ ತಿಳಿಯದಿದ್ದರೆ ನಮ್ಮಲ್ಲಿಯೇ ಒಬ್ಬರು ನಿನ್ನನ್ನು ನಿನಗಿನ್ನು ಮುಂದೆ ತಿಳಿಯುತ್ತದೆ ಎಂಬಷ್ಟು ದೂರಕ್ಕೆ ತಲುಪಿಸಿ ಬರುತ್ತಾರೆ, ತಲೆ ಹರಟೆ ಮಾಡದೆ ನೀನು ನಾಳೆ ಬೆಳಿಗ್ಗೆ ಹೊರಟು ಬಿಡಬೇಕು' ಎಂದು ನಯವಾಗಿಯೇ ಹೇಳಿದ್ದರು.

ಅವನು ಮನಸ್ಸಿನಲ್ಲಿಯೇ ನಕ್ಕಿದ್ದ ಅವರ ಮಾತಿಗೆ. ಒಬ್ಬ ಸುಮಾರು ಇಪ್ಪತ್ತೆರಡು, ಇಪ್ಪತ್ತು ಮೂರರ ತರುಣನಿದ್ದಿರಬಹುದು. ತಾನು ಕೈಕಟ್ಟಿ ನಿಂತಲ್ಲಿಂದ ಸುಮಾರು ಏಳು ಅಡಿಗಳಷ್ಟು ದೂರ ಬಿರುಗಾಳಿಯಂತೆ ನಡೆದು ಬಂದು ಇವನ ಮುಖದೆದುರು ನಿಂತು, ತೋರು ಬೆರಳಿನಿಂದ ಇನ್ನೇನು ಇವನ ಮೂಗನ್ನೇ ತಿವಿಯುತ್ತಾನೆ ಎಂಬಂತೆ ಬೆರಳು ಕುಣಿಸುತ್ತ 'ನನಗೆ ಕೋಪ ತರಿಸಬೇಡ, ಮನಸ್ಸಿನಲ್ಲಿಯೇ ನಗುತ್ತಿದ್ದೀಯಾ ನೀನು, ನಮ್ಮ ಮಾತುಗಳೆಲ್ಲ ನಿನ್ನಂಥ ಬಕ್ರಾಗಳಿಗೆ ನಗೆ ತರಿಸುವಂಥದ್ದು ಅಲ್ಲವೆ? ಒಂದೇ ಹೊಡೆತಕ್ಕೆ ಆ ನಿನ್ನ ಮೂವತ್ತೆರಡೂ ಹಲ್ಲುಗಳನ್ನು ಉದುರಿಸಿ ಹಾಕಬೇಕಾಗುತ್ತದೆ ಎಚ್ಚರ' ಎಂದು ಗುಡುಗಿದ್ದ. ಆಗ ಅಲ್ಲಿದ್ದ ನಡುವಯಸ್ಕನೊಬ್ಬನಿಗೆ ತಡೆಯಲಾಗಲಿಲ್ಲ ಎಂದು ಅವನ ಮುಖದಲ್ಲೇ ತಿಳಿಯುತ್ತಿತ್ತು. ಅಲ್ಲಿ ಭುಸುಗುಡುತ್ತ ಉರಿಯುತ್ತಿದ್ದ ಸೀಮೆ ಎಣ್ಣೆ ಸ್ಟೋವ್‌ದಲ್ಲಿ ಮಾಡಹತ್ತಿದ ಚಹಾ ನೀರಿಗೆ, ತನಗೆಟುಕಲು ಸ್ವಲ್ಪ ತೊಡಕಾಗುವಷ್ಟು ಎತ್ತರದಲ್ಲಿದ್ದ ಹಲಗೆಯ ಮೇಲಿದ್ದ ಚಾ ಪುಡಿಯ ಡಬ್ಬವನ್ನು ಕಾಲು ಎತ್ತರಿಸಿ, ಬೆರಳು ತುದಿಗಳಿಂದೆಳೆದು ಪಡೆದು, ಮುಚ್ಚಳ ತೆಗೆದು ಅದರೊಳಗಿದ್ದ ಪುಟ್ಟ ಚಮಚೆಯಿಂದ ನಾಲ್ಕೈದು ಅಳತೆಯಷ್ಟು ಪುಡಿಯನ್ನು ಸುರುವುತ್ತಲೇ 'ಏ ಗೂಬೆ, ನೀನು ಸುಮ್ಮನಿರೋದಕ್ಕೆ ಏನು ತಗೋತಿಯಾ? ಸುಮ್ಮನಿರದಿದ್ದರೆ ಈಗ ಸ್ಟೋವ್‌ನಲ್ಲಿ ಕುದಿಯುತ್ತಿರುವ ನೀರನ್ನು ನಿನ್ನ ಮುಖಕ್ಕೆ ಎರಚಬೇಕಾಗುತ್ತದೆ. ಹೋಗು ನಿನ್ನ ಕೆಲಸ ನೋಡಿಕೊ' ಎಂದು ಶಾಂತವಾಗಿಯೇ ಹೇಳಿದ್ದ. ಆದರೂ ಸಿಟ್ಟು ಜೋರಾಗಿತ್ತು ಅವನಲ್ಲಿ ಎನ್ನಬಹುದು.

ಇವನಿಗೆ ಎಲ್ಲವೂ ವಿಚಿತ್ರ ಎನಿಸಿತ್ತು. ಆ ತರುಣ ತನಗೆರಡು ಬಾರಿಸಿಯೇ ಬಿಡುತ್ತಾನೆ ಎಂದು ಹೆದರಿಕೆಯಾಗಿತ್ತು. ಆದರೆ ಆ ನಡುವಯಸ್ಕ ತರುಣನಿಗೆ ಹೆದರಿಸಿದಾಗ ನಿಟ್ಟುಸಿರು ಬಿಟ್ಟಿದ್ದ. ನಡು ವಯಸ್ಕ ಮನುಷ್ಯನಿಂದ ಸಖತ್ತಾಗಿ ಬೈಸಿಕೊಂಡ ತರುಣ ಧುಮುಧುಮು ಹೆಜ್ಜೆ ಹಾಕುತ್ತ ಒಳಗಿನ ಇನ್ನೊಂದು ಕೋಣೆಗೆ ಹೋಗಿ ಧೊಪ್ಪನೆ ಅಲ್ಲಿದ್ದ ಕತ್ತದ ನಾರಿನ ಹೆಣಿಕೆಯ ಮಂಚದ ಮೇಲೆ ಬಿದ್ದು ದಿಂಬುಗಳಿಗೆ ತಲೆಕೊಟ್ಟು ಪುಸ್ತಕ ಒಂದನ್ನು ಓದಹತ್ತಿದ. ಕಿಚನ್ ಕಮ್ ಹಾಲು ಎಂದು ಹೇಳುವಂತಿದ್ದ ಕೋಣೆಯಿಂದಲೇ ಅವನು ಮಲಗಿ ಪುಸ್ತಕ ಓದುತ್ತಿದ್ದ ಭಂಗಿ ಕಾಣುವಂತಿತ್ತು. ಅವನ ಮೈಯೆಲ್ಲ ಕಂಪಿಸುತ್ತಿತ್ತು. ಅಲ್ಲಿ ಒಬ್ಬಳು ಹುಡುಗಿ ಪಾತ್ರೆಗಳನ್ನೆಲ್ಲ ಒಂದೆಡೆಯಿದ್ದ ಬುಟ್ಟಿಯಲ್ಲಿಟ್ಟು ಹೊರಗೆ ತೊಳೆಯಲು ಇರಬೇಕು, ಒಯ್ಯತೊಡಗಿದ್ದಳು ಹೊತ್ತು. ಈತ ಅವಳನ್ನೇ ನೋಡತೊಡಗಿದ್ದ.

ಆಗ ಚಾ ಮಾಡುತ್ತಿದ್ದ ನಡು ವಯಸ್ಕ 'ಏನೂ ತಿಳಿಯದು, ಚೆನ್ನಾಗಿರದಿದ್ದಲ್ಲಿ ಬೈದುಕೊಳ್ಳಬೇಡಿ. ಅಲ್ಲಿ ಆ ಚಿಕ್ಕ ಕರಡಿಗೆಯಲ್ಲಿ ಬ್ರೆಡ್ ತುಣುಕುಗಳಿವೆ. ಚಾ ಜತೆ ಸ್ವೀಕರಿಸಬಹುದು. ಸ್ವಲ್ಪ ಹಸಿವು ಇಂಗಿಸಿಕೊಳ್ಳಿ ಸದ್ಯಕ್ಕೆ. ಇನ್ನಿಬ್ಬರು ಏನು ಇಷ್ಟರಲ್ಲೇ ಬರುತ್ತಾರೆ. ಅಕ್ಕಿಯನ್ನು ಅವರು ತಮ್ಮ ಜತೆ ತರುತ್ತಾರೆ. ಅದು ಬಂದ ಮೇಲೆ ಅನ್ನ ತಯಾರಾಗಬೇಕು. ಈ ಹುಡುಗಿ ಅಷ್ಟರಲ್ಲಿ ಪಾತ್ರೆಗಳನ್ನು ಕೂಡ ತೊಳೆದಿಡುತ್ತಾಳೆ. ಯಾರೋ ಒಬ್ಬರು ಅಡಿಗೆ ಮಾಡುತ್ತಾರೆ. ಊಟ ಮಾಡಬಹುದು ಆಗ. ಚೆನ್ನಾಗಿ ಊಟ ಮಾಡಿ, ನಿದ್ದೆ ಮಾಡಿ ಕಣ್ತುಂಬ. ಬೆಳಿಗ್ಗೆಯೇ ಹೊರಟು ಬಿಡಿ' ಎಂದು ಮನದಲ್ಲಿಯೇ ಅನ್ನುತ್ತ ಕಪ್‌ನಲ್ಲಿ ಚಾ ಕೊಟ್ಟ. ಚಹಾ ಚೆನ್ನಾಗಿತ್ತು. ಬಿಸಿಬಿಸಿಯಾಗಿ, ಹದವಾಗಿ, 'ಅಮೃತದಂತಿದೆ ಎಂದು ಮನದಲ್ಲಿಯೇ ಅನ್ನುತ್ತ ಹೀರತೊಡಗಿದ್ದ. ಆ ತರುಣನೂ ಕೂಡ ಹೊರಬಂದು ಅಲ್ಲಿಯೇ ಸ್ಟೂಲೊಂದರ ಮೇಲೆ ಹರಿವಾಣದಲ್ಲಿ ಇರಿಸಿದ್ದ ತನ್ನ ಚಾಕಪ್ ಹಿಡಿದು ಸೊರ್‌ಗುಡುತ್ತ ಇದ್ದ ನಡುವಯಸ್ಕನ ಜತೆ 'ಹೂಂ, ನನಗೆ ಕೊಡಿ' ಎಂದು ಅಸಮಾಧಾನದೊಂದಿಗೇ ವಿನಂತಿಯೂ ಇದೆ ಎಂಬ ಧಾಟಿಯಲ್ಲಿ ಕೇಳಿ ಪಡೆದು ಕಪ್ ಒಳಗಿನ ಚಾವನ್ನು ಕುಡಿಯತೊಡಗಿದ್ದ.

ನಡುವಯಸ್ಕನಿಗೆ ನಗೆಯೇ ಬಂದಿತ್ತು. ತುಸು ಜೋರಾಗಿಯೇ ನಕ್ಕು ಬಿಟ್ಟಿದ್ದ.

ಆ ತರುಣನನ್ನುದ್ದೇಶಿಸಿ 'ಯಾಕಯ್ಯ ಸಿಟ್ಟು ಮಾಡಿಕೊಳ್ಳಬೇಕು ನೀನು? ಇವರು ದಾರಿ ತಪ್ಪಿ ಬಂದವರು. ಎಲ್ಲಿಗೆ ಹೊರಟಿದ್ದರೋ ಏನೊ? ಕಾಡು ತುಂಬಾ ದಟ್ಟವಾಗಿದೆ. ದಾರಿ ತಪ್ಪಿ ಹೋಗಿದೆ. ನಾಳೆ ಬೆಳಗಾದರೆ ಹೊರಟು ಬಿಡುತ್ತಾರೆ. ತೆಪ್ಪಗೆ ತನ್ನ ದಾರಿಯನ್ನರಸಿ ಹೊರಡುವ ಅಮಾಯಕ ಮನುಷ್ಯನ ಬಳಿ ಜಗಳವಾಡಿ, ನಿಮ್ಮ ದವಡೆಯ ಹಲ್ಲುಗಳನ್ನೆಲ್ಲ ಮುರುಸಿಕೊಂಡು ಹೋಗುತ್ತೀರಿ ಎಂದು ಕಿರುಚಾಡಿದರೆ ಚೆಂದವೇನು? ನೀನು ಜಾಣ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ನಿನ್ನ ಮುಂಗೋಪ, ಅವಸರ ಇತ್ಯಾದಿ, ನಿನ್ನನ್ನು ಕೆಡಿಸುತ್ತದೆ ನೋಡು' ಎಂದು ಮಮತೆ ಯಿಂದ ಎಂಬಂತೆ ಹೇಳಿದ.

ತರುಣ ಮಾತನಾಡಲಿಲ್ಲ. ಅಲ್ಲಿ ಒಂದೆಡೆ ಕರಡಿಗೆಯಲ್ಲಿದ್ದ ಬ್ರೆಡ್ ತುಣುಕುಗಳನ್ನು ತಂದು ಇವನಿಗೆ 'ಪ್ಲೀಸ್, ತಗೊಳ್ಳಿ, ಕೋಪ ಬಂದಾಗ ಪ್ರದರ್ಶಿಸಲೂ ಬಾರದು ಈ ಮಂದಿಗೆ.

ತರುಣ ಮಾತನಾಡಲಿಲ್ಲ. ಅಲ್ಲಿ ಒಂದೆಡೆ ಕರಡಿಗೆಯಲ್ಲಿದ್ದ ಬ್ರೆಡ್ ತುಣುಕುಗಳನ್ನು ತಂದು ಇವನಿಗೆ 'ಪ್ಲೀಸ್, ತಗೊಳ್ಳಿ, ಕೋಪ ಬಂದಾಗ ಪ್ರದರ್ಶಿಸಲೂ ಬಾರದು ಈ ಮಂದಿಗೆ. ಒಂದೆಡೆ ಸ್ವಾತಂತ್ರ್ಯ, ಸಮಾನತೆ ಎಂದು ಬೊಬ್ಬೆ ಹೊಡೆಯುತ್ತಾರೆ. ಈ ವಯಸ್ಸಾದ ಮಂದಿಗೆ ತಮ್ಮ ಮಾತುಗಳು, ತಮ್ಮ ದಾರಿಗಳು ಇವೇ ಸರಿ ಎಂಬುದೊಂದಿದೆ. ಇವರಿಗೆಲ್ಲ ತಿಳಿದದ್ದು ಬಳಸು ದಾರಿಗಳು. ಒಳ ದಾರಿಗಳಿವೆ ಎಂದು ಎಷ್ಟೇ ಹೇಳಿದರೂ ಕಿವುಡರಂತೆ ಏನನ್ನೂ ಕೇಳಿಸಿಕೊಳ್ಳಲಾರರು.

ಒಂದೆಡೆ ಸ್ವಾತಂತ್ರ್ಯ, ಸಮಾನತೆ ಎಂದು ಬೊಬ್ಬೆ ಹೊಡೆಯುತ್ತಾರೆ. ಈ ವಯಸ್ಸಾದ ಮಂದಿಗೆ ತಮ್ಮ ಮಾತುಗಳು, ತಮ್ಮ ದಾರಿಗಳು ಇವೇ ಸರಿ ಎಂಬುದೊಂದಿದೆ. ಇವರಿಗೆಲ್ಲ ತಿಳಿದದ್ದು ಬಳಸು ದಾರಿಗಳು. ಒಳ ದಾರಿಗಳಿವೆ ಎಂದು ಎಷ್ಟೇ ಹೇಳಿದರೂ ಕಿವುಡರಂತೆ ಏನನ್ನೂ ಕೇಳಿಸಿಕೊಳ್ಳಲಾರರು.

ಇಷ್ಟು ಹೇಳುತ್ತ ಚಾ ಕುಡಿಯುವುದರಲ್ಲಿ ಬ್ರೆಡ್ ತುಣುಕುಗಳನ್ನು ತಿನ್ನುವುದರಲ್ಲಿ ಮಗ್ನನಾದಂತಿದ್ದ ಆತ.

ಒಂದೆರಡು ಕ್ಷಣ ಬಿಟ್ಟು 'ನಿಮ್ಮ ಹೆಸರೇನು? ಎಲ್ಲಿಗಾಗಿ ಹೊರಟಿದ್ದಿರಿ. ರಸ್ತೆ ತಿಳಿಯದ ಕಡೆ ಯಾಕೆ ಹೊರಡಬೇಕು? ತಿಳಿದವರ ಕೈಲಿ ಕೇಳಿ, ತಿಳಿದು, ಸಾಧ್ಯವಾದರೆ ಅವರನ್ನು ಜತೆ ಮಾಡಿಕೊಂಡು ಹೋಗಬೇಕು ನೀವು.' ಎಂದು ದರ್ಪದಲ್ಲಿ ಆದರೂ ಸಾಧ್ಯವಾದಷ್ಟು ಶಾಂತಿಯಿಂದ ಪ್ರಶ್ನಿಸಿದ. ತನ್ನ ವಿಚಾರಗಳನ್ನು ತಿಳಿಸಿದ.

ಈತನಿಗೆ ಅವನ ಪ್ರಶ್ನೆಗಳು, ಇವನಿಗೇಕೆ ಈ ವಿಚಾರಗಳೆಲ್ಲ ಎಂಬ ಅಚ್ಚರಿಯನ್ನು, ಜತೆಗೆ ಅಸಹನೆಯನ್ನು ಹುಟ್ಟಿಸಿತಾದರೂ, ಅದನ್ನು ತೋರಗೊಡದೆ, ಕಪ್ ಚಾವನ್ನು ಗಾಳಿ ಊದಿ ತಣಿಸಿಕೊಳ್ಳುವ ನೆವ ಮಾಡಿ ಕ್ಷಣ ಕಾಲ ಹಾಗೆ ಕಳೆದು, ಉಗುಳನ್ನೊಮ್ಮೆ ನುಂಗಿ, ಆಂ, ಹೂಂ, ಎಂದನ್ನುತ್ತ 'ನನ್ನ ಹೆಸರು ನಾರಾಯಣ ಅಂತ, ಭೈರವ ಕೊಪ್ಪಕ್ಕೆ ಹೊರಟಿದ್ದೆ ಅನೇಕ ಸರ್ತಿ ತಿರುಗಾಡಿರುವ ಸ್ಥಳವೇ ಆದರೂ, ಈ ಬಾರಿ ಹೀಗೆ ತಪ್ಪಿಸಿಕೊಂಡೆ. ದೇವರು ಬಂದಂತೆ ನೀವೆಲ್ಲ ಬಂದಿರದಿದ್ದರೆ, ನನ್ನ ಹಣೆ ಬರಹವೇನಿತ್ತೊ ದೇವರೇ ಬಲ್ಲ. ನಾಳೆ ಬೆಳಿಗ್ಗೆ ನಾನು ದಾರಿಯನ್ನು ಹುಡುಕಿಕೊಂಡು ಹೋಗುತ್ತೇನೆ. ಹಗಲು ಯಾವಾಗಲೂ ದಾರಿಯ ವಿಷಯದಲ್ಲಿ ಕರುಣೆಯಿಂದ ವರ್ತಿಸುತ್ತದೆ. ನಿಮಗೆ ನಾನು ತೊಂದರೆ ಕೊಡಲಾರೆ. ನೀವು ನೀವಾಗಿಯೇ ನನ್ನ ಬಳಿ ಬಂದು ನನ್ನನ್ನು ಇಲ್ಲಿಗೆ ಕರೆ ತಂದಿದ್ದೀರಿ. ಅದಲ್ಲದಿದ್ದರೆ ನನ್ನ ದಾರಿ ನಾನು ಹುಡುಕಿಕೊಳ್ಳುತ್ತಿದ್ದೆ ಅಲ್ಲವೆ?' ಎಂದು ಹೇಳುತ್ತ ಇವನ ಮಾತುಗಳನ್ನು ಆ ತರುಣ ಕೇಳಿಸಿಕೊಂಡನೋ ಇಲ್ಲವೋ ಎಂಬುದು ಇವನಿಗೆ ತಿಳಿಯಲಿಲ್ಲ.

ಬ್ರೆಡ್ ತುಣುಕನ್ನು ಜಗಿಯುತ್ತ ಜಗಿಯುತ್ತಲೇ ಇದ್ದ ತರುಣ ಕ್ಷಣ ಹೊತ್ತು ಬಿಟ್ಟು ಸ್ವಲ್ಪ ತುಣುಕು ಬಾಯಲ್ಲಿ ಇದ್ದಾಗಲೇ 'ಲೋ...ನೀನು ತುಂಬಾ ಮಾತನಾಡುತ್ತಿದ್ದೀಯಾ, ನಿನ್ನ ಮಾತುಗಳನ್ನು ಕೇಳಿಸಿಕೊಂಡರೆ ನನ್ನ ಮೈಯೆಲ್ಲ ಉರಿದು ಹೋಗುತ್ತಿದೆ. ನಿನ್ನನ್ನು ಈ ರಾತ್ರಿ ತಂದು ನಮ್ಮ ಬಿಡಾರಕ್ಕೆ ಬಿಡದೇ ಉಳಿದಿದ್ದರೆ ಈ ಕಾಡಿನಲ್ಲಿನ ಕ್ರೂರಪ್ರಾಣಿಗಳು ನಿನ್ನ ತಿಥಿ ಮಾಡುತ್ತಿದ್ದವು. ಮುಂಡೆದೆ, ನಿನ್ನ ಮನೆಯವರಿಗೆ ನಿನ್ನ ಎಲುಬಿನ ತುಂಡೂ ಸಿಗುತ್ತಿರಲಿಲ್ಲ, ದಾರಿ ಹುಡುಕಿಕೊಳ್ಳುತ್ತಿದ್ದ ಸುವರ್, ದಾರಿ ಹುಡುಕಿಕೊಳ್ಳುತ್ತಿದ್ದನಂತೆ' ಎಂದು ವ್ಯಂಗ್ಯವಾಗಿ ನಕ್ಕ.

ನಡುವಯಸ್ಕನಿಗೆ ಸುಮ್ಮನಿರಲಾಗಲಿಲ್ಲ. 'ಲೋ ಕೆಪ್ರಾ ನನ್ ಮಗನೆ, ನಿನಗೆ ಸುಮ್ಮನಿರಲು ಆಗಲೇ ಹೇಳಿದ್ದೇನೆ ಒಮ್ಮೆ. ಇನ್ನೂ ಮಾತನಾಡಿದರೆ ನಿನ್ನ ಹಲ್ಲುಗ್ಗಳನ್ನು ನಾನೇ ಮುರಿಯಬೇಕಾಗಿ ಬರುತ್ತೆ' ಎಂದು ಮತ್ತೆ ತರುಣನತ್ತ ಗದರಿದ. ಹೊರಗೆ ಪಾತ್ರೆ ತೊಳೆಯುತ್ತಿದ್ದ ತರುಣಿ, ನಡು ವಯಸ್ಕನಿಂದ ಬೈಸಿಕೊಂಡ ತರುಣನನ್ನು ನೋಡುತ್ತಲೋ ಎಂಬಂತೆ ಮೆತ್ತಗೆ ನಕ್ಕಳು ಒಮ್ಮೆ. ಒಳಗಿನ ಮಾತುಗಳು ಅವಳಿಗೆ ಕೇಳಿಸುತ್ತಿದ್ದವು.

ಹುಡುಗಿಯತ್ತ ಬಿರುಸು ಕಣ್ಣುಗಳಿಂದ ನೋಡುತ್ತ ತರುಣ ಮತ್ತೆ ಒಳಕೋಣೆಯೊಳಗೆ ಸೇರಿಕೊಂಡ. ಹಿಂದಿನದೇ ಭಂಗಿಯಲ್ಲಿ ಮಂಚದ ಮೇಲಕ್ಕೆ ಉರುಳಿ, ಮತ್ತದೇ ಪುಸ್ತಕವನ್ನು ಓದತೊಡಗಿದ. ಅವನ ರಭಸವಾದ ಚಲನವಲನಗಳಿಗೆ ಹತ್ತಿರದಲ್ಲಿದ್ದ ದೀಪದ ಜ್ವಾಲೆ ತೀವ್ರವಾಗಿ ಹೊಯ್ದಾಡಿತ್ತು. ಆರಲಿಲ್ಲ.

ಆ ಹುಡುಗಿ ತೊಳೆದಿದ್ದ ಪಾತ್ರೆಗಳನ್ನೆಲ್ಲ ಬುಟ್ಟಿಯಲ್ಲಿ ತುಂಬಿ ಒಳಗೆ ಬಂದಳು. ಹುಡುಗಿಯ ಕುರಿತು ನಾರಾಯಣನಿಗೆ ಆಸಕ್ತ ತಳೆದಂತಿತ್ತು. ನಡುವಯಸ್ಕ ನಾರಾಯಣನನ್ನು ಗಮನಿಸುತ್ತಲೇ ಇದ್ದ ಎಂದನ್ನಬಹುದು. ನಾರಾಯಣನಿಗೆ ಹೊರಗೆದ್ದು ಹೋಗಿ ಒಮ್ಮೆ ಹೊರಗಿನ ಮುಕ್ತ ವಾತಾವರಣದಲ್ಲಿ ಬೆರೆತು ಉಸಿರಾಡಬೇಕೆನಿಸಿತು. ಆದರೆ ಈ ಕಾಡಿನ ನಡುವೆ ಬದುಕು ನಡೆಸುತ್ತಿರುವ ಈ ನಿಗೂಢ ಮಂದಿಯು ತನ್ನನ್ನು, ತನ್ನ ಚಲನವಲನಗಳನ್ನು ಒಂದಿಂಚೂ ಬಿಡದೆ ಗಮನಿಸುವ ಬಗೆ ಮನಸ್ಸಿಗನಿಸಿತ್ತಾದ್ದರಿಂದ, ಆ ಮಂದಿಯ ಕಣ್ಣುಗಳನ್ನು ತಪ್ಪಿಸಿ ಹೊರಗೆದ್ದು ಬರಲು ಮನಸ್ಸಾಗಲಿಲ್ಲ. ಹುಡುಗಿ ತೊಳೆದು ತಂದ ಪಾತ್ರೆಗಳನ್ನೆಲ್ಲ ಚಿಕ್ಕ, ಶುಭ್ರ ವಸ್ತ್ರವೊಂದರಿಂದ ಒರೆಸ ಹತ್ತಿದ್ದಳು. ಅವಳತ್ತ ಈತ ಆಗಾಗ ನೋಡುತ್ತಲೂ ಇದ್ದ.

ತರುಣನಿದ್ದ ಕೋಣೆಯ ದೀಪ, ಅಡಿಗೆ ಮನೆ ಅಥವಾ ಹಾಲು ಎಂಬಂತಿರುವ ಜಾಗೆಯಲ್ಲಿ ಉರಿಯುತ್ತಿದ್ದ ದೀಪ ಎಂತೆಂಥದೋ ರೀತಿಯಲ್ಲಿ ಉರಿಯತೊಡಗಿದ್ದವು. ಹೊರಗೆ ಕಾಡಲ್ಲಿ ಹರಡಿಕೊಂಡ ದಪ್ಪನೆಯ ಕರಿಗತ್ತಲು ಬಿಡಾರದೊಳಗಿನ ಗೋಡೆಗಳು ದೀಪದ ಬೆಳಕಲ್ಲಿ ಒಮ್ಮೆ ಹಳದಿ ಬಣ್ಣ, ಇನ್ನೊಮ್ಮೆ ಕಿತ್ತಳೆ ಬಣ್ಣ ಹೀಗೆ ಬದಲಾಯಿಸಿ ಕೊಂಡ ಮೈಯಲ್ಲಿ ವಾತಾವರಣಕ್ಕೆ ಉದ್ವಿಗ್ನತೆಯನ್ನು

ತಂದಿಡುತ್ತಿದ್ದವೇ ಹೊರತೂ, ಈ ರಾತ್ರಿಯನ್ನಿಲ್ಲಿ ಹಾಯಾಗಿ ಕಳೆಯಬಹುದಲ್ಲ ಎಂದು ನಾರಾಯಣನ ಅಂತರ್ಯದಲ್ಲಿ ನೆಮ್ಮದಿಯನ್ನಂತೂ ಬಿತ್ತಲು ಸಮರ್ಥವಾಗಿರಲಿಲ್ಲ. ಹುಡುಗಿ ಅವಳಿದ್ದ ಕಡೆಯ ಗೋಡೆಗೆ ಮುಖಹಾಕಿ ಪಾತ್ರೆಗಳನ್ನು ಒರೆಸುತ್ತಿದ್ದರಿಂದ ಅವಳ ಬೆನ್ನು ಮಾತ್ರ ಕಾಣಿಸುತ್ತಿತ್ತು. ಮತ್ತೊಂದೆಡೆ ಅವಳ ನೆರಳು. ಅವಳ ಕೈ ಹೊಯ್ದಾಟಕ್ಕೆ ಚದುರಿಕೊಳ್ಳುತ್ತಿದ್ದ ಅವಳ ನೆರಳಿನ ಗಾತ್ರಕ್ಕೆ ವಿಶಿಷ್ಟವಾದ ಆಕುಂಚನ ಪ್ರಸರಣಗಳು ಮೆತ್ತಿಕೊಂಡಿದ್ದವು.

'ಈ ಮುಂಡೇವು ಯಾವಾಗಲೂ ಹೀಗೆ, ಬಂದ ಮೇಲೆ ಕಥೆ ಶುರು ಹಚ್ಚುತ್ತಾರೆ.' ನಡುವಯಸ್ಕ ಸಹನೆ ಕಳೆದುಕೊಂಡಂತೆ ಹೇಳಿದ. ಯಾರನ್ನು ಉದ್ದೇಶಿಸಿ ಆತ ಮಾತನಾಡಿದ ಎಂದು ನಾರಾಯಣನಿಗೆ ತಿಳಿಯಲಿಲ್ಲ. ಸಂದರ್ಭವೂ ಅರ್ಥವಾಗಲಿಲ್ಲ. ಹುಡುಗಿಯ ಆಕರ್ಷಕವಾದ ಬೆನ್ನನ್ನೇ ನೋಡುತ್ತಿದ್ದ ನಾರಾಯಣನಿಗೆ ನಡುವಯಸ್ಕನ ಮಾತುಗಳು ತನ್ನ ಕಣ್ಣುಗಳ ಕೆಲಸಕ್ಕೆ ಧಕ್ಕೆ ತಂದವಾದರೂ, ತನ್ನ ಕಾಯಕವನ್ನು ತಾನು ಮುಂದರಿಸಿದ್ದ. ಬೆಳಕು ಅಷ್ಟಾಗಿ ಬೀಳದ ಒಂದೆಡೆ ನೆಲದಲ್ಲಿಯೇ ಕುಳಿತು ನಾರಾಯಣ ಹುಡುಗಿಯನ್ನು ಗಮನಿಸುತ್ತಿದ್ದದ್ದರಿಂದ ತನ್ನ ಕಾಯಕವನ್ನು ಯಾರೂ ಗಮನಿಸಲಾರರು ಎಂಬ ನಂಬಿಗೆ ಇತ್ತು. ಹುಡುಗಿ ಮೇಲಂಗಿಯನ್ನು ತೊಟ್ಟಿದ್ದಳಾದರೂ, ಅವಳು ಒಳಗೆ ತೊಟ್ಟಿದ್ದ ಬ್ರಾದ ರೂಪ ರೇಷೆಗಳನ್ನು ನಾರಾಯಣ ಇದ್ದಷ್ಟೇ ವಿಸ್ತಾರದ ಪಾರದರ್ಶಕತೆಯಲ್ಲಿ ಹೀರಲು ಮುಂದಾದಂತಿತ್ತು. ಬಿಳಿಯ ಬಣ್ಣದ ಹೂಗಳ, ಕೆಂಪು ಲಂಗ ಹುಡುಗಿಯ ಮೊಳಕಾಲಿಗಿಂತಲೂ ಒಂದಿಂಚು ಮುಂಚೆಯೇ ತನ್ನ ವ್ಯಾಪ್ತಿಯನ್ನು ಬಿತ್ತರಿಸಿಕೊಂಡಂತಿತ್ತು. ಹುಡುಗಿಯಿಂದಾಗಿ ನಾರಾಯಣ ಒಂದು ನೆಮ್ಮದಿಯ ಲಯವನ್ನು ನೂತುಕೊಂಡಂತಿತ್ತು ಅವನ ಆಗಿನ ವರ್ತಮಾನ.

'ಬರ್ತಾರೆ ಬಿಡು, ಅವರ ತೊಂದರೆಗಳು ಬೇರೆಯದೇ ರೀತಿಯದ್ದಿರುತ್ತವೆ. ಅದು ನಿನಗೆ ಕಥೆಯನ್ನು ಕೇಳಿಸಿಕೊಂಡಂತಾದರೆ ಅದು ಅವರ ತಪ್ಪೇನು? ಜನರು ಕಣ್ತೆರೆದು ನೋಡುತ್ತಿರುವಾಗ, ಅವರಿಗೆ ಕಾಣದಂತೆ ಉಳಿಯುವ ಬಗೆ ಸುಲಭದ ಕೆಲಸ ವಲ್ಲ. ನನ್ನಿಂದ ಹಸಿವೆ ತಡೆಯಲಾಗದು' ಎಂದನ್ನುತ್ತ ನಕ್ಕಳು ಆ ಮಾಯಾಂಗನೆ.

'ಓಽಽ, ಇವಳು ಮಾತನಾಡಿದಳು ಕೊನೆಗೂ...' ಎಂದು ನಾರಾಯಣ ಹಿಗ್ಗಿದ.

ನಡುವಯಸ್ಕ ಸಿಟ್ಟೇನು ಮಾಡಿಕೊಳ್ಳಲಿಲ್ಲ ಅವಳ ಮಾತಿಗೆ. ಆದರೂ 'ನೀನು ಅವರಿಬ್ಬರ ಪರವೇ ಯಾವಾಗಲೂ. ನೀನು ಲಾಯರ್ ಆಗಬೇಕಾದವಳು ಈ ಕಾಡಿನ ಪಾಲಾದೆ' ಎಂದು ವ್ಯಂಗ್ಯವೋ, ಸಹಜವೋ ಎಂದು ತಿಳಿಯಲಾಗದ ರೀತಿಯಲ್ಲಿ ಪ್ರತಿಕ್ರಿಯಿಸಿದ. ಹುಡುಗಿ ನಕ್ಕಳು ಈ ಮಾತಿಂದ. ನಾರಾಯಣ ನಿಗೆ ಖುಷಿ ಎನಿಸಿತು ಅವಳ ಭಂಗಿ.

ಆ ಹೊತ್ತಿಗೆ ತರುಣ ಒಳಗೆ ನಿದ್ದೆ ಹೋದಂತಿತ್ತು. ಅವನ ತಳ್ಳಗಿನ ಅಲೆಯ ಅಸ್ಪಷ್ಟ ಗೊರಕೆಯ ಸದ್ದು ಇವರಿದ್ದ ಕಡೆ ಸ್ಪಷ್ಟವಾಗಿ ಕೇಳಿಸತೊಡಗಿತ್ತು. ನಡುವಯಸ್ಕ ನಕ್ಕ ನಾರಾಯಣನ ಮುಖ ನೋಡಿ. ಹುಡುಗಿಯೂ ನಾರಾಯಣನತ್ತ ನೋಡಿದ್ದಳು. ನಾರಾಯಣ ಮೆತ್ತಗೆ ನಕ್ಕ ಆಗ ಸುಸಂಧಿ ಎಂಬಂತೆ. ಅವಳು ಮಾತ್ರ ನಕ್ಕಿರಲಿಲ್ಲ. ನಾರಾಯಣನ ದೃಷ್ಟಿ ತಪ್ಪಿಸಿಕೊಳ್ಳಲೋ ಎಂಬಂತೆ ಅವಳು ಹಣೆಯ ಮೇಲೆ ಬಂದಿದ್ದ ಕೂದಲುಗಳನ್ನು ಎತ್ತಿ ಮೇಲಕ್ಕೆಳೆದುಕೊಂಡಳು.

ಆ ಇಬ್ಬರು ಬಂದರೇನೊ ಎಂದು ನೋಡಲು ಎಂಬಂತೆ ಹುಡುಗಿ ಹೊರಗೆ ಹೋದಳು. ನಡವಯಸ್ಕ ಕೂಡ ಅವಳನ್ನು ಹಿಂಬಾಲಿಸಿದ. ನಾರಾಯಣ ಹೊರಗಡೆ ನೋಡಿದ. ಹುಡುಗಿ ಮತ್ತು ಆ ನಡುವಯಸ್ಕ ಇಬ್ಬರೂ ಹೊರಗಿನ ಕತ್ತಲಲ್ಲಿ ಕಾಣಿಸುತ್ತಿರಲಿಲ್ಲ. ಅವರನ್ನು ನೋಡಲು ಎಂಬಂತೆ ಅವನೂ ಹೊರಬಂದ. ಹೊರಗೆ ಬಂದಾಗ ತುಸು ದೂರಕ್ಕೆ ಅವರಿಬ್ಬರೂ ಇದ್ದಾರೆ ಎಂದು ತಿಳಿಯುವಂತಾದದ್ದು ಆ ನಡು ವಯಸ್ಕ ಹಚ್ಚಿದ್ದ ಬೀಡಿಯಿಂದಾಗಿ. ಹಗುರಾಗಿ ಬೀಡಿಯ ವಾಸನೆ ವಾತಾವರಣದಲ್ಲಿ ತೇಲಿ ಬಂದಿದ್ದರಿಂದ ಈತ ಅವರನ್ನು ತಿಳಿಯುವಂತಾದ.

ಇಷ್ಟರಲ್ಲಿ ಏನನಿಸಿತೋ ಸರ್ರನೆ ನಾರಾಯಣ ಒಳಕ್ಕೆ ಬಂದ. ತರುಣನ ಕೋಣೆಯನ್ನೂ ಹುಂಬು ಧೈರ್ಯದೊಂದಿಗೆ ಪ್ರವೇಶಿಸಿದ. ತರುಣ ನಿದ್ದೆಯಲ್ಲಿ ಮುಳುಗಿದ್ದ. ಎಲ್ಲಿ ಎಚ್ಚರ

ತರುಣನಿದ್ದ ಕೋಣೆಯ ದೀಪ, ಅಡಿಗೆ ಮನೆ ಅಥವಾ ಹಾಲು ಎಂಬಂತಿರುವ ಜಾಗೆಯಲ್ಲಿ ಉರಿಯುತ್ತಿದ್ದ ದೀಪ ಎಂತೆಂಥದೋ ರೀತಿಯಲ್ಲಿ ಉರಿಯತೊಡಗಿದ್ದವು. ಹೊರಗೆ ಕಾಡಲ್ಲಿ ಹರಡಿಕೊಂಡ ದಪ್ಪನೆಯ ಕರಿಗತ್ತಲು ಬಿಡಾರದೊಳಗಿನ ಗೋಡೆಗಳು ದೀಪದ ಬೆಳಕಲ್ಲಿ ಒಮ್ಮೆ ಹಳದಿ ಬಣ್ಣ, ಇನ್ನೊಮ್ಮೆ ಕಿತ್ತಳೆ ಬಣ್ಣ ಹೀಗೆ ಬದಲಾಯಿಸಿಕೊಂಡ ಮೈಯಲ್ಲಿ ವಾತಾವರಣಕ್ಕೆ ಉದ್ವಿಗ್ನತೆಯನ್ನು ತಂದಿಡುತ್ತಿದ್ದವೇ ಹೊರತೂ, ಈ ರಾತ್ರಿಯನ್ನಿಲ್ಲಿ ಹಾಯಾಗಿ ಕಳೆಯಬಹುದಲ್ಲ ಎಂದು ನಾರಾಯಣನ ಆಂತರ್ಯದಲ್ಲಿ ನೆಮ್ಮದಿಯನ್ನಂತೂ ಬಿತ್ತಲು ಸಮರ್ಥವಾಗಿರಲಿಲ್ಲ. ಹುಡುಗಿ ಅವಳಿದ್ದ ಕಡೆಯ ಗೋಡೆಗೆ ಮುಖಹಾಕಿ ಪಾತ್ರೆಗಳನ್ನು ಒರೆಸುತ್ತಿದ್ದರಿಂದ ಅವಳ ಬೆನ್ನು ಮಾತ್ರ ಕಾಣಿಸುತ್ತಿತ್ತು. ಮತ್ತೊಂದೆಡೆ ಅವಳ ನೆರಳು. ಅವಳ ಕೈಹೊಯ್ದಾಟಕ್ಕೆ ಚದುರಿಕೊಳ್ಳುತ್ತಿದ್ದ ಅವಳ ನೆರಳಿನ ಗಾತ್ರಕ್ಕೆ ವಿಶಿಷ್ಟವಾದ ಆಕುಂಚನ ಪ್ರಸರಣಗಳು ಮೆತ್ತಿಕೊಂಡಿದ್ದವು.

ಗೊಂಡಾನೋ ಎಂಬ ಹೆದರಿಕೆ, ಅವಸರ ಎಲ್ಲ ಇದ್ದವು ಇವನಿಗೆ. ತರುಣ ಮಲಗಿದ್ದ ಮಂಚದ ಕಾಲು ಇವನ ಕಾಲಿನ ನಡುವಿನ ಉದ್ದದ ಬೆರಳಿಗೆ ಬಡಿಯಿತು. ಜೋರಾಗಿ. 'ಅಯ್ಯೋ' ಎಂದ ಮೆತ್ತಗೆ, ನೋವಾಗಿತ್ತು. ತರುಣನ ಎದೆಯ ಮೇಲಿದ್ದ ಪುಸ್ತಕವನ್ನು ಎಚ್ಚರದಿಂದ ಮೇಲೆತ್ತಿದ. ಅವಸರ ವಾಗಿಯೇ ಪುಟ ತಿರುವಿದ.

'ರೆವೆಲ್ಯೂಶನ್ ಆ್ಯಂಡ್ ಇಟ್ಸ್ ಪಿನೆಕಲ್' ಎಂದು ಪುಸ್ತಕದ ಹೆಸರಿತ್ತು. ಇಂಗ್ಲೀಷ್ ಭಾಷೆಯಲ್ಲಿತ್ತು ಪುಸ್ತಕ. ಸರ್ರನೆ ತಿರುಗಿ ಅವನ ಎದೆ ಮೇಲೆಯೇ ಇಡಲು ಹೋದ. ಇಡುತ್ತಿರುವಂತೆಯೇ ತರುಣ ಸರ್ರನೆ ಹೊರಳಿದ್ದ. ಈತನಿಗೆ ಗಾಬರಿಯಾಗಿತ್ತು. ಬೆವರೂ ಬಂತು ತಳ್ಳಗೆ. ಸದ್ಯ ಎಚ್ಚರವಾಗಿರಲಿಲ್ಲ ಅವನಿಗೆ. ಆ ಕೋಣೆಯಲ್ಲಿ ಒಂದೆರಡು ಬಂದೂಕುಗಳನ್ನು ಕಂಡು ಕಂಗಾಲಾದ. ನಾಲ್ಕೈದು ಪಿಸ್ತೂಲುಗಳಿದ್ದವು ಒಂದು ಮೇಜಿನ ಮೇಲೆ. ಅನೇಕ ಪುಸ್ತಕಗಳು, ನೋಟ್ ಬುಕ್‌ಗಳು, ಪೇಪರ್, ಪೆನ್ನು ಪಿನ್ನು ಖಾಲಿ ಕವರ್ ಇತ್ಯಾದಿ ಹರಡಿಕೊಂಡಿದ್ದವು.

ಅಷ್ಟರಲ್ಲಿ ಹೊರಗೆ ಮಾತುಗಳು ಹತ್ತಿರ ಹತ್ತಿರ ಬರುತ್ತಿದ್ದವರ ಸುಳಿವು ಕೊಡಲಾರಂಭಿಸಿದ್ದವು. ಸರ್ರನೆ ಹೊರಬಂದ ಈತ ಮಾಯಕದಲ್ಲಿ ಆ ಹುಡುಗಿ ಹಾಗೂ ನಡುವಯಸ್ಕ ಹೊರಗಡೆ ಹೊರಟ ಸಂದರ್ಭದಲ್ಲಿ ಎಲ್ಲಿ ಕುಳಿತುಕೊಂಡಿದ್ದನೋ ಅದೇ ಜಾಗೆಯಲ್ಲಿ ನೆಲದ ಮೇಲೆ ಕುಳಿತು ಕಾಲ್ಗಳನ್ನು ಮೇಲೆತ್ತಿ ಮುಖ ಹುದುಗಿಸಿಕೊಂಡು ನಡುವೆ ನಿದ್ದೆಯ ಜೊಂಪು ಹತ್ತಿದವನಂತೆ ದೇಹವನ್ನು ಅಲ್ಲಾಡಿಸತೊಡಗಿದ.

ಒಳಬಂದ ಅವರು ಮಾತು ನಿಲ್ಲಿಸಿದ್ದರು. ನಡುವಯಸ್ಕ 'ಓ ನಿದ್ದೆ ಬಂತೇನು ನಿಮಗೆ? ಪಾಪ ಹಸಿದಿದ್ದೀರಿ, ಇನ್ನೇನು ಈಕೆ ಅನ್ನ ಬೇಯಿಸುತ್ತಾಳೆ. ಇವರು ತರಕಾರಿ ಬೇಯಿಸುತ್ತಾರೆ. ನಾನು ಉಳಿದದ್ದು ರೆಡಿ ಮಾಡುವೆ. ಹದಿನೈದೇ ನಿಮಿಷ ಊಟ ರೆಡಿ' ಎಂದು ಅಂದ. ನಾರಾಯಣ ನಿದ್ದೆಯಿಂದ ಎಚ್ಚೆತ್ತ ಹಾಗೆ ನಟಿಸುತ್ತ 'ಇಲ್ಲ ಇಲ್ಲ, ಅವಸರವೇನಿಲ್ಲ, ನಿಧಾನವಾಗಿ ಅಡಿಗೆಯಾಗಲಿ. ನಿಮಗೆ ನಾನು ತೊಂದರೆಯಾಗುತ್ತಿದ್ದೇನೆ' ಎಂದು ಅಂದ.

ಅಕ್ಕಿಯ ಚೀಲ, ತರಕಾರಿ, ಇನ್ನಿತರ ಸಾಮಾನುಗಳೊಂದಿಗೆ ಬಂದ ಇನ್ನಿಬ್ಬರು 'ನಮಗೆ ತೊಂದರೆ ಏನಿಲ್ಲ. ನೀವು ನಿಮಗೆ ತೊಂದರೆ ಆಗುವ ಹಾಗೆ ಕಾಡೊಳಗೆ ಬಂದು ಬಿಟ್ಟಿರಂತೆ. ನಿಮ್ಮನ್ನು ನೋಡಿದ್ದೇವೆ ಎಂದು ಅನಿಸುತ್ತಿದೆ. ನೀವು ನೆಲ್ಲಿಹಳ್ಳದವರೇನು? ಶಿವಪುರದ ಸಂತೆಯಲ್ಲಿ ನಿಮ್ಮ ಮುಖ ಕಂಡಂತಿದೆ. ಏನೇ ಇರಲಿ ಕಾಡಿಗೆ ಬರಬಾರದು ನೀವು. ಇಂದು ಬಂದಿದ್ದೀರಿ ತೀರಿತು. ಇಲ್ಲಿ ಹುಲಿಗಳೂ ಇವೆ. ಮನುಷ್ಯರನ್ನು ತಿಂದು ಹಾಕಿದ ಉದಾಹರಣೆಗಳುಂಟು' ಹೀಗೆ ವಟವಟ ಆ ಇಬ್ಬರೂ ಒಬ್ಬನ ನಂತರ ಇನ್ನೊಬ್ಬ ಮಾತನಾಡತೊಡಗಿದ್ದರು. ಮರದ ಬಾಯಾಗಿದ್ದಿದ್ದರೆ ಅವರ ಬಾಯ್ಗಳು ಒಡೆದುಬಿಡುವ ಅಪಾಯವಿತ್ತು.

ಮಾತನಾಡುವುದನ್ನೆಲ್ಲ ಮಾತನಾಡಿದ ಮೇಲೆ ಪ್ರತಿಸಾರಿ 'ನಿಮಗೆ ಬೇಸರ ಬಂತೇನೊ? ನಾವು ತುಂಬಾ ಮಾತನಾಡುತ್ತಿದ್ದೇವೆ. ಈ ಹುಡುಗಿ ಫಕ್ಕ ಅಡಿಗೆ ಮಾಡಿ ಮುಗಿಸಿದರೆ ಬೇಗ ಊಟ ಮುಗಿಸಿ ಮಲಗಿಬಿಡಬಹುದಿತ್ತು ನೀವು. ನಂತರ ನೀವು ಇಲ್ಲೇ ಮಲಗಿ ಬಿಡಿ. ಒಳ ಕೋಣೆ ಚಿಕ್ಕದು. ನಿಮ್ಮಂಥ ವರಿಗೆ

ಅದರ ಅಭ್ಯಾಸವಿಲ್ಲ, ನಮಗೋ ಇದರ ವಿನಾ ಬೇರೆ ಅಭ್ಯಾಸಗಳಿಲ್ಲ, ಹ್ಹ..ಹ್ಹ..ಹ್ಹ..' ಎಂದು ತಾವೇ ನಗುತ್ತಿದ್ದರೆ ತಮ್ಮ ಮಾತಿಗೆ. ಹುಡುಗಿ ಅವರು ಹ್ಹ..ಹ್ಹ..ಹ್ಹ... ಎಂದು ನಕ್ಕಾಗ 'ಸದ್ದು ಜೋರಾಗುತ್ತಿದೆ ನಿಮ್ಮದು' ಎಂಬರ್ಥ ಬರುವ ಧಾಟಿಯಲ್ಲಿ ಅವರ ಬಳಿಯೇ ನೋಡುತ್ತಿದ್ದಳು. ಒಂದೆರಡು ಸರ್ತಿ ಹುಡುಗಿ ಇವನ ಬಳಿಗೂ ದೃಷ್ಟಿ ಬೀರಿದ್ದಳು. ಹೀಗೆ ಬೀರಿದ್ದ ದೃಷ್ಟಿಯನ್ನು ನಡುವಯಸ್ಕ ಗಮನಿಸಿದ್ದನೋ, ಇಲ್ಲವೋ ಎಂಬುದು ಇವನಿಗೆ ತಿಳಿಯದೇ ಹೋದರೂ, ಆ ಮಾತಿನ ಮಲ್ಲರಾದ ಹೊಸಬರಿಬ್ಬರು ಗಮನಿಸಲಿಲ್ಲ ಎಂಬುದಂತೂ ಇವನಿಗೆ ತಿಳಿದಿತ್ತು.

ಮತ್ತರ್ಧ ಗಂಟೆಯ ಒಳಗೆ ಅಡಿಗೆ ಮುಗಿದು, ಕುಂಭಕರ್ಣನಂತೆ ಮಲಗಿದ ಒಳಕೋಣೆಯ ಆ ತರುಣನನ್ನೂ ಎಬ್ಬಿಸಿ, ಅವರೆಲ್ಲರೂ ಊಟ ಮುಗಿಸಿದಾಗ ರಾತ್ರಿ ಹನ್ನೊಂದು ಬಾರಿಸಿತ್ತು.

'ನೀವು ಹೊರಗಡೆ ನಮ್ಮ ಮಾಸ್ಟರ್ ಜತೆಗಿರುತ್ತಾರೆ, ಅವರ ಬಳಿ ಮಲಗಿ, ನಾವು ಮೂವರು ಒಳಗೆ ಮಲಗಿರುತ್ತೇವೆ. ಏನು ಮಾಡುವುದು ಬೇರೆ ಕೋಣೆ ಇಲ್ಲ, ಈಕೆ ಅಲ್ಲಿ ಅಡಿಗೆ ಕಟ್ಟೆಯ ಮೂಲೆಯಲ್ಲಿ ಮಲಗಿಕೊಳ್ಳುತ್ತಾಳೆ' ಎಂದು ತರುಣ ನಾರಾಯಣನ ಬಳಿ ಹೇಳಿದ ದನಿಯಲ್ಲಿ ಅಸಹನೆಯಿತ್ತೋ, ಇಲ್ಲವೋ ಇವನಿಗೆ ಗುರುತಿಸಲಾಗಲಿಲ್ಲ, ನಿದ್ದೆ ಮಾತ್ರ ಬೇಗನೆ ಆವರಿಸಿಬಿಟ್ಟಿತ್ತು ಅವನಿಗೆ.

ನಾರಾಯಣನಿಗೆ ಎಚ್ಚರವಾದಾಗ ಆಗಲೇ ಸೂರ್ಯ ಬಂದಾಗಿತ್ತು.

ಸರ್ರನೆ ರಾತ್ರಿಯದನ್ನೆಲ್ಲ ನೆನಸಿಕೊಂಡ. ಅಲ್ಲಿ ಯಾರೂ ಇದ್ದಿರಲಿಲ್ಲ, ಒಮ್ಮೆಗೇ ಎದ್ದು ಮನೆಯಲ್ಲಿ ಸುತ್ತಾಡಿದ. ಅವರ ಯಾರೊಬ್ಬರ ಸುಳಿವೂ ಇದ್ದಿರಲಿಲ್ಲ, ಒಳಕೋಣೆಯಲ್ಲಿ ಖಾಲಿ ಯಾದ ಮೇಜು ಮತ್ತೇನೂ ಇದ್ದಿರಲಿಲ್ಲ.

ಅರೆ, ನನಗೆ ಇಂತಾ ಒಂದು ನಿದ್ದೆ ಆವರಿಸಿತ್ತೆ, ಅವರು ಎಲ್ಲವನ್ನೂ ಖಾಲಿ ಮಾಡಿ ಹೋಗುವಾಗಲೂ ಎಚ್ಚರಗೊಳ್ಳದೆ ಇದ್ದೆ, ಮಲಗಿದ್ದೆ ಎಂದರೆ ಏನು ಅರ್ಥ ಎಂದು ತನಗೆ ತಾನೇ ಕೇಳಿಕೊಂಡ. ತಾನು ಒಂಟಿ ಎಂದು ಅನಿಸಿತು. ಇವರೆಲ್ಲರ ಪಲಾಯನ ಒಂದು ಶೀತಲ ಕ್ರೌರ್ಯದ ಪರಮಾವಧಿಯೆ ಎಂದು ಅನಿಸದಿರಲಿಲ್ಲ, ಕರುಣಾಜನಕವಾದ ಪಲಾಯನ ಎಂದು ಅನಿಸಿತು. ಹೊರಗೆ ಬಂದು ದಟ್ಟವಾಗಿ ಆವರಿಸಿದ ಕಾಡನ್ನೇ ನೋಡಿದ.

ಆಕಾಶದ ಆಗಾಧತೆ ಚೂರುಚೂರಾಗಿದೆ ಎಂಬಂತೆ ಎಲ್ಲ ವಜ್ಜೆಗಳಿಂದ ಸೂರ್ಯನ ಕಿರಣಗಳಿಗೆ ತೂರಲು ಅವಕಾಶ ಕೊಟ್ಟ ಮರದ ನೆತ್ತಿಯ ಅಡಿಗಳನ್ನು ನೋಡಲಾರಂಭಿಸಿದ. ಇಷ್ಟೊಂದು ದಟ್ಟ ಹಗಲು ನಾಳೆಯ ಬೆಳಿಗ್ಗೆ ಬರಲಿದೆಯೆಂಬುದನ್ನು ನಿನ್ನೆಯ ಆ ರಾತ್ರಿ ನಾನು ಏಕೆ ತಿಳಿಯದಾದೆ ಎಂದು ಅವನಿಗೆ ತಿಳಿಯಲಿಲ್ಲ.

ಇದು ತೇಗ, ಇದು ನಂದಿ, ಇದು ಜಂಬಳೆ, ಇದು ಕಾಡುಕಟ ಎಂದು ಆ ಎಲ್ಲ ಮರಗಳನ್ನು ಗುರುತಿಸಲಾರಂಭಿಸಿದ. ರಾತ್ರಿ ಕೂಗಿಕೊಂಡಿದ್ದ ಜೀರುಂಡೆಗಳು, ಕೀಟಗಳು, ಹುಳು ಹುಪ್ಪಡಿಗಳು ಎಲ್ಲಿ ಮರೆಯಾದವು ಎಂದು ಯೋಚಿಸಿದ. ಹುಡುಗಿಯನ್ನು ತಾನು ತನಗಿಷ್ಟವಾದ ದಾರಿಗೆ ಒಪ್ಪಿಸಿಕೊಳ್ಳುವುದು ಸಾಧ್ಯವಿದೆ ಎಂಬ ಅನೇಕ ಸಾಧ್ಯತೆಗಳನ್ನು ಗಮನಿಸಿದ್ದ. ಆದರೆ



ಇವರೆಲ್ಲರ ಪಾಳಯದಲ್ಲಿ ಇವಳು ಸುಖಿಯೋ ಅಥವಾ ಬಂಧಿನಿಯೊ ಎಂಬುದನ್ನು ನಾರಾಯಣನಿಗೆ ತಿಳಿಯಲಾಗಲಿಲ್ಲ, ಬಂಧಿನಿಯಂತೆ ಕಾಣಿಸಿಕೊಳ್ಳಲಿಲ್ಲ ಅವಳು, ಇದೊಂದು ವ್ಯವಸ್ಥಿತ ನಟನೆಯಾಗಿತ್ತೆ? ಹಲವು ಸಲ ಪ್ರಶ್ನಿಸಿಕೊಂಡ. ಇವಳ ಮನಸ್ಸಿನ ಜಾಗೆಯಲ್ಲಿ ಇವರೆಲ್ಲರೂ ಸೇರಿ ಬೇರೆ ಏನನ್ನೋ ತುಂಬಿ ಬಿಟ್ಟಿದ್ದಾರೆ ಎಂದೇ ಅನಿಸಿತು.

ಹೊತ್ತಿಕೊಂಡ ಹಗಲಿನ ಬೆರಗು-ಎಲ್ಲೋ ಹೊರಟು ಹೋದ ಹುಡುಗಿ ಯಿಂದಾಗಿ ಭಣಭಣ ಗೊಂಡ, ಗೊಳ್ಳುತ್ತಿರುವ ಸದ್ಯದ ವರ್ತಮಾನ ಅವನಿಗೆ ಅಸಹ್ಯ ಹುಟ್ಟಿಸಿತ್ತು. ಅವಕಾಶ ಮಾಡಿಕೊಂಡು ಹುಡುಗಿಯ ಬಳಿ ಮಾತನಾಡುವ ಯೋಜನೆಗಳಿಗೆ ಅವನ ಬಳಿ ಅನೇಕ ರೂಪರೇಷೆಗಳಿದ್ದವು. ಆದರೆ ಹುಡುಗಿ ಕಟ್ಟೆಚ್ಚರದಿಂದ ತಾನು ಒಂಟಿಯಾಗದಂತೆ ನೋಡಿಕೊಂಡಳೋ ಹೇಗೆ ಎಂಬುದು ಅರ್ಥವಾಗಲಿಲ್ಲ. ಇದೊಂದು ರೀತಿಯ ನಿರಾಕರಣೆ ಎಂಬುದು ಹೌದಾದರೆ ನೇರವಾಗಿ ಅದನ್ನೇ ಹೇಳಬಹುದಿತ್ತಲ್ಲವೆ? ನಾರಾಯಣ ಪ್ರಶ್ನಿಸಿಕೊಂಡ. ಗುಲಾಬಿಯಂತೆ ಅರಳುವುದನ್ನು ಕಲಿಯಬೇಕಿದ್ದ ಹುಡುಗಿ ತಾನು ಮುದುಡಿ ಹೋಗುವುದನ್ನು ಯಾಕೆಂದು ಆಯ್ಕೆ ಮಾಡಿಕೊಂಡಳು ಎಂಬುದು ಇವನಿಗೆ ಅರ್ಥ ವಾಗಲಿಲ್ಲ.

ಇವರೆಲ್ಲರ ಪಾಳಯದಲ್ಲಿ ಇವಳು ಸುಖಿಯೋ ಅಥವಾ ಬಂಧಿನಿಯೊ ಎಂಬುದನ್ನು ನಾರಾಯಣನಿಗೆ ತಿಳಿಯಲಾಗಲಿಲ್ಲ, ಬಂಧಿನಿಯಂತೆ ಕಾಣಿಸಿಕೊಳ್ಳಲಿಲ್ಲ ಅವಳು, ಇದೊಂದು ವ್ಯವಸ್ಥಿತ ನಟನೆಯಾಗಿತ್ತೆ? ಹಲವು ಸಲ ಪ್ರಶ್ನಿಸಿಕೊಂಡ. ಇವಳ ಮನಸ್ಸಿನ ಜಾಗೆಯಲ್ಲಿ ಇವರೆಲ್ಲರೂ ಸೇರಿ ಬೇರೆ ಏನನ್ನೋ ತುಂಬಿ ಬಿಟ್ಟಿದ್ದಾರೆ ಎಂದೇ ಅನಿಸಿತು. ಒಳಕೋಣೆಯಲ್ಲಿ ಮಲಗಿದ ತರುಣರು, ಹೊರಗಿದ್ದ ನಡು ವಯಸ್ಕ ಇವರೆಲ್ಲ ಸೇರಿ ನಡೆಸಲು ಹೊರಟ ವ್ಯಾಪ್ತಿಗೆ ಇವಳ ಓಟವೂ, ಪಲಾಯನವೂ ಒಂದು ಭಾಗವಾಗಿ ಸೇರಿಕೊಳ್ಳಬೇಕಾಗಿ ಬಂತಲ್ಲ, ಏನಿದು ಹೀಗೆ ಎಂದು ವಿಶ್ಲೇಷಿಸಿದ.

ಹುಚ್ಚು ಹಿಡಿದವನಂತೆ ಶತಪಥ ಹಾಕತೊಡಗಿದ. ನನಗೆ ಹೇಳಿ ಇನ್ನು ಮುಂದಿನ ತಮ್ಮ ಪ್ರಯಾಣವನ್ನು ಮುಂದುವರಿಸಬಹುದಿತ್ತಲ್ಲವೆ? ಇಷ್ಟಾದರೂ ಸೌಜನ್ಯ ಇವರಿಗೆ ಮೊಳೆಯದೇ ಹೋಯಿತಲ್ಲ, ಒಂದು ಚಿಕ್ಕ ಸೌಜನ್ಯವೂ ಇರದೆ, ಇವರೆಲ್ಲ ತಾವು ಏನನ್ನು ಸಾಧಿಸಬಹುದು ಎಂಬ ನಂಬಿಗೆಯಲ್ಲಿದ್ದಾರೆ..? ನಾರಾಯಣನಿಗೆ ಅರ್ಥವಾಗಲಿಲ್ಲ, ನಿಶ್ಚಲನಾದ. ಮತ್ತೆ ಚಲನೆಗೊಳಗಾದ. ಕೈಕೈ ಹಿಸುಕಿಕೊಂಡ.

ಮತ್ತೆ ತಿರುಗಿ ಒಳಗೆ ಬಂದ. ಇನ್ನೂ ಒಳಗಿನ ಕೋಣೆಗೆ ಬಂದ.

ಅಲ್ಲಿದ್ದ ಮೇಜಿನ ಡ್ರಾಯರ್ ತೆಗೆದ ಅನಾಸ್ಥೆಯಿಂದ. ಆಶ್ಚರ್ಯವಾಯ್ತು ಅವನಿಗೆ. ಯಾಕೆಂದರೆ ಅಲ್ಲಿ ಒಂದು ಹೂವಿನ ಕಸೂತಿ ಇದ್ದ ಪುಟ್ಟ ಕರ್ಚೀಫೊಂದಿತ್ತು.

ಇದು ಅವಳದೇ....? ಪ್ರಶ್ನೆ ಏಳದಿರಲಿಲ್ಲ. ಯಾಕವಳು ಇದನ್ನು ಬಿಟ್ಟು ಹೊರಟಳು? ತನಗೆ ಬೇಕಾದ ಉತ್ತರಕ್ಕಾಗಿ ತಡಕಾಡಿದ. □

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001

ಕನ್ನಡ ಪ್ರಕಟಣೆಗಳು

ಕಾದಂಬರಿಗಳು

1) **ಕಾಡಿನ ದಾವೇದಾರ** ರೂ. 150/-
(ಬಂಗಾಳಿ ಮೂಲ : ಮಹಾಶ್ವೇತಾ ದೇವಿ, ಅನುವಾದ : ಜಿ. ಕುಮಾರಪ್ಪ)

2) **ಉಮರಾವ್ ಜಾನ್ ಅದಾ** ರೂ. 100/-
(ಉರ್ದು ಮೂಲ : ಮಿರ್ಜಾ ರುಸ್ವಾ, ಅನುವಾದ : ಶಾಂತರಸ)

3) **ಹಾವಿನ ಡೊಂಕು** ರೂ. 50/-
(ಸ್ವೀಡಿಸ್ ಮೂಲ : ಟೋರ್‌ಗ್ನಿ ಲಿಂಡ್‌ಗ್ರೆಯನ್)

4) **ಕಾರ್ಮೆಲೀನ** ರೂ. 100/-
(ಕೊಂಕಣಿ ಮೂಲ: ದಾಮೋದರ ಮಾವಜೊ, ಅನುವಾದ : ಶಾ.ಮಂ. ಕೃಷ್ಣರಾಯ)

ಕಥೆಗಳು

1) **ಕೊಂಕಣಿ ಕಥಾ ಸಂಗ್ರಹ** ರೂ. 125/-
(ಸಂಪಾದಕ : ಚಂದ್ರಕಾಂತ ಶ್ರೇಣಿ, ಅನುವಾದ : ಶಾ.ಮಂ. ಕೃಷ್ಣರಾಯ)

2) **ಒಂದು ಪೀಳಿಗೆಯ ತೆಲಗು ಕಥೆಗಳು** ರೂ. 150/-
(ಸಂಪಾದಕ : ಡಿ. ರಾಮಲಿಂಗಂ, ಅನುವಾದ : ಕುಂ. ವೀರಭದ್ರಪ್ಪ)

3) **ಕೃಷ್ಣನ್ ಚಂದರ್ ಆಯ್ದ ಸಣ್ಣ ಕಥೆಗಳು** ರೂ. 150/-
(ಸಂಪಾದಕ : ಗೋಪಿ ಚಂದ್ ನಾರಂಗ್, ಅನುವಾದ : ಡಿ.ಎ. ಶಂಕರ್)

4) **ಮಧುರಾಂತಕಂ ರಾಜಾರಾಂ ಕಥೆಗಳು** ರೂ. 150/-
(ತೆಲಗು ಮೂಲ : ಮಧುರಾಂತಕಂ ರಾಜಾರಾಂ
ಅನುವಾದ : ಲಕ್ಷ್ಮೀಪತಿ, ಕೋಲಾರ)

5) **ದಕ್ಷಿಣ ಕಾಮರೂಪದ ಒಂದು ಕಥಾನಕ** ರೂ. 180/-
(ಅಸ್ಸಾಮಿ ಮೂಲ : ಇಂದಿರಾ ಗೋಸ್ವಾಮಿ,
ಅನುವಾದ : ಆರ್.ಎಲ್. ಅನಂತರಾಮಯ್ಯ)

ನಾಟಕಗಳು

1) **ಯಕೃತ್ತು** ರೂ. 50/-
(ಮರಾಠಿ ಮೂಲ : ಶ್ಯಾಮ ಮನೋಹರ, ಅನುವಾದ : ವೀಣಾ ಶಾಂತೇಶ್ವರ)

2) **ರವೀಂದ್ರನಾಥ್ ಟಾಗೋರ್ : ಎರಡು ನಾಟಕಗಳು** ರೂ. 50/-
(ಬಂಗಾಳಿ ಮೂಲ : ರವೀಂದ್ರನಾಥ್ ಟಾಗೋರ್,
ಅನುವಾದ : ಶ್ರೀನಿವಾಸ್ ವಿ. ಸುತ್ರಾವೆ)

ಕಾವ್ಯ

1) **ಆಡು ಹಾವೇ** ರೂ. 80/-
(ತಮಿಳು ಮೂಲ : ಡಾ. ಕಾರ್ಲೋಸ್ , ಅನುವಾದ : ಡಾ. ಬಸವರಾಜ ಕಲ್ಗುಡಿ)

2) **ಶ್ರೀರಾಧಾ** ರೂ. 60/-
(ಒಡಿಯಾ ಮೂಲ : ಶ್ರೀ ರಮಾಕಾಂತ ರಥ, ಅನುವಾದ : ಸಂಧ್ಯಾ ಎಸ್.)

3) **ಶ್ರೀ ಬಸವಣ್ಣನವರ ವಚನ ಸಂಗ್ರಹ** ರೂ. 65/-
(ಸಂಪಾದಕ : ಸ.ಸ. ಮಾಳವಾಡ)

4) **ಎರಡು ದಶಕದ ಕವಿತೆ** ರೂ. 65/-
(ಸಂಪಾದಕ : ಜಿ.ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ)

5) **ತೆಲಗು ಕಾವ್ಯಮಾಲೆ** ರೂ. 125/-
(ಸಂಪಾದಕ : ದೇವುಲಪಲ್ಲಿ ರಾಮಾನುಜರಾವ್,
ಅನುವಾದ : ಗುರುಮೂರ್ತಿ ಪೆಂಡಕೂರು)

ಭಾರತೀಯ ಸಾಹಿತ್ಯ ನಿರ್ಮಾಪಕರು

1) **ಗೊರೂರು ರಾಮಸ್ವಾಮಿ ಅಯ್ಯಂಗಾರ್** ರೂ. 25/-
(ಲೇಖಕರು : ಸಿ.ಜಿ. ವೆಂಕಟಯ್ಯ)

2) **ಶಂಬಾ ಜೋಶಿ** ರೂ. 25/-
(ಲೇಖಕರು : ಮಲ್ಲೇಪುರಂ ಜಿ. ವೆಂಕಟೇಶ್)

3) **ಭೀಮಾಬೋಯಿ** ರೂ. 25/-
(ಲೇಖಕರು : ಸೀತಾಕಾಂತ ಮಹಾಪಾತ್ರ, ಅನುವಾದ : ಶ್ರೀಧರ್ ಪಿಸ್ಸೆ)

4) **ಮೋಹನ್ ರಾಕೇಶ್** ರೂ. 25/-
(ಲೇಖಕರು : ಪ್ರತಿಭಾ ಅಗರ್‌ವಾಲ್, ಅನುವಾದ : ಎಸ್.ಜಿ. ಶ್ರೀಮತಿ)

5) **ಚಿಲಕಮುರ್ತಿ ಲಕ್ಷ್ಮೀನರಸಿಂಹಮ್** ರೂ. 25/-
(ಲೇಖಕರು : ವಿ.ವಿ.ಎಲ್. ನರಸಿಂಹರಾವ್, ಅನುವಾದ : ಕೆ.ಮರುಳಸಿದ್ದಪ್ಪ)

6) **ಅನ್ನಮಾಚಾರ್ಯ** ರೂ. 25/-
(ಲೇಖಕರು : ಅಡಪ ರಾಮಕೃಷ್ಣರಾವ್, ಅನುವಾದ : ಭಾಗ್ಯಲಕ್ಷ್ಮಿ ಪದಕಿ)

7) **ಶಾಂತಿನಾಥ ದೇಸಾಯಿ** ರೂ. 25/-
(ಲೇಖಕರು : ಜಿ.ಎಸ್. ಆಮೂರ್)

8) **ಎಂ.ಎಸ್. ಪುಟ್ಟಣ್ಣ** ರೂ. 25/-
(ಲೇಖಕರು : ಎಸ್.ಎಸ್. ಸುಜಾತ)

9) **ದೇವುಡು** ರೂ. 25/-
(ಲೇಖಕರು : ಡಾ. ಸಿ.ಎಸ್. ಶಿವಕುಮಾರಸ್ವಾಮಿ (ಕುಮಾರಚಲ್ಯ))

10) **ಕುಮಾರವ್ಯಾಸ** ರೂ. 25/-
(ಲೇಖಕರು : ಕೀರ್ತಿನಾಥ ಕುರ್ತುಕೋಟಿ)

11) **ಸಂ.ಶಿ. ಭೂಸನೂರಮಠ** ರೂ. 25/-
(ಲೇಖಕರು : ಶಾಂತಾ ಇಮ್ರಾಪುರ)

12) **ಸೇಡಿಯಾಪು ಕೃಷ್ಣಭಟ್ಟ** ರೂ. 25/-
(ಲೇಖಕರು : ಎಂ. ರಾಮಚಂದ್ರ)

13) **ಅಭಿನವಗುಪ್ತ** ರೂ. 75/-
(ಲೇಖಕರು : ಜಿ.ಟಿ. ದೇಶಪಾಂಡೆ, ಅನುವಾದ : ಎನ್. ಬಾಲಸುಬ್ರಹ್ಮಣ್ಯ)

ಇತರೆ

1) **ಮಂದಾರ ರಾಮಾಯಣ** ರೂ. 150/-
(ತುಳು ಮೂಲ : ಮಂದಾರ ಕೇಶವಭಟ್ಟ)

2) **ಕಲಾಪೂರ್ಣೋದಯ** ರೂ. 100/-
(ಅನುವಾದ : ಆರ್. ಶೇಷಶಾಸ್ತ್ರಿ, ಜಿ. ಸದಾನಂದ)

3) **ನನ್ನ ಜೀವಾವಧಿಯ ಶಿಕ್ಷ** ರೂ. 200/-
(ಮರಾಠಿ ಮೂಲ : ವಿನಾಯಕ ದಾಮೋದರ ಸಾವರಕರ,
ಅನುವಾದ : ವಿರೂಪಾಕ್ಷ ಕುಲಕರ್ಣಿ)

4) **ವನದೇವತೆ** ರೂ. 25/-
(ಲೇಖಕರು : 'ಕಲ್ಕಿ' ಗೋಪಾಲಕೃಷ್ಣನ್, ಅನುವಾದ : ಎ. ಚಂದ್ರಮ್ಮ)

ಪ್ರತಿಗಳು ಹಾಗೂ ವಿವರಕ್ಕಾಗಿ ಸಂಪರ್ಕಿಸಿ:

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ , ಸೆಂಟ್ರಲ್ ಕಾಲೇಜು ಆವರಣ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ : 2245152

Bhagavan Budha Homeopathic Medical College and Hospital

(Approved by Govt. of Karnataka, affiliated to Rajiv Gandhi University of Health Sciences & Recognised by Central Council of Homeopathy, New Delhi)

Shrinidhi Complex, Mallathahalli, Bangalore - 560 056

ADMISSIONS OPEN FOR 1ST YEAR BHMS

(Bachelor of Homeopathic Medicine & Surgery - $5^1/_2$ Yrs. Duration)

ELIGIBILITY :

Pass in II Yr. PUC (PCMB or PCB), or Pass in 10+2 or equivalent
Pass in B.Sc. (CBZ) with Physics at Intermediate level.
50% marks in Aggregate, 40% marks for SC, ST & CAT-1 Students.

FACILITIES AVAILABLE:

Good ventilated and well equipped laboratories
Attached Hospital with all departments.
Experienced and dedicated Teaching Staff.
Individual attention to students.
Encouragement for sports & extracurricular activities.
Separate Hostel Facilities for Boys & Girls.
Arrangements for post Graduation Courses in Gen. medicine, Paediatrics, Psychiatry and Home. Subjects are in progress.

B. BORAIAH
CHAIRMAN

K. CHANDRASHEKAR
SECRETARY

CONTACT :	**DR. SEBASTIAN PRABHAKAR,** Principal
College Office :	080-3211056 (between 10-00 a.m. to 4-30 p.m)
Chairman :	8484438 (R)
Secretary :	2350454 (between 10-00 a.m. to 8-00 p.m.) (R) 3228852, 6680221
Principal :	5360189 (R)

ಸುಬೋಧಿ

ಸ್ವಯಂ ಉದ್ಯೋಗ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ

ಸ್ಫೂರ್ತಿಧಾಮ, ಬಾಬಾಸಾಹೇಬ್ ಅಂಬೇಡ್ಕರ್ ಸ್ಮಾರಕ ಕೇಂದ್ರ, ಅಂಜನಾನಗರ,
ಅಂಚೆ ಪೆಟ್ಟಿಗೆ ಸಂಖ್ಯೆ: ೯೧೪೩, ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧

ನಿಮಗೊಂದು ಸುವರ್ಣಾವಕಾಶ !
ಸ್ವಂತ ದುಡಿಮೆಯೊಂದಿಗೆ
ನಿಮ್ಮ ಕಾಲಮೇಲೆ ನೀವು
ನಿಂತುಕೊಳ್ಳಬೇಕೆ ? ಹಾಗಾದರೆ
ತಡಮಾಡದೆ ನಿಮ್ಮ
ಗಮನವನ್ನೊಮ್ಮೆ ಇತ್ತ
ಹರಿಯಬಿಡಿ.



ವಿವಿಧ ರೀತಿಯ ತರಬೇತಿಗಳನ್ನು ನೀಡುತ್ತಾ ಬರುತ್ತಿರುವ ನಮ್ಮ ಸಂಸ್ಥೆಯು, ಇಂದಿನ ಸ್ಪರ್ಧಾತ್ಮಕ ಪರಿಸ್ಥಿತಿಗೆ ಅನುಗುಣವಾದ ಮಾಹಿತಿ-ಮಾರ್ಗದರ್ಶನಗಳಿಂದ ಕೂಡಿದ ತರಬೇತಿಗಳನ್ನು ನೀಡಲು ಮುಂದಾಗಿದೆ. ಇದರ ಪ್ರಯೋಜನಗಳನ್ನು ನೀವೂ ಪಡೆದುಕೊಳ್ಳಿ, ಇತರರೂ ಪಡೆದುಕೊಳ್ಳುವಂತೆ ಪ್ರೇರೇಪಿಸಿ.

- ☞ ಕಂಪ್ಯೂಟರ್ ಹಾರ್ಡ್‌ವೇರ್ ಸಾಫ್ಟ್‌ವೇರ್
- ☞ ಬೆರಳಚ್ಚು - ಕನ್ನಡ ಮತ್ತು ಇಂಗ್ಲೀಷ್
- ☞ ಚರ್ಮ ವಸ್ತುಗಳ ತಯಾರಿಕೆ
- ☞ ಹೊಲಿಗೆ ತರಬೇತಿ
- ☞ ಎಂಬ್ರಾಯಿಡರಿ

ಮಿಲಿಂದ್ ಪಬ್ಲಿಕ್ ಶಾಲೆ
ರಾಜ್ಯ ಮತ್ತು ಕೇಂದ್ರ ಪಠ್ಯ
(ಎಲ್‌ಕೆಜಿ, ಯುಕೆಜಿ ಮತ್ತು ಒಂದನೇ ತರಗತಿ)
ಹಾಗೂ
ಸುಬೋಧಿ ವಿವಿದ್ದೋದ್ದೇಶ
ಮಹಿಳಾ ಸಹಕಾರ ಸಂಘ

ಬಸ್ ಮಾರ್ಗ :

ಮೆಜೆಸ್ಟಿಕ್‌ನಿಂದ : 240, 245J, 241B, 242
ಮಾರ್ಕೆಟ್‌ನಿಂದ : 240 (A,B,C), 241 (A,B), 242 (P,H,Q), 245 (B,E,D)
ಇಳಿಯುವ ಸ್ಥಳ : ಅಂಜನಾನಗರ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಪ್ರಾಂಶುಪಾಲರು
ದೂರವಾಣಿ : 328 7943